
ಡಿ.ಎಸ್. ನಾಗಭೂಷಣ

ಭೂಮಿಯನ್ನು ಹಂಚಿಕೊಳ್ಳುವ ಬಗೆಗಳು...

ಆಧುನಿಕತೆ, ಅಭಿವೃದ್ಧಿ ಮತ್ತು
ಸಾಮಾಜಿಕ ನ್ಯಾಯ ಕುರಿತ ಬರಹಗಳು



ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿನ ತಿಮ್ಮಸಂದ್ರದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಮಗನಾಗಿ ೧೯೫೨ರಲ್ಲಿ ಜನಿಸಿದ ಡಿ.ಎಸ್. ನಾಗಭೂಷಣ ಅವರು ಬೆಂಗಳೂರು ವಿಶ್ವವಿದ್ಯಾನಿಲಯದಿಂದ ೧೯೭೪ರಲ್ಲಿ ಗಣಿತಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದು, ೧೯೭೫ರಿಂದ ೨೦೦೫ರವರೆಗೆ ಮುವ್ವತ್ತು ವರ್ಷಗಳ ಕಾಲ ಆಕಾಶವಾಣಿಯ ವಿವಿಧ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿದ ನಂತರ ಸ್ವಯಂ ನಿವೃತ್ತಿ ಪಡೆದು ಈಗ ತಮ್ಮ ಪತ್ನಿ ಸವಿತಾ ನಾಗಭೂಷಣ ಅವರೊಂದಿಗೆ ಶಿವಮೊಗ್ಗದಲ್ಲಿ ನೆಲೆಸಿದ್ದಾರೆ.

ಸಾಹಿತ್ಯ ವಿಮರ್ಶೆ ಹಾಗೂ ಸಮಾಜವಾದಿ ಚಿಂತನೆ ಇವರ ವಿಶೇಷ ಆಸಕ್ತಿಯ ಕ್ಷೇತ್ರಗಳಾಗಿದ್ದು, ಈ ಕ್ಷೇತ್ರಗಳಿಗೆ ಸಂಬಂಧಿಸಿದಂತೆ 'ಗಮನ', 'ಅನೇಕ', 'ಈ ಭೂಮಿಯಿಂದ ಆ ಆಕಾಶದವರೆಗೆ', 'ಕುವೆಂಪು ಸಾಹಿತ್ಯ ದರ್ಶನ', 'ಲೋಹಿಯಾ ಸಮಾಜವಾದ ದರ್ಶನ', 'ಬೇರು ಬಿಳಲು', 'ಇದು ಭಾರತ ಇದು ಭಾರತ', 'ವಸಿಷ್ಠರು ಮತ್ತು ವಾಲ್ಮೀಕಿಯರು', 'ಕನ್ನಡ–ಕರ್ನಾಟಕ ಸಂಕಥನಗಳು' 'ಇಲ್ಲಿ ಯಾವುದೂ ಅಮುಖ್ಯವಲ್ಲ' ಸೇರಿದಂತೆ ಅನೇಕ ಮಹತ್ವದ ಕೃತಿಗಳನ್ನು ರಚಿಸಿದ್ದಾರೆ. 'ಮಾಸ್ತಿ ಸಾಹಿತ್ಯ ಸಮಗ್ರ ದರ್ಶನ', 'ಕುವೆಂಪು: ಒಂದು ಪುನರನ್ವೇಷಣೆ', 'ಹಣತೆ'(ಜಿಎಸ್ಸೆಸ್ ಅಭಿನಂದನ ಗ್ರಂಥ) 'ಉರಿದ ಪಂಜು' (ಕೆ. ರಾಮದಾಸ್ ಸ್ಮರಣ ಸಂಪುಟ), 'ನಮ್ಮ ಶಾಮಣ್ಣ' (ಕಡಿದಾಳು ಶಾಮಣ್ಣ ಗೌರವ ಗ್ರಂಥ) ಇವರು ಸಂಪಾದಿಸಿರುವ / ಸಹ ಸಂಪಾದಿಸಿರುವ ಮುಖ್ಯ ಗ್ರಂಥಗಳು.

ಸದ್ಯ ಡಿ.ಎಸ್. ನಾಗಭೂಷಣ ಅವರು 'ಹೊಸ ಮನುಷ್ಯ' ಎಂಬ ಸಮಾಜವಾದಿ ಮಾಸಿಕವನ್ನು ಪ್ರಕಟಿಸುತ್ತಿರುವರಲ್ಲದೆ, ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನದ ಅಧ್ಯಕ್ಷರಾಗಿ ಸಮಾಜವಾದಿ ವಿಚಾರಗಳ ಪ್ರಸಾರಕ್ಕಾಗಿ ಹಲವು ಕಾರ್ಯಾಗಾರಗಳನ್ನು ನಡೆಸುವುದರಲ್ಲಿ ತೊಡಗಿಕೊಂಡಿದ್ದಾರೆ.

ಭೂಮಿಯನ್ನು ಹಂಚಿಕೊಳ್ಳುವ ಬಗೆಗಳು...

(ಆಧುನಿಕತೆ, ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯ ಕುರಿತ ಆಯ್ದ ಬರಹಗಳು)

ಡಿ.ಎಸ್. ನಾಗಭೂಷಣ

ಸಂವಹನ

12/1A, ಈವ್ನಿಂಗ್ ಬಜಾರ್ ಹಿಂಭಾಗ

ಶಿವರಾಂಪೇಟೆ, ಮೈಸೂರು - 570 001

'Bhumiyannu hanchikolluva bagegalu...' a collection of selected articles on modernity, development and social justice by **D.S. Nagabhushana** at HIG-5, 'Nudi', Kallalli Extn., Vinoba Nagara, Shivamogga-577 204 Cell No. 94492 42284
email: dsnagabhushana@gmail.com
Published by **Samvahana,** No.12/1A, Behind Evening Bazar, Shivarampete, Mysuru-570 001 Ph.: 0821-2476019

ಪುಟಗಳು : xxiv + ೩೨೮=೩೫೨

Pages : xxiv + 328 = 352

ಮೊದಲ ಮುದ್ರಣ: ೨೦೧೬

ಬೆಲೆ: ಇನ್ನೂರು ಎಂಭತ್ತು ರೂಪಾಯಿ
Price : ₹280/-

ಕಾಗದ : 70 GSM ಮ್ಯಾಪ್‌ಲಿಥೊ

ಮುದ್ರಕರು:
ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್
೧೨, ಈವನಿಂಗ್ ಬಜಾರ್ ಹಿಂಭಾಗ
ಶಿವರಾಮಪೇಟೆ, ಮೈಸೂರು-೫೭೦೦೦೧
ದೂ: ೦೮೨೧-೨೪೭೬೦೧೯

ಅರ್ಪಣೆ

ಸಿ. ಪ್ರಶಾಂತ್
ದೀಪಾ ಪ್ರಶಾಂತ್
ಮತ್ತು
ಕು. ಅನಘ

ಇವರಿಗೆ

ಮುನ್ನುಡಿ

ವಿಚಿತ್ರ ವೈರುಧ್ಯಗಳ ವರ್ತಮಾನವೊಂದರಲ್ಲಿ ಬದುಕುತ್ತಿದ್ದೇವೆ. ನಮ್ಮ ನಿರೀಕ್ಷೆಯ ಬೆಳವಣಿಗೆಗಳು, ನಾವು ನಿರೀಕ್ಷೆ ಮಾಡದಿರುವ ಬದಲಾವಣೆಗಳು ತುಂಬ ಕ್ಷಿಪ್ರವಾಗಿ ನಮ್ಮ ಅಳತೆಗೂ ನಿಲುಕದೆ ನಡೆಯುತ್ತಿವೆ. ಇತಿಹಾಸವನ್ನು ಅವಲೋಕಿಸಿದಾಗ ಕಳೆದ ಮೂರು ದಶಕಗಳಲ್ಲಿ ನಮ್ಮ ಪ್ರತಿದಿನದ ಭೌತಿಕ ಬದುಕು ಬದಲಾಗಿರುವ ರೀತಿ ಬಹಳ ಅಪರೂಪದ್ದು, ಮನುಷ್ಯನ ಇತಿಹಾಸದಲ್ಲಿ ಬಹಳ ಕಡಿಮೆ ಬಾರಿ ಸಂಭವಿಸಿರುವುದು ಎನ್ನುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಅಲ್ಲದೆ ಈ ಬದಲಾವಣೆಗಳು ನಮ್ಮ ಬದುಕಿನ ಎಲ್ಲ ಆಯಾಮಗಳನ್ನು ಜಗತ್ತಿನ ಎಲ್ಲೆಡೆ ತೀವ್ರವಾಗಿ ಪ್ರಭಾವಿಸುತ್ತಿವೆ ಎನ್ನುವುದು ಈ ಕಾಲಘಟ್ಟದ ವಿಶೇಷ. ಇವುಗಳ ನಿಯಂತ್ರಣವೂ ಯಾವುದೇ ಒಂದು ಕೇಂದ್ರದಿಂದ ಅಥವಾ ಶಕ್ತಿಯಿಂದ ಆಗುತ್ತಿದೆ ಎನ್ನುವುದನ್ನು ನಿಖರವಾಗಿ ಹೇಳುವುದು ಕಷ್ಟ.

ಬದಲಾವಣೆಯ ಬಿರುಗಾಳಿಯ ಕೇಂದ್ರದೊಳಗೆ (eye of the storm) ಇರುವ ನಮಗೆ, ಇಂತಹದೊಂದು ವರ್ತಮಾನದ ವಾಸ್ತವವನ್ನು ಗ್ರಹಿಸಲು ಅಥವಾ ಸರಳವಾಗಿ ವಿವರಿಸಲು ಸಾಧ್ಯವಾಗುತ್ತಿಲ್ಲ. ಇಂದು ಆಗುತ್ತಿರುವ ಬದಲಾವಣೆಗಳ ಕುರಿತಾಗಿ ನಮ್ಮ ನಿಲುವುಗಳೇನು ಎನ್ನುವುದನ್ನು ವಿರೋಧಾಭಾಸಗಳೊಳಗೆ ಸಿಲುಕಿಕೊಳ್ಳದೆ ಹೇಳಲು ನಮಗಾಗುತ್ತಿಲ್ಲ. ಒಂದೆಡೆ ಹೊಸದೇನೊ ಬೇಕು ಎಂದು ಹಂಬಲಿಸುವ ಪ್ರಗತಿಪರರು ಇಂದಿನ ತೀವ್ರಗತಿಯ, ವ್ಯಾಪಕ ಬದಲಾವಣೆಗಳ ಬಗ್ಗೆ ವ್ಯಾಕುಲರಾಗಿದ್ದಾರೆ. ಮತ್ತೊಂದೆಡೆ ನಮ್ಮ ಪರಂಪರೆಯಲ್ಲಿಯೆ ಎಲ್ಲ ಉತ್ತರಗಳೂ ಇವೆ, ಹಾಗಾಗಿ ಯಾವ ಹೊಸ ಚಿಂತನೆಯು, ಭೌತಿಕ ವಸ್ತು-ಸಂಸ್ಕೃತಿಗಳ ಅವಶ್ಯಕತೆಯೂ ಇಲ್ಲ ಎಂಬ ಉಗ್ರನಂಬಿಕೆಯಲ್ಲಿಯೇ ಬದುಕುವ ಸಾಂಪ್ರದಾಯಿಕರು ಇಂದಿನ ಹಲವು ಬದಲಾವಣೆಗಳ ಬಗ್ಗೆ ಉತ್ಸುಕತೆಯಿಂದ ಮಾತನಾಡುತ್ತಾರೆ, ಆಶಾವಾದವನ್ನು ಪ್ರಕಟಿಸುತ್ತಾರೆ. ಎಲ್ಲಕ್ಕಿಂತ ಮಿಗಿಲಾಗಿ ಈ ಎರಡೂ ವರ್ಗಗಳ ಸೈದ್ಧಾಂತಿಕ ಚೌಕಟ್ಟುಗಳ ಬಲದಿಂದ ಇಂದಿನ ವಾಸ್ತವವನ್ನು ಸರಿಯಾಗಿ ಗ್ರಹಿಸಿರುವ, ಸರಳ -ಸುಸಂಬದ್ಧ ವಿವರಣೆಗಳು ದೊರಕುತ್ತಿಲ್ಲ ಎನ್ನುವುದಂತೂ ನಿರ್ವಿವಾದವಾದುದು. ಇನ್ನು ನಮ್ಮ ನಡುವಿನ ಸಮಾಜವಿಜ್ಞಾನಿಗಳ (ಅದರಲ್ಲೂ ನಮ್ಮ ರಾಜ್ಯದಲ್ಲಿರುವವರ) ಬಗೆಗೆ ಎಷ್ಟು ಕಡಿಮೆ ಮಾತನಾಡಿದರೂ ಅಷ್ಟು ಒಳ್ಳೆಯದು. ಅವರು ನಾವು ಯಾವ ಪ್ರಪಂಚದಲ್ಲಿ ಬದುಕುತ್ತಿದ್ದೇವೆ, ಅದರ ಬಗೆಗಿನ ಜ್ಞಾನವನ್ನು ಹೇಗೆ ಕಟ್ಟಿಕೊಳ್ಳಬಹುದು ಎನ್ನುವ ಯಾವ ಪ್ರಾಥಮಿಕ ತಿಳುವಳಿಕೆಯನ್ನೂ, ಪರಿಜ್ಞಾನವನ್ನೂ ತೋರಿಸುತ್ತಿಲ್ಲ.

ಈ ಮೇಲಿನ ಮಾತುಗಳನ್ನು ಸ್ಪಷ್ಟ ಪಡಿಸಿಕೊಳ್ಳಲು ನಮಗಿಂದು ಗೋಚರಿಸುವ ಕೆಲವು ವೈರುಧ್ಯಗಳನ್ನು ಉದಾಹರಣೆಯಾಗಿರಿಸಿಕೊಂಡು ನಮ್ಮ ಚರ್ಚೆಯನ್ನು ಮುಂದುವರಿಸಬಹುದು.

ಮೊದಲ ಉದಾಹರಣೆಯಾಗಿ ನಮ್ಮ ಪ್ರಸ್ತುತ ರಾಜಕಾರಣವನ್ನೇ ಗಮನಿಸಿ. ಬಹುಶಃ ಸಂಸದೀಯ ಪ್ರಜಾಪ್ರಭುತ್ವ ಹಿಂದೆಂದಿಗಿಂತಲೂ ಇಂದು ಹೆಚ್ಚು ಪ್ರಬಲವಾಗಿ ಬೇರು ಬಿಟ್ಟಿದೆ. ಅಂದರೆ ಬಹುತೇಕ ಎಲ್ಲ ವರ್ಗದ ಜನರೂ ಚುನಾವಣಾ ರಾಜಕಾರಣದ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ. ಬಹುತೇಕರಿಗೆ ಸರ್ಕಾರದಿಂದ ತಮಗೆ ಲಭ್ಯವಾಗಬೇಕಿರುವ ಸವಲತ್ತುಗಳ ಬಗ್ಗೆ ಅರಿವಿದೆ. ಅವುಗಳನ್ನು ಪಡೆಯಲು ಹೆಣಗುತ್ತಾರೆ. ಕಾನೂನಿನೊಳಗಿನ ಇಲ್ಲವೆ ಕಾನೂನಿನ ಆಚೆಗಿನ ದಾರಿಗಳನ್ನು ಹುಡುಕುತ್ತಾರೆ. ಅವರನ್ನು ಪ್ರತಿನಿಧಿಸುವ ರಾಜಕಾರಣಿಗಳೂ ಸಹ ಅವರನ್ನು ಸಂಪೂರ್ಣವಾಗಿ ಅಲಕ್ಷಿಸಿ ವ್ಯವಹರಿಸುವಂತಿಲ್ಲ. ಇಂದು ನಮಗೆ ಈ ವಿದ್ಯಮಾನ ಸಹಜವೆನಿಸುತ್ತದೆ, ಆಶ್ಚರ್ಯ ಮೂಡಿಸುವುದಿಲ್ಲ. ಆದರೆ ಮೂರು ದಶಕಗಳ ಹಿಂದೆ ಇಂದಿರುವ ರಾಜಕೀಯ ಪ್ರಜ್ಞೆ, ಎಚ್ಚರ ಇರಲಿಲ್ಲ ಎಂಬುದನ್ನು ನಾವು ಮರೆಯುವಂತಿಲ್ಲ. ಕರ್ನಾಟಕದ ರಾಜಕಾರಣವನ್ನು ಗಂಭೀರವಾಗಿ ಅಧ್ಯಯನ ಮಾಡಿರುವ ರಾಜಕೀಯ ಶಾಸ್ತ್ರಜ್ಞ ಜೇಮ್ಸ್ ಮೇನರ್ ಮತ್ತು ಪತ್ರಕರ್ತ ಇ. ರಾಘವನ್ ಈ ವಿದ್ಯಮಾನವನ್ನು 'deepening of democracy' (ಪ್ರಜಾಪ್ರಭುತ್ವದ ಆಳವಾಗಿಸುವಿಕೆ) ಎಂದು ಗುರುತಿಸುತ್ತಾರೆ.

ಪ್ರಜಾಪ್ರಭುತ್ವ ಬೇರು ಬಿಟ್ಟಿದೆ ಎಂದು ಒಂದೆಡೆ ಅನಿಸುವಾಗಲೇ ಇತ್ತೀಚಿನ ವರ್ಷಗಳಲ್ಲಿ ಸ್ಥಳೀಯ ಸಂಸ್ಥೆಗಳಿಂದ ವಿಧಾನಪರಿಷತ್ ಸದಸ್ಯರನ್ನು ಆರಿಸಲು ಅಥವಾ ವಿಧಾನಸಭೆಯಿಂದ ವಿಧಾನಪರಿಷತ್ತಿಗೆ ಇಲ್ಲವೆ ರಾಜ್ಯಸಭೆಗೆ ಸದಸ್ಯರನ್ನು ಆಯ್ಕೆ ಮಾಡುವ ಸಂದರ್ಭಗಳ ರಾಜಕೀಯ ಕಸರತ್ತುಗಳನ್ನು ಗಮನಿಸಿ. ಎಲ್ಲ ಪಕ್ಷಗಳೂ ಟಿಕೆಟ್ ನೀಡಿದ್ದು ಬಹುತೇಕ ಶ್ರೀಮಂತ ಉದ್ಯಮಿಗಳಿಗೆ. ಅಥವಾ ಇತ್ತೀಚೆಗೆ ಮಾಜಿ ಪ್ರಧಾನಿ ದೇವೇಗೌಡರು ಹೇಳಿದಂತೆ 'ದಮ್' ಇದ್ದವರಿಗೆ. ಸ್ಥಳೀಯ ಸಂಸ್ಥೆಗಳ ಪ್ರತಿಯೊಂದು ಕ್ಷೇತ್ರದಲ್ಲಿಯೂ ಅಭ್ಯರ್ಥಿಗಳು ತಮ್ಮನ್ನು ಆಯ್ಕೆ ಮಾಡುತ್ತಿದ್ದ ಇತರ ಜನಪ್ರತಿನಿಧಿಗಳಿಗೆ ಹತ್ತಾರು ಸಾವಿರ ಹಣ ನೀಡಿದರೆಂಬ ನಂಬಲರ್ಹ ವದಂತಿಗಳಿವೆ. ಗೆಲ್ಲಬೇಕೆಂದರೆ ಯಾರೆ ಆಗಲಿ ಇಂತಹ ಚುನಾವಣೆಯೊಂದಕ್ಕೆ ಇಪ್ಪತ್ತರಿಂದ ಮೂವತ್ತು ಕೋಟಿ ಹಣ ಖರ್ಚು ಮಾಡುವುದು ಅನಿವಾರ್ಯ ಎನ್ನುವಂತಾಗಿದೆ. ರಾಜ್ಯಸಭಾ ಚುನಾವಣೆಯ ಸಮಯಕ್ಕೆ ಈ ಮೊತ್ತ ನೂರಾರು ಕೋಟಿಗಳನ್ನು ತಲುಪುತ್ತಿದೆ.

ರಾಜಕಾರಣದಲ್ಲಿನ ಭ್ರಷ್ಟತೆಯನ್ನು ತೋರಿಸಲು ಇತರ ಉದಾಹರಣೆಗಳನ್ನೂ ನೀಡಬಹುದೇನೊ. ಆದರೆ ನಾನಿಲ್ಲಿ ಪಂಚಾಯತ್ ರಾಜ್ ಮತ್ತು ನಗರಾಡಳಿತ ಸಂಸ್ಥೆಗಳನ್ನು ಉಲ್ಲೇಖಿಸಿದ್ದು ಅವುಗಳ ಹಿಂದಿರುವ ಒಂದು ದೊಡ್ಡ ಆಶಯದ ಕಾರಣದಿಂದ. ಎಲ್ಲರಿಗೂ ತಿಳಿದಿರುವ ಈ ಆಶಯವೆಂದರೆ ಅಧಿಕಾರ ವಿಕೇಂದ್ರೀಕರಣದ ಮೂಲಕ ನಮ್ಮ ನಗರಗಳ ಮತ್ತು ಹಳ್ಳಿಗಳ ಆಡಳಿತವನ್ನು ನಾವೇ ನಡೆಸಿಕೊಳ್ಳುವ

ಸಂಸ್ಥೆಗಳನ್ನು ಕಟ್ಟಿಕೊಳ್ಳುವುದು. ಇತ್ತೀಚಿನ ಚುನಾವಣೆಗಳು ಈ ಆಶಯವನ್ನು ನುಚ್ಚುನೂರು ಮಾಡಿದವು ಎಂಬುದರಲ್ಲಿ ಅನುಮಾನವಿಲ್ಲ. ಈ ಚುನಾವಣೆಗಳಲ್ಲಿ ಆಯ್ಕೆಯಾಗುತ್ತಿರುವವರು ನಮ್ಮ ರಾಜ್ಯದ ನೈಸರ್ಗಿಕ ಸಂಪನ್ಮೂಲಗಳನ್ನು ಲೂಟಿ ಹೊಡೆದಿರುವವರು ಇಲ್ಲವೆ ರಿಯಲ್ ಎಸ್ಟೇಟ್ ಉದ್ಯಮದಲ್ಲಿ ಎಲ್ಲ ನಿಯಮಗಳನ್ನೂ ಉಲ್ಲಂಘಿಸಿ, ನೂರಾರು–ಸಾವಿರಾರು ಕೋಟಿ ಹಣ ಮಾಡಿರುವವರು. ಹೀಗೆ ರಾಜಕೀಯ ಅಧಿಕಾರ–ಪ್ರಭಾವಗಳನ್ನು ಗಳಿಸುತ್ತಿರುವವರು ಎಲ್ಲ ವರ್ಗ–ಜಾತಿಗಳವರೂ ಇದ್ದಾರೆ ಎನ್ನುವುದನ್ನು ನಾವಿಲ್ಲಿ ಮರೆಯುವಂತಿಲ್ಲ.

ಅಂದರೆ ಇಂದು ಸ್ಥಳೀಯ ಸಂಸ್ಥೆಗಳ ಜಾಲವೊಂದನ್ನು ನಾವು ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕಟ್ಟಿಕೊಂಡಿದ್ದೇವೆ ಎನ್ನುವುದು ನಿಜ. ಸ್ವಾತಂತ್ರ್ಯ ಬಂದ ನಂತರವೂ ಗಣ್ಯ ವರ್ಗ/ಜಾತಿಗಳ ಕೆಲವರು ಮಾತ್ರ ಭಾಗವಹಿಸುತ್ತಿದ್ದ ಸಂಸದೀಯ ಪ್ರಜಾಪ್ರಭುತ್ವದ ಪ್ರಕ್ರಿಯೆಗಳಲ್ಲಿ ಪಾಲ್ಗೊಳ್ಳುವವರ ಸಂಖ್ಯೆ ಹೆಚ್ಚಾಗಿದೆ, ಅವರ ರಾಜಕೀಯ ಪ್ರಜ್ಞೆ ತೀಕ್ಷ್ಣವಾಗಿದೆ ಎನ್ನುವುದರಲ್ಲಿ ಯಾವುದೆ ಅನುಮಾನವಿಲ್ಲ. ಆದರೆ ಇಂದು ನಮ್ಮ ಪ್ರಜಾಪ್ರಭುತ್ವ ಆಲಿಗಾರ್ಕಿಯೆಡೆಗೆ ('ಸ್ವಲ್ಪಜನಾಧಿಪತ್ಯ'ದೆಡೆಗೆ) ಸಾಗುತ್ತಿದೆ ಎನ್ನುವುದೂ ವಾಸ್ತವವೇ. ಸ್ವಾತಂತ್ರ್ಯ ಪಡೆದ ಆರಂಭದ ದಶಕಗಳಲ್ಲಿ ಸಮಾಜದ ಕೆಲವೇ ವರ್ಗಗಳು ರಾಜಕೀಯ ಪ್ರಕ್ರಿಯೆಗಳಲ್ಲಿ ಭಾಗವಹಿಸುತ್ತಿದ್ದುದರಿಂದ ಸೀಮಿತ ನೆಲೆಯ ಪ್ರಜಾಪ್ರಭುತ್ವವೊಂದು ನಮ್ಮಲ್ಲಿತ್ತು. ಆದರೆ ಇಂದು ಭಾಗವಹಿಸುವಿಕೆಯ ಪ್ರಮಾಣ ಮತ್ತು ತೀವ್ರತೆಗಳೆರಡೂ ಹೆಚ್ಚಾಗಿದ್ದರೂ, ಆಲಿಗಾರ್ಕಿಯೊಂದು ಹುಟ್ಟುತ್ತಿದೆ. ಈ ವ್ಯವಸ್ಥೆಯೊಳಗೆ ಅಧಿಕಾರದ ಪಾಲುದಾರರಾಗುತ್ತಿರುವವರು ಎಲ್ಲ ಜಾತಿ ಮತ್ತು ವರ್ಗಗಳ ಜನರೂ ಸೇರಿದ್ದಾರೆ. ಜೊತೆಗೆ ಪ್ರಭುತ್ವದ ಸಂಪನ್ಮೂಲಗಳನ್ನು ಪಡೆಯುವ (ನೈತಿಕ–ಅನೈತಿಕ, ಕಾನೂನಾತ್ಮಕ–ಕಾನೂನುಬಾಹಿರ) ದಾರಿಗಳನ್ನು ಎಲ್ಲರೂ ಹುಡುಕುತ್ತಿದ್ದಾರೆ ಎನ್ನುವುದು ಇಂದಿನ ವಿಶೇಷ. ಇಂತಹ ವೈರುಧ್ಯಗಳನ್ನು ಸ್ಪಷ್ಟಪಡಿಸಿಕೊಳ್ಳದೆ, ರಾಜಕೀಯ ಪರ್ಯಾಯಗಳ ಬಗ್ಗೆ ಚರ್ಚಿಸುವುದಾದರೂ ಹೇಗೆ? ಅಧಿಕಾರದ ವಿಕೇಂದ್ರೀಕರಣ ಹಾಗೂ ರಾಜಕೀಯ ಪ್ರಜ್ಞೆಯ ಆಳವಾಗಿಸುವಿಕೆ ಬಹಳ ಕಾಲದಿಂದಲೂ ಪ್ರಗತಿಪರ ರಾಜಕಾರಣದ ಗುರಿಗಳಾಗಿವೆ. ಆದರೆ ಈ ಗುರಿಗಳ ಸಾಧನೆಯ ನಂತರದ ಇಂದಿನ ರಾಜಕಾರಣದ ಬಗ್ಗೆ ಸಹ ತೀವ್ರವಾದ ಅಸಮಾಧಾನದೊಡನೆಯೇ ಪ್ರಗತಿಪರರು ವ್ಯವಹರಿಸಬೇಕಾಗಿದೆ.

ಎರಡನೆಯ ಉದಾಹರಣೆಯಾಗಿ ಆರ್ಥಿಕ ಕ್ಷೇತ್ರದಲ್ಲಿನ ಬೆಳವಣಿಗೆಗಳನ್ನು ಗಮನಿಸಿ.

ಕಳೆದ ಎರಡು ದಶಕಗಳಲ್ಲಿ ಭಾರತೀಯ ಅರ್ಥವ್ಯವಸ್ಥೆಗೊಂದು ಹೊಸ ಚೈತನ್ಯ (dynamism) ಬಂದಿದೆ ಹಾಗೂ ನಾವು ಯಾರೂ ನಿರೀಕ್ಷೆ ಮಾಡಿಲ್ಲದ ರೀತಿಯಲ್ಲಿ ಬೆಳೆದಿದೆ ಎನ್ನುವುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಈ ಬೆಳವಣಿಗೆ ೧೯೯೧ರಲ್ಲಿ ಪ್ರಾರಂಭವಾದ ಉದಾರೀಕರಣದ ಪರಿಣಾಮವಿರಬಹುದು. ಈ ಅಭಿವೃದ್ಧಿಯ ರೂಪುರೇಷೆ ಮತ್ತು ದೆಸೆಗಳ ಬಗ್ಗೆ ನಮಗೆ ಸಮಾಧಾನ ಇಲ್ಲದಿರಬಹುದು. ಆದರೆ ಹಿಂದೆಂದೂ ಇರದ ರೀತಿಯಲ್ಲಿ ಹೊಸ ಔದ್ಯಮಿಕ ಸಾಧ್ಯತೆಗಳು ಮತ್ತು ಅವಕಾಶಗಳು ಇಂದು

ಹುಟ್ಟುತ್ತಿವೆ. ಅವುಗಳ ಮೂಲಕ ಸಂಪತ್ತು ಸೃಷ್ಟಿಯಾಗಿದೆ ಎಂಬುದಂತೂ ವಾಸ್ತವ. ಇಂತಹ ಸಾಧ್ಯತೆಗಳನ್ನು ಸಾಕಾರಗೊಳಿಸಲು ಬುದ್ಧಿಮತ್ತೆ, ಉದ್ಯಮಶೀಲತೆ ಮತ್ತು ಒಂದಷ್ಟು ಅದೃಷ್ಟ ಮಾತ್ರ ಬೇಕಿರುವುದು. ಕೌಟುಂಬಿಕ ಹಿನ್ನೆಲೆ, ಜಾತಿ ಇತ್ಯಾದಿಗಳೆಲ್ಲ ಸಂಪೂರ್ಣವಾಗಿ ಗೌಣವಾಗದಿದ್ದರೂ, ಅವೇ ನಿರ್ಣಾಯಕ ಅಂಶಗಳಾಗುತ್ತಿಲ್ಲ. ಈ ಮಾತನ್ನು ಹೇಳುವಾಗ ದಲಿತ ಹಾಗೂ ಹಿಂದುಳಿದ ವರ್ಗಗಳ ಉದ್ಯಮಿಗಳ ಸಂಖ್ಯೆ ಬಹಳ ಕಡಿಮೆ ಇದೆ ಎನ್ನುವುದನ್ನೂ ನಾನು ಅಲಕ್ಷಿಸುತ್ತಿಲ್ಲ. ಆದರೆ ಐಐಟಿಯಲ್ಲಿ ಓದಿದ ಮಧ್ಯಮ ವರ್ಗದ ಇಬ್ಬರು ಹುಡುಗರು ಹತ್ತಾರು ಸಾವಿರ ಕೋಟಿ ರೂಪಾಯಿಗಳ ವಹಿವಾಟು ನಡೆಸುವ ಫ್ಲಿಪ್‌ಕಾರ್ಟ್‌ನಂತಹ ಉದ್ಯಮವನ್ನು ಕೆಲವೇ ವರ್ಷಗಳಲ್ಲಿ ನಮ್ಮ ಕಣ್ಣ ಮುಂದೆಯೇ ಕಟ್ಟುತ್ತಾರೆ. ಓಲ ಕ್ಯಾಬ್ಸ್, ಸ್ನಾಪ್ ಡೀಲ್‌ಗಳಂತಹ ಹತ್ತಾರು ಉದಾಹರಣೆಗಳು ನಮ್ಮ ಮುಂದೆ ಕಾಣಸಿಗುತ್ತವೆ.

ಈ ಹೊಸ ಚೈತನ್ಯಶೀಲತೆ ನಮ್ಮ ಸುತ್ತಮುತ್ತಲಿನ ಮಧ್ಯಮ, ಕೆಳಮಧ್ಯಮವರ್ಗದ ಹಾಗೂ ದುಡಿಯುವ ವರ್ಗಗಳ ಹಿನ್ನೆಲೆಯಿಂದ ಬಂದ ಯುವಕ, ಯುವತಿಯರಿಗೆ ಹೊಸ ಅವಕಾಶಗಳನ್ನು ಕಟ್ಟಿಕೊಡುತ್ತಿದೆ ಎನ್ನುವುದನ್ನೂ ನಾವು ಅಲ್ಲಗಳೆಯಲಾಗುವುದಿಲ್ಲ. ಹತ್ತಾರು ಲಕ್ಷ ಯುವಕ, ಯುವತಿಯರು ತಮ್ಮ ಸಾಂಪ್ರದಾಯಿಕ ವೃತ್ತಿಗಳನ್ನು ಬಿಟ್ಟು ಸೇವಾವಲಯದ ಕೆಲಸಗಳನ್ನು ಮಾಡತೊಡಗಿದ್ದಾರೆ. ಇದು ಹೆದ್ದಾರಿಯ ಪಕ್ಕದ ರೆಸ್ಟರಾಂಟ್‌ಗಳಲ್ಲಿರಬಹುದು. ಮೊಬೈಲ್ ಫೋನ್ ಕಛೇರಿಗಳಲ್ಲಿ ಮತ್ತು ಅಂಗಡಿಗಳಲ್ಲಿ ಆಗಬಹುದು. ಅಥವಾ ಓಲಾದಂತಹ ಟ್ಯಾಕ್ಸಿ ಸಂಗ್ರಾಹಕ ಕಂಪನಿಯ ಜೊತೆಗೆ ಕೆಲಸ ಮಾಡುವ ಕಾರು ಚಾಲಕರು ಇರಬಹುದು. ಬಹುರಾಷ್ಟ್ರೀಯ ಖಾಸಗಿ ಕಂಪನಿಗಳಲ್ಲಿ ಕೆಲಸ ಮಾಡುವ ಯುವಕ ಯುವತಿಯರಿರಬಹುದು. ಇವರೆಲ್ಲರೂ ತಮ್ಮ ಹಿಂದಿನ ಆರ್ಥಿಕ ಮತ್ತು ಸಾಮಾಜಿಕ ಸ್ಥಾನಗಳಾಚೆಗೆ ಬರುವಲ್ಲಿ ಯಶಸ್ವಿಯಾಗಿದ್ದಾರೆ.

ಈ ವಿದ್ಯಮಾನವನ್ನು ಗುರುತಿಸುವಾಗ ನನ್ನ ಉದ್ದೇಶ ಈಗಿರುವ ಸಾಮಾಜಿಕ ಚಲನಶೀಲತೆಯ (Social mobility) ಅವಕಾಶಗಳನ್ನು, ಸಾಧ್ಯತೆಗಳನ್ನು ಎತ್ತಿ ತೋರಿಸುವುದಷ್ಟೆ. ಇದರಿಂದ ನಮ್ಮ ಸಮಾಜದ ಎಲ್ಲರಿಗೆ ಘನತೆಯ ಬದುಕು ಸಾಧ್ಯವಾಗುತ್ತಿದೆ ಎನ್ನುವ ವಾದವನ್ನು ನಾನು ಮುಂದಿಡುತ್ತಿಲ್ಲ. ಬದಲಿಗೆ ವಾಸ್ತವದಲ್ಲಿ ಇಂದಿರುವ ಚಲನಶೀಲತೆಯ (mobility) ನಿರ್ದಿಷ್ಟ ಸ್ವರೂಪವೇನು ಎನ್ನುವುದನ್ನು ನಾವು ಗುರುತಿಸಬೇಕಿದೆ ಎನ್ನುತ್ತಿದ್ದೇನೆ. ಹೆದ್ದಾರಿ ಬದಿಯ ರೆಸ್ಟರೆಂಟಿನಲ್ಲಿ ಇಲ್ಲವೆ ಬೆಂಗಳೂರಿನಂತಹ ಮಹಾನಗರದ ಗಾರ್ಮೆಂಟ್ ಉದ್ದಿಮೆಗಳಲ್ಲಿ ಕೆಲಸ ಮಾಡುವ ಹೆಣ್ಣುಮಕ್ಕಳು ಸ್ವತಂತ್ರರಾಗಿ ತಮ್ಮ ಬದುಕನ್ನು ಕಟ್ಟಿಕೊಳ್ಳುತ್ತಿದ್ದಾರೆ ಎನ್ನುವ ವಾದವನ್ನು ಯಾರೂ ಮಾಡಲು ಸಾಧ್ಯವಿಲ್ಲ. ಈ ಮಾತನ್ನು ಬಹುರಾಷ್ಟ್ರೀಯ ಕಂಪನಿಗಳಲ್ಲಿ ಕೆಲಸ ಮಾಡುತ್ತಿರುವ ಸುಶಿಕ್ಷಿತ ಹೆಣ್ಣುಮಕ್ಕಳ ಬಗ್ಗೆಯೇ ಹೇಳಲಾಗುತ್ತಿಲ್ಲ. ಆದರೆ ಅವರಿಗಿರುವ ಸಾಂಪ್ರದಾಯಿಕ ಪರ್ಯಾಯಗಳಿಗೆ ಹೋಲಿಸಿದಾಗ ಅವರಿಗೆ ಇಂದು ಸಾಧ್ಯವಾಗಿರುವ ಚಲನೆಯನ್ನು, ಅವರಿಗಿರುವ ಹೊಸ ಅವಕಾಶಗಳನ್ನು ಬಿಟ್ಟುಕೊಡುವಂತೆ ಸುಲಭವಾಗಿ ನಾವು ಕೇಳಲಾಗುತ್ತಿಲ್ಲ.

ಆರ್ಥಿಕ ವ್ಯವಸ್ಥೆಯ ಸಂದರ್ಭದಲ್ಲಿ ನಮಗೆ ಗಾಬರಿ ಹುಟ್ಟಿಸಬೇಕಿರುವ ಮತ್ತೊಂದು ಅಂಶವಿದೆ. ಅದೇನೆಂದರೆ ನಾನು ಮೇಲೆ ಗುರುತಿಸಿದಂತಹ ಚಲನಶೀಲತೆಯ ನಡುವೆಯೂ ಇಂದು ಸೃಷ್ಟಿಯಾಗುತ್ತಿರುವ ಸಂಪತ್ತಿನ ಹಂಚಿಕೆ ಅಸಮಾನವಾಗಿ ಆಗುತ್ತಿದೆ ಎನ್ನುವುದು. ಮಾತ್ರವಲ್ಲ, ನಮ್ಮ ಸಮಾಜದಲ್ಲಿ ಈಗಾಗಲೇ ಇರುವ ಅಸಮಾನತೆಯನ್ನು ತೀವ್ರವಾಗಿ ಹೆಚ್ಚಿಸುವ ರೀತಿಯಲ್ಲಿಯೇ ಮುನ್ನಡೆಯುತ್ತಿದೆ. ಗಮನಿಸಿ. ಇಂದು ಭಾರತದಲ್ಲಿರುವ ಅತ್ಯಂತ ಶ್ರೀಮಂತ ಶೇ. ೧ರಷ್ಟು ಜನರು ದೇಶದ ಶೇ. ೫೩ರಷ್ಟು ಸಂಪತ್ತನ್ನು ಹೊಂದಿದ್ದಾರೆ. ಹದಿನೈದು ವರ್ಷಗಳ ಹಿಂದೆ ಈ ವರ್ಗ ಕೇವಲ ಶೇ. ೩೬.೮ ಭಾಗವನ್ನು ಹೊಂದಿತ್ತು. ೨೦೦೦ದ ನಂತರ ಉತ್ಪತ್ತಿಯಾಗಿರುವ ಸಂಪತ್ತಿನಲ್ಲಿ ಶೇ. ೬೧ರಷ್ಟು ಇದೇ ವರ್ಗಕ್ಕೆ ಸಿಕ್ಕಿದೆ. ಹೀಗೆ ಅರ್ಥವ್ಯವಸ್ಥೆ ಬೆಳೆದಂತೆ ಅದರ ಲಾಭ ಅತ್ಯಂತ ಶ್ರೀಮಂತ ವರ್ಗಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ದೊರಕುತ್ತಿದೆ. ಐ.ಎಂ.ಎಫ್.ನ ಕಾರ್ಯನಿರ್ವಾಹಕ ನಿರ್ದೇಶಕಿ ಕ್ರಿಸ್ಟಿನ್ ಲೆಗಾರ್ಡ್‌ರ ಪ್ರಕಾರ ಕಳೆದ ಹದಿನೈದು ವರ್ಷಗಳಲ್ಲಿ ಭಾರತದ ಬಿಲಿಯನೇರುಗಳ ಒಟ್ಟು ಸಂಪತ್ತು ಹನ್ನೆರಡು ಪಟ್ಟು ಹೆಚ್ಚಾಗಿದೆ. ಈ ಮೊತ್ತ ಭಾರತದ ಸಾಪೇಕ್ಷ ಬಡತನವನ್ನು ಹೋಗಲಾಡಿಸಲು ಅಗತ್ಯವಿರುವ ಹಣದ ಎರಡರಷ್ಟು. ಇಂದು ಕೆಳಗಿನ ಶೇ. ೫೦ ಜನ ಭಾರತೀಯರು ಹೊಂದಿರುವ ದೇಶದ ಸಂಪತ್ತಿನ ಪಾಲು ಕೇವಲ ಶೇ ೪.೧.

ಇದು ಕೇವಲ ಭಾರತದ ಕಥೆಯಲ್ಲ. ೨೦೧೫ರಲ್ಲಿ ಜಗತ್ತಿನ ೬೨ ಜನ ಅತ್ಯಂತ ಶ್ರೀಮಂತರು ಕೆಳಗಿನ ಶೇ. ೫೦ರಷ್ಟು ಬಡವರಿಗಿಂತ ಹೆಚ್ಚು ಸಂಪತ್ತನ್ನು ಹೊಂದಿದ್ದಾರೆ. ಕೇವಲ ೫ ವರ್ಷಗಳ ಹಿಂದೆ, ೨೦೧೦ರಲ್ಲಿ ಇಷ್ಟು ಸಂಪತ್ತನ್ನು ಹೊಂದಿದ್ದ ಶ್ರೀಮಂತರ ಸಂಖ್ಯೆ ೩೮೮ ಆಗಿತ್ತು. ೨೦೧೦ರಿಂದ ೨೦೧೫ರ ನಡುವೆ ಪ್ರಪಂಚದ ಶೇ. ೫೦ ಕಡು ಬಡವರು ಹೊಂದಿದ್ದ ಸಂಪತ್ತಿನ ಪ್ರಮಾಣ ಶೇ. ೪೧ರಷ್ಟು ಕಡಿಮೆಯಾಗಿದೆ. ಇದೇ ಸಮಯದಲ್ಲಿ ಶ್ರೀಮಂತರ ಸಂಪತ್ತು ೫೦೦ ಬಿಲಿಯನ್ ಡಾಲರುಗಳಷ್ಟು ಹೆಚ್ಚಾಗಿದೆ. ಇಂದು ಶ್ರೀಮಂತ ಶೇ. ೧ ವರ್ಗ ಉಳಿದ ಶೇ. ೯೯ಕ್ಕಿಂತ ಹೆಚ್ಚಿನ ಸಂಪತ್ತನ್ನು ಹೊಂದಿದೆ. ಜಾಗತಿಕವಾಗಿ ಹೆಚ್ಚುತ್ತಿರುವ ಅಸಮಾನತೆಯನ್ನು ಕುರಿತಂತೆ ತಮ್ಮ ಕೃತಿಗಳಲ್ಲಿ ಚರ್ಚಿಸುವ ಥಾಮಸ್ ಪಿಕೆಟಿ ಹೇಳುವಂತೆ, ಇಂದಿನ ಆರ್ಥಿಕ ಬೆಳವಣಿಗೆಯ ಗತಿ ಖಾಸಗಿ ಬಂಡವಾಳದ ಲಾಭದ ಪ್ರಮಾಣಕ್ಕಿಂತ ಕಡಿಮೆಯಿದೆ. ಹಾಗಾಗಿ ವಂಶಪಾರಂಪರ್ಯವಾಗಿ ಬಂದ ಆಸ್ತಿ ಹಾಗೂ ಖಾಸಗಿ ಬಂಡವಾಳಗಳು ಕಾರ್ಮಿಕರ ಶ್ರಮಕ್ಕೆ ನೀಡುವ ಕೂಲಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಪ್ರತಿಫಲ ಗಳಿಸಿ, ಆ ಮೂಲಕ ಸಮಾಜದೊಳಗೆ ಅಸಮಾನತೆ ಹೆಚ್ಚುತ್ತಿದೆ ಎಂದೂ ಪಿಕೆಟಿ ತೋರಿಸುತ್ತಾರೆ.

ಹೀಗೆ ಹೊಸ ಔದ್ಯಮಿಕ ಸಾಧ್ಯತೆಗಳು ಮತ್ತು ಸಾಮಾಜಿಕ ಚಲನಶೀಲತೆ, ಸಾಟಿಯಿಲ್ಲದ ಸಂಪತ್ತಿನ ಸೃಷ್ಟಿ ಹಾಗೂ ಅದೇ ಸಂಪತ್ತಿನ ಅಸಮಾನ ಹಂಚಿಕೆ – ಇವುಗಳೆಲ್ಲವೂ ಜೊತೆ ಜೊತೆಯಲ್ಲಿಯೇ ಮುನ್ನಡೆಯುತ್ತಿವೆ ಎನ್ನುವುದು ಇಲ್ಲಿ ಮುಖ್ಯವಾದುದು. ಇಂದು ಜಾಗತಿಕವಾಗಿ ಅಸ್ತಿತ್ವಕ್ಕೆ ಬರುತ್ತಿರುವ ಹೊಸ ಅರ್ಥವ್ಯವಸ್ಥೆ

ತ್ವರಿತವಾಗಿ ಬದಲಾವಣೆ ಹೊಂದುವುದನ್ನೇ ಮುಖ್ಯ ಗುಣವಾಗಿ ಹೊಂದಿದೆ. ಇದರಲ್ಲಿ ಯಾವುದೆ ಖಾತ್ರಿಗಳನ್ನೂ ನೀಡದ, ಯಾವುದೆ ಬಗೆಯ ಭದ್ರತೆಯೂ ಇರದ ಅರೆಕಾಲಿಕ ಕೆಲಸಗಳನ್ನು ಮಾತ್ರ ನಿರೀಕ್ಷಿಸಬಹುದು. ತಾತ್ಕಾಲಿಕತೆ ಮತ್ತು ಅಭದ್ರತೆಗಳನ್ನೇ ಮುಖ್ಯಗುಣಗಳಾಗಿಸಿಕೊಂಡಿರುವ ವ್ಯವಸ್ಥೆ ನಮ್ಮ ಕಣ್ಣಮುಂದೆಯೇ ರೂಪುಗೊಳ್ಳುತ್ತಿದೆ. ಕಳೆದೆರಡು ಶತಮಾನಗಳಲ್ಲಿ ಶ್ರಮಜೀವಿಗಳು ಹೋರಾಟದ ಮೂಲಕ ಗಳಿಸಿಕೊಂಡಿದ್ದ ಎಲ್ಲ ಲಾಭಗಳು ಮತ್ತು ರಿಯಾಯತಿಗಳು ನಶಿಸಿವೆ. ಆದರೂ ಈ ವಾಸ್ತವವೂ ಕಲೆ-ಸಂಸ್ಕೃತಿ-ಸಾಹಿತ್ಯ ಸಂಬಂಧಿತ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತ, ಬದುಕಿನ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಅಗತ್ಯವಾದಷ್ಟು ಕೆಲಸ ಮಾಡುತ್ತೇವೆ ಎನ್ನುವವರ ಯುಟೋಪಿಯವೂ ಅಲ್ಲ.

೨

ನಮಗೆ ನಿಜವಾದ ಯಾವ ಆಶಾವಾದವನ್ನೂ ಮೂಡಿಸದಿರುವ ಈ ವರ್ತಮಾನವನ್ನು ಹೇಗೆ ಮತ್ತು ಏಕೆ ಸಹಿಸುತ್ತಿದ್ದೇವೆ ಎನ್ನುವ ಪ್ರಶ್ನೆಯನ್ನು ಕೇಳಿಕೊಳ್ಳುವ ಸಲುವಾಗಿ ಇಂದಿನ ವರ್ತಮಾನದ ವೈರುಧ್ಯಗಳ ಕಥನವನ್ನು ಸ್ವಲ್ಪ ದೀರ್ಘವಾಗಿಯೆ ಚರ್ಚಿಸಬೇಕಾಯಿತು. ಇದಕ್ಕೆ ಸರಳ ಮತ್ತು ಕಚ್ಚಾ (crude) ಉತ್ತರವನ್ನು ನೀಡುವುದಾದರೆ ಸಮಕಾಲೀನ ಪ್ರಕ್ರಿಯೆಗಳಲ್ಲಿ ಭಾಗಿಯಾಗಿರುವ ಎಲ್ಲರಿಗೂ ಸದ್ಯದಲ್ಲಿ ನಮ್ಮ ಬದುಕು ಸುಧಾರಿಸುತ್ತದೆ ಇಲ್ಲವೆ ಈಗಾಗಲೇ ಸುಧಾರಿಸುತ್ತಿದೆ ಎನ್ನುವ ಭಾವನೆಯನ್ನು ಮೂಡಿಸುತ್ತಿದೆ. ಈ ಮಾತು ಉತ್ತರಭಾರತದಿಂದ ನಮ್ಮೂರುಗಳಿಗೆ ಬರುವ ಬಡಗಿಗಳಿಂದ ಹಿಡಿದು ಗಾರ್ಮೆಂಟ ಕಂಪನಿಗಳಲ್ಲಿ ಕೆಲಸ ಮಾಡುವ ನಮ್ಮೂರ ಹೆಣ್ಣುಮಕ್ಕಳ ತನಕ ಸತ್ಯ. ಅವರ ಆಶಾವಾದ ಭ್ರಮೆಯೋ ಅಥವಾ ನಮ್ಮ ಗ್ರಹಿಕೆಗಳು-ನಿರೀಕ್ಷೆಗಳೇ ಅತಿಶಯದವುಗಳೋ ಅರ್ಥವಾಗುತ್ತಿಲ್ಲ.

ಇವೆಲ್ಲವುಗಳ ನಡುವೆ ನನಗೆ ಕೆಲವು ವರ್ಷಗಳಿಂದ ಕುತೂಹಲಕರವಾಗಿ ಕಾಣುತ್ತಿರುವುದು ಕರ್ನಾಟಕದ ಪ್ರಗತಿಪರರು (ಚಿಂತಕರು, ಸಂಘಟನೆಗಳು ಮತ್ತು ಚಳುವಳಿಗಳು) ಈ ವರ್ತಮಾನಕ್ಕೆ ಪ್ರತಿಕ್ರಿಯಿಸುತ್ತಿರುವ ರೀತಿ. ನಾನು ಪ್ರಾರಂಭದಲ್ಲಿ ಹೇಳಿದಂತೆ ಬದಲಾವಣೆ ಅಗತ್ಯತೆಯನ್ನು ಒತ್ತಿ ಹೇಳುವ ಪ್ರಗತಿಪರರಿಗೂ ಇಂದಿನ ಉತ್ಕಟ ಬದಲಾವಣೆಗಳ ಯುಗ ನೆಮ್ಮದಿ ತರುತ್ತಿಲ್ಲ. ತಮ್ಮ ನಿರೀಕ್ಷೆಯ, ಕನಸಿನ ಸಮಾಜ ಅಸ್ತಿತ್ವಕ್ಕೆ ಬರುತ್ತಿಲ್ಲವೆನ್ನುವ ನೆಲೆಯಿಂದಲೇ ಪ್ರಗತಿಪರರು ಎರಡು ರೀತಿಯಲ್ಲಿ ಪ್ರತಿಕ್ರಿಯಿಸುತ್ತಿದ್ದಾರೆ. ಹೆಚ್ಚು ಸೂಕ್ಷ್ಮಮತಿಗಳಾದವರು ವಿಷಾದದ ದನಿಯಲ್ಲಿ ಹಾಗೂ ಮಿಕ್ಕವರು ೬೦-೭೦ರ ದಶಕದ ಕನಸುಗಳು ಕಣ್ಮರೆಯಾದವೆಂದು ಸೂತಕದ ದನಿಯಲ್ಲಿ ಮಾತನಾಡುತ್ತಾರೆ. ಎರಡೂ ಗುಂಪುಗಳವರ ಮಾತುಗಳಲ್ಲಿ ಅಸಹಾಯಕತೆಯ ಛಾಯೆ ದಟ್ಟವಾಗಿದೆ. ಅವರ ವಿವರಣೆಗಳು ಸಹ ಮನವೊಪ್ಪುವ ರೀತಿಯವುಗಳಾಗಿಲ್ಲ.

ಪ್ರಸ್ತುತ ಸಂಕಲನದ ಲೇಖನಗಳು ನಾನಿಲ್ಲಿ ಗುರುತಿಸುತ್ತಿರುವ ಪ್ರವೃತ್ತಿಗೆ ಅಪವಾದವೆಂದು ಹೇಳಲು ನನಗೆ ಯಾವ ಹಿಂಜರಿಕೆಯೂ ಇಲ್ಲ. ಬಹುಶಃ ಇದಕ್ಕೆ

ಲೇಖಕರಾದ ಡಿ.ಎಸ್. ನಾಗಭೂಷಣ ಅವರ ಹಿನ್ನೆಲೆಯೇ ಕಾರಣವಿರಬೇಕು. ಗಣಿತದಲ್ಲಿ ಸ್ನಾತಕೋತ್ತರ ಪದವಿ ಪಡೆದು, ಮಾಧ್ಯಮ ಕ್ಷೇತ್ರದಲ್ಲಿ ವೃತ್ತಿಜೀವನ ಕಟ್ಟಿಕೊಂಡವರು ಅವರು. ಹಾಗಾಗಿಯೆ ನಮ್ಮ ವರ್ತಮಾನವನ್ನು ಅದರ ಎಲ್ಲ ಸಂಕೀರ್ಣತೆಗಳೊಡನೆ ಅವರು ಗ್ರಹಿಸಬಲ್ಲರು. ತಮ್ಮ ವಿಶ್ಲೇಷಣೆ ವಸ್ತುನಿಷ್ಠವಾಗಿರುವಂತೆ ಎಚ್ಚರ ವಹಿಸಬಲ್ಲರು. ತಮ್ಮನ್ನು ಸಮಾಜವಾದಿಯೆಂದು ನಿಸ್ಸಂಕೋಚವಾಗಿ ಗುರುತಿಸಿಕೊಳ್ಳುವಾಗಲೂ ನಾಗಭೂಷಣರ ಸೈದ್ಧಾಂತಿಕ ಪ್ರಜ್ಞೆ ಕಪ್ಪು ಕನ್ನಡಕವಾಗುತ್ತಿಲ್ಲ. ವಾಸ್ತವವನ್ನು ವಿರೂಪಗೊಳಿಸುತ್ತಿಲ್ಲ. ನಮ್ಮ ಕಾಲದ ಸ್ಥಳೀಯ, ರಾಷ್ಟ್ರೀಯ ಮತ್ತು ಜಾಗತಿಕ ಬೆಳವಣಿಗೆಗಳನ್ನು, ಅವುಗಳ ನಡುವಿನ ಸಂಬಂಧಗಳನ್ನು ಗುರುತಿಸಿಕೊಳ್ಳುತ್ತಲೇ ಅವರು ಅನಾವರಣಗೊಳಿಸುತ್ತಾರೆ. ಇತರ ಪ್ರಗತಿಪರ ಚಿಂತಕರು ಮತ್ತು ಚಳುವಳಿಗಾರರು ಹೊತ್ತಿರುವ ಮಣಭಾರದ ಗಂಟುಮೂಟೆಗಳು ಅವರ ಬೆನ್ನಮೇಲೆ ಕಾಣುತ್ತಿಲ್ಲ.

ಹಾಗಾಗಿಯೆ ಜಾಗತೀಕರಣವನ್ನು ಚರ್ಚಿಸುವಾಗ ತಮ್ಮ ವಿರೋಧದ ನೆಲೆಗಳನ್ನು ನಾಗಭೂಷಣ ಅವರು ಮತ್ತೆ ಮತ್ತೆ ಪರೀಕ್ಷಿಸಿಕೊಳ್ಳುತ್ತಾರೆ. ಬಂಗಾಳದ ಕಮ್ಯುನಿಸ್ಟರ ಕುರಿತಾಗಿ ಬರೆಯುವಾಗ ಇಲ್ಲವೆ ಮಾವೊವಾದಿಗಳ ಬಗ್ಗೆ ಸಹಾನುಭೂತಿ ತೋರಿಸುವ ಅರುಂಧತಿ ರಾಯ್ ಅವರ ರಾಜಕಾರಣವನ್ನು ವಿಶ್ಲೇಷಿಸುವಾಗ ಯಾವುದೆ ಮಮಕಾರವಿಲ್ಲದೆ ಎಡಪಂಥೀಯ ರಾಜಕಾರಣದ ಹಲವು ಮಾದರಿಗಳ ಮಿತಿಗಳನ್ನು ತೋರಿಸುತ್ತಾರೆ. ೨೦೦೮ರ ಆರ್ಥಿಕ ಕುಸಿತಕ್ಕೆ ಕಾರಣವಾದ ಅಡಮಾನ (mortgage) ಚಟುವಟಿಕೆಗಳನ್ನು ಜಾಗತಿಕ ಹಣಕಾಸು ಸಂಸ್ಥೆಗಳು ಹೇಗೆ ನಡೆಸಿದವು ಎನ್ನುವುದರ ಅನಾವರಣವನ್ನು ಮಾಡುತ್ತಾರೆ. ನಮ್ಮ ಕಾಲದ ಬಹುಮುಖ್ಯ ಚರ್ಚೆಯ ವಿಚಾರಗಳಾದ ರಾಷ್ಟ್ರೀಯತೆ, ಸೆಕ್ಯುಲರಿಸಮ್ ಅಥವಾ ಧರ್ಮನಿರಪೇಕ್ಷತೆ, ಧರ್ಮ, ಮತಾಂತರ, ಅಭಿವೃದ್ಧಿಯ ರಾಜಕಾರಣ, ಭಯೋತ್ಪಾದನೆ, ಮೌಢ್ಯ ಇವೆಲ್ಲವುಗಳ ಕಡೆಗೆ ತಮ್ಮ ದೃಷ್ಟಿಯನ್ನು ಹರಿಸುತ್ತಾರೆ. ಇವುಗಳ ಜೊತೆಗೆ ನಮ್ಮ ನಾಡಿನ ಮುಖ್ಯ ಚಳುವಳಿಗಳಾದ ರೈತ ಮತ್ತು ದಲಿತ ಹೋರಾಟಗಳನ್ನು ತಮ್ಮ ಅನುಭವದ ಹಿನ್ನೆಲೆಯಲ್ಲಿ ವಿಶ್ಲೇಷಿಸುತ್ತಾರೆ. ಅವರ ಈ ವಿಷಯ ವ್ಯಾಪ್ತಿ ಮೂರನೆಯ ವಿಶ್ವದ ಅತ್ಯುತ್ತಮ ಸಾರ್ವಜನಿಕ ಬುದ್ಧಿಜೀವಿಗಳ (public intellectuals) ಶಕ್ತಿಯನ್ನು ಪ್ರತಿಫಲಿಸುವಂತಹುದು. ನಾಗಭೂಷಣರ ವಿಶ್ಲೇಷಣೆಯಲ್ಲಿ ನಮ್ಮ ನಡುವೆ ಸ್ಥಳೀಯವಾಗಿ ನಡೆಯುತ್ತಿರುವ ಬೆಳವಣಿಗೆಗಳನ್ನು ಜಾಗತಿಕ ಬೆಳವಣಿಗೆಗಳೊಡನೆ ಸಮರ್ಥವಾಗಿ ಜೋಡಿಸುವ ಮತ್ತು ಎರಡಕ್ಕೂ ಸೈದ್ಧಾಂತಿಕ ಚರ್ಚೆಯ ಚೌಕಟ್ಟನ್ನು ಒದಗಿಸುವ ಅಪರೂಪದ ಶಕ್ತಿಯಿದೆ. ಇದು ಇಂದು ಕನ್ನಡ ಪ್ರಗತಿಪರ ಪ್ರಪಂಚದಲ್ಲಿ ವಿರಳವಾಗಿ ಕಾಣಸಿಗುವ ಗುಣ ಎಂದು ಇಲ್ಲಿನ ಕೆಲವು ಪ್ರಬಂಧಗಳನ್ನು ಅವುಗಳು ಏಳೆಂಟು ವರ್ಷಗಳ ಹಿಂದೆ ಮೊದಲು ಪ್ರಕಟವಾದಾಗ ಓದಿದಾಗಲೇ ನನಗೆ ಅನ್ನಿಸಿದ್ದ ವಿಚಾರ. ಕೆಲವೊಮ್ಮೆ ಕಂಬಾರ ಅಥವಾ ದೇವನೂರ ರಂತಹವರು ಪ್ರತಿಮೆಗಳ ಮೂಲಕ ಒಳನೋಟವೊಂದನ್ನು ಕೊಡುವಲ್ಲಿ ಯಶಸ್ವಿಯಾಗ ಬಹುದು. ಆದರೆ ವಾಸ್ತವದ ವಿವರಗಳನ್ನು ವಸ್ತುನಿಷ್ಠವಾಗಿ ಜೋಡಿಸಿ, ವಿಶ್ಲೇಷಣೆಯನ್ನು

ಕಟ್ಟಿಕೊಡಬಲ್ಲ ಶಕ್ತಿ ಇಂದು ಅಪರೂಪವಾಗುತ್ತಿದೆ. ಇಲ್ಲಿ ಸಂಕಲಿತವಾಗಿರುವ ನಾಗಭೂಷಣ ಅವರ ಬರಹಗಳು ಆ ಗುಣವನ್ನು ಹೊಂದಿವೆ. ಆ ಕಾರಣದಿಂದಲೆ ವೈರುಧ್ಯಗಳಿಂದ ಕೂಡಿರುವ ಸಮಕಾಲೀನ ಸಂಕೀರ್ಣ ವಾಸ್ತವ ಇಲ್ಲಿ ನಮಗೆ ಗೋಚರವಾಗುತ್ತದೆ. ಹಾಗಾಗಿಯೆ ಈ ಮುನ್ನುಡಿಯ ಮೊದಲ ಭಾಗದಲ್ಲಿ ಇಲ್ಲಿನ ಲೇಖನಗಳಿಗೆ ಒಂದು ಚೌಕಟ್ಟಿನಂತೆಯೂ, ನನ್ನ ಪ್ರತಿಕ್ರಿಯೆಯಂತೆಯೂ ನಮ್ಮ ವರ್ತಮಾನದ ಬಗೆಗಿನ ಚರ್ಚೆಯನ್ನು ಮಾಡಿದೆ.

ಇಲ್ಲಿನ ಲೇಖನಗಳ ವಿವರವಾದ ಚರ್ಚೆಯನ್ನು ಮಾಡುವ ಸಾಹಸವನ್ನು ನಾನು ಮಾಡುವುದಿಲ್ಲ. ಬದಲಿಗೆ ನಾನು ಮೂರು ಅಂಶಗಳನ್ನು ಸಂಕ್ಷಿಪ್ತವಾಗಿ ಪ್ರಸ್ತಾಪಿಸಬಯಸುತ್ತೇನೆ. ಈ ಅಂಶಗಳು ನನಗೆ ಇಲ್ಲಿ ವಿಶೇಷವಾಗಿ ಪ್ರಸ್ತಾಪಿಸಬೇಕು ಎಂದು ಅನ್ನಿಸಿದ ಕೆಲವು ಲೇಖನಗಳಿಗೆ ಸಂಬಂಧಿಸಿದವು. ಬೌದ್ಧಿಕತೆ, ರಾಜಕಾರಣ ಮತ್ತು ದಾರ್ಶನಿಕತೆಗೆ ಸಂಬಂಧಿಸಿದ ಈ ಮೂರು ಅಂಶಗಳು ಕನ್ನಡದ ಓದುಗರಿಗೂ ತುಂಬ ಪ್ರಸ್ತುತವಾದ ವಿಚಾರಗಳನ್ನು ಎತ್ತುತ್ತಿವೆ ಎಂದು ಭಾವಿಸಿದ್ದೇನೆ.

ಮೊದಲಿಗೆ, ಎಸ್.ಎನ್. ಬಾಲಗಂಗಾಧರ ಅವರ ಮೇಲಿನ 'ಜಾತಿ ವ್ಯವಸ್ಥೆ ಎಲ್ಲಿದೆ? ಇಲ್ಲಿದೆ, ಇಲ್ಲಿದೆ!' ಎಂಬ ಲೇಖನದ ಕಡೆಗೆ ಗಮನ ಹರಿಸೋಣ. ಘೆಂಟ್ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿರುವ ಬಾಲಗಂಗಾಧರ ಅವರು ಕಳೆದ ೧೫ ವರ್ಷಗಳಿಂದ ಕನ್ನಡ ಬೌದ್ಧಿಕ ಪ್ರಪಂಚದಲ್ಲಿ ತಾವು ಎಡ್ವರ್ಡ್ ಸೈದ್‌ಗಿಂತಲೂ ಮಿಗಿಲಾದ ಚಿಂತಕರು ಎನ್ನುವ ಠೀವಿಯಿಂದ ಓಡಾಡುತ್ತಿದ್ದಾರೆ. ಭಾರತೀಯ ಐತಿಹಾಸಿಕ ಅನುಭವಗಳನ್ನು ವಿಶ್ಲೇಷಿಸಲು ಯೂರೋಪಿನ ಬೌದ್ಧಿಕ ಚೌಕಟ್ಟುಗಳನ್ನು ತಿರಸ್ಕರಿಸಿ, ನಮ್ಮದೆ ಆದ ಚಿಂತನಾ ಕ್ರಮಗಳನ್ನು ರೂಢಿಸಿಕೊಳ್ಳಬೇಕೆಂದು ಹೇಳುತ್ತಿರುವ ನೂರಾರು ಅಕಾಡೆಮಿಕ್ ವಲಯದ ವ್ಯಕ್ತಿಗಳಲ್ಲಿ ಅವರೂ ಒಬ್ಬರು. ಆದರೆ ಈ ಬಗೆಯ ಪರ್ಯಾಯ ಚಿಂತನಾ ಕ್ರಮಗಳು ಯಾವುವು, ಅವುಗಳ ಸ್ವರೂಪ–ಲಕ್ಷಣಗಳೇನು ಎಂದು ಹದಿನೈದು ವರ್ಷಗಳ ಹಿಂದೆಯೇ ಕೇಳಿದ ನಮ್ಮಂತಹವರಿಗೆ ಇನ್ನೂ ಉತ್ತರ ದೊರಕಿಲ್ಲ. 'ಪ್ರಜಾವಾಣಿ'ಯಲ್ಲಿ ನಡೆದ ವಚನ ವಿಶ್ಲೇಷಣೆಯ ಚರ್ಚೆಯನ್ನೆ ಆಧಾರವಾಗಿ ನೋಡುವುದಾದರೆ ಬಾಲಗಂಗಾಧರ ಮತ್ತು ಅವರ ಶಿಷ್ಯಕೋಟಿ ಭಾರತೀಯ ಇತಿಹಾಸದ ವಿಶ್ಲೇಷಣೆಯನ್ನು ಆಧ್ಯಾತ್ಮಿಕ (metaphysical) ನೆಲೆಯಲ್ಲಿ ಮಾತ್ರ ನಡೆಸಲು ಇಚ್ಛಿಸುತ್ತಾರೆ. ಸಾಮಾಜಿಕ ಅಥವಾ social ಎನ್ನುವುದು ಅವರಿಗೆ ಕಾಣುವುದೆ ಇಲ್ಲ. ಕೌತುಕದ ಸಂಗತಿಯೆಂದರೆ ಭಾರತವನ್ನು ಆಧ್ಯಾತ್ಮಿಕ ನೆಲೆಯಿಂದ ವಿಶ್ಲೇಷಿಸಬಯಸುವವರು ಬಾಲಗಂಗಾಧರ ಅವರು ತಿರಸ್ಕರಿಸುವ ಓರಿಯಂಟಲಿಸ್ಟರು. ಈ ರೀತಿಯ ವಿರೋಧಾಭಾಸಗಳು ಅವರ ಮೊದಲ ಪುಸ್ತಕವಾದ Heathen in His Blindness ಎಂಬ ಕೃತಿಯನ್ನು ಓದಿದವರಿಗೆ ಸ್ಪಷ್ಟವಾಗುತ್ತದೆ.

ಅದಿರಲಿ. ಬೌದ್ಧಿಕ ವಂಚನೆಯ ಜೊತೆಗೆ ಬಾಲಗಂಗಾಧರ ಅವರ ಅಸಹನೆ ಮತ್ತು ಗೂಂಡಾ ಪ್ರವೃತ್ತಿಯನ್ನು ನಾಗಭೂಷಣ ಅವರು ನಾನು ಮೇಲೆ ಉಲ್ಲೇಖಿಸಿರುವ

ಪ್ರಬಂಧದಲ್ಲಿ ಸ್ಪಷ್ಟವಾಗಿ ದಾಖಲಿಸುತ್ತಾರೆ. ಬಾಲಗಂಗಾಧರ ಅವರ ಬರವಣಿಗೆಗಳ ಸೂಕ್ತ ಚರ್ಚೆ ಇನ್ನೂ ಕನ್ನಡ ಬೌದ್ಧಿಕ ವಲಯಗಳಲ್ಲಿ ಆಗಿಲ್ಲ. ಮುಂದೊಂದು ದಿನ ಆ ಚರ್ಚೆ ನಡೆದಾಗ ಬಾಲಗಂಗಾಧರ ಅವರ ವೈಚಾರಿಕ ಅಸಹನೆಯ ಜೊತೆಗೆ ವಿಶ್ಲೇಷಣೆಯ ಟೊಳ್ಳುತನವೂ ಹೊರಬರುತ್ತವೆ ಎನ್ನುವ ವಿಶ್ವಾಸ ನನ್ನದು.

ಎರಡನೆಯದಾಗಿ, ಅಹಿಂದದ ಅಧಿಕಾರ ರಾಜಕಾರಣ ಮತ್ತು ಸಿದ್ಧರಾಮಯ್ಯನವರ ಕುರಿತಾದ ಲೇಖನಗಳು ನಮ್ಮ ಕಾಲದ ದುರಂತ ಕಥನವೊಂದರ ಚಿತ್ರಣವಾಗಿದೆ. ಕಳೆದ ಅರ್ಧ ಶತಮಾನದ ಹಿಂದುಳಿದ ವರ್ಗಗಳ ರಾಜಕೀಯ ಹೋರಾಟಗಳು ಹೊಸ ಸಾಮಾಜಿಕ ಪರ್ಯಾಯಗಳನ್ನು ಸೃಷ್ಟಿಸದೆ ಹಳೆಯ ವ್ಯವಸ್ಥೆಯೊಳಗೆಯೇ ರಾಜಕೀಯ ಅಧಿಕಾರ ಗಳಿಸಲು ಸೀಮಿತವಾಗುತ್ತಿವೆ. ಸಾಮಾಜಿಕ ನ್ಯಾಯದ ಹೆಸರಿನಲ್ಲಿ ಹಿಂದುಳಿದ ವರ್ಗಗಳು ರಾಜಕಾರಣ ಮತ್ತೆ ಜಾತಿ ರಾಜಕಾರಣಕ್ಕೆ ಸೀಮಿತವಾಗುತ್ತಿದೆಯೆ ಹೊರತು ಜಾತಿ ವಿನಾಶದತ್ತ ಸಾಗುತ್ತಿಲ್ಲ. ಇಂದು ಪ್ರತಿ ಜಾತಿಗೂ ಅದರ ಜನಸಂಖ್ಯೆಗೆ ಅನುಗುಣವಾಗಿ ಎಲ್ಲವನ್ನೂ ಹಂಚಿಬಿಡೋಣ ಎನ್ನುವಲ್ಲಿಗೆ ಪ್ರಗತಿಪರರೂ ಸೇರಿದಂತೆ ಎಲ್ಲರೂ ಬಂದು ನಿಲ್ಲುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಸಿದ್ಧರಾಮಯ್ಯನವರ ರಾಜಕಾರಣದ ಸಾಧ್ಯತೆಗಳ ಮಿತಿಗಳನ್ನು, ಇಂದು ಅವರು ನಡೆದುಕೊಳ್ಳುತ್ತಿರುವ ರೀತಿಯನ್ನು ೨೦೦೬ರಲ್ಲಿಯೇ, ಹತ್ತು ವರ್ಷಗಳ ಹಿಂದೆಯೆ, ನಾಗಭೂಷಣ ಅವರು ನಿರೀಕ್ಷಿಸುತ್ತಾರೆ. ಆ ಕಾರಣದಿಂದಲೇ ಅಹಿಂದದ ಕುರಿತಾದ ಎರಡೂ ಲೇಖನಗಳು ತುಂಬ prescient ಆದವು. ಕಳೆದ ಎರಡು ದಶಕಗಳಲ್ಲಿ ಕರ್ನಾಟಕದ ರಾಜಕಾರಣದಲ್ಲಿ ಹೊಸತನದ, ಸೈದ್ಧಾಂತಿಕ ಬದ್ಧತೆಯ ರಾಜಕಾರಣದ ನಿರೀಕ್ಷೆಯನ್ನು ನಾವು ಇಟ್ಟುಕೊಂಡಿದ್ದರೆ ಅದು ಬಹುಶಃ ಸಿದ್ಧರಾಮಯ್ಯನವರಿಂದ ಮಾತ್ರ. ಅವರು ಇಂದು ಆ ಹೊರೆಯನ್ನು ತಾವು ಎಂದೂ ಹೊರಲು ಸಿದ್ಧವಾಗಿರಲಿಲ್ಲ ಎಂದು ಹೇಳಬಹುದು. ಆದರೆ ಅವರ ಸ್ನೇಹಿತರು, ಹಿತೈಷಿಗಳು ಆ ನಿರೀಕ್ಷೆ ಇಟ್ಟುಕೊಂಡಿದ್ದು ನಿಜವೆ.

ಇಂತಹ ನಿರಾಸೆಗಳ ಹಿನ್ನೆಲೆಯಲ್ಲಿಯೆ ನಾಗಭೂಷಣ ಅವರ ಚಿಂತನೆ ಮತ್ತು ಸಂವೇದನೆಗಳ ಹಿಂದಿನ ಬಹುಮುಖ್ಯ ಪ್ರೇರಣೆಯನ್ನು ಪ್ರಸ್ತಾಪಿಸಬೇಕು. ಅದು ನನ್ನ ಮೂರನೆಯ ಮತ್ತು ಬಹುಮುಖ್ಯವಾದ ಅಂಶ. ಅದೇನೆಂದರೆ ಸಮಾಜವಾದಿ ನಾಗಭೂಷಣ ಅವರ ಚಿಂತನೆಯಲ್ಲಿ ಮತ್ತು ಚಿಂತನಕ್ರಮದಲ್ಲಿ ಗಾಂಧಿ ಪಡೆದಿರುವ ಸ್ಥಾನ. ಸಾಮಾನ್ಯವಾಗಿ ಎಡಪಂಥೀಯರು ಗಾಂಧೀಜಿಯವರನ್ನು ಸಂಪ್ರದಾಯವಾದಿ ಬೂರ್ಜ್ವಾ ಎಂದೆ ಪರಿಗಣಿಸುವುದು. ಇದಕ್ಕೆ ಅಪವಾದವೆಂದರೆ ಲೋಹಿಯಾರಿಂದ ಬೌದ್ಧಿಕ ಸ್ಫೂರ್ತಿ ಪಡೆದ ಭಾರತೀಯ ಸಮಾಜವಾದಿಗಳು ಮಾತ್ರ. ಈ ಗುಂಪು ಗಾಂಧಿ ಚಿಂತನೆಯನ್ನು ಗಂಭೀರವಾಗಿ ಪರಿಗಣಿಸುವುದು ಆಶ್ಚರ್ಯದ ವಿಷಯವಲ್ಲದಿದ್ದರೂ, ಕನ್ನಡದ ಸಂದರ್ಭದಲ್ಲಿ ಹಲವು ಖ್ಯಾತನಾಮರೂ ಸೇರಿದಂತೆ ಬಹುತೇಕ ಎಲ್ಲರೂ ದಕ್ಕಿಸಿಕೊಂಡಿರುವುದು ಸಾಮಾನ್ಯ ತಿಳುವಳಿಕೆಯ ಗಾಂಧಿಯನ್ನು ಮಾತ್ರ. ನಾಗಭೂಷಣ ಅವರು ನಿರ್ದಿಷ್ಟವಾಗಿ 'ಹಿಂದ್‌ಸ್ವರಾಜ್' ಕೃತಿಯ ರಚನಾಕಾರ

ಗಾಂಧಿಯಿಂದ ನೈತಿಕ ಮತ್ತು ಬೌದ್ಧಿಕ ಸ್ಫೂರ್ತಿ ಪಡೆದಿದ್ದಾರೆ ಹಾಗೂ ಈ ಸಂಕಲನದ ಲೇಖನಗಳ ಮೇಲಿನ ಬಹುಮುಖ್ಯ ಪ್ರಭಾವ ಗಾಂಧೀಜಿಯವರಿಂದ ಬಂದಿದೆ ಎಂದರೆ ತಪ್ಪಾಗಲಾರದು.

'ಹಿಂದ್ ಸ್ವರಾಜ್' ಕೃತಿಯು ನನ್ನ ಸಂವೇದನೆಯನ್ನು ರೂಪಿಸಿದ ಬಹುಮುಖ್ಯ ಕೃತಿಗಳಲ್ಲಿ ಒಂದು. ಹಾಗಾಗಿ ನಾಗಭೂಷಣ ಅವರ ಗಾಂಧಿ ಕುರಿತಾದ ಲೇಖನಗಳನ್ನು ಹೆಚ್ಚಿನ ಕುತೂಹಲದಿಂದ ಓದಿದೆ. ಗಾಂಧಿ ಚಿಂತನೆಯ ಕೇಂದ್ರದಲ್ಲಿರುವುದು ಆಧುನಿಕ ನಾಗರಿಕತೆಯ ವಿಮರ್ಶೆ, ಅದರ ತಿರಸ್ಕಾರ ಎನ್ನುವುದನ್ನು ಅವರು ಸರಿಯಾಗಿಯೇ ಗುರುತಿಸುತ್ತಾರೆ. ಅವರ ಅಭಿಪ್ರಾಯಕ್ಕೆ ನನ್ನ ಸಹಮತವಿದೆ ಎನ್ನುವುದಕ್ಕಿಂತಲೂ ಮುಖ್ಯವಾದ ಇನ್ನೊಂದು ಅಂಶವನ್ನು ನಾನಿಲ್ಲಿ ಹೇಳಬೇಕು. ಗಾಂಧೀಜಿಯವರಿಂದ ನಾಗಭೂಷಣ ಅವರು ಪಡೆಯುವ ಆಧುನಿಕ ನಾಗರಿಕತೆಯ ಕುರಿತಾದ ಬೌದ್ಧಿಕ ಪ್ರೇರಣೆ ಅವರ ವಿಶ್ಲೇಷಣೆಯೊಳಗೂ ಇಳಿಯುತ್ತದೆ. ಇದಕ್ಕೆ ನಿದರ್ಶನಗಳಾಗಿ ಇಂದಿನ ಜಾಗತೀಕರಣವನ್ನು ಆಧುನಿಕ ನಾಗರಿಕತೆಯ ತಾರ್ಕಿಕ ಅಂತ್ಯ ಎಂದು ನಾಗಭೂಷಣ ಅವರು ಹೇಳುವುದನ್ನು ಅಥವಾ ಸಿದ್ಧರಾಮಯ್ಯನವರ ಮಿತಿಗಳನ್ನು ಗುರುತಿಸುತ್ತ ಇವುಗಳು ಹೇಗೆ ರಾಜಕೀಯದ ಅನಾಧ್ಯಾತ್ಮೀಕರಣದ ಫಲ ವಾಗಿದೆ ಎಂದು ತೋರಿಸುವುದನ್ನೇ ಗಮನಿಸಿ. ಇವು typical ಆದ ಸಮಾಜವಾದಿ ವಿಶ್ಲೇಷಣೆಗಳಲ್ಲ. ಜಾಗತಿಕ ಸಮಾಜವಾದ ಸಾಮಾನ್ಯವಾಗಿ ಆಧುನಿಕತೆಯ ಚೌಕಟ್ಟಿನೊಳಗೆಯೇ ತನ್ನ ರಾಜಕೀಯ ಮತ್ತು ನೈತಿಕ ಆದರ್ಶಗಳನ್ನು ಕಟ್ಟಿಕೊಳ್ಳುತ್ತ ಬಂದಿದೆ. ಆಧುನಿಕ ನಾಗರಿಕತೆಯನ್ನು ತಿರಸ್ಕರಿಸುವ ಗಾಂಧೀಜಿಯವರನ್ನು ನಾಗಭೂಷಣ ಸ್ವೀಕರಿಸಿ, ತಮ್ಮ ವಿಶ್ಲೇಷಣಾ ಕ್ರಮದೊಳಗೆ ಬೌದ್ಧಿಕ ಮತ್ತು ನೈತಿಕ ಕೇಂದ್ರವಾಗಿ ಮಾಡಿಕೊಳ್ಳುತ್ತಾರೆ. ಇದು ವಿಶಿಷ್ಟವಾದ ಮತ್ತು ಫಲಪ್ರದವಾದ ನಡೆ ಎನ್ನುವುದನ್ನು ಇಲ್ಲಿ ದಾಖಲಿಸಲೇಬೇಕು. ಇಂದಿನ ಉದಾರವಾದಿ ಪ್ರಜಾಪ್ರಭುತ್ವ ಮತ್ತು ಮಾರುಕಟ್ಟೆ ವ್ಯವಸ್ಥೆಯ ಸಂದರ್ಭದಲ್ಲಿ 'ಹಿಂದ್‌ಸ್ವರಾಜ್' ಕೃತಿಯ ಗಾಂಧೀಜಿಯವರ ಪ್ರಸ್ತುತತೆಯ ಬಗ್ಗೆ ಪ್ರಶ್ನೆಗಳನ್ನು ಎತ್ತುವವರ ಸಂಖ್ಯೆ ಕಡಿಮೆಯೇನಿಲ್ಲ. ಅದಕ್ಕೆ ಉತ್ತರಗಳು ನಾಗಭೂಷಣರ ಲೇಖನಗಳಲ್ಲಿ ಇದೆ ಎಂದು ನನ್ನ ನಂಬಿಕೆ.

ಡಿ.ಎಸ್.ನಾಗಭೂಷಣ ಅವರ ಬರಹಗಳು ಮತ್ತೊಮ್ಮೆ ನಮ್ಮ ವಾಸ್ತವದ ವಸ್ತುನಿಷ್ಠ ಚರ್ಚೆಗೆ ದಾರಿ ಮಾಡಿಕೊಡಲಿ ಎನ್ನುವುದು ನನ್ನ ಹಾರೈಕೆ. ಅವರ ಲೇಖನಗಳು ಮತ್ತು ಕೃತಿಗಳನ್ನು ಹಲವು ದಶಕಗಳಿಂದ ಓದುತ್ತ ಬಂದಿದ್ದ ನನ್ನಂತಹವನಿಗೆ ಇಲ್ಲಿ ಸಂಕಲಿತವಾಗಿರುವ ಪ್ರಬಂಧಗಳ ಬಗ್ಗೆ ಬರೆಯುವಂತೆ ಕೇಳಿ ನನಗೆ ದೊಡ್ಡ ಗೌರವ ತೋರಿಸಿದ್ದಾರೆ. ಇಲ್ಲಿನ ಕೆಲವು ಲೇಖನಗಳ ಬಗ್ಗೆ ಮತ್ತಷ್ಟು ವಿಸ್ತೃತವಾಗಿ ಬರೆಯಬೇಕೆಂದು ಅನ್ನಿಸುತ್ತದೆ. ಅದಕ್ಕೆ ಮತ್ತೊಂದು ಅವಕಾಶವನ್ನು ಸೃಷ್ಟಿಸಿಕೊಳ್ಳುತ್ತೇನೆ.

ಮೈಸೂರು
೧೪-೭-೨೦೧೬

ಪೃಥ್ವಿ ದತ್ತ ಚಂದ್ರ ಶೋಭಿ

ಲೇಖಕರ ಮಾತು

ಕಳೆದ ಹತ್ತು ವರ್ಷಗಳಲ್ಲಿ ನಾನು ಸಾಮಾಜಿಕ-ರಾಜಕೀಯ-ಸಾಂಸ್ಕೃತಿಕ-ಸಾಹಿತ್ಯಕ ಎಂಬ ವಿಂಗಡಣೆಯಿಲ್ಲದೆ ನೂರಕ್ಕೂ ಹೆಚ್ಚು ಬರಹಗಳನ್ನು-ಇವುಗಳಲ್ಲಿ ಬಹುಪಾಲು ಒಂದು ವಾರ ಪತ್ರಿಕೆಗಾಗಿ ಅಂಕಣ ಬರಹಗಳಾಗಿ-ಬರೆದಿದ್ದೇನೆ. ಹೀಗೆ ವಿಂಗಡಣೆ ಮಾಡಿ ಬರೆಯುವುದೆಂದರೆ, ನನ್ನ ವ್ಯಕಿತ್ವವನ್ನೇ ವಿಂಗಡಣೆ ಅಥವಾ ವಿಭಜನೆ ಮಾಡಿದಂತೆ ಅಥವಾ ಮಾಡಿಕೊಂಡಂತೆ ಎಂಬುದು ನನ್ನ ಅನ್ನಿಸಿಕೆ. ಹಾಗೇ, ಹೀಗೆ ವಿಭಜನೆ ಮಾಡುವುದು ಈ ಪ್ರತಿಯೊಂದು ಕ್ಷೇತ್ರಕ್ಕೂ ಮಾಡುವ ಅನ್ಯಾಯವೆಂದೇ ನನ್ನ ಅಭಿಮತ. ಇದರಿಂದಾಗಿ ಕಳೆದ ಕೆಲವು ವರ್ಷಗಳಲ್ಲಿ ನನ್ನ ವ್ಯಕ್ತಿತ್ವದ ಗುರುತೇ ಕಲಸುಮೇಲೋಗರವಾಗಿದೆ ಎಂದು ನನ್ನ ಕೆಲವು ಗೆಳೆಯರು ಗೊಣಗುವುದುಂಟು. ಅವರ ಪ್ರಕಾರ, ಸಮಾಜವಾದಿ ಸಂಕಥನಗಳು ಎಂಬ ಉಪಶೀರ್ಷಿಕೆಯೊಂದಿಗೆ ಪ್ರಕಟವಾಗಿರುವ ನನ್ನ ಈ ಹಿಂದಿನ ಐದಾರು ಲೇಖನಗಳ ಸಂಗ್ರಹಗಳು ನನ್ನ ಎಲ್ಲ ರೀತಿಯ-ಸಾಹಿತ್ಯಿಕ-ಸಾಂಸ್ಕೃತಿಕ-ಸಾಮಾಜಿಕ-ರಾಜಕೀಯ-ವಿಶ್ಲೇಷಣೆಗಳ ಲೇಖನಗಳನ್ನೊಳಗೊಂಡು, ಸಾರ್ವಜನಿಕವಾಗಿ ನನ್ನ ಅಧ್ಯಯನದ ಶಿಸ್ತನ್ನು ನಿರ್ದಿಷ್ಟವಾಗಿ ಗುರುತಿಸುವದು ಕಷ್ಟವಾಗಿದ್ದು, ನನ್ನ ಅಧ್ಯಯನದ ಸಾರ್ವತ್ರಿಕ ಶಿಸ್ತು; ಹಾಗಾಗಿ ಉಪಯೋಗಕ್ಕೆ ಧಕ್ಕೆಯಾಗಿದೆ! ಜೊತೆಗೆ, ಈ ಮೊದಲು ಸಾಹಿತ್ಯ ವಿಮರ್ಶಕ ಎಂದು ಗುರುತಿಸಲ್ಪಡುತ್ತಿದ್ದ ನಾನು ಈಗ ಸಮಾಜವಾದಿ ಚಿಂತಕ ಎಂದು ಗುರುತಿಸಲ್ಪಡುತ್ತಿರುವುದು ಒಂದು ರೀತಿಯ ಹಿಂಬಡ್ತಿಯೇ ಎಂಬುದು ಅವರ ಆತಂಕ. ಏಕೆಂದರೆ ಸಮಾಜವಾದಿ ಚಿಂತನೆ ಸೃಜನಶೀಲ ಎನ್ನಿಸಿಕೊಳ್ಳುವುದಿಲ್ಲ ಎಂಬುದು ಅವರ ಅಳಲು!

ಆದರೆ ಹೊರಗಿನಿಂದ ನಾನು ಹೇಗೆ ಕಾಣಿಸುತ್ತೇನೆ ಎಂಬುದಕ್ಕಿಂತ ನನ್ನ ಆಲೋಚನೆಯ ಸಮಗ್ರತೆಗೆ ಊನವಾಗದಂತೆ ನೋಡಿಕೊಳ್ಳುವ ಸಲುವಾಗಿ ಒಳಗಿನಿಂದ ನನಗೆ ನಾನು ಹೇಗೆ ಕಾಣಿಸಿಕೊಳ್ಳಬೇಕೆಂಬುದು ಹೆಚ್ಚು ಮುಖ್ಯವೆಂದು ಭಾವಿಸಿರುವುದರಿಂದ ನಾನು ಈ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಂಡಿಲ್ಲ. ಆದರೂ ನನ್ನ ಬರಹಗಳನ್ನು ವಿಂಗಡಿಸಿಕೊಂಡು ಅಧ್ಯಯನ ಮಾಡಬಯಸುವವರ ಅನುಕೂಲಕ್ಕಾಗಿ ಎರಡು-ಮೂರು ವರ್ಷಗಳ ಹಿಂದೆ ನನ್ನ ಸಾಹಿತ್ಯ ವಿಮರ್ಶೆಯ ಮುಖ್ಯ ಬರಹಗಳನ್ನು 'ರೂಪರೂಪಗಳನು ದಾಟಿ...' ಎಂಬ ಶೀರ್ಷಿಕೆಯಡಿ ಸಂಗ್ರಹಿಸಿ ಪ್ರಕಟಿಸಿದೆ. ಈಗ ಸ್ಥೂಲವಾಗಿಯಾದರೂ ಸಾಹಿತ್ಯೇತರವೆಂದು ಕರೆಯಬಹುದಾದ ನನ್ನ ಮುಖ್ಯ ಬರಹಗಳನ್ನು 'ಭೂಮಿಯನ್ನು ಹಂಚಿಕೊಳ್ಳುವ ಬಗೆಗಳು...' ಎಂಬ ಶೀರ್ಷಿಕೆಯಡಿ

ಪ್ರಕಟಿಸುತ್ತಿರುವೆ. ಆದರೂ ಈ ಎರಡೂ ಸಂಗ್ರಹಗಳಲ್ಲಿನ ಬಹುತೇಕ ಲೇಖನಗಳು ಅಲ್ಲಲ್ಲಿಯಾದರೂ ಒಂದರೊಳಗೊಂದು ಹಾಸುಹೊಕ್ಕಾಗಿಯೇ ಬರೆಯಲ್ಪಟ್ಟಿರುವುದನ್ನು ಈ ಎರಡೂ ಸಂಗ್ರಹಗಳ ಸೂಕ್ಷ್ಮ ಓದುಗರು ಗಮನಿಸಬಹುದು. ಬದುಕಿನಲ್ಲಿ ಯಾವುದೂ ಒಂದರಿಂದ ಒಂದು ಪ್ರತ್ಯೇಕಿತವಲ್ಲ ಎಂಬ ನನ್ನ ಇತ್ತೀಚಿನ ಆವೃತ (ಬೌದ್ಧ) ದೃಷ್ಟಿಕೋನವೇ ನನ್ನೆಲ್ಲ ಲೇಖನಗಳನ್ನು ಕಟ್ಟಿರುವುದೇ ಇದಕ್ಕೆ ಕಾರಣವಿರಬಹುದು

ಪ್ರಸ್ತುತ ಸಂಗ್ರಹದಲ್ಲಿ ನನ್ನ ಆಯ್ದ ನಲವತ್ತೈದು ಲೇಖನಗಳಿವೆ. ಇವನ್ನು ಆಧುನಿಕತೆ, ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯ ಕುರಿತ ಲೇಖನಗಳೆಂದು ಕರೆದಿದ್ದೇನೆ. ಇತ್ತೀಚಿನ ಸಾರ್ವಜನಿಕ ಚರ್ಚೆಗಳಲ್ಲಿ ಬಹುವಾಗಿ ಪ್ರಸ್ತಾಪಕ್ಕೆ ಬರುತ್ತಿರುವ ಈ ಸಂಗತಿಗಳನ್ನು ಕುರಿತಂತೆ ನಾನು ವಿವಿಧ ಸಂದರ್ಭಗಳಲ್ಲಿ ಮತ್ತು ವಿವಿಧ ಹಿನ್ನೆಲೆಗಳಲ್ಲಿ ನಡೆಸಿರುವ ಚಿಂತನೆ ಒಂದು ಒಟ್ಟಂದದಲ್ಲಿ ಇಂದಿನ ಈ ಸಾರ್ವಜನಿಕ ಚರ್ಚೆಗಳಿಗೆ ಆಕರ ಸಾಮಗ್ರಿಯಾಗಲಿ ಎಂಬ ಉಪಯುಕ್ತತೆಯ ದೃಷ್ಟಿಯೂ ಇಲ್ಲಿ ಕೆಲಸ ಮಾಡಿರಬಹುದು. ಜೊತೆಗೆ, ಸಹಜವಾಗಿಯೇ ಈ ಎಲ್ಲ ಚರ್ಚೆಗಳ ಹಿಂದಿರುವ ಜಾಗತೀಕರಣವನ್ನು ಕುರಿತ ದೊಡ್ಡ ಚರ್ಚೆಗೂ ನನ್ನ ಆಲೋಚನೆಗಳು ಈಡಾಗಲಿ ಎಂಬ ಆಶಯವೂ ನನ್ನದು. ಏಕೆಂದರೆ ಈ ನನ್ನ ಎಲ್ಲ ಲೇಖನಗಳ ಹಿಂದಿನ ಮೂಲಭಿತ್ತಿ ಜಾಗತೀಕರಣ ಕುರಿತ ಸಮಕಾಲೀನ ಚರ್ಚೆಯೇ ಆಗಿದ್ದು, ಈ ಜಾಗತೀಕರಣ ಪ್ರಕ್ರಿಯೆಯು ಆಧುನಿಕತೆ, ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯಗಳನ್ನು ಕುರಿತ ನಮ್ಮ ಪರಿಕಲ್ಪನೆಗಳ ಹೂರಣ ಮತ್ತು ಆಕಾರಗಳನ್ನು ಹೇಗೆ ಮತ್ತು ಏಕೆ ಬದಲಿಸುತ್ತಿವೆ ಎಂಬುದರ ವಿಶ್ಲೇಷಣೆಗಳೇ ಬಹುಪಾಲು ನನ್ನ ಈ ಲೇಖನಗಳ ವಸ್ತುವಾಗಿದೆ.

ಈ ಎಲ್ಲ ಲೇಖನಗಳೂ ಈ ಹಿಂದೆ 'ಸಮಾಜವಾದಿ ಸಂಕಥನಗಳು' ಎಂಬ ಉಪಶೀರ್ಷಿಕೆಯಡಿ ಪ್ರಕಟವಾಗಿದ್ದವು ಎಂಬ ಅಂಶವೂ ಈ ಲೇಖನಗಳಿಗೆ ಒಂದು ಪರಿಪ್ರೇಕ್ಷ್ಯೀಯ ಚೌಕಟ್ಟನ್ನು ಒದಗಿಸಬಹುದೆಂದು ನಾನು ಭಾವಿಸಿದ್ದೇನೆ. ಹಾಗಾಗಿಯೇ ಇಲ್ಲಿನ ಬಹುಪಾಲು ಲೇಖನಗಳು ಎಲ್ಲಿಗೆ ಹೋದರೂ ಕೊನೆಗೆ ಸಮಾಜವಾದಿ, ನಿರ್ದಿಷ್ಟವಾಗಿ ಲೋಹಿಯಾ ವಿಚಾರಗಳಿಗೆ ಹಿಂದಿರುಗಿ ತಮ್ಮ ಗಂತವ್ಯವನ್ನು ಕಂಡುಕೊಳ್ಳುತ್ತವೆ. ಆದರೆ ಇಲ್ಲಿ ಸಮಾಜವಾದ ಎಂಬುದು ಒಂದು ಕಾಲನಿರ್ದಿಷ್ಟತೆಯ ಜಡ ವಿದ್ಯಮಾನವಾಗಿರದೆ, ಒಂದು ಚಲನಶೀಲ ವಿಮರ್ಶೆಗೆ ಒಳಪಟ್ಟ ಸಮಾಜವಾದಿ ತಾತ್ವಿಕತೆಯ ಒಂದು ಸಮಕಾಲೀನ ಪುನರನ್ವೇಷಣೆಯೂ ಆಗಿರುವುದನ್ನೂ ಓದುಗರು ಗಮನಿಸಬಹುದು. ಕೆಲವರಿಗೆ ಹೀಗಾಗಿಯೇ ಇಲ್ಲಿನ ಲೇಖನಗಳು ಕಳೆದ ಹತ್ತು ವರ್ಷಗಳ ಅವಧಿಯ ವಿವಿಧ ಸಂದರ್ಭಗಳಲ್ಲಿ ಬರೆದವುಗಳಾದ್ದರಿಂದ, ಇವುಗಳಲ್ಲಿನ ಸಂದರ್ಭ ವಿವರಗಳು ಹಳತೆನ್ನಿಸಿ, ಮೇಲ್ನೋಟಕ್ಕೆ ಈ ಲೇಖನಗಳ ಸಮಕಾಲೀನತೆ ಪ್ರಶ್ನಾರ್ಹವೆನಿಸಬಹುದು. ಆದರೆ, ಆತ್ಯಂತಿಕ ಓದಿನಲ್ಲಿ ಇವು ಚರ್ಚಿಸುವ ತಾತ್ವಿಕತೆ, ಅವು ಎತ್ತುವ ಪ್ರಶ್ನೆಗಳು ಮತ್ತು ನೀಡಲೆತ್ನಿಸುವ ಉತ್ತರಗಳು ಈಗಲೂ ಕನ್ನಡ ಸಮುದಾಯದ ಒಂದು ಸಮಕಾಲೀನ ಚಿಂತನಾ ಲಹರಿಯ ಭಾಗವಾಗಿ

ಮುಂದುವರೆದಿರುವುದನ್ನು ಓದುಗರು ಗಮನಿಸುತ್ತಾರೆಂಬ ವಿಶ್ವಾಸ ನನಗಿದೆ. ಉದಾಹರಣೆಗೆ, ಇಲ್ಲಿನ ಲೇಖನಗಳಲ್ಲಿ ಪದೇ ಪದೇ ಕಾಣಿಸಿಕೊಳ್ಳುವ ವಿದೇಶಿ ಬಂಡವಾಳದ ಮೇಲೆ ಅವಲಂಬಿತವಾದ ನಮ್ಮ ಆರ್ಥಿಕತೆ, ರೈತರ ಆತ್ಮಹತ್ಯೆ, ಅಮೆರಿಕಾದೊಡನೆಯ ಪರಮಾಣು ಒಪ್ಪಂದ, ನಾವು ಅನುಸರಿಸಬೇಕಾದ ಅಭಿವೃದ್ಧಿ ಮಾದರಿ, ಕನ್ನಡ ಶಿಕ್ಷಣ ಮಾಧ್ಯಮದ ಪ್ರಶ್ನೆಗಳು ಇತ್ಯಾದಿ ಇಂದೂ ಜ್ವಲಂತ ಚರ್ಚೆಯ ವಿಷಯಗಳಾಗಿ ಮುಂದುವರೆದಿವೆ. ಅಲ್ಲದೆ ಈ ಎಲ್ಲ ಚರ್ಚೆಗಳ ಹಿಂದಿರುವುದು ನನ್ನ ಇತ್ತೀಚಿನ ಕುತೂಹಲ, ಆಸಕ್ತಿ ಮತ್ತು ಅಧ್ಯಯನಗಳ ವಿಷಯವಾಗಿರುವ ಆಧುನಿಕತೆ ಕುರಿತ ಜಿಜ್ಞಾಸೆ. ಈ ಜಿಜ್ಞಾಸೆ ಇಂದಿನ ಜಾಗತೀಕರಣ ಕುರಿತ ಚರ್ಚೆಗಳಲ್ಲಿ ಚೂಪಾದ ಏಣುಗಳನ್ನು ಗಳಿಸಿಕೊಂಡಿದ್ದು, ಅವು ಇಲ್ಲಿನ ಲೇಖನಗಳಲ್ಲಿ ಪ್ರತಿಬಿಂಬಿತವಾಗಿ ಮತ್ತಷ್ಟು ಚರ್ಚೆಗಳನ್ನು ಹುಟ್ಟುಹಾಕಬಲ್ಲವಾಗಿವೆ. ಈ ಅಂಶವೂ ಇಲ್ಲಿನ ಲೇಖನಗಳನ್ನು ಸಮಕಾಲೀನವಾಗಿಟ್ಟಿವೆ ಎಂದು ನಾನು ಭಾವಿಸಿದ್ದೇನೆ.

ಈ ಹಿನ್ನೆಲೆಯಲ್ಲೇ ಇಲ್ಲಿನ ಹೆಚ್ಚಿನ ಲೇಖನಗಳಲ್ಲಿ ಚರ್ಚಿತವಾಗಿರುವ ಆಧುನಿಕತೆಯ ಜನಕನಾದ ಪಶ್ಚಿಮದ ಆಧುನಿಕ ನಾಗರೀಕತೆಯ ತಲಸ್ಪರ್ಶಿ ವಿಮರ್ಶೆ ಮಾಡುವ ಗಾಂಧೀಜಿಯ 'ಹಿಂದ್ ಸ್ವರಾಜ್'ನ ಪ್ರಸ್ತಾಪ ಪದೇ ಪದೇ ಬರುವುದು. ಭಾರತದ ಸಮಾಜವಾದ ಈ ಕೃತಿಯ ನಿತ್ಯನೂತನೆಯನ್ನು ಗಮನಿಸದೆ ಗಾಂಧಿಯಾಚೆಗೆ ಬೆಳೆಯುವ ಆತುರ ಮತ್ತು ಘಾತುಕತನವನ್ನು ತೋರಿದ್ದೇ ಅದರ ವಿಚ್ಛಿದ್ರೀಕರಣಕರಣದ ಹಿಂದಿನ ಶೀಲ ಶಿಥಿಲತೆಗೆ ಕಾರಣವಾಗಿದ್ದು ಎಂದು ನಾನು ಭಾವಿಸಿದ್ದೇನೆ. ಹಾಗಾಗಿ ಸಮಾಜವಾದದ ಪುನರನ್ವೇಷಣೆ ತಾತ್ವಿಕವಾಗಿ ನಡೆಯಬೇಕಾದದ್ದು 'ಹಿಂದ್ ಸ್ವರಾಜ್'ನ ಸಮಕಾಲೀನ ವ್ಯಾಖ್ಯಾನಗಳ ಆಧಾರದ ಮೇಲೇ ಎಂದು ನಂಬಿರುವ ನನ್ನ ಇಲ್ಲಿನ ಬಹುತೇಕ ಲೇಖನಗಳಿಗೆ ಅದು ಒಂದು ದೃಷ್ಟಿಕೇಂದ್ರ, ಒಂದು ಒರೆಗಲ್ಲು ಅಥವಾ ಒಂದು ಪರಿಪ್ರೇಕ್ಷ್ಯವಾಗಿರುವುದು ಸಹಜವೇ ಆಗಿದೆ. ಇದು ಕೆಲವರಿಗೆ ಏಕತಾನತೆ ಎನಿಸದರೆ ನಾನು ಅಸಹಾಯಕ. ಯಾರಿಗೂ ಓದಿನ ಸುಖ ಒದಗಿಸಲೆಂದೇನೂ ನಾನು ಈ ಲೇಖನಗಳನ್ನು ಬರೆದಿಲ್ಲ ಎಂಬುದನ್ನೂ ಇಲ್ಲಿ ಸ್ಪಷ್ಟಪಡಿಸಬಯಸುತ್ತೇನೆ.

ಜೊತೆಗೆ ಇನ್ನೊಂದು ಅಂಶವನ್ನೂ/ಸತ್ಯವನ್ನೂ ಇಲ್ಲಿ ದಾಖಲಿಸಬೇಕು. ಇಲ್ಲಿನ ಲೇಖನಗಳಲ್ಲಿ ಕಾಣಬರುವ ಜಾಗತೀಕರಣ ಕುರಿತ ಆರ್ಥಿಕ ನೆಲೆಯಲ್ಲಿನ ಟೀಕೆ ಮುಖ್ಯವಾಗಿ, ೨೦೦೮ರ ಜಾಗತಿಕ ಆರ್ಥಿಕ ಹಿಂಜರಿತಕ್ಕೆ ಕಾರಣವಾದ ಅದರ ಆರ್ಥಿಕ ಮಾದರಿಯ ದೌರ್ಬಲ್ಯಗಳನ್ನು ಆಧರಿಸಿದ್ದು. ಆದರೆ ಭಾರತ ಈ ಹಿಂಜರಿತವನ್ನು ಧಿಕ್ಕರಿಸಿ ಒಂದು ಸ್ಥಿರ ಆರ್ಥಿಕತೆಯಾಗಿ ಮುಂದುವರೆದಿದೆಯಲ್ಲಾ ಎಂದು ಕೆಲವರು ಪ್ರಶ್ನಿಸಬಹುದು. ಆದರೆ ಇಂತಹವರಿಗೆ ನೆನಪಿಸಬೇಕಾದ ಒಂದು ಸತ್ಯವೆಂದರೆ, ನಮ್ಮ ಜಾಗತೀಕರಣದ ಪ್ರತಿಪಾದಕರು ಆಗಿನ ಎರಡಂಕಿ ಪ್ರಗತಿಯ ಅಮಲಿನಲ್ಲಿ ನಮ್ಮ ಬ್ಯಾಂಕುಗಳನ್ನು ಜಾಗತೀಕರಣಗೊಳಿಸಲು ಹೊರಟಿದ್ದಾಗ ನಮ್ಮ ಎಲ್ಲ ತಾತ್ವಿಕ ಹಿನ್ನೆಲೆಗಳ ಎಡಪಂಥೀಯರೂ ಒಟ್ಟಾಗಿ ಅದನ್ನು ಶತಾಯುಗತಾಯು ವಿರೋಧಿಸಿ

ತಡೆದಿದ್ದುದರಿಂದಲೇ ಭಾರತ ಇಂದು ಆರ್ಥಿಕವಾಗಿ ಸ್ಥಿರವಾಗಿ ಉಳಿದುಕೊಂಡಿದೆ ಎಂಬುದು. ಇಲ್ಲದಿದ್ದರೆ ಈ ದೇಶವೂ ಬಹುಪಾಲು ಐರೋಪ್ಯ ದೇಶಗಳಂತೆ ಆರ್ಥಿಕ ಸ್ಥಗಿತತೆಗೋ ಅಥವಾ ಚೀನಾದಂತೆ ತೀವ್ರ ಹಿಂಜರಿತಕ್ಕೋ ಅಥವಾ ಗ್ರೀಸ್‌ನಂತೆ ದಿವಾಳಿಯ ಅಂಚಿಗೋ ಸರಿಯುತ್ತಿತ್ತು. ಇದು ಅಮೆರಿಕಾದ, ಐರೋಪ್ಯ ದೇಶಗಳ ಆರ್ಥಿಕ ತಜ್ಞರಿಗೆ, ರಾಜಕೀಯ ಧುರೀಣರಿಗೆ ಅರ್ಥವಾಗಿದೆ. ಆದರೆ ಭಾರತದವರಿಗಲ್ಲ!

ಆದರೆ ಈ ಹಿಂದೆ ಪ್ರಬಲವಾಗಿದ್ದ ತನ್ನ ಎಡಪಂಥೀಯ ರಾಜಕಾರಣವನ್ನು ಇತ್ತೀಚಿನ ದಿನಗಳಲ್ಲಿ ಹಿನ್ನೆಲೆಗೆ ಸರಿಸಿಕೊಂಡಿದ್ದ ಬ್ರಿಟನ್ ಈಗ 'ಬ್ರೆಕ್ಸಿಟ್' ಮೂಲಕ ಜಾಗತಿಕ ಅರ್ಥವ್ಯವಸ್ಥೆಯಿಂದ ಒಂದು ಮಟ್ಟದಲ್ಲಿ ಬಿಡುಗಡೆ ಬಯಸಿರುವುದರ ಮತ್ತು ಅಮೆರಿಕಾದಂತಹ ದೇಶದ ಡೆಮೊಕ್ರಾಟಿಕ್ ಪಕ್ಷ ಇಂದು ಜನರ ಮಧ್ಯೆ ಗಣನೀಯ ಮಾನ್ಯತೆ ಗಳಿಸಿರುವ ಬೆರ್ನಿ ಸ್ಯಾಂಡರ್ಸ್ ಎಂಬ ಪೂರ್ಣಪ್ರಮಾಣದ ಎಡಪಂಥೀಯ ನಾಯಕನೊಬ್ಬನ್ನು ಸೃಷ್ಟಿಸಿರುವ ಒತ್ತಡಗಳದರೂ ಯಾವುವು ಎಂಬುದರ ಬಗ್ಗೆಯಾದರೂ ನಾವೀಗ ಯೋಚಿಸಬೇಕಾಗಿದೆ. ಏಕೆಂದರೆ, ಒಂದಕ್ಕೊಂದು ಸಂಬಂಧವಿರುವ ಮತ್ತು ಜಾಗತೀಕರಣದ ಪರಿಣಾಮಗಳೇ ಆಗಿರುವ ಹಿಂದುಳಿದ ದೇಶಗಳಲ್ಲಿನ ಪರಿಸರ ನಾಶ, ಜಾಗತಿಕ ವಲಸೆ, ಹೊಸ ಬಗೆಯ ಹಿಂಸಾಚಾರ, ಸಾಂಸ್ಕೃತಿಕ ಅಸ್ಮಿತೆಯ ಪ್ರಶ್ನೆ ಇತ್ಯಾದಿ ಸಂಗತಿಗಳು ಇಲ್ಲಿ ಕೆಲಸ ಮಾಡಿರುವಂತಿದೆ.

ಇನ್ನು 'ಭೂಮಿಯನ್ನು ಹಂಚಿಕೊಳ್ಳುವ ಬಗೆಗಳು...' ಎಂಬ ಈ ಸಂಗ್ರಹದ ಶೀರ್ಷಿಕೆಯು ಈ ಸಂಗ್ರಹದಲ್ಲಿರುವ ಒಂದು ಲೇಖನದ ಶೀರ್ಷಿಕೆಯಾದರೂ, ಅದು ಆ ಲೇಖನದ ಚೌಕಟ್ಟನ್ನೂ ಮೀರಿ ಇಲ್ಲಿರುವ ಬಹುಪಾಲು ಲೇಖನಗಳಿಗೂ ಒಂದು ವಿಶಾಲವಾದ ಚೌಕಟ್ಟನ್ನು ಒದಗಿಸುತ್ತದೆ ಎಂದು ನಾನು ಭಾವಿಸಿದ್ದೇನೆ. ಏಕೆಂದರೆ, ಜಾಗತೀಕರಣವೆಂದರೆ ಮತ್ತೇನು? ಸುಖ ಪಡುವುದು ತನ್ನ ಹುಟ್ಟು ಹಕ್ಕೆಂದು ನಂಬಿರುವ ಆಧುನಿಕ ನಾಗರಿಕ ಜಗತ್ತು ಈ ಭೂಮಿಯನ್ನು–ಅದರೆಲ್ಲ ಸಂಪನ್ಮೂಲಗಳೊಂದಿಗೆ–ಹಂಚಿಕೊಂಡು ತಿಂದು ತೇಗಲು ನಡೆದಿರುವ ಭಯಾನಕ ಸ್ಪರ್ಧೆಯಂತೆಯೇ ಕಾಣುತ್ತಿದೆಯಲ್ಲವೇ? ಈ ಸ್ಪರ್ಧೆ ಭಯಾನಕವಾಗಿರುವುದು ಅದರ ಹಿಂದಿರುವ ರಾಜಕಾರಣವು ತನ್ನೆಲ್ಲ ಅಧ್ಯಾತ್ಮಿಕತೆಯನ್ನು ಕಳೆದುಕೊಂಡಿರುವ ದುರಂತದಿಂದಾಗಿ ಎಂದು ನನಗನ್ನಿಸುತ್ತಿದೆ. ಹವಾಮಾನ ವೈಪರೀತ್ಯಗಳ ಕಾರಣಗಳು ಮತ್ತು ಪರಿಣಾಮಗಳನ್ನು ಗ್ರಹಿಸಲು ನಮ್ಮ ಆಧುನಿಕ ಮನಸ್ಸು ಬಹುಕಾಲ ನಿರಾಕರಿಸಿದ ರೀತಿ ಮತ್ತು ಅದನ್ನು ನಿಯಂತ್ರಿಸಲು ಅಗತ್ಯವಾದ–ಇಂದು ರೂಪಿಸಲಾಗಿರುವ ಹರಕಲು ಪರಕಲಾದುದೆಂದು ಹೇಳಲಾಗುವ–ಜಾಗತಿಕ ಒಪ್ಪಂದಕ್ಕೆ ಬರಲು ನಡೆಸಲಾದ ದೀರ್ಘಕಾಲೀನ ಚೌಕಾಶಿ ನೀತಿಗಳು ಇದನ್ನು ಶ್ರುತಪಡಿಸುತ್ತವೆ. ಈ ದುರಂತ ಇದ್ದಕ್ಕಿದ್ದಂತೆ ಅಥವಾ ಎಲ್ಲೋ ದೂರದಿಂದಲೋ ಸಂಭವಿಸಿದ್ದಾಗಿರದೆ ನಮ್ಮ–ಸ್ಥಳೀಯ–ಮನಸ್ಸುಗಳಲ್ಲೇ ಕ್ರಮೇಣ ಹೆಪ್ಪುಗಟ್ಟುತ್ತಾ ಹೋದ ಪ್ರಕ್ರಿಯೆಯೇ ಆಗಿದೆ ಎಂಬುದನ್ನೂ ಇಲ್ಲಿನ ಲೇಖನಗಳು ಗುರುತಿಸುತ್ತವೆ ಮತ್ತು ಇದಕ್ಕೆ ಪ್ರತಿರೋಧ ಒಡ್ಡಬಹುದಾದ ಹಾಗೂ ಚಿಕಿತ್ಸಾತ್ಮಕವಾದ

ಕೆಲ ಪರ್ಯಾಯಗಳನ್ನೂ ಅವು ಚರ್ಚಿಸುತ್ತವೆ ಎಂದು ನಾನು ಭಾವಿಸಿದ್ದೇನೆ.

ಹೀಗೆ ನಮ್ಮ ರಾಜಕಾರಣದ ಅನಾಧ್ಯಾತ್ಮೀಕರಣವನ್ನು ಗಮನಿಸುತ್ತಿರುವ ಇಲ್ಲಿನ ಲೇಖನಗಳ ಏಕಾಗ್ರತೆಯ ಭಾಗವಾಗಿಯೇ ಈ ಸಂಗ್ರಹದಲ್ಲಿರುವ 'ಜೀವ ಕಾಯುವುದೇತಕೆ?' ಎಂಬ ಮೇಲ್ನೋಟಕ್ಕೆ ಇಲ್ಲಿ ಸಲ್ಲದ್ದೆಂದೆನ್ನಿಸುವ, ಆದರೆ ಕೆಲವರಿಗಾದರೂ ಈ ಸಂಗ್ರಹದ ಹೃದಯ ಎಂದೆನ್ನಿಸಬಹುದಾದ ಲೇಖನವೂ ಇಲ್ಲಿ ಜಾಗ ಪಡೆದಿದೆ. ಇದನ್ನೂ ಓದುಗರು ಗಮನಿಸುವರು ಎಂಬ ನಂಬಿಕೆ ನನ್ನದು.

ನನ್ನ ಈ ಪುಸ್ತಕಕ್ಕೆ ಪೃಥ್ವಿ ದತ್ತ ಚಂದ್ರ ಶೋಭಿಯವರು ಮುನ್ನುಡಿ ಬರೆದಿದ್ದಾರೆ. ಹಾಗೆ ನೋಡಿದರೆ, ನನ್ನ ಈವರೆಗಿನ ಸಾಹಿತ್ಯ ವಿಮರ್ಶೆಗಳ ಸಮಗ್ರ ಸಂಗ್ರಹದ ('ರೂಪರೂಪಗಳನು ದಾಟಿ') ಹೊರತಾಗಿ ನಾನು ನನ್ನ ಇನ್ನ್ಯಾವ ಪುಸ್ತಕಕ್ಕೂ ಯಾರಿಂದಲೂ ಮುನ್ನುಡಿ ಬರೆಸಿರಲಿಲ್ಲ. ಆದರೆ ತಮ್ಮ 'ಪ್ರಜಾವಾಣಿ' ಅಂಕಣ ಬರಹಗಳಲ್ಲಿ ತೋರುವ ಭಾರವೆನಿಸದ ಬಹುಶ್ರುತ ಪಾಂಡಿತ್ಯ, ವಿಚಾರ ಸ್ಪಷ್ಟತೆ, ಅದಕ್ಕನುಗುಣವಾದ ಸರಳ ಪಾರದರ್ಶಕ ಭಾಷೆ ಮತ್ತು ಆರಿಸಿಕೊಂಡ ವಿಷಯವನ್ನು ನಿರ್ವಹಿಸುವಲ್ಲಿ ತೋರುವ ಸಂಯಮ ಮತ್ತು ಸಮತೋಲಗಳಿಂದಾಗಿ ನನ್ನ ಗಮನ ಸೆಳೆದ ಇತಿಹಾಸ ಪ್ರಾಧ್ಯಾಪಕ ಪೃಥ್ವಿ ದತ್ತ ಚಂದ್ರ ಶೋಭಿಯವರನ್ನು ನಾನು ಕೇಳಿಕೊಂಡ ಕೂಡಲೇ ಒಪ್ಪಿ, ವಿಶ್ವಾಸದಿಂದ ಇಲ್ಲಿನ ಬರಹಗಳ ಮೇಲೆ ವಿಶೇಷ ಬೆಳಕು ಚೆಲ್ಲುವಂತಹ ಕೆಲವು ಮುನ್ನುಡಿಯ ಮಾತುಗಳನ್ನು ಬರೆದುಕೊಟ್ಟಿದ್ದಾರೆ. ಅವರಿಗೆ ನನ್ನ ಕೃತಜ್ಞತೆಗಳು.

ನನ್ನ ಈ ಹಿಂದಿನ ಸಾಹಿತ್ಯ ವಿಮರ್ಶೆಗಳ ಸಂಗ್ರಹ 'ಈ ಭೂಮಿಯಿಂದ ಆ ಆಕಾಶದವರೆಗೆ' ಕೃತಿಯನ್ನು ಪ್ರಕಟಿಸಿದ್ದ ಮೈಸೂರಿನ ಸಂವಹನ ಪ್ರಕಾಶನದ ಡಿ.ಎನ್. ಲೋಕಪ್ಪನವರನ್ನು ಈ ಪುಸ್ತಕದ ಪ್ರಕಟಣೆ ಸಾಧ್ಯವೇ ಎಂದು ಕೇಳಿದಾಗ ಅವರು ಆ ಹಳೆಯ ಪ್ರೀತಿ-ವಿಶ್ವಾಸಗಳಿಂದಲೇ ಒಪ್ಪಿ ಈ ಪುಸ್ತಕವನ್ನು ಪ್ರಕಟಿಸುತ್ತಿದ್ದಾರೆ. ಅವರಿಗೆ ಮತ್ತು ಈ ಪುಸ್ತಕ ಅಚ್ಚುಕಟ್ಟಾಗಿ ಹೊರಬರಲು ಸಹಕರಿಸಿರುವ ಅವರ ಸಿಬ್ಬಂದಿ ವರ್ಗದವರಿಗೆ ನಾನು ಆಭಾರಿಯಾಗಿದ್ದೇನೆ. ಹಾಗೇ ಈ ಪುಸ್ತಕಕ್ಕೆ ಅರ್ಥಪೂರ್ಣ ಮುಖಪುಟ ವಿನ್ಯಾಸ ಮಾಡಿಕೊಟ್ಟಿರುವ ಸುಧಾಕರ ದರ್ಬೆಯವರಿಗೂ, ನನ್ನ ಭಾವಚಿತ್ರವನ್ನು ತೆಗೆದುಕೊಟ್ಟ ಗೆಳೆಯ ಎಂ. ರಾಜು ಅವರಿಗೂ ಮತ್ತು ಇಲ್ಲಿನ ಒಂದೆರಡು ಲೇಖನಗಳನ್ನು ಬೆರಳಚ್ಚು ಮಾಡಿಕೊಟ್ಟ ಟಿ.ಎಲ್. ರೇಖಾಂಬಾ ಅವರಿಗೂ ನನ್ನ ಧನ್ಯವಾದಗಳನ್ನು ಹೇಳಬಯಸುತ್ತೇನೆ. ಎಂದಿನಂತೆ ಪತ್ನಿ ಸವಿತಾಳನ್ನು ಅವಳ ಸಹಕಾರಕ್ಕಾಗಿ ನೆನೆಯಲೇಬೇಕು.

ನನ್ನ ಈವರೆಗಿನ ಎಲ್ಲ ಪುಸ್ತಕಗಳನ್ನೂ ಆಸಕ್ತಿಯಿಂದ ಕೊಂಡು ಓದಿರುವಂತೆಯೇ ಈ ಪುಸ್ತಕವನ್ನೂ ಕನ್ನಡ ಓದುಗರು ಕೊಂಡು ಓದಿ ಪ್ರೋತ್ಸಾಹಿಸುವರೆಂದು ನಂಬಿದ್ದೇನೆ.

ಡಿ.ಎಸ್. ನಾಗಭೂಷಣ

ಶಿವಮೊಗ್ಗ
೧೫, ಜುಲೈ, ೨೦೧೬

ಪರಿವಿಡಿ

ಅನುಬಂಧಗಳು:

ಜಾಗತೀಕರಣ : ಕೆಲವು ಪ್ರಶ್ನೆಗಳು ಮತ್ತು ಕೆಲವು ಉತ್ತರಗಳು

> ಇಂದು ಮಧ್ಯಮ ಮಾರ್ಗವೆಂದರೆ, ವಿದೇಶಿ ಬಂಡವಾಳ ಎನ್ನುವುದು ಪಡೆಯುವವರ ಅಗತ್ಯದಷ್ಟೇ ಕೊಡುವವರ ಅಗತ್ಯವೂ ಆಗಿದೆ ಎನ್ನುವ ರೀತಿಯಲ್ಲಿ ಅದರ ಮೇಲಿನ ಷರತ್ತುಗಳನ್ನು, ನಮ್ಮ ಅಭಿವೃದ್ಧಿ ನೀತಿಗನುಗುಣವಾಗಿ ರೂಪಿಸುವ ತಾಕತ್ತುಳ್ಳ ದೇಶೀ ಪ್ರಜ್ಞೆಯ ರಾಜಕಾರಣವನ್ನು ಕಟ್ಟುವುದೇ ಆಗಿದೆ. ವಿಶ್ವ ಸಮಾಜವಾದಿ ಚಿಂತಕರ ಒಕ್ಕೂಟ ಆರಂಭಿಸಿರುವ 'ಇನ್ನೊಂದು ಜಗತ್ತು ಸಾಧ್ಯ' ಚಳುವಳಿಯ ವಕ್ತಾರನಾದ ಬೊಲಿವಿಯಾದ ಅಧ್ಯಕ್ಷ ಶಾವೆಜ್ (ಈಗ ದಿವಂಗತರು) ಹೇಳುವ ಹಾಗೆ, ಇಂದಿನ ಅಗತ್ಯ, ಹಣಕಾಸಿನ ಬಂಡವಾಳದ ಜೊತೆಗೇ ಸಾಂಸ್ಕೃತಿಕ ಬಂಡವಾಳದ ವಿನಿಮಯವನ್ನೂ ಆದರಿಸಿದ ಜಾಗತೀಕರಣ. ಅಂದರೆ, ನಿಜವಾದ ಜಾಗತೀಕರಣದ ಹಿಂದೆ, ಜಗತ್ತು ಎಲ್ಲ ನೆಲೆಗಳಲ್ಲೂ; ಏಕ ಕೇಂದ್ರಿತವಾಗಿರದೆ, ಬಹುಕೇಂದ್ರಿತವಾಗಬೇಕೆಂಬ ಆಗ್ರಹ ಇರಬೇಕಾಗುತ್ತದೆ.

ಜಾಗತೀಕರಣವನ್ನು ಬರೀ ಟೀಕಿಸುವುದರಿಂದ ಏನು ಪ್ರಯೋಜನ? ಸರ್ಕಾರಿ ವಲಯದ ವೈಫಲ್ಯದ ಪರಿಣಾಮವಾಗಿ, ಜಾಗತೀಕರಣವೆಂಬ ಮದ್ದಾನೆ ಈಗಾಗಲೇ ಭಾರತವನ್ನು ಪ್ರವೇಶಿಸಿಯಾಗಿದೆ. ಅದನ್ನು ಚೀನಾ ಹಾಗೂ ಕೊರಿಯಾಗಳಂತೆ ನಮ್ಮ ಬಡತನದ ವಜೆಗಳನ್ನೆತ್ತಲು ಬಳಸಿಕೊಳ್ಳಬಾರದೇಕೆ? ಇದು, ಇತ್ತೀಚೆಗೆ ಸಾಗರದಲ್ಲಿ ನಾನು ಎಚ್.ಗಣಪತಿಯಪ್ಪನವರ ೮೮ನೇ ಹುಟ್ಟುಹಬ್ಬದಾಚರಣೆಯ ಸಂದರ್ಭದಲ್ಲಿ ಆಡಿದ ಮಾತುಗಳಿಗೆ ಸ್ಥಳೀಯ ಕೃಷಿಕರಾದ ಗಿರಿ ಎನ್ನುವವರು, ಸಮಾರಂಭದ ನಂತರ ನನ್ನ ಪ್ರತಿಕ್ರಿಯೆಗಾಗಿ ನೀಡಿದ ಚೀಟಿಯ ಒಕ್ಕಣೆಯ ಸಾರಾಂಶ. ಸ್ವತಃ ಗಿರಿಯವರು ತಾತ್ವಿಕವಾಗಿ ಸಮಾಜವಾದಿ ಹಿನ್ನೆಲೆಯಿಂದ ಬಂದವರಾದರೂ, ಸಮಾಜವಾದ ಹೊಸ ಜಾಗತಿಕ ಸಂದರ್ಭಕ್ಕೆ ತಕ್ಕಂತೆ ತನ್ನ ನೀತಿಯನ್ನು ಪರಿಷ್ಕರಿಸಿಕೊಳ್ಳಬೇಕೆಂದು ಬಯಸುವವರು. ಅವರ ಬಯಕೆಯೇ ನನ್ನ ಬಯಕೆಯೂ ಆಗಿದೆ ಎಂದು ಹೇಳಿದ ನಾನು, ಜಾಗತೀಕರಣವನ್ನು ಕೇವಲ ಒಂದು ಆರ್ಥಿಕ ವಿದ್ಯಮಾನವಾಗಿ, ವಿದೇಶಿ ಬಂಡವಾಳದ ಸಾಗಣೆ ವಾಹನದಂತೆ ನೋಡುವುದು ತಪ್ಪು ಎಂದು ತಿಳಿಸಿದೆ. ಹಾಗೇ

ಈ ಸಂದರ್ಭದಲ್ಲಿ ಚೀನಾ ಮತ್ತು ಕೊರಿಯಾಗಳ ಉದಾಹರಣೆಗಳೊಂದಿಗೆ ಯೋಚಿಸುವುದೂ ತಪ್ಪು ಎಂದೆ. ಏಕೆಂದರೆ, ಅಲ್ಲಿನ ಪ್ರಯೋಗಗಳನ್ನು ಆಯಾ ದೇಶಗಳ ರಾಜಕೀಯ ವ್ಯವಸ್ಥೆಯ ಭಾಗವಾಗಿಯೇ ನೋಡಬೇಕಾಗುತ್ತದೆ; ಹಾಗಾಗಿ ಆ ದೇಶಗಳ ಏಕ ಪಕ್ಷ ಪ್ರಜಾಪ್ರಭುತ್ವ(?) ವ್ಯವಸ್ಥೆಯನ್ನು ಒಪ್ಪುವವರು ಮಾತ್ರ ಅಲ್ಲಿನ ಪ್ರಯೋಗಗಳ ಯಶಸ್ಸನ್ನು ಮೆಚ್ಚಬಲ್ಲರು ಎಂದು ವಿವರಿಸಿದೆ.

ಆದರೂ, ಅಷ್ಟೇನೂ ಸಮಾಧಾನಗೊಳ್ಳದ ಗಿರಿಯವರು, ನಮಗೊಂದು ಮಧ್ಯಮ ಮಾರ್ಗದ ಅವಶ್ಯಕತೆ ಇದೆಯೆಂದರು. ನಾನು 'ಸೆಕ್ಯುಲರಿಸಂ' ಕುರಿತಂತೆ ಬರೆದಿರುವ ಒಂದು ಬರಹದಲ್ಲಿ ಅಂತಹ ಮಧ್ಯಮ ಮಾರ್ಗದ ಅನ್ವೇಷಣೆ ಮಾಡಿರುವುದಾಗಿಯೂ, ಜಾಗತೀಕರಣ ಕುರಿತಂತೆಯೂ ಅಂತಹ ಒಂದು ಮಧ್ಯಮ ಮಾರ್ಗವನ್ನು ಅನ್ವೇಷಿಸುವ ಪ್ರಯತ್ನ ಮಾಡಬೇಕಾಗಿದೆಯೆಂದೂ ಸೂಚಿಸಿದರು. ಅಲ್ಲದೆ, ನಾನು ಸಾಹಿತ್ಯ ವಿಮರ್ಶೆಯ ಜೊತೆಗೆ ರಾಜಕಾರಣದ ಬಗ್ಗೆಯೂ ಬರೆಯುತ್ತಿರುವುದರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಇದ್ದಕ್ಕಿದ್ದಂತೆ ನನ್ನ ಬರಹಗಳ ಓದುಗರೊಬ್ಬರು ಸಿಕ್ಕ ಖುಷಿಯಲ್ಲಿ ನಾನು, ಜಾಗತೀಕರಣ ಕುರಿತ ನನ್ನ ಬರಹಗಳೆಲ್ಲವೂ ಇಂತಹ ಅನ್ವೇಷಣೆಯ ಪ್ರಯತ್ನಗಳೇ ಆಗಿವೆ ಎಂದು ಹೇಳಿ, ಅವನ್ನು ಓದುವಂತೆ ಕೋರಿ ಅವರೊಂದಿಗಿನ ನನ್ನ ಮಾತುಕತೆಯನ್ನು ಮುಗಿಸಿದೆ.

ನಂತರ ನಾನು ಅಂದು ಸಭೆಯಲ್ಲಿ ಆಡಿದ ಮಾತುಗಳನ್ನು ವಿವರವಾಗಿ ನೆನಪಿಸಿಕೊಂಡೆ. ಗಿರಿಯಂತಹವರು, ನಾನೇಕೆ ಜಾಗತೀಕರಣವನ್ನು ನಿಷ್ಕಾರಣವಾಗಿ ವಿರೋಧಿಸುತ್ತಿದ್ದೇನೆ ಎಂದುಕೊಳ್ಳುವರು ಎಂದು ಯೋಚಿಸಿದೆ. ಬಹುಶಃ ನಾನು ಜಾಗತೀಕರಣವೆಂದರೇನು ಎಂದು ವಿವರಿಸದೆ, ಅದರ ದುಷ್ಪರಿಣಾಮಗಳ ಬಗ್ಗೆ ಮಾತ್ರ ಮಾತಾಡತೊಡಗುವುದು ಈ ತಪ್ಪು ತಿಳುವಳಿಕೆಗೆ ಕಾರಣವಿರಬಹುದು ಎಂದುಕೊಂಡೆ. ಬಹುಶಃ ನನ್ನ ಹಲವು ಬರಹ ಹಾಗೂ ಭಾಷಣಗಳಲ್ಲಿ ಜಾಗತೀಕರಣದ ಸ್ವರೂಪವನ್ನು ವಿವರಿಸಿರುವ ದಟ್ಟ ನೆನಪು ನನ್ನ ಮನಸ್ಸಿನಲ್ಲಿರುವುದರಿಂದ, ಪ್ರತಿ ಭಾಷಣದಲ್ಲೂ ಅದನ್ನು ಪುನರಾವರ್ತಿಸುವುದು ಆಯಾಸವೆನ್ನಿಸಿ, ನಾನು ನೇರವಾಗಿ ಜಾಗತೀಕರಣದ ದುಷ್ಪರಿಣಾಮಗಳ ಬಗ್ಗೆ ಮಾತನಾಡಲು ಹೋಗುತ್ತೇನೇನೋ! ಆದರೆ, ಆ ದುಷ್ಪರಿಣಾಮಗಳನ್ನು ಹೇಳುವಾಗ, ಸಭೆಯ ಸಂದರ್ಭಕ್ಕೆ ತಕ್ಕಂತೆ ಅದರ ವಿವಿಧ ಆಯಾಮಗಳನ್ನು ಕುರಿತಂತೆ ಮಾತನಾಡುವ ಪ್ರಯತ್ನ ನನ್ನದು.

ಅದೇನೇ ಇರಲಿ, ಗಿರಿಯಂತಹವರು ಜಾಗತೀಕರಣವನ್ನು ಭಾರತದಂತಹ ದೇಶಕ್ಕೆ ಬಯಸದೇ ಬಂದ ಭಾಗ್ಯವೆಂಬಂತೆ ಏಕೆ ಭಾವಿಸುವರು? ಅದನ್ನು ಅವರು ಮದ್ದಾನೆ ಎಂದು ಸರಿಯಾಗಿಯೇ ಕರೆದಿದ್ದಾರೆ. ಆದರೆ ಆ ಮದ್ದಾನೆ ತನ್ನ ಮಾವುತನೊಂದಿಗೇ ಪೂರ್ವ ನಿಯೋಜಿತ ಕಾರ್ಯಕ್ರಮಗಳೊಂದಿಗೆ ಬಂದಿದೆ ಎಂಬುದು ಅವರಿಗೆ ತಿಳಿದಂತಿಲ್ಲ. ಹಾಗಾಗಿಯೇ ಅವರು, ಈ ಮದ್ದಾನೆಯಿಂದ ನಾವೇಕೆ ನಮ್ಮ ಕೆಲಸಗಳನ್ನು ಮಾಡಿಸಿಕೊಳ್ಳಬಾರದು ಎಂದು ಕೇಳುತ್ತಾರೆ. ಕುವೆಂಪು ಕುರಿತ ಇತ್ತೀಚಿನ ಬರಹವೊಂದರಲ್ಲಿ ನಾನು, 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಮಲೆನಾಡಿಗೆ ಮಿಷನರಿಗಳ

ಪ್ರವೇಶವನ್ನು ಕುವೆಂಪು ವರ್ಣಿಸಿರುವ ಒಂದು ಅಧ್ಯಾಯದಲ್ಲೇ, ಕನ್ನಡ ಸಮಾಜದ ಮಟ್ಟಿಗೆ ಜಾಗತೀಕರಣದ ಮೊದಲ ಸೂಚನೆ ದೊರೆತಿದೆ ಎಂದಿದ್ದೇನೆ. ಪೂರ್ವವನ್ನು ಎಲ್ಲ ರೀತಿಯಲ್ಲೂ ಪಶ್ಚಿಮ ಮಾಡುವ ರಾಜಕೀಯ ಪ್ರಯತ್ನದ ಆತ್ಯಂತಿಕ ರೂಪವೇ ಜಾಗತೀಕರಣ. ಕ್ರಿಶ್ಚಿಯನ್ ಧರ್ಮ ಇಲ್ಲಿಗೆ ಒಂದು ಧರ್ಮವಾಗಿ ಮಾತ್ರವಲ್ಲ; ಒಂದು ಜೀವನ ದೃಷ್ಟಿಯಾಗಿ, ಒಂದು ಜೀವನ ಕ್ರಮವಾಗಿ, ಕೀಳರಿಮೆಯನ್ನು ಬಿತ್ತುತ್ತಲೇ ಬಂತು. ಹಾಗೇ ನಂತರದ ದಿನಗಳಲ್ಲಿ ಅದು, ಈ ಕೀಳರಿಮೆಯನ್ನು ಕಿತ್ತೆಸೆಯುವ ಸಾಧನವಾಗಿ ಆಧುನೀಕರಣದ ಹೆಸರಿನಲ್ಲಿ, ಹೊಸ ವಿಜ್ಞಾನ-ತಂತ್ರಜ್ಞಾನಗಳ ರೂಪದಲ್ಲಿ ಅವತರಿಸಿತು. ಇವೆಲ್ಲವೂ ಕಾಲಕ್ರಮದಲ್ಲಿ ಸ್ಥಳೀಯ ಜೀವನ ದೃಷ್ಟಿ, ಕ್ರಮ, ಜ್ಞಾನರೂಪಗಳು ಹಾಗೂ ಕೌಶಲ್ಯಗಳನ್ನು ಅಪ್ರಸ್ತುತಗೊಳಿಸಿ ಸೃಷ್ಟಿಸಿದ 'ರಾಷ್ಟ್ರೀಯ' ಬಿಕ್ಕಟ್ಟು, ಹಣಕಾಸಿನ ಬಂಡವಾಳದ ಕೊರತೆಯ ರೂಪದಲ್ಲಿ ಕಾಣಿಸಿಕೊಂಡಿತು. ಇದರ ಫಲವಾಗಿ ಆಧುನೀಕರಣವು ಆರ್ಥಿಕ ಸುಧಾರಣೆ, ಉದಾರೀಕರಣ, ಖಾಸಗೀಕರಣಗಳ ಘೋಷಣೆಗಳೊಂದಿಗೆ ಜಾಗತೀಕರಣ ಎಂಬ ಆಕರ್ಷಕ ಹೊಸ ಹೆಸರಿನೊಂದಿಗೆ ನಮಗೆ ಎದುರಾಗಿದೆ. ಹೀಗಾಗಿ ಜಾಗತೀಕರಣ ಎಂಬುದು ಹೊಸ ವಿದ್ಯಮಾನವೇನೂ ಆಗಿಲ್ಲ. ಬದಲಿಗೆ, ಅದು ತನ್ನ ಮೊದಲ ಸುತ್ತಿನಲ್ಲಿ ಬಿತ್ತಿದ ಕೀಳರಿಮೆಯನ್ನು ನಿವಾರಿಸಿ ಕೊಳ್ಳಲು ಅಳವಡಿಸಿಕೊಂಡ ಪಶ್ಚಿಮದ ಆಧುನಿಕತೆಯ ಆತ್ಯಂತಿಕ ರೂಪವೇ ಆಗಿದೆ!

ಹಣಕಾಸಿನ ರೂಪದ ಬಂಡವಾಳಕ್ಕಿಂತ ಹೆಚ್ಚಾಗಿ ವಿಶ್ವಾಸದ, ಸಹಕಾರದ, ಹೊಂದಾಣಿಕೆಯ ಸಾಂಸ್ಕೃತಿಕ ಬಂಡವಾಳವನ್ನು ನೆಚ್ಚಿ ಸಾಗಿದ್ದ ನಮ್ಮ ಗ್ರಾಮ ಮೂಲದ ಪಾರಂಪರಿಕ ವಿವೇಕವನ್ನಾಧರಿಸಿದ ಮಿತಿಯುಳ್ಳ ಬದುಕಿನ ನಮ್ಮ ಆರ್ಥಿಕತೆಯನ್ನು; ಪಶ್ಚಿಮದ ಭೌತವಾದಿ ನಾಗರೀಕತೆಯ, ಮಿತಿಯಿಲ್ಲದ ಬದುಕಿನ ಆರ್ಥಿಕತೆಯನ್ನಾಗಿ ಪರಿವರ್ತಿಸುವ ಪಶ್ಚಿಮದ ಹುನ್ನಾರವೇ ಇಂದು ಜಾಗತೀಕರಣವೆನಿಸಿದೆ. ನಿಜ, ಗ್ರಾಮ ಮೂಲದ ನಮ್ಮ ಮಿತಿಯುಳ್ಳ ಈ ಬದುಕಿನ ಜೀವನ ದರ್ಶನವನ್ನು ಜಾತಿ ಪದ್ಧತಿ, ವಿಶೇಷವಾಗಿ ಅಸ್ಪೃಶ್ಯತಾ ಆಚರಣೆ ಕಳಂಕಗೊಳಿಸಿತ್ತು. ಆದರೆ ಅದನ್ನು ನಿವಾರಿಸಿಕೊಳ್ಳುವ ಸಾಮಾಜಿಕ ಹಾಗೂ ಸಾಂಸ್ಕೃತಿಕ ಆಂದೋಲನವೊಂದು ಗಾಂಧಿ-ಅಂಬೇಡ್ಕರ್-ಲೋಹಿಯಾ ಅನುಸಂಧಾನದ ಮೂಲಕ ಆರಂಭವಾಗಿತ್ತು. ಆದರೆ ಪಶ್ಚಿಮದ ಆಧುನಿಕ-ಅಂದರೆ ಸ್ಥೂಲವಾಗಿ ಹೊಸ ವೈಜ್ಞಾನಿಕ ಹಾಗೂ ತಂತ್ರಜ್ಞಾನಾಧಾರಿತ-ಜೀವನ ವಿಧಾನದ ಅಳವಡಿಕೆಯೇ ಜಾತಿ ಪದ್ಧತಿ ಸೃಷ್ಟಿಸಿದ್ದ ಸಾಮಾಜಿಕ-ಆರ್ಥಿಕ ವೈರುಧ್ಯಗಳನ್ನು ಸರಿಪಡಿಸುವವೆಂಬ ನಂಬಿಕೆ, ನೆಹರೂ ಆವೃತ್ತಿಯ ಸೆಕ್ಯುಲರಿಸಂನ ಪ್ರಭಾವದಿಂದಾಗಿ ಪ್ರಬಲಗೊಂಡಿತು. ಇದರಿಂದಾಗಿ, ಪಶ್ಚಿಮದ ಆಧುನಿಕತೆ ಭಾರತದ ಆರ್ಥಿಕ ಸಮಸ್ಯೆಗಳನ್ನಲ್ಲದೆ, ಸಾಮಾಜಿಕ ವೈರುಧ್ಯಗಳನ್ನೂ ನಿವಾರಿಸುವ ದಿವ್ಯೌಷಧವಾಗಿ ಪರಿಗಣಿತವಾಯಿತು.

ಆದರೆ, ಇಷ್ಟೆಲ್ಲದರ ನಂತರವೂ ನಮ್ಮ ಸಮಾಜದಲ್ಲಿ ಜಾತಿ ಸಂಘರ್ಷ ನಿಂತಿದೆಯೇ? ಹೋಗಲಿ, ಕಡಿಮೆಯಾಗಿದೆಯೇ? ಎಂಬ ಪ್ರಶ್ನೆಗಳು ಇದ್ದೇ ಇವೆ. ಈ

ಎಲ್ಲ ಗೊಂದಲದ ಹಿಂದೆ ಇದ್ದುದು, ನಮ್ಮ ಜೀವನ ದೃಷ್ಟಿ ಹಾಗೂ ವಿಧಾನದ ಬಗೆಗಿನ ನಮ್ಮ ಚಿಂತನೆಯಲ್ಲಿನ ಸೃಜನಶೀಲತೆಯ ಕೊರತೆ ಹಾಗೂ ಪಶ್ಚಿಮದ ಆಧುನಿಕತೆ ಕುರಿತಂತೆ ಕೀಳರಿಮೆ ತುಂಬಿದ ಕುತೂಹಲ. ಇದರ ಪರಿಣಾಮವಾಗಿ ಪಶ್ಚಿಮದ ಆಧುನಿಕತೆಯ ವಿರುದ್ಧ ತಮ್ಮದೇ ಕ್ರಾಂತಿಕಾರಿ ಆಲೋಚನೆಗಳ ಮೂಲಕ ಸಮರ ಸಾರಿದ್ದ ಗಾಂಧಿ ಕೂಡ ಕ್ರಮೇಣ ಜನಸಾಮಾನ್ಯರ ಕಣ್ಣಿನಲ್ಲಿ ಅಪ್ರಸ್ತುತರಾಗಿ ಹೋದರು. ಲೋಹಿಯಾ ಹಿಂದೊಮ್ಮೆ ಕಮ್ಯುನಿಸಮ್ಮನ್ನು ಕ್ರಿಶ್ಚಿಯಾನಿಟಿ ನಂತರ ಪಶ್ಚಿಮವು ಏಷ್ಯಾದ ಮೇಲೆ ಪ್ರಯೋಗಿಸಿರುವ ಅಸ್ತ್ರವೆಂದು ಬಣ್ಣಿಸಿದ್ದರು. ಈಗ ಜಾಗತೀಕರಣವನ್ನೂ ಆ ಪಟ್ಟಿಗೆ ಸೇರಿಸಬಹುದಾಗಿದೆ.

ಹೀಗಾಗಿ ಜಾಗತೀಕರಣವೆಂಬುದು ಪಶ್ಚಿಮವು ತನ್ನ ಹೆಚ್ಚುವರಿ ಬಂಡವಾಳದ (ಇದು ಉತ್ಪತ್ತಿಯಾದದ್ದೂ ವಸಾಹತುಶಾಹಿಯಿಂದಾಗಿಯೇ) ಲಾಭದಾಯಕ ಹೂಡಿಕೆಗಾಗಿ ಹೊಸ ಹೊಸ ಮಾರುಕಟ್ಟೆಯನ್ನು ಸೃಷ್ಟಿಸುವ, ಕಂಡುಕೊಳ್ಳುವ ತಂತ್ರವೇ ಆಗಿದೆ. ನಮ್ಮ ಜೀವನ ದೃಷ್ಟಿಯೇ ತಪ್ಪಾಗಿದೆ, ನಮ್ಮ ಜೀವನ ಕ್ರಮವೇ ಅರ್ಥಹೀನವಾಗಿದೆ ಎಂದು ನಂಬುವ ಹುಂಬರು ಮಾತ್ರ ಜಾಗತೀಕರಣದ ಈ ಆವೃತ್ತಿಯನ್ನು ವರವೆಂದು ಪರಿಗಣಿಸಿಯಾರು. ಹೀಗೆ ಭಾರತೀಯ ಮನಸ್ಸುಗಳಿಗೆ ಅಸಮಧಾನದ, ಅತೃಪ್ತಿಯ ಬೆಂಕಿ ಹಚ್ಚಿ ಅದರ ಕಾವಿನಲ್ಲಿ ಮೈಕಾಯಿಸಿಕೊಳ್ಳುವ ಪಶ್ಚಿಮದ ತಂತ್ರವಾಗಿರುವ ಜಾಗತೀಕರಣವನ್ನು ನಿಯಂತ್ರಿಸುವುದು ಹೇಗೆ? ಅದನ್ನು ಗಿರಿಯವರು ಸೂಚಿಸಿರುವಂತೆ ನಮ್ಮ ಆದ್ಯತೆಯ ಕ್ಷೇತ್ರಗಳ ಸುಧಾರಣೆಗಾಗಿ ಬಳಸಿಕೊಳ್ಳುವುದು ಹೇಗೆ? ಪಶ್ಚಿಮದ ದೇಶಗಳು ಮತ್ತು ಅವರ ಉಸ್ತುವಾರಿಯಲ್ಲಿರುವ ಹಣಕಾಸು ಸಂಸ್ಥೆಗಳು ನಮ್ಮಲ್ಲಿ ಬಂಡವಾಳ ತೊಡಗಿಸುವುದೇ, ಷರತ್ತುಗಳ ಮೇಲೆ. ನಾವೂ ಷರತ್ತುಗಳನ್ನು ಹಾಕುತ್ತಿರುವೆವಾದರೂ, ಮೂಲತಃ ಅವರ ಅಭಿವೃದ್ಧಿ ಮಾದರಿಯನ್ನು–ಕೈಗಾರೀಕೀಕರಣ ಮತ್ತು ನಗರೀಕರಣವನ್ನು ಆಧರಿಸಿದ ಗ್ರಾಹಕ ಸಮಾಜವೊಂದನ್ನು ಸೃಷ್ಟಿಸುವುದು– ಒಪ್ಪಿಕೊಂಡೇ. ನಮಗಿರುವುದು ಆಡಳಿತಾತ್ಮಕ ನೆಲೆಯ ಷರತ್ತುಗಳನ್ನಷ್ಟೇ ಹಾಕುವ ಅವಕಾಶ.

ಇದರ ಪರಿಣಾಮಗಳನ್ನು ಎರಡು ಉದಾಹರಣೆಗಳ ಮೂಲಕ ವಿಷದೀಕರಿಸ ಬಹುದು. ಒಂದು ಅತಿ ಚಿಕ್ಕ ಆದರೆ ಸೂಕ್ಷ್ಮ ಉದಾಹರಣೆ: ಜಾಗತೀಕರಣವು ಉದ್ಯೋಗ ಸೃಷ್ಟಿಯ ಹೆಸರಲ್ಲಿ ದೊಡ್ಡ ಪ್ರಮಾಣದಲ್ಲಿ ತಂದಿರುವ ಕಾಲ್ ಸೆಂಟರ್‌ಗಳಲ್ಲಿ ಭಾರತದ ಭವಿಷ್ಯವನ್ನು ರೂಪಿಸಬೇಕಾದ ನಮ್ಮ ಮಕ್ಕಳು, ತಮ್ಮ ಭಾಷಾ ವೈಖರಿಯನ್ನಷ್ಟೇ ಅಲ್ಲದೆ (ಇದನ್ನು ಬೇಕಾದರೆ, ಒಂದು ಕೌಶಲ್ಯವೆಂದು ಪರಿಗಣಿಸಬಹುದು) ತಮ್ಮ ಹೆಸರುಗಳನ್ನೂ ಬದಲಾಯಿಸಿಕೊಳ್ಳಬೇಕಾದ ಒತ್ತಡದ ಪರಿಣಾಮಗಳಾದರೂ ಎಂತಹುದು? ತಮ್ಮ ಹಗಲುಗಳನ್ನು ಕಳೆದುಕೊಂಡ ಅವರು ಏನಾಗಿದ್ದಾರೆ ಎಂಬ ಬಗ್ಗೆ ನಡೆದಿರುವ ಸಮೀಕ್ಷೆಗಳ ಬಗ್ಗೆ ಯಾರಾದರೂ ತಲೆ ಕೆಡಿಸಿಕೊಂಡಿದ್ದಾರೆಯೇ? ಉದ್ಯೋಗ ಸೃಷ್ಟಿ ಆಗಬೇಕಾಗಿರುವುದು, ರಾಷ್ಟ್ರವನ್ನು ಕಟ್ಟಲೇ ಹೊರತು, ಕೆಡವಲಲ್ಲ ಅಲ್ಲವೇ?

ಇನ್ನೊಂದು ದೊಡ್ಡ ಉದಾಹರಣೆ: ಇತ್ತೀಚೆಗೆ ವಿವಾದಕ್ಕೆ ಸಿಕ್ಕಿ ಕೇಂದ್ರ ಸರ್ಕಾರದ ಅಸ್ತಿತ್ವವನ್ನೇ ಅಲುಗಾಡಿಸುತ್ತಿರುವ ಅಮೆರಿಕಾದೊಡನೆಯ ನಾಗರಿಕ ಪರಮಾಣು ಒಪ್ಪಂದ. ಅದರ ತಾಂತ್ರಿಕ ಅನುಕೂಲಗಳು ಹಾಗೂ ಅನಾನುಕೂಲಗಳು ಏನೇ ಇರಲಿ-ಅದೀಗ ರಾಷ್ಟ್ರಾದ್ಯಂತ ಬಿಸಿ ಬಿಸಿ ಚರ್ಚೆಯಾಗುತ್ತಿದೆ-ಅದನ್ನು ಸಮರ್ಥಿಸಲು ನಮ್ಮ ಪ್ರಧಾನಿ ನೀಡಿರುವ ಎರಡು ಕಾರಣಗಳನ್ನು ಗಮನಿಸಿ. ಒಂದು ಈ ಒಪ್ಪಂದವಿಲ್ಲದೆ ನಾವು ಜಾಗತಿಕ ಶಕ್ತಿಯಾಗಲೂ ಸಾಧ್ಯವಿಲ್ಲ. ಎರಡು: ಅಮೆರಿಕಾದ ಈವರೆಗಿನ ಅಧ್ಯಕ್ಷರ ಪೈಕಿ ಬುಷ್‌ರೇ ಭಾರತದ ಬಗ್ಗೆ ಅತ್ಯಂತ ಸ್ನೇಹ ಪ್ರದರ್ಶಿಸಿರುವವರು! ಈ ಎರಡೂ ಎಷ್ಟು ಅಸಂಬದ್ಧ ಮತ್ತು ಅನಾಹುತಕಾರಿ ಸಮರ್ಥನೆಗಳೆಂದರೆ, ನಮ್ಮ ಕುಲಗೆಟ್ಟ ರಾಜಕಾರಣಿಗಳ ಮಧ್ಯೆ ತಮ್ಮ ಶುದ್ಧ ಹಸ್ತ ಹಾಗೂ ಸಭ್ಯ ವರ್ತನೆಯ ಮೂಲಕ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದ ಮನಮೋಹನ ಸಿಂಗರು, ಗೊತ್ತಿದ್ದೋ ಗೊತ್ತಿಲ್ಲದೆಯೋ, ಭಾರತದ ಪರ ಅಮೆರಿಕಾದ ಎಂತಹ ದಲ್ಲಾಳಿಯಾಗಿದ್ದಾರೆ ಎಂಬ ಆಘಾತಕಾರಿ ಸಂಗತಿ ಸ್ಪಷ್ಟವಾಗುತ್ತದೆ. ಸಾಮ್ರಾಜ್ಯಶಾಹಿಯ ಜಾಣತನವಿರುವುದೇ ತನ್ನ ಕುಕೃತ್ಯಗಳಿಗಾಗಿ ಇಂತಹವರನ್ನೇ ಆರಿಸುವುದರಲ್ಲಿಯೇ ಏನೋ!

ಈ ಪರಮಾಣು ಒಪ್ಪಂದದ ಹಿನ್ನೆಲೆಯಲ್ಲಿ ಜಾಗತಿಕ ಶಕ್ತಿ ಎಂಬುದರ ಅರ್ಥವಾದರೂ ಏನು? ಅಮೆರಿಕಾದಂತಹ 'ದೊಡ್ಡಣ್ಣ'ನಿಗೆ ತಮ್ಮಣ್ಣನಾಗುವುದು ಎಂದೇ ಅಲ್ಲವೆ? ಇಡೀ ಜಗತ್ತಿನಿಂದ ಹಲವಾರು ಕಾರಣಗಳಿಗಾಗಿ ಹಿಡಿಶಾಪ ಹಾಕಿಸಿಕೊಳ್ಳುತ್ತಿರುವ ಬುಷ್ ನೀಡುತ್ತಿರುವ ಸ್ನೇಹ ಹಸ್ತದ ಹಿಂದಿನ ಉದ್ದೇಶಗಳನ್ನು ನಾವು ಸಂಪೂರ್ಣವಾಗಿ ವಿಶ್ಲೇಷಣೆ ಮಾಡಿದ್ದೇವೆಯೇ? ಮನಮೋಹನ ಸಿಂಗರು ಈ ಒಪ್ಪಂದದ ಮೇಲೆ ತಮ್ಮ ರಾಜಕೀಯ ಜೀವನವನ್ನೇ ಏಕೆ ಪಣವಾಗಿಡಲು ಹೊರಟಿದ್ದಾರೆ? ಈ ಪರಮಾಣು ಒಪ್ಪಂದದ ಹಿಂದೆ ಮಧ್ಯಪ್ರಾಚ್ಯ ಹಾಗೂ ಚೀನಾ ಸೇರಿದಂತೆ ಪೂರ್ವ ಏಷ್ಯಾದ ಮೇಲೆ ರಾಜಕೀಯ ನಿಯಂತ್ರಣ ಸಾಧಿಸಲು ಭಾರತವನ್ನು ತನ್ನ ಒಂದು ಮಿಲಿಟರಿ ಏಜೆಂಟನನ್ನಾಗಿ ರೂಪಿಸುವ ದೀರ್ಘಕಾಲಿಕ ತಂತ್ರವಿಲ್ಲವೇ? ಈ ಬೆಳವಣಿಗೆ ಜಾಗತಿಕ ರಾಜಕಾರಣದ ಸದ್ಯದ ಸಮೀಕರಣಗಳ ಮಧ್ಯೆ ಭಾರತವನ್ನು ಯಾವ ಸ್ಥಿತಿಗೆ ದೂಡಬಹುದು? ನಮ್ಮ ರಾಜಕೀಯ ಸ್ವಾಯತ್ತತೆ ಎಷ್ಟರ ಮಟ್ಟಿಗೆ ಭಂಗಗೊಳ್ಳಬಹುದು? ಮಾರುಕಟ್ಟೆಯನ್ನು ಝಗಝಗಿಸುವ ವೈವಿಧ್ಯಮಯ ವಸ್ತುಗಳಿಂದ ಸಮೃದ್ಧಗೊಳಿಸಿ, ಮನುಷ್ಯರನ್ನು ಚಪಲಚಿತ್ತರನ್ನಾಗಿ ಮಾಡುವ ಮೂಲಕ ಇಂತಹ ಮುಖ್ಯ ಪ್ರಶ್ನೆಗಳನ್ನೇ ಮರೆಸಿಬಿಡುವ ಜಾಗತೀಕರಣವನ್ನು ಇಡಿಯಾಗಿ ಒಪ್ಪಿಕೊಳ್ಳುವುದು ಸಾಧ್ಯವೇ?

ಹೀಗಾಗಿ ಇಂದು ಮಧ್ಯಮ ಮಾರ್ಗವೆಂದರೆ, ವಿದೇಶಿ ಬಂಡವಾಳ ಎನ್ನುವುದು ಪಡೆಯುವವರ ಅಗತ್ಯದಷ್ಟೇ ಕೊಡುವವರ ಅಗತ್ಯವೂ ಆಗಿದೆ ಎನ್ನು ರೀತಿಯಲ್ಲಿ ಅದರ ಮೇಲಿನ ಷರತ್ತುಗಳನ್ನು, ನಮ್ಮ ಅಭಿವೃದ್ಧಿ ನೀತಿಗನುಗುಣವಾಗಿ ರೂಪಿಸುವ ತಾಕತ್ತುಳ್ಳ ದೇಶೀ ಪ್ರಜ್ಞೆಯ ರಾಜಕಾರಣವನ್ನು ಕಟ್ಟುವುದೇ ಆಗಿದೆ. ವಿಶ್ವ ಸಮಾಜವಾದಿ ಚಿಂತಕರ ಒಕ್ಕೂಟ ಆರಂಭಿಸಿರುವ 'ಇನ್ನೊಂದು ಜಗತ್ತು ಸಾಧ್ಯ' ಚಳುವಳಿಯ

ವಕ್ತಾರನಾದ ಬೊಲಿವಿಯಾದ ಅಧ್ಯಕ್ಷ ಶಾಫೆಜ್ (ಈಗ ದಿವಂಗತರು) ಹೇಳುವ ಹಾಗೆ, ಇಂದಿನ ಅಗತ್ಯ, ಹಣಕಾಸಿನ ಬಂಡವಾಳದ ಜೊತೆಗೇ ಸಾಂಸ್ಕೃತಿಕ ಬಂಡವಾಳದ ವಿನಿಮಯವನ್ನೂ ಆಧರಿಸಿದ ಜಾಗತೀಕರಣ. ಅಂದರೆ, ನಿಜವಾದ ಜಾಗತೀಕರಣದ ಹಿಂದೆ, ಜಗತ್ತು ಎಲ್ಲ ನೆಲೆಗಳಲ್ಲೂ; ಏಕ ಕೇಂದ್ರಿತವಾಗಿರದೆ, ಬಹುಕೇಂದ್ರಿತವಾಗಬೇಕೆಂಬ ಆಗ್ರಹ ಇರಬೇಕಾಗುತ್ತದೆ. ಇದನ್ನು, ಇಂದಿನ ರಾಜಕಾರಣ ಸಮರ್ಥಿಸುತ್ತಿರುವ ಜಾಗತೀಕರಣದ ಆವೃತ್ತಿಯ ಅನಾಹುತಗಳನ್ನು ಜನರಿಗೆ ಹೇಳುವ ಮೂಲಕವೇ ಆರಂಭಿಸಬೇಕಾಗಿದೆ. ಇದು ಕಷ್ಟದ ದಾರಿ; ಆದರೆ ಅನಿವಾರ್ಯದ ದಾರಿಯೂ ಹೌದು. ಈ ದಾರಿಯಲ್ಲೇ ರಾಜಕಾರಣದ ಪರ್ಯಾಯ ಮಾದರಿಗಳು ಮೂರ್ತ ರೂಪ ಪಡೆಯುವುವು ಎಂಬ ನಂಬಿಕೆ ನನ್ನದು. ಗಿರಿಯವರಂತಹ ಪ್ರಗತಿಪರ ರೈತರೂ ಜಾಗತೀಕರಣದ ವಿರೋಧವನ್ನು ತಪ್ಪಾಗಿ ಅರ್ಥಮಾಡಿಕೊಳ್ಳುವ ಪರಿಸ್ಥಿತಿ ಬಗ್ಗೆ ಚಿಂತಿತನಾಗಿ ಈ ಬಗ್ಗೆ ಇಷ್ಟು ವಿಸ್ತಾರವಾಗಿ ಬರೆಯಬೇಕಾಯಿತಷ್ಟೆ.

(ಆಗಸ್ಟ್ ೩೧, ೨೦೦೭)

■

ಮುಕ್ತ ಮಾರುಕಟ್ಟೆ ಅರ್ಥಶಾಸ್ತ್ರದ ಬಿಕ್ಕಟ್ಟುಗಳು

ಭೂಮಿ ಬಿಟ್ಟು ಮೇಲೇರಿದ್ದೆಲ್ಲ ಮತ್ತೆ ಭೂಮಿಯ ವಾಸ್ತವಕ್ಕೆ ಇಳಿದು ಬರಲೇಬೇಕು! ಮುಕ್ತ ಮಾರುಕಟ್ಟೆಯ ಹೆಸರಿನಲ್ಲಿ ಎಲ್ಲರ ಅಗತ್ಯಗಳನ್ನು ನಿರ್ಲಕ್ಷಿಸಿ ಕೆಲವರ ಚಪಲಗಳನ್ನು ಪೂರೈಸುವ ಅಡ್ಡದಾರಿ ಹಿಡಿದ ವಿಶ್ವ ಆರ್ಥಿಕತೆ ತನ್ನ ವಾಸ್ತವ ಪ್ರಜ್ಞೆಯನ್ನು ಮರಳಿ ಪಡೆದುಕೊಳ್ಳುವಂತಹ ಆಘಾತವನ್ನು ಈಗ ಅನುಭವಿಸಿರುವುದು ಒಳ್ಳೆಯದಕ್ಕೇ ಎಂದು ನಾವು ಭಾವಿಸಬೇಕು. ಅಂತೂ ಈಗ ಜಗತ್ತಿನಾದ್ಯಂತ ಸರ್ಕಾರಗಳು ಮುಕ್ತ ಮಾರುಕಟ್ಟೆಯ ಅನಾಹುತಗಳಿಗೆ ಎಚ್ಚೆತ್ತುಕೊಂಡು, ದೇಶದ ಆರ್ಥಿಕತೆಯಲ್ಲಿ ಸರ್ಕಾರದ ಹಸ್ತಕ್ಷೇಪ ಮತ್ತು ನಿಯಂತ್ರಣಗಳ ಅಗತ್ಯಗಳನ್ನು ಮನಗಂಡಿವೆ. ಸಮಾಜವಾದದ ಕಾಲ ಮುಗಿಯಿತೆಂದು ಅವಸರದಲ್ಲಿ ಅಂದವರೀಗ ನಾಲಿಗೆ ಕಚ್ಚಿಕೊಳ್ಳ ತೊಡಗಿದ್ದಾರೆ!

ವಿಶ್ವ ಆರ್ಥಿಕತೆಯ ಬಲೂನು ಒಡೆದಿದೆ. ಕಳೆದ ಕೆಲವು ವರ್ಷಗಳಿಂದ ಒಂದೇ ಸಮನೆ ಊದುತ್ತಿದ್ದ ಈ ಬಲೂನಿನ ಅಂದ ಚೆಂದ, ಆಕಾಶ ಮಾರ್ಗದಲ್ಲಿನ ಅದರ ಹಾರಾಟದ ಬೆಡಗು ಬಿನ್ನಾಣಗಳನ್ನು ಕಂಡು ಕೇಕೆ ಹಾಕಿ ಚಪ್ಪಾಳೆ ತಟ್ಟಿ ಆನಂದಿಸುತ್ತಿದ್ದ ಹೊಸ ವಿಶ್ವ ಆರ್ಥಿಕತೆಯ ಮಕ್ಕಳು ಒಮ್ಮೆಗೇ ಬೆಪ್ಪು ಹಿಡಿದಂತೆ ನೆಲ ಕಚ್ಚಿ ಕೂತು ಬಿಟ್ಟಿವೆ. ಇಪ್ಪತ್ತು ದಿನಗಳ ಹಿಂದೆ ನ್ಯೂಯಾರ್ಕ್‌ನ ವಾಲ್‌ಸ್ಟ್ರೀಟ್‌ನಲ್ಲಿನ ಲೆಹ್‌ಮನ್ ಬ್ರದರ್ಸ್ ಬ್ಯಾಂಕ್ ದಿವಾಳಿಯಾದಾಗ ಹಿಡಿದ ಈ ಬೆಪ್ಪಿನಿಂದ ಅವರಿನ್ನೂ ಹೊರಬರಲಾಗಿಲ್ಲ! ಏಕೆಂದರೆ ಇದರ ಸರಣಿ ಪರಿಣಾಮವಾಗಿ ಅಮೆರಿಕಾದ ಹೆಚ್ಚು ಕಡಿಮೆ ಎಲ್ಲ ವಾಣಿಜ್ಯ ಬ್ಯಾಂಕುಗಳೂ ಕುಸಿದು ಬಿದ್ದಿವೆ. ಅಷ್ಟೇ ಅಲ್ಲ, ರಷ್ಯಾವೂ ಸೇರಿದಂತೆ ಯೂರೋಪಿನ ಎಲ್ಲ ಬ್ಯಾಂಕುಗಳ ನಗದು ಕೋಣೆಗಳ ಗೋಡೆಗಳೂ ಬಿರುಕು ಬಿಡತೊಡಗಿವೆ. ಈ ದೇಶಗಳ, ವಿಶೇಷವಾಗಿ ಅಮೆರಿಕಾದ 'ಉದ್ಯಮಿ'ಗಳ ಕೈಯಲ್ಲಿ ನಿಜವಾದ ಹಣ (ಅಂದರೆ ನಗದು) ಇಲ್ಲದೆ, ಜಾಗತಿಕ ಮಾರುಕಟ್ಟೆ ಹಾಳು ಬೀಳತೊಡಗಿದೆ. ಈ ವರ್ಷ ಅಮೆರಿಕಾದ ಅಭಿವೃದ್ಧಿ ದರ ಸೊನ್ನೆಯಾಗಿರುತ್ತದೆ ಎಂದು ಅಂತಾರಾಷ್ಟ್ರೀಯ ಹಣಕಾಸು ನಿಧಿಯೂ ಸೇರಿದಂತೆ ಜಾಗತಿಕ ಹಣಕಾಸು ಸಂಸ್ಥೆಗಳು ಮುನ್ಸೂಚನೆ ನೀಡಿ ಆತಂಕ

ಹುಟ್ಟಿಸಿವೆ. ಸೋವಿಯತ್ ಒಕ್ಕೂಟದ ಪತನಾನಂತರ ಮತ್ತು ಅದರ ಪರಿಣಾಮವಾಗಿ ಪ್ರತಿಪಾದಿಸಲ್ಪಟ್ಟ ಮುಕ್ತ ಮಾರುಕಟ್ಟೆ ಆರ್ಥಿಕ ನೀತಿಯ ಗುಳ್ಳೆ ಇಪ್ಪತ್ತೈದು ವರ್ಷಗಳ ನಂತರ ಒಡೆದು ಹೋಗಿದೆ! ಕಾರ್ಪೋರೇಟ್ ಬಂಡವಾಳಶಾಹಿಯ ಅನಿವಾರ್ಯತೆ ಮತ್ತು ಹಿರಿಮೆಯನ್ನು ಹಾಡಿ ಹೊಗಳುತ್ತಿದ್ದವರೆಲ್ಲರ ಬಾಯಿಗಳು ಸದ್ಯಕ್ಕೆ ಬಂದ್ ಆಗಿಬಿಟ್ಟಿವೆ...

ಈ ಎಲ್ಲ ಅನಾಹುತಕ್ಕೆ, ಅರ್ಥಶಾಸ್ತ್ರಜ್ಞರು ಜನ ಸಾಮಾನ್ಯರಿಗೆ ಅರ್ಥವಾಗದ toxic assets (ಅನುಮಾನಾಸ್ಪದ ಆಸ್ತಿಗಳು) sub prime market (ಅಭದ್ರ ಸಾಲಗಾರರ ವಲಯ), derivatives (ಅಗ್ಗದ ಹಣ ಸೃಷ್ಟಿ ಮಾಡುವ ಆರ್ಥಿಕ ಆಡಳಿತ ತಂತ್ರಗಳು), virtual money (ಲೆಕ್ಕ ಪುಸ್ತಕಗಳಲ್ಲಿನ–ಮಿಥ್ಯಾ–ಹಣ) ಇತ್ಯಾದಿ ಪಾರಿಭಾಷಿಕ ಪದಗಳ ಮೂಲಕ ವಿವರಣೆ ಕೊಡುವ ವ್ಯರ್ಥ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಆದರೆ ಆರ್ಥಿಕತೆಯನ್ನು ಹೀಗೆ ಜನ ಸಾಮಾನ್ಯರ ಅರಿವಿಗೆ ಸಿಕ್ಕದ ಹಾಗೆ ಜಟಿಲ, ಕುಟಿಲ ಮತ್ತು ಅಮೂರ್ತಗೊಳಿಸಿ ಬೆಳೆಸಿದ್ದರಿಂದಲೇ ಈ ದುರಂತ ಸಂಭವಿಸಿದೆ ಎಂದು ಯಾರಾದರೂ ಇಂದು ಹೇಳಿದರೆ ಅದನ್ನು ತಪ್ಪೆನ್ನಲಾಗದ ಪರಿಸ್ಥಿತಿ ಉಂಟಾಗಿದೆ. ಅರ್ಥಶಾಸ್ತ್ರದ ವಿಶ್ವಾಸಾರ್ಹತೆಯೇ ಅನುಮಾನಾಸ್ಪದವಾಗ ತೊಡಗಿದೆ. ಹಾಗಾಗಿಯೇ ಇಂದು, ಗಾಂಧಿ ಕಾಲದ ಎಷ್ಟೋ ವರ್ಷಗಳ ನಂತರ ಈ ಅಮೂರ್ತ ಅರ್ಥಶಾಸ್ತ್ರದ ಬದಲಿಗೆ ವಾಸ್ತವ ಮತ್ತು ಸರಳ ಅರ್ಥಶಾಸ್ತ್ರದ ಅಗತ್ಯದ ಮಾತುಗಳು ಕೇಳತೊಡಗಿವೆ.

ಇದೆಲ್ಲ ಆದದ್ದಾದರೂ ಹೇಗೆ? ಮತ್ತು ಏಕೆ? ಅಮೆರಿಕಾದಲ್ಲಿ ಮನೆ ಕೊಳ್ಳುವವರಿಗೆ ಬ್ಯಾಂಕುಗಳು ಅವರ ನಿಜವಾದ 'ಯೋಗ್ಯತೆ'ಯ ಅರಿವಿಲ್ಲದೆ ಸಾಲ ಕೊಟ್ಟಿದ್ದೇ ಈ ಮಹಾ ಕುಸಿತಕ್ಕೆ ಕಾರಣವೆಂದು ಹೇಳಲಾಗುತ್ತಿದೆ. ಆದರೆ ಇದು ನಂಬುವಂತಹ ಮಾತೇ? ಇದೊಂದು ನೆಪವಷ್ಟೆ. ಮನೆ ಸಾಲ ಪಡೆದವರು ಅವನ್ನು ತೀರಿಸಲಿಕ್ಕಾಗದಾಗ, ಅವುಗಳಿಗಾಗಿ ಸಾಲಗಾರರಿಂದ ಅಡ ಇರಿಸಿಕೊಳ್ಳಲಾಗಿದ್ದ ಆಸ್ತಿಗಳನ್ನು ಬ್ಯಾಂಕುಗಳು ಮಾರಲು ಹೋದಾಗ ಬೆಳಕಿಗೆ ಬಂದ ಸತ್ಯವೇ ಈ ಮಹಾಕುಸಿತಕ್ಕೆ ಕಾರಣವೆಂದು ಸೂಚಿಸಲಾಗುತ್ತಿದೆ. ವಾಸ್ತವವಾಗಿ ಆ ಆಸ್ತಿಗಳೆಲ್ಲವನ್ನು ಉತ್ಪ್ರೇಕ್ಷಿತ ದರಗಳಲ್ಲಿ ಮೌಲ್ಯಮಾಪನ ಮಾಡಲಾಗಿದ್ದು, ಇವೆಲ್ಲವೂ ಒಂದೇ ಏಟಿಗೆ ಮಾರುಕಟ್ಟೆಗೆ ಬಂದ ಪರಿಣಾಮವಾಗಿ ಅವುಗಳ ವಾಸ್ತವ ಮೌಲ್ಯವೂ ಕುಸಿದು ಬ್ಯಾಂಕುಗಳು ದಿವಾಳಿ ಏಳಬೇಕಾಯಿತೆಂದು ಈಗ ವಿವರಣೆ ನೀಡಲಾಗುತ್ತಿದೆ.

ಆದರೆ ನಿಜ ಸಂಗತಿಯೆಂದರೆ, ಮನೆ ಮಾರುಕಟ್ಟೆಯನ್ನು ಅವಾಸ್ತವ ಮಟ್ಟದಲ್ಲಿ ಮಂಡಿಸಿ ಅಪಾರ ಸಾಲದ ಅವಕಾಶಗಳನ್ನು ಕೃತಕವಾಗಿ ಸೃಷ್ಟಿಸಿದ ಅಡಮಾನ ಸಂಸ್ಥೆಗಳನ್ನು ಮನೆ ಸಾಲ ನೀಡಿಕೆಯ ಈ ಬ್ಯಾಂಕುಗಳು ನಂಬಿದ್ದೇ ಈ ಮಹಾ ದುರಂತಕ್ಕೆ ಕಾರಣವಾಗಿದೆ. ಅತಿ ಲಾಭದ ದುರಾಶೆಯಿಂದ ಈ ಬ್ಯಾಂಕುಗಳು ಅವಾಸ್ತವಿಕವೆನ್ನಿಸುವ ಬಡ್ಡಿ ದರಗಳಲ್ಲಿ ಇತರ ವಾಣಿಜ್ಯ ಬ್ಯಾಂಕುಗಳಿಂದ ಸಾಲ ಪಡೆದು, ಅದಕ್ಕೂ ಮೀರಿದ ಬಡ್ಡಿ ದರಗಳಲ್ಲಿ ಸಾಲ ವಿತರಿಸಿ ಮಣ್ಣು ಮುಕ್ಕಿವೆ ಹಾಗೂ ತಮಗೆ ಸಾಲ ಕೊಟ್ಟ

ಬ್ಯಾಂಕುಗಳಿಗೂ ಮಣ್ಣು ಮುಕ್ಕಿಸಿವೆ. ಅಷ್ಟೇ ಅಲ್ಲ, ಈ ಬ್ಯಾಂಕುಗಳಲ್ಲಿ ಹಣ ತೊಡಗಿಸಿದ್ದ ಅಥವಾ ವ್ಯವಹಾರ ಮಾಡುತ್ತಿದ್ದ ಭಾರತವೂ ಸೇರಿದಂತೆ ಅನೇಕ ದೇಶಗಳ ಬ್ಯಾಂಕುಗಳೂ ಈಗ ತೊಂದರೆಗೆ ಸಿಕ್ಕಿವೆ. ಈ ಮಹಾ ಕುಸಿತದಿಂದ ಅಮೆರಿಕಾವೊಂದರಲ್ಲೇ ಕೊಚ್ಚಿ ಹೋಗಿರುವ ಹಣ ಮೂರು ಶತಕೋಟಿ ಯಷ್ಟು ದಶ ಲಕ್ಷ(ಟ್ರಿಲ್ಲಿಯನ್) ಡಾಲರ್‌ಗಳಂತೆ! ನಿಮ್ಮ ಕಲ್ಪನೆಗೆ ಸಿಗುವಂತಿದೆಯೇ?

ಇದೆಲ್ಲದರ ಜಾಗತಿಕ ಪರಿಣಾಮವೆಂದರೆ, ಹಣ ಕಳೆದುಕೊಂಡಿರುವ ಯೂರೋಪಿನ ಮತ್ತು ಅಮೆರಿಕಾದ ಉದ್ಯಮಿಗಳು ಮತ್ತು ಹಣಕಾಸು ಸಂಸ್ಥೆಗಳು ಈಗ ದಾರಿಗಾಣದೆ ತಮ್ಮ ಹಣಕಾಸಿನ ಅಗತ್ಯಗಳಿಗಾಗಿ ಇತರ ದೇಶಗಳ ಷೇರುಪೇಟೆಯಲ್ಲಿ ತಾವು ಹೂಡಿದ್ದ ಹಣವನ್ನು ವಾಪಸ್ ಪಡೆಯಲಾರಂಭಿಸಿರುವುದು. ಇದರಿಂದಾಗಿ ಕಳೆದ ಹದಿನೈದು ದಿನಗಳಲ್ಲಿ ನಮ್ಮ ಷೇರು ಪೇಟೆಯಲ್ಲಿ ರಕ್ತದ ಕೋಡಿ ಹರಿದಿದೆ. ನಮ್ಮ ರಿಸರ್ವ್ ಬ್ಯಾಂಕು ಕೆಲವು ಆಡಳಿತಾತ್ಮಕ ಕ್ರಮಗಳ ಮೂಲಕ ಪೇಟೆಗೆ ಹೆಚ್ಚು ಹಣವನ್ನು ನಗದಿನ ರೂಪದಲ್ಲಿ ಬಿಡುಗಡೆ ಮಾಡಿತಾದರೂ, ಷೇರುಪೇಟೆ ಅರ್ಧದಷ್ಟು ಕುಸಿದಿದೆ. ಭಾರತದ ಸಣ್ಣ ಮತ್ತು ದೊಡ್ಡ ಹೂಡಿಕೆದಾರರಿಬ್ಬರೂ, ಏನಾಗುತ್ತಿದೆ ಎಂದು ಯೋಚಿಸುವ ಮುನ್ನವೇ ಅವರ ಬಹಳಷ್ಟು ಹಣ-ಸದ್ಯಕ್ಕೆ ನಾಲ್ಕು ಟ್ರಿಲಿಯನ್(ದಶಕೋಟಿ ದಶ ಲಕ್ಷಗಳಷ್ಟು) ರೂಪಾಯಿಗಳಷ್ಟು-ಕೊಚ್ಚಿ ಹೋಗಿದೆ. ಒಮ್ಮೆಗೇ ಹೀಗೆ ಕೋಟ್ಯಾಂತರ ರೂಪಾಯಿಗಳನ್ನು ಕಳೆದುಕೊಂಡ ದೊಡ್ಡ ಹೂಡಿಕೆದಾರರು ಆತ್ಮಹತ್ಯೆಯ ದಾರಿ ಹಿಡಿದಿದ್ದರೆ, ಮಧ್ಯಮ ಮತ್ತು ಕೆಳ ಮಧ್ಯಮ ವರ್ಗಗಳ ಸಣ್ಣ ಹೂಡಿಕೆದಾರರರು ತಮ್ಮೆಲ್ಲ 'ಉಳಿತಾಯ'ದ ಬಹಳಷ್ಟನ್ನು ಈ 'ಸಟ್ಟಾ ವ್ಯಾಪಾರ'ದಲ್ಲಿ ಕಳೆದುಕೊಂಡು ದಿಗ್ಭ್ರಾಂತರಾಗಿದ್ದಾರೆ.

ಹೌದು, ಇದು ಸಟ್ಟಾ ವ್ಯಾಪಾರವೇ. ನಮ್ಮ ಷೇರುಪೇಟೆ ಮಾತ್ರವಲ್ಲ, ಇಡೀ ವಿಶ್ವ ಆರ್ಥಿಕತೆಯೇ ಸಟ್ಟಾ ವ್ಯಾಪಾರವಾಗಿ ಹೋಗಿದೆ. ಅರ್ಥಶಾಸ್ತ್ರದ ಮೂಲ ಕಲ್ಪನೆಗಳೆನಿಸಿದ ದುಡಿಮೆ, ಉತ್ಪಾದನೆ ಮತ್ತು ಬಳಕೆಯ ನಡುವಣ ಸಮೀಕರಣವೇ ಅಸ್ತವ್ಯಸ್ತಗೊಡು, ಅವು ಮಧ್ಯವರ್ತಿಗಳ ಸಟ್ಟಾ ವ್ಯಾಪಾರ ಲೋಕದಲ್ಲಿ ಅಪ್ರಸ್ತುತವಾಗಿ ಹೋಗಿವೆ. ಅರ್ಥಶಾಸ್ತ್ರವೆಂದರೆ ಬರೀ ಲಾಭಕೋರತನದ ಶಾಸ್ತ್ರವಾಗಿ ಪರಿವರ್ತಿತವಾಗಿ, ಆ ಲಾಭಕೋರತನವನ್ನು ಹೆಚ್ಚಿಸುವುದಷ್ಟೇ ಅಲ್ಲ, ಅದಕ್ಕೊಂದು ಅರ್ಥಶಾಸ್ತ್ರೀಯ ಮಾನ್ಯತೆ ನೀಡುವ ಕೈಗಾರಿಕೆಯೇ 'ಸೇವೆ' (Services) ಎಂಬ ಹೆಸರಿನಲ್ಲಿ ವಿಜೃಂಭಿಸುತ್ತಿದೆ. ಇದೇ ಇಂದು ವಿಶ್ವ ಆರ್ಥಿಕತೆಯ ಮಹಾ ಕುಸಿತಕ್ಕೆ ಕಾರಣವಾಗಿದೆ. ಇದು ಈಗ ಅಮೆರಿಕಾದ ಗೃಹ ಸಾಲ 'ಸೇವಾ' ವ್ಯವಸ್ಥೆಯ ವೈಫಲ್ಯದಿಂದ ಎದ್ದು ಕಾಣುವಂತಾಗಿದೆ. ಅಮೆರಿಕಾದ ಅರ್ಥಶಾಸ್ತ್ರಜ್ಞರ ಪ್ರಕಾರ ಈ ವೈಫಲ್ಯಕ್ಕೆ ಕಾರಣ, ಈ ಸೇವಾ ಸಂಸ್ಥೆಗಳು ಲಾಭವೊಂದನ್ನೇ ಮುಖ್ಯ ಗುರಿ ಮಾಡಿಕೊಂಡು ಆರ್ಥಿಕತೆಯೊಂದರ ಮೂಲ ಸತ್ಯಗಳ ಅರಿವೇ ಮರೆಯಾಗುವಷ್ಟರ ಮಟ್ಟಿಗೆ, ತಮ್ಮದೇ ಸಾಂಸ್ಥಿಕ ಸ್ವಾಯತ್ತತೆಯನ್ನೂ, ಪ್ರತ್ಯೇಕತೆಯನ್ನೂ ಸ್ಥಾಪಿಸಿಕೊಳ್ಳಲು ಅವಕಾಶ ಉಂಟಾದದ್ದು.

ಇದುವರೆಗೆ ಇದನ್ನು ಮಾರುಕಟ್ಟೆಯ 'ಮುಕ್ತತೆ'ಯೆಂದು ಗೌರವಯುತವಾಗಿ ಕರೆಯಲಾಗುತ್ತಿತ್ತು. ಈ ಮುಕ್ತ ವಾತಾವರಣವೇ ಈ ಸೇವಾ ಮಧ್ಯವರ್ತಿಗಳು, ಹಿತಾಸಕ್ತ ಗುಂಪುಗಳು (cartels) ಮತ್ತು hedge funds (ಕಳ್ಳ ನಿಧಿ)ಗಳ ಮೂಲಕ ಮಾರುಕಟ್ಟೆಯಲ್ಲಿ ಕೃತಕ ಏರಿಳಿತಗಳನ್ನು ಸೃಷ್ಟಿಸುತ್ತಾ ಲಾಭಗಳ ಗುಡ್ಡೆಗಳನ್ನೇ ಬಾಚಿಕೊಳ್ಳುವುದಕ್ಕೆ ಅನುವು ಮಾಡಿಕೊಟ್ಟಿದ್ದುದು. ಇದು ಇಂದು ಗೃಹ ಸಾಲ ವ್ಯವಸ್ಥೆಯ ದಿವಾಳಿಯ ರೂಪದಲ್ಲಿ ತನ್ನ ಅತಿಯನ್ನು ಮುಟ್ಟಿ, ವಿಶ್ವ ಆರ್ಥಿಕತೆಯ ಮಹಾ ಕುಸಿತಕ್ಕೆ ಕಾರಣವಾಗಿದೆ. ಇದರಲ್ಲಡಗಿದ ಅನೈತಿಕ ವ್ಯಾಪಾರ ಪ್ರವೃತ್ತಿಗಳನ್ನು ಗುರುತಿಸಲು ನಿರಾಕರಿಸಿರುವ ಬಂಡವಾಳವಾದಿಗಳು, ಇದನ್ನೀಗ ಬಂಡವಾಳವಾದದ ಹೊಸ ಬಿಕ್ಕಟ್ಟು ಎಂಬ ಗೌರವಯುತ ಹೆಸರಿನಲ್ಲಿ ಕರೆಯಲಾರಂಭಿಸಿದ್ದಾರೆ! ಆದರೆ ಇಲ್ಲಿನ ಸಮಾಧಾನದ ಸಂಗತಿಯೆಂದರೆ, ಈ ಬಿಕ್ಕಟ್ಟಿನ ಸಂದರ್ಭದಲ್ಲಿ ಬಂಡವಾಳದಾರರರು ಆತ್ಮಶೋಧನೆ ಮಾಡಿಕೊಳ್ಳಬೇಕಾಗಿದೆಯೆಂದೂ ಇವರು ಕರೆಕೊಡಲಾರಂಭಿಸಿರುವುದು. ಇತ್ತೀಚಿನ ಇಬ್ಬರು ನೊಬೆಲ್ ಪ್ರಶಸ್ತಿ ಪುರಸ್ಕೃತ ಅರ್ಥಶಾಸ್ತ್ರರಾದ ಜೋಸೆಫ್ ಸ್ಟಿಗ್ಲಿಟ್ಜ್ ಮತ್ತು ಪಾಲ್ ಕ್ರುಗ್‌ಮನ್ ಅವರು ಒಂದು ಹೆಜ್ಜೆ ಮಂದೆ ಹೋಗಿ, ಬಂಡವಾಳವಾದಿ ಅರ್ಥಶಾಸ್ತ್ರಜ್ಞರು ಎಡಪಂಥೀಯ ರಾಜಕಾರಣದಿಂದ ಕೆಲವು ಪಾಠಗಳನ್ನಾದರೂ ಕಲಿಯುವ ಕಾಲವೀಗ ಬಂದಿದೆ ಎನ್ನ ತೊಡಗಿದ್ದಾರೆ. ಸಮಾಜವಾದವೆಂದರೆ ಸಮಾಜ ವಿರೋಧಿ ತತ್ವವೆಂಬಂತೆ ಹೌಹಾರುತ್ತಿದ್ದ ಅಮೆರಿಕಾದ ಅಭಿಪ್ರಾಯ ಮುಖಂಡರು, ಈಗ ಕ್ರುಗ್‌ಮನ್ ಅವರನ್ನು 'ಸಮಾಜವಾದಿ ಅರ್ಥಶಾಸ್ತ್ರಜ್ಞ' ಎಂದು ಅರ್ಧ ಹೆಮ್ಮೆಯ ಮತ್ತು ಅರ್ಧ ಪಶ್ಚಾತ್ತಾಪದ ದನಿಯಲ್ಲಿ ಕರೆಯತೊಡಗಿದ್ದಾರೆ!

ಆದರೆ, ಮುಕ್ತ ಮಾರುಕಟ್ಟೆಯ ಮುಕ್ತ ಬೆಂಬಲಿಗರಾದ ನಮ್ಮ ಪ್ರಧಾನ ಮಂತ್ರಿ ಮತ್ತು ಹಣಕಾಸಿನ ಮಂತ್ರಿಯ ಮುಖಗಳನ್ನು ನೋಡಿ. ಅವರು ದೇಶದ ಜನತೆಗೆ ಆತಂಕ ಪಡುವ ಅಗತ್ಯವಿಲ್ಲ, ನಮ್ಮ ದೇಶದ ಆರ್ಥಿಕತೆಯ ಮೂಲ ನೆಲಗಟ್ಟು ಸುಭದ್ರವಾಗಿದೆ ಎಂದು ಆಶ್ವಾಸನೆ ಕೊಡುವುದರಲ್ಲೇ ಸುಸ್ತಾಗಿ ಹೋಗಿದ್ದಾರೆ. ಯಾವುದು ತಮ್ಮ ಹೊಸ ಆರ್ಥಿಕ ನೀತಿಯ ಯಶಸ್ಸಿನ ಸಂಕೇತವೆಂದು ಇವರು ಈವರೆಗೆ ಹೇಳುತ್ತಿದ್ದರೋ, ಆ ಷೇರು ಪೇಟೆಯ ಸಮೃದ್ಧಿ ಜನರ ಕಣ್ಮುಂದೆಯೇ ನಾಶವಾಗ ತೊಡಗಿರುವುದು ಅವರ ಧೃತಿಗೆಡಿಸಿದಂತಿದೆ. ಈ ಹೊಸ ಆರ್ಥಿಕತೆಯ ಹರಿಕಾರರಾದ ಮನಮೋಹನಸಿಂಗರು ಈಗ ಇದ್ದಕ್ಕಿದ್ದಂತೆ ರಾಗ ಬದಲಿಸಿ, ಅಭಿವೃದ್ಧಿಗೊಂಡ ದೇಶಗಳು ಮತ್ತು ಐ.ಎಂ.ಎಫ್.ನಂತಹ ಜಾಗತಿಕ ಹಣಕಾಸು ಸಂಸ್ಥೆಗಳು ಅನುಸರಿಸಿದ ತಪ್ಪು ನೀತಿಗಳೇ ಈ ಮಹಾಕುಸಿತಕ್ಕೆ ಕಾರಣವೆಂದು ಅವುಗಳ ವಿರುದ್ಧ ಹರಿಹಾಯತೊಡಗಿದ್ದಾರೆ. ಈವರೆಗೆ ಅವರು ಆರ್ಥಿಕ ಸುಧಾರಣೆಗಳ (ಅಂದರೆ ಸರ್ಕಾರದ ನಿಯಂತ್ರಣ ಮತ್ತು ಮೇಲ್ವಿಚಾರಣಾ ಕ್ರಮಗಳ ಸಡಿಲಿಕೆ) ಮತ್ತು ಅಂತಾರಾಷ್ಟ್ರೀಯ ಬಂಡವಾಳ ಮಾರುಕಟ್ಟೆಯಲ್ಲಿ ರೂಪಾಯಿಯ ಸಂಪೂರ್ಣ ಮೌಲ್ಯಪರಿವರ್ತನೆಯ ಕಡೆಗಿನ ಕ್ರಮಗಳ ವೇಗ ಕುಗ್ಗುತ್ತಿರುವ ಬಗ್ಗೆ ಆತಂಕ ವ್ಯಕ್ತಪಡಿಸುತ್ತಿದ್ದರು. ಇದಕ್ಕೆ ಎಡಪಂಥೀಯರ

ಅಡೆ ತಡೆ ರಾಜಕಾರಣವೇ ಕಾರಣವೆಂದು ಹೇಳುತ್ತಾ ಮಧ್ಯಮ ವರ್ಗಗಳ ಸಹಾನುಭೂತಿ ಗಿಟ್ಟಿಸುವಲ್ಲಿ ಯಶಸ್ವಿಯಾಗಿದ್ದರು. ಆದರೆ ಅವರೀಗ, ಪಶ್ಚಿಮದ ದೇಶಗಳ ಸರ್ಕಾರಗಳು ತಮ್ಮ ಆರ್ಥಿಕತೆಗಳನ್ನು ಸಕಾಲಿಕ ಹಸ್ತಕ್ಷೇಪಗಳ ಮೂಲಕ ಸಮರ್ಪಕವಾಗಿ ಮೇಲ್ವಿಚಾರಣೆಗೆ ಒಳಪಡಿಸದಿದ್ದುದೇ ಇಂದಿನ ದುರಂತಕ್ಕೆ ಕಾರಣವೆಂದು ವಿಶ್ಲೇಷಿಸತೊಡಗಿದ್ದಾರೆ! ಅಷ್ಟೇ ಅಲ್ಲ, ಅಭಿವೃದ್ಧಿಶೀಲ ರಾಷ್ಟ್ರಗಳು ವಿಶ್ವ ಆರ್ಥಿಕತೆಯೊಡನೆ ಅತಿಯಾಗಿ ಜೋಡಣೆಗೊಳ್ಳಲು ಯತ್ನಿಸಬಾರದೆಂದು ಎಚ್ಚರಿಸಿದ್ದಾರೆ! ಎಂತಹ ಜ್ಞಾನೋದಯ!

ಹೀಗೆ ತಲೆಕೆಳಗಾಗುತ್ತಿರುವ ವಿಶ್ವ ಆರ್ಥಿಕತೆಯ ಪರಿಣಾಮಗಳು ಭಾರತದ ಆರ್ಥಿಕತೆ ಮೇಲೆ ಹೆಚ್ಚಿನ ಪರಿಣಾಮ ಬೀರುವುದಿಲ್ಲ ಎಂದು ಭಾರತದ ಅರ್ಥಶಾಸ್ತ್ರಜ್ಞರೂ ಸೇರಿದಂತೆ ಜಾಗತಿಕ ಅರ್ಥಶಾಸ್ತ್ರಜ್ಞರೇನೋ ಹೇಳುತ್ತಿದ್ದಾರೆ. ಆದರೆ ಹೆಚ್ಚಿನ ಪರಿಣಾಮವೆಂದರೇನು ಎಂಬುದನ್ನು ಅವರು ನಿರ್ದಿಷ್ಟವಾಗಿ ವಿವರಿಸುತ್ತಿಲ್ಲ. ಮನಮೋಹನಸಿಂಗ್ ಮತ್ತು ಅವರ ಪರಿವಾರದವರ ಕೈಲಾದ ಎಲ್ಲ ಪ್ರಯತ್ನಗಳ ಹೊರತಾಗಿಯೂ ಅದೃಷ್ಟವಶಾತ್, ಗಾಂಧಿ ಯುಗದ ಪಳೆಯುಳಿಕೆಯಂತೆ ಸಣ್ಣ ಪುಟ್ಟ ಪ್ರಮಾಣದಲ್ಲಾದರೂ ಇನ್ನೂ ಉಳಿದುಕೊಂಡು ಪ್ರವಾಹದ ವಿರುದ್ಧ ಈಜುವ ಆತ್ಮಸಾಕ್ಷಿ ಉಳಿಸಿಕೊಂಡಿರುವ ರಾಜಕೀಯ ಪಕ್ಷಗಳು ಮತ್ತು ವ್ಯಕ್ತಿಗಳ ಒತ್ತಡಗಳಿಂದಾಗಿ ಭಾರತದ ಆರ್ಥಿಕತೆ ವಿಶ್ವ ಆರ್ಥಿಕತೆಯೊಂದಿಗೆ ತನ್ನನ್ನು ಸಂಪೂರ್ಣ ಬೆಸೆದುಕೊಂಡಿಲ್ಲ. ಚೀನಾದ ಬಹಳಷ್ಟು ಬ್ಯಾಂಕುಗಳಂತೆ ನಮ್ಮ ಬ್ಯಾಂಕುಗಳು ಜಾಗತಿಕ ವಾಣಿಜ್ಯ ಬ್ಯಾಂಕುಗಳೊಂದಿಗೆ ಅಷ್ಟಾಗಿ ವ್ಯಾಹಹಾರಿಕ ಸಂಬಂಧಗಳನ್ನು ಹೊಂದಿಲ್ಲ. ಹಾಗೇ, ಚೀನಾದಂತೆ ನಮ್ಮದು ಪ್ರಧಾನವಾಗಿ ರಫ್ತು ಆಧಾರಿತ ಆರ್ಥಿಕತೆಯಲ್ಲ. ಹಾಗಾಗಿ, ಸದ್ಯದ ವಿಶ್ವ ಆರ್ಥಿಕ ಕುಸಿತದಿಂದಾಗಿ ಚೀನಾದ ಮೇಲೆ ಆದಷ್ಟು ದುಷ್ಪರಿಣಾಮ ನಮ್ಮ ಮೇಲೆ ಆಗದು ಎಂದು ಹೇಳಲಾಗುತ್ತಿದೆ. ಅಭಿವೃದ್ಧಿಶೀಲ ದೇಶವೊಂದು ಆರ್ಥಿಕತೆಯನ್ನು ಹೇಗೆ ಬೆಳಸಬೇಕು ಎಂಬುದನ್ನು ಚೀನಾವನ್ನು ನೋಡಿ ಕಲಿಯಿರಿ ಎಂದು ಹೇಳುತ್ತಿದ್ದವರು ಸಹಜವಾಗಿಯೇ ಸದ್ಯಕ್ಕೆ ಬಾಯಿ ಮುಚ್ಚಿಕೊಂಡಿದ್ದಾರೆ.

ಆದರೆ ನಮ್ಮ ಷೇರುಪೇಟೆ ಕುಸಿತದ ಪರಿಣಾಮವಾಗಿ ಡಾಲರ್ ಎದುರು ರೂಪಾಯಿ ಹಿಂದೆಂದೂ ಕುಸಿಯದಷ್ಟು ಪ್ರಮಾಣದಲ್ಲಿ ಕುಸಿದಿರುವುದರಿಂದಾಗಿ, ಈವರೆಗೆ ಎಲ್ಲ ಅಂತಾರಾಷ್ಟ್ರೀಯ ಆರ್ಥಿಕ ಅನಾಹುತಗಳ ಎದುರು ನಮಗೆ ರಕ್ಷಣಾ ಗೋಡೆಯಂತಿದ್ದ ನಮ್ಮ ವಿದೇಶಿ ವಿನಿಮಯ ದಾಖಲೆ ಸಂಗ್ರಹ ಈಗ ಇಳಿಗತಿಯಲ್ಲಿ ಸಾಗತೊಡಗಿದ್ದು ಆತಂಕ ಹುಟ್ಟಿಸಿದೆ. ಇದರ ಪರೋಕ್ಷ ಪರಿಣಾಮವಾಗಿ ನಮ್ಮ ಔದ್ಯಮಿಕ ವ್ಯಾಪಾರ ವಹಿವಾಟುಗಳೂ ಇಳಿಗತಿಗೆ ಈಡಾಗಿವೆ. ನಮ್ಮ ಆರ್ಥಿಕತೆಗೆ ಹೊಸ ಚೈತನ್ಯ ನೀಡತೊಡಗಿದ್ದ ರಿಯಲ್ ಎಸ್ಟೇಟ್, ಗಣಿ ಉದ್ಯಮ, ಮಾಹಿತಿ ತಂತ್ರಜ್ಞಾನ, ಹೊರಗುತ್ತಿಗೆ, ಪ್ರವಾಸೋದ್ಯಮ ಇತ್ಯಾದಿ ವಲಯಗಳ ಲಾಭಾಂಶ ತೀವ್ರ ಇಳಿಗತಿಗೆ ಸಿಕ್ಕಿವೆ. ಈಗಾಗಲೇ ಅನೇಕ ಸುಪ್ರಸಿದ್ಧ ಕಂಪನಿಗಳು ತಮ್ಮ ನೌಕರ ಬಲವನ್ನು ಕುಗ್ಗಿಸುವ ಪ್ರಯತ್ನದಲ್ಲಿವೆ. ಅಮೆರಿಕಾ ಮತ್ತು ಯೂರೋಪಿನಿಂದ ಕೆಲಸ ಕಳೆದುಕೊಂಡ

ಭಾರತೀಯರು ವಾಪಸಾಗತೊಡಗಿದ್ದಾರೆ. ಇದರ ದೀರ್ಘ ಪರಿಣಾಮಗಳನ್ನು ಈಗಲೇ ಊಹಿಸಲಾಗವುದಿಲ್ಲವಾದರೂ. ಒಂದಂತೂ ನಿಜ. ಈ ಹತ್ತು ವರ್ಷಗಳಲ್ಲಿ ಭಾರತ ಕಂಡ 'ಧಾಂಧೂಂ' ಆರ್ಥಿಕತೆ ತನ್ನ ಅಸಹಜ ಭಾರದಿಂದಲೇ ಕುಸಿಯತೊಡಗಿದೆ. ಏರಿದ್ದ ಆರ್ಥಿಕತೆಯ ನಿಶೆ ಇಳಿಯತೊಡಗಿದೆ. ಶ್ರೀಮಂತರಿಗೆ ಮತ್ತು ಮಧ್ಯಮ ವರ್ಗದವರಿಗೆ ಅತಿ ಲಾಭ ತಂದುಕೊಟ್ಟ ಸರಕಿನ ಈ ಆರ್ಥಿಕತೆ, ಬಡವರನ್ನು ಮತ್ತಷ್ಟು ಅನಾಥರನ್ನಾಗಿ ಮಾಡಿ ತನ್ನ ಹೆಜ್ಜೆಗಳನ್ನು ಹಿಂದಿಡುತ್ತಿರುವಂತೆ ತೋರುತ್ತಿದೆ.

ಈ ಬಗ್ಗೆ ಹೆಚ್ಚು ದುಃಖ ಪಡುವ ಅಗತ್ಯವಿಲ್ಲ. ಭೂಮಿ ಬಿಟ್ಟು ಮೇಲೇರಿದ್ದೆಲ್ಲ ಮತ್ತೆ ಭೂಮಿಯ ವಾಸ್ತವಕ್ಕೆ ಇಳಿದು ಬರಲೇಬೇಕು! ಮುಕ್ತ ಮಾರುಕಟ್ಟೆಯ ಹೆಸರಿನಲ್ಲಿ ಎಲ್ಲರ ಅಗತ್ಯಗಳನ್ನು ನಿರ್ಲಕ್ಷಿಸಿ ಕೆಲವರ ಚಪಲಗಳನ್ನು ಪೂರೈಸುವ ಅಡ್ಡದಾರಿ ಹಿಡಿದ ವಿಶ್ವ ಆರ್ಥಿಕತೆ ತನ್ನ ವಾಸ್ತವ ಪ್ರಜ್ಞೆಯನ್ನು ಮರಳಿ ಪಡೆದುಕೊಳ್ಳುವಂತಹ ಆಘಾತವನ್ನು ಈಗ ಅನುಭವಿಸಿರುವುದು ಒಳ್ಳೆಯದಕ್ಕೇ ಎಂದು ನಾವು ಭಾವಿಸಬೇಕು. ಅಂತೂ ಈಗ ಜಗತ್ತಿನಾದ್ಯಂತ ಸರ್ಕಾರಗಳು ಮುಕ್ತ ಮಾರುಕಟ್ಟೆಯ ಅನಾಹುತಗಳಿಗೆ ಎಚ್ಚೆತ್ತುಕೊಂಡು, ದೇಶದ ಆರ್ಥಿಕತೆಯಲ್ಲಿ ಸರ್ಕಾರದ ಹಸ್ತಕ್ಷೇಪ ಮತ್ತು ನಿಯಂತ್ರಣಗಳ ಅಗತ್ಯಗಳನ್ನು ಮನಗಂಡಿವೆ. ಸಮಾಜವಾದದ ಕಾಲ ಮುಗಿಯಿತೆಂದು ಅವಸರದಲ್ಲಿ ಅಂದವರೀಗ ನಾಲಿಗೆ ಕಚ್ಚಿಕೊಳ್ಳತೊಡಗಿದ್ದಾರೆ!

ಮುಕ್ತ ಮಾರುಕಟ್ಟೆ ಎಂದರೆ ಲಾಭಕೋರ ಬಂಡವಾಳವಾದದ ಅನಿಯಂತ್ರಿತ ಮತ್ತು ಅನೈತಿಕ ಬೆಳವಣಿಗೆಯಾಗಿದೆ. ಅದು ಬರೀ ಹಣದ ವ್ಯವಹಾರವಾಗಿ, ಮಾನವೀಯ ಸಂದರ್ಭದ ಆಯಾಮವನ್ನೇ ಕಳೆದುಕೊಂಡು ಮನುಷ್ಯನನ್ನು ನೈತಿಕವೂ ಸೇರದಂತೆ ಎಲ್ಲ ರೀತಿಯ ದಿವಾಳಿಯೆಡೆಗೆ ಕೊಂಡೊಯ್ಯುವುದು ಎಂಬುದೀಗ ಸಾಬೀತಾಗಿದೆ. ಹಾಗೇ ಇಂತಹ ಮಾರುಕಟ್ಟೆಯ ತತ್ವ ಚಾಲ್ತಿಗೆ ಬಂದುದೂ, ಸರ್ಕಾರೀ ಹಸ್ತಕ್ಷೇಪದ ವಿಪರೀತ ಪರಿಣಾಮಗಳಿಗೆ ದಾರಿ ಮಾಡಿಕೊಟ್ಟ ಹುಸಿ-ಸಮಾಜವಾದವೊಂದರ ವೈಫಲ್ಯದಿಂದಲೇ ಎಂಬುದನ್ನೂ ನಾವು ಈಗ ಅರಿಯಬೇಕಿದೆ. ಹಾಗಾಗಿ ಇಂದು ಅಗತ್ಯವಾಗಿರುವುದು, ಇವೆರಡೂ ಅನುಭವಗಳಿಂದ ಪಾಠ ಕಲಿತು ರೂಪಿತವಾಗಬೇಕಾದ ಒಂದು ಮಧ್ಯಮ ಮಾರ್ಗ. ಇದು ಬಂಡವಾಳವನ್ನು ಒಂದು ಮಾನವ ಸಂದರ್ಭದಲ್ಲಿ ಉಳಿಸಿ, ಬೆಳೆಸಬಲ್ಲ ವಿಕೇಂದ್ರೀಕೃತ ಅರ್ಥ ವ್ಯವಸ್ಥೆಯಾಗಿದ್ದೀತು. ಇದರ ರಾಜಕೀಯ ರೂಪಗಳನ್ನು ನಾವಿನ್ನೂ ಆವಿಷ್ಕರಿಸಿಕೊಳ್ಳಬೇಕಿದೆ. ಅದಕ್ಕೆ, ಭಾರತದ ಮಟ್ಟಿಗೆ ಗಾಂಧಿ ಮತ್ತು ಲೋಹಿಯಾ ವಿಚಾರಗಳು ಸ್ಫೂರ್ತಿಯಾದಾವು ಎಂಬುದು ನನ್ನ ನಂಬಿಕೆ.

(೭ ನವೆಂಬರ್, ೨೦೦೮)

■

ಪ್ರಗತಿಯ ಇನ್ನೊಂದು ಹೆಸರು ಹಿಂಸೆ?

ಯಾರು ಹೇಳಿದರು, ನಮ್ಮ ಆದಿವಾಸಿಗಳು ಇನ್ನೂ ಮುಗ್ಧ ರೆಂದು? ಯಾರು ಹೇಳಿದರು ನಮ್ಮ ನಗರವಾಸಿಗಳು ಸುಸಂಸ್ಕೃತರೆಂದು? ನಾವು ಈವರೆಗೆ ನಮ್ಮ ರಾಜಕಾರಣವನ್ನು ಹೇಗೆ ಕಟ್ಟಿಕೊಂಡು ಬಂದಿದ್ದೇವೆಂದರೆ, ಅದು ಹುಟ್ಟಿಸುವ 'ಅಭಿವೃದ್ಧಿ'ಯ ಹಪಾಹಪಿ ಎಲ್ಲರ ಎಲ್ಲ ರೀತಿಯ ಮುಗ್ಧತೆಗಳನ್ನೂ, ಸಂಸ್ಕೃತಿಗಳನ್ನೂ ನಾಶ ಮಾಡಿಬಿಟ್ಟಿದೆ. ಎಲ್ಲರ ಮೂಲ ಅಸ್ಮಿತೆಗಳೂ, ಬೇರುಗಳೂ ಕಳಚಿಕೊಳ್ಳತೊಡಗಿ, ಇಡೀ ಜನಸ್ತೋಮವೇ ಅಸ್ತಿತ್ವದ ಅಭದ್ರತೆಯ ರೋಗಕ್ಕೆ ತುತ್ತಾಗತೊಡಗಿದೆ. ಪ್ರಗತಿಗೆ ಇನ್ನೊಂದು ಹೆಸರು ಹಿಂಸೆ ಎಂಬಂತಾಗಿದೆ...

ಉತ್ತರ ಪ್ರದೇಶದಲ್ಲಿ ಮತ್ತೆ ಹಿಂಸೆ ತಾಂಡವವಾಡಿದೆ. ಈ ಬಾರಿ ರಾಜ್ಯದ ಮೂರು ಮುಖ್ಯ ಕೇಂದ್ರಗಳ ನ್ಯಾಯಾಲಯಗಳ ಆವರಣಗಳಲ್ಲಿಯೇ ಉಗ್ರರು ತಮ್ಮ ಪ್ರತಾಪ ಮೆರೆದಿದ್ದಾರೆ. ಲಕ್ನೊ, ವಾರಾಣಾಸಿ ಹಾಗೂ ಫೈಜ಼ಾಬಾದ್ ನಗರಗಳಲ್ಲಿ ಸರಿ ಸುಮಾರು ಒಂದೇ ವೇಳೆಗೆ ಸಂಭವಿಸಿದ ಸೈಕಲ್ ಬಾಂಬ್ ಸ್ಫೋಟಗಳಲ್ಲಿ ೧೫ ಜನ ಸತ್ತಿದ್ದಾರೆ. ನೂರಾರು ಜನ ಗಾಯಗೊಂಡಿದ್ದಾರೆ. ಎಂದಿನಂತೆ ವಿಚಾರಣೆ ಆರಂಭವಾಗಿದೆ. ಶಂಕಿತರರ ಅಂದಾಜು ಚಿತ್ರಗಳನ್ನು ಬಿಡುಗಡೆ ಮಾಡಲಾಗಿದೆ. ಕೇಂದ್ರ ಗೃಹ ಮಂತ್ರಿ ಎಂದಿನ ಶೈಲಿಯಲ್ಲಿ ಉಗ್ರರನ್ನು ಮಟ್ಟ ಹಾಕುವ ಮಾತುಗಳನ್ನು ಪುನರುಚ್ಚರಿಸಿದ್ದಾರೆ. ಮತ್ತೆ ಎಂದಿನಂತೆ ಗುಪ್ತಚರ ವಿಭಾಗದ ವೈಫಲ್ಯದ ಮಾತುಗಳನ್ನಾಡಲಾಗುತ್ತಿದೆ. ಮತ್ತೂ ಎಂದಿನಂತೆ, ಮೂರೂ ನಗರಗಳು ಸಾಮಾನ್ಯ ಸ್ಥಿತಿಗೆ ಮರಳಿ ಜನಜೀವನ ಎಂದಿನಂತೆ ಸಾಗಿದೆ!

ಮತ್ತೆ ಎಲ್ಲವೂ ಮರೆತು ಹೋಗುತ್ತದೆ, ಮತ್ತೊಂದು ಸ್ಫೋಟ ಸಂಭವಿಸುವವರೆಗೆ. ಆಧುನಿಕ ಬದುಕು ಹಿಂಸೆಯನ್ನು ತನ್ನ ಅನಿವಾರ್ಯ ಹಾಗೂ ಅವಿಭಾಜ್ಯ ಅಂಗವೆಂದು ಒಪ್ಪಿಕೊಂಡಂತೆ ತೋರುತ್ತಿದೆ. ರಾಷ್ಟ್ರ ಈ ಹಿಂಸೆಯನ್ನು ಹೆಚ್ಚೆಚ್ಚು ಭದ್ರತಾ ಕ್ರಮಗಳನ್ನು ತೆಗೆದುಕೊಳ್ಳುವ ಮೂಲಕವೇ ಎದುರಿಸುವ ತೀರ್ಮಾನಕ್ಕೆ ಬಂದಂತಿದೆ. ಏಕೆಂದರೆ, ಈ ಇತ್ತೀಚಿನ ಸ್ಫೋಟಗಳ ಬಗೆಗೆ ನಮ್ಮ ಆಡಳಿತ, ಪೋಲೀಸು ಹಾಗೂ ಮಾಧ್ಯಮದವರು ಚರ್ಚಿಸುತ್ತಿರುವ ರೀತಿ ನೋಡಿ. ಈ ಸ್ಫೋಟದ ಹಿಂದಿನ ಉದ್ದೇಶವೇನು? ಅವರ ಗುರಿ ನ್ಯಾಯಾಯಲಯಗಳೇ ಏಕಾಗಿತ್ತು? ಕಳೆದ ವಾರ ಸಿಕ್ಕಿಹಾಕಿಕೊಂಡ ಇಬ್ಬರು

ಉಗ್ರಗಾಮಿಗಳನ್ನು ವಕೀಲರು ಥಳಿಸಿದ್ದೇ ಇದಕ್ಕೆ ಕಾರಣವೇ? ಇಂತಹ ಮುಡಿ ಪ್ರಶ್ನೆಗಳ ಮೂಲಕ ಇವರು ಈ ಹಿಂಸಾಚಾರವನ್ನು ಅರ್ಥ ಮಾಡಿಕೊಳ್ಳಲು ಹೊರಟಿದ್ದಾರೆ! ಆದರೆ ಕಳೆದ ೨೦ ವರ್ಷಗಳಲ್ಲಿ ಭಾರತದಾದ್ಯಂತ ನಿರಂತರವಾಗಿ –ವಿಶೇಷವಾಗಿ ಮುಸ್ಲಿಮರು ಅಧಿಕ ಸಂಖ್ಯೆಯಲ್ಲಿರುವ ಉತ್ತರ ಪ್ರದೇಶದಲ್ಲಿ ಪದೇ ಪದೇ ಸಂಭವಿಸುತ್ತಿರುವ ಈ ಆಸ್ಫೋಟಗಳ ಹಿಂದಿನ ಮೂಲ ಕಾರಣವೇನು ಎಂಬುದರ ವಿಶ್ಲೇಷಣೆಯ ಗೋಜಿಗೇ ಯಾರೂ ಹೋಗುತ್ತಿಲ್ಲ. ಇದರಿಂದಾಗಿ ಪ್ರತಿ ಆಸ್ಫೋಟನೆಯ ಹಿಂದಿನ ತಂತ್ರಜ್ಞಾನವನ್ನು ಅರಿಯುವ ಪ್ರಯತ್ನ ಮಾಡುತ್ತಾ ; ಆ ಪ್ರಯತ್ನ ಪೂರ್ಣಗೊಳ್ಳುವ ಮುನ್ನವೇ, ಅದಕ್ಕೂ ಮುಂದುವರೆದ ತಂತ್ರಜ್ಞಾನವನ್ನಾಧರಿಸಿದ ಇನ್ನೊಂದು ಸ್ಫೋಟವನ್ನು ಎದುರಿಸುವ ಅಸಹಾಯಕತೆಯಲ್ಲಿ ರಾಷ್ಟ್ರ ಸಿಕ್ಕಿ ಹಾಕಿಕೊಂಡಿದೆ.

ಕಳೆದೆರಡು ವರ್ಷಗಳ ಹಿಂದೆ ಮುಂಬೈನ ರೈಲುಗಳಲ್ಲಿ ಸಂಭವಿಸಿದ ಭಯಂಕರ ಬಾಂಬ್ ಸ್ಫೋಟದ ಸುಳಿವು ಇನ್ನೂ ಸಿಕ್ಕಿಲ್ಲ. ಹೀಗೇ ಅದೆಷ್ಟೋ ಉಗ್ರರ ಹಿಂಸಾಚಾರ ಪ್ರಕರಣಗಳು ತನಿಖೆಗೆ ಸಿಗದೆ ಮರೆತೇ ಹೋಗಿವೆ. ಪ್ರತಿ ಬಾರಿಯೂ ಗುಪ್ತಚರ ವಿಭಾಗದ ವೈಫಲ್ಯವನ್ನೋ, ಗುಪ್ತಚರ ವಿಭಾಗದ ಮಾಹಿತಿಯನ್ನು ಸ್ಥಳೀಯ ಆಡಳಿತ ನಿರ್ಲಕ್ಷಿಸಿದ್ದನ್ನೋ ಸಂಬಂಧಿಸಿದ ಸರ್ಕಾರಗಳು ತಮ್ಮ ರಕ್ಷಣೆಗೆ ತಕ್ಷಣದ ನೆಪಗಳನ್ನಾಗಿ ಬಳಸಿಕೊಳ್ಳುತ್ತಿವೆ. ಉದಾಹರಣೆಗೆ ಇತ್ತೀಚಿನ ಸ್ಫೋಟಗಳ ಬಗ್ಗೆ ಉತ್ತರ ಪ್ರದೇಶದ ಮುಖ್ಯ ಮಂತ್ರಿ ಹೇಳಿದ್ದನ್ನು ನೋಡಿ. ಇದು ಕೇಂದ್ರ ಗುಪ್ತಚರ ದಳದ ವೈಫಲ್ಯವಂತೆ. ಆಯಿತು. ಆದರೆ ಇವರ ರಾಜ್ಯ ಗುಪ್ತಚರ ದಳ ಏನು ಮಾಡುತ್ತಿತ್ತು? ನಮ್ಮ ಎಲ್ಲ ಸಂಸ್ಥೆಗಳೂ ತಮ್ಮ ವೃತ್ತಿಪರತೆಯನ್ನು ಕಳೆದುಕೊಂಡಿವೆ. ಬಡ್ತಿ, ಮೀಸಲಾತಿ, ಸಂಬಳ–ಸಾರಿಗೆ, ನಿರ್ದಿಷ್ಟ ಸ್ಥಳ ಅಥವಾ ಸ್ಥಾನಗಳಿಗೆ ವರ್ಗಾವಣೆ, ಮೇಲಧಿಕಾರಿಗಳ ಓಲೈಕೆ, ಸೋದರ ಇಲಾಖೆಗಳೊಡನೆ ಪ್ರಚಾರಕ್ಕಾಗಿ ಪೈಪೋಟಿ ಇತ್ಯಾದಿಗಳಲ್ಲೇ ಅವು ಮುಳುಗಿ ಹೋಗಿ, ತಮ್ಮ ಮೂಲ ಕರ್ತವ್ಯಗಳನ್ನೇ ಅವು ಮರೆತಿವೆ. ಇದು ನಮ್ಮ ಸೇನೆಯಿಂದ ಹಿಡಿದು ಗ್ರಾಮಾಂತರ ಪೋಲೀಸ್ ಠಾಣೆಯವರೆಗೆ ಹಬ್ಬಿರುವ ರೋಗ.

ಹಿಂದೆ ಒಮ್ಮೆ ನಾನು ಪೋಲೀಸ್ ವರಿಷ್ಠಾಧಿಕಾರಿಯೊಬ್ಬರನ್ನು ಆಕಾಶವಾಣಿಗಾಗಿ ಮಾತನಾಡಿಸಿದಾಗ, ಅವರು ನಮ್ಮ ಪೋಲೀಸ್ ವ್ಯವಸ್ಥೆಯ ಮುಖ್ಯ ದೌರ್ಬಲ್ಯವೆಂದರೆ, ಅದನ್ನು ವಸಾಹತುಶಾಹಿ ಮಾನಸಿಕತೆಯಲ್ಲೇ ಪೇದೆ ಕೇಂದ್ರಿತವಾಗಿ ಮುಂದುವರೆಸಿಕೊಂಡು ಬಂದಿರುವುದೇ ಆಗಿದೆ ಎಂದಿದ್ದರು. ಅಂದರೆ ನಮ್ಮ ಇಡೀ ಪೋಲೀಸ್ ವ್ಯವಸ್ಥೆ ಮುಖ್ಯವಾಗಿ ಅಕುಶಲ ದೈಹಿಕ ಬಲದ ಮೇಲೇ ನಿಂತಿದೆ. ಬೇರೆ ದೇಶಗಳಲ್ಲಿ ಅದು ಅಧಿಕಾರಿ ಕೇಂದ್ರಿತ. ಅಂದರೆ ಅಲ್ಲಿ, ಕೌಶಲ್ಯ, ಬುದ್ಧಿಮತ್ತೆ, ಸಾರ್ವಜನಿಕ ಸಂಪರ್ಕ ಪ್ರತಿಭೆಗೆ ಪ್ರಾಧಾನ್ಯ. ನಮ್ಮ ಪೇದೆಗಳ ಆಯ್ಕೆಯೇ ಈಗ ಹೆಚ್ಚಾಗಿ ಹಣ ಹಾಗೂ ಪ್ರಭಾವದ ಮೇಲೇ ನಡೆಯುವುದು. ಅವರನ್ನು ಮಾನವ ಸಂಪನ್ಮೂಲಗಳನ್ನಾಗಿ ಬೆಳಸುವಂತಹ ತರಬೇತಿಗಳು ಇಲ್ಲವೇ ಇಲ್ಲ. ಅವರನ್ನು ಪಶು ಬಲವನ್ನಾಗಿ ಬೆಳೆಸುವುದಷ್ಟೇ ಮೇಲಿನ ಅಧಿಕಾರಿಗಳಿಗೆ ಹಾಗೂ ಆಡಳಿತಗಾರರಿಗೆ ಬೇಕಾಗಿದ್ದು, ತಮ್ಮ ಸಮಸ್ಯೆಗಳಿಗೆಲ್ಲ

ಅವರನ್ನು ಆ ಸ್ಥಿತಿಯಲ್ಲಿ ಬಳಸಿ ಕ್ಷಿಪ್ರ ಪರಿಹಾರ ಕಂಡುಕೊಳ್ಳುವ ಸುಲಭ ದಾರಿಯನ್ನು ಅವರು ಕಂಡುಕೊಂಡಿದ್ದಾರೆ. ಇದರ ಮಧ್ಯೆಯೇ, ಅವರೂ ಜನರನ್ನು ಕಾಯುತ್ತಾ, ಕಾಡುತ್ತಾ, ಅಷ್ಟೂ ಇಷ್ಟೂ ಹಣ ಮಾಡಿಕೊಂಡು ಮೇಲಿಂದ ಕೆಳಗಿನವರೆಗೆ ಹಂಚಿಕೊಳ್ಳುತ್ತಾ ಕಾಲ ದೂಡುತ್ತಿದ್ದಾರೆ. ಹೀಗಾಗಿ ಜನ ಸಾಮಾನ್ಯರ ಕಣ್ಣಲ್ಲಿ ಪೋಲೀಸರೆಂದರೆ ಅನುಮಾನಾಸ್ಪದ ವ್ಯಕ್ತಿತ್ವಗಳಾಗಿ ತಮ್ಮೆಲ್ಲ ಘನತೆ ಕಳೆದು ಕೊಂಡಿದ್ದಾರೆ.

ಹೀಗೆ ದದ್ದು ಬಿದ್ದು ಹೋದ ಪೇದೆಗಳನ್ನಾಧರಿಸಿದ ವ್ಯವಸ್ಥೆಯಿಂದ ಯಾವ ಸೂಕ್ಷ್ಮ, ನಿಸ್ಪೃಹ, ಕೌಶಲ್ಯಪೂರ್ಣ ಕೆಲಸ ಸಾಧ್ಯ? ನಮ್ಮ ಗುಪ್ತಚರ ವ್ಯವಸ್ಥೆಯ ಕಾಲಾಳುಗಳೂ ಇವರೇ. ಯಾವುದೇ ಸುಸಂಗತ ರಾಜಕೀಯ ಪರಿಜ್ಞಾನವೇ ಇಲ್ಲದ ಇವರು ಕೊಡುವ ಪ್ರಾಥಮಿಕ ಮಾಹಿತಿಯನ್ನು ಆಧರಿಸಿಯೇ ಗುಪ್ತಚರ ಇಲಾಖೆಯ ಮೇಲಿನ ಹಂತ ಕ್ರಿಯಾಶೀಲವಾಗುವುದು ಎಂದರೆ, ಈ ರಾಷ್ಟ್ರ ಇನ್ನೂ ಇಷ್ಟು ನೆಮ್ಮದಿಯಿಂದಿರುವುದನ್ನು ಪವಾಡವೆಂದೇ ಭಾವಿಸ ಬೇಕಾಗುತ್ತದೆ! ಈಚೆಗೆ ತೀರ್ಪು ಪ್ರಕಟವಾದ ಮುಂಬೈ ಸರಣಿ ಸ್ಫೋಟ ಪ್ರಕರಣದಲ್ಲಿ ಅಪರಾಧಿಗಳೆಂದು (ಆರ್‌ಡಿಎಕ್ಸ್ ಸಾಗಿಸಿಕೊಡುವುದರಲ್ಲಿ ನೆರವಾಗಿದ್ದಾಕ್ಕಾಗಿ) ಸಾಬೀತಾದವರಲ್ಲಿ ಪೋಲೀಸರೂ ಸೇರಿದ್ದರು ಎಂದರೆ ಏನು ಹೇಳುವುದು? ರಾಜಸ್ಥಾನದ ಉನ್ನತ ಪೋಲೀಸ್ ಅಧಿಕಾರಿ ಮೊಹಂತಿ, ವಿದೇಶಿ ಮಹಿಳೆಯೊಬ್ಬಳ ಮೇಲೆ ಅತ್ಯಾಚಾರವೆಸಗಿದ ಆಪಾದನೆ ಎದುರಿಸುತ್ತಿದ್ದ ತನ್ನ ಮಗನನ್ನು ವಿಚಾರಣೆಗೆ ಮುನ್ನವೇ ನಕಲಿ ಪಾಸ್‌ಪೋರ್ಟ್ ಮೇಲೆ ವಿದೇಶಕ್ಕೆ ಸಾಗಿಸಿದ್ದಾನೆ ಎಂದರೆ? ಇದಾದ ಮೇಲೂ ಆತ ತನ್ನ ಸ್ಥಾನದಲ್ಲಿ ಮುಂದುವರೆಯಲು ಸಾಧ್ಯ ಎಂದರೆ? ಸಾರ್ವಜನಿಕ ಒತ್ತಡ ಹೆಚ್ಚಿ ಬಂಧನದ 'ಸಿದ್ಧತೆ' ಆರಂಭವಾಗುತ್ತಿದ್ದಂತೆ ಆತನೇ ನಾಪತ್ತೆಯಾಗಿದ್ದಾನೆ ಎಂದರೆ? ಅಪರಾಧಿ ಮಗನನ್ನು ಅಪ್ಪ ರಕ್ಷಿಸಿದರೆ, ಅಪ್ಪನನ್ನು ಸರ್ಕಾರ ರಕ್ಷಿಸುತ್ತದೆ! ಇದೊಂದು ಸಣ್ಣ ಉದಾಹರಣೆಯಷ್ಟೆ. ಕೊಲೆ ಆಪಾದಿತರಿಂದ ಅಪಾರ ಹಣವನ್ನೋ, ಆಸ್ತಿಯನ್ನೋ ಪಡೆದು ಕೊಲೆಗಳನ್ನೇ ಮುಚ್ಚಿಹಾಕಿರುವ ಪೋಲೀಸರೆಷ್ಟಿಲ್ಲ ನಮ್ಮಲ್ಲಿ? ಬುಡದಿಂದ ತುದಿವರೆಗೂ ರೋಗ ಹಬ್ಬಿಸಿಕೊಂಡಿರುವ ಇಲಾಖೆ ತನ್ನ ವೃತ್ತಿಶೀಲತೆಯನ್ನಾದರೂ ಕಾಪಾಡಿಕೊಳ್ಳಲು ಹೇಗೆ ಸಾಧ್ಯ? ದೇಶದ ಆಂತರಿಕ ಭದ್ರತೆಯನ್ನು ಕಾಪಾಡಲು ಹೇಗೆ ಸಾಧ್ಯ? ಈ ಪ್ರಶ್ನೆಯೇಕೆ ನಮ್ಮನ್ನು ಕಾಡುತ್ತಿಲ್ಲ?

ಈ ಬಿಕ್ಕಟ್ಟನ್ನು ಬಹುಮುನ್ನವೇ ಮನಗಂಡಿದ್ದ ದೂರದೃಷ್ಟಿಯ ಆಡಳಿತಗಾರ ಧರ್ಮವೀರ ಪೋಲೀಸ್ ವ್ಯವಸ್ಥೆಯ ಸುಧಾರಣೆಗಾಗಿ ಒಂದು ಸಮಗ್ರ ವರದಿಯನ್ನೇ ಸಿದ್ಧಪಡಿಸಿಕೊಟ್ಟಿದ್ದರು. ಮೂರು ದಶಕಗಳ ನಂತರವೂ ಅದು ಇನ್ನೂ ವಿವಿಧ ಹಂತಗಳ ಅಧ್ಯಯನ, ಪರಿಶೀಲನೆಗಳಲ್ಲೇ ಧೂಳು ತಿನ್ನುತ್ತಾ ಕೂತಿದೆ. ಇದು ನಮ್ಮ ಗೃಹಾಡಳಿತ. ಇಂತಹ ಅಸೂಕ್ಷ್ಮ ಆಂತರಿಕ ಆಡಳಿತ ವ್ಯವಸ್ಥೆ ವರ್ಷಾನುಗಟ್ಟಲೆ ಮುಂದುವರೆದಿರುವಾಗ, ಅಳಿದುಳಿದಿರುವ ಕೆಲವೇ ನಿಸ್ಪೃಹ ಹಾಗೂ ದಕ್ಷ ಪೋಲೀಸರಾದರೂ ಏನು ಮಾಡಿಯಾರು? ಯಾರಿಗೆ, ಯಾವುದಕ್ಕೆ, ಎಲ್ಲಿ ಎಷ್ಟು, ಎಂತಹ ಭದ್ರತೆ ಒದಗಿಸಿಯಾರು?

ಸ್ಥಳ ಹಾಗೂ ಕಾಲಗಳ ಯಾವುದೇ ನಿರೀಕ್ಷೆಗೂ ಸಿಗದೆ ಸಂಭವಿಸುತ್ತಿರುವ ವಿವಿಧ ರೀತಿಯ ಹಿಂಸಾಚಾರಗಳನ್ನು, ಸ್ಫೋಟಗಳನ್ನು ಭದ್ರತೆಯ ಕ್ರಮಗಳ ಮೂಲಕ ಎದುರಿಸಲು ಸಾಧ್ಯವೇ? ಇಡೀ ದೇಶವನ್ನೇ ಭದ್ರತಾ ಕೋಟೆಯನ್ನಾಗಿ ಪರಿವರ್ತಿಸಲು ಸಾಧ್ಯವೇ? ಹಿಂಸೆಯ ತಂತ್ರಜ್ಞಾನ ಭದ್ರತೆಯ ತಂತ್ರಜ್ಞಾನಕ್ಕಿಂತ ಯಾವಾಗಲೂ ಒಂದು ಹೆಜ್ಜೆ ಮುಂದಿರುತ್ತದೆ ಎಂಬುದು ಪದೇ ಪದೇ ಸಾಬೀತಾಗುತ್ತಿದ್ದರೂ ಭಯೋತ್ಪಾದನೆಯನ್ನು ಎದುರಿಸಲು ನಾವೇಕೆ ಇದೇ ದಾರಿಯಲ್ಲಿ ಮುಂದುವರೆಯುತ್ತಿದ್ದೇವೆ?

ಈಗ ನಾವು ಉತ್ತರಿಸಕೊಳ್ಳಬೇಕಾದ ಮೊದಲ ಪ್ರಶ್ನೆ: ಭಾರತವೇಕೆ ಹೀಗೆ ಈ ಉಗ್ರರ ಹಿಂಸೆಗೆ ಸಿಕ್ಕಿದೆ? ಇದರ ಬೀಜ ಭಾರತದ ವಿಭಜನೆಗೆ ಕಾರಣವಾದ ದುಷ್ಟ ರಾಜಕೀಯದಲ್ಲೇ ಇದ್ದು; ಈಚೆಗೆ ಸರಿಯಾದ ಸಂದರ್ಭ ಒದಗಿ ಬಂದು, ಒಂದು ದೊಡ್ಡ ವಿಷವೃಕ್ಷವಾಗಿ ಬೆಳೆದಿದೆಯಷ್ಟೆ ಎಂಬುದನ್ನು ನಾವು ಮೊದಲು ಅರಿಯಬೇಕು. ಷೇಕ್ ಅಬ್ದುಲ್ಲಾರೊಡನೆಯ ಸಂಧಾನದ ಮೂಲಕ ಕಾಶ್ಮೀರದ ಸಮಸ್ಯೆಯನ್ನು ಒಂದು ತಹಬಂದಿಗೆ ತರಲಾಗಿತ್ತಾದರೂ, ೮೦ರ ದಶಕದಲ್ಲಿ ಇಂದಿರಾ ಗಾಂಧಿಯವರ ಮಹಾತ್ವಾಕಾಂಕ್ಷೆಯ ರಾಜಕಾರಣದಿಂದಾಗಿ ಅಲ್ಲಿನ ಸ್ಥಳೀಯ ರಾಜಕಾರಣದಲ್ಲಿ ಕೇಂದ್ರ ಮೂಗು ತೂರಿಸಿ ಜನರನ್ನು ಸಿಟ್ಟಿಗೆಬ್ಬಿಸಿದ್ದೇ ಕಾಶ್ಮೀರ ಸಮಸ್ಯೆ ಭುಗಿಲೇಳಲು ಕಾರಣವಾಯಿತು. ನಂತರ ನಡೆದ ಬಹುತೇಕ ಚುನಾವಣೆಗಳು ಮೋಸದಿಂದ ಕೂಡಿ, ಕಾಶ್ಮೀರದ ಜನತೆಗೆ ಭಾರತದ ಪ್ರಜಾಪ್ರಭುತ್ವದ ಬಗೆಗಿನ ನಂಬಿಕೆಯೇ ಕಳೆದುಹೋಗಿ ಅಶಾಂತಿ ಆರಂಭವಾಯಿತು. ಅದನ್ನು ಗಡಿಯಾಚೆಯ ತಂಟೆಕೋರರೂ, ಜಾಗತಿಕ ಮುಸ್ಲಿಂ ಮೂಲಭೂತವಾದಿ ಉಗ್ರರೂ ಬಳಸಿಕೊಳ್ಳುತ್ತಾ ಬಂದು, ಇಂದು ಈ ಆಸ್ಫೋಟನಾಕಾರಿ ಸ್ಥಿತಿ ಮುಟ್ಟಿದೆ.

ಈಶಾನ್ಯ ರಾಜ್ಯಗಳಲ್ಲಿ ನಿರಂತರವಾಗಿ ನಡೆಯುತ್ತಿರುವ ಹಿಂಸಾಚಾರಕ್ಕೂ ಭಾರತದ ಈ ಕೇಂದ್ರೀಕೃತ ರಾಜಕಾರಣದ ಕೆಟ್ಟ ವರಸೆಯೇ ಕಾರಣವಾಗಿದೆ. ಉತ್ತರ ಪ್ರದೇಶದಲ್ಲಿ ಸ್ಫೋಟ ಸಂಭವಿಸಿದ ದಿನವೇ ಗೌಹಾತಿಯಲ್ಲಿ ಆದಿವಾಸಿ ಹಾಗೂ ನಗರವಾಸಿಗಳ ನಡುವೆ ನಡೆದ ನಡೆದ ಹಿಂಸಾಚಾರವನ್ನೇ ಗಮನಿಸಿ. ಅತ್ಯಂತ ಬರ್ಬರ ರೀತಿಯ ಹಿಂಸಾಚಾರವದು. ತಮಗೆ ಬುಡಕಟ್ಟು ಜನಾಂಗದ ಸ್ಥಾನಮಾನ ನೀಡಬೇಕೆಂದು ಒತ್ತಾಯಿಸಿ ಮೆರವಣಿಗೆ ಹೊರಟಿದ್ದ ಆದಿವಾಸಿಗಳು ತಮ್ಮ ಮೂಲ ಆಯುಧಗಳೊಡನೆ ನಗರವಾಸಿಗಳ ಮನೆಗಳಿಗೆ, ಅಂಗಡಿಗಳಿಗೆ ನುಗ್ಗಿ ಲೂಟಿ, ಹಿಂಸಾಚಾರಗಳನ್ನು ನಡೆಸಿದ್ದರೆ, ಇದರಿಂದ ಕ್ರುದ್ಧರಾದ ನಗರವಾಸಿಗಳು ಆದಿವಾಸಿಗಳನ್ನು ಬೀದಿಗಳಲ್ಲೇ ಸಿಕ್ಕ ಸಿಕ್ಕ ಆಯುಧಗಳಿಂದ ಹೊಡೆದು ಸಾಯಿಸಿದರು. ಹತ್ತಾರು ಹೆಣಗಳುರುಳಿದವು. ಯಾರು ಹೇಳಿದರು, ನಮ್ಮ ಆದಿವಾಸಿಗಳು ಇನ್ನೂ ಮುಗ್ಧರೆಂದು? ಯಾರು ಹೇಳಿದರು ನಮ್ಮ ನಗರವಾಸಿಗಳು ಸುಸಂಸ್ಕೃತರೆಂದು? ನಾವು ಈವರೆಗೆ ನಮ್ಮ ರಾಜಕಾರಣವನ್ನು ಹೇಗೆ ಕಟ್ಟಿಕೊಂಡು ಬಂದಿದ್ದೇವೆಂದರೆ, ಅದು ಹುಟ್ಟಿಸುವ 'ಅಭಿವೃದ್ಧಿ'ಯ ಹಪಾಹಪಿ ಎಲ್ಲರ ಎಲ್ಲ ರೀತಿಯ ಮುಗ್ಧತೆಗಳನ್ನೂ, ಸಂಸ್ಕೃತಿಗಳನ್ನೂ ನಾಶ ಮಾಡಿಬಿಟ್ಟಿದೆ. ಎಲ್ಲರ

ಮೂಲ ಅಸ್ಮಿತೆಗಳೂ, ಬೇರುಗಳೂ ಕಳಚಿಕೊಳ್ಳತೊಡಗಿ, ಇಡೀ ಜನಸ್ತೋಮವೇ ಅಸ್ತಿತ್ವದ ಅಭದ್ರತೆಯ ರೋಗಕ್ಕೆ ತುತ್ತಾಗತೊಡಗಿದೆ. ಪ್ರಗತಿಗೆ ಇನ್ನೊಂದು ಹೆಸರು ಹಿಂಸೆ ಎಂಬಂತಾಗಿದೆ!

ಹೀಗಾಗಿಯೇ ಇಂದು ಬಂಗಾಳದ ಮಾರ್ಕ್ಸ್‌ವಾದಿ ಸರ್ಕಾರವೂ ತಸ್ಲೀಮಾಳನ್ನು ರಕ್ಷಿಸಿಟ್ಟುಕೊಳ್ಳಲು ಸಾಧ್ಯವಾಗದಾಗಿದೆ. ಆ ಹೆಂಗಸು ಕೊಲ್ಕೊತ್ತಾದಿಂದ ಹೊರಟು, ದೇಶವೆಲ್ಲಾ ಅಲೆದು ಈಗ ತಾತ್ಕಾಲಿಕವಾಗಿ ದೆಹಲಿಯಲ್ಲಿ ನೆಲೆಸುವಂತಾಗಿದೆ. ಬಂಗಾಳದಲ್ಲಿ ಎಂದೂ ಕಾಣದ ಮುಸ್ಲಿಂ ಮೂಲಭೂತವಾದಿಗಳ ಅಬ್ಬರ ಇಂದು ಕಾಣತೊಡಗಿದೆ. ಅದಕ್ಕೆ ಬುದ್ಧದೇವ ಭಟ್ಟಾಚಾರ್ಜಿ ಹೆದರಿಹೋಗಿದ್ದಾರೆ! ಅವರಿಗೀಗ ಅಲ್ಪಸಂಖ್ಯಾತರ ಮತ ಕಳೆದುಕೊಳ್ಳು ಭಯ. ಇಲ್ಲದಿದ್ದರೆ ನಂದಿಗ್ರಾಮದಲ್ಲಿ ರೈತರ ಹೋರಾಟವನ್ನು ಅಡಗಿಸಲು ಯತ್ನಿಸಿದ ಇವರಿಗೆ ಈ ಮುಸ್ಲಿಂ ರಾಕ್ಷಸರ ಅಟ್ಟಹಾಸವನ್ನು ಅಡಗಿಸಲು ಕಷ್ಟವಾಗುತ್ತಿತ್ತೇ? ಇಡೀ ಭಾರತವೀಗ, ಕಳೆದ ಐವ್ವತ್ತು ವರ್ಷಗಳಿಂದ ತಾನು ಆಚರಿಸಿಕೊಂಡು ಬಂದ 'ವೈಜ್ಞಾನಿಕ' ಸೆಕ್ಯುಲರಿಸಂನ ಪಾಪದ ಫಲವನ್ನು ಉಣ್ಣತೊಡಗಿದೆ. ಇಂತಹ ಜನದೂರವಾದ ಸೆಕ್ಯುಲರ್ ಪರಂಪರೆಯನ್ನು ಪ್ರತಿಪಾದಿಸಿಕೊಂಡು ಬಂದ ರಾಷ್ಟ್ರ ಇಂದು ಹಿಂದೂ ಕೋಮುವಾದಿಗಳ ಕೆಲವು ಸರಳ ಪ್ರಶ್ನೆಗಳಿಗೆ ಉತ್ತರ ಕೊಡಲು ಸಾಧ್ಯವಾಗದ ಸ್ಥಿತಿ ಮುಟ್ಟಿರುವುದು ಸಹಜವೇ ಆಗಿದೆ. ಅದಕ್ಕಿಂತ ಮುಖ್ಯವಾಗಿ, ವಿದೇಶಿ ಉಗ್ರಗಾಮಿಗಳ ಬೆಂಬಲದೊಂದಿಗೆ ರಾಕ್ಷಸ ರೂಪ ತಾಳುತ್ತಿರುವ ದೇಶೀ ಇಸ್ಲಾಂ ಪುರೋಹಿತಶಾಹಿಯ ಅಟ್ಟಹಾಸವನ್ನು ಅಡಗಿಸುವ ದಾರಿಯೇ ತೋಚದಾಗಿದೆ. ಭಾರತ ಎಂದೂ ಇಷ್ಟು, ಹೀಗೆ ಅತಂತ್ರವಾಗಿರಲಿಲ್ಲ.

ಇಸ್ಲಾಂ–ಬಹುಶಃ ಅದರ ಸೂಫಿ ಆವೃತ್ತಿಯ ಹೊರತಾಗಿ–ಎಂದೂ ಅಹಿಂಸೆಯನ್ನು, ಪ್ರಜಾಪ್ರಭುತ್ವ ಪದ್ಧತಿಯನ್ನು ಮನುಷ್ಯ ನಾಗರೀಕತೆಯ ಪರಮ ಮೌಲ್ಯಗಳಾಗಿ ಒಪ್ಪಿಕೊಂಡಂತಿಲ್ಲ. ಹಾಗಾಗಿಯೇ ಇಂದು ಜಗತ್ತಿನ ಬಹುತೇಕ ಮುಸ್ಲಿಂ ರಾಷ್ಟ್ರಗಳು ರಾಜಪ್ರಭುತ್ವ ಅಥವಾ ಸರ್ವಾಧಿಕಾರಿಗಳ ಕೈಕೆಳಗೇ ಇವೆ. ಪ್ರಜಾಪ್ರಭುತ್ವದ ಹೆಸರು ಹೇಳಿಕೊಳ್ಳಬಲ್ಲ ತುರ್ಕಿ, ಮಲೇಷಿಯಾ ಹಾಗೂ ಇಂಡೋನೇಷ್ಯಾದಂತಹ ಎರಡು ಮೂರು ರಾಷ್ಟ್ರಗಳೂ ಇಂದು ಮುಸ್ಲಿಂ ಉಗ್ರರ ಹಿಂಸಾಚಾರವನ್ನು ಎದುರಿಸುತ್ತಲೇ ಇವೆ. ಗಾಂಧಿ ನೇತೃತ್ವದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದ ಪರಂಪರೆಯುಳ್ಳ ಪಾಕಿಸ್ಥಾನ (ಹಾಗೂ ಬಂಗ್ಲಾ ದೇಶ) ಕಳೆದ ಐವ್ವತ್ತು ವರ್ಷಗಳಲ್ಲಿ ಪ್ರಜಾಪ್ರಭುತ್ವದ ಅನೇಕ ಪ್ರಯೋಗಗಳನ್ನು ನಡೆಸಿ ಮತ್ತೆ ಮತ್ತೆ ಸೋತಿವೆ. ಇಂದೂ ಅಂತಹ ಮತ್ತೊಂದು ಪ್ರಯೋಗಕ್ಕೆ ಸಿದ್ಧವಾಗುತ್ತಿದ್ದಂತೆ ದೊಡ್ಡ ಬಿಕ್ಕಟ್ಟಿಗೆ ಸಿಕ್ಕಿವೆ. ಈ ಎರಡು ದೇಶಗಳ ಮೂಲಭೂತವಾದಿ ಸಂಘಟನೆಗಳೇ ಇಂದು ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯನ್ನೂ, ನಮ್ಮ ಸೆಕ್ಯುಲರ್ ನಂಬಿಕೆಯನ್ನೂ ಹಾಳುಗೆಡಹಲು ಪ್ರಯತ್ನಿಸುತ್ತಿರುವುದು. ಇದಕ್ಕೆ ಬಹುಶಃ ಮೂಲ ಕಾರಣ, ಇಸ್ಲಾಂ ಒಂದು ಧರ್ಮವಾಗಿ ಮತ್ತು ಒಂದು ಸಂಸ್ಕೃತಿಯಾಗಿ 'ರಾಷ್ಟ್ರ ಪ್ರಭುತ್ವ' (Nation State) ಎಂಬ ಆಧುನಿಕ ರಾಜಕೀಯ ಪರಿಕಲ್ಪನೆಯನ್ನು

ಒಪ್ಪದಿರುವುದು. ಅದು ತನ್ನನ್ನೇ 'ಉಮ್ಮಾ' ಎಂಬ ಪರಿಕಲ್ಪನೆಯಡಿ ಒಂದು ರಾಷ್ಟ್ರ ಎಂದು ಕರೆದುಕೊಳ್ಳಬಯಸುತ್ತದೆ. ಅಂದರೆ, ಜಾಗತಿಕವಾಗಿ ಮುಸ್ಲಿಮರದ್ದೇ ಒಂದು 'ರಾಷ್ಟ್ರ'ವಿದೆ. ಅವರ ಮೂಲ ಬದ್ಧತೆ ಅದರ ಸಂವಿಧಾನಕ್ಕೆ–'ಷರಿಯತ್'ಗೆ. ಹಾಗಾಗಿಯೇ SIMIಗೆ(ಭಾರತದ ಮುಸ್ಲಿಂ ವಿದ್ಯಾರ್ಥಿ ಆಂದೋಲನ) 'ನಮ್ಮ ರಾಷ್ಟ್ರ ಭಾರತವಲ್ಲ; ಇಸ್ಲಾಂ' ಎಂದು ಬಹಿರಂಗ ಘೋಷಣೆ ಮಾಡಿಕೊಂಡೇ ತನ್ನ ಕಾರ್ಯಕ್ರಮಗಳನ್ನು ಸಂಘಟಿಸಲು ಸಾಧ್ಯವಾಗುತ್ತಿದ್ದುದು. ದುರಂತವೆಂದರೆ, ಈ ಮಧ್ಯಕಾಲೀನ ಕಲ್ಪನೆ ಹಾಗೂ ನಂಬಿಕೆಗಳನ್ನು ಪರಿಷ್ಕರಿಸುವ ಎಲ್ಲ ಪ್ರಯತ್ನಗಳೂ ಬಹುಜನರ ಮಟ್ಟಿಗೆ ವಿಫಲಗೊಂಡಿವೆ.

ಇದಕ್ಕೆಲ್ಲ ಮುಖ್ಯ ಕಾರಣ, ನಮ್ಮ ರಾಷ್ಟ್ರೀಯ ನಾಯಕರು ಪ್ರಜಾಪ್ರಭುತ್ವ ಹಾಗೂ ಧರ್ಮನಿರಪೇಕ್ಷತೆಯ ಆಧಾರಗಳ ಮೇಲೆ ಕಟ್ಟ ಹೊರಟ ಹೊಸ ಭಾರತದಲ್ಲಿ, ಇಸ್ಲಾಮನ್ನು ಪ್ರಜಾಪ್ರಭುತ್ವೀಕರಣಕ್ಕೊಳಪಡಿಸುವ ಗಂಭೀರ ಹಾಗೂ ವ್ಯವಸ್ಥಿತ ಪ್ರಯತ್ನಗಳನ್ನು ಮಾಡದಿದ್ದುದು. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಮುಸ್ಲಿಮರ ಚೇಲಾ ನಾಯಕತ್ವವನ್ನಷ್ಟೇ ಬೆಳೆಸಿದ ಕಾಂಗ್ರೆಸ್, ಮುಸ್ಲಿಮರು ರಾಷ್ಟ್ರ ಜೀವನದ ಮುಖ್ಯವಾಹಿನಿಯೊಂದಿಗೆ ಬೆರೆಯಬಲ್ಲ ಅವಕಾಶಗಳನ್ನೇ ಒದಗಿಸಿಕೊಡಲಿಲ್ಲ. ಸರ್ಕಾರಿ ಕಛೇರಿಗಳಲ್ಲಿ, ವಿವಿಧ ಅಧಿಕಾರ ಸ್ಥಾನಗಳಲ್ಲಿ, ರಾಜಕೀಯ ಪಕ್ಷಗಳಲ್ಲಿ ಅವರಿಗೆ ಸಹಜ ಸೂಕ್ತ ಪ್ರಾತಿನಿಧ್ಯ ನೀಡುವುದು ಒಂದು ನೆಲೆಯ ಕ್ರಮವಾದರೆ, ಸಾಮಾನ್ಯ ನಾಗರಿಕ ಸಂಹಿತೆಯನ್ನು ಜಾರಿಗೆ ತರುವುದು ಇನ್ನೊಂದು ನೆಲೆಯ ಕ್ರಮವಾಗಿರಬೇಕಿತ್ತು. ನಮ್ಮ ಸಂವಿಧಾನದ ಮುಖ್ಯ ನಿರ್ದೇಶಕ ತತ್ವಗಳಲ್ಲಿ ಒಂದಾದ ಸಾಮಾನ್ಯ ನಾಗರಿಕ ಸಂಹಿತೆಯ ಜಾರಿಯ ಪ್ರಯತ್ನವಿರಲಿ, ಆ ಬಗ್ಗೆ ಒಂದು ಗಂಭೀರ ಚರ್ಚೆಯನ್ನು ಆರಂಭಿಸುವ ಪ್ರಯತ್ನವನ್ನೂ ನಮಗೆ ಮಾಡಲಾಗಲಿಲ್ಲವೆಂದರೆ, ನಾವೆಂತಹ ತಲೆಕೆಳಗಾದ ಸೆಕ್ಯುಲರಿಸಂನ ಪಂಜರದಲ್ಲಿ ಸಿಕ್ಕಿಹಾಕಿಕೊಂಡಿರಬಹುದು ಯೋಚಿಸಿ! ಮಹಾರಾಷ್ಟ್ರದ ಹಮೀದ್ ದಳವಾಯಿ ಹಾಗೂ ಅಸ್ಗರಾಲಿ ಇಂಜಿನಿಯರ್ ಕುಟುಂಬ ಮತ್ತು ಸೈಯ್ಯದ್ ನಕ್ವಿಯವರಂತಹ ಕೆಲವು ಬೆರಳೆಣಿಕೆಯ ಪ್ರಗತಿಪರರ ಹೊರತಾಗಿ, ಭಾರತದ ಯಾವ ಬುದ್ಧಿಜೀವಿ ಮುಸ್ಲಿಮನಾಗಲೀ ಸಂಘಟನೆಯಾಗಲೀ ತನ್ನ ಮತವನ್ನು ಮೀರಿ ನಿಂತು ಇಸ್ಲಾಂನ ಪ್ರಜಾಪ್ರಭುತ್ವೀಕರಣಕ್ಕಾಗಿ ಸಂಘಟಿತ ದನಿ ಎತ್ತಿಲ್ಲ. ಏಕೆ?

ಇದರಿಂದಾಗಿ ಇಂದು ಅಲ್ಲಲ್ಲಿ ಮುಸ್ಲಿಂ ಉಗ್ರಗಾಮಿತ್ವದ ಕೇಂದ್ರಗಳು ಚಿಗುರೊಡೆಯುತ್ತಿವೆ. ಆಸರೆಯಿಲ್ಲದ, ಮಾರ್ಗದರ್ಶನವಿಲ್ಲದ ಮುಸ್ಲಿಂ ಯುವಕರು ಮತೀಯ ಅಮಲಿಗೆ ಸಿಕ್ಕಿ ತಮ್ಮ ಧರ್ಮ ಅಪಾಯದಲ್ಲಿದೆಯೆಂದೋ ಅಥವಾ ಸಂಪರ್ಕಕ್ಕೆ ಬಂದ ವಿದೇಶಿ ಉಗ್ರಗಾಮಿ ಸಂಸ್ಥೆಗಳ ಏಜೆಂಟರ ಆಮಿಷಗಳಿಗೆ ಬಲಿಯಾಗಿಯೋ, ರಕ್ತಪಾತಕ್ಕೆ ಕಾರಣರಾಗುತ್ತಿದ್ದಾರೆ. ಜನ ಸಾಮಾನ್ಯರ ಕಣ್ಣಲ್ಲಿ ಭಾರತೀಯ ಮುಸ್ಲಿಂ ಸಮಾಜವೇ ಇಂದು ಅನುಮಾನಾಸ್ಪದತೆಗೆ ಈಡಾಗಿದ್ದರೆ, ಅದಕ್ಕೆ ಈ ಪ್ರವೃತ್ತಿಯನ್ನು ತಡೆಯಲು ಆ ಸಮಾಜದ ಒಳಗಿಂದಾಗಲೀ, ಹೊರಗಿಂದಾಗಲೀ

ಯಾವುದೇ ಸಂಘಟಿತ ಪ್ರಯತ್ನಗಳು ಆಗದಿರುವುದೇ ಕಾರಣವಾಗಿದೆ. ಒಳಗಿನ ಪ್ರಯತ್ನ ಲೇಖಕರು, ಬುದ್ಧಿಜೀವಿಗಳು ಹಾಗೂ ಸಮಾಜಸೇವಕರ ಕಡೆಯಿಂದ ಆಗಬೇಕಿದ್ದರೆ, ಹೊರಗಿನ ಪ್ರಯತ್ನ ಸರ್ಕಾರದ ಕಡೆಯಿಂದ ಆಗಬೇಕಿದೆ. ಸಚಾರ್ ಸಮಿತಿಯ ವರದಿಯ ಅನುಷ್ಠಾನವು ಇದಕ್ಕೊಂದು ಒಳ್ಳೆಯ ಆರಂಭವನ್ನೊದಗಿಸಬಹುದು.

ಇದು ಆಗದ ಹೊರತು, ಪ್ರತಿ ಸ್ಫೋಟವಾದಾಗಲೂ ಪರಿಹಾರ ಘೋಷಿಸುವುದು, ತನಿಖೆ ಕೈಗೊಳ್ಳುವುದು, ವರ್ಷಗಟ್ಟಲೆ ವಿಚಾರಣೆ ನಡೆಸಿ ಯಾರಿಗೋ ಒಂದಷ್ಟು ಜನಕ್ಕೆ ಶಿಕ್ಷೆ ವಿಧಿಸುವುದು ಇತ್ಯಾದಿ ಔಪಚಾರಿಕ ಆಡಳಿತ ಕ್ರಮಗಳಿಂದ ಯಾವುದೇ ಪ್ರಯೋಜನವಾಗದು. ಮೂಲಭೂತ ಚಿಂತನೆಯನ್ನಾಧರಿಸಿದ ಒಳ್ಳೆಯ ರಾಜಕಾರಣ ಮಾತ್ರ ಕೋಮುವಾದ ಮೂಲಭೂತವಾದಗಳೆರಡಕ್ಕೂ ಉತ್ತರವಾಗಬಲ್ಲುದು.

(ಡಿಸೆಂಬರ್ ೭, ೨೦೦೮)

■

ನಂದಿಗ್ರಾಮ ಹೋರಾಟ :
ಭಾರತೀಯ ಮಾರ್ಕ್ಸ್‌ವಾದದ ಸಂದಿಗ್ಧತೆಗಳು

ಬುದ್ಧದೇವ ಭಟ್ಟಾಚಾರ್ಜಿ ಸೇರಿದಂತೆ ಈ ಪಕ್ಷದ ನಾಯಕರಿಗೆ ಕೈಗಾರಿಕೀಕರಣವೆಂದರೆ, ಮಾರ್ಕ್ಸ್ ಪರಿಕಲ್ಪಿಸಿದ್ದ ಐರೋಪ್ಯ ಸಂದರ್ಭದ ಕೈಗಾರಿಕೀಕರಣವೇ ಆಗಿದೆ. ಹಾಗೇ ಕೃಷಿ ಅಥವಾ ಗ್ರಾಮ ಸಂಸ್ಕೃತಿ ಎಂದರೆ ಮಾರ್ಕ್ಸ್ ಕಲ್ಪಿಸಿಕೊಟ್ಟ ಮೌಢ್ಯ-ಮುಟ್ಠಾಳತನಗಳ ಆಡೊಂಬಲವೇ ಆಗಿರುವಂತೆ ತೋರುತ್ತದೆ. ಜಗತ್ತಿನ ಮಾರ್ಕ್ಸ್‌ವಾದಿಗಳು ತಮ್ಮ ಮಣ್ಣಿಗನುಗುಣವಾಗಿ ಮಾರ್ಕ್ಸ್‌ವಾದವನ್ನು ಬೆಳೆಸಿದ್ದರೆ, (ಉದಾ: ಈರೋಪ್ ಹಾಗೂ ಲ್ಯಾಟಿನ್ ಅಮೆರಿಕಾದ ಚಿಂತಕರು, ಹೋರಾಟಗಾರರು) ಭಾರತದ ಮಾರ್ಕ್ಸ್‌ವಾದಿಗಳು ಮಾರ್ಕ್ಸ್‌ನ ಐರೋಪ್ಯ ನೋಟ ಕ್ರಮದಲ್ಲೇ ಇನ್ನೂ ಸಿಕ್ಕಿಹಾಕಿಕೊಂಡು ಒದ್ದಾಡುತ್ತಿದ್ದಾರೆ. ಹೀಗಾಗಿಯೇ, ಇವರ ಮಾರ್ಕ್ಸ್‌ವಾದದಲ್ಲಿ ಸ್ಟಾಲಿನ್‌ನ ಕ್ರೌರ್ಯದ ಸುಳಿವೂ ಈಗ ಕಾಣತೊಡಗಿದೆ.

ಪಶ್ಚಿಮ ಬಂಗಾಳದ ನಂದಿಗ್ರಾಮದಲ್ಲಿ ಮತ್ತೆ ಹಿಂಸಾಚಾರ ಭುಗಿಲೆದ್ದಿದೆ. ಮಲೇಷಿಯಾದ ಕೈಗಾರಿಕಾ ಸಂಸ್ಥೆಯೊಂದಕ್ಕೆ ರಾಸಾಯನಿಕ ಕೈಗಾರಿಕೆಗಳ ವಸಾಹತುವೊಂದನ್ನು ಸ್ಥಾಪಿಸಲು ರಾಜ್ಯ ಸರ್ಕಾರ ವಿಶೇಷ ಆರ್ಥಿಕ ವಲಯವೊಂದನ್ನು ಒದಗಿಸಿಕೊಡಲು ನಡೆಸಿರುವ ಪ್ರಯತ್ನಗಳನ್ನು, ಅಲ್ಲಿನ ರೈತರು ಈ ಆರ್ಥಿಕ ವಲಯಕ್ಕೆ ಕೃಷಿ ತಮ್ಮ ಭೂಮಿಯನ್ನು ಬಿಟ್ಟುಕೊಡಲು ನಿರಾಕರಿಸುತ್ತಿರುವ ಮೂಲಕ ವಿಫಲಗೊಳಿಸುತ್ತಿರುವುದೇ ಈ ಸತತ ಹಿಂಸಾಚಾರಕ್ಕೆ ಕಾರಣವಾಗಿವೆ. ಕಳೆದ ಮಾರ್ಚ್‌ನಲ್ಲಿ ಪೋಲೀಸ್ ಗೋಲೀಬಾರ್‌ನಲ್ಲಿ ಸತ್ತ ೧೫-೨೦ ಜನರಿಂದ ಆರಂಭವಾದಂತೆ, ಈವರೆಗೆ ಇಲ್ಲಿ ಮತ್ತೆ ಮತ್ತೆ ಭುಗಿಲೇಳುತ್ತಿರುವ ಹಿಂಸಾಚಾರದಲ್ಲಿ ನೂರಕ್ಕೂ ಹೆಚ್ಚು ಜನ ಸತ್ತಿರಬಹುದೆಂದು ಒಂದು ಅಂದಾಜು. ಪ್ರತಿ ಬಾರಿಯ ಹಿಂಸಾಚಾರದಲ್ಲೂ ಅಲ್ಲಿನ ಸರ್ಕಾರದ ನೇತೃತ್ವ ವಹಿಸಿರುವ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರು ಪೋಲೀಸರ ವೇಷ ಧರಿಸಿ ಅಥವಾ ಪೋಲೀಸರ ಸಹಕಾರದಿಂದ ಈ ಹಿಂಸಾಚಾರ ನಡೆಸುತ್ತಿದ್ದಾರೆ ಎಂದು ಮಾಧ್ಯಮಗಳು ವರದಿ ಮಾಡುತ್ತಿದ್ದವು. ಆದರೆ ಈ ಬಾರಿ

ಪಕ್ಷದ ಕಾರ್ಯಕರ್ತರೇ ಪ್ರತ್ಯಕ್ಷವಾಗಿ ಹಾಗೂ ನೇರವಾಗಿ ಯಾವುದೇ ಎಗ್ಗಿಲ್ಲದೆ, ಬಂದೂಕು-ಬಾಂಬುಗಳಿಂದ ಸಜ್ಜಾಗಿ ನಂದಿಗ್ರಾಮವನ್ನು ಸರ್ಕಾರದ ಉದ್ದೇಶಕ್ಕೆ ವಿರುದ್ಧವಿರುವ ಶಕ್ತಿಗಳಿಂದ ಮುಕ್ತಗೊಳಿಸುವ 'ಸ್ವಚ್ಛತಾ ಕಾರ್ಯಕ್ರಮ'ವನ್ನು ಆರಂಭಿಸಿದ್ದಾರೆಂದು ಹೇಳಲಾಗುತ್ತಿದೆ. ಇದನ್ನು ಪ್ರತಿಭಟಿಸಲು ಅಲ್ಲಿಗೆ ಧಾವಿಸಿದ ನರ್ಮದಾ ಬಚಾವೋ ಆಂದೋಲನದ ಮೇಧಾ ಪಾಟ್ಕರ್ ಸೇರಿದಂತೆ ಮಾನವ ಹಕ್ಕು ಆಂದೋಲನದ ಹಲವು ಕಾರ್ಯಕರ್ತರ ಮೇಲೆ ಇವರು ಹಲ್ಲೆ ನಡೆಸಿದ್ದಾರೆ. ಇತ್ತೀಚಿನ ವರದಿಗಳ ಪ್ರಕಾರ ಈ ಕಾರ್ಯಕ್ರಮ ಸದ್ಯಕ್ಕೆ ಯಶಸ್ವಿಯೂ ಆಗಿದೆ. ಆದರೆ ಈ ಮಧ್ಯೆ ಹತ್ತಾರು ಹೆಣಗಳು ಬಿದ್ದಿವೆ. ನೂರಾರು ಜನ ಪ್ರಾಣಾಂತಿಕವಾಗಿ ಗಾಯಗೊಂಡಿದ್ದಾರೆ. ಅನೇಕ ರೈತ ಕುಟುಂಬಗಳು ಊರನ್ನೇ ತ್ಯಜಿಸಿವೆ. ಮತ್ತೆ ಹಿಂಸಾಚಾರ ಭುಗಿಲೇಳುವ ಎಲ್ಲ ಸಾಧ್ಯತೆಗಳಿವೆ.

ಇದನ್ನೆಲ್ಲ ನೋಡಿ ಇಡೀ ಬಂಗಾಳ ಬೆಚ್ಚಿ ಬಿದ್ದಿದೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವನ್ನು ಜನರ ಪಕ್ಷವೆಂದು ಕಳೆದ ಮುವ್ವತ್ತು ವರ್ಷಗಳಿಂದಲೂ ಸತತವಾಗಿ ಗೆಲ್ಲಿಸುತ್ತಾ ಬಂದಿದ್ದ ರಾಜ್ಯದ ಜನ ಈಗ ಪಕ್ಷದ ವಿರುದ್ಧ, ಅದರ ಸರ್ಕಾರದ ವಿರುದ್ಧ ತಿರುಗಿ ಬಿದ್ದಿದೆ. ಪ್ರಥಮ ಬಾರಿಗೆ ರಾಜ್ಯದಲ್ಲಿ ಈ ಪಕ್ಷದ ನೇತೃತ್ವದ ಎಡರಂಗದ ಭೂಮಿ ನೀತಿಯ ವಿರುದ್ಧ ಕರೆ ಕೊಡಲಾಗಿದ್ದ ಬಂದ್‌ಗೆ ಜನರ ಪ್ರತಿಕ್ರಿಯೆ ಅಭೂತಪೂರ್ವವಾಗಿದೆ. ಕೊಲ್ಕೊತ್ತಾ ಮಹಾನಗರದ ಜನವಂತೂ ಸಂಪೂರ್ಣ ಬಂದ್ ಆಚರಿಸುವ ಮೂಲಕ ಸರ್ಕಾರಕ್ಕೆ ಛೀಮಾರಿ ಹಾಕಿದೆ. ಈವರೆಗೆ ಎಡರಂಗದ ಸರ್ಕಾರಕ್ಕೆ ತನ್ನ ಬೆಂಬಲದ ಮೂಲಕ ಅದಕ್ಕೊಂದು ಘನತೆ ಒದಗಿಸಿದ್ದ ಅಲ್ಲಿನ 'ಭದ್ರಲೋಕ' (ಮಧ್ಯಮ ಹಾಗೂ ಮೇಲ್ಮಧ್ಯಮ ವರ್ಗಗಳ ಬುದ್ಧಿಜೀವಿ ಲೋಕ) ಸರ್ಕಾರ, ಪಕ್ಷದ ಸದ್ಯದ ಹಠಮಾರಿತನ, ಕ್ರೌರ್ಯ ಹಾಗೂ ಉದ್ಧಟತನಗಳ ವಿರುದ್ಧ ತಿರುಗಿ ಬಿದ್ದು ಬೀದಿಗಿಳಿದಿದೆ. ಪಕ್ಷವನ್ನು ಜನರ ವಿರುದ್ಧ ಹಿಂಸೆಯೆಸಗಿ ಅವರನ್ನು ಹತ್ತಿಕ್ಕಲು ಒಂದು ಅಸ್ತ್ರವನ್ನಾಗಿ ಬಳಸಲು ಹೇಸದ ಸರ್ಕಾರ, ತಾತ್ವಿಕವಾಗಿ ಅಧೋಗತಿಯನ್ನು ಮುಟ್ಟಿದೆ ಎಂದು ಅವರು ತೀರ್ಮಾನಿಸದಂತಿದೆ. ಹೀಗಾಗಿ ಎಡರಂಗದಲ್ಲಿ ಬಿರುಕಗಳು ಕಾಣಿಸಕೊಳ್ಳತೊಡಗಿವೆ. ಸಿಪಿಐ, ಸರ್ಕಾರದ ಉದ್ಧಟತನವನ್ನು ಖಂಡಿಸಿದ್ದರೆ, ಆರ್‌ಎಸ್‌ಪಿ ಸರ್ಕಾರದಿಂದ ಹೊರಬರುವ ಆಲೋಚನೆಯಲ್ಲಿದೆ.

ಇದೆಲ್ಲ ಏಕಾಯಿತು? ಹೇಗಾಯಿತು? ರಾಜ್ಯದ ಮುಖ್ಯಮಂತ್ರಿ ಬುದ್ಧದೇವ ಭಟ್ಟಾಚಾರ್ಜಿ ಮಾರ್ಕ್ಸ್‌ವಾದಿ ಪಕ್ಷವನ್ನು ಹೊಸ ತಾತ್ವಿಕ ದಿಕ್ಕಿನೆಡೆಗೆ ಒಯ್ಯುವ ಉತ್ಸಾಹದಲ್ಲಿದ್ದಾರೆ. ಕಳೆದ ವಿಧಾನಸಭಾ ಚುನಾವಣೆಗಳಲ್ಲಿ ಎಲ್ಲರ ನಿರೀಕ್ಷೆಗಳ ವಿರುದ್ಧ ಅವರಿಗೆ ಜನತೆ ಮೂರನೇ ಎರಡರಷ್ಟು ಬಹುಮತ ನೀಡಿ ಬೆಂಬಲಿಸಿತು. ಇದರಿಂದ ಉತ್ತೇಜಿತರಾಗಿರುವ ಭಟ್ಟಾಚಾರ್ಜಿ ರಾಜ್ಯದಲ್ಲಿ ಅಭಿವೃದ್ಧಿಯ ಹೊಸ ಶಕೆ ಆರಂಭಿಸಿ ಬಂಗಾಳದ ಮಟ್ಟಿಗಾದರೂ ಯುಗಪುರುಷನೆನಿಸಿಕೊಳ್ಳುವ ಹಂಬಲದಲ್ಲಿದ್ದಂತಿದೆ. ಹಳೆಯ ಮಾರ್ಕ್ಸ್‌ವಾದಿ ತಾತ್ವಿಕ ನಿಲುವುಗಳನ್ನು ನಂಬಿ ಕೂತರೆ ಇದೆಲ್ಲ ಸಾಧ್ಯವಿಲ್ಲ ಎಂಬುದೂ

ಅವರಿಗೀಗ ಮನವರಿಕೆಯಾಗಿದೆ: ಖಾಸಗಿ ಬಂಡವಾಳ ಕುರಿತ ಮಾರ್ಕ್ಸ್‌ವಾದಿ ನಿಲುವು, ಬದಲಾದ ಜಾಗತಿಕ ಸಂದರ್ಭದಲ್ಲಿ ಅವ್ಯಾವಹಾರಿಕ ಎಂದು ಅವರಿಗನ್ನಿಸಿಬಿಟ್ಟಿದೆ. ಆದರೆ ಇವರಿಗನ್ನಿಸಿದ್ದು ಪಕ್ಷದ ಎಲ್ಲರಿಗೂ ಅನ್ನಿಸಿಲ್ಲ! ಅನ್ನಿಸಿದವರು ಹೇಳಿಕೊಳ್ಳುವಂತಿಲ್ಲ! ಏಕೆಂದರೆ, ಇದನ್ನೊಮ್ಮೆ ಒಪ್ಪಿಕೊಂಡುಬಿಟ್ಟರೆ, ಪಕ್ಷದ ತಾತ್ವಿಕ ಅಸ್ತಿವಾರವೇ ಅಲುಗಾಡಿ, ಅದರ ಇತಿಹಾಸ–ಪುರಾಣಗಳೆಲ್ಲವನ್ನೂ ಅಲ್ಲಗಳೆಯಬೇಕಾಗುತ್ತದೆ. ಪಕ್ಷದ ಅಸ್ತಿತ್ವವನ್ನೇ ನಿರಚನಗೊಳಿಸಿ ಪಕ್ಷವನ್ನು ಹೊಸದಾಗಿ 'ರಚಿಸ'ಬೇಕಾಗುತ್ತದೆ!. ಆದರೆ ಸದ್ಯದ ಭಾರತೀಯ ರಾಜಕೀಯ ಸಂದರ್ಭದಲ್ಲಿ ಇದು ಒಂದು ದುಸ್ಸಾಹಸವಾಗಿ ಪಕ್ಷದ ನಾಯಕರಿಗೆ ಕಂಡಿದೆ. ಏಕೆಂದರೆ, ಆಗ ಪಕ್ಷದ ತಾತ್ವಿಕ ಭಿನ್ನತೆಯೇ, ಅದು ಈವರೆಗೆ ಹಾಗೂ ಹೀಗೂ ಕಾಪಾಡಿಕೊಂಡು ಬಂದಿರುವ ಕ್ರಾಂತಿಕಾರಕತೆಯ ಬಿಂಬವೇ ಅಳಿಸಿಹೋಗಿ ಅದರ ಅಸ್ತಿತ್ವವೇ ಅನುಮಾನಾಸ್ಪದವಾಗುತ್ತದೆ. ಈ ತೊಳಲಾಟದಲ್ಲಿರುವ ಪಕ್ಷ ತಾತ್ವಿಕವಾಗಿ ಕವಲು ದಾರಿಯಲ್ಲಿದ್ದು, ತನ್ನ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಗೊಂದಲಕ್ಕೆ ಸಿಕ್ಕಿದೆ. ಇದೇ ಪಕ್ಷದ ಕೇರಳದ ಮುಖ್ಯಮಂತ್ರಿ ಅಚ್ಯುತಾನಂದನ್ ಹಳೆಯ ತಾತ್ವಿಕತೆಯನ್ನೇ ಎತ್ತಿ ಹಿಡಿಯುತ್ತಾ, ಪಕ್ಷದ ರಾಜ್ಯಾಧ್ಯಕ್ಷರ ವಿರುದ್ಧವೇ ಸಮರ ಸಾರಿದ್ದಾರೆ. ಅವರೀಗ 'ಅಭಿವೃದ್ಧಿ'ಯ ಹೊಸ ಏಜೆಂಟರಾಗಿರುವ ರಿಯಲ್ ಎಸ್ಟೇಟ್ ಉದ್ಯಮಿಗಳೊಂದಿಗೆ ಪಕ್ಷ ಹೊಂದಿರುವ ಸಖ್ಯವನ್ನು ಎತ್ತಿ ತೋರಿಸಿದ್ದಕ್ಕಾಗಿ ಸ್ವಲ್ಪ ಕಾಲದ ಹಿಂದೆಯಷ್ಟೇ ಅಶಿಸ್ತಿನ ಆಪಾದನೆ ಎದುರಿಸಿ, ಪಕ್ಷದ ನೀತಿ ನಿರೂಪಣಾ ವೇದಿಕೆಯಾದ ಪಾಲಿಟ್ ಬ್ಯೂರೋದಿಂದಲೇ ಉಚ್ಚಾಟನೆಯ ಶಿಕ್ಷೆ ಅನುಭವಿಸಬೇಕಾಯಿತು!

ಆದರೆ ಬುದ್ಧಿಜೀವಿ ಎನಿಸಿಕೊಂಡಿರುವ ಬುದ್ಧದೇವರಿಗೆ ಹೊಸ ತಾತ್ವಿಕ ದರ್ಶನವಾದಂತಿದೆ. ಮನುಷ್ಯ ನಾಗರೀಕತೆ ಈಗ ನಿರ್ಣಾಯಕವಾಗಿ ಕೃಷಿ ಸಂಸ್ಕೃತಿ ಘಟ್ಟದಿಂದ ಕೈಗಾರಿಕಾ ಸಂಸ್ಕೃತಿ ಘಟ್ಟಕ್ಕೆ ಹಾದು ಹೋಗುತ್ತಿರುವಂತೆ ಅವರಿಗೆ ಕಾಣಿಸತೊಡಗಿದೆ. ಇದು ಇತಿಹಾದ ಅನಿವಾರ್ಯ ಚಲನೆ. ಇದನ್ನು ಒಪ್ಪಿಕೊಳ್ಳದೇ ಹೋದರೆ ರಾಜ್ಯ, ರಾಷ್ಟ್ರ ಹಿಂದೆ ಬಿದ್ದು ಹೋಗುತ್ತವೆ; ಜನತೆ ಉದ್ಯೋಗಗಳಿಲ್ಲದೆ ಸಂಕಷ್ಟಕ್ಕೀಡಾಗುತ್ತಾರೆ ಎಂದು ಅವರು ಭಾವಿಸತೊಡಗಿದ್ದಾರೆ. ಇದು ಜಾಗತೀಕರಣ ವಾದಿಗಳು ಕಳೆದೆರಡು–ಮೂರು ದಶಕಗಳಿಂದಲೂ ಹೇಳಿಕೊಂಡು ಬರುತ್ತಿರುವ 'ಸತ್ಯ' ಎಂಬುದನ್ನರಿಯದೆ ಅವರು, ಇದು ಸ್ವತಃ ತಾನೇ ಈಗಷ್ಟೇ ಕಂಡುಕೊಂಡ ಸತ್ಯವೆಂಬಂತೆ ಅದನ್ನು ಅನುಷ್ಠಾನಗೊಳಿಸಲು ಅವತಾರ ಪುರುಷನ ಆತ್ಮವಿಶ್ವಾಸದೊಂದಿಗೆ ಹಠ ತೊಟ್ಟು ನಿಂತಿದ್ದಾರೆ. ಅವರ ಈ ನಿಲುವಿನಲ್ಲಿ ಸಾಮಾನ್ಯವಾಗಿ ಫ್ಯಾಸಿಸ್ಟ್‌ರಲ್ಲಿ ಕಾಣುವ ಸರ್ವಜ್ಞ ಗರ್ವ ಎದ್ದು ಕಾಣುತ್ತಿದೆ. ನಂದಿ ಗ್ರಾಮ ವಿಶೇಷ ಆರ್ಥಿಕ ವಲಯದ ವಿರುದ್ಧ ಹೋರಾಟವನ್ನು ಜನತೆಯ ಹೋರಾಟವೆಂದು ಪರಿಗಣಿಸದೆ; ರಾಜ್ಯದ ಕೈಗಾರಿಕಾಭಿವೃದ್ಧಿಯನ್ನು ಸಹಿಸದ (ಏಕೆ?) ನಕ್ಸಲೈಟರು, ತೃಣಮೂಲ ಕಾಂಗ್ರೆಸ್ಸಿಗರು ಸೇರಿದಂತೆ ತಮ್ಮ ರಾಜಕೀಯ ಶತ್ರುಗಳು ನಡೆಸಿರುವ ಪಿತೂರಿ ಎಂದು ನಂಬಿ ಅದನ್ನು ಹೊಸಕಿ ಹಾಕಲು ಕಟಿಬದ್ಧರಾಗಿ ನಿಂತಿರುವ ಬುದ್ಧದೇವ, ತಮ್ಮ ಈ

ಉದ್ಧಟತನದಿಂದಾಗಿ ಪ.ಬಂಗಾಳದಲ್ಲಿ ಎಡರಂಗದ ನಿರಂತರ ಆಡಳಿತ ದಾಖಲೆಯನ್ನು ಕೊನೆಗಾಣಿಸುವುದರಲ್ಲಿ ಯಶಸ್ವಿಯಾದರೂ ಆಶ್ಚರ್ಯವಿಲ್ಲ. ಅದು ಪಕ್ಷದ ಹಿತ ದೃಷ್ಟಿಯಿಂದಲೂ, ರಾಷ್ಟ್ರದ ಹಿತ ದೃಷ್ಟಿಯಿಂದಲೂ ಒಳ್ಳೆಯದೇ.

ಯಾಕೆ ಒಳ್ಳೆಯದು ಎಂದರೆ, ಈ ತಳಮಳದಲ್ಲಿ ಮಾರ್ಕ್ಸ್‌ವಾದಿ ಪಕ್ಷಕ್ಕೆ ತನ್ನ ತಾತ್ವಿಕತೆಯನ್ನು ಇಡಿಯಾಗಿ ಪುನರ್‌ಪರಿಶೀಲಿಕೊಳ್ಳುವ ಅವಕಾಶ ಒದಗುತ್ತದೆ. ಸೋವಿಯತ್ ಒಕ್ಕೂಟದ ಪತನವಾದ ನಂತರ ಜಗತ್ತನ್ನು ಅಮೆರಿಕಾ–ಚೀನಾ ಎಂಬ ಎರಡು ಧೃವಗಳ ಜಗತ್ತನ್ನಾಗಿ ನೋಡುವ ಭ್ರಮೆಗೆ ಸಿಲುಕಿ ತನ್ನ ನಿಲುವುಗಳನ್ನು ರೂಪಿಸಿಕೊಳ್ಳುತ್ತಾ ವಿಶ್ವಾಸಾರ್ಹತೆ ಕಳೆದುಕೊಳ್ಳುತ್ತಿರುವ ಈ ಪಕ್ಷ, ತಾತ್ವಿಕವಾಗಿ ದಿವಾಳಿಯ ಅಂಚಿನಲ್ಲಿದ್ದಂತೆ ತೋರುತ್ತಿದೆ. ಭಾರತದ ರಾಜಕಾರಣದಲ್ಲಿ ತಮ್ಮ ನಾಯಕರ ಸರಳ ಬದುಕು ಹಾಗೂ ತನ್ನದೇ ತಾತ್ವಿಕ ಬದ್ಧತೆಗಳಿಂದಾಗಿ, ಬಂಡವಾಳಶಾಹಿಗಳ ಅಂತಿಮ ವಿಜಯ ಯಾತ್ರೆಯಂತಿರುವ ಜಾಗತೀಕರಣದ ವಿರುದ್ಧ ಸಮರ ಸಾರಬಲ್ಲ ನೈತಿಕ ಸಾಮರ್ಥ್ಯವಿರುವ ಏಕೈಕ ರಾಜಕೀಯ ಪಕ್ಷವಾಗಿ ಈ ಪಕ್ಷ ಕಂಡಿದೆ, ನಿಜ. ಆದರೆ ಈಗ ಇದು ಮೂರು ದಶಕಗಳ ನಿರಂತರ ಆಡಳಿತ ಸುಖದಿಂದಾಗಿ ತಾತ್ವಿಕ ಜಡತೆಗೆ ಈಡಾದಂತೆ ತೋರುತ್ತಿದೆ. ಇದರ ನಾಯಕರ ಮನಸ್ಸುಗಳು ತುಕ್ಕು ಹಿಡಿದಿವೆ. ಇದು ಜ್ಯೋತಿ ಬಸು ಎಂಬ ಮಧ್ಯಮ ವರ್ಗಗಳ ಅಭಿರುಚಿಯ ಸುಲಭ ಆಡಳಿತಗಾರನ ಕಾಲಕ್ಕೇ ಆರಂಭವಾಯಿತೆಂದು ಹೇಳಲಾಗುತ್ತದೆ. ಇದರಿಂದಾಗಿ ಜಾಗತೀಕರಣದ ಸಂಕೀರ್ಣ ಪರಿಣಾಮಗಳನ್ನು ಅದರೆಲ್ಲ ಆಳಗಳಲ್ಲಿ ಅರಿಯುವ ಅಧ್ಯಯನಶೀಲತೆಯನ್ನೂ, ಸಾಮಾನ್ಯ ಜನತೆಯ ನಾಡಿಮಿಡಿತವನ್ನು ಅರಿಯುವ ಸೂಕ್ಷ್ಮತೆಯನ್ನೂ ಅವರು ಕಳೆದುಕೊಂಡಂತೆ ತೋರುತ್ತಿದೆ. ಹಾಗಾಗಿಯೇ ವಿಶೇಷ ಆರ್ಥಿಕ ವಲಯ ಯೋಜನೆಯನ್ನು ರಾಷ್ಟ್ರಮಟ್ಟದಲ್ಲಿ ತಾತ್ವಿಕವಾಗಿ ವಿರೋಧಿಸುತ್ತಲೂ, ತಾವು ಆಳುತ್ತಿರುವ ರಾಜ್ಯಗಳಲ್ಲಿ ಅದನ್ನು ಬೆಂಬಲಿಸುವ ದ್ವಂದ್ವಕ್ಕೆ ಸಿಕ್ಕಿದ್ದಾರೆ.

ಬುದ್ಧದೇವ ಭಟ್ಟಾಚಾರ್ಜಿ ಸೇರಿದಂತೆ ಈ ಪಕ್ಷದ ನಾಯಕರಿಗೆ ಕೈಗಾರಿಕೀಕರಣವೆಂದರೆ, ಮಾರ್ಕ್ಸ್ ಪರಿಕಲ್ಪಿಸಿದ್ದ ಐರೋಪ್ಯ ಸಂದರ್ಭದ ಕೈಗಾರಿಕೀಕರಣವೇ ಆಗಿದೆ. ಹಾಗೇ ಕೃಷಿ ಅಥವಾ ಗ್ರಾಮ ಸಂಸ್ಕೃತಿ ಎಂದರೆ ಮಾರ್ಕ್ಸ್ ಕಲ್ಪಿಸಿಕೊಟ್ಟ ಮೌಢ್ಯ–ಮುಟ್ಠಾಳತನಗಳ ಆಡೊಂಬಲವೇ ಆಗಿರುವಂತೆ ತೋರುತ್ತದೆ. ಜಗತ್ತಿನ ಮಾರ್ಕ್ಸ್‌ವಾದಿಗಳು ತಮ್ಮ ಮಣ್ಣಿಗನುಗುಣವಾಗಿ ಮಾರ್ಕ್ಸ್‌ವಾದವನ್ನು ಬೆಳೆಸಿದ್ದರೆ, (ಉದಾ: ಈರೋಪ್ ಹಾಗೂ ಲ್ಯಾಟಿನ್ ಅಮೆರಿಕಾದ ಚಿಂತಕರು, ಹೋರಾಟಗಾರರು) ಭಾರತದ ಮಾರ್ಕ್ಸ್‌ವಾದಿಗಳು ಮಾರ್ಕ್ಸ್‌ನ ಐರೋಪ್ಯ ನೋಟ ಕ್ರಮದಲ್ಲೇ ಇನ್ನೂ ಸಿಕ್ಕಿಹಾಕಿಕೊಂಡು ಒದ್ದಾಡುತ್ತಿದ್ದಾರೆ. ಹೀಗಾಗಿಯೇ, ಇವರ ಮಾರ್ಕ್ಸವಾದದಲ್ಲಿ ಸ್ಟಾಲಿನ್‌ನ ಕ್ರೌರ್ಯದ ಸುಳಿವೂ ಈಗ ಕಾಣತೊಡಗಿದೆ. ಹಾಗೆ ನೋಡಿದರೆ, ಲೋಹಿಯಾ ಹೇಳಿದ ಹಾಗೆ, ಮಾರ್ಕ್ಸ್‌ವಾದಿಗಳಿಗೂ ಅವರ ಪ್ರತಿದ್ವಂದ್ವಿಗಳಾದ ಬಂಡವಾಳಶಾಹಿಗಳಿಗೂ ಅಂತಹ ವ್ಯತ್ಯಾಸವೇನಿಲ್ಲ. ಇಬ್ಬರೂ ಬೃಹತ್ ಬಂಡವಾಳದ ಆಧುನಿಕ ಕೈಗಾರಿಕೆಗಳ ಆರಾಧಕರು.

ಜಗಳ ಏನಿದ್ದರೂ ಬಂಡವಾಳದ ಸ್ವರೂಪಕ್ಕೆ ಸಂಬಂಧಿಸಿದ್ದಷ್ಟೇ. ಈ ಜಗಳವೂ ಈಗ ಪರಿಹಾರವಾಗಿದೆ: ಚೀನಾವೇ ಈಗ ಆಕರ್ಷಕ ಮಾದರಿಯಾಗಿ ಕಂಡು, ವಿದೇಶಿ ಖಾಸಗಿ ಬಂಡವಾಳವನ್ನು ಭಾರತದ ಕಮ್ಯುನಿಸ್ಟರು ಒಪ್ಪಿಕೊಳ್ಳತೊಡಗಿದ್ದಾರೆ. ಆದರೆ ಚೀನಾದ ಕಮ್ಯುನಿಸ್ಟ್ ಆಡಳಿತಗಾರರಿಗಿರುವ ಸರ್ವಾಧಿಕಾರ ಬಲ ಭಾರತದ ಕಮ್ಯುನಿಸ್ಟರಿಗಿಲ್ಲ, ಇದೂ ಕಮ್ಯುನಿಸಮ್ಮೇ ಎಂದು ಹೇಳಿ ಜನತೆಯ ಬಾಯಿ ಮುಚ್ಚಿಸಲು!

ಬಹುಶಃ ಕಮ್ಯುನಿಸ್ಟ್ ಚಳುವಳಿ ತನ್ನ ಅತ್ಯುತ್ತಮ ದಿನಗಳಲ್ಲಿ ಜನತೆಯ ಮನದಲ್ಲಿ ಬಿತ್ತಿದ್ದ ಜನಪರ ನಂಬಿಕೆಗಳೇ ಇಂದು ನಂದಿಗ್ರಾಮದಲ್ಲಿ ವಿಶೇಷ ಆರ್ಥಿಕ ವಲಯದ ವಿರುದ್ಧ ಜನ ಪ್ರತಿಭಟಿಸಲು ಪ್ರೇರಣೆ ನೀಡಿವೆ! ಜನ ಈಗ ಪಕ್ಷವನ್ನು ಮೀರಿ ಬೆಳೆದಿದ್ದಾರೆ. ಅಂತಹ ಅನಿವಾರ್ಯತೆಯೂ ಈಗ ಉಂಟಾಗಿದೆ. ನೆಲದ ವಾಸನೆ ಬಲ್ಲ ಈ ಜನ, ತತ್ವಕ್ಕೂ ನೆಲದ ವಾಸನೆಗೂ ಸಂಬಂಧವೇ ಕಡಿದು ಹೋಗುತ್ತಿರುವ ಇಂದಿನ ಈ ರಾಜಕಾರಣದ ವಿರುದ್ಧ ಸಹಜವಾಗಿಯೇ ಸಿಡಿದೆದ್ದಿದ್ದಾರೆ. ಭಾರತದ ಹೃದಯವಿರುವುದು ಗ್ರಾಮಗಳಲ್ಲಿ ಎಂಬ ಗಾಂಧೀಜಿ ಅರಿವು ಈಗ ಈ ತೆರನಾಗಿ ಕಮ್ಯುನಿಸ್ಟ್ ನೆಲದಲ್ಲಿ ಸ್ಫೋಟಗೊಳ್ಳುತ್ತಿರುವುದು ಭಾರತದಲ್ಲಿ ಆರಂಭವಾಗಬೇಕಿರುವ ಹೊಸ ರಾಜಕಾರಣದ ದೃಷ್ಟಿಯಿಂದ ತುಂಬಾ ಅರ್ಥಪೂರ್ಣವೇ ಆಗಿದೆ. ಭೂಮಿಯಿಂದ ಹಣ ಬೆಳೆದುಕೊಳ್ಳುವುದನ್ನು ನೋಡಿ ಹೇಗೋ ಸಹಿಸಿಕೊಂಡಿದ್ದ ಭಾರತದ ಜನತೆ, ಈಗ ಭೂಮಿಯನ್ನೇ ಹಣವನ್ನಾಗಿ ಮಾಡಿಕೊಂಡು 'ತಾಯ್ತನ'ದ ಅದರ ಮೂಲ ಪಾವಿತ್ರ್ಯವನ್ನೇ ನಾಶ ಮಾಡಹೊರಟಿರುವ ತಾಯ್ಗಂಡತನದ ವಿರುದ್ಧ ಸೆಟೆದೆದ್ದು, ನಿರ್ಣಾಯಕ ಯುದ್ಧಕ್ಕೆ ಸಿದ್ಧವಾಗುತ್ತಿರುವಂತೆ ತೋರುತ್ತಿದೆ. ಹಾಗಾಗಿ ಇದು ಕೇವಲ ಒಂದು ಸರ್ಕಾರದ ವಿರುದ್ಧ ಅಥವಾ ಒಂದು ರಾಜಕೀಯ ನಿಲುವಿನ ವಿರುದ್ಧ ಆರಂಭವಾಗಿರುವ ಯುದ್ಧವಾಗಿರಲಾರದು. ಇದು ಜಾಗತೀಕರಣವೆಂಬ ಅಶ್ಲೀಲ ಮತ್ತು ಅಪವಿತ್ರ ಪ್ರಗತಿಪರತೆಯ ವಿರುದ್ಧದ ಯುದ್ಧದ ಸಾಂಕೇತಿಕ ಆರಂಭವೂ ಆಗಿರಬಹುದು.

ಏಕೆಂದರೆ, ಇಂದು ಬಂಗಾಳ ಮಾಡಿದ್ದನ್ನು ಭಾರತ ನಾಳೆ ಮಾಡುತ್ತದೆ ಎಂಬ ಹಳೆಯ ಮಾತೊಂದಿದೆ. ಬಂಗಾಳದ ಇಬ್ಭಾಗವೇ ಭಾರತ ರಾಷ್ಟ್ರೀಯ ಹೋರಾಟಕ್ಕೆ ದೊಡ್ಡ ಪ್ರೇರಣೆ ನೀಡಿತೆಂಬುದನ್ನು ನಾವು ಮರೆಯಬಾರದು. ಹಾಗೇ ಭಾಷಾ ರಾಷ್ಟ್ರೀಯತೆಗಳನ್ನೂ ಪುನರುಜ್ಜೀವನಗೊಳಿಸಿತು ಎಂಬುದನ್ನೂ. ಬಂಗಾಳ ಸದಾ ಇಂತಹ ಮೂಲ ಸತ್ಯಗಳ ಹುಡುಕಾಟದಲ್ಲಿರುವ ಮಣ್ಣು. ಅದೀಗ ಯಾವ ಮೂಲ ಸತ್ಯದ ಹುಡುಕಾಟದಲ್ಲಿರಬಹುದು? ಕಾದು ನೋಡಬೇಕು.

(ನವೆಂಬರ್ ೨೩, ೨೦೦೭)

■

ಎರಡಂಕಿ ಪ್ರಗತಿಪಥದಲ್ಲಿ ಎದುರಾಗಿರುವ ಪುಂಡು ಕಾಡಾನೆಗಳು!

ಗಾಂಧೀಜಿ ಒಮ್ಮೆ ಹಡಗಿನಲ್ಲಿ ಪ್ರಯಾಣಿಸುತ್ತಿದ್ದಾಗ, ಹಡಗಿನ ಒಂದು ಬದಿಯಲ್ಲಿ ಜನಸಂದಣಿ ಕಂಡು, ಏನದೆಂದು ವಿಚಾರಿಸಿದರಂತೆ. ಜನ ಸಂದಣಿಯಲ್ಲಿದ್ದ ಒಬ್ಬ, ಇಲ್ಲಿ ಹಡಗಿನ ಮಾಲೀಕರು ಪ್ರಯಾಣಿಕರ ಆಕರ್ಷಣೆಗೆಂದು ದೂರದರ್ಶಕವನ್ನು ಇಟ್ಟಿದ್ದಾರೆ. ಇದರಲ್ಲಿ ಬರಿಗಣ್ಣಿಗೆ ಕಾಣದಂತಹ ದೂರದ ಆಕಾಶ ಕಾಯಗಳನ್ನು ಕಾಣಬಹುದು ಎಂದು ಅವರನ್ನು ಅದರತ್ತ ಆಹ್ವಾನಿಸಿದನಂತೆ. ಗಾಂಧೀಜಿ ಅದಕ್ಕೆ ನಸುನಕ್ಕು, ನನ್ನ ಕಣ್ಣಿಗೆ ಕಾಣುವಷ್ಟು ಜಗತ್ತು ನನಗೆ ಬೇಕಾದಷ್ಟಾಯಿತು; ಮಿಕ್ಕದ್ದರ ಉಸಾಬರಿ ನನಗೆ ಸದ್ಯಕ್ಕೆ ಬೇಡ ಎಂದು ಒಂದಿಷ್ಟೂ ಕುತೂಹಲಿತರಾಗದೆ ಮುಂದೆ ನಡೆದರಂತೆ! ಇದನ್ನು ಸರಳವಾಗಿ, ಸುಲಭವಾಗಿ 'ಪ್ರಗತಿ ವಿರೋಧಿ' ಎಂದು ಕರೆದು 'ಪ್ರಗತಿ ಪಥ'ದಲ್ಲಿ ಮುಂದುವರೆದ ಜನರೇ, ತಮ್ಮ ಈ ಪ್ರಗತಿ ಪಥಕ್ಕೆ ಅಡ್ಡವಾಗಿ ಘೀಳಿಡುತ್ತಾ ನಿಂತಿರುವ ಪುಂಡಾನೆಗಳನ್ನು ಕಂಡು ಅವನ್ನು ಕಲ್ಲೆಸೆದು ಓಡಿಸುವ ಕರುಣಾಜನಕ ಸ್ಥಿತಿಗೆ ಸಿಕ್ಕಿದ್ದಾರೆ.

ಭ್ರಷ್ಟಾಚಾರ ಮತ್ತು ಕಪ್ಪುಹಣದ ವಿರುದ್ಧ ಆಂದೋಲನಗಳು ತಾರಕ ಗತಿ ಮುಟ್ಟುತ್ತಿರುವ ಸಂದರ್ಭದಲ್ಲೇ ಮೈಸೂರು ನಗರಕ್ಕೆ ಆನೆಗಳು ನುಗ್ಗಿ ನಗರದ 'ನಾಗರಿಕ'ರನ್ನು ಭಯಭೀತಗೊಳಿಸಿವೆ. ಅರೇ, ಇವೆರಡಕ್ಕೂ ಯಾವ ಸಂಬಂಧ ಎಂದು ವಿಚಿತ್ರ ರಾಗದಲ್ಲಿ ಆಶ್ಚರ್ಯದ ಧ್ವನಿ ಎತ್ತುವವರೇ ಹೆಚ್ಚೆಂಬುದು ನನಗೆ ಗೊತ್ತು. ಹೇಗೂ ಮುಖ್ಯಮಂತ್ರಿಗಳೇ, ಆನೆಗಳ ಹಾವಳಿಯನ್ನು ಇನ್ನು ಮುಂದೆ ಗಂಭೀರ ಸಮಸ್ಯೆಯೆಂದು ಪರಿಗಣಿಸುವುದಾಗಿ ಭರವಸೆ ನೀಡಿದ್ದಾರಲ್ಲವೇ? ಹಾಗೇ ನಮ್ಮ ಅರಣ್ಯ ಮಂತ್ರಿಯವರು ಆನೆಗಳು ನಗರ ಪ್ರವೇಶಿಸದಂತೆ ತಡೆಯಲು ವಿಶೇಷ ಕಾರ್ಯಪಡೆ ರಚಿಸುವುದಾಗಿಯೂ ಘೋಷಿಸಿದ್ದಾರಲ್ಲವೇ? ಆದರೆ, ಜನರ ವಿಚಿತ್ರ ರೀತಿಯ ಆಶ್ಚರ್ಯದಂತೆಯೇ ಈ ಇಬ್ಬರ ಈ ಭರವಸೆ ಮತ್ತು ಘೋಷಣೆಗಳೂ ಅಸಂಬದ್ಧ, ಹಾಸ್ಯಾಸ್ಪದ ಎನ್ನದೆ ವಿಧಿಯಿಲ್ಲ.

ಭಯೋತ್ಪಾದಕರ ವಿರುದ್ಧ ಕಟ್ಟೆಚ್ಚರದ ಮಾತಾಯಿತು, ವಿಶೇಷ ಕಮಾಂಡೋ

ಪಡೆಗಳ ರಚನೆಯೂ ಆಯಿತು. ಆದರೆ ಭಯೋತ್ಪಾದನೆಯ ಭಯ ಮತ್ತು ಹಾವಳಿ ನಿಂತಿದೆಯೇ? ಈಗ ಆನೆಗಳ ಹಾವಳಿ ವಿರುದ್ಧ ಕಟ್ಟೆಚ್ಚರದ ಮತ್ತು ವಿಶೇಷ ಕಾರ್ಯ ಪಡೆಯ ಮಾತು! ಇದರಿಂದ ಕಾರ್ಯತಃ ಏನಾದರೂ ಪ್ರಯೋಜನವಾದೀತೇ? ಎಲ್ಲ ಕಾಡುಗಳ ಅಥವಾ ನಗರಗಳ ಸುತ್ತ ಹಗಲೂ ರಾತ್ರಿ ಕಾವಲು ಪಡೆಗಳನ್ನು ನಿಯೋಜಿಸಲಾಗುವುದೇ? ಅದು ಸಾಧ್ಯವೇ? ಅದೇನೇ ಇರಲಿ, ಜನ ಜೀವನ ಯಾವಾಗಲೂ ಕಟ್ಟೆಚ್ಚರದಲ್ಲೇ, ವಿಶೇಷ ಪಡೆಗಳ ಕಣ್ಗಾವಲಿನಲ್ಲೇ ಇರುವಂತಾಗುವುದು ಯಾವುದೇ ಆರೋಗ್ಯಕರ ಸಮಾಜದ, ಅದೂ ಜಾಗತಿಕ ಶಕ್ತಿಯಾಗುವತ್ತ ಸಮೃದ್ಧವಾಗಿ ಬೆಳೆಯುತ್ತಿದೆಯೆಂದು ಹೇಳಲಾಗುವ ನಮ್ಮ ಸಮಾಜದ ಒಳ್ಳೆಯ ಲಕ್ಷಣವೇ?

ಸಮಾಜವಾದಿ ಚಿಂತಕ ಲೋಹಿಯಾ ವಿದೇಶವೊಂದರಲ್ಲಿ ತಮ್ಮ ಸಹವರ್ತಿಗಳೊಂದಿಗೆ ಕಾರಿನಲ್ಲಿ ಪಯಣಿಸುತ್ತಿದ್ದಾಗ ಎಲ್ಲಿಂದಲೋ ಕಣಜವೊಂದು ಹಾರಿ ಬಂದು ಅವರನ್ನೆಲ್ಲ ಕಾಡಿಸುತ್ತಿತ್ತಂತೆ. ಅವರ ಸಹವರ್ತಿಗಳು ಅದನ್ನು ಪ್ರತಿ ಬಾರಿ ಕೈಯಿಂದಲೋ, ಮತ್ತೊಂದರಿಂದಲೋ ಓಡಿಸಲು ಯತ್ನಿಸುತ್ತಿದ್ದರೂ, ಅದು ಪದೇ ಪದೇ ಹಾರಿ ಬಂದು ಕಾಡುವುದನ್ನು ಮುಂದುವರಿಸುತ್ತಿತ್ತಂತೆ. ಆಗ ಲೋಹಿಯಾ, ಕಾರಿನಲ್ಲಿ ಆ ಕಣಜದ ಗೂಡೆಲ್ಲಿದೆ ನೋಡಿ ಅದನ್ನು ಸ್ವಚ್ಛಗೊಳಿಸಿ ಎಂದು ಸೂಚಿಸಿ, ಅವರು ಕಾರ್ಯೋನ್ಮುಖರಾಗುವಂತೆ ಮಾಡಿದ ನಂತರವೇ ಅದರ ಹಾವಳಿ ತಪ್ಪಿತಂತೆ. ಹಾಗೇ, ಇಂದು ಭಯೋತ್ಪದನೆ, ವ್ಯಾಪಕ ಭ್ರಷ್ಟಾಚಾರ, ಕಪ್ಪು ಹಣದ ವ್ಯವಹಾರ, ಇವುಗಳ ಸುತ್ತಮುತ್ತ ದಿನನಿತ್ಯ ನಡೆಯುತ್ತಿರುವ ವಿವಿಧ ರೀತಿಯ ಗೂಂಡಾಗಿರಿ, ಕೊಲೆ, ಆತ್ಮಹತ್ಯೆ ಹಾಗೂ ಇನ್ನಿತರ ಅಪರಾಧಗಳು, ರೈತರ ಆತ್ಮಹತ್ಯೆ, ಪ್ರತಿಭಟನೆಗಳು, ನಕ್ಸಲೀಯರ ದಾಳಿಗಳು ಮತ್ತು ಇವೆಲ್ಲಕ್ಕೆ ಸಾಂಕೇತಿಕ ಕಳಶವಿಟ್ಟಂತೆ ಈಗ ಆನೆಗಳ ನಗರ ಪ್ರವೇಶ! ಇವೆಲ್ಲ ಪರಸ್ಪರ ಸಂಬಂಧಪಟ್ಟಂತಿದ್ದು, ಇವುಗಳ ಹಿಂದೆ ಒಂದು ಸಾಮಾನ್ಯ ಕಾರಣವಿರುವುದನ್ನು ಗುರುತಿಸದ ಹೊರತು, ಇವನ್ನು ನಿವಾರಿಸಲಾಗದು ಎಂಬ ಆಳದ ತಿಳುವಳಿಕೆ ಸಮಾಜದಲ್ಲಿ, ಮುಖ್ಯವಾಗಿ ನಮ್ಮನ್ನು ಆಳುವವರಲ್ಲಿ ತುರ್ತಾಗಿ ಮೂಡಬೇಕಿದೆ. ಅಥವಾ ಮೂಡುವಂತೆ ನಾವು ಸಾಮಾನ್ಯ ಜನ ನಮ್ಮ ಮಧ್ಯೆ ಪರಿಶುದ್ಧ ಮತ್ತು ಸಮರ್ಥ ನಾಯಕತ್ವವನ್ನು ಬೆಳೆಸಬೇಕಿದೆ. ಹಾಗಾಗಿ ಕಟ್ಟುನಿಟ್ಟಿನ ಕ್ರಮ, ಕಾರ್ಯಪಡೆಯ ರಚನೆ, ಮಸೂದೆ, ಕಾನೂನು ಕ್ರಮ ಇತ್ಯಾದಿಗಳು ಪದೇ ಪದೇ ಕಾಡುವ ಕಣಜವನ್ನು ಕೈಯಿಂದ ಓಡಿಸಿದಂತೆ ತತ್ಕಾಲೀನ ಪರಿಹಾರಗಳಾದಾವೇ ಹೊರತು, ಅವುಗಳ ಮೂಲವನ್ನು ಸ್ವಚ್ಛಗೊಳಿಸುವ ಶಾಶ್ವತ ಪರಿಹಾರವಾಗಲಾರದು.

ಆನೆಗಳು ನಗರವನ್ನು ಏಕೆ ಪ್ರವೇಶಿಸಿ ದಾಂಧಲೆ ನಡೆಸುವಂತಾಯಿತು? ಇದೇನು ಇದ್ದಕ್ಕಿದ್ದಂತೆ ಅಥವಾ ತುಂಬಾ ಅನಿರೀಕ್ಷಿತವಾಗಿ ಸಂಭವಿಸಿದ ಘಟನೆಯೇನಲ್ಲ. ಆನೆಗಳು ಮಾತ್ರವಲ್ಲ, ನಮ್ಮ 'ಅಭಿವೃದ್ಧಿ'ಯ ದಾಳಿಗೆ ಸಿಕ್ಕಿ ಅಳಿದುಳಿದಿರುವ ಇತರ ವನ್ಯ ಮೃಗಗಳೂ ಪ್ರಕೃತಿ ಸಹಜವಾದ ತಮ್ಮ ಮೂಲ ನಿವಾಸ ಸ್ಥಾನಗಳನ್ನು ಕಳೆದುಕೊಂಡು ಅಸಹಾಯಕವಾಗಿ ಮತ್ತು ಅನಿವಾರ್ಯವಾಗಿ ಜನವಸತಿ ಕಡೆ ಬರುತ್ತಿರುವ ಅನೇಕ

ಪ್ರಕರಣಗಳು ಇತ್ತೀಚಿನ ವರ್ಷಗಳಲ್ಲಿ ಪದೇ ಪದೇ ವರದಿಯಾಗುತ್ತಲೇ ಇವೆ. ನಾವು ಈ ಬೆಳವಣಿಗೆಯನ್ನು ಅವುಗಳ ತಂಟೆಕೋರತನ ಮಾತ್ರವೆಂಬಂತೆ, ಅದರ ಹಿಂದಿನ ಜೀವಪರಿಸರ ಒತ್ತಡವನ್ನು ಗಂಭೀರವಾಗಿ ಪರಿಗಣಿಸದೆ, ಹಾಗೆ ಕಾಡು ದಾಟಿ ಬಂದ ಆ ಪ್ರಾಣಿಗಳನ್ನು ಕೊಂದೋ, ಹೊಡೆದೋಡಿಸಿಯೋ ಅಥವಾ ನಾವು ಈಗ ಮಾಡಿರುವಂತೆ ಹಿಡಿದು ಹಾಕಿಯೋ ಸಮಸ್ಯೆಯನ್ನು ತತ್ಕಾಲೀನವಾಗಿ ಪರಿಹರಿಸಿಕೊಳ್ಳುತ್ತಿದ್ದೆವು. ಅದರ ಪರಿಣಾಮವನ್ನು ನಾವಿಂದು ಮೈಸೂರಿನಲ್ಲಿ ನೋಡಿದ್ದೇವೆ. ಹಾಗೇ ಈ ಮೈಸೂರು ಘಟನೆಯ ಮತ್ತು ಅದರ ಭವಿಷ್ಯದ ಸಾಧ್ಯ ರೂಪಗಳ ಕಲ್ಪನೆಯ ಭಯಾನಕತೆ ನಮ್ಮನ್ನು ಒಮ್ಮೆ ಎದ್ದು ಕೂತು ಯೋಚಿಸುವಂತೆ ಮಾಡಿದೆ. ಹಾಗೆ ಯೋಚಿಸುವವರಿಗೆ, ಈ ಸಮಸ್ಯೆಯನ್ನು ಕುರಿತ ನಮ್ಮ ಗ್ರಹಿಕೆಯೇ ಮತ್ತು ಹಾಗಾಗಿ ಅದರ ಪರಿಹಾರವೂ ಎಷ್ಟು ಮೇಲ್ಮೈ ಮಟ್ಟದ್ದಾಗಿತ್ತು ಎಂಬುದು ಗೊತ್ತಾಗುತ್ತದೆ.

ಈ ಘಟನೆಯ ಸಂಬಂಧವಾಗಿ ಟಿವಿ ವರದಿಯೊಂದರಲ್ಲಿ ಮೈಸೂರಿನ ಹೊರವಲಯದ ಬಡಾವಣೆಯೊಂದರ ದೊಡ್ಡ ಬಾಯಿಯ ಮಹಿಳೆಯೊಬ್ಬರು ತಮ್ಮ ವಿಶಾಲ ಮಹಡಿ ಮನೆಯ ಮುಂದೆ ತಮ್ಮ ಗೆಳತಿಯರೊಂದಿಗೆ ನಿಂತು, 'ಈ ಆನೆಗಳು ನಮ್ಮ ಮೈಸೂರಿಗೆ ಬರುತ್ತಿದ್ದಾಗ ಅರಣ್ಯ ಇಲಾಖೆಯವರು ಏನು ಮಾಡುತ್ತಿದ್ದರು?' ಎಂದು ಕ್ಯಾಮರಾ ಮುಂದೆ ಅರಚಾಡುತ್ತಿದ್ದುದನ್ನು ನೋಡಿ ನನಗೆ ನಗು ಬಂದಿತು. ಹೌದು, ಕಾಡಾನೆಗಳನ್ನು ಕಲ್ಲು ಹೊಡೆದು ಓಡಿಸಲು ಯತ್ನಿಸುವ ಮೂರ್ಖ ಜನ ಇನ್ನೆಂತಹ ಮಾತಾಡಿಯಾರು, ಅದು ಬೇರೆ ವಿಷಯ! ಆದರೆ ಇವರು ಕಾಡಾನೆಗಳನ್ನು ಕುರಿಗಳೆಂದೂ, ಅರಣ್ಯ ಇಲಾಖೆಯ ಸಿಬ್ಬಂದಿಯನ್ನು ಈ ಕುರಿಗಳನ್ನು ಕಾಯುವ ಕುರುಬರೆಂದು ಭಾವಿಸಿದ್ದಾರೋನೋ ತಿಳಿಯದು! ಇಲ್ಲಿ ಕೇಳಬೇಕಾದ ಮುಖ್ಯ ಮತ್ತು ದೊಡ್ಡ ಪ್ರಶ್ನೆಯೆಂದರೆ, ನೀವು ನಿಮ್ಮ ವಾಸ ಮತ್ತು ಜೀವನೋಪಾಯದ ಜಾಗವನ್ನು ಮಿತಿಯಿಲ್ಲದೆ ವಿಸ್ತರಿಸಿಕೊಳ್ಳುತ್ತಾ ಹೋಗಬಹುದು; ಅದರ ಪರಿಣಾಮವಾಗಿಯೇ, ನಿಮ್ಮಂತೆಯೇ ಈ ಭೂಮಿಯ ಮೇಲೆ ಬಾಳಲು ಬಂದ ವನ್ಯಜೀವಿಗಳು ತಮ್ಮ ವಾಸ ಮತ್ತು ಜೀವನೋಪಾಯದ ಜಾಗವನ್ನು ವಿಸ್ತರಿಸಿಕೊಳ್ಳಬಾರದೆ? ಎಂಬುದೇ ಆಗಿದೆ. ಮದ್ದು-ಗುಂಡು-ಬಂದೂಕು-ಬಾಂಬುಗಳೇ ನಿಮ್ಮ ತಳಿ ಶ್ರೇಷ್ಠತೆಯ ಹೆಗ್ಗುರುತುಗಳಾದಲ್ಲಿ, ಅವುಗಳನ್ನು ಬಳಸಿ ಅವನ್ನು ನಿಮ್ಮ 'ನಾಗರಿಕ ಗೂಂಡಾಗಿರಿ'ಯ ಮೂಲಕ ಹದ್ದುಬಸ್ತಿನಲ್ಲಿಡಲು ಸಾಧ್ಯವೇ, ಒಮ್ಮೆ ಪರೀಕ್ಷಿಸಿ ನೋಡಿ. ಹೇಗೂ ಈ 'ನಾಗರಿಕ ಗೂಂಡಾಗಿರಿ'ಯನ್ನು ನಾವು ಸಮಾಜ ರಕ್ಷಣೆಯ ಹೆಸರಿನಲ್ಲಿ ಕಾನೂನುಬದ್ಧ ಮಾಡಿಬಿಟ್ಟಿದ್ದೇವಲ್ಲ? ಅರಣ್ಯ ಸಚಿವರು ಪ್ರಸ್ತಾಪಿಸಿರುವ ಕಾರ್ಯಪಡೆಯ ಹಿಂದಿನ ತತ್ವವೂ ಸರಿ ಸುಮಾರು ಇದೇ-'ಮಾನವ ಕುಲಶ್ರೇಷ್ಠತೆ'ಯೇ-ಅಲ್ಲವೇ?

ಇತ್ತೀಚಿನ ಬೆಂಗಳೂರು ಮಹಾನಗರ ಪಾಲಿಕೆಯ ಚುನಾವಣೆಗಳ ನಂತರ ಯಾರೋ ಪಾಪ, ದುಃಖದಿಂದ ತಮ್ಮ ಸುಂದರ ಬೆಂಗಳೂರು ಈಗ ಬರೀ ಗೂಂಡಾಗಳ

ಆಳ್ವಿಕೆಗೆ ಒಳಗಾಗುತ್ತಿದೆ ಎಂದು ಅಲವತ್ತುಕೊಂಡರು. ಅದಕ್ಕೆ ನನ್ನ ಉತ್ತರ ಇದಾಗಿತ್ತು: ನಿಮ್ಮ ಸೌಂದರ್ಯ ಪ್ರಜ್ಞೆಯೇ ವಿಕ್ಷಿಪ್ತಗೊಂಡಂತಿದೆ. ಬೆಂಗಳೂರು ಈಗ ಸುಂದರ ನಗರವಾಗಿ ಉಳಿದಿಲ್ಲ. ಅದನ್ನು ನೀವು ಗೂಂಡಾಗಳು ಮಾತ್ರ ಆಳಬಲ್ಲ ರೀತಿಯಲ್ಲಿ ಕಟ್ಟಿಕೊಂಡಿದ್ದೀರಿ; ಅದಕ್ಕೆ ತಕ್ಕ ಬಾಳನ್ನೂ ಬಾಳುತ್ತಿದ್ದೀರಿ. ಹಾಗಾಗಿ, ನೀವು ಹೀಗೆ ದೂರುವ ಹಕ್ಕನ್ನು ಕಳೆದುಕೊಂಡಿದ್ದೀರಿ. ೨೬/೧೧ ಎಂದು ನಾವು ಪದೇ ಪದೇ ದೇಶಭಕ್ತಿಯ ಉಮ್ಮಳಿಕೆಯಲ್ಲಿ ಮುಂಬೈ ಮೇಲಿನ ದಾಳಿಯನ್ನು ನೆನಪಿಸಿಕೊಳ್ಳುತ್ತಾ, ಕಸಬ್‌ನನ್ನು ಇನ್ನೂ ಗಲ್ಲಿಗೇಕೇರಿಸಿಲ್ಲ ಎಂದು ಕ್ರುದ್ಧರಾಗಿ ಕೇಳುತ್ತಾ, ಪಾಕಿಸ್ಥಾನದ ಮೇಲೆ ಕಿಡಿ ಕಾರುತ್ತಲೇ ಇರುತ್ತೇವೆ. ಆದರೆ ಆ ದಾಳಿಕೋರರು ನಮ್ಮ ಕಣ್ಗಾವಲಿನಲ್ಲಿರುವ ಸಮುದ್ರದ ಮೇಲೆಯೇ ಮೈಲುಗಟ್ಟಲೆ ದೋಣಿಯಲ್ಲಿ ನಿರಾಳವಾಗಿ ತೇಲಿ ಬಂದು ಸಶಸ್ತ್ರಧಾರಿಗಳಾಗಿಯೇ *ಗೇಟ್ ವೇ ಆಫ್ ಇಂಡಿಯಾ* ಮೂಲಕ ಮುಂಬೈ ನಗರದ ಬೀದಿಗಳನ್ನು ಪ್ರವೇಶಿಸಿದರಲ್ಲಾ, ಆಗ ಮುಂಬೈನ 'ನಾಗರೀಕ'ರು ಏನು ಮಾಡುತ್ತಿದ್ದರು? ಅದೂ ಭಯೋತ್ಪಾದನೆಯ ಆತಂಕ ಉತ್ತುಂಗ ಸ್ಥಿತಿಯಲ್ಲಿದ್ದು, ಆ ಬಗ್ಗೆ ಜನಜಾಗೃತಿಯ ಆಂದೋಲನವೇ ನಡೆದಿದ್ದ ದಿನಗಳವು! ಆದರೆ ಅಂದು ಜನ ಮಾತ್ರ ಭಯೋತ್ಪಾದನೆಯ ಸಮಸ್ಯೆಗೂ ತಮಗೂ ಏನೂ ಸಂಬಂಧವಿಲ್ಲದಂತೆ; ಕೆಲವರು ಈ ಉಗ್ರರ ವಿಚಿತ್ರ ವೇಷವನ್ನು ನೋಡಿ ಸ್ವಲ್ಪ ಅನುಮಾನಗೊಂಡರೂ, ತಮಗೇಕೆ ಆ ಗೊಡವೆ ಮತ್ತು ಮುಂದಿನ ಪಡಿಪಾಟಲು ಎಂದೋ ಏನೋ, ತಂತಮ್ಮ ಬದುಕು ಕಟ್ಟಿಕೊಳ್ಳುವ ಮುಖ್ಯ 'ಕೆಲಸ'ಗಳಲ್ಲಿ ತೊಡಗಿಕೊಂಡರು! ಏಕೆಂದರೆ ಇಂತಹ ತಮ್ಮ ಬದುಕಿನ 'ಕೆಲಸ'ಗಳನ್ನು ಬಿಟ್ಟು, ಅಂತಹ ಸಾಮಾಜಿಕ ಪಡಿಪಾಟಲುಗಳಲ್ಲಿ ಸಿಕ್ಕಿ ಹಾಕಿಕೊಂಡರೆ, ಈ ಸ್ಪರ್ಧಾತ್ಮಕ ಜಗತ್ತಿನಲ್ಲಿ ಹಿಂದೆ ಉಳಿದುಹೋದೇವು ಎಂಬ ಆತಂಕ ಅವರದು!

–೨–

ಇದು ನಾವು ಕಟ್ಟಿಕೊಂಡಿರುವ ನಾಗರೀಕತೆಯ ಸತ್ವ, ಅದೂ ಮುಂಬೈ ಎಂಬ ಮಹಾನಗರದ ಮಹಾ ನಾಗರೀಕತೆಯ ಸತ್ವ! ನಾಗರೀಕತೆ ಎಂಬುದು ನಗರ ಎಂಬ ಶಬ್ದದಿಂದ ವ್ಯುತ್ಪತ್ತಿಯಾದುದು ಎಂದು ಕೇಳಿದ್ದೇನೆ. ನಗರ ಎಂಬುದು 'ನಾಗ'ದಿಂದ ತನ್ನ ವ್ಯುತ್ಪತ್ತಿಯನ್ನು ಪಡೆದಿದೆ. 'ನಾಗ' ಎಂದರೆ ಸರ್ಪ, ಶೀಘ್ರ ಚಲನೆ ಮತ್ತು ವೇಗಕ್ಕೆ ಪ್ರತೀಕ. ಅದರಲ್ಲಿ ವಿಷವೂ, ಇದ್ದರೂ ಇಲ್ಲದಂತೆ ಇದೆಯಲ್ಲ? ಆದರೂ ನಗರೀಕರಣವೇ– ವಿಷದ ಹೊಳೆಯೇ– ನಮ್ಮ 'ಅಭಿವೃದ್ಧಿ'ಯ ಮಂತ್ರವಾಗಿದೆ. ೨೦೧೫ರ ವೇಳೆಗೆ ಭಾರತವನ್ನು ನಗರ ದೇಶವನ್ನಾಗಿ ಮಾಡಬೇಕೆಂಬುದೇ ನಮ್ಮ ಪ್ರಧಾನಿ ಮನಮೋಹನ ಸಿಂಗರಿಗೆ ವಿಶ್ವ ಬ್ಯಾಂಕ್ ನೀಡಿರುವ ಕಾರ್ಯಕ್ರಮವಂತೆ! ಈ ಕಾರ್ಯಕ್ರಮ ಜನರ ಪ್ರತಿರೋಧದಿಂದಾಗಿ ಸದ್ಯಕ್ಕಂತೂ ಯಶಸ್ವಿಯಾಗುವಂತೆ ಕಾಣುತ್ತಿಲ್ಲವಾದರೂ, ಈ ಕಾರ್ಯಕ್ರಮದ ಹಪಾಹಪಿ ರಾಷ್ಟ್ರಾದ್ಯಂತ ಯಾವುದಾವುದೋ ರೂಪದಲ್ಲಿ ಕಾಣತೊಡಗಿರುವುದಂತೂ ನಿಜ. ಹಾಗಾಗಿಯೇ, ಒಂದು ಸಣ್ಣ ಉದಾಹರಣೆಯಾಗಿ

ಹೇಳುವುದಾದರೆ, ಇಂದು ಕಲ್ಲು, ಕಬ್ಬಿಣಗಳ ಗಣಿ ಮತ್ತು ಮರಳಿನ ಮಾಫಿಯಾವನ್ನು ಯಾರೂ ತಡೆಯಲಾಗದಾಗಿದೆ. ತಡೆಯಲು ಹೋದವರು– ಸರ್ಕಾರದಲ್ಲಿರುವವರೂ ಸೇರಿದಂತೆ– ಅದರ ತ್ವರಿತ ಚಲನೆ ಮತ್ತು ವಿಷ ಸ್ಫುರಣೆಗೆ ಬಲಿಯಾಗುತ್ತಿದ್ದಾರೆ. ಇದು ಗಣಿ ಮಾಲೀಕರ ಅಥವಾ ಮರಳು ಗುತ್ತಿಗೆದಾರರ ದುರಾಸೆಗೆ ಸಂಬಂಧಿಸಿದ ವಿಷಯವೇ ಅಲ್ಲ ಎಂಬುದು ಇಲ್ಲಿ ಮುಖ್ಯ ಸಂಗತಿ. ಅದು ಸಮಸ್ಯೆಯ ಸರಳೀಕರಣ. ಇದು ನಮ್ಮ 'ಅಭಿವೃದ್ಧಿ' ಕಲ್ಪನೆಯಲ್ಲೇ ಅಡಗಿರುವ ವಿಷದ ಬುಗ್ಗೆಯ ಪರಿಣಾಮ.

ಈಗ ಆಯ್ದ ಕೆಲವು ಜನರ ಕೈಗೆ ಅಲ್ಪಾವಧಿಯಲ್ಲೇ ಸುಲಭ 'ದುಡಿಮೆ'ಯ ಮೂಲಕ ರಾಶಿ ರಾಶಿ ಹಣ ಸೇರುವಂತಹ ಉದಾರ ಆರ್ಥಿಕ 'ವ್ಯವಸ್ಥೆ'ಯನ್ನು ಕಾನೂನುಬದ್ಧವಾಗಿಯೇ ಸ್ಥಾಪಿಸಲಾಗಿದೆ. ಹಾಗೇ ಈ ನವ ಶ್ರೀಮಂತರು ಆ ಹಣವನ್ನು ಸಕಾಲದಲ್ಲಿ ಖರ್ಚು ಮಾಡಲೇ ಬೇಕಾದಂತಹ ಒತ್ತಾಯ ಹಾಗೂ ಆಕರ್ಷಣೆಗಳಿರುವ ಮುಕ್ತ 'ಮಾರುಕಟ್ಟೆ'ಯನ್ನೂ ನಿರ್ಮಿಸಲಾಗಿದೆ. ಹಾಗಾಗಿ ಈ ಕೆಲವು ಜನ ತಮ್ಮ ಹಣವನ್ನು ಸುಮ್ಮನೆ ಕೊಳೆಯಲು ಬಿಡದೆ, ಸುಖಭೋಗಗಳ ಮೇಲೆ ಎಷ್ಟು ಖರ್ಚು ಮಾಡಿದರೂ ಅದರ ಸಿಬಿರೂ ಸವೆಯದೆ, ಮಾರುಕಟ್ಟೆಯಲ್ಲಿ ಇಂದು ಬಹು ಬೇಡಿಕೆಯಲ್ಲಿರುವ ನೆಲವನ್ನು ಸ್ಪರ್ಧಾತ್ಮಕವಾಗಿ ಕೊಳ್ಳತೊಡಗಿದ್ದಾರೆ. ಒಂದಲ್ಲ ಎರಡಲ್ಲ, ಹಲವು ವಿಶಾಲ ಬಂಗಲೆಗಳನ್ನೂ, ಮನೆಗಳ ಮೇಲೆ ಮನೆಗಳನ್ನು ಕಟ್ಟಿಸುತ್ತಿದ್ದಾರೆ. ಇದೊಂದು ವಿಷವ್ಯೂಹ. ಇಂದು ನಮ್ಮ ನಗರಗಳ ಮಧ್ಯಮ ವರ್ಗಗಳ ಬಡಾವಣೆಗಳಲ್ಲಿ ಪುನರ್‌ನವೀಕರಣಗೊಳ್ಳದ ಮನೆಯೇ ಇಲ್ಲವಾಗಿದೆ! ಬೀದಿ ಬೀದಿಯಲ್ಲೂ, ಇಟ್ಟಿಗೆ, ಮರಳು, ಕಬ್ಬಿಣದ ರಾಶಿ ಬಿದ್ದಿದ್ದು ಜನ ಓಡಾಡುವುದೇ ಕಷ್ಟವಾಗತೊಡಗಿದೆ! ಇನ್ನು ನವ ಶ್ರೀಮಂತರು ಬಾಡಿಗೆಗೆ ಮುಗಿಲೆತ್ತರದ ಅಪಾರ್ಟುಮೆಂಟುಗಳನ್ನೂ, ಭವ್ಯ ಮಾಲ್‌ಗಳನ್ನೂ, ತೋಟಗಳಲ್ಲಿ ರೆಸಾರ್ಟುಗಳನ್ನೂ, ಹೋಂಸ್ಟೇಗಳನ್ನೂ ಕಟ್ಟಿಸುವ ಮೂಲಕ ತಮ್ಮ ದೇಶಭಕ್ತಿಯನ್ನು ಮೆರೆಯುತ್ತಾ ದೇಶದ ಆರ್ಥಿಕತೆ ಎರಡಂಕಿ ದರದಲ್ಲಿ ಬೆಳೆಯಲು ತಮ್ಮ ಪಾಲನ್ನು ಸಲ್ಲಿಸಲು ಹಗಲೂ ರಾತ್ರಿ ದುಡಿಯುತ್ತಿದ್ದಾರೆ! ಇದಕ್ಕೆ ಅತ್ಯಗತ್ಯವಾಗಿ ಬೇಕಾದ ಅಪಾರ ಪ್ರಮಾಣದ ಮಣ್ಣು, ಕಲ್ಲು, ಕಬ್ಬಿಣ, ಮರ, ಮರಳನ್ನು ಒದಗಿಸುವ ಸುಗಮ ವ್ಯವಸ್ಥೆ ಬೇಡವೇ? ಇದಕ್ಕೆ ನಮ್ಮ ಬೆಟ್ಟ ಗುಡ್ಡಗಳನ್ನು ಅಗೆಯದಿರಲು, ಭೂಮಿಯನ್ನು ಬಗೆಯದಿರಲು, ಅರಣ್ಯಗಳನ್ನು ಕಡಿಯದಿರಲು, ನದಿಗಳನ್ನು ಒತ್ತರಿಸಿ ಬತ್ತಿಸದಿರಲು ಆಗುತ್ತದೆಯೇ? ಅಧಿಕ ಸುಖದ ಆಸೆಗಳನ್ನು ಸೃಷ್ಟಿಸುವುದು ಅಭಿವೃದ್ಧಿಯಾಗುವುದಾದರೆ, ಆ ಆಸೆಗಳನ್ನು ಪೂರೈಸಿಕೊಳ್ಳಲು ಹವಣಿಸುವುದು ಅಭಿವೃದ್ಧಿ ವಿರೋಧಿ ಹೇಗಾದೀತು? ಅದನ್ನು ಆರಂಭಿಸಿದವರೇ ಅದನ್ನು ತಡೆಯಲೂ ಯತ್ನಿಸುವುದು ಎಷ್ಟು ನೈತಿಕ?

ಇದು ಸರ್ಕಾರಕ್ಕೂ ಗೊತ್ತಿಲ್ಲದಿಲ್ಲ. ಹಾಗಾಗಿಯೇ ಅದು ಈ 'ನೈತಿಕತೆ'ಯ ಒತ್ತಡದಲ್ಲಿ; ಪ್ರತ್ಯಕ್ಷವಾಗಿ ಪರಿಸರ ರಕ್ಷಣೆಯ ಕಾನೂನನ್ನೂ ಮಾಡುತ್ತದೆ, ಪರೋಕ್ಷವಾಗಿ ಆ ಕಾನೂನುಗಳನ್ನು ಉಲ್ಲಂಘಿಸಲೂ ಅವಕಾಶ ಮಾಡಿಕೊಡುತ್ತದೆ. ಅಥವಾ

ಉಲ್ಲಂಘನೆಗಳ ಬಗ್ಗೆ ಬಾಯಲ್ಲಿ ವೀರಾವೇಶದ ಮಾತುಗಳನ್ನಾಡುತ್ತಾ ತನ್ನ ಕಣ್ಣುಗಳನ್ನು ಮಾತ್ರ ಮುಚ್ಚಿಕೊಂಡಿರುತ್ತದೆ. ಗಣಿ ಸಂಪತ್ತಿನ ಲೂಟಿ, ಅರಣ್ಯ ನಾಶ, ಮರಳು ಸಾಗಣೆಗಳ ಬಗ್ಗೆ ನಮ್ಮ ರಾಜ್ಯ ಸರ್ಕಾರದ ನಿಲುವು ಇದಕ್ಕೊಂದು ಉತ್ತಮ ನಿದರ್ಶನ. ನಮ್ಮ ಲೋಕಾಯುಕ್ತರೇನೋ ಹೋದಲ್ಲೆಲ್ಲ ರಾಜ್ಯದ ಸಂಪತ್ತು ಲೂಟಿಯಾಗುತ್ತಿದೆ ಎಂದು ಕೂಗಿಕೊಂಡಿದ್ದೇ ಬಂತು; ಯಾವ ಪ್ರಯೋಜನವೂ ಇಲ್ಲದಾಗಿದೆ! ಅದೇನೇ ಇರಲಿ, ಇದನ್ನೆಲ್ಲ ನಾವು-ಈ ಅಧಿಕ ಆಸೆಗಳನ್ನು ನೈತಿಕವಾಗಿ ಕೆಟ್ಟದ್ದು ಎಂದು ಭಾವಿಸುವವರು-ಭ್ರಷ್ಟಾಚಾರ ಮತ್ತು ರಾಜಕೀಯ ಅನಾಚಾರ ಎಂದು ಕರೆಯುತ್ತೇವೆ. ಇದಕ್ಕೆ ವಿರುದ್ಧವಾಗಿ ಅವರು ನಮ್ಮನ್ನು ಅಭಿವೃದ್ಧಿಗೆ ಅಡ್ಡಗಾಲು ಹಾಕುವ ಅಧಿಕ ಪ್ರಸಂಗಿಗಳು ಎಂದು ಕರೆಯುತ್ತಾರೆ! ಅಲ್ಲಿಗೆ ಈ ಚರ್ಚೆಯ ವೃತ್ತ ಪೂರ್ಣಗೊಂಡಿತಲ್ಲ?

ಇದರಿಂದ ಗೊಂದಲಗೊಳ್ಳುವ ಸಾಮಾನ್ಯ ಜನ ಈ ಗೊಂದಲವನ್ನು, ತಾವು ಭಾಗಿಯಾದ ಭ್ರಷ್ಟಾಚಾರದ (ಉದಾಹರಣೆಗೆ ತಮಗೆ ನೈತಿಕ ನೆಲೆಯಲ್ಲಿ ಅಥವಾ ಕಾನೂನುಬದ್ಧವಾಗಿ ಸಿಗಲಾರದ ಅನುಕೂಲಗಳನ್ನು ಪಡೆಯಲು ನೀಡುವ ಲಂಚ-ರುಷುವತ್ತುಗಳ) ಮತ್ತು ರಾಜಕೀಯ ಅನಾಚಾರದ (ಚುನಾವಣೆಗಳಲ್ಲಿ ಜಾತಿ-ಹಣ-ಹೆಂಡದ ಆಮಿಷಗಳಿಗೆ ಒಳಗಾಗುವ) ಪ್ರಕರಣಗಳನ್ನು ಜಾಣ ಮರೆವಿನಲ್ಲಿ ಬದಿಗಿಟ್ಟು, ಮಿಕ್ಕೆಲ್ಲ ಭ್ರಷ್ಟಾಚಾರ-ರಾಜಕೀಯ ಅನಾಚಾರಗಳ ವಿರುದ್ಧ ಬೊಬ್ಬೆ ಹಾಕುತ್ತಾ ನಿವಾರಿಸಿಕೊಳ್ಳಲು ಯತ್ನಿಸುತ್ತಲೇ ಇರುತ್ತಾರೆ. ಜನಮನದ ಈ ಮಾನಸಿಕ ಒಡಕಿನ ಮೂಲ ಎಲ್ಲಿದೆ ಮತ್ತು ಇದಕ್ಕೂ ಆಳುವ ವ್ಯವಸ್ಥೆ ಇಂದು ತನ್ನ ಅಭಿವೃದ್ಧಿಯ ಹಪಾಹಪಿಯಲ್ಲಿ ಎದುರಿಸುತ್ತಿರುವ ನೈತಿಕ ಬಿಕ್ಕಟ್ಟಿಗೂ ಎಂತಹ ಸಂಬಂಧವಿದೆ? ಇದನ್ನು ಗುರುತಿಸದೆ, ಭ್ರಷ್ಟಾಚಾರ ಮತ್ತು ಕಪ್ಪುಹಣದ ವಿರುದ್ಧ ನಾವಾಗಲೀ, ಅಣ್ಣಾ ಹಜಾರೆ ಅಥವಾ ಬಾಬಾ ರಾಂದೇವ್ ಹಾಗೂ ಅವರ ಬೆಂಬಲಿಗರಾಗಲೀ ಸಾರಾಸಗಟಾದ ಭಾಷೆಯಲ್ಲಿ ಹೋರಾಟದ ಮಾತಾಡುವುದು ಅರ್ಧ ಆತ್ಮದ್ರೋಹದ ಹಾಗೂ ಅರ್ಧ ಭೋಳೆತನದ ಪ್ರದರ್ಶನ ಮಾತ್ರವೆನಿಸುತ್ತದೆ. ಅದು, ಪ್ರಕೃತಿಯ ಒತ್ತಡಕ್ಕೆ ಸಿಕ್ಕಿ ಮೈಸೂರು ನಗರವನ್ನು ಪ್ರವೇಶಿಸಿದ ಕಾಡಾನೆಗಳ ಭೀತಿಯನ್ನು, ಅಂದಿನ ಮಟ್ಟಿಗೆ ತಹಬಂದಿಗೆ ತಂದುಕೊಂಡು ನೆಮ್ಮದಿಯ ನಿಟ್ಟುಸಿರು ಬಿಡುವ ಮೂರ್ಖತನದಂತೆಯೇ ಸರಿ!

ಜಪಾನಿನ ಸುಪ್ರಸಿದ್ಧ ಚಲಚಿತ್ರ ನಿರ್ದೇಶಕ ಕುರೋಸಾವಾನ ಚಲಚಿತ್ರವೊಂದರಲ್ಲಿ ನಗರದ ಹುಡುಗನೊಬ್ಬ ಹಳ್ಳಿಯೊಂದಕ್ಕೆ ಭೇಟಿ ನೀಡಿ, ಅದರ ಮುಗ್ಧ ಸೌಂದರ್ಯಕ್ಕೆ ಮಾರು ಹೋಗಿ, ಆ ರಾತ್ರಿ ಅಲ್ಲಿಯೇ ಉಳಿಯಲು ನಿರ್ಧರಿಸುತ್ತಾನೆ. ಆದರೆ ಅವನು ಆ ಹಳ್ಳಿಯಲ್ಲಿ ವಿದ್ಯುತ್ತಿಲ್ಲ ಎಂದು ತಿಳಿದು ಹೌಹಾರಿ, ಬೆಳಕೇ ಇಲ್ಲದೆ ಕಗ್ಗತ್ತಲಲ್ಲಿ ರಾತ್ರಿ ಕಳೆಯುವ ಬಗ್ಗೆ ಆತಂಕಿತರಾಗಿ ಹಳ್ಳಿಯ ವಯೋವೃದ್ಧನನ್ನು ಆ ಬಗ್ಗೆ ಪ್ರಶ್ನಿಸುತ್ತಾನೆ. ಆ ವಯೋವೃದ್ಧ ಇವನ ಪ್ರಶ್ನೆಯಿಂದ ಆಶ್ಚರ್ಯಚಕಿತನಾಗಿ, 'ಅರೇ, ರಾತ್ರಿ ಎಂದರೆ ಇರಬೇಕಾದುದೇ ಹಾಗಲ್ಲವೇ?' ಎಂದು ತಿರುಗಿ ಅವನನ್ನೇ ಪ್ರಶ್ನಿಸುತ್ತಾನೆ! ಈ ವಯೋವೃದ್ಧನ ಈ ಸಹಜ ಮುಗ್ಧತೆಯನ್ನು ಗಾಂಪತನವೆಂದು ನಮ್ಮ ಅಭಿವೃದ್ಧಿತನದ

ಹುಸಿ ಹಮ್ಮಿನಲ್ಲಿ ಹೀನಾಯವಾಗಿ ತಿರಸ್ಕರಿಸುವ ನಾವು, ಯಾವುದು ಸಹಜವಾಗಿ ಹೇಗೆ ಇರಬೇಕೋ ಹಾಗೆ ಬಿಲ್‌ಕುಲ್ ಇರದಂತೆ ಮಾಡುವ ನಮ್ಮ ಸಾಹಸಗಳನ್ನೇ ನಾಗರೀಕತೆ, ಆಧುನಿಕತೆ, ಅಭಿವೃದ್ಧಿ ಎಂದೆಲ್ಲಾ ಎಂದು ಕರೆದುಕೊಂಡು ಬೀಗುತ್ತಿದ್ದೇವೆ. ನಮ್ಮ ನಗರಗಳನ್ನು ಅಮೆರಿಕಾದ ನಗರಗಳಲ್ಲಿರುವಂತೆ ರೋಚಕ ಮತ್ತು 'ಅಭಿವೃದ್ಧಿಪರ'ವೆಂದು ಹೇಳಲಾಗುವ ರಾತ್ರಿ ಬದುಕಿಗಾಗಿ ವಿದ್ಯುತ್ ಬೆಳಕಿನಲ್ಲಿ ಜಗಮಗಿಸುವಂತೆ ಮಾಡುವ ಆಸೆಯ ಆವೇಗಕ್ಕೆ ಸಿಕ್ಕಿ, ಅತ್ಯಾಧುನಿಕ ಅಣುವಿದ್ಯುತ್ ಸ್ಥಾವರಗಳನ್ನು ಆಹ್ವಾನಿಸುತ್ತಿದ್ದೇವೆ. ಜೊತೆಗೇ ಫುಕೋಶಿಮಾಗಳನ್ನೂ ಆಹ್ವಾನಿಸುತ್ತಿದ್ದೇವೆ ಎಂಬುದನ್ನು ಮಾತ್ರ ಮರೆಯುತ್ತಿದ್ದೇವೆ!

ಗಾಂಧೀಜಿ ಒಮ್ಮೆ ಹಡಗಿನಲ್ಲಿ ಪ್ರಯಾಣಿಸುತ್ತಿದ್ದಾಗ, ಹಡಗಿನ ಒಂದು ಬದಿಯಲ್ಲಿ ಜನಸಂದಣಿ ಕಂಡು, ಏನದೆಂದು ವಿಚಾರಿಸಿದರಂತೆ. ಜನ ಸಂದಣಿಯಲ್ಲಿದ್ದ ಒಬ್ಬ, ಇಲ್ಲಿ ಹಡಗಿನ ಮಾಲೀಕರು ಪ್ರಯಾಣಿಕರ ಆಕರ್ಷಣೆಗೆಂದು ದೂರದರ್ಶಕವನ್ನು ಇಟ್ಟಿದ್ದಾರೆ. ಇದರಲ್ಲಿ ಬರಿಗಣ್ಣಿಗೆ ಕಾಣದಂತಹ ದೂರದ ಆಕಾಶ ಕಾಯಗಳನ್ನು ಕಾಣಬಹುದು ಎಂದು ಅವರನ್ನು ಅದರತ್ತ ಆಹ್ವಾನಿಸಿದನಂತೆ. ಗಾಂಧೀಜಿ ಅದಕ್ಕೆ ನಸುನಕ್ಕು, ನನ್ನ ಕಣ್ಣಿಗೆ ಕಾಣುವಷ್ಟು ಜಗತ್ತು ನನಗೆ ಬೇಕಾದಷ್ಟಾಯಿತು; ಮಿಕ್ಕದ್ದರ ಉಸಾಬರಿ ಸದ್ಯಕ್ಕೆ ನನಗೆ ಬೇಡ ಎಂದು ಒಂದಿಷ್ಟೂ ಕುತೂಹಲಿತರಾಗದೆ ಮುಂದೆ ನಡೆದರಂತೆ! ಇದನ್ನು ಸರಳವಾಗಿ, ಸುಲಭವಾಗಿ 'ಪ್ರಗತಿ ವಿರೋಧಿ' ಎಂದು ಕರೆದು 'ಪ್ರಗತಿ ಪಥ'ದಲ್ಲಿ ಮುಂದುವರೆದ ಜನರೇ, ತಮ್ಮ ಈ ಪ್ರಗತಿ ಪಥಕ್ಕೆ ಅಡ್ಡವಾಗಿ ಘೀಳಿಡುತ್ತಾ ನಿಂತಿರುವ ಪುಂಡಾನೆಗಳನ್ನು ಕಂಡು ಅವನ್ನು ಕಲ್ಲೆಸೆದು ಓಡಿಸುವ ಕರುಣಾಜನಕ ಸ್ಥಿತಿಗೆ ಸಿಕ್ಕಿದ್ದಾರೆ.

ಆದರೆ ಎಲ್ಲಿಯವರೆಗೆ ಈ ದೇಹಕ್ಕೆ, ಈ ಮನಸ್ಸಿಗೆ, ಈ ಭೂಮಿಗೆ, ಅದರೊಳಗಿನ ಸಂಪತ್ತಿಗೆ, ಅದರ ಮೇಲಿನ ಈ ಆಕಾಶಕ್ಕೆ, ಈ ಗಾಳಿಗೆ, ಕಾಡಿಗೆ, ಕಾಡಿನೊಳಗಿನ ಜೀವ ಜಗತ್ತಿಗೆ ಧಾರಣೆಯ, ಸೈರಣೆಯ ಒಂದು ಮಿತಿಯಿದೆ; ಅದನ್ನು, ರಾಶಿ ರಾಶಿ ಹಣ, ಮನೆ, ಒಡವೆ, ವಸ್ತ್ರ, ಮಾಹಿತಿ- ಮನರಂಜನೆಯ ಸುಖಭೋಗಗಳ ಸಾಧನ ಸಲಕರಣೆಗಳನ್ನು ಅಡ್ಡಾದಿಡ್ಡಿ ಬಳಸಿ ದಾಟಿ ಹೊರಟಿರುವ ನಮಗೆ ಎಂದೂ ತೃಪ್ತಿಯಲ್ಲಿ ಕೊನೆಗೊಳ್ಳುವ ನಿಜವಾದ ಸುಖ ಒದಗಿಬರಲಾರದು. ಈ ಆಳದ ಅರಿವು ನಮಗೆ ಉಂಟಾಗುವುದಿಲ್ಲವೋ; ಆ ಅರಿವು ಉಂಟಾಗುವಂತಹ ವ್ಯವಧಾನ- ವಿಶ್ರಾಂತಿಗಳ ಬದುಕಿಗೆ ನಾವು ಮರಳುವುದಿಲ್ಲವೋ, ಅಲ್ಲಿಯವರೆಗೆ ನಾವು ನಮ್ಮ ಹಳ್ಳಿಗಳನ್ನು ಹಾಳುಕೊಂಪೆಗಳೆಂದು ಹಳಿದು ನಾಶ ಮಾಡುತ್ತಾ, ನಗರಗಳನ್ನು ಹುತ್ತಗಳಂತೆ ಕಟ್ಟುತ್ತಾ, ನಮ್ಮ ಈ ಅರ್ಧ ಮೃಗ- ಅರ್ಧ ಮನುಷ್ಯ ಅವಸ್ಥೆಯಲ್ಲಿ ಮುಂದುವರೆಯುವುದು ನಮ್ಮ ಕರ್ಮವೇ ಆಗಿರುತ್ತದೆ.

(ಜುಲೈ, ೨೦೧೧)

■

ರಾಷ್ಟ್ರ ಒಡೆಯುವ ಅಭಿವೃದ್ಧಿ

ಹೊಸ ಆರ್ಥಿಕ ರಾಜಕಾರಣವೆಂದರೆ ಇದು. ಪಾರಮಾರ್ಥಿಕಕ್ಕೇ ಅವಕಾಶ ಕೊಡದ ಇದರಲ್ಲಿ ಪಾಲ್ಗೊಂಡಿರುವ ಈ ಬಹುತೇಕ ಶಿಕ್ಷಿತ ಜನ ಉತ್ಪತ್ತಿ ಮಾಡುತ್ತಿರುವುದು 'ಹಣ'ವನ್ನು ಮಾತ್ರ, ಅದೂ, ಕಾಣದ ತಮ್ಮ ಮಾಲೀಕರ ಸೇವೆಯಲ್ಲಿ. ಇದರಿಂದ ಸುಸ್ಥಿರವಾದ–ಆಪತ್ಕಾಲದಲ್ಲಿ ಸಾರ್ವಜನಿಕರಿಗೆ ಒಂದಲ್ಲ ಒಂದು ರೀತಿಯಲ್ಲಿ ಆಸರೆಯಾಗಬಲ್ಲ–'ಆಸ್ತಿ' ನಿರ್ಮಾಣವಾಗುತ್ತಿಲ್ಲ. ನಿಜವಾಗಿ ಇಂತಹ ಆಸ್ತಿ ನಿರ್ಮಾಣವಾಗುತ್ತಿರುವುದು ಹಳ್ಳಿಗಳಿಂದ ಬಂದ ಅಶಿಕ್ಷಿತ ಕೂಲಿಕಾರರಿಂದ. ಅದರೆ ಇವರು ಹೊಸ ಆರ್ಥಿಕ ವ್ಯವಸ್ಥೆಯ ನಿಜವಾದ ಅಸ್ಪೃಶ್ಯರು. ತಾವೇ ಕೈಯ್ಯಾರೆ ನಿರ್ಮಿಸಿದ ಆಸ್ತಿಗಳಿಂದ–ವಿಶೇಷವಾಗಿ ಮೂಲಭೂತ ಸೌಕರ್ಯಗಳಿಂದ–ಇವರು ನಿಷೇಧಿತರು. ಇವರಲ್ಲಿ ನಮ್ಮ ಸಾಂಪ್ರದಾಯಿಕ ಅಸ್ಪೃಶ್ಯರೇ ಹೆಚ್ಚು ಎಂಬುದೂ ನಿಜ. ಅಂದರೆ ಇದು ಹಳೇ ಜಾತಿವ್ಯವಸ್ಥೆಯನ್ನೊಳಗೊಂಡ ಹೊಸ ಜಾತಿವ್ಯವಸ್ಥೆ. ಈ ವ್ಯವಸ್ಥೆಯ ಶೂದ್ರರು ಮತ್ತು ಅಸ್ಪೃಶ್ಯರು ಯಾವುದೇ ರಚನಾತ್ಮಕ ಅನುಸಂಧಾನಕ್ಕೆ ಸಿಗದಂತಹವರು. ಅಂತಹ ಅವಕಾಶವೇ ತೆರೆದುಕೊಳ್ಳಲಾಗದಂತಹ ಆದಾಯ ಸ್ತರಗಳಲ್ಲಿ ಸಿಕ್ಕಿಹಾಕಿಕೊಂಡವರು. ದುಡಿಮೆಯ ಹೊಸ ರೂಪಗಳಿಗೆ ಮತ್ತು ಕೌಶಲ್ಯಗಳಿಗೆ ತೆರೆದುಕೊಳ್ಳಲಾಗದವರು. ಹೊಸ ಚರಿತ್ರೆಯಿಂದಲೂ ಶಪಿತರಾದವರು.

ನಾನು ಎಚ್.ಟಿ.ಕೃಷ್ಣಪ್ಪನವರನ್ನು ನೋಡಿಲ್ಲ. ಆದರೆ ಅವರು ನಮ್ಮ ಗೌರವಾನ್ವಿತ ರಾಜಕಾರಣಿಗಳಾಗಿದ್ದರು ಎಂಬುದನ್ನು ಬಲ್ಲೆ. ಮಂಡ್ಯದ ಕೆ.ವಿ.ಶಂಕರೇಗೌಡರ ಪರಂಪರೆಯಲ್ಲಿನ ಅನೇಕ ರಾಜಕಾರಣಿಗಳಂತೆ ನಾಗಮಂಗಲದ ಈ ಕೃಷ್ಣಪ್ಪನವರೂ ಎಂದೂ ಸಾರ್ವಜನಿಕ ಜೀವನದಲ್ಲಿ ಸಭ್ಯತೆಯ ಎಲ್ಲೆಗಳನ್ನು ಮೀರಿ ಹೋಗಲಿಲ್ಲ. ಕಳೆದ ಶತಮಾನದ ಎಂಭತ್ತರ ದಶಕದ ರಾಜಕಾರಣ, ಒಂದು ರೀತಿಯಲ್ಲಿ ಕರ್ನಾಟಕ ರಾಜ್ಯ ರಾಜಕಾರಣದ ಸಂಕ್ರಮಣ ಘಟ್ಟ. ಎಪ್ಪತ್ತರ ದಶಕದ ಜೆ.ಪಿ. ಚಳುವಳಿ ಹುಟ್ಟಿಸಿದ ಆಸೆಗಳೆಲ್ಲ ಕಮರಿ ಹೋಗಿ, ರಾಜಕಾರಣ ಹೊಸ ನೆಲೆಗಳನ್ನು ಹುಡುಕಿಕೊಳ್ಳುತ್ತಿದ್ದ

ಕಾಲವದು. ಇಂತಹ ಕಾಲದಲ್ಲಿ ಆಂತರಿಕವಾಗಿ ದುರ್ಬಲರಾದವರು ಬಹು ಸುಲಭವಾಗಿ ಆಮಿಷಗಳಿಗೆ ಸಿಕ್ಕಿ ನಾಶವಾಗುವ ಅಪಾಯವಿರುತ್ತದೆ. ಆದರೆ ಕೃಷ್ಣಪ್ಪ ಅಂತಹ ಅಪಾಯಕ್ಕೆ ಸಿಕ್ಕದಂತೆ ತಮ್ಮನ್ನು ಸಾರ್ವಜನಿಕ ಜೀವನದ ಕೆಲವು ಮೂಲಭೂತ ಮೌಲ್ಯಗಳ ಮೂಲಕ ರಕ್ಷಿಸಿಕೊಂಡಿದ್ದರು ಎಂಬುದೇ ಇಂದೂ–ಅವರು ಸಕ್ರಿಯ ರಾಜಕಾರಣದಿಂದ ನಿವೃತ್ತರಾದ ಇಷ್ಟು ವರ್ಷಗಳ ನಂತರವೂ–ಅವರನ್ನು ಗೌರವದಿಂದ ನೆನಪಿಸಿಕೊಳ್ಳಲು ಕಾರಣವಾಗಿದೆ. ರಾಜಕೀಯದಲ್ಲಿ ಆರಕ್ಕೇರದೆ ಮೂರಕ್ಕಿಳಿಯದೆ ಬಾಳಿದ ಇವರು, ನಿಜವಾಗಿ ಹೆಸರಾಗಿದ್ದುದು ತಮ್ಮ ಕರ್ತೃತ್ವ ಶಕ್ತಿಯಿಂದಲ್ಲ; ರಾಜಕಾರಣದಲ್ಲಿದ್ದೂ ಯಾರಿಗೂ ಏನೂ ಕೆಟ್ಟದು ಮಾಡದ ತಮ್ಮ ಸಾತ್ವಿಕ ಗುಣದಿಂದಾಗಿ. ರಾಜಕೀಯ ನಿವೃತ್ತಿಯ ಬಹುವರ್ಷಗಳ ನಂತರ ಅವರ ಗೌರವಾರ್ಥ ಅಭಿನಂದನ ಗ್ರಂಥವೊಂದನ್ನು ತರಬೇಕೆನ್ನುವ ಒತ್ತಡ ಸಮಾಜದಲ್ಲಿ ಉಂಟಾಗಿದೆ ಎಂದರೆ, ನಮ್ಮ ರಾಜಕಾರಣ ಇಂದು ಎಷ್ಟು ಕುಲಗೆಟ್ಟು ಹೋಗಿದೆ ಎಂಬುದು ಗೊತ್ತಾಗುತ್ತದೆ.

ಇಂದು ನಾಗಮಂಗಲ ರಾಜ್ಯದಲ್ಲೇ ಅತ್ಯಂತ ರೂಕ್ಷ ರಾಜಕಾರಣಕ್ಕೆ ಹೆಸರಾಗಿದೆ. ಸಿಂಗಾರಿಗೌಡ ಮತ್ತು ಕೃಷ್ಣಪ್ಪನವರ ಸರಳ ರಾಜಕಾರಣಕ್ಕೆ ಎದುರಾಗಿ, 'ನಂಗಾನಾಚ್' ಮತ್ತು ಸಾರ್ವಜನಿಕ 'ಬಾಡೂಟ'ಗಳು ಇಲ್ಲಿನ ಹೊಸ ರಾಜಕಾರಣದ ಹೆಗ್ಗುರುತುಗಳೆನಿಸಿಕೊಂಡಿವೆ. ಇಲ್ಲಿಂದ ಆಯ್ಕೆಯಾದ ಸಾಮಾನ್ಯ ಆರ್ಥಿಕ ನೆಲೆಗಳಿಂದ ಬಂದ ಇತ್ತೀಚಿನ ಶಾಸಕರುಗಳು ಇಂದು ಹಲವು ಕೋಟಿ ರೂಪಾಯಿಗಳ ಒಡೆಯರಾಗಿ, ಬೆಂಗಳೂರನ್ನು ತಮ್ಮ ಕಾರ್ಯಕೇಂದ್ರ ಮಾಡಿಕೊಂಡಿದ್ದಾರೆ. ಆದರೆ ನಾಗಮಂಗಲ ಕ್ಷೇತ್ರದ ಸಾಮಾನ್ಯ ಜನತೆಯ ಪಡಿಪಾಟಲು ಮಾತ್ರ ಹಾಗೇ ಮುಂದುವರೆದಿದೆ.

ನಿಜ, ಈಗ ನಾಗಮಂಗಲ ನಗರದ ಮಧ್ಯೆ ಹಾದುಹೋದಾಗ, ಬದಲಾವಣೆ ಎದ್ದು ಕಾಣುವಂತಿದೆ. ಅಗಲವಾದ ಒಳ್ಳೆಯ ರಸ್ತೆ, ಆಕರ್ಷಕ ಕಟ್ಟಡಗಳು, ಆಧುನಿಕ ಮನೆಗಳು ಹಾಗೂ ಥಳಕು ಬಳುಕಿನ ಅಂಗಡಿ ಮುಂಗಟ್ಟುಗಳಿಂದ ಸುಸಜ್ಜಿತವಾಗಿರುವ ನಾಗಮಂಗಲ ಮುಖ್ಯ ರಸ್ತೆಗೆ ಸಿಗುವ ನೋಟದಲ್ಲಿ ಇಂದು ದೊಡ್ಡ ವ್ಯಾಪಾರೀ ಕೇಂದ್ರದಂತೆ ಕಂಗೊಳಿಸುತ್ತಿದೆ. ಆದರೆ ಇದರ ಸೃಷ್ಟಿಕರ್ತರು ಮತ್ತು ಫಲಾನುಭವಿಗಳಿಬ್ಬರೂ ಒಬ್ಬರೇ ಆಗಿ ಈ ಪ್ರಗತಿ ಜನಪರವಾಗಿರದೇ ಸ್ವಾರ್ಥಪರ ಎನ್ನಿಸಿಕೊಂಡಿದೆ. ಇದೆಲ್ಲವೂ ಸೃಷ್ಟಿಯಾಗಿರುವುದು ಇತ್ತೀಚಿನ ರೂಕ್ಷ ರಾಜಕಾರಣ ಸೃಷ್ಟಿ ಮಾಡಿರುವ ಹಡಬೆ ಹಣದ ಒಡೆಯರ ಶೋಕಿಗಾಗಿ.

ಆರ್ಥಿಕ ಉದಾರೀಕರಣದ ಭಾಗವಾಗಿ ಸಮಾಜವಾದಿ ಬಡ ಭಾರತವನ್ನು 'ಮುಕ್ತ ಮಾರುಕಟ್ಟೆ'ಯ ಶ್ರೀಮಂತ ಭಾರತವನ್ನಾಗಿ ಪುನಾರಚಿಸಲು ಆಗಿರುವ ಜಾಗತಿಕ ಒಪ್ಪಂದಗಳನ್ವಯ ವಿಶ್ವಬ್ಯಾಂಕ್ ಮತ್ತಿತರ ಜಾಗತಿಕ ಹಣಕಾಸು ಸಂಸ್ಥೆಗಳಿಂದ 'ಅಭಿವೃದ್ಧಿ' ಕಾಮಗಾರಿಗಳಿಗೆಂದು ಅಪಾರ ಹಣದ ರಾಶಿಯ ಪೂರೈಕೆಯಾಗುತ್ತಿದೆ. ಇದರಲ್ಲಿ ರಾಜಕಾರಣಿಗಳ ಕಮಿಷನ್ ಭಾಗವಾಗಿ (ಇತರರ ಭಾಗವೂ ಉಂಟು !) ಬರುತ್ತಿರುವ ಹಡಬೆ ಹಣ ಇಂದು ಸಮಾಜದಲ್ಲಿ ಒಂದು ಹೊಸ ಐಷಾರಾಮಿ ವರ್ಗವನ್ನೇ

ಸೃಷ್ಟಿಸಿದೆ. ಬೆಂಗಳೂರಿನ ರಾಜಕಾರಣಿಗಳ ಹಲವು ನಗರಗಳ ಬಡಾವಣೆಗಳಿಂದ ಹೊರಹಾಕಿದ ಈ ಬಡವರು, ತಮ್ಮ ಪಾಲಿಗೆ ಬಂದ ಈ ಹೊಸ ಕಾಲವನ್ನು ನಿಭಾಯಿಸಿ ಬದುಕ ಪಡೆಯಲು ಮತ್ತು ಉಳಿಸಿಕೊಳ್ಳಲು ಉದ್ಯೋಗಾವಕಾಶವಾಗಿ ಹುಡುಕಲು ತಮ್ಮದೇ ಅಭಿವೃದ್ಧಿ ಮಾರ್ಗಗಳನ್ನು ಕಂಡುಕೊಂಡಿವೆ. ಅದರ ಫಲವೇ ನಗರಪ್ರಾಂತಗಳಲ್ಲಿ ಎದ್ದು ಕಾಣುವ ಈ ಹೊಸ ಅಭಿವೃದ್ಧಿಯ ಹೊಂದಿದ ನಾಯಕರುಗಳು ಮತ್ತು ಅವರ ಗೆಳೆಯರಾದ ಅಧಿಕಾರಿಗಳು ಮತ್ತು 'ಬಿಲ್ಡರ್'ಗಳ ನಡುವೆ ವಿಪರೀತ ಹೊಂದಾಣಿಕೆಯಾಗಿರುವುದರಿಂದ. ಅವರು ಬೆಂಗಳೂರು–ಮೈಸೂರುಗಳಂತಹ ದೊಡ್ಡ ಊರುಗಳಲ್ಲಿ ಅದರ ಹೂಡಿಕೆ ಮಾಡಿದ್ದಾರೆ. ಅವರ ಕಣ್ಣುಮುಚ್ಚಿ ಬಡಾವಣೆಗಳು ತಮ್ಮ ಯೋಗ್ಯತಾನುಸಾರ ತಮ್ಮ ಸ್ವಂತ ಊರುಗಳಲ್ಲಿ ಬಂಡವಾಳ ಹೂಡಿಕೆ ಮಾಡುತ್ತಿದ್ದಾರೆ. ಹಾಗಾಗಿ ಇಂದು ಅಭಿವೃದ್ಧಿ ಎಂದರೆ ಹೊಸ ವರ್ಗವೊಂದು ತನ್ನ ಸುಖ–ಶಾಂತಿಗಾಗಿ ನಿರ್ಮಿಸಿಕೊಂಡಿರುವ ಹೊಸ ಕಾಲೋನಿ ಎಂಬಂತಾಗಿದೆ.

ಇದು ಬರೀ ನಗರಪ್ರಾಂತಗಳ ಕಥೆಯಲ್ಲ. ಬಹುಶಃ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳ ಕಥೆ ಇದೇ ಆಗಿದೆ. ಅದರೆ ಅದೇ ಹತ್ತಿರದ ಸಣ್ಣ ಊರು ಮತ್ತು ಹಳ್ಳಿಗಳಿಗೆ ಹೋಗಿ ನೋಡಿ. ಅದೇ ದಾರಿದ್ರ್ಯ, ಅದೇ ಕೊಳಕು, ಅದೇ ರೋಗ–ರುಜಿನ–ಸಂಕಟ ಮತ್ತು ಅದೇ ಅಶಾಂತಿ. ಹಳ್ಳಿಗಳಲ್ಲಿ ಇಂದು ಯುವಕ–ಯುವತಿಯರೇ ಕಾಣೆಯಾಗಿ, ಅಲ್ಲಿಗಳಲ್ಲಿ ಹಾಳು ಸುರಿದಂತೆ ಕಾಣುತ್ತಿವೆ. ಈ ಯುವಕ ಯುವತಿಯರೆಲ್ಲ ಪಟ್ಟಣಗಳಲ್ಲಿ ತಮ್ಮ ಭವಿಷ್ಯವನ್ನರಸಿ ಹೋಗಿದ್ದಾರೆ. ಇದರಿಂದಾಗಿ ನಮ್ಮ ಪಟ್ಟಣಗಳು ಅತಿಯಾದ 'ಅರ್ಥಿಕ ಚಟುವಟಿಕೆ'ಗಳಿಂದ ಬಿರಿಯುತೊಡಗಿದ್ದರೆ, ಹಳ್ಳಿಗಳು ದೆವ್ವ ಬಡಿದಂತೆ ಸ್ತಬ್ಧಗೊಳ್ಳುತ್ತಿವೆ. ಇಲ್ಲಿದೆ ಭಾರತದ ಇಂದಿನ ದುರಂತ.

ಈ ಭಾರತ ಕಳೆದ ಹತ್ತು ವರ್ಷಗಳಲ್ಲಿ ಸತತವಾಗಿ ತನ್ನ ಒಟ್ಟಾರೆ ದೇಶೀ ಉತ್ಪನ್ನದ ಎರಡಂಕಿ ದರದ ಆಸುಪಾಸಿನಲ್ಲೇ ಅಭಿವೃದ್ಧಿಯನ್ನು ಸಾಧಿಸುತ್ತಿದೆ. ಕೆಲಕಾಲ ಉಜ್ವಲವಾಗಿ 'ಪ್ರಕಾಶಿ'ಸುತ್ತಿತ್ತು ಕೂಡಾ! ಅದರೆ ಇದೆಲ್ಲ ಆಗುತ್ತಿರುವುದು ಅದರ ಕೈಗಾರಿಕಾ, ಸೇವಾ ಹಾಗೂ ಮೂಲಭೂತ ಸೌಕರ್ಯಗಳ ವಲಯಗಳಲ್ಲಿ. ಅದರೆ ಗ್ರಾಮ ಭಾರತದ ಬಹುದೊಡ್ಡ ಚಟುವಟಿಕೆಯಾದ ಕೃಷಿ ಕ್ಷೇತ್ರದಲ್ಲಿ ಅಭಿವೃದ್ಧಿ ಶೇಕಡಾ ಮೂರರ ಆಸುಪಾಸಿನಲ್ಲೇ ಉಳಿದುಬಿಟ್ಟಿದೆ. ಈ ಅಂತರದ ಪರಿಣಾಮವೇ, ಈ ಅವಧಿಯಲ್ಲಿ ರಾಷ್ಟ್ರ ಕಂಡ ಒಂದು ಲಕ್ಷಕ್ಕೂ ಹೆಚ್ಚು ಜನ ರೈತರ ಆತ್ಮಹತ್ಯೆ. ಅಂದರೆ ಕಳೆದ ಹತ್ತು ವರ್ಷಗಳಲ್ಲಿ ರಾಷ್ಟ್ರ ಕಂಡಿರುವ ಎರಡಂಕಿಯ ಅಭಿವೃದ್ಧಿ ದರ ರಾಷ್ಟ್ರವನ್ನು ದ್ವಿಭಾಗವಾಗಿ ಒಡೆದು ನಿಲ್ಲಿಸಿದೆ. ನಗರ–ಹಳ್ಳಿ ಎಂದಲ್ಲ: ಈ ಒಡಕು ಹಿಂದಿನಿಂದಲೂ ನಮ್ಮೂರು ಕಾಲದಿಂದಲೂ ಇದೆ. ಅದರೆ ಇದು ಅದನ್ನು ಬಲಗೊಂಡಂತೆ ಅದಕ್ಕಿಂತ ಹೆಚ್ಚು ನಿರ್ಣಾಯಕವಾದ ಒಡಕು; ಅತ್ಯುನ್ನತ ಜೀವನ ಶೈಲಿಯ ಅತಿ ಶ್ರೀಮಂತರು ಮತ್ತು ಆತ್ಮಹತ್ಯೆ ಅಂಚಿನಲ್ಲಿರುವ ಅತಿ ಬಡವರ ನಡುವಣ ಒಡಕು. ಇದರರ್ಥ ಅಭಿವೃದ್ಧಿಯ ಅಂತರ ಹತ್ತು–ನೂರು ಪಟ್ಟು ಹೆಚ್ಚು ಇಂದು ನಮ್ಮ ಪಟ್ಟಿಗೆ ಬಂದ

ಸಮೀಕ್ಷೆಯೊಂದರ ಪ್ರಕಾರ, ಶೇಕಡಾ ೭೭ರಷ್ಟು ಜನ ದಿನಕ್ಕೆ ಇಪ್ಪತ್ತು ರೂಪಾಯಿಗಳಿಗೂ ಕಡಿಮೆ ಆದಾಯದಲ್ಲಿ ಬದುಕುತ್ತಿರುವ ಈ ದೇಶದಲ್ಲಿ, ಒಬ್ಬನಿಗೆ ಒಂದು ವರ್ಷಕ್ಕೆ ಒಂದು ಕೋಟಿ ರೂಪಾಯಿಗಳಿಗೂ ಹೆಚ್ಚಿನ ಸಂಬಳ ಕೊಡುವಂತಹ ಆರ್ಥಿಕತೆಯನ್ನೂ ಇಂದು ಪ್ರೋತ್ಸಾಹಿಸಲಾಗುತ್ತಿದೆ. ಇದನ್ನು ವಿಕ್ಷಿಪ್ತ ಅಭಿವೃದ್ಧಿ ಎನ್ನದೆ ಇನ್ನೇನೆನ್ನಬೇಕು?

ಇದಕ್ಕೆ ಮುಖ್ಯ ಕಾರಣ, ಸಮಾಜದ ಸಾರ್ವತ್ರಿಕ ಕಣ್ಣುಗಳಂತಿರಬೇಕಾದ ನಮ್ಮ ಸಮೂಹ ಮಾಧ್ಯಮಗಳು ಮತ್ತು ಇದನ್ನು ನಿಯಂತ್ರಿಸಬಲ್ಲವರಾಗಿದ್ದ ಬುದ್ಧಿಜೀವಿಗಳು ಈಗ ಈ ಹೊಸ ಆರ್ಥಿಕತೆಯೊಡನೆ ಶಾಮೀಲಾಗಿರುವುದು. ಅದರ 'ಲಾಭ'ಗಳಲ್ಲಿ ಪಾಲುದಾರರಾಗಿರುವುದು. ಹೀಗಾಗಿ ದೂರದೃಷ್ಟಿಯ, ಸಮರ್ಥ ನಾಯಕತ್ವವಿಲ್ಲದ ಸಮಾಜ, ವರ್ಷಕ್ಕೆ ಒಂದು ಕೋಟಿ ರೂಪಾಯಿಗಳ ಸಂಬಳ ಪಡೆಯುವುದನ್ನೇ ಉನ್ನತ ಆದರ್ಶವನ್ನಾಗಿ ಮಾಡಿಕೊಂಡು, ಅದಕ್ಕೆ ಬೇಕಾದ ತರಬೇತಿಗಳಿಗಾಗಿ ಹಪಹಪಿಸುತ್ತಿದೆ. ಈ ಹಪಾಹಪಿಯನ್ನೇ ಹೊಸ ರೀತಿಯ ಬಂಡವಾಳ ಮಾಡಿಕೊಂಡಿರುವ ನವ ಶ್ರೀಮಂತಶಾಹಿ, ಇವರ ತರಬೇತಿ ದಾಹವನ್ನು ತಣಿಸಲು ಹೊಸ ಹೊಸ ರೀತಿಯ 'ಕೈಗಾರಿಕಾ ಸೇವೆ'ಗಳನ್ನು ಆವಿಷ್ಕರಿಸುತ್ತಿದೆ ಹಾಗೂ ಬ್ಯುಸಿನೆಸ್‌ಗಿಂತ ಇಂದು ಬ್ಯುಸಿನೆಸ್ ಮ್ಯಾನೇಜ್‌ಮೆಂಟೇ ಒಂದು ದೊಡ್ಡ ಬ್ಯುಸಿನೆಸ್ ಆಗಿ ಬೆಳೆಯುತ್ತಿದೆ. ಇದರ ವಿವಿಧ ಅಂಗಗಳಲ್ಲಿ ನೆಲೆ ಪಡೆಯಲೆಂದೇ ಹಳ್ಳಿಗಳ ಮತ್ತು ಸಣ್ಣ ಊರುಗಳ ಯುವಕ ಯುವತಿಯರು ಪಟ್ಟಣಗಳ ಕಡೆಗೆ ಧಾವಿಸುತ್ತಿರುವುದು.

ಇವರೆಲ್ಲ ಹೀಗೆ, 'ಉತ್ಪಾದನಾ' ವಲಯಕ್ಕಿಂತ 'ಸೇವಾ' ವಲಯದಲ್ಲೇ ನೆಲೆ ಕಾಣುವಂತಾಗಿರುವುದು, ನಿಜವಾಗಿಯೂ ಆತಂಕಕಾರಿ ವಿಷಯವಾಗಿದೆ. ಏಕೆಂದರೆ ಈ ಸೇವೆ ಒರಟೊರಟಾದ ಸಾಲ ವಸೂಲಾತಿಯಿಂದ ಹಿಡಿದು ಬಹು ನಾಜೂಕಾದ ಆತಿಥ್ಯ ನಿರ್ವಹಣೆ (Hospitality) ಎಂಬ 'ವೈವಿಧ್ಯಮಯ' ಕೆಲಸಗಳವರೆಗೆ ಹರಡಿಕೊಂಡಿದೆ. ಅಂದರೆ ಅತೃಪ್ತ ಯುವಜನ ವರ್ಗವನ್ನು ನವ ಶ್ರೀಮಂತಶಾಹಿ ತನ್ನೊಳಕ್ಕೆ ಅನುಸಂಧಾನಿಸಿಕೊಂಡು, ವಾಸ್ತವವಾಗಿ ತನ್ನ ವಿಧೇಯ ಸೇವಕ ವರ್ಗವನ್ನಾಗಿ ಮಾಡಿಕೊಳ್ಳುತ್ತಿರುವ ವಿದ್ಯಮಾನವಿದು. ಈ ವಿಧೇಯತೆಯನ್ನೇ ಇಂದು ಹೊಸ ಆರ್ಥಿಕತೆಯ ಹೊಸ ಶಿಸ್ತು ಮತ್ತು ಹೊಸ ಹುರುಪು ಎಂದು ಬಣ್ಣಿಸಲಾಗುತ್ತಿದೆ. ಏಕೆಂದರೆ ಈ ವಿಧೇಯ ವರ್ಗ ತಾನು ಗಳಿಸಿದ್ದನ್ನೆಲ್ಲ ನವ ಶ್ರೀಮಂತಶಾಹಿ ಸೃಷ್ಟಿಸುತ್ತಿರುವ ಹೊಸ ಗ್ರಾಹಕ ಸಮಾಜದ ಬೆಳವಣಿಗೆಗಾಗಿ ಖರ್ಚು ಮಾಡಲು ಬದ್ಧವಾಗಿದೆ. ಅವರ ವೃತ್ತಿ ಸ್ವರೂಪವನ್ನೇ ಈ ಬದ್ಧತೆಯನ್ನುಂಟುಮಾಡುವಂತೆ ವಿನ್ಯಾಸಗೊಳಿಸಲಾಗಿದೆ. ಅವರ ಉಡುಪು, ಪ್ರಸಾಧನ, ಭಾಷೆ, ಆಹಾರ ಪದ್ಧತಿ, ಮನರಂಜನೆ ಹಾಗೂ ಒಟ್ಟಾರೆ ಅವರ ಅಭಿರುಚಿ ಮತ್ತು ಜೀವನಶೈಲಿಗಳು ಒಂದು ನಿರ್ದಿಷ್ಟ ಆರ್ಥಿಕ ಮಾದರಿಯ ಆಸುಪಾಸಿನಲ್ಲೇ ರೂಪಿತವಾಗುವಂತೆ ನೋಡಿಕೊಳ್ಳಲಾಗಿದೆ. ಅದರ ಗುತ್ತಿಗೆ ವ್ಯವಸ್ಥೆ ಪ್ರಕಾರ ನೇಮಕಗೊಂಡಿರುವ ಇವರು ಸದಾ ವೃತ್ತಿ ಅನಿಶ್ಚಿತತೆಯಲ್ಲಿ ತೊಳಲಾಡುತ್ತಾ, ಯಾವುದೇ ಜೀವನ ಮೌಲ್ಯ ಅಥವಾ ದರ್ಶನ ರೂಪಿತವಾಗಲು ಸಾಧ್ಯವಿಲ್ಲದಂತಹ

ಮಾನಸಿಕ ಅಸ್ಥಿರತೆಯಲ್ಲಿ, ಅವಕಾಶಗಳ ಹೊಸ ಬಾಗಿಲುಗಳು ತೆರೆಯುವುದನ್ನೇ ಸದಾ ಕಾಯುತ್ತಿರುವ ಆತಂಕದಲ್ಲಿರುತ್ತಾರೆ.

ಹೊಸ ಆರ್ಥಿಕ ರಾಜಕಾರಣವೆಂದರೆ ಇದು. ಪಾರಮಾರ್ಥಿಕಕ್ಕೇ ಅವಕಾಶ ಕೊಡದ ಇದರಲ್ಲಿ ಪಾಲ್ಗೊಂಡಿರುವ ಈ ಬಹುತೇಕ ಶಿಕ್ಷಿತ ಜನ ಉತ್ಪತ್ತಿ ಮಾಡುತ್ತಿರುವುದು 'ಹಣ'ವನ್ನು ಮಾತ್ರ. ಅದೂ, ಕಾಣದ ತಮ್ಮ ಮಾಲೀಕರ ಸೇವೆಯಲ್ಲಿ. ಇದರಿಂದ ಸುಸ್ಥಿರವಾದ-ಆಪತ್ಕಾಲದಲ್ಲಿ ಸಾರ್ವಜನಿಕರಿಗೆ ಒಂದಲ್ಲ ಒಂದು ರೀತಿಯಲ್ಲಿ ಆಸರೆಯಾಗಬಲ್ಲ-'ಆಸ್ತಿ' ನಿರ್ಮಾಣವಾಗುತ್ತಿಲ್ಲ. ನಿಜವಾಗಿ ಇಂತಹ ಆಸ್ತಿ ನಿರ್ಮಾಣವಾಗುತ್ತಿರುವುದು ಹಳ್ಳಿಗಳಿಂದ ಬಂದ ಅಶಿಕ್ಷಿತ ಕೂಲಿಕಾರರಿಂದ. ಆದರೆ ಇವರು ಹೊಸ ಆರ್ಥಿಕ ವ್ಯವಸ್ಥೆಯ ನಿಜವಾದ ಅಸ್ಪೃಶ್ಯರು. ತಾವೇ ಕೈಯ್ಯಾರೆ ನಿರ್ಮಿಸಿದ ಆಸ್ತಿಗಳಿಂದ-ವಿಶೇಷವಾಗಿ ಮೂಲಭೂತ ಸೌಕರ್ಯಗಳಿಂದ-ಇವರು ನಿಷೇಧಿತರು. ಇವರಲ್ಲಿ ನಮ್ಮ ಸಾಂಪ್ರದಾಯಿಕ ಅಸ್ಪೃಶ್ಯರೇ ಹೆಚ್ಚು ಎಂಬುದೂ ನಿಜ. ಅಂದರೆ ಇದು ಹಳೇ ಜಾತಿವ್ಯವಸ್ಥೆಯನ್ನೊಳಗೊಂಡ ಹೊಸ ಜಾತಿವ್ಯವಸ್ಥೆ. ಈ ವ್ಯವಸ್ಥೆಯ ಶೂದ್ರರು ಮತ್ತು ಅಸ್ಪೃಶ್ಯರು ಯಾವುದೇ ರಚನಾತ್ಮಕ ಅನುಸಂಧಾನಕ್ಕೆ ಸಿಗದಂತಹವರು. ಅಂತಹ ಅವಕಾಶವೇ ತರೆದುಕೊಳ್ಳಲಾಗದಂತಹ ಆದಾಯ ಸ್ತರಗಳಲ್ಲಿ ಸಿಕ್ಕಿಹಾಕಿಕೊಂಡವರು. ದುಡಿಮೆಯ ಹೊಸ ರೂಪಗಳಿಗೆ ಮತ್ತು ಕೌಶಲ್ಯಗಳಿಗೆ ತೆರೆದುಕೊಳ್ಳಲಾಗದವರು. ಹೊಸ ಚರಿತ್ರೆಯಿಂದಲೂ ಶಪಿತರಾದವರು.

ಹೀಗೆ, ರೈತರೂ ಸೇರಿದಂತೆ ನಿಜವಾದ ಆಸ್ತಿ ನಿರ್ಮಾಣಕಾರರಿಗೆ-ಸಮಾಜ 'ಸೇವಕ'ರಿಗೆ-ಮುಕ್ತಿಯೇ ಇಲ್ಲದಂತಾಗಿದೆ. ಇವರನ್ನು 'ಮುಕ್ತಿ'ಯ ಹಾದಿಯಲ್ಲಿ ಕರೆದುಕೊಂಡು ಹೋಗಬಲ್ಲವರೆಲ್ಲ-ಯುವಶಕ್ತಿಯೂ ಸೇರಿದಂತೆ-ಹೊಸ ವ್ಯವಸ್ಥೆಯೊಂದಿಗೆ ಶಾಮೀಲಾಗಿದ್ದಾರೆ. ಅಷ್ಟೇ ಅಲ್ಲ, ಇದರ ರಾಜಕಾರಣವನ್ನು ಹೊಸ ಸಂಭ್ರಮದೊಂದಿಗೆ ಎತ್ತಿ ಹಿಡಿಯುತ್ತಿದ್ದಾರೆ. ಇನ್ನು ಇಪ್ಪತ್ತೈದು ವರ್ಷಗಳಲ್ಲಿ ನಮ್ಮ ಹಳ್ಳಿಗಳನ್ನು 'ವಿಶೇಷ ಆರ್ಥಿಕ ವಲಯ'ಗಳ ಮೂಲಕ ನಿರ್ನಾಮ ಮಾಡಿ ಇಡೀ ಭಾರತವನ್ನು ನಗರೀಕರಿಸಲು ಉದ್ದೇಶಿಸಿರುವ (ಇದೇನೂ ಗುಪ್ತ ಕಾರ್ಯಕ್ರಮವಲ್ಲ; ಸರ್ಕಾರದ ಘೋಷಿತ ಕಾರ್ಯಕ್ರಮವೇ ಆಗಿದೆ) ಈ ರಾಜಕಾರಣ ಕೊನೆಗೆ ಕೆಲವೇ ಕೆಲವರ ರಾಜಕಾರಣವಾಗಿ ಕೊನೆಗೊಳ್ಳುವ ಎಲ್ಲ ಸಂಭವವಿದೆ. ಇಂದಿನ ರಾಜ್ಯ ರಾಜಕಾರಣ, ಈ ಆತಂಕ ನಿರಾಧಾರವಾದದ್ದೇನೂ ಅಲ್ಲ ಎಂಬುವವರ ಸಾಕ್ಷಿಯಂತೆ ಇದೆ. ಇಂದು ಜನನಾಯಕರು ಸೃಷ್ಟಿಯಾಗುತ್ತಿರುವುದು ಜನರಿಂದ, ಜನರ ಮಧ್ಯದಿಂದ ಅಲ್ಲ; ಹಡಬೆ ಹಣದಿಂದ. ಇಂತಹ ನಾಯಕರು ಇನ್ನಷ್ಟು ಇಂತಹ ಹಡಬೆ ಹಣವನ್ನು ಸೃಷ್ಟಿಸುವಂತಹ ಹಡಬೆಗಳು ಮಾತ್ರ ಆಗಿರಲು ಸಾಧ್ಯ. ('ಬಳ್ಳಾರಿ ರಿಪಬ್ಲಿಕ್'ನ್ನು ನೆನಪಿಸಿಕೊಳ್ಳಿ.) ಇದರ ಸೂಚನೆಗಳನ್ನು ನಾವು ಇಂದು ವಿಷದಂತೆ ಏರುತ್ತಿರುವ ಸಾಮಾಜಿಕ ಅಭದ್ರತೆಯ ವೈವಿಧ್ಯಮಯ ಅಪರಾಧಗಳ ಮತ್ತು ಆತ್ಮಹತ್ಯೆಗಳ ಪ್ರಕರಣಗಳ ರೂಪದಲ್ಲಿ ಕಾಣುತ್ತಿದ್ದೇವೆ.

ಈ ಹೊಸ ಸಿರಿವಂತಿಕೆ, ಈ ಹೊಸ ದಾರಿದ್ರ್ಯ ಹಾಗೂ ಈ ಹೊಸ ಅವನತಿಯ ದಾರಿಗಳು ಆರಂಭವಾದದ್ದೇ, ರಾಷ್ಟ್ರ ಆವರೆಗೆ ನಂಬಿಕೊಂಡು ಬಂದಿದ್ದ 'ಸಮಾಜವಾದಿ' ಆಡಳಿತ ಶೈಲಿ ವಿಫಲವಾಗಿದೆ ಎಂಬ ಪ್ರಚಾರದಿಂದ. ತೊಂಭತ್ತರ ದಶಕದಲ್ಲಿ ರಾಷ್ಟ್ರವನ್ನು ಕಾಪುದಾಸ್ತಾನು ಚಿನ್ನವನ್ನೆಲ್ಲ ಅಡವಿಡುವಂತಹ ಸನ್ನಿವೇಶ ಸೃಷ್ಟಿಯಾದುದು ಇದಕ್ಕೆ ಪುರಾವೆಯಂತಿತ್ತು. ಆದರೆ ಇದು, ಅದಕ್ಷ ಮತ್ತು ಭ್ರಷ್ಟ ಆಡಳಿತಕ್ಕೆ 'ಸಮಾಜವಾದ'ವೆಂದು ಹೆಸರಿಟ್ಟು, ಅದರ ವಿಶ್ವಾಸಾರ್ಹತೆಯನ್ನು ಹಾಳುಮಾಡುವ ಜಾಗತಿಕ ರಾಜಕಾರಣದ ಹುನ್ನಾರವಲ್ಲದೆ ಮತ್ತೇನಲ್ಲ. ಯಾವ ಸಮಾಜವಾದವೂ ಅದಕ್ಷತೆ ಮತ್ತು ಭ್ರಷ್ಟತೆಯನ್ನು ಸಹಿಸುವುದಿಲ್ಲ. ಸಹಿಸಿತೆಂದರೆ ಅದು ಸಮಾಜವಾದವೂ ಅಲ್ಲ. ಸಮಾಜವಾದ ಸಮಾನತೆಯಲ್ಲಿ ನಂಬಿಕೆಯಿಟ್ಟ ಒಂದು ಧರ್ಮ. ಹಾಗೇ, ಅದರ ಸಾಕ್ಷಾತ್ಕಾರಕ್ಕಾಗಿ ರೂಪುಗೊಂಡಿರುವ ಒಂದು ರಾಜಕೀಯ ಸಾಧನವೂ ಹೌದು. ಹೀಗೆ ಅದು ಗುರಿಯೂ ಹೌದು, ಸಾಧನವೂ ಹೌದು. ಅದು ಉತ್ಪಾದನೆಯಲ್ಲಿ ಎಲ್ಲರಿಗೂ ಸಮಾನ ಅವಕಾಶ ಕಲ್ಪಿಸುವ ಮೂಲಕ ಸಮಾನತೆಯನ್ನು ಸಾಧಿಸಬಯಸುತ್ತದೆ. ಎಲ್ಲರಿಗೂ ಸಮಾನ ಅವಕಾಶ ಕಲ್ಪಿಸವುದು ಅದರ ಮೊದಲ ಆದ್ಯತೆ. ಇದು ಎಷ್ಟರಮಟ್ಟಿಗೆ ಸಾಧ್ಯವೋ ಅಷ್ಟರಮಟ್ಟಿಗೆ ಮಾತ್ರ 'ಅಭಿವೃದ್ಧಿ' ಸಾಕು ಎನ್ನುತ್ತದೆ ಅದು. ಹಾಗೆ ಎಲ್ಲರೂ ಸಮಾನ ಉತ್ಪಾದಕತೆಯೊಡನೆ ಉತ್ಪಾದನೆಯಲ್ಲಿ ತೊಡಗಲು ಸಾಧ್ಯವಿರುವಂತಹ ತಂತ್ರಜ್ಞಾನವನ್ನು ಮಾತ್ರ ಅದು ಒಪ್ಪುತ್ತದೆ. ಇದರ ಜೊತೆಗೆ, ಇದನ್ನು ಸಾಧ್ಯಮಾಡುವಂತಹ ಆಡಳಿತ ವಿಕೇಂದ್ರೀಕರಣವನ್ನು ಒತ್ತಾಯಿಸುತ್ತದೆ ಅದು. ಇಂತಹ ಸಮಾಜವಾದ ಭಾರತದಲ್ಲಿ ಎಲ್ಲಿ ಜಾರಿಯಲ್ಲಿತ್ತು? ರಷ್ಯಾ ಮತ್ತು ಅಮೆರಿಕಾದ ಅಭಿವೃದ್ಧಿ ಮಾದರಿಗಳ ಮಧ್ಯೆ ದೇಶ ತುಯ್ದಾಡುತ್ತಾ ತೊಳಲಾಡುತ್ತಾ ನರಳಿದ್ದನ್ನೇ ಸಮಾಜವಾದದ ವೈಫಲ್ಯವೆಂದು ಕರೆದು, ಆ ಕಾಲ ಮುಗಿಯಿತು ಎನ್ನುತ್ತಿದ್ದಾರೆ ನವ ಶ್ರೀಮಂತಶಾಹಿ ಹಾಗೂ ಅವರ ಚೇಲಾಗಳು. ಹೋಗಲಿ, ಅವರೀಗ ನಮ್ಮನ್ನು ಕರೆದುಕೊಂಡು ಹೋಗುತ್ತಿರುವುದಾದರೂ ಎಲ್ಲಿಗೆ?

ರಾಷ್ಟ್ರ ಒಡೆಯುತ್ತಿದೆ: ಸ್ಫೋಟಕ ಅಸಮಾನತೆಯ ಅಂತರಗಳಲ್ಲಿ; ಅಶ್ಲೀಲ ಗ್ರಾಹಕವಾದದಲ್ಲಿ; ಆತಂಕಪೂರಿತವಾದ ಅಭದ್ರತೆ ಹಾಗೂ ಅಪರಾಧ ವೈವಿಧ್ಯಗಳಲ್ಲಿ. ಈ ಒಡಕನ್ನು ಮುಚ್ಚಲು ಕಾರ್ಪೊರೇಟ್ ವಲಯವೆಂಬ ನವ ಶ್ರೀಮಂತಶಾಹಿ ಮುಂದೆ ಬರಬೇಕೆಂದು ಈ ಹೊಸ ಆರ್ಥಿಕತೆಯ ಹರಿಕಾರರಾದ ಪ್ರಧಾನಿ ಮನಮೋಹನಸಿಂಗರೇ ಈಗ ಪದೇ ಪದೇ ಕರೆಕೊಡುವ ಒತ್ತಾಯಕ್ಕೆ ಒಳಗಾಗಿದ್ದಾರೆ. ಏಕೆಂದರೆ ಇವರು ಒಪ್ಪಿಕೊಂಡ ಜಾಗತಿಕ ಆರ್ಥಿಕತೆ ಈಗ ದೊಡ್ಡದೊಂದು ಬಿಕ್ಕಟ್ಟಿಗೆ ಸಿಕ್ಕಿದೆ. ಹಾಗಾಗಿ ಮೇಲ್ವರ್ಗದವರ ದಾನ-ಧರ್ಮಗಳ ಮೂಲಕ ಕೆಳವರ್ಗದವರ-ವಂಚಿತರ-ಉದ್ಧಾರಕ್ಕಾಗಿ ಈ ಕರೆ. ಈ ಕಾರ್ಪೊರೇಟ್ 'ದಯಾಳು'ಗಳಾದ ಕೆಲವರು ಇದಕ್ಕೆ ತಲೆಯಲ್ಲಾಡಿಸುತ್ತಾ., ತಮ್ಮ ಸಹವರ್ತಿಗಳಿಗೆ ನಮ್ಮ ಪ್ರಾಚೀನ ಪರಂಪರೆಯ ದಾಸದ ಪರಿಕಲ್ಪನೆಯನ್ನು ನೆನಪಿಸತೊಡಗಿದ್ದಾರೆ... ಕೆಲವರಂತೂ 'ಮನುಧರ್ಮ'ದಂತೆ

ದಾನಗಳಲ್ಲಿ ತೊಡಗಬೇಕೆಂದು ಕರೆಕೊಡತೊಡಗಿದ್ದಾರೆ–ಆ ಧರ್ಮದ ಪ್ರಕಾರ ದಾನ, ಯಾರಿಗೆ ಮಾತ್ರ ಮತ್ತು ಯಾವ ಉದ್ದೇಶಗಳಿಗೆಂದು ಅರಿಯದೆ! ವಿಕಾರವೆಂದರೆ ಇದು. ಹೊಸ ಜಾತಿ ವಿಕಾರವಿದು. ಅಸಮಾನತೆ ನಿಸರ್ಗದತ್ತವಾದದ್ದು (ಅಂದರೆ ಹುಟ್ಟಿಗೆ ಸಂಬಂಧಿಸಿದ್ದು) ಮತ್ತು ಅದರ ಹಾಹಾಕಾರವನ್ನು ದಾನ ಧರ್ಮಗಳೆಂಬ ಪುಣ್ಯಕಾರ್ಯಗಳ ಮೂಲಕ ಶಮನಗೊಳಿಸಬಹುದೆಂಬ ಪ್ರಾಚೀನ ಕೌಶಲ್ಯದ ಪ್ರದರ್ಶನವಿದು. ಇದೇ, ಈ ಹೊಸ ವ್ಯವಸ್ಥೆ ನಿಜವಾಗಿ ಹೊಸದೇನಲ್ಲ ಎಂದು ಸೂಚಿಸುತ್ತಿರುವುದು; ಹಳೆಯ ವ್ಯವಸ್ಥೆಯ ಹೊಸ ರೂಪವೆಂದು ಸಾರಿ ಹೇಳುತ್ತಿರುವುದು. ಹಾಗಾಗಿ ಇದರ ಪರಿಣಾಮಗಳೂ ಹಿಂದಿನದಕ್ಕಿಂತ ಬೇರೆಯಾಗಿರಲಾರವು ಅಲ್ಲವೇ? ಆದರೆ ಹೊಸ ಸರಕು ಸಾಮ್ರಾಜ್ಯದಲ್ಲಿ ಕಳೆದುಹೋಗಿರುವವರಿಗೆ ಇದು ಅರ್ಥವಾಗಲಾರದು...

(ಹಿರಿಯ ರಾಜಕಾರಣಿ ಎಚ್.ಟಿ.ಕೃಷ್ಣಪ್ಪನವರ ಅಭಿನಂದನ ಗ್ರಂಥಕ್ಕಾಗಿ ಬರೆದುದು–೨೦೦೮)

ಅಡ್ಡಹಾದಿ ಹಿಡಿದಿರುವ ಅರುಂಧತಿ ರಾಯ್....

ಒಬ್ಬ ಪೋಲೀಸ್ ಅಧಿಕಾರಿ ಹೇಳಿದಂತೆ, ಈ ಆದಿವಾಸಿಗಳನ್ನು ಮಣಿಸುವ ಏಕೈಕ ಮಾರ್ಗವೆಂದರೆ ಅವರೆಲ್ಲರ ಮನೆಗೆ ಟಿ.ವಿ. ಒದಗಿಸಿ ಅವರನ್ನು ದುರಾಸೆಯ ಜನರನ್ನಾಗಿ ಮಾಡುವುದು! ಹಾಗಾಗಿಯೇ ಅವರು ಆಧುನಿಕ ಅಭಿವೃದ್ಧಿ ಮಾದರಿಯ ಬಿಸಿ ತಾಗಿದೊಡನೆ ಪ್ರಾಣಿ ಸಹಜ ರೋಷದೊಂದಿಗೆ ಬಂಡಾಯವೆದ್ದಿದ್ದಾರೆ. ಆಸ್ತಿಯ ಕಲ್ಪನೆಯೇ ಇಲ್ಲದೆ ತಮ್ಮ ಬದುಕಿಗಾಗಿ ನಿಸರ್ಗ ಸಹಜವಾದ ಆರ್ಥಿಕ ಹದವೊಂದನ್ನು ರೂಪಿಸಿಕೊಂಡು ನೆಮ್ಮದಿಯಿಂದ ಬಾಳುವೆ ನಡೆಸುತ್ತಿದ್ದ ಅವರನ್ನು 'ಅಭಿವೃದ್ಧಿ'ಗೊಳಿಸಲು, 'ನಾಗರೀಕತೆ'ಯ ವ್ಯಾಪ್ತಿಗೆ ತಂದು ಉದ್ಧಾರ ಮಾಡಲು (ಐರೋಪ್ಯರು ಕಳೆದ ಶತಮಾನದಲ್ಲಿ ನಮ್ಮನ್ನು ಉದ್ಧರಿಸಲು ಪ್ರಯತ್ನಿಸಿದಂತೆ) ನಮ್ಮ ನಾಗರಿಕ ಸರ್ಕಾರ ಸಕಲ ಬಲದೊಡನೆ ಹೊರಟಿದೆ. ಅದರ ಆಧುನಿಕ ಶೈಲಿಯ ಆಕ್ರಮಣಶೀಲತೆಯನ್ನು ಮೈಗೂಡಿಸಿಕೊಳ್ಳದ ಕಾರಣ ಅದನ್ನು ಎದುರಿಸಲಾಗದೆ ಅಸಹಾಯಕರಾದ ಅವರು ನಕ್ಸಲರ ತೆಕ್ಕೆಗೆ ಬಿದ್ದಿದ್ದಾರಷ್ಟೆ.

ಮೊದಲು 'ಔಟ್‌ಲುಕ್' ಸಾಪ್ತಾಹಿಕದಲ್ಲಿ ಪ್ರಕಟವಾದ ಮತ್ತು ಅನಂತರ 'ಪ್ರಜಾವಾಣಿ'ಯಲ್ಲಿ ಕೆಲ ದಿನಗಳ ಕಾಲ ಧಾರಾವಾಹಿಯಾಗಿ ಪ್ರಕಟವಾದ ಛತ್ತೀಸಘಡದಲ್ಲಿನ ನಕ್ಸಲ್ ಚಟುವಟಿಕೆ ಕುರಿತ ಅರುಂಧತಿ ರಾಯ್ ಅವರ 'ನಕ್ಸಲೀಯರೊಂದಿಗೆ ಹೆಜ್ಜೆ ಹಾಕುತ್ತಾ...' ಎಂಬ ಶೀರ್ಷಿಕೆಯ ಲೇಖನಮಾಲೆ ಕುತೂಹಲಕಾರಿಯಾಗಿದೆ. ಅದಕ್ಕಿಂತ ಹೆಚ್ಚಾಗಿ, ಅದು ನಕ್ಸಲ್ ಚಳುವಳಿ ಬಗೆಗೆ ಸಾಮಾನ್ಯ ಜನರಲ್ಲಿದ್ದ ಒಂದು ಸ್ಥೂಲ ಕಲ್ಪನೆಗೆ ಒಂದಿಷ್ಟು ಸ್ಪಷ್ಟತೆ ಒದಗಿಸುವಂತಿದೆ.

ಪ್ರತಿಷ್ಠಿತ ಬೂಕರ್ ಪ್ರಶಸ್ತಿ ಪಡೆದಿರುವ ಅರುಂಧತಿ ರಾಯ್ ನಮ್ಮ ಅತ್ಯುತ್ತಮ ಗದ್ಯ ಲೇಖಕಿಯರಲ್ಲೊಬ್ಬರು. ಗದ್ಯವನ್ನು ಪದ್ಯದಂತೆ ಬರೆಯುವ ಅವರ ಅಲಂಕಾರಿಕ ಶೈಲಿ ಯಾರನ್ನಾದರೂ ಮರುಳು ಮಾಡುವಂತಹದು. ನಕ್ಸಲ್ ಪ್ರದೇಶದ 'ಪ್ರವಾಸ' ಕುರಿತ ಸದರಿ ಲೇಖನವೂ ಇದಕ್ಕೆ ಹೊರತಲ್ಲ. ಅದರೆ, ಯಾವ ವೃತ್ತಿಪರ ಪತ್ರಕರ್ತನೂ ಹೊಗಲಾರದ ನಕ್ಸಲ್ ಚಟುವಟಿಕೆಯ ಕೇಂದ್ರ ಸ್ಥಳಗಳಿಗೆ ಭೇಟಿ ನೀಡಿ, ನಕ್ಸಲರ ಬಗ್ಗೆ, ಅವರ ರಾಜಕಾರಣ ಮತ್ತು ಕಾರ್ಯಕ್ರಮಗಳ ಬಗ್ಗೆ ಸಕಾರಣವಾಗಿ ಎಂಬಂತೆಯೇ ಸ್ವಲ್ಪ ಸಹಾನುಭೂತಿಯಿಂದಲೇ ಬರೆದಿರುವ ರಾಯ್ ಬಗ್ಗೆ ಮೆಚ್ಚುಗೆ ಮೂಡುತ್ತದೆ.

ಆದರೆ, ಈ ಚಳುವಳಿಯೊಂದೇ ಭಾರತ ಇಂದು ಎದುರಿಸುತ್ತಿರುವ ಸಂಕಷ್ಟಗಳಿಗೆ ಏಕೈಕ ಉತ್ತರವೇನೋ ಎಂಬ ಧ್ವನಿಯೊಂದಿಗೆ ಅವರು ಲೇಖನವನ್ನು ಮುಗಿಸಿರುವುದು ಮಾತ್ರ ಪ್ರಶ್ನಾರ್ಹವಾಗಿದೆ. ಭಾರತದ ಸಂಸದೀಯ ಪ್ರಜಾಪ್ರಭುತ್ವ ಪದ್ಧತಿ ಒಂದು ದೊಡ್ಡ ಬಿಕ್ಕಟ್ಟಿನಲ್ಲಿದೆ, ನಿಜ. ಆದರೆ ಆ ಬಿಕ್ಕಟ್ಟನ್ನು ಬಳಸಿಕೊಂಡು ನಕ್ಸಲ್ ಚಳುವಳಿ ಪ್ರತಿಪಾದಿಸುವ ಹಿಂಸಾತ್ಮಕ ದಂಗೆಯ ಮೂಲಕ 'ವರ್ಗ ಶತ್ರು'ಗಳನ್ನು ನಾಶ ಮಾಡಿ 'ದುಡಿಯುವ ವರ್ಗ'ದ ಏಕಪಕ್ಷೀಯ ಪ್ರಭುತ್ವವನ್ನು ಸ್ಥಾಪಿಸುವ ಪ್ರಯತ್ನ ಜನರ ಪಾಲಿಗೆ ಸದ್ಯದ ಬಿಕ್ಕಟ್ಟಿಗಿಂತ ದೊಡ್ಡ ಬಿಕ್ಕಟ್ಟನ್ನು ಸೃಷ್ಟಿಸಿದರೆ ಆಶ್ಚರ್ಯವಿಲ್ಲ.

ಏಕೆಂದರೆ, ಹಿಂಸೆ ಎನ್ನುವುದು ಅದು ದುರ್ಬಲರದಿರಲಿ, ಸಬಲರದಿರಲಿ, ವಿವೇಚನೆ ಸಂಪೂರ್ಣ ನಾಶವಾದಾಗ ಹುಟ್ಟುವಂತಹುದು. ಹಾಗೇ 'ವರ್ಗ ಶತ್ರು' ಮತ್ತು 'ದುಡಿಯುವ ವರ್ಗ' ಎನ್ನುವುದು ಕೂಡಾ, ರಾಜಕೀಯ ಸಂದರ್ಭ ಬದಲಾದಂತೆ ಸದಾ ಅರ್ಥ ಬದಲಾವಣೆಗೊಳಪಡುವ ಮತ್ತು ಪರಸ್ಪರ ಸ್ಥಾನಾಂತರಕ್ಕೊಳಪಡುವ ಸಾಪೇಕ್ಷ ಶಬ್ದ ಪರಿಕಲ್ಪನೆಗಳು. ಹಾಗೆ ನೋಡಿದರೆ, ಸುಮಾರು ನಲವತ್ತು ವರ್ಷಗಳ ಇತಿಹಾಸ ಹೊಂದಿರುವ ನಕ್ಸಲೀಯ ಚಳುವಳಿ ಹಲವು ಏಳು ಬೀಳುಗಳನ್ನು ಕಂಡ ಹಾಗೇ ಹಲವರ ಭ್ರಮ ನಿರಸನಕ್ಕೂ ಕಾರಣವಾದ ಚಳುವಳಿಯಾಗಿದೆ. ಹಲವಾರು ಮಾಜಿ ನಕ್ಸಲೀಯರು ಇಂದು, ಈ ಹಿಂದೆ ಯಾವ ದಂಧೆಯ ಕಾರಣಗಳಿಂದಾಗಿ ಕೆಲವರನ್ನು 'ವರ್ಗ ಶತ್ರು'ಗಳೆಂದು ಕಟುವಾಗಿ ಟೀಕಿಸಿ ಅವರ ನಿರ್ಮೂಲನೆಗೆ ಕರೆಕೊಡುತ್ತಿದ್ದರೋ ಅಂತಹುದೇ ದಂಧೆಗಳಲ್ಲಿ ನಿರತರಾಗಿರುವುದನ್ನು ಕಾಣಬಹುದು. ಉದಾ: ರಿಯಲ್ ಎಸ್ಟೇಟ್ ಮುಂತಾದ ದಲ್ಲಾಳಿ ಕೆಲಸಗಳು, ವಸೂಲಿ ಪತ್ರಿಕೋದ್ಯಮ, ವಾಮಾಚಾರ ಮತ್ತು ಜ್ಯೋತಿಷ್ಯಶಾಸ್ತ್ರ ಇತ್ಯಾದಿ! ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ಹಿಂಸೆಯನ್ನು ಒಂದು ತತ್ವವನ್ನಾಗಿ, ಕಾರ್ಯಕ್ರಮವನ್ನಾಗಿ ನಂಬಿಕೊಂಡವರು ಬಹು ಬೇಗ ಹತಾಶಗೊಳ್ಳುವವರಾಗಿರುತ್ತಾರೆ. ಅವರು ಹೋದ ಕಡೆಯಲ್ಲೆಲ್ಲಾ ಹತಾಶೆಗೊಳ್ಳುತ್ತಾ, ಸುತ್ತಮುತ್ತಲಿದ್ದವರನ್ನು ಕಂಗೆಡಿಸುತ್ತಾ ಸದಾ ಕ್ಷೇತ್ರ ಬದಲಾಯಿಸುವಂತಹವರಾಗಿರುತ್ತಾರೆ. ಹಾಗಾಗಿಯೇ ನಕ್ಸಲ್ ಚಳುವಳಿಗೆ ಸೇರುವವರಂತೆಯೇ ಅದನ್ನು ಬಿಟ್ಟು ಬರುವವರೂ ಸದಾ ಇದ್ದೇ ಇರುತ್ತಾರೆ.

ಅಂದ ಮಾತ್ರಕ್ಕೆ ನಕ್ಸಲೀಯರಲ್ಲಿ ರಾಜಕೀಯ ಬದ್ಧತೆ ಇರುವವರು ಇಲ್ಲವೇ ಇಲ್ಲವೆಂದಲ್ಲ. ತಾನು ನಂಬಿದ ತಾತ್ವಿಕತೆಯಲ್ಲಿ ಅಚಲ ನಂಬಿಕೆಯಿರುವ ಒಂದು ಕೇಂದ್ರ ಗುಂಪು ಇರುವುದರಿಂದಲೇ ಅದು ಒಂದು ಚಳುವಳಿಯಾಗಿ ನಲವತ್ತು ವರ್ಷಗಳಲ್ಲಿ ಹಲವು ದಮನಗಳನ್ನು ಎದುರಿಸಿಯೂ ಉಳಿದಿರುವುದು. ಆದರೆ ಅದರ ಅನುಯಾಯಿಗಳ ಬದ್ಧತೆ ಸದಾ ಚಂಚಲವೇ. ಭೂರಹಿತನೊಬ್ಬ ಭೂ ಒಡೆಯನಾಗುತ್ತಿದ್ದಂತೆ ಅಥವಾ ಅಧಿಕಾರ ವಂಚಿತನೊಬ್ಬ ಅಧಿಕಾರ ಸಂಪನ್ನನಾದೊಡನೆ ಅವನ ವರ್ಗ ಚಹರೆಗಳೇ ಬದಲಾವಣೆಯಾಗುತ್ತವೆ. ಇದು ಬಲತ್ಕಾರದ ರಾಜಕೀಯ ಚಳುವಳಿಯ ಮೂಲಕ ತಿದ್ದಲಾಗದ ಮನುಷ್ಯ ಗುಣ. ಇದು ಹಲವು ದೇಶಗಳಲ್ಲಿ,

ಹಲವು ಚಳುವಳಿಗಳಲ್ಲಿ ಸಾಬೀತಾಗಿದೆ. ಇದನ್ನು ಯುಗೋಸ್ಲಾವಿಯಾದ ಮಾಜಿ ಕಮ್ಯೂನಿಸ್ಟ್ ಚಿಂತಕ ಮಿಲೋವ್ ಜಿಲಾಸ್ ತನ್ನ 'The New Class' ಕೃತಿಯಲ್ಲಿ ವಿವರವಾಗಿ ಮತ್ತು ಸೋದಾಹರಣವಾಗಿ ವಿಶ್ಲೇಷಿಸಿದ್ದಾನೆ. ಹಾಗಾಗಿ ಇವರ 'ಕ್ರಾಂತಿ' ಈ ಮೊದಲೇ ಹೇಳಿದ ಹಾಗೆ ಸಂಸದೀಯ ಪ್ರಜಾಪ್ರಭುತ್ವದ ಮೂಲಕ ನಾವು ಸದ್ಯಕ್ಕೆ ಎದುರಿಸುತ್ತಿರುವ ರಾಜಕೀಯ ಬಿಕ್ಕಟ್ಟಿಗಿಂತ ದೊಡ್ಡದಾದ ಮತ್ತು ಜಟಿಲವಾದ ಬಿಕ್ಕಟ್ಟನ್ನು ಸೃಷ್ಟಿಸಿದಲ್ಲಿ ಆಶ್ಚರ್ಯವಿಲ್ಲ.

ಅದೇನೇ ಇರಲಿ, ರಾಷ್ಟ್ರದ ಗಮನ ಸೆಳೆದು ಚಿಂತೆಗೆ ಕಾರಣವಾಗಿರುವ ನಕ್ಸಲ್ ಚಳುವಳಿ ಒಂದು ವಿಷಯದಲ್ಲಿ ಒಳ್ಳೆಯದನ್ನೇ ಮಾಡಿದೆ ಎಂದು ಹೇಳಬಹುದು. ಅದು 'ಅಭಿವೃದ್ಧಿ'ಯ ಹೆಸರಲ್ಲಿ ರಾಷ್ಟ್ರ ನಡೆಯುತ್ತಿರುವ ಮತ್ತು ನಮ್ಮ ಸಂವಿಧಾನ ಕೂಡಾ ತನ್ನ ನ್ಯಾಯಾಂಗದ ಮೂಲಕ ಅನುಮತಿಸಿರುವಂತೆ ತೋರುವ ದಾರಿಯನ್ನು ನಿರ್ಣಾಯಕವಾಗಿ ಮುಖಾಮುಖಿಯಾಗಿಸಿಕೊಂಡಿದೆ. ನಿರ್ಣಾಯಕ ಏಕೆಂದರೆ, ಆಧುನಿಕ ನಾಗರೀಕತೆ ಎತ್ತಿ ಹಿಡಿದಿರುವ ಲೌಕಿಕ ಅಭಿವೃದ್ಧಿಯ ಆಧಾರಗಳನ್ನೇ ಅದು ಪ್ರಶ್ನಿಸಿದೆ. ಇದನ್ನು ಈವರೆಗೆ ಗಾಂಧಿವಾದಿಗಳೆನಿಸಿಕೊಂಡವರು, ಸಮಾಜವಾದಿಗಳೆನಿಸಿಕೊಂಡವರು ಮತ್ತು ಇತ್ತೀಚೆಗೆ ಪರಿಸರವಾದಿಗಳೆನಿಸಿಕೊಂಡವರು ತಾತ್ವಿಕವಾಗಿ ಪ್ರಶ್ನಿಸಿ ಅಲ್ಲಲ್ಲಿ ಹೋರಾಟಗಳನ್ನು ಮಾಡಿದರು. ಆದರೆ ಅವರೆಲ್ಲ ಅದನ್ನು ಸುಸ್ಥಿರವಾಗಿ ನಡೆಸಿಕೊಂಡು ಹೋಗಲಾರದೆ ಅಂತಿಮವಾಗಿ ಸೋತವರೇ; ವ್ಯವಸ್ಥೆಯೊಂದಿಗೆ ರಾಜಿಯಾದವರೇ. ಇದಕ್ಕೆ ಅವರ ಸೀಮಿತವಾದ ಸಂಪನ್ಮೂಲಗಳು, ಸೀಮಿತವಾದ ಜನ ಬೆಂಬಲಗಳಷ್ಟೇ ಕಾರಣವಲ್ಲ. ಇವರು ಕೂಡಾ ಆಧುನಿಕ ನಾಗರೀಕತೆಯ ಗಾಳಿಯ ಸೋಂಕಿನಿಂದ ರೋಮಾಂಚಿತರಾದವರೇ;ಅದರ ಸುಖ ಫಲಗಳಿಂದ ಒಂದಿಷ್ಟು ಆಕರ್ಷಿತರಾದವರೇ ಎಂಬುದೂ ಕಾರಣವಾಗಿರಬಹುದು. ಈ ರೋಮಾಂಚನ ಹಾಗೂ ಆಕರ್ಷಣೆಗಳ ಹಿಂದಿರುವುದು ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತೆಗಳು ನಮಗೆ ಈವರೆವಿಗೂ ಅಪರಿಚಿತವಾಗಿದ್ದ ಆಧುನಿಕ ಮೌಲ್ಯಗಳೆಂಬಂತೆ, ಅವನ್ನು ಫ್ರೆಂಚ್ ಕ್ರಾಂತಿಯಿಂದ ಒಡಮೂಡಿದ ತತ್ವಗಳೆಂಬಂತೆ ಮಾತ್ರ ಅರ್ಥ ಮಾಡಿಕೊಂಡಿರುವುದು. ಇದು ವಸಾಹತುಶಾಹಿ ಶಿಕ್ಷಣ ಪ್ರದಾನ ಮಾಡಿದ ಗ್ರಹಿಕೆಯ ಕ್ರಮದ ಪರಿಣಾಮವಲ್ಲದೆ ಮತ್ತೇನಲ್ಲ. ಇದರ ಹಿಂದೆ ಯೂರೋಪ್‌ನಲ್ಲಿ ೧೫ನೇ ಶತಮಾನದಲ್ಲಿ ಆರಂಭವಾದ 'ಪುನರುಜ್ಜೀವನ' ಯುಗದ ಮೌಲ್ಯಗಳಿವೆ ಎಂಬುದನ್ನು ಮರೆಸುವ ತಂತ್ರವಿದೆ.

'ಪುನರುಜ್ಜೀವನ' ಎಂಬುದೇ ಇತ್ತೀಚಿನ 'ಜಾಗತೀಕರಣ', '(ಆರ್ಥಿಕ) ಸುಧಾರಣೆ', 'ಉದಾರೀಕರಣ' ಮುಂತಾದ ಪದಪುಂಜಗಳಂತೆಯೇ ಕಪಟ ರಾಜಕಾರಣದಿಂದ ಹುಟ್ಟಿದ; ಮೂಲಾರ್ಥ ವಿರೋಧಿಯಾದ ಒಂದು ಪದಪುಂಜ. ಪುನರುಜ್ಜೀವನ ಎಂಬುದು ಸುಮಾರು ಎರಡು ಮೂರು ದಶಕಗಳ ಕಾಲ ನಡೆದ 'ಹೊಸ' ಬೆಳವಣಿಗೆಗಳನ್ನು, ಅಂತಿಮವಾಗಿ ವಸಾಹತುಶಾಹಿ ರಾಜಕಾರಣಕ್ಕಾಗಿ ಒಟ್ಟಿಗೆ ಸೇರಿಸಿ ರೂಪಿಸಿದ ಪರಿಕಲ್ಪನೆ ಮತ್ತು ಪದಪುಂಜ. ನಿಜ, ಈ ಪುನರುಜ್ಜೀವನ ಮನುಷ್ಯನ

ಚೈತನ್ಯ ಪುಟಿದೆದ್ದ, ಅದರಿಂದಾಗಿ ಅವನು ಶತಶತಮಾನಗಳಿಂದ ಮೈಮೇಲೆ ಬಿದ್ದಿದ್ದ ಧೂಳನ್ನು ಒಮ್ಮೆ ಕೊಡವಿಕೊಂಡು ಅನೇಕ ಐತಿಹಾಸಿಕ ಸಾಹಸಗಳನ್ನು ಕೈಗೊಳ್ಳಲು ಸಾಧ್ಯವಾದ ಕಾಲ. ಆದರೆ ಇದೆಲ್ಲದರ ಮಧ್ಯೆ ಎದ್ದು ಕಾಣುವ ಒಟ್ಟು ಪರಿಣಾಮವೆಂದರೆ, ಅದು ಮನುಷ್ಯನಲ್ಲಿ ಸರಕಿನ ಪರಿಕಲ್ಪನೆಯನ್ನು ಸೃಷ್ಟಿಸಿದ್ದು. ಬದುಕಿನ ಆಧಾರವನ್ನು, ಅಗತ್ಯಗಳ ಉತ್ಪಾದನೆ ಮತ್ತು ಪೂರೈಕೆಗಳ ನೆಲೆಯಿಂದ ಲಾಭಕೋರತನ ಮತ್ತು ವ್ಯಾಪಾರೀಕರಣಕ್ಕೆ ಬದಲಾಯಿಸಿದ್ದು. ಇದಕ್ಕಾಗಿ ಜಗತ್ತನ್ನು ಮತ್ತು ಅದರ ಅರಿವನ್ನು ಭೌತ–ಅಭೌತವೆಂದು ವಿಭಜಿಸಿದ್ದು. ಇದರ ಮುಂದುವರಿಕೆಯಾಗಿ ದಿನ ನಿತ್ಯದ ಬದುಕನ್ನು ರಾಜಕೀಯ ವಿಭಾಜನೆಗೆ ಒಳಪಡಿಸುವ 'ಸೆಕ್ಯುಲರಿಸಂ' ಎಂಬ ಅಸ್ತ್ರವನ್ನು ರೂಪಿಸಿದ್ದು. ಇದೆಲ್ಲದರ ಮೊತ್ತ ಎಂದರೆ, ಮನುಷ್ಯನ ಮುಗ್ಧತೆ ನಿರ್ಣಾಯಕವಾಗಿ ನಾಶವಾದದ್ದು. ತೃಪ್ತಿ, ನೆಮ್ಮದಿಗಳ ಕಲ್ಪನೆಗಳಿಗೆ ವಿರುದ್ಧವಾಗಿ ಸುಖಾಪೇಕ್ಷೆ ಮತ್ತು ಸ್ಪರ್ಧೆಯ ವಾತಾವರಣ ನಿರ್ಮಾಣವಾದದ್ದು.*

ನಾವಿಂದು ಒಪ್ಪಿಕೊಂಡು ಅನುಸರಿಸುತ್ತಿರುವ ಅಭಿವೃದ್ಧಿ ಮಾದರಿ ಈ ವಾತಾವರಣದಲ್ಲಿ ಹುಟ್ಟಿದುದು. ಇದು ಮೂಲತಃ ವಸಾಹತುಶಾಹಿ ರಾಜಕಾರಣ ರೂಪಿಸಿಕೊಟ್ಟ ಅಭಿವೃದ್ಧಿ ಮಾದರಿ. ಹಾಗಾಗಿ ಇದು, ಒಂದು ದೇಶವನ್ನೋ ಅಥವಾ ದೇಶವೊಂದರೊಳಗೇ ಒಂದು ಜನಸಮುದಾಯ ಇನ್ನೊಂದು ಜನಸಮುದಾಯವನ್ನು ದೋಚುತ್ತಲೇ, ಇನ್ನೊಂದು ದೇಶವನ್ನು ಅಥವಾ ಜನಸಮುದಾಯವನ್ನು 'ಅಭಿವೃದ್ಧಿ'ಗೊಳಿಸುವಂತಹ ಮಾದರಿ. ಇದು ಜನಸಮುದಾಯವೊಂದರಲ್ಲಿ ಸುಖದ

---

* 'ಪುನರುಜ್ಜೀವನ' ಕಾಲದ ಬೆಳವಣಿಗೆಗಳಿಂದ ಏನೂ ಒಳ್ಳೆಯದಾಗಲಿಲ್ಲವೇ ಎಂದು ಕೇಳುವವರಿಗೆ ನನ್ನದು ಒಂದೇ ಉತ್ತರ: ಅದು ಮಾಡಿದ ಏಕೈಕ ಒಳ್ಳೆಯ ಕೆಲಸವೆಂದರೆ, ಮತ ಮೌಢ್ಯದ ಆಧಾರಗಳನ್ನು ನಾಶ ಮಾಡಿದ್ದು. ಆದರೆ ಅದು ಅದರ ಜೊತೆಗೇ, 'ಧರ್ಮ'ದ ಕಲ್ಪನೆಯನ್ನು ಅನುಮಾನಾಸ್ಪದಗೊಳಿಸಿತು. ಸೃಷ್ಟಿಯ ಅಖಂಡತೆಯನ್ನು ಖಂಡಿಸಿತು. ಈ ಎಲ್ಲ ಅನಾಹುತಗಳೂ ಪುನರುಜ್ಜೀವನ ಕಾಲದ ಸಂಶೋಧನೆ–ಸಾಹಸಗಳಿಂದಾದ ಪರಿಣಾಮ ಎಂದು ನಾನು ಹೇಳುತ್ತಿಲ್ಲ. ಈ ಸಂಶೋಧನೆ ಮತ್ತು ಸಾಹಸಗಳನ್ನು ಒಂದು ರಾಜಕೀಯ ಶಕ್ತಿಯಾಗಿ ರೂಪಿಸಲು ಬಳಸಿಕೊಂಡ ಆ ಕಾಲ–ದೇಶದಲ್ಲಿ ಹುಟ್ಟಿದ ಮನೋಧರ್ಮದ ಪರಿಣಾಮಗಳ ಬಗ್ಗೆ ಹೇಳುತ್ತಿದ್ದೇನೆ. ಪುನರುಜ್ಜೀವನದಿಂದ ಶೋಷಕ ರಾಜಶಾಹಿ–ಊಳಿಗಮಾನ್ಯಶಾಹಿ ಕುಸಿಯಿತೆಂದು ಹೇಳುವುದಾದರೆ, ಅದು ಅದಕ್ಕಿಂತ ಹೆಚ್ಚು ಸಂಕೀರ್ಣ ಶೋಷಕನಾಗಿ ರೂಪುಗೊಂಡ ಬಂಡವಾಳಶಾಹಿಗೆ ಮತ್ತು ವಸಾಹತುಶಾಹಿಗೆ ಕಾರಣವಾಯಿತೆಂದೂ ಹೇಳಬೇಕಾಗುತ್ತದೆ. ಈ ವಸಾಹತುಶಾಹಿಯು ಭಾರತದಂತಹ ದೇಶಗಳಲ್ಲಿನ ಊಳಿಗಮಾನ್ಯಶಾಹಿಯನ್ನು ನಾಶ ಮಾಡಲು ಸಹಾಯವಾಯಿತೆಂದು ಹೇಳುತ್ತಾ ಅದಕ್ಕೆ ಡೊಗ್ಗು ಸಲಾಮು ಹಾಕುವವರೂ ಇದ್ದಾರೆ. ಆದರೆ ಅವರೇ, ಈ ಊಳಿಗಮಾನ್ಯಶಾಹಿಯು ಹೊಸ ಹೊಸ ರೂಪ ತಾಳಿ ಶೋಷಣೆ ಮುಂದುವರೆಯುತ್ತಿದೆ ಎಂದು ವಾದಿಸುತ್ತಾ 'ಸಾಮಾಜಿಕ ನ್ಯಾಯ' ಬಗ್ಗೆ ಹೆಚ್ಚು ಹೆಚ್ಚು ದೊಡ್ಡದಾದ ಕೂಗುಗಳನ್ನೂ ಹಾಕುತ್ತಿದ್ದಾರೆ. ಇದೆಂತಹ ವಿಪರ್ಯಾಸ! ಇದು ಭಾರತದಲ್ಲಿ ವಸಾಹತುಶಾಹಿ ಹುಟ್ಟು ಹಾಕಿದ ಜಾಣ, ಅಂತ್ಯವೇ ಇಲ್ಲದಂತೆ ತೋರುವ ವಿಭಜನಾ ರಾಜಕಾರಣ!

ನಿರೀಕ್ಷೆಗಳನ್ನು ಏರಿಸುತ್ತಾ ಸದಾ ಅವರನ್ನು ಅಶಾಂತರನ್ನಾಗಿಡುವ ಮಾದರಿ ಹಾಗೂ ಉಳ್ಳವರನ್ನು ಮತ್ತಷ್ಟು ಉಳ್ಳವರನ್ನಾಗಿ ಮತ್ತು ಇಲ್ಲದವರನ್ನು ಮತ್ತಷ್ಟು ಇಲ್ಲದವರನ್ನಾಗಿ ಮಾಡುವ ಮಾದರಿ. ಹಾಗೇ ಉಳ್ಳವರು ಮತ್ತು ಇಲ್ಲದವರ ನಡುವೆ ಅಂತರವನ್ನು ಸದಾ ಹೆಚ್ಚಿಸುತ್ತಾ ಹೋಗುವ ಮಾದರಿ. ಆ ಮೂಲಕ ಅವರ ನಡುವಣ ಸಂಪರ್ಕವನ್ನು ಕಡಿದು ಹಾಕುತ್ತಾ ಸಾಮಾಜಿಕ ವಾತಾವರಣವನ್ನು ಹೆಚ್ಚೆಚ್ಚು ವಿಕ್ಷಿಪ್ತಗೊಳಿಸುತ್ತಾ, ಹಿಂಸಾತ್ಮಕಗೊಳಿಸುತ್ತಾ ಹೋಗುವಂತಹ ಮಾದರಿ. ಇಂದು ನಾವು ಇದೆಲ್ಲವನ್ನೂ ಭಾರತೀಯ ಸಮಾಜದಲ್ಲಿ ನೋಡುತ್ತಿದ್ದೇವೆ, ಅನುಭವಿಸುತ್ತಿದ್ದೇವೆ. ಅಷ್ಟೇ ಅಲ್ಲ, ಇದು ನಮ್ಮ ಕಣ್ಮುಂದೆಯೇ, ಆದರೆ ನಮ್ಮ ಸಂವೇದನೆಗೆ ಚೂರೂ ತಾಗದಂತೆ ನಮ್ಮ ಕಾಡುಗಳನ್ನು ಬೋಳಿಸುತ್ತಾ, ಬೆಟ್ಟ ಗುಡ್ಡಗಳನ್ನು ಬಗೆದು ಹಾಕುತ್ತಾ, ಊರಿನ ಮರ ಗಿಡಗಳನ್ನೂ ಹೊಡೆದುರುಳಿಸುತ್ತಾ, ನಮ್ಮ ನದಿ ಕೆರೆ ಹಳ್ಳ ಕೊಳ್ಳಗಳನ್ನು ಬತ್ತಿಸುತ್ತಾ; ನಮ್ಮ ಒಳ ಹೊರಗೆರಡನ್ನೂ ಬಂಜರು ಮಾಡುತ್ತಿರುವ ಆತ್ಮಘಾತುಕವಾದ ಮಾದರಿ ಕೂಡ. ಇದೆಲ್ಲದರ ಹಿಂದಿರುವುದು, ಮೊದಲು ಉಳ್ಳವರಲ್ಲಿ ನಂತರ ಅದರ ಸಾಂಕ್ರಾಮಿಕ ಪರಿಣಾಮವಾಗಿ ಇತರರಲ್ಲಿ ಹೆಚ್ಚೆಚ್ಚು ಸುಖದಾಸೆಯನ್ನು ಪ್ರೇರೇಪಿಸುತ್ತಿರುವ ಅತಿ ಲಾಭಕೋರತನದ ಮೇಲೆ ನಿಂತಿರುವ ಸರಕಿನ ಅರ್ಥಶಾಸ್ತ್ರದ ದುರಾಸೆಯೇ. ಇದು ಮುಕ್ತ ಮಾರುಕಟ್ಟೆಯ ಹೆಸರಿನಲ್ಲಿ, ಆರ್ಥಿಕ ಸುಧಾರಣೆಗಳ ಹೆಸರಿನಲ್ಲಿ, ಜಾಗತೀಕರಣದ ಹೆಸರಲ್ಲಿ ಶಿಖರ ಮುಟ್ಟುತ್ತಿದ್ದಂತೆ, ಇದಕ್ಕೆ ಮೊದಲು–ಕಳೆದ ಹತ್ತು ವರ್ಷಗಳಲ್ಲಿ–ರೈತರು ಬಲಿಯಾದರು; ಆಗುತ್ತಿದ್ದಾರೆ ಕೂಡ. ಅವರ ಆತ್ಮಹತ್ಯೆಯ ಸಂಖ್ಯೆ ಈಗ ಒಂದೂವರೆ ಲಕ್ಷವನ್ನು ದಾಟಿ ಹೋಗಿದೆ. ಈಗ ಆದಿವಾಸಿಗಳ ಸರದಿಯಷ್ಟೆ.

ಆದರೆ ಆದಿವಾಸಿಗಳು ರೈತರಂತೆ ತಮ್ಮನ್ನು ತಾವು ಆಧುನಿಕ ನಾಗರೀಕತೆಗೆ ಒಪ್ಪಿಸಿಕೊಂಡವರಲ್ಲ. ಮೊದಲಾಗಿ ಅದರಿಂದ ಆಕರ್ಷಿತರಾದವರೂ ಅಲ್ಲ. ಅದು ಹುಟ್ಟಿಸುವ ಲೋಭಕ್ಕೆ ಈಡಾಗದಂತಹ ವಿಶಿಷ್ಟ ಜೀವನಕ್ರಮವನ್ನು ರೂಪಿಸಿಕೊಂಡವರು ಅವರು. ಅರುಂಧತಿ ರಾಯ್ ಅವರೇ ಹೇಳಿರುವಂತೆ ಅವರು ಇಪ್ಪತ್ತರ ನಂತರ ಎಣಿಸಲು ಬಾರದವರು; ಅಲ್ಲಲ್ಲ, ಇಪ್ಪತ್ತರ ನಂತರ ಎಣಿಸುವ ಅಗತ್ಯವನ್ನೇ ಕಾಣದೆ ಒಂದು ಸಮುದಾಯವಾಗಿ ಇನ್ನೂ ತಮ್ಮ ನಿಸರ್ಗ ಸಹಜ ಮುಗ್ಧತೆಯನ್ನು ಕಳೆದುಕೊಳ್ಳದವರು. ಲೇಖಕಿಗೆ ಒಬ್ಬ ಪೋಲೀಸ್ ಅಧಿಕಾರಿ ಹೇಳಿದಂತೆ, ಅವರನ್ನು ಮಣಿಸುವ ಏಕೈಕ ಮಾರ್ಗವೆಂದರೆ ಅವರೆಲ್ಲರ ಮನೆಗೆ ಟಿ.ವಿ. ಒದಗಿಸಿ ಅವರನ್ನು ದುರಾಸೆಯ ಜನರನ್ನಾಗಿ ಮಾಡುವುದು! ಹಾಗಾಗಿಯೇ ಅವರು ಆಧುನಿಕ ಅಭಿವೃದ್ಧಿ ಮಾದರಿಯ ಬಿಸಿ ತಾಗಿದೊಡನೆ ಪ್ರಾಣಿ ಸಹಜ ರೋಷದೊಂದಿಗೆ ಬಂಡಾಯವೆದ್ದಿದ್ದಾರೆ. ಆಸ್ತಿಯ ಕಲ್ಪನೆಯೇ ಇಲ್ಲದೆ ತಮ್ಮ ಬದುಕಿಗಾಗಿ ನಿಸರ್ಗ ಸಹಜವಾದ ಆರ್ಥಿಕ ಹದವೊಂದನ್ನು ರೂಪಿಸಿಕೊಂಡು ನೆಮ್ಮದಿಯಿಂದ ಬಾಳುವೆ ನಡೆಸುತ್ತಿದ್ದ ಅವರನ್ನು 'ಅಭಿವೃದ್ಧಿ'ಗೊಳಿಸಲು, 'ನಾಗರೀಕತೆ'ಯ ವ್ಯಾಪ್ತಿಗೆ ತಂದು ಉದ್ಧಾರ ಮಾಡಲು (ಐರೋಪ್ಯರು ಕಳೆದ ಶತಮಾನದಲ್ಲಿ ನಮ್ಮನ್ನು ಉದ್ಧರಿಸಲು ಪ್ರಯತ್ನಿಸಿದಂತೆ) ನಮ್ಮ

ನಾಗರಿಕ ಸರ್ಕಾರ ಸಕಲ ಬಲದೊಡನೆ ಹೊರಟಿದೆ. ಆದರೆ ಆಧುನಿಕ ಶೈಲಿಯ ಆಕ್ರಮಣಶೀಲತೆಯನ್ನು ಮೈಗೂಡಿಸಿಕೊಳ್ಳದ ಕಾರಣ ಅದನ್ನು ಎದುರಿಸಲಾಗದೆ ಅಸಹಾಯಕರಾದ ಅವರು ನಕ್ಸಲರ ತೆಕ್ಕೆಗೆ ಬಿದ್ದಿದ್ದಾರಷ್ಟೆ. ಅದಕ್ಕೆಂದೇ ಕಾಯುತ್ತಿದ್ದ ನಕ್ಸಲರು ಅವರನ್ನು ಬಲವಾಗಿ ಆತುಕೊಂಡಿದ್ದಾರೆ. ಆದರೆ ಆದಿವಾಸಿಗಳ ಈ ಅಸಹಾಯಕತೆಯನ್ನು, ತನ್ನ 'ಅಭಿವೃದ್ಧಿ'ಯ ಹುಚ್ಚಿನಿಂದಾಗಿ, ಕುರುಡಿನಿಂದಾಗಿ ಸಹಾನುಭೂತಿಯಿಂದ ಅರ್ಥ ಮಾಡಿಕೊಳ್ಳಲಾಗದ ಸರ್ಕಾರ ಅದನ್ನು ನಕ್ಸಲೀಯರ ಈ ರಾಜಕೀಯ ಸಮರ ತಂತ್ರದಿಂದ ಬೇರ್ಪಡಿಸಲಾಗದೆ, ಪರಿಸ್ಥಿತಿಯನ್ನು ಗೋಜಲುಗೊಳಿಸಿದೆ. ಅರುಂಧತಿ ರಾಯ್‌ರಂತಹ ಮಾನವ ಹಕ್ಕುಗಳ ಕಾರ್ಯಕರ್ತರ ವಿಪರೀತ ವ್ಯಾಖ್ಯಾನಗಳಿಗೆ ದಾರಿ ಮಾಡಿಕೊಟ್ಟಿದೆ.

ರಾಯ್ ತಮ್ಮ ಲೇಖನದಲ್ಲಿ ನಕ್ಸಲೀಯ ಕಾರ್ಯಕರ್ತರನ್ನು ಬಿಡಿಬಿಡಿಯಾಗಿ ಪರಿಚಯಿಸುತ್ತಾ, ಅವರ ಚಹರೆಗಳನ್ನು ವೈಭವೀಕರಿಸುತ್ತಾ, 'ಈತ/ಈಕೆ ನೋಡಿ, ರಾಷ್ಟ್ರದ ಭದ್ರತೆಗೆ ಅತ್ಯಂತ ಭೀಕರವಾದ ಬೆದರಿಕೆ!' ಎಂದು ಸರ್ಕಾರದ ಬಗ್ಗೆ ಆಡುತ್ತಾ ಹೋಗುವ ವ್ಯಂಗ್ಯದ ಮಾತುಗಳು ಈ ವಿಪರೀತ ವ್ಯಾಖ್ಯಾನಕ್ಕೆ ಒಂದು ಉದಾಹರಣೆ. ಸರ್ಕಾರ ಹೇಳುತ್ತಿರುವುದು ನಕ್ಸಲೀಯರು ಇಡಿಯಾಗಿ ಒಂದು ರಾಜಕೀಯ ಆಂದೋಲನವಾಗಿ ರಾಷ್ಟ್ರದ ಭದ್ರತೆಗೆ ಅತ್ಯಂತ ದೊಡ್ಡ ಬೆದರಿಕೆ ಉಂಟು ಮಾಡಿದ್ದಾರೆ ಎಂದೇ ಹೊರತು, ಅದರ ಬಿಡಿ ಬಿಡಿ ಕಾರ್ಯಕರ್ತರ ಬಗ್ಗೆ ಅಲ್ಲ. ಹಾಗೇ ಅರುಂಧತಿ ರಾಯ್ ಅವರು, ಈ ಆದಿವಾಸಿಗಳು ನಕ್ಸಲ್ ಕಾರ್ಯಕ್ರಮಗಳಲ್ಲಿ ತೊಡಗದೆ ಧರಣಿ ನಡೆಸಬೇಕಿತ್ತೇ ಅಥವಾ ಜಂತರ್ ಮಂತರ್ ಮುಂದೆ ಉಪವಾಸ ಕೂರಬೇಕಿತ್ತೇ ಎಂದು ಗಾಂಧೀಜಿ ಮುಖಕ್ಕೆ ರಾಚುವಂತಹ ಹಾಕುವ ಪ್ರಶ್ನೆ ಕೂಡಾ ಅಗ್ಗದ ವ್ಯಂಗ್ಯವೇ ಆಗಿದೆ. ಗಾಂಧಿ ತಮ್ಮ ಬದುಕಿನ ಪ್ರಯೋಗಗಳ ಮೂಲಕ ಸಂಘಟಿಸಿಕೊಂಡಿದ್ದ ನೈತಿಕ ಹಾಗೂ ಅಧ್ಯಾತ್ಮಿಕ ಶಕ್ತಿ ಹಾಗೂ ಬೆಂಬಲದ ಅರಿವಿಲ್ಲದೆ ಅವರು ರೂಪಿಸಿಕೊಟ್ಟ ಕಾರ್ಯಕ್ರಮಗಳ ಬಗ್ಗೆ ಆಡಿರುವ ಅವಿವೇಕದ ಮಾತುಗಳಿವು. 'ನರ್ಮದಾ ಬಚಾವೋ' ಆಂದೋಲನದ ಭಾಗವಾಗಿ ನ್ಯಾಯಾಂಗದ ಬಗ್ಗೆ ಆಡಿದ ಅಡ್ಡ ಮಾತಿನಿಂದಾಗಿ ನ್ಯಾಯಾಂಗದಿಂದ ಒಂದು ದಿನದ ಸೆರೆಮನೆ ಶಿಕ್ಷೆಗೆ ಒಳಗಾಗಿ, ಆ ಶಿಕ್ಷೆಗೆ ಹೆದರಿ ದಂಡ ಕೊಟ್ಟು ತಪ್ಪಿಸಿಕೊಂಡ ರಾಯ್ ಇಂತಹ ಮಾತುಗಳನ್ನಾಡುವುದಕ್ಕೆ ಯಾವುದೇ ನೈತಿಕ ಹಕ್ಕನ್ನು ಹೊಂದಿಲ್ಲ.

ಬದುಕಿಗಾಗಿ ನಡೆದಿರುವ ಹೋರಾಟದ ಒತ್ತಡಗಳ ಮಧ್ಯೆ ಅಸಹಾಯಕತೆಯಿಂದಲೇ ನಕ್ಸಲೀಯರಾಗಿರುವ ಆದಿವಾಸಿಗಳು, ನೈತಿಕ ಹಾಗೂ ಅಧ್ಯಾತ್ಮಿಕ ಶಕ್ತಿ ಸಂಘಟಿಸಿಕೊಂಡ ನಾಯಕತ್ವದಡಿ ಧರಣಿಯೋ ಉಪವಾಸವೋ ಕೂರುವುದಾದರೆ, ಖಂಡಿತ ಅವರಿಗೆ ಜನ ಬೆಂಬಲ ದೊರೆತು ನಿಧಾನವಾಗಿಯಾದರೂ ಸರ್ಕಾರ ಅವರಿಗೆ ಮಣಿಯುವ ಎಲ್ಲ ಸಾಧ್ಯತೆಗಳಿವೆ. ಆದರೆ ಅವರು ಎಲ್ಲ ನೈತಿಕತೆ-ಅಧ್ಯಾತ್ಮಿಕತೆಗಳನ್ನು ನಿರಾಕರಿಸುವ ಹಿಂಸಾವಾದಕ್ಕೆ ಮರುಳಾಗಿದ್ದಾರೆ. ಅದನ್ನು ಅರುಂಧತಿ ರಾಯ್‌ರಂತಹವರು,

ಪೋಲೀಸರಿಗೆ ಚಳ್ಳೆ ಹಣ್ಣು ತಿನ್ನಿಸಿ ಅವರನ್ನು ಭೀಕರ ರೀತಿಗಳಲ್ಲಿ ಕೊಲ್ಲುವ ದೃಶ್ಯವನ್ನು ಚಿತ್ರೀಕರಿಸಿಕೊಂಡು, ಮತ್ತೆ ಮತ್ತೆ ಅದನ್ನು ನೋಡುತ್ತಾ ಸ್ಫೂರ್ತಿಗೊಳ್ಳುವ ಕಾರ್ಯಕರ್ತೆಯೊಬ್ಬಳ ವ್ಯಕ್ತಿತ್ವವನ್ನು ವೈಭವೀಕರಿಸುವ ಮೂಲಕ ಅನುಮೋದಿಸುತ್ತಿರುವುದು ಜಿಗುಪ್ಸೆಕರವಷ್ಟೇ ಅಲ್ಲ, ಖಂಡನೀಯ ಕೂಡಾ ಆಗಿದೆ. ಹಾಗೇ, ನಮ್ಮ ನ್ಯಾಯಾಂಗದ ದೌರ್ಬಲ್ಯಗಳನ್ನು ಖಂಡಿಸುತ್ತಾ, ನಕ್ಸಲೀಯರ ಜನತಾ ನ್ಯಾಯಾಲಯಗಳ ನ್ಯಾಯದಾನ ಪದ್ಧತಿಯನ್ನು ಸಮರ್ಥಿಸುವ ರೀತಿ ಕೂಡಾ. ಜನ ಸಮೂಹವೊಂದು ಕೈಯೆತ್ತಿ ಒಬ್ಬನಿಗೆ ಮರಣ ದಂಡನೆ ವಿಧಿಸುವ–ಅದೂ ಕತ್ತು ಕುಯ್ದು ಎಸೆಯುವ–ಕ್ರಮವನ್ನು ರಾಕ್ಷಸೀಯವೆಂದೂ ಕರೆಯಲಾಗದೇನೋ! ರಾಕ್ಷಸರಿಗೂ ಒಂದು ಸಂಸ್ಕೃತಿ ಇತ್ತಲ್ಲವೆ? ಅರುಂಧತಿ ಅವರ ಗದ್ಯ ಇಂತಹ ಹಲವು ಕಡೆ ಅಶ್ಲೀಲವಾಗಿದೆ. ಇವರ ಇಂತಹ ಬರವಣಿಗೆಯ ಶೈಲಿಯೇ ದಾಂತೇವಾಡದಲ್ಲಿ ಏಪ್ರಿಲ್ ೬ರಂದು ನಡೆದ ೭೬ ಜನ ಪೋಲೀಸರ ನಿಷ್ಕಾರಣ ಮಾರಣ ಹೋಮಕ್ಕೆ(ಹಾಗೂ ಇತ್ತೀಚಿನ, ನಲವತ್ತು ಜನ ನಾಗರಿಕರ ರಕ್ತಸಿಕ್ತ ಸಾವಿಗೆ ಕಾರಣವಾದ ಬಸ್ ಸ್ಫೋಟಕ್ಕೆ) ಅ–ನೈತಿಕ ಸ್ಥೈರ್ಯ ಒದಗಿಸಿದ್ದರೂ ಆಶ್ಚರ್ಯವಿಲ್ಲ. (ಈ ವರ್ಷ ನಕ್ಸಲೀಯರಿಂದ ಕೊಲ್ಲಲ್ಪಟ್ಟವರ ಸಂಖ್ಯೆ ೯೦೦ನ್ನು ದಾಟಿದೆ.) ಶ್ರೇಷ್ಠ ಲೇಖಕಿಯೊಬ್ಬಳ ಸಾಹಿತ್ಯ ಶಕ್ತಿಯ ಕರಾಳ ಮುಖವಿದು. ಇದು ಬರವಣಿಗೆಯ ಭಾವಾವೇಶದ ಲೋಪವಾಗಿದ್ದಲ್ಲಿ ಮಾತ್ರ ಕ್ಷಮಾರ್ಹ.

ಆದರೆ ಅರುಂಧತಿ ರಾಯ್ ಲೇಖಕಿಯಾಗಿ ಒಂದೆರಡು ಕಡೆ ಈ ಕರಾಳತೆಯನ್ನು ಸೃಷ್ಟಿಸಿದ್ದಾರೆ ನಿಜ. ಆದರೆ ಇದರ ಮಧ್ಯೆಯೂ ಈ ಲೇಖನ ಮಾಲೆಗೊಂದು ರಚನಾತ್ಮಕ ಮುಖವೂ ಇದೆ ಎಂಬುದನ್ನು ನಾವು ಗುರುತಿಸದೇ ಹೋಗಬಾರದು. ಇದೇ ನಿಜವಾಗಿ ಈ ಲೇಖನ ಮಾಲೆಯ ಅತ್ಯಂತ ಮಹತ್ವದ ಸಂದೇಶವೂ ಆಗಿದೆ. ನಕ್ಸಲೀಯರು ತಾವು ಅಧಿಕಾರ ಸ್ಥಾಪಿಸಿಕೊಂಡಿರುವ ವಿಶಾಲ ಪ್ರದೇಶದ ವ್ಯಾಪ್ತಿಯಲ್ಲಿ 'ಗ್ರಾಮ ಸ್ವರಾಜ್ಯ' ಮಾದರಿಯ 'ರಾಜ್ಯ ವ್ಯವಸ್ಥೆ'ಯೊಂದನ್ನು ಸ್ಥಾಪಿಸಿದ್ದಾರೆ ಎಂದು ಲೇಖಕಿ ಹೇಳುತ್ತಾರೆ. ಇತರ ಮೂಲಗಳೂ ಇದನ್ನು ದೃಢಪಡಿಸಿವೆ. ಇದು ನಿಜವೇ ಆಗಿದ್ದಲ್ಲಿ ನಕ್ಸಲೀಯರು ಆರಿಸಿಕೊಂಡಿರುವ ಅಥವಾ ಸರಿಯಾಗಿ ಹೇಳುವುದಾದರೆ ಅವರು ಆರಿಸಿಕೊಳ್ಳುವಂತೆ ಮಾಡಲಾಗಿರುವ ಅಭಿವೃದ್ಧಿ ಮಾದರಿ ಬಗ್ಗೆ ಮೆಚ್ಚುಗೆ ಮೂಡುತ್ತದೆ. ಇದು ಯಾವುದನ್ನು ಗಾಂಧಿ ಒಂದು ರೋಗ ಎಂದು ಕರೆದಿದ್ದರೋ, ಆ ಆಧುನಿಕ ನಾಗರೀಕತೆಯ ಸದಾ ಏರುತ್ತಾ ಹೋಗುವ ಜೀವನ ಮಟ್ಟದ ಸಂಕೀರ್ಣ ಬದುಕಿಗೆ ಪ್ರತಿಯಾಗಿ; ಅವರು ಭಾರತೀಯ ಪರಂಪರೆಯನ್ನು ಹಿನ್ನೆಲೆಯಾಗಿಟ್ಟುಕೊಂಡು ರೂಪಿಸಿಕೊಟ್ಟಿದ್ದ ಮಿತಿಗಳುಳ್ಳ ಸರಳ ಬದುಕಿನ ಮಾದರಿ. ಆದರೆ ಅದನ್ನು ಅಲ್ಲಿ ಬಂದೂಕಿನ ಬಲದಿಂದ ಕಟ್ಟಲಾಗಿದೆ ಎಂಬ ಸಂಗತಿ 'ಗ್ರಾಮ ಸ್ವರಾಜ್ಯ' ಕಲ್ಪನೆಯನ್ನೇ ಬುಡಮೇಲುಗೊಳಿಸುತ್ತದೆ ಎಂಬುದು ನಿಜ. ಆದರೆ, ಅದು ಬದುಕಿನ ಒಂದು ಮಾದರಿಯಾಗಿ ನೆಹರೂ ಮತ್ತು ಅವರ ಆಧುನಿಕಾವಾದಿ ಗೆಳೆಯರು ವಾದಿಸಿದಂತೆ ಅವ್ಯಾವಾಹಾರಿಕವೇನಲ್ಲ ಎಂಬುದನ್ನೂ ಸೂಚಿಸುತ್ತದೆ ಎಂಬುದನ್ನೂ ನಾವು ಗಮನಿಸಬೇಕು.

ಅಲ್ಲಿ ನಡೆದಿರುವ ದೊಡ್ಡ ಪ್ರಮಾಣದ (ಮೂರು ಲಕ್ಷ ಎಕರೆ?) ಭೂ ವಿತರಣೆ, ಎರಡೂವರೆ ಪಟ್ಟು ಇಳುವರಿ ಹೆಚ್ಚಿಸಿರುವ ದೇಶೀ ಕೃಷಿ ಪದ್ಧತಿಯ ಅಳವಡಿಕೆ ಮತ್ತು ಅದು ಒಟ್ಟಾರೆ ಕಟ್ಟಿ ಕೊಡುವ ಜೀವನ ಕ್ರಮ, ಆರುಂಧತಿ ರಾಯ್ ಅವರು ವರ್ಣಿಸುವ 'ಭೂಮ್ಕಾಲ್ ಹಬ್ಬ'ದ ವರ್ಣನೆಗಳು ಸೂಚಿಸುವಂತೆ ಅವರ ಬದುಕಿನಲ್ಲಿ ಹರ್ಷ-ನೆಮ್ಮದಿಗಳನ್ನೇ ತಂದುಕೊಟ್ಟಿರುವಂತಿದೆ. ಇದು ಅವರ ಬದುಕಿನ ನಿಜವಾದ ಆಧುನೀಕರಣದ ಆರಂಭ. ಇಂದು ಆಧುನಿಕ ಅಭಿವೃದ್ಧಿ ಮಾದರಿ ದೇಶದ ಬಹು ದೊಡ್ಡ ಭಾಗವನ್ನು ಸುಸ್ತು ಮಾಡಿ ಕಂಗೆಡಿಸಿ ಕೂರಿಸಿದೆ. ಇದಕ್ಕೆ ಪರ್ಯಾಯವಾಗಿ ಗ್ರಾಮ ಸ್ವರಾಜ್ಯವನ್ನೇ ಅಲ್ಲದಿದ್ದರೂ, ಆ ಮಾದರಿಯ ಆಶಯಗಳ ಸುತ್ತಮುತ್ತಲೇ ಬದುಕಿನ ಒಂದು ಹೊಸ ಮಾದರಿಯನ್ನು ರೂಪಿಸಲಾಗದೇಕೆ ಎಂಬ ದೂರದ ಆಸೆಯನ್ನಾದರೂ ರಾಯ್ ನೀಡಿರುವ ಈ ವಿವರಗಳು ಹುಟ್ಟಿಸುವಂತಿವೆ. ನಕ್ಸಲ್ ಚಳುವಳಿ ಆದಿವಾಸಿಗಳ ಒಡನಾಟದಲ್ಲಿ ಅವರ ಹೋರಾಟದ ಮೂಲಕ ಹುಟ್ಟಿಸಿರುವ ದೊಡ್ಡ ಆಶೆಯಿದು. ಇದು ಗತಿತಾರ್ಕಿಕ ಭೌತವಾದಿಗಳಾಗಿ ಆಧುನಿಕ ನಾಗರೀಕತೆಯ ಶಿಶುಗಳೇ ಆಗಿರುವ ನಕ್ಸಲೀಯರ ಕಣ್ಣುಗಳನ್ನೂ ತೆರೆಸಬೇಕು. ನಕ್ಸಲೀಯರು ಬಂದೂಕನ್ನು ಕೆಳಗಿಟ್ಟು ಸಂಸದೀಯ ಪ್ರಜಾಪ್ರುಭತ್ವದ ಪ್ರಕ್ರಿಯೆಯಲ್ಲಿ ನೇರವಾಗಿ ಪಾಲ್ಗೊಳ್ಳುವ ಮೂಲಕ ಮಾತ್ರ ಇದಕ್ಕೆ ನಿಜವಾದ ಚಾಲನೆ ನೀಡಬಲ್ಲರು. ಹಾಗೆ ಮಾಡುವ ಮೂಲಕ ಅವರು ೨೦೫೦ರ ಹೊತ್ತಿಗೆ ಸಾಧಿಸಬೇಕೆಂದಿರುವ 'ಕ್ರಾಂತಿ'ಗಾಗಿ ಗಳಿಸಕೊಳ್ಳಬೇಕೆಂದಿರುವ ಜನ ಬೆಂಬಲವನ್ನು ಇನ್ನೂ ಬಹು ಮುಂಚೆಯೇ ಗಳಿಸಿಕೊಳ್ಳಬಹುದು. ಅದಕ್ಕಾಗಿ, ಮೊದಲು ಆದಿವಾಸಿಗಳ ಕೈಯಿಂದ ಬಂದೂಕುಗಳು ಕೆಳಗಿಳಿಯುವಂತಾಗಬೇಕು.

ಆದರೆ ಸರ್ಕಾರ ಇದಕ್ಕೆ ಅವಕಾಶ ಕೊಡುವುದೇ? ಮೊದಲಾಗಿ ಆದಿವಾಸಿಗಳ ಕೈಗೆ ಬಂದೂಕುಗಳನ್ನು ಇರಿಸಿದವರಾದರೂ ಯಾರು? ನಕ್ಸಲೀಯರೆಂಬುದು ಸುಲಭದ ಉತ್ತರ. ಆದರೆ ಆದಿವಾಸಿಗಳನ್ನು ನಕ್ಸಲೀಯರ ತೆಕ್ಕೆಗೆ ಮತ್ತು ಈ ದೇಶದ ನಾಗರಿಕ ಹಕ್ಕುಗಳ ಆಂದೋಲನಕಾರರನ್ನೂ ಹಾಗೂ ಬಹಳಷ್ಟು ಬುದ್ಧಿಜೀವಿಗಳನ್ನು ನಕ್ಸಲೀಯರ ಬಗೆಗಿನ ಸಹಾನುಭೂತಿಯ ವೈಚಾರಿಕ ವೃತ್ತಕ್ಕೆ ತಳ್ಳಿದವರಾದರೂ ಯಾರು? ಇದನ್ನು ಅರುಂಧತಿ ರಾಯ್, ಸರ್ಕಾರ ಹೇಗೆ ಪೋಲೀಸರು, ಬೇಹುಗಾರರು, 'ಸಲ್ವಾ ಜುಡಂ' (ಹಳ್ಳಿಗಳ ಭೂಮಾಲಿಕರು ಮತ್ತು ಇತರೆ ಪಟ್ಟಭದ್ರ ಹಿತಾಸಕ್ತಿಗಳು ರೂಪಿಸಿಕೊಂಡಿರುವ 'ಸ್ವಯಂಸೇವಾ ದಳ')ನವರು ಮತ್ತು 'ವಿಶೇಷ ಪೋಲಿಸ್ ಅಧಿಕಾರಿ'ಗಳು ಎಂಬ ಮಧ್ಯವರ್ತಿಗಳನ್ನು ಬಳಸಿಕೊಂಡು ಆದಿವಾಸಿಗಳ ಮಾನವ ಹಕ್ಕುಗಳಿರಲಿ, ಬದುಕುವ ಮೂಲಭೂತ ಹಕ್ಕನ್ನೇ ನಿರಾಕರಿಸಿ ನಡೆಸಿದ ಭಯಾನಕ ಅತ್ಯಾಚಾರಗಳ ಉದಾಹರಣೆಗಳ ಮೂಲಕ ವಿಷದೀಕರಿಸಿದ್ದಾರೆ. ಆತ್ಮಘಾತುಕವಾದ ಅಭಿವೃದ್ಧಿ ಕಾರ್ಯಕ್ರಮದ ಚಟ ಹತ್ತಿಸಿಕೊಂಡ ನಮ್ಮ ಸರ್ಕಾರ, ಆಧುನಿಕ ನಾಗರೀಕತೆಯ ಎಲ್ಲ ದುರಾಸೆಗಳಿಗೆ ಬಲಿಯಾಗಿರುವ ನಾಗರೀಕ ಪ್ರದೇಶಗಳನ್ನು ಸುಲಭವಾಗಿ ಕೈವಶ ಮಾಡಿಕೊಂಡು

ಕೆಲವರಿಗೆ ಕೈತುತ್ತು ಮಾಡಿಕೊಟ್ಟ ನಂತರ, ಆದಿವಾಸಿಗಳ ಪ್ರದೇಶದ ಮೇಲೆ ಕಣ್ಣು ಹಾಕಿ ಕಷ್ಟಕ್ಕೆ ಸಿಕ್ಕಿ ಹಾಕಿಕೊಂಡಿದೆ. ನಮ್ಮ ನಿಜವಾದ ಪರಂಪರೆಯ ಬೀಜ ಭೂಮಿಯಾದ ಆ ಪ್ರದೇಶ, ಆಧುನಿಕ ನಾಗರೀಕತೆಯ ಲಾಭಕೋರರ ವಸಾಹತುವಾಗಲು ಸ್ಪಷ್ಟವಾಗಿ ಮತ್ತು ದಿಟ್ಟವಾಗಿ ನಿರಾಕರಿಸಿದೆ. ಆದಿವಾಸಿಗಳ ಆಸ್ತಿಯಲ್ಲ, ಅವರ ಬದುಕಿನ ಅವಿಭಾಜ್ಯ ಅಂಗವೇ ಆಗಿರುವ ಬೆಟ್ಟ–ಗುಡ್ಡ–ಕಣಿವೆ–ನದಿ–ತೊರೆ–ಸರೋವರಗಳನ್ನು, ಅಲ್ಲಿನ ನೈಸರ್ಗಿಕ ಸಂಪನ್ಮೂಲಗಳನ್ನು ಅಗ್ಗದ ಮಾನವ ಶ್ರಮದ ಮೂಲಕ ಸೂರೆ ಮಾಡಲು ಬಂದಿರುವ ಬಹುರಾಷ್ಟ್ರೀಯ ಕಂಪನಿಗಳೊಡನೆ ನಮ್ಮ ನಾಗರೀಕ (ಕೇಂದ್ರ ಮತ್ತು ರಾಜ್ಯ) ಸರ್ಕಾರಗಳು ಒಟ್ಟು ೬,೯೩೩೮ ಕೋಟಿ ರೂಪಾಯಿಗಳ ಮೌಲ್ಯದ ಒಪ್ಪಂದಗಳನ್ನು ಮಾಡಿಕೊಂಡಿವೆ. ಇವುಗಳ ಜಾರಿಗೆ ಎದುರಾಗಿರುವ, ಈ ದೇಶದ ನಿಜವಾದ ಒಡಲಾಳದ ಈ ಪ್ರತಿರೋಧವನ್ನು ನಕ್ಸಲೀಯರ ಪ್ರತಿರೋಧವೆಂದಷ್ಟೇ ಅರ್ಥೈಸಿ, ಅದನ್ನು ಸಂವೈಧಾನಿಕ ರಾಜ್ಯ ವ್ಯವಸ್ಥೆಯ ವಿರುದ್ಧ ಘೋಷಿಸಲಾಗಿರುವ ಯುದ್ಧವೆಂದು ಪ್ರಚಾರ ಮಾಡತೊಡಗುವುದು ನಮ್ಮ ವಿರುದ್ಧವೇ ಮಾಡಿಕೊಳ್ಳುವ ಅಪಪ್ರಚಾರವಾಗುತ್ತದೆ.

ಇದು ಈ ನೆಲದ ಆದಿ ಸಮುದಾಯವೊಂದು ತನ್ನ ಹುಟ್ಟು ಹಕ್ಕಾದ ಬದುಕಿನ ಸ್ವಾಯತ್ತತೆಗಾಗಿ, ತನ್ನ ಜೀವನ ಕ್ರಮದ ರಕ್ಷಣೆಗಾಗಿ, ತನ್ನ ಅಧ್ಯಾತ್ಮಿಕ ಅಸ್ತಿತ್ವದ ಶೋಧನೆಗಾಗಿ ನಡೆಸಿರುವ ಹೋರಾಟ. ಹಾಗೆ ನೋಡಿದರೆ ಇದು ಆಧುನಿಕ ಅಭಿವೃದ್ಧಿ ಮಾದರಿಯ ಮೋಹಕ್ಕೆ ಒಳಗಾಗಿ ತ್ರಿಶಂಕು 'ಸ್ವರ್ಗ'ದಲ್ಲಿ ಸಿಕ್ಕಿಹಾಕಿಕೊಂಡಿರುವ ನಮ್ಮೆಲ್ಲರ ಪರವಾಗಿ ನಮ್ಮ 'ಪೂರ್ವಿಕರು' ನಡೆಸಿರುವ ಸಮಕಾಲೀನ ಹೋರಾಟ. ಇಲ್ಲಿ ನಕ್ಸಲೀಯರದೇನಿದ್ದರೂ ಜಾಣ ಮಧ್ಯವರ್ತಿ ಪಾತ್ರವಷ್ಟೆ. ಆದುದರಿಂದ ಸರ್ಕಾರ ಮೊದಲು ಆದಿವಾಸಿಗಳ ಬಂಡಾಯವನ್ನು ನಕ್ಸಲೀಯರ ಹಾವಳಿ ಎಂದು ಸಾರಾ ಸಗಟಾಗಿ ಪರಿಭಾವಿಸುವುದನ್ನು ತೊರೆದು, ಈ ಬಂಡಾಯದ ಹಿಂದಿರುವ ಆಳದ ರಾಜಕೀಯ ಪ್ರಶ್ನೆಗಳ ಬಗ್ಗೆ–ಇವು ಪರೋಕ್ಷವಾಗಿ ಗಾಂಧಿ ಎತ್ತಿದ್ದ ಪ್ರಶ್ನೆಗಳೂ ಆಗಿವೆ ಎಂಬುದನ್ನು ತಿಳಿದು–ಸಹಾನುಭೂತಿಯಿಂದ ಯೋಚಿಸತೊಡಗುವುದು ಈ ಸಮಸ್ಯೆಯನ್ನು ಬಗೆಹರಿಸಲು ಇಡಬಹುದಾದ ಮೊದಲ ಹೆಜ್ಜೆ. ಇದು ಆದಿವಾಸಿಗಳನ್ನು ಶತ್ರುಗಳೆಂದು ನೋಡದೆ, ಅರುಂಧತಿ ಅವರು ದಾಖಲಿಸಿರುವಂತೆ ರಾಷ್ಟ್ರೀಯತೆಯ ಹೆಸರಿನಲ್ಲಿ ಅವರ ಬದುಕನ್ನು ಅನ್ಯ ರಾಜ್ಯಗಳ ಮೀಸಲು ಪೋಲೀಸರನ್ನು ಕರೆಸಿ ಅಮಾನವೀಯವಾಗಿ ದಮನ ಮಾಡುವ ಪ್ರಯತ್ನಗಳನ್ನು ನಿಲ್ಲಿಸಲು ಪ್ರೇರೇಪಿಸಬಹುದು. ಹಾಗೇ, ಅವರು ನಾಗರಿಕ ಸಮಾಜಕ್ಕೆ ಮಹತ್ವದ್ದೇನನ್ನೋ, ಮೂಲ ಜೀವದಾಯಿಯಾದ ಸತ್ಯವೊಂದನ್ನು ಹೇಳಬಯಸಿದ್ದಾರೆ ಎಂಬ ಅರಿವನ್ನು ನಮ್ಮಲ್ಲಿ ಮೂಡಿಸಬಹುದು.

ಆಗ ಈ ಆದಿವಾಸಿಗಳಿಗೆ ಕೇವಲ ಮತದಾನದ ಹಕ್ಕನ್ನು ನೀಡಿ ಅವರನ್ನು 'ಗಣರಾಜ್ಯ ವ್ಯವಸ್ಥೆ'ಯ ವ್ಯಾಪ್ತಿಗೆ ಸೇರಿಸಿಕೊಂಡುಬಿಟ್ಟಿದ್ದೇವೆಂದು ಬೊಗಳೆ ಬಿಡುತ್ತಾ ನಮ್ಮ ನಾಗರೀಕತೆಯ ಶ್ರೇಷ್ಠತೆಯ ಬಗ್ಗೆ ಪಡುತ್ತಿರುವ ಹೆಮ್ಮೆ ಎಷ್ಟು ಹುಸಿ ಎಂಬುದು

ಗೊತ್ತಾದೀತು. ಹಾಗೇ ಈ ಹುಸಿ ಹೆಮ್ಮೆಯ ಅಮಲಿನಲ್ಲಿ ಅವರ ಬದುಕಿನ ಆವರಣದ ಮೇಲೇ, ಜೀವನ ಕ್ರಮದ ಮೇಲೇ ದಾಳಿ ಮಾಡುವ ಮೂಲಕ ಅವರ ಬದುಕಿನ ಹಕ್ಕನ್ನೇ ನಿರಾಕರಿಸುತ್ತಿರುವ ನಾವು ಸಂವಿಧಾನದ ಆಶಯಗಳನ್ನೇ ಬುಡಮೇಲುಗೊಳಿಸುತ್ತಿದ್ದೇವೆ ಎಂಬ ಎಚ್ಚರ ಮೂಡೀತು. ಅದರ ಭಾಗವಾಗಿ ಆದಿವಾಸಿ ಪ್ರದೇಶಗಳನ್ನು ತಂತಮ್ಮ ದೇಶಗಳ ಅಥವಾ ಪ್ರದೇಶಗಳ 'ಅಭಿವೃದ್ಧಿ'ಗಾಗಿ ಖರೀದಿಸಲು ಬಂದಿರುವ ಉದ್ಯಮಿಗಳೊಂದಿಗೆ ಮಾಡಿಕೊಂಡಿರುವ ಒಪ್ಪಂದಗಳನ್ನು–ಅದೆಷ್ಟೇ ಪರಿಹಾರ ಕೊಟ್ಟಾದರೂ–ರದ್ದು ಮಾಡುವ ವಿವೇಕವೂ ಮೂಡಬಲ್ಲುದು. (ತೀರ್ಥಹಳ್ಳಿ ಬಳಿಯ ಗುಡ್ಡವೊಂದು ಬೋಳಾಗುತ್ತಿದ್ದು, ಅದರ ಕಲ್ಲುಗಳನ್ನು ಜರ್ಮನಿಯ ಯಾವುದೋ ಒಂದು ಪಟ್ಟಣದಲ್ಲಿ ಹಾಲುಗಲ್ಲಿನ ಕಾಲು ಹಾದಿ ನಿರ್ಮಿಸಲು ಸಾಗಿಸಲಾಗುತ್ತಿದೆ ಎಂದು ರೈತ ಮುಖಂಡ ಕಡಿದಾಳು ಶಾಮಣ್ಣ ನನಗೆ ಇತ್ತೀಚೆಗೆ ತಿಳಿಸಿದರು)

ಆದರೆ ಮೂಲತಃ ಜಾತಿ ಶಪಿತವಾದ ನಮ್ಮ ನಾಗರಿಕ ಸಮಾಜ ಮತ್ತು ಸರ್ಕಾರ, ಆದಿವಾಸಿಗಳು ಮಹತ್ವದ್ದನ್ನು ಹೇಳಬಲ್ಲರು ಎಂಬುದನ್ನೇ ನಂಬದ ಸ್ಥಿತಿಯಲ್ಲಿದ್ದಂತೆ ಕಾಣುತ್ತದೆ. ದೇಸಿ ವಿವೇಕವಿಲ್ಲದ ಆಧುನಿಕತೆ ಮತ್ತು ಜಾತಿ ಅಹಂಕಾರಗಳು ಭಾರತೀಯ ಸಮಾಜವನ್ನು ಕುರುಡಾಗಿಸಿದೆ, ಕ್ರೂರವಾಗಿಸಿದೆ. ಇದರ ಅರಿವಾಗದ ಹೊರತು ಆದಿವಾಸಿಗಳು ಈಗ ಹೂಡಿರುವ ಬಂಡಾಯ ನಕ್ಸಲೀರನ್ನು ಬಲಗೊಳಿಸುತ್ತಲೇ ಹೋಗುತ್ತದೆ ಮತ್ತು ಆರುಂಧತಿ ರಾಯ್‌ರಂತಹ ಮಾನವ ಹಕ್ಕುಗಳ ಹೋರಾಟಗಾರರನ್ನು ಬಿಡುವಿಲ್ಲದ ಕೆಲಸಗಳಲ್ಲಿ ತೊಡಗಿಸಿರುತ್ತದೆ, ಅಷ್ಟೆ.

(ಇದರ ಸಂಪಾದಿತ ರೂಪ ೨೦೧೦ರ ಏಪ್ರಿಲ್ ೩೦ರ 'ಪ್ರಜಾವಾಣಿ'ಯಲ್ಲೂ, ಪೂರ್ಣ ರೂಪ 'ಸಂವಾದ'ದ ೨೦೧೦ರ ಜೂನ್ ಸಂಚಿಕೆಯಲ್ಲೂ ಪ್ರಕಟವಾಗಿದೆ)

■

ಭಾರತದಲ್ಲಿನ ದೂರ, ಬಹು–ದೂರಗಳು...

ಮೂಲ: ಕನಕಮಣಿ ದೀಕ್ಷಿತ್
(ಕೃಪೆ: ಔಟ್‌ಲುಕ್, ಮೇ ೧೦)
ಕನ್ನಡಕ್ಕೆ: ಡಿ.ಎಸ್.ನಾಗಭೂಷಣ

ಮಾನವ ಹಕ್ಕುಗಳ ಬಹು ದಿಟ್ಟ ಹೋರಾಟಗಾರ್ತಿ ಎನಿಸಿರುವ ಅರುಂಧತಿ ರಾಯ್ ದಂಡಕಾರಣ್ಯದಲ್ಲಿನ ಮಾವೋವಾದಿಗಳನ್ನು ಭೇಟಿ ಮಾಡಿ ಬಂದು, 'ಔಟ್‌ಲುಕ್' ಪತ್ರಿಕೆಯಲ್ಲಿ ಬರೆದ ಸುದೀರ್ಘ ಅನುಭವ ಕಥನ ರಾಷ್ಟ್ರಾದ್ಯಂತ ಕುತೂಹಲ ಹುಟ್ಟಿಸಿ, ಹಲವು ನೆಲೆಗಳಿಂದ ಹಲವು ರೀತಿಯ ಪ್ರತಿಕ್ರಿಯೆಗಳ ಮಹಾಪೂರವನ್ನೇ ಆಹ್ವಾನಿಸಿದೆ. ಇವುಗಳಲ್ಲಿ ಸಗಟು ಸಗಟಾದ ಪರ–ವಿರೋಧ ನಿಲುವುಗಳೇ ಹೆಚ್ಚು. ಆದರೆ ಮಾವೋವಾದಿಗಳು ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪಾಲ್ಗೊಳ್ಳುವಂತೆ ಮಾಡಿದ ನೇಪಾಳದ ವಿಶಿಷ್ಟ ರಾಜಕಾರಣದ ಹಿನ್ನೆಲೆಯಲ್ಲಿ, ಆ ದೇಶದ ಪ್ರಮುಖ ಪತ್ರಿಕೆ 'ಹಿಮಾಲ್'ನ ಸಂಪಾದಕರಾದ ಕನಕಮಣಿ ದೀಕ್ಷಿತ್, ಅರುಂಧತಿ ರಾಯ್ ಅವರ ಬರಹಕ್ಕೆ ಬಂದ ಪ್ರತಿಕ್ರಿಯೆಗಳನ್ನು ಗಮನಿಸಿ ಬರೆದಿರುವ ಈ ಲೇಖನದಲ್ಲಿ ನಕ್ಸಲ್ ಸಮಸ್ಯೆಯ ಮುಖ್ಯ ಮೂಲವೊಂದನ್ನು ಗುರುತಿಸುವ ಪ್ರಯತ್ನ ಮಾಡಿದ್ದಾರೆ.

ಗಾಂಧಿ ಕಾಲದಿಂದಲೂ; ಭಾರತದ ಅಭಿವೃದ್ಧಿಗೆ ದೊಡ್ಡ ಅಡ್ಡಿಯಾಗಿರುವುದು, ಅದರ ಅಖಂಡತೆಯ ಹೆಸರಿನಲ್ಲಿ ಬೆಳಸಿಕೊಂಡು ಬರುತ್ತಿರುವ (ಭೌಗೋಳಿಕ ಹಾಗೂ ಆ ಮೂಲಕ ಸೃಷ್ಟಿಯಾಗುವ ಮಾನಸಿಕ) 'ದೂರ'ದ ರಾಜಕಾರಣವೇ ಆಗಿದೆ ಎಂದು ಹಲವು ರಾಜಕೀಯ ಮತ್ತು ಅಭಿವೃದ್ಧಿ ಚಿಂತಕರು ಹೇಳುತ್ತ ಬಂದಿದ್ದರೂ, ಅದರ ಕಡೆ ಯಾರ ಗಮನವೂ ಹರಿಯುತ್ತಿಲ್ಲ. ಬದಲಿಗೆ ಸರಿ ಸುಮಾರು ಎಲ್ಲ ರಾಜಕೀಯ ಪಕ್ಷಗಳಿಂದ ರಾಜಕೀಯ ವ್ಯವಸ್ಥೆಯನ್ನು ಹೆಚ್ಚೆಚ್ಚು ಕೇಂದ್ರೀಕರಣಕ್ಕೊಳಪಡಿಸುವ ಶಾಸನಗಳು ಮತ್ತು ರಾಜಕೀಯ ತಂತ್ರಗಳು ರೂಪಿತವಾಗುತ್ತಲೇ ಇವೆ. ಆದರೆ, ಯಾವ ಅಖಂಡತೆಯನ್ನು–ಮತ್ತು ಅದರ ಹಿಂದಿನ ಹಿತಾಸಕ್ತಿಗಳನ್ನು– ಕಾಪಾಡಲು ಈ ಎಲ್ಲ ರಾಜಕೀಯ ಕಸರತ್ತುಗಳನ್ನು ಮಾಡಲಾಗುತ್ತಿದೆಯೋ, ಅವುಗಳ ಪರಿಣಾಮಗಳಿಂದಾಗಿಯೇ ಅದು ನಿರಂತರ ಅಪಾಯವನ್ನು ಎದುರಿಸುತ್ತಿದೆ ಎಂಬುದು ಮಾತ್ರ ಇವರಾರ ಅರಿವಿಗೂ ಬರುತ್ತಿಲ್ಲ

ಎಂಬುದೇ ಇಂದಿನ ಭಾರತೀಯ ರಾಜಕಾರಣದ ಬಹು ದೊಡ್ಡ ದುರಂತವಾಗಿದೆ.

ಬಹುಶಃ ಇಂದು ಜಗತ್ತಿನಲ್ಲಿ ಸರ್ವಾಧಿಕಾರಿ ರಾಷ್ಟ್ರಪ್ರಭುತ್ವಗಳ ಹೊರತಾಗಿ, ಪ್ರಜಾಪ್ರಭುತ್ವದ ಹೆಸರಿನಲ್ಲಿ ಅತ್ಯಂತ ಹೆಚ್ಚು ರಾಜಕೀಯ ಕೇಂದ್ರೀಕರಣಕ್ಕೊಳಪಟ್ಟಿರುವ ರಾಷ್ಟ್ರ ಭಾರತವೇ ಆಗಿದೆ. ಇದರ ಒತ್ತಡಗಳು ಇಂದು ಹಲವು ಕಡೆ ಹಲವು ರೂಪಗಳಲ್ಲಿ ಕಾಣತೊಡಗಿವೆ. ಆದುದರಿಂದ ಭಾರತ ನಿಜವಾದ ಅರ್ಥದಲ್ಲಿ(ನಮ್ಮಲ್ಲಿ ಬಹು ಜನರು ಆರಾಧಿಸುವ ಅಮೆರಿಕಾದ ಮಟ್ಟದಲ್ಲಿ ಬೇಡ; ಕನಿಷ್ಠ, ಬಹು ಜನರು ಕೀಳಾಗಿ ಕಾಣುವ ಪಾಕಿಸ್ಥಾನ-ಬಂಗ್ಲಾದೇಶಗಳ ಮಟ್ಟದಲ್ಲಾದರೂ) ರಾಜ್ಯಗಳ ಒಕ್ಕೂಟವಾಗದ ಹೊರತು ಮತ್ತು ಪ್ರತಿ ರಾಜ್ಯವೂ ವಿಕೇಂದ್ರೀಕೃತ ರಾಜ್ಯ ವ್ಯವಸ್ಥೆಯಾಗದ-ಅಂದರೆ ಈ ರಾಷ್ಟ್ರ ಪ್ರಭುತ್ವದ ಆಧುನಿಕ ಸ್ವರೂಪ ಬದಲಾಗದ- ಹೊರತು ಭಾರತದ ಅಖಂಡತೆ ಮತ್ತು ಅಭಿವೃದ್ಧಿಗಳೆಂಬುವು ಸದಾ ಬಹು ದೂರದ ಗುರಿಗಳೇ ಆಗಿ ಉಳಿಯುವ ಸಾಧ್ಯತೆಗಳೇ ಹೆಚ್ಚು.

ಕನಕಮಣಿ ದೀಕ್ಷಿತ್ ಅವರ ಈ ಲೇಖನ ಇದನ್ನು ಸೂಕ್ಷ್ಮವಾಗಿ ಸೂಚಿಸುತ್ತದೆ. ಇದು, ಇದರ ಅನುವಾದದೆಡೆಗೆ ನನ್ನನ್ನು ಆಕರ್ಷಿಸಿದ ಸಂಗತಿ.

– ಅನುವಾದಕ

ಹೊರಗಿನಿಂದ ನೋಡಿದಾಗ ಭಾರತದ ರಾಷ್ಟ್ರೀಯ ಮಾಧ್ಯಮಗಳು ಕ್ರಿಕೆಟ್ ಬಗ್ಗೆ ತನ್ನ ಗಮನವನ್ನು ಕೇಂದ್ರೀಕರಿಸುತ್ತಾ, ಪರಿಧಿಯಲ್ಲಿ ನಡೆಯುತ್ತಿರುವ ಭೂಮಿ ನಡುಗಿಸುವಂತಹ ಘಟನೆಗಳ ಬಗ್ಗೆ, ತುಲನಾತ್ಮಕವಾಗಿ ಹೇಳುವುದಾರೆ, ಕುರುಡಾಗಿರುವುದು ಅಚ್ಚರಿ ಹುಟ್ಟಿಸುತ್ತದೆ. ಕಳೆದ ತಿಂಗಳುದ್ದಕ್ಕೂ ಓದುಗರು ಮತ್ತು ವೀಕ್ಷಕರಿಗೆ ಸಾನಿಯಾ-ಷೋಯಬ್ ಮದುವೆ ನಿಶ್ಚಿತಾರ್ಥ ಹಾಗೂ ಐಪಿಎಲ್ ವಿವಾದವನ್ನು ಉಣಬಡಿಸಲಾಗಿತ್ತು. ಈ ಎರಡು ತುದಿಗಳ ಮಧ್ಯೆ ದಾಂತೇವಾಡದಲ್ಲಿ ಮಾವೋವಾದಿಗಳಿಂದ ಅರೆ ಸೇನಾ ಪಡೆಯ ೭೬ ಜನರ ಹತ್ಯೆಯ ಸುದ್ದಿ ಬಂತು;ಹಾಗೇ ದಿನ ನಿತ್ಯದ ಸಾಮನ್ಯ ಸುದ್ದಿಗಳ ಮಹಾಪೂರದೆದರು ಅದು ಜನರ ಮನಸ್ಸಿನಿಂದ ಬಹು ಬೇಗ ಕೊಚ್ಚಿಕೊಂಡು ಹೋಯಿತು.

ನೆಲದ ವಾಸ್ತವದಿಂದ ದೂರವಿರುವುದೇ, ಎಲ್ಲವನ್ನೂ ಅಮುಖ್ಯಗೊಳಿಸಿ ಅಪ್ರಸ್ತುತವನ್ನಾಗಿ ಮಾಡುವುದು. ಅಷ್ಟೇ ಅಲ್ಲ, 'ಭಾರತ'ದ ಬೃಹತ್‌ತನದಲ್ಲಿ ಏನೆಲ್ಲ ಅಡಗಿದೆ, ಅದು; ಕ್ರಿಕೆಟ್ ಮತ್ತು ಗಡಿಯಾಚೆಯ ನುಸುಳುಕೋರರ ಹಾವಳಿ ಮಾತ್ರ ಸಾರ್ವಜನಿಕ ಸಮೂಹವನ್ನು ಕೊನೆಯಿರದ ಮಂತ್ರಮುಗ್ಧತೆಯಲ್ಲಿ ಇಡಬಲ್ಲುದೆಂದು ಕಾಣುತ್ತದೆ. ಹಾಗಾಗಿ, ಮಾವೋವಾದಿ ದಂಗೆ ಹಾಗೂ ರಾಜ್ಯ ವ್ಯವಸ್ಥೆ ಅದಕ್ಕೆ ಪ್ರತಿಯಾಗಿ ನಡೆಸಿರುವ-ದಿನೇ ದಿನೇ ಹೆಚ್ಚು ಹೆಚ್ಚು ರೂಕ್ಷವಾಗುತ್ತಿರುವ-ಸಮರ ಜನರ ಗಮನ ಸೆಳೆಯದಾಗಿದೆ. ಇದು ಏಕೆ ಎಂಬುದನ್ನು ಅರ್ಥ ಮಾಡಿಕೊಳ್ಳುವುದು ಬಹು ಮುಖ್ಯವಾಗಿದೆ.

ಭಾರತದಲ್ಲಿ ರಾಷ್ಟ್ರೀಯ ಕೇಂದ್ರವಾದ ಹಾಗೂ ನೆಲ ಮಟ್ಟದ ರಾಜಕಾರಣದ ನಡುವೆ ವಿಪರೀತವೆನಿಸುವಷ್ಟು ಪದರಗಳಿವೆ. ನಿರ್ಧಾರ ತೆಗೆದುಕೊಳ್ಳುವವರು ಮತ್ತು ವಿಶ್ಲೇಷಣಾಕರರು ಮಾವೋವಾದಿ ಸಮರ ನಡೆಯುತ್ತಿರುವ ಸ್ಥಳೀಯ 'ನೆಲೆ'ಗಳಿಂದ ಹಲವು ಮಟ್ಟಗಳ ಅಂತರದಲ್ಲಿರುವಂತಹ ಸ್ಥಿತಿ ಇಲ್ಲಿನ ರಾಜಕಾರಣದಲ್ಲಿ ಅಂತರ್ಗತವಾಗಿಹೋಗಿದೆ. ಈ ಮುಖ್ಯ ಸಂಗತಿಯನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲು, ಇದನ್ನು ನೇಪಾಳದ ಪರಿಸ್ಥಿತಿಯೊಂದಿಗೆ ಹೋಲಿಸಿ ನೋಡಬೇಕು. ಮಾವೋವಾದಿ ದಂಗೆ ೧೯೯೬ರಲ್ಲಿ ಆರಂಭವಾದಾಗ, ಇದು ತುರ್ತು ಗಮನಕ್ಕೆ ಅರ್ಹವಾದ ಸಂಗತಿಯೆಂದು ಕಠ್ಮಂಡುವಿಗೆ ಅರಿವಾದಷ್ಟು ತೀವ್ರ ಗತಿಯಲ್ಲಿ ಇಂದು ನವದೆಹಲಿ ಮಟ್ಟದಲ್ಲಿ ಆಗುತ್ತಿಲ್ಲ. ಇದಕ್ಕೆ ಎಲ್ಲಕ್ಕಿಂತ ಮುಖ್ಯವಾಗಿ, ನೇಪಾಳದಲ್ಲಿ ಕೇಂದ್ರ ಮತ್ತು ಪರಿಧಿ ನಡುವಣ ಅಂತರ ಬಹಳ ಕಡಿಮೆ ಇರುವುದೇ ಕಾರಣ.

ಸ್ಥಳೀಯದಿಂದ ರಾಷ್ಟ್ರೀಯವು ಭೌಗೋಳಿಕವಾಗಿ ಹಾಗೂ ಮಾನಸಿಕವಾಗಿ ದೂರವಿರುವುದು ಎಂದರೆ, ತಕ್ಷಣವೇ ಸವಾಲನ್ನು ಆಹ್ವಾನಿಸದಂತಹ ಜನ ವಿರೋಧಿ ನೀತಿಯನ್ನು ಎಗ್ಗಿಲ್ಲದೆ ಜಾರಿಗೆ ತರಲು ಸಾಧ್ಯವಿರುವ ವ್ಯವಸ್ಥೆ ಎಂದೇ ಅರ್ಥ. ನೇಪಾಳದಂತಹ ಸಣ್ಣ ರಾಜಕೀಯ ವ್ಯವಸ್ಥೆ, ಜಿಲ್ಲಾ ಮಟ್ಟದ ಸ್ಥಳೀಯ ಕಾವಲು ಸಂಸ್ಥೆಗಳು–ಇವು ಅಗತ್ಯ ಸಂಖ್ಯೆಯಲ್ಲಿ ಇಲ್ಲದಿದ್ದರೂ–ಬೆಳೆಯಲು ಅವಕಾಶ ಮಾಡಿಕೊಟ್ಟಿದ್ದರೆ, ಭಾರತದ ಬಹು ಭಾರಿಯಾದ ಏಕಾತ್ಮಕ ವ್ಯವಸ್ಥೆ ಇಂತಹ ಸಂಸ್ಥೆಗಳ ವಿಕಾಸವನ್ನು ಕುಂಠಿತಗೊಳಿಸುತ್ತಾ ಬಂದಿದೆ. 'ಸ್ಥಳೀಯ'ದಿಂದ ಇರುವ ಈ ದೂರವೇ, ಇತ್ತೀಚೆಗೆ ಒಂದು ರಾಷ್ಟ್ರೀಯ ಸುದ್ದಿ ಪತ್ರಿಕೆ ಬಳಸಿದಂತೆ, ಮಾಧ್ಯಮಗಳು 'ರಕ್ತ ಪಿಪಾಸು ಮಾವೋವಾದಿಗಳು' ಎಂಬ ನುಡಿಗಟ್ಟುಗಳನ್ನು ಸುಲಭವಾಗಿ ಬಳಸಲು ಅವಕಾಶ ಮಾಡಿಕೊಡುವುದು. ಈ ದೂರತ್ವವೇ ಮಾವೋವಾದಿಗಳು ಮತ್ತು ರಾಜ್ಯ ವ್ಯವಸ್ಥೆಯನ್ನು ಒಳಿತು–ಕೆಡಕುಗಳ ದ್ವಿದಳ ರೂಪದಲ್ಲಿ ಮಂಡಿಸಿ, ಬಂಡುಕೋರರನ್ನು ಕೆಲವರು ರಾಕ್ಷಸೀಯವಾಗಿ ಚಿತ್ರಿಸಲು ಮತ್ತು ಕೆಲವರು ಅವರನ್ನು ರಮ್ಯೀಕರಿಸಲು ಸಾಧ್ಯ ಮಾಡಿರುವುದು.

ಒಂದು ಸುಕ್ಷೇಮ ದೂರದಿಂದ ಹಿಂಸಾತ್ಮಕ ದಂಗೆಯನ್ನು ಬೆಂಬಲಿಸುವುದು ಒಂದು ರೀತಿಯ ವದಂತಿಕೋರತನವೇ ಆಗಿದೆ. ಇದರ ಭಾಗವಾಗಿಯೇ ನವದೆಹಲಿಯ ವಿಶ್ಲೇಷಣಾಕಾರರು ನೇಪಾಳ ಅಥವಾ ಚತ್ತೀಸಗಢದ ದಂಗೆಕೋರರ ಬಗ್ಗೆ 'ಜನ ಕೇಂದ್ರಿತ'ವೆಂದು ಹೇಳಲಾಗುವ ಧರ್ಮೋಪದೇಶ ನೀಡಬಲ್ಲವರಾಗಿದ್ದಾರೆ. ಈ 'ಸಾಮ್ರಾಜ್ಯಶಾಹಿ–ಪ್ರಗತಿಪರ' ನಿಲುವು, ವಿಶ್ಲೇಷಣಾಕಾರರು ಪ್ರತಿಷ್ಠಿತ ಜಗತ್ತಿನ ಭವ್ಯ ನಗರಗಳ ಎಲ್ಲ ಸುಖ ಸಂತೋಷಗಳನ್ನು ಅನುಭವಿಸಿಕೊಂಡೂ, ವ್ಯವಸ್ಥೆಗೆ ಛೀಮಾರಿ ಹಾಕಲು ಸಾಧ್ಯ ಮಾಡುತ್ತದೆ. ಸಹಜವಾಗಿಯೇ ಇವರಿಗೆ, ಒಂದು ಕಡೆ ರಾಷ್ಟ್ರೀಯ ಸುಭದ್ರತೆಯ ಮಂತ್ರ ಹೇಳುವ ರಾಜ್ಯ ವ್ಯವಸ್ಥೆ ಮತ್ತು ಇನ್ನೊಂದು ಕಡೆ ನಕರಾತ್ಮಕವಾದ ಹಾಗೂ ತುಕ್ಕು ಹಿಡಿದ ಮಾವೋವಾದಿ ವಿಚಾರಧಾರೆಯನ್ನು ಪ್ರಶ್ನಿಸುತ್ತಲೇ, ನೆಲ

ಮಟ್ಟದ ಪ್ರಜಾಪ್ರಭುತ್ವವನ್ನು ಆಳಗೊಳಿಸಿ ಬೆಂಬಲಿಸುವ ಬೇಸರಿಕೆಯ ಮಧ್ಯಮ ಮಾರ್ಗ ಬೇಕಿಲ್ಲ.

ಭವ್ಯ ನಗರಗಳ ಆರಾಮ ಕುರ್ಚಿಗಳಿಂದ ಮಾವೋವಾದಿಗಳ ದಮನಕ್ಕೆ ಕರೆ ಕೊಡುವುದಾಗಲೀ ಅಥವಾ ದಂಗೆಕೋರರ ಬಳಿ ಎಲ್ಲ ಸಮಸ್ಯೆಗಳಿಗೆ ಉತ್ತರಗಳಿವೆಯೆಂದು ಪ್ರತಿಪಾದಿಸುವುದಾಗಲೀ ಸುಲಭ. ಆದರೆ ಎಂದಿನಂತೆ, ಮಧ್ಯಮ ಮಾರ್ಗ ಕಡಿಮೆ ರಮ್ಯ, ಆದರೆ ಹೆಚ್ಚು ವಾಸ್ತವಿಕ. ಅದು ಭಾರತದ ಪ್ರತಿ ರಾಜ್ಯದ ಆಡಳಿತವನ್ನೂ ಉತ್ತರದಾಯಿತ್ವಕ್ಕೆ ಒಳಪಡಿಸುವಂತಹ ಒಕ್ಕೂಟವಾದವನ್ನು ಪೋಷಿಸುವಂತೆ ಆಗ್ರಹಿಸುತ್ತದೆ. ಭಾರತ, ಎಲ್ಲಿ ಸ್ಥಳೀಯ ನಿಯಂತ್ರಣ ಮತ್ತು ಸಮತೋಲನಗಳ ವ್ಯವಸ್ಥೆ ಹೊಂದಿದೆಯೋ, ಅಲ್ಲಿ ಪ್ರಾತಿನಿಧಿಕ ಪ್ರಜಾಪ್ರಭುತ್ವವಾಗಿದೆ; ಎಲ್ಲಿ ಅವು ಇಲ್ಲವೋ ಅಲ್ಲಿ, ಅದು ಜನರ ಪಾಲಿಗೆ ಹಸಿದ ಹೆಬ್ಬುಲಿಯಂತಹ ರಾಜ್ಯ ವ್ಯವಸ್ಥೆಯಾಗಿ ಮಾರ್ಪಡಲು ಹವಣಿಸುತ್ತಿದೆ. ಎಲ್ಲಿ ಸ್ಥಳೀಯ ಪ್ರಜಾಪ್ರಭುತ್ವ ದುರ್ಬಲವಾಗಿದೆಯೋ ಅಲ್ಲಿ ಮಾವೋವಾದಿಗಳು ಕಾಣಿಸಿಕೊಂಡು ಅತಿವಾದದ ವಾತಾವಣ ಸೃಷ್ಟಿಸಿ, ನಾಗರಿಕ ಹಕ್ಕುಗಳ ಕಾರ್ಯಕರ್ತರು ನಿರ್ದಿಷ್ಟವಾಗಿ ಒಂದಲ್ಲ ಒಂದು ಪಕ್ಷದ ಕಡೆ ನಿಲ್ಲುವಂತೆ ಒತ್ತಾಯಿಸುವ ಮೂಲಕ ಎಲ್ಲ ಸಾಮಾಜಿಕ ಆಂದೋಲನಗಳೂ ನೆಲ ಕಚ್ಚುವಂತೆ ಮಾಡಲಾಗುತ್ತಿದೆ.

ರಾಜ್ಯ ವ್ಯವಸ್ಥೆಯ ನೀತಿಯನ್ನು ರೂಪಿಸುವವರು, ಭೂಮಿಗೆ ಅಪಚಾರ ಮಾಡುವಂತಹ ನೀತಿಯು ಗ್ರಾಮೀಣ ಕಾರ್ಯಕರ್ತರು ತಮ್ಮ ಉಳಿವಿಗಾಗಿ ಮಾವೋವಾದಿಗಳ ತೆಕ್ಕೆಗೆ ಬೀಳುವಂತೆ ಮಾಡುತ್ತದೆ ಎಂಬುದನ್ನು ಮೊದಲು ಅರಿಯಬೇಕು. ಅದೇ ವೇಳೆಯಲ್ಲಿ, ಮಾವೋವಾದಿ ನಾಯಕರುಗಳಲ್ಲಿ ತಮ್ಮ ಹೋರಾಟವು ಖಂಡಿತ ಕ್ರಮೇಣ ಪ್ರಾತಿನಿಧಿಕ ಪ್ರಜಾಪ್ರಭುತ್ವ ವ್ಯವಸ್ಥೆಯ ಆತ್ಮವನ್ನೇ ನಾಶ ಮಾಡುವಂತಹ ಸುಲಿಗೆ ಯಂತ್ರವಾಗಿ ಮಾರ್ಪಡುವುದೆಂಬ ಅರಿವು ಮೂಡಬಲ್ಲುದೇ? ಹೋರಾಟಕ್ಕೆ ಬಂದು ಸೇರಿಕೊಳ್ಳುವ ಅರಳುಗಣ್ಣುಗಳ ಹುಡುಗ–ಹುಡುಗಿಯರು ಬಹು ಬೇಗ ಬಂದೂಕಿನ ಬಲದ ಮತ್ತು ಅದರ ಮೂಲಕ ಹಣ ವಸೂಲಿ ಹಾಗೂ ಜನರ ಶರಣಾಗತಿಯನ್ನು ಸಾಧಿಸುವ ಆಕರ್ಷಣೆಗೆ ಬಲಿ ಬೀಳುತ್ತಾರೆ. ಇದು, ಬಿತ್ತದೇ ಬೆಳೆಯುವುದನ್ನು ಕಲಿಯುವ ಅನುತ್ಪಾದಕ ಯುವಜನರ ಒಂದು ವರ್ಗವನ್ನೇ ಸೃಷ್ಟಿಸುತ್ತದೆ.

ನಿಜ, ಜನರ ಶರಣಾಗತಿಯನ್ನು ಒತ್ತಾಯಿಸುವಂತಹ ಸಾಧನಗಳ ಮೇಲೆ ಏಕ ಸ್ವಾಮ್ಯ ಹೊಂದಿರುವುದು ಯಾವುದೇ ಉದಾರವಾದಿ ಪ್ರಜಾಪ್ರಭುತ್ವದ ಮೂಲ ಆಧಾರಗಳಲ್ಲೊಂದಾಗಿರುತ್ತದೆ. ಆದರೆ ಜನ ತಿರುಗಿ ಬೀಳುವ ಭಯದಿಂದ ಅವನ್ನು ಬಳಸಲಾಗುವುದಿಲ್ಲವಷ್ಟೆ. ಹೀಗಾಗಿ, ಮಾನವ ಹಕ್ಕುಗಳ ಕಾರ್ಯಕರ್ತರ ಕೆಲಸವೆಂದರೆ, ಎಲ್ಲ ರೀತಿಯ ಪ್ರತಿಕೂಲ ಪರಿಸ್ಥಿತಿಗಳಲ್ಲೂ ರಾಜ್ಯ ವ್ಯವಸ್ಥೆ ಉತ್ತರದಾಯಿಯಾಗಿರುವಂತೆ ನೋಡಿಕೊಂಡು, ಕಾನೂನಿನ ಆಳ್ವಿಕೆಯನ್ನು ಖಚಿತಗೊಳಿಸಿಕೊಳ್ಳುವುದೇ ಆಗಿದೆ. ಕ್ರಾಂತಿಕಾರರಿಗೆ ಕ್ಷಿಪ್ರ ಮತ್ತು ಸುಲಭ ಬೆಂಬಲ ಘೋಷಿಸುವುದು, 'ಜನತಾ ಸಮರ' ಎಲ್ಲಿ ನಡೆಯುತ್ತಿದೆಯೋ ಅಲ್ಲಿ ಬದುಕು ನಡೆಸಬೇಕಾದ ಅಗತ್ಯವಿರದವರ ಪ್ರಗತಿಪರತೆಯ

ಡೌಲು ಮಾತ್ರವಾಗಿರುತ್ತದೆ.

ನಿಜ, ಭಾರತವು ರಾಷ್ಟ್ರ ಮಟ್ಟದಲ್ಲಿ ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ. ಅದರೆ ಅದರ ಬಹುತ್ವ ಮೂಲವಾದ ಸಾಮಾಜಿಕ–ಆರ್ಥಿಕ ಫಲಗಳು ಎಲ್ಲ ಕಡೆ ದೊರೆಯುವಂತೆ ಮಾಡಬಲ್ಲ ಸಂರಚನೆಗಳು ಇಲ್ಲಿ ಇನ್ನೂ ವಿಕಾಸಗೊಂಡಿಲ್ಲ. ದಾಂತೇವಾಡದಿಂದ ಕೇಳಿ ಬರುತ್ತಿರುವ ಕೂಗು, ಪ್ರಜಾಪ್ರಭುತ್ವ ಮತ್ತು ಅಭಿವೃದ್ಧಿ ಎಂಬುವುಗಳನ್ನು ಹೆಚ್ಚು ಜನರ ಪಾಲುದಾರಿಕೆಗಾಗಿ ಮತ್ತು ಹೆಚ್ಚು ಸ್ಥಳೀಯತೆಗಳಿಗಾಗಿ ಸಜ್ಜುಗೊಳಿಸಲು ಪ್ರೇರೇಪಿಸುವಂತಾಗಬೇಕು. ಉತ್ತಮತರ ಸ್ಥಳೀಯ ಆಡಳಿತಕ್ಕಾಗಿನ ಈ ಕರೆ ಬಹು ರಮ್ಯವಾದ ಸಂಗತಿಯೇನೂ ಅಲ್ಲವೆಂದು ಕಾಣುತ್ತದೆ–ಏಕೆಂದರೆ, ಇಲ್ಲೇನೂ ನಾವು ಕಥೆ, ಕಾದಂಬರಿ ಬರೆಯುತ್ತಿಲ್ಲವಲ್ಲ!

(ಜೂನ್ ೨೦೧೦)

■

ಭೂಪಾಲ್ ದುರಂತದ ತೀರ್ಪು ಏನೆಲ್ಲ ಹೇಳುತ್ತಿದೆ?

ಈ ದುರಂತದಲ್ಲಿ ಸಾವನ್ನಪ್ಪಿದ ಒಂದು ಮನುಷ್ಯ ಮುಖವನ್ನಾದರೂ, ಅದರ ಚಿತ್ರವನ್ನಾದರೂ ಇವರು ಒಮ್ಮೆ ಜೀವವುಳ್ಳ ಮನುಷ್ಯರಾಗಿ ದಿಟ್ಟಿಸಿ ನೋಡಲು ಸಾಧ್ಯವಾಗಿದ್ದರೆ ಇವರಾರೂ ಹೀಗೆ ವರ್ತಿಸುತ್ತಿರಲಿಲ್ಲ. ಇವರೆಲ್ಲ ಮನುಷ್ಯತ್ವ ಕಳೆದುಕೊಂಡು ಕಬ್ಬಿಣವಾಗಿ ಹೋಗಿದ್ದಾರೆ. ಇವರ ಆತ್ಮದೊಳಕ್ಕೆ ಕಬ್ಬಿಣ ಸೇರಿಕೊಂಡುಬಿಟ್ಟಿದೆ. ಹಾಗಾಗಿಯೇ ಇವರೆಲ್ಲ ಸೇರಿ ಒಂದು ಲೋಹದ ಯಂತ್ರದಂತೆ ಕೆಲಸ ಮಾಡುತ್ತಾ ೨೬ ವರ್ಷಗಳ ನಂತರ ಈ ರಾಕ್ಷಸ ದುರಂತಕ್ಕೆ ಕಾರಣರಾದವರಿಗೆ ೨ ವರ್ಷಗಳ ಸೆರೆಮನೆವಾಸದ ಶಿಕ್ಷೆ ಎಂಬ ಉತ್ಪನ್ನವನ್ನು ಹೊರಹಾಕಿದ್ದಾರೆ. ಈ ಯಂತ್ರದೊಂದಿಗೆ ಈ ೬೦ ವರ್ಷಗಳಲ್ಲಿ ಹೇಗೋ ಏಗುತ್ತಾ ಹೋಗುವುದನ್ನು ಕಲಿತಿರುವ ನಾವೂ ಕಬ್ಬಿಣವಾಗಿ ಹೋಗಿ, ಇಂತಹ ತೀರ್ಪುಗಳನ್ನು ಚರ್ಚಿಸಿ ಚರ್ಚಿಸಿ ಆಯಾಸದಿಂದ ಸುಮ್ಮನಾಗುವ ಖಂಡನೆಗೆ ಒಳಗಾಗಿದ್ದೇವೆ.

೧೯೮೪ರಲ್ಲಿ ಭೂಪಾಲ್‌ನಲ್ಲಿ ಸಂಭವಿಸಿದ ವಿಷಾನಿಲ ದುರಂತ ಕುರಿತ ನ್ಯಾಯಾಲಯದ ತೀರ್ಪು ಹೊರ ಬಿದ್ದಿದೆ. ಒಟ್ಟು ಸುಮಾರು ೨೫ ಸಾವಿರ ಜನರ ಸಾವಿಗೆ ಕಾರಣವಾದ ಮತ್ತು ಇನ್ನೂ ಐದು ಲಕ್ಷ ಜನರನ್ನು ವಿವಿಧ ರೀತಿಯಲ್ಲಿ ವಿಕಲಾಂಗರನ್ನಾಗಿ ಮಾಡಿ ಅವರ ಬಾಳಿಗೆ ಕಂಟಕವಾದ ಈ ದುರಂತದ ಅಪರಾಧಿಗಳೆಂದು ಎಂಟು ಜನರನ್ನು ಗುರುತಿಸಲಾಗಿದೆ. ಆಕಸ್ಮಿಕವಾಗಿ ಈ ವಿಷಾನಿಲ ಹೊರಬಿಟ್ಟ ಕಾರ್ಖಾನೆಯ ಈ ಎಂಟು ಜನ ಮಾಜಿ ಆಡಳಿತಗಾರರಿಗೆ ೨ ವರ್ಷಗಳ ಸೆರೆಮನೆ ವಾಸದ ಶಿಕ್ಷೆ ಮತ್ತು ತಲಾ ಒಂದು ಲಕ್ಷ ರೂಪಾಯಿ ದಂಡ ವಿಧಿಸಲಾಗಿದೆ! ಇವರಲ್ಲಿ ಆಗ ಕಾರ್ಖಾನೆಯನ್ನು ನಡೆಸುತ್ತಿದ್ದ ಯೂನಿಯನ್ ಕಾರ್ಬೈಡ್ ಕಾರ್ಪೊರೇಷನ್‌ನ ಅಧ್ಯಕ್ಷ ಮತ್ತು ಮೂಲ ಆರೋಪ ಪಟ್ಟಿಯ ಮೊದಲ ಅಪರಾಧಿ ಅಮೆರಿಕಾದ ವಾರೆನ್ ಆಂಡರ್ಸನ್‌ನ (ಈತ ಈಗ ದಿವಂಗತ) ಹೆಸರು ಸೇರಿರುವುದಿರಲಿ, ಆತನ ಹೆಸರೂ ತೀರ್ಪಿನಲ್ಲಿ ಪ್ರಸ್ತಾಪಿತವಾಗಿಲ್ಲ ಎಂಬುದನ್ನು ಇಲ್ಲಿ ಗಮನಿಸಬೇಕು. ಇಂತಹ ತೀರ್ಪು ನೀಡಲು ನಮ್ಮ ನ್ಯಾಯಾಲಯಕ್ಕೆ ೨೬ ವರ್ಷಗಳೇ ಬೇಕಾಗಿವೆ, ಅದೂ ಈ

೨೩ ವರ್ಷಗಳಲ್ಲಿ ೧೯ ಜನ ನ್ಯಾಯಾಧೀಶರುಗಳು ಬದಲಾದ ಮೇಲೆ!

ಈ ತೀರ್ಪು, ಇದು ಯಾವ ದುರಂತಕ್ಕೆ ಸಂಬಂಧಿಸಿದುದೋ ಆ ದುರಂತಕ್ಕಿಂತ ದೊಡ್ಡ ದುರಂತವಾಗಿದೆಯೆಂದು ಈಗ ರಾಷ್ಟ್ರಾದ್ಯಂತ ಬಿಸಿ ಬಿಸಿ ಚರ್ಚೆಯಾಗುತ್ತಿದೆ. ಈ ದುರಂತದ ಬಗ್ಗೆ ನ್ಯಾಯಾಲಯದಲ್ಲಿ ಆರೋಪ ಪಟ್ಟಿ ಸಲ್ಲಿಸಿದಾಗ; ಇದೇ ಸಂಸ್ಥೆಯ ಅಮೆರಿಕಾದ ಪರೀಕ್ಷಣಾ ಸಮಿತಿಯ ವರದಿ ಮತ್ತು ಪತ್ರಿಕೆಗಳ ತನಿಖಾ ವರದಿಗಳು ಇಂತಹ ಭೀಕರ ದುರಂತದ ಬಗ್ಗೆ ಮುನ್ಸೂಚನೆ ಕೊಟ್ಟಿದ್ದರೂ, ಮಿತವ್ಯಯದ ನೆಪದಲ್ಲಿ ಏನೂ ಕ್ರಮ ಕೈಗೊಳ್ಳದೇ ಹೋದ ಅಧ್ಯಕ್ಷ ಆಂಡರ್ಸನ್‌ನ ಮೇಲೆ ಬಂಧನದ ವಾರೆಂಟ್ ಇದ್ದರೂ, ಆತ ಅದನ್ನು ತಪ್ಪಿಸಿಕೊಂಡು ಬಾಡಿಗೆ ವಿಮಾನವೊಂದರಲ್ಲಿ ಅಮೆರಿಕಾಕ್ಕೆ ಪರಾರಿಯಾದಾಗ; ಸಂತ್ರಸ್ತರಿಗೆ ಕೇಂದ್ರ ಸರ್ಕಾರವೇ ಅಂದಾಜು ಮಾಡಿದ್ದ ೩೩೦ ಕೋಟಿ ಡಾಲರ್‌ಗಳ ಪರಿಹಾರ ಮೊತ್ತವನ್ನು ಸರ್ವೋಚ್ಚ ನ್ಯಾಯಾಲಯದ ಮೇಲ್ವಿಚಾರಣೆಯಲ್ಲಿ ಅದನ್ನು ೪೭ ಕೋಟಿ ಡಾಲರ್‌ಗಳಿಗೆ ಪರಿಷ್ಕರಿಸಿದಾಗ; ಹಾಗೂ ಇದೇ ಸರ್ವೋಚ್ಚ ನ್ಯಾಯಾಲಯವು ಆರೋಪ ಪಟ್ಟಿಯನ್ನು ಆರೋಪಿಗಳಿಗೆ ಅನುಕೂಲವಾಗುವಂತೆ, ಅವರ ಮೇಲೆ ಹೂಡಲಾಗಿದ್ದ ಶಿಕ್ಷಾರ್ಹ ಸಾಮೂಹಿಕ ಹತ್ಯೆಯ ಆರೋಪಗಳನ್ನು ಅಪರಾಧನೀಯ ನಿರ್ಲಕ್ಷ್ಯದ ಅರೋಪಗಳಿಗೆ ಬದಲಾಯಿಸಿದಾಗ; ಇಂತಹುದೇ ವ್ಯಾಪಕ ಮತ್ತು ತೀವ್ರ ಚರ್ಚೆಗಳು ನಡೆದಿದ್ದವು. ಹಾಗೇ ಕೆಲವೇ ದಿನಗಳಲ್ಲಿ ಅವು ಇತರ ಸುದ್ದಿಗಳ ಮರೆಯಲ್ಲಿ ಹಿನ್ನೆಲೆಗೆ ಸರಿದು ಹೋದವು. ಅದರೆ ವಿಷಾನಿಲ ದುರಂತಕ್ಕೆ ಸಿಕ್ಕಿ ಬದುಕು ಕಳೆದುಕೊಂಡ ಲಕ್ಷಾಂತರ ಜನರ ಪಾಡು, ಅವರಲ್ಲಿ ಕೆಲವರಿಗಷ್ಟೇ ದೊರೆತ ಅಷ್ಟಿಷ್ಟು ಪರಿಹಾರದ ಮೊತ್ತ ಅವರ ಔಷಧಿ ಖರ್ಚಿಗೇ ಸಾಲದೆ, ಹಾಗೇ ನರಕ ಸದೃಶವಾಗಿ ಮುಂದುವರೆದಿದೆ.

ಆದರೆ ೨೫ ಸಾವಿರ ಜನರ ಹಿಂಸಾತ್ಮಕ ಮರಣಕ್ಕೆ ಕಾರಣವಾದ, ಸುಮಾರು ಐದು ಲಕ್ಷ ಜನರ ಬದುಕಿಗೆ ಕಂಟಕವಾದ ಮತ್ತು ಈಗಲೂ ಭೂಪಾಲ್ ನಗರದ ಬಹುಪಾಲು ಮಣ್ಣು ಮತ್ತು ನೀರನ್ನು ಮಲಿನಗೊಳಿಸಿರುವ ದುರಂತದ ಅಪರಾಧಿಗಳಿಗೆ ನೀಡಲಾಗಿರುವ ಶಿಕ್ಷೆ ಒಂದು ಸಣ್ಣ ರಸ್ತೆ ಅಪಘಾತ ಮಾಡಿ ಒಂದಿಬ್ಬರ ಸಾವಿಗೆ ಕಾರಣನಾಗಿರಬಹುದಾದವನಿಗೆ ನೀಡಲಾಗುವ ಶಿಕ್ಷೆಗೂ ಸಮವಿಲ್ಲದಾಗಿದೆ. ಜೊತೆಗೆ ಇವರೆಲ್ಲರಿಗೆ ಕೇವಲ ೨೫ ಸಾವಿರ ರೂಪಾಯಿಗಳ ಜಾಮೀನಿನ ಮೇಲೆ ತಕ್ಷಣದ ಬಿಡುಗಡೆಯ ಸೌಲಭ್ಯ ಬೇರೆ ಒದಗಿಸಲಾಗಿದೆ! ಯಾರನ್ನೂ ಕೊಲ್ಲದೆ, ಯಾರಿಗೂ ತೊಂದರೆ ಕೊಡದೆ, ಪರಸ್ಪರ ಒಪ್ಪಿಗೆಯಿಂದ ತನ್ನ ಖಾಸಗಿ ಕೋಣೆಯಲ್ಲಿ ಲೈಂಗಿಕ ಚಟುವಟಿಕೆ ನಡೆಸಿದನೆಂದು ಹೇಳಲಾದ ಸ್ವಾಮಿಯೊಬ್ಬನಿಗೆ ತಿಂಗಳುಗಟ್ಟಲೆ ಜಾಮೀನು ಕೊಡದಷ್ಟು ಕಟ್ಟುನಿಟ್ಟಾಗಿ ಕಾರ್ಯ ನಿರ್ವಹಿಸುವ ನಮ್ಮ ನ್ಯಾಯಾಂಗ, ಸಾವಿರಾರು ಜನರ ಮರಣಕ್ಕೆ ಕಾರಣರಾದ ಈ ಘೋರ ಅಪರಾಧಿಗಳಿಗೆ ಮಾತ್ರ ತಕ್ಷಣ ಜಾಮೀನು ನೀಡುತ್ತದೆ. ಏಕೆ? ಇವರೆಲ್ಲ ರಾಷ್ಟ್ರವನ್ನು ಬೃಹತ್ ಜಾಗತಿಕ ಶಕ್ತಿಯನ್ನಾಗಿ ಮಾಡಬಲ್ಲ ಕೈಗಾರಿಕೋದ್ಯಮದ ಅತಿ ಪ್ರತಿಷ್ಠಿತ ವ್ಯಕ್ತಿಗಳೆಂದೇ?

ಭೂಪಾಲ್ ವಿಷಾನಿಲ ದುರಂತದ ಈ ತೀರ್ಪಿನವರೆಗಿನ ಇಡೀ ಪ್ರಕರಣ, ಭಾರತೀಯ ಸಮಾಜ ಎಲ್ಲ ನೆಲೆಗಳಲ್ಲಿ ತಲುಪಿರುವ ದುಃಸ್ಥಿತಿಗೆ ಕನ್ನಡಿ ಹಿಡಿಯುವಂತಿದೆ. ನಮ್ಮ ಸಂವಿಧಾನದ ಪ್ರಕಾರ ಪ್ರಜೆಗಳ ಹಿತರಕ್ಷಣೆಗಾಗಿ ಇರುವ ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗ- ಈ ಮೂರೂ, ಪ್ರಜೆಗಳೊಂದಿಗೆ ಸಂಬಂಧವನ್ನೂ, ಸಂವೇದನೆಯನ್ನೂ ನಿರ್ಣಾಯಕ ರೀತಿಯಲ್ಲಿ ಕಳೆದುಕೊಂಡಿರುವ ದುರಂತ ಚಿತ್ರ ಇಲ್ಲಿ ಎದುರಾಗುತ್ತದೆ. ಈ ಬಗ್ಗೆ ಮೊನ್ನೆ ನಮ್ಮ ಕೇಂದ್ರ ಕಾನೂನು ಮಂತ್ರಿ ವೀರಪ್ಪ ಮೊಯ್ಲಿಯವರು ಖಾಸಗಿ ಟಿವಿ ವಾಹಿನಿಯೊಂದರಲ್ಲಿ ಹೇಳಿದ್ದನ್ನು ಗಮನಿಸಬೇಕು. ನ್ಯಾಯಕ್ಕಾಗಿ ನಡೆದ ೨೬ ವರ್ಷಗಳ ಈ ನಿಷ್ಫಲ ಹೋರಾಟಕ್ಕೆ ಯಾರೊಬ್ಬರನ್ನೂ ಜವಾಬ್ದಾರರನ್ನಾಗಿ ಮಾಡಲಾಗದಂತೆ! ಎಲ್ಲವನ್ನೂ ಸಮಗ್ರವಾಗಿ ನೋಡಬೇಕಂತೆ. ಅಂದರೆ ಇದೊಂದು ಸಮಗ್ರ ವೈಫಲ್ಯ. ಹಾಗಾಗಿ ಈಗ ವ್ಯವಸ್ಥೆಯ ಸಮಗ್ರ ಬದಲಾವಣೆ ಅಗತ್ಯವಿದೆ ಎಂಬುದು ನಮ್ಮ ಕಾನೂನು ಮಂತ್ರಿಯವರ ಅಂಬೋಣ. ಇದಕ್ಕಿಂತ ಸುಲಭದ ಮತ್ತು ಪಲಾಯನವಾದಿಯಾದ ಮಾತು ಮತ್ತೊಂದಿರಲಾರದು. ಏಕೆಂದರೆ, ಈ ಸಮಗ್ರ ವೈಫಲ್ಯದ ಜವಾಬ್ದಾರಿಯನ್ನು ಯಾರು ಹೊರಬೇಕು ಎಂಬುದನ್ನು ಕಾನೂನು ಮಂತ್ರಿಯವರು ಹೇಳಿಲ್ಲ. ಯಾರೊಬ್ಬರೂ ಇದಕ್ಕೆ ಅವರ ಪ್ರಕಾರ ಬಿಡಿ ಬಿಡಿಯಾಗಿ ಜವಾಬ್ದಾರರಲ್ಲವಾದ್ದರಿಂದ, ಯಾರೊಬ್ಬರೂ ಬಿಡಿ ಬಿಡಿಯಾಗಿ ಇದರ ರಿಪೇರಿಗೆ ಕೈ ಹಾಕಲಾಗದು ಕೂಡ! ಹಾಗಾದರೆ ಸಮಗ್ರ ರಿಪೇರಿ ಮಾಡುವವವರಾದರೂ ಯಾರು? ಈ ಪ್ರಶ್ನೆ ಕೇಳಿಕೊಂಡಾಗ ಈ ಸಮಗ್ರ ವೈಫಲ್ಯದ ಮಾತು ಎಂತಹ ಅಮೂರ್ತ ಅಸಂಬದ್ಧ ಮಾತು ಎಂಬುದು ಗೊತ್ತಾಗುತ್ತದೆ. ಇಂತಹ ಮಾತುಗಳನ್ನಾಡುತ್ತಲೇ ನಾವು ಭಾರತವೆಂಬ ದೇಶವನ್ನು ಯಾರೂ ಹೇಳಲಾಗಲೀ ಕೇಳಲಾಗಲೀ ಇರದ ಒಂದು ಅಮೂರ್ತ ಅಸಂಬದ್ಧವನ್ನಾಗಿ ಮಾಡಿ ಕೂರಿಸಿ ಈ ಸ್ಥಿತಿಗೆ ತಂದಿಟ್ಟಿದ್ದೇವೆ. ಇದು ನಮ್ಮ ಕಾನೂನು ಮಂತ್ರಿಯವರಿಗೆ ಆದಷ್ಟು ಬೇಗ ಅರಿವಾದರೆ ಒಳ್ಳೆಯದು. ಏಕೆಂದರೆ, ದುರಂತಕ್ಕೆ ಕಾರಣವಾದ ಸಂಸ್ಥೆಗೆ, ಪ್ರಕರಣ ಇಡಿಯಾಗಿ ವಿಚಾರಣೆಗೊಳಪಟ್ಟು ಸತ್ಯ ಹೊರಬೀಳುವ ಬಹು ಮುನ್ನವೇ ಮತ್ತೆ ಇನ್ನೊಂದು ಕಂಪನಿಯ ಆಡಳಿತದಡಿ ಕಾರ್ಯಾರಂಭ ಮಾಡಲು ಸರ್ಕಾರ ಅನುಮತಿ ನೀಡಿದೆ. ಅದೂ ನಿಷೇಧಿತ ಕೀಟನಾಶಕಗಳ ಉತ್ಪಾದನೆಗಾಗಿಯೇ! ಇದಕ್ಕಾಗಿ, ಅಮೆರಿಕಾಕ್ಕೇ ಸೇರಿದ ಈ ಹೊಸ ಆಡಳಿತ ಸಂಸ್ಥೆ–ಡೋ ಕೆಮಿಕಲ್ಸ್–ನಮ್ಮ ಕೇಂದ್ರ ಕೃಷಿ ಸಚಿವಾಲಯಕ್ಕೆ ಲಕ್ಷಾಂತರ ರೂಪಾಯಿಗಳ ಲಂಚ ನೀಡಿ, ನಮ್ಮ ಸರ್ಕಾರದಿಂದಲ್ಲ;ಅಮೆರಿಕಾ ಸರ್ಕಾರದಿಂದ ದಂಡದ ಶಿಕ್ಷೆಗೆ ಒಳಗಾಗಿದೆ! ನಮ್ಮ ಸಿ.ಬಿ.ಐ., ಸಮಸ್ಯೆಯ ಸಮಗ್ರ ಪರಿಹಾರಕ್ಕಾಗಿಯೋ ಏನೋ, ಇನ್ನೂ ಸಮಗ್ರ ತನಿಖೆ ನಡೆಸುತ್ತಲೇ ಇದೆ...

ಇಲ್ಲಿ ಹಲವು ಮುಖ್ಯ ಪ್ರಶ್ನೆಗಳಿವೆ: ೧೯೮೪ರಲ್ಲಿ ನಡೆದ ಈ ದುರಂತದ ಬಗ್ಗೆ ಆರೋಪ ಪತ್ರ ಸಲ್ಲಿಸಲು ಮೂರು ವರ್ಷ ಏಕೆ ಬೇಕಾಯಿತು? ಅಮೆರಿಕಾದ ನ್ಯಾಯಾಲಯದಲ್ಲಿ ಅಪರಾಧಿಗಳಿಗೆ ಶಿಕ್ಷೆ ಮತ್ತು ಸಂತ್ರಸ್ತರಿಗೆ ಸೂಕ್ತ ಪರಿಹಾರಕ್ಕಾಗಿ

ಸಂತ್ರಸ್ತರ ಪರವಾಗಿ ಸರ್ಕಾರೇತರ ಸೇವಾ ಸಂಸ್ಥೆಗಳು ಸಲ್ಲಿಸಿದ್ದ ಅರ್ಜಿಯನ್ನು ಹಿಂದಕ್ಕೆ ಪಡೆಯುವಂತೆ ಏಕೆ ನೋಡಿಕೊಳ್ಳಲಾಯಿತು? (ಇದರಲ್ಲಿ ಸಂತ್ರಸ್ತರ ಅರ್ಜಿಯ ವಿರುದ್ಧ ಮತ್ತು ನಮ್ಮ ಸರ್ಕಾರದ ಪರವಾಗಿ ವಾದಿಸಿದವರು ಸಾರ್ವಜನಿಕ ಹಿತಾಸಕ್ತಿಗಳ ವಕೀಲ ಎಂದೇ ಅಂದು ಪ್ರಸಿದ್ಧರಾಗಿದ್ದ ಖ್ಯಾತ ನ್ಯಾಯವಾದಿ ದಿ॥ ನಾನಿ ಪಾಲ್ಖೀವಾಲಾ ಎಂಬುದು ಗಮನಾರ್ಹ.) ಸರ್ವೋಚ್ಚ ನ್ಯಾಯಾಲಯ ಆರೋಪ ಪಟ್ಟಿಯನ್ನು ಪರಿಷ್ಕರಿಸಿ, ಆರೋಪಿಗಳಿಗೆ ಕಡಿಮೆ ಶಿಕ್ಷೆಯಾಗುವಂತೆ ನೋಡಿಕೊಂಡ ಮತ್ತು ಪರಿಹಾರ ಮೊತ್ತವನ್ನು ಇತ್ಯರ್ಥಪಡಿಸುವಲ್ಲಿ ಮಧ್ಯಸ್ಥಿಕೆ ವಹಿಸಬೇಕಾಗಿ ಬಂದ ಸಂದರ್ಭವಾದರೂ ಎಂತಹುದು? ಇದರ ಹಿಂದೆ ಯಾವ ಒತ್ತಡಗಳಿದ್ದವು? ಇನ್ನು ಬಂಧಿಸಲ್ಪಟ್ಟಿದ್ದ ಆಂಡರ್ಸನನ್ನನ್ನು ಏಕೆ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು? ಆನಂತರ ಆತ ಎಲ್ಲರ ಕಣ್ತಪ್ಪಿಸಿ ಅಮೆರಿಕಾಕ್ಕೆ ಪಲಾಯನ ಮಾಡಿದ್ದಾದರೂ ಹೇಗೆ?

ಈತನ ಪಲಾಯನಕ್ಕೆ ಸರ್ಕಾರದ-ವಿದೇಶಾಂಗ ಖಾತೆಯ-ಬೆಂಬಲವಿತ್ತು ಎಂದು ಈ ಪ್ರಕರಣದ ವಿಚಾರಣೆ ನಡೆಸಿದ ಸಿ.ಬಿ.ಐ. ಅಧಿಕಾರಿಯೇ ಹೇಳುತ್ತಿರುವರಲ್ಲ? (ಈತ ಹೀಗೆ ಹೇಳುತ್ತಿರುವುದು ನಿವೃತ್ತಿಯ ನಂತರ ಎನ್ನುವುದು ಬೇರೆ ಮಾತು!) ಆಂಡರ್ಸನ್ ಭಾರತಕ್ಕೆ ಬಂದುದೇ ಭಾರತದಲ್ಲಿ ಏನೂ ತೊಂದರೆಯಾಗದೆ ಸುರಕ್ಷಿತವಾಗಿ ತನ್ನನ್ನು ಅಮೆರಿಕಾಕಕ್ಕೆ ವಾಪಸ್ ಕಳಿಸಕೊಡಲಾಗುವುದೆಂಬ ಭಾರತ ಸರ್ಕಾರದ ಆಶ್ವಾಸನೆಯ ಮೇಲೆ ಎಂದು ಅಂದು ಭಾರತದಲ್ಲಿನ ಅಮೆರಿಕಾದ ದೂತಾವಾಸದಲ್ಲಿ ಭದ್ರತಾ ಅಧಿಕಾರಿಯೊಬ್ಬರು ಹೇಳುತ್ತಿದ್ದಾರಲ್ಲಾ? ಆಂಡರ್ಸನ್ನನನ್ನು ತನಿಖೆಗಾಗಿ ಅಮೆರಿಕಾದಿಂದ ಕರೆಸಬಹುದಾಗಿದೆ ಎಂದು ಈಗ ಹೇಳುವ ಕಾನೂನು ಮಂತ್ರಿಯವರು ತಮ್ಮ ಸಚಿವಾಲಯ ಈ ವಿಷಯದಲ್ಲಿ ಈವರೆಗೆ ಏನು ಮಾಡುತ್ತಿತ್ತು ಎಂಬುದನ್ನೇಕೆ ಹೇಳುವುದಿಲ್ಲ? ಅಮೆರಿಕಾದ ಬಹುರಾಷ್ಟ್ರೀಯ ಕಂಪನಿಯ ಅಧಿಕಾರಿಗಳು ಭಾರತದ ನ್ಯಾಯಾಲಯಗಳ ವ್ಯಾಪ್ತಿಗೆ ಒಳಪಡುವುದಿಲ್ಲವೆಂಬ ಅಮೆರಿಕಾದ ವಾದವನ್ನು ಒಪ್ಪಿಕೊಂಡಂತೆ ತೋರುವ ನಮ್ಮ ಸರ್ಕಾರ, ಆ ಕಂಪನಿಗಳು ಇಲ್ಲಿ ಬಂದು ಕಾರ್ಯ ನಿರ್ವಹಿಸಲಾದರೂ ಏಕೆ ಅವಕಾಶ ಮಾಡಿಕೊಡುತ್ತಿದೆ?

ಇವು ಯಾವುದೇ ಪಕ್ಷದ ಸರ್ಕಾರವನ್ನು ದೂರಲು ಕೇಳಲಾಗುವ ಪ್ರಶ್ನೆಗಳಲ್ಲ. ಏಕೆಂದರೆ ಈ ೨೬ ವರ್ಷಗಳಲ್ಲಿ ದುರಂತ ಸಂಭವಿಸಿದ ಮಧ್ಯ ಪ್ರದೇಶದಲ್ಲಿ ಮತ್ತು ಕೇಂದ್ರದಲ್ಲಿ ವಿವಿಧ ಪಕ್ಷಗಳ ಸರ್ಕಾರಗಳು ಬಂದು ಹೋಗಿವೆ. ಆದರೆ ಈ ಎಲ್ಲ ಸರ್ಕಾರಗಳಡಿಯಲ್ಲೂ ನಮ್ಮ ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗಗಳು ತಮಗೂ, ಅನಾಥವಾದ ಸಾವಿರಾರು ಕುಟುಂಬಗಳಿಗೂ ಮತ್ತು ಕ್ಯಾನ್ಸರ್ ಸೇರಿದಂತೆ ವಿವಿಧ ಮಾರಣಾಂತಿಕ ರೋಗ-ರುಜಿನಗಳಿಗೆ ತುತ್ತಾಗಿ ನರಳುತ್ತಿರುವ ಲಕ್ಷಾಂತರ ಸಂತ್ರಸ್ತರಿಗೂ ಸಂಬಂಧವೇ ಇಲ್ಲದಂತೆ, ಎಲ್ಲವನ್ನೂ ಬರೀ ಕಾಗದ-ಪತ್ರಗಳ ವ್ಯವಹಾರದಂತೆ ೨೬ ವರ್ಷಗಳ ಕಾಲ ಎಳೆದುಕೊಂಡು ಬಂದಿವೆ ಎಂದರೆ ಏನು ಹೇಳುವುದು? ಇದರ ಹಿಂದೆ ಇರುವ ಮನೋಭಾವವಾದರೂ ಎಂತಹುದು? ಇವರೆಲ್ಲ

ಸೇರಿ ಈ ಮೂಲಕ ರಕ್ಷಿಸುತ್ತಿರುವ ಹಿತಾಸಕ್ತಿಗಳಾದರೂ ಯಾವುವು? ಇವು ಸಾಮಾನ್ಯ ಪ್ರಜಾ ಸಮುದಾಯದ ಹೊರಗಿವೆ ಎಂಬುದೇ ಇದರರ್ಥವಲ್ಲವೆ? ಇದು ಮತ್ತೆ, ನಮ್ಮ ಸಂವಿಧಾನದ ಆಶಯಗಳು ಇಲ್ಲಿ ಹೆಚ್ಚೂ ಕಡಿಮೆ ಕುಸಿದು ಬಿದ್ದಿದೆ ಎಂಬುದರ ಸೂಚನೆಯೇ ಅಲ್ಲವೆ? ಇದರರ್ಥ ಮತ್ತೆ ನಾವು ಒಂದು ಗಣರಾಜ್ಯವಾಗಿ, ರಾಷ್ಟ್ರವಾಗಿ ಬಾಳುವ ಅರ್ಹತೆಯನ್ನೇ, ಸಾಮರ್ಥ್ಯವನ್ನೇ–ಅಂದರೆ ಪರಸ್ಪರ ಭಾವ ಸಂಬಂಧವನ್ನೇ–ಕಳೆದುಕೊಳ್ಳತೊಡಗಿದ್ದೇವೆ ಎಂದಲ್ಲವೆ?

ಇನ್ನು ಈ ಹಿತಾಸಕ್ತಿಗಳಿಂದ ಅಪಾರ ಲಾಭವಿರುವುದರಿಂದಲೇ ಅಲ್ಲವೆ, ಇವರು–ಸರ್ಕಾರಿ ನೌಕರರು, ಪೋಲೀಸರು ಅಧಿಕಾರಿಗಳು, ರಾಜಕಾರಣಿಗಳು, ಉದ್ಯಮಿಗಳು ಮತ್ತು ನ್ಯಾಯಾಂಗ–ಇಷ್ಟು ಧೈರ್ಯವಾಗಿ ಸಂವೈಧಾನಿಕ ಬದ್ಧತೆಗಳನ್ನು ಲೆಕ್ಕಿಸದೆ ಹೀಗೆ ಸಂವೇದನಾಹೀನವಾಗಿ ವರ್ತಿಸುತ್ತಿರುವುದು? ಈ ದುರಂತದಲ್ಲಿ ಸಾವನ್ನಪ್ಪಿದ ಒಂದು ಮನುಷ್ಯ ಮುಖವನ್ನಾದರೂ, ಅದರ ಚಿತ್ರವನ್ನಾದರೂ ಇವರು ಒಮ್ಮೆ ಜೀವವುಳ್ಳ ಮನುಷ್ಯರಾಗಿ ದಿಟ್ಟಿಸಿ ನೋಡಲು ಸಾಧ್ಯವಾಗಿದ್ದರೆ ಇವರಾರೂ ಹೀಗೆ ವರ್ತಿಸುತ್ತಿರಲಿಲ್ಲ. ಇವರೆಲ್ಲ ಮನುಷ್ಯತ್ವ ಕಳೆದುಕೊಂಡು ಕಬ್ಬಿಣವಾಗಿ ಹೋಗಿದ್ದಾರೆ. ಇವರ ಆತ್ಮದೊಳಕ್ಕೆ ಕಬ್ಬಿಣ ಸೇರಿಕೊಂಡುಬಿಟ್ಟಿದೆ. ಹಾಗಾಗಿಯೇ ಇವರೆಲ್ಲ ಸೇರಿ ಒಂದು ಲೋಹದ ಯಂತ್ರದಂತೆ ಕೆಲಸ ಮಾಡುತ್ತಾ ೨೬ ವರ್ಷಗಳ ನಂತರ ಈ ರಾಕ್ಷಸ ದುರಂತಕ್ಕೆ ಕಾರಣರಾದವರಿಗೆ ೨ ವರ್ಷಗಳ ಸೆರೆಮನೆವಾಸದ ಶಿಕ್ಷೆ ಎಂಬ ಉತ್ಪನ್ನವನ್ನು ಹೊರಹಾಕಿದ್ದಾರೆ. ಈ ಯಂತ್ರದೊಂದಿಗೆ ಈ ೬೦ ವರ್ಷಗಳಲ್ಲಿ ಹೇಗೋ ಏಗುತ್ತಾ ಹೋಗುವುದನ್ನು ಕಲಿತಿರುವ ನಾವೂ ಕಬ್ಬಿಣವಾಗಿ ಹೋಗಿ, ಇಂತಹ ತೀರ್ಪುಗಳನ್ನು ಚರ್ಚಿಸಿ ಚರ್ಚಿಸಿ ಆಯಾಸದಿಂದ ಸುಮ್ಮನಾಗುವ ಖಂಡನೆಗೆ ಒಳಗಾಗಿದ್ದೇವೆ.

ಈ ತೀರ್ಪಿನ ಬಗ್ಗೆ ಈ ಎಲ್ಲ ಚರ್ಚೆ–ಗದ್ದಲ–ಹಾಹಾಕಾರ ಕೊನೆಗೆ ನಿರರ್ಥಕವಾಗಿ ಹೋಗುವುದೆಂದು ಆತಂಕವೇಕೆ ಉಂಟಾಗುತ್ತಿದೆಯೆಂದರೆ, ಈ ಇಡೀ ಪ್ರಕರಣದಿಂದ ಯಾರೂ ಏನೂ ಕಲಿಯಲು ಸಿದ್ಧರಿಲ್ಲದಿರುವುದರಿಂದ. ಯೂನಿಯನ್ ಕಾರ್ಬೈಡ್ ಈಗ ತನ್ನ ಆಸ್ತಿಯನ್ನು ಪರಭಾರೆಗೊಳಪಡಿಸಿರುವ ಮತ್ತೊಂದು ಕಂಪನಿಯ ಹೆಸರಲ್ಲಿ ಅಪಮಾರ್ಗ ಹಿಡಿದು ನಿಷೇಧಿತ ಕೀಟನಾಶಕಗಳನ್ನು ತಯಾರಿಸಲು ಅವಕಾಶ ಮಾಡಿಕೊಟ್ಟಿರುವವರಾದರೂ ಯಾರು, ಏಕೆ? ಯೂನಿಯನ್ ಕಾರ್ಬೈಡ್‌ನ ಆಸ್ತಿಗಳ ವಾರಸುದಾರನಾಗಲು ಅವಕಾಶ ಮಾಡಿಕೊಟ್ಟ ನಮ್ಮ ಸರ್ಕಾರ ಈ ಡೋ ಕೆಮಿಕಲ್ಸ್ ಕಂಪನಿಯ ಮೇಲೆ ವಿಷಾನಿಲದಿಂದ ಮಲಿನಗೊಂಡಿರುವ ಭೂಪಾಲದ ನೆಲ–ನೀರುಗಳನ್ನು ಸ್ವಚ್ಛಗೊಳಿಸುವ ಜವಾಬ್ದಾರಿಯನ್ನೇಕೆ ಹೊರಿಸಲು ನಿರಾಕರಿಸಿತು? ಅದನ್ನೇಕೆ ನ್ಯಾಯಾಲಯಕ್ಕೆ ಒಯ್ದಿತು? ಈ ದುರಂತ ನಡೆದ ಇಪ್ಪತ್ತೈದು ವರ್ಷಗಳಲ್ಲಿ ಆಡಳಿತ ನಡೆಸಿರುವ ಕಾಂಗ್ರೆಸ್ ಮತ್ತು ಬಿಜೆಪಿ ನೇತೃತ್ವದ ಸರ್ಕಾರಗಳೆರಡರ ಸದಸ್ಯರೂ ಡೋ ಕೆಮಿಕಲ್ಸ್ ಪರ ವಕಾಲತ್ತು ವಹಿಸಿರುವ ನೇರ ದಾಖಲೆಗಳು ಇವೆಯಲ್ಲ? ಇದರ

ಜೊತೆಗೆ, ಜೀವ ರಸಾಯನಿಕಗಳ ಕೈಗಾರಿಕೆಗಳ ಅನಾಹುತಗಳಿಗೆ ಸಂಬಂಧಿಸಿದಂತೆ, ಪರಿಹಾರದ ಜವಾಬ್ದಾರಿಯನ್ನು ಕೈಗಾರಿಕೆಗಳ ಮೇಲಷ್ಟೇ ಹೊರಿಸದಂತೆ ಸ್ವತಃ ಪ್ರಧಾನ ಮಂತ್ರಿ ಕಾರ್ಯಾಲಯ ಒತ್ತಡ ಹೇರುತ್ತಿದೆ ಎಂದು ಈಗ ಪರಿಸರವಾದಿ ಸಂಸ್ಥೆಗಳು ಬಹಿರಂಗವಾಗಿ ಆಪಾದಿಸುತ್ತಿವೆ. ಇದು ನಿಜವೇ? ಹಾಗೇ, ಅಮೆರಿಕಾದೊಡನೆಯ ನಾಗರಿಕ ಪರಮಾಣು ಒಪ್ಪಂದದನ್ವಯ, ಪರಮಾಣು ಅನಾಹುತಗಳಿಗೆ ಪರಿಹಾರದ ಜವಾಬ್ದಾರಿಗೆ ಒಂದು ಮಿತಿ ಹಾಕಬೇಕು ಎಂಬ ಅಮೆರಿಕಾದ ಒತ್ತಡಕ್ಕೆ ಸರ್ಕಾರ ಮಣಿದಿರುವಂತೆ ತೋರುತ್ತಿದೆ. ಆದರೆ ಈಗ ಭೂಪಾಲ್ ದುರಂತದ ತೀರ್ಪಿನ ನಂತರ ಎದ್ದಿರುವ ಹಾಹಾಕಾರದ ಹಿನ್ನೆಲೆಯಲ್ಲಿ ಈ ಬಗ್ಗೆ ಪುನರಾಲೋಚನೆ ಸಾಧ್ಯ ಎನ್ನತೊಡಗಿದೆ.

ಆದರೆ ಈ ಹಾಹಾಕಾರ ನಿಂತೊಡನೆ ಏನಾಗುವುದೆಂದು ಯಾರು ಬಲ್ಲರು? ಏಕೆಂದರೆ, ಆಳುವ ವರ್ಗ ಮತ್ತು ಆಳಿಸಿಕೊಳ್ಳುವ ವರ್ಗ ತಮ್ಮದೇ ಹಿತಾಸಕ್ತಿಗಳ ಎರಕಗಳಲ್ಲಿ ಸಿಕ್ಕಿಕೊಂಡು ಇಲ್ಲಿ ಒಂದಕ್ಕೊಂದು ಸಂಬಂಧವಿಲ್ಲದಂತೆ ಎರಡು ಭಿನ್ನ ಘಟಕಗಳಾಗಿ ಒಡೆದುಹೋಗಿವೆ. ಹಾಗೆ ನೋಡಿದರೆ, ಕಳೆದ ಆರು ವರ್ಷಗಳಿಂದ ಈ ದೇಶದ ಪ್ರಧಾನ ಮಂತ್ರಿಯಾಗಿರುವವರು ಈ ದೇಶದ ಜನತೆಯಿಂದ ನೇರವಾಗಿ ಆಯ್ಕೆಯಾದವರೇ ಅಲ್ಲವಲ್ಲ! ಅಷ್ಟೇ ಅಲ್ಲ, ಇವರು ರಾಜಕಾರಣವನ್ನು ಪ್ರವೇಶಿಸಿದ್ದೇ, ತಾವು ದೆಹಲಿಯ ನಿವಾಸಿಯಾಗಿದ್ದರೂ ಗೌಹಾತಿಯ ನಿವಾಸಿ ಎಂದು ದಾಖಲೆ ಸೃಷ್ಟಿಸಿ-ಅಂದರೆ ಸಂವಿಧಾನದ ಕಣ್ಣಿಗೆ ಮಣ್ಣೆರಚಿ-ಅಸ್ಸಾಂನಿಂದ ರಾಜ್ಯಸಭೆಗೆ ಆಯ್ಕೆಯಾಗುವ ಮೂಲಕ! (ನಂತರ ಎನ್.ಡಿ.ಎ. ಸರ್ಕಾರವೂ ಇದರ ಲಾಭ ಪಡೆಯಲು ಕಾನೂನನ್ನು ತಿದ್ದುಪಡಿ ಮಾಡುವ ಮೂಲಕ ರಾಜ್ಯಸಭೆಗೆ ಆಯ್ಕೆಯಾಗಲು ಇದ್ದ ರಾಜ್ಯ ನಿವಾಸಿತ್ವದ ಷರತ್ತನ್ನು ರದ್ದುಗೊಳಿಸಿ, ಸಂವಿಧಾನದ ಒಕ್ಕೂಟ ಸ್ವರೂಪವನ್ನೇ ದುರ್ಬಲಗೊಳಿಸಿತು.) ಇದು ನಂತರ ಇತರರಿಗೆ ಮೇಲ್ಪಂಕ್ತಿಯಾಯಿತಷ್ಟೆ!

ಇದೆಲ್ಲವೂ ಅಭಿವೃದ್ಧಿ ರಾಜಕಾರಣದ ಕುರುಡಿನಿಂದ ಹುಟ್ಟಿದ ವಿಕ್ಷಿಪ್ತ ರಾಜಕಾರಣದ ಫಲವೇ ಆಗಿದೆ. ನಾವು ಎಲ್ಲ ರೀತಿಯ ಕೈಗಾರಿಕೆಗಳನ್ನು ಸ್ಥಾಪಿಸಿ, ಎಲ್ಲ ರೀತಿಯ ಉತ್ಪನ್ನಗಳನ್ನು ತಯಾರಿಸಿ ಮಾರುಕಟ್ಟೆಯ ತುಂಬಾ ತುಂಬಿದರೆ ನಮ್ಮದು ಸಮೃದ್ಧ-ಸುಭಿಕ್ಷ ದೇಶವೆನಿಸಿಕೊಳ್ಳುತ್ತದೆ;ಆಗ ನಾವು ಜಾಗತಿಕ ಶಕ್ತಿ ಎನಿಸಿ, ಜಗತ್ತು ನಮ್ಮ ಮಾತು ಕೇಳತೊಡಗುತ್ತದೆ ಎಂಬ ಭ್ರಮೆಯ ಪರಿಣಾಮವಿದು. ಆದರೆ ಈ ಪ್ರಕ್ರಿಯೆ ಇಷ್ಟು ಸರಳವೇ, ಸುಲಭವೇ ಮತ್ತು ಇದು ಒಂದಲ್ಲ ಒಂದು ದಿನ ತನ್ನ ಗುರಿ ಮುಟ್ಟುವಂತಹುದೇ? ಮುಟ್ಟುವುದಾದರೆ, ಅದು ಆ ಹೊತ್ತಿಗೆ ರಾಷ್ಟ್ರ ಜೀವನದಲ್ಲಿ ಏನೆಲ್ಲ ಆರ್ಥಿಕ-ಸಾಮಾಜಿಕ-ಸಾಂಸ್ಕೃತಿಕ-ಪಾರಿಸರಿಕ ಅನಾಹುತಗಳನ್ನು ಉಂಟು ಮಾಡಬಲ್ಲುದು ಎಂಬ ಆಳದ ಮತ್ತು ಸಂಕೀರ್ಣ ಪ್ರಶ್ನೆಯ ಬಗ್ಗೆ ತಲೆಯನ್ನೇ ಕೆಡಿಸಿಕೊಳ್ಳದ ಯಾಂತ್ರಿಕ ಆಲೋಚನಾ ಕ್ರಮದ ಫಲವಿದು. ಹಾಗಾಗಿಯೇ ಪ್ರಭುತ್ವದ ಎಲ್ಲ ಅಂಗಗಳೂ ಈ ಮಹಾ ಮಾನವ ದುರಂತವನ್ನು ಕೇವಲ ಒಂದು ಕೈಗಾರಿಕಾ

ಆಕಸ್ಮಿಕವೆಂದು ಭಾವಿಸಿ ವ್ಯವಸ್ಥೆಯ ಭಾಗವಾಗಿ ಮಾತ್ರ–ಅಂದರೆ ಇದೊಂದು ಬಡವರಿಗೆ ಅಷ್ಟೋ ಇಷ್ಟೋ ಪರಿಹಾರ ಹಂಚುವ ಇನ್ನೊಂದು ಸರ್ಕಾರಿ ಕಾರ್ಯಕ್ರಮವೆಂಬಂತೆ– ಕ್ರಿಯಾಶೀಲವಾದವು.

ಇನ್ನು ನಮ್ಮ ಕೈಗಾರಿಕೋದ್ಯಮದ ಮಹಾ ಅಮಾತ್ಯರು ಈ ದುರಂತಕ್ಕೂ ತಮಗೂ ಏನೂ ಸಂಬಂಧವಿಲ್ಲದಂತೆ; ಸಂತ್ರಸ್ತರಿಗೆ ಮೂರು ಕಾಸಿನ ಪರಿಹಾರವಿರಲಿ, ಒಂದು ಸಾಂತ್ವನದ ಮಾತನ್ನೂ ಆಡಲಾಗದಷ್ಟು ದೂರವುಳಿದಿದ್ದಾರೆ ಎಂದರೆ ಈ ವ್ಯವಸ್ಥೆ ಹೇಗೆ ಎರಡಾಗಿ ಒಡೆದುಹೋಗಿರಬಹುದು! ಈ ದುರಂತದ ಬಗ್ಗೆ ಅಂದಾಜು ಮಾಡಲು ದುರಂತದ ಮಾರನೆಯ ದಿನ ಭೂಪಾಲ್‌ಗೆ ಭೇಟಿ ನೀಡಿದ್ದ ಆಗಿನ ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿ (CSIR)ಯ ಅಧ್ಯಕ್ಷ ವರದರಾಜನ್, 'ದೇಶದ ಕೈಗಾರಿಕಾ ಪ್ರಗತಿಯ ಹಾದಿಯಲ್ಲಿ ಇಂತಹ ದುರಂತಗಳು ಸಾಮಾನ್ಯ. ಇವುಗಳ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳದೆ ಮುಂದುವರೆದಲ್ಲಿ ಮಾತ್ರ ದೇಶ ಪ್ರಗತಿಯ ಹಾದಿಯಲ್ಲಿ ದೃಢ ಹೆಜ್ಜೆ ಇಡಬಲ್ಲುದು' ಎಂದು ಹೇಳಬಲ್ಲರೆಂದರೆ ನಾವು ಎಂತಹ ಭಯಂಕರ ರಾಕ್ಷಸ ವ್ಯವಸ್ಥೆಯನ್ನು ಕಟ್ಟಿಕೊಂಡಿದ್ದೇವೆ ಎಂಬುದರ ಒಂದು ಅಂದಾಜಾದರೂ ಸಿಗಬಹುದು.

ಹಾಗಾಗಿಯೇ ಈ ಭೂಪಾಲ್ ವಿಷಾನಿಲ ದುರಂತ ಕುರಿತ ತೀರ್ಪಿನ ಸಮಯದಲ್ಲೇ ಮೆಕ್ಸಿಕೋ ಖಾರಿಯಲ್ಲಿ ಬ್ರಿಟಿಷ್ ಪೆಟ್ರೋಲಿಯಂ ಕಂಪನಿಯ ತೈಲ ವೇದಿಕೆ ಸ್ಫೋಟಗೊಂಡು ಉಂಟಾಗಿರುವ ಬೃಹತ್ ಪ್ರಮಾಣದ ಸಾಗರ ಜೀವ ಸಂತತಿ ನಾಶ ಮತ್ತು ಭೀಕರ ಜಲ ಮಾಲಿನ್ಯ ನಮ್ಮನ್ನು ಕಿಂಚಿತ್ತೂ ಕಂಗೆಡಿಸದು. (ಹಾಗೇ ಇದರಿಂದ ಹೌಹಾರಿರುವ ಅಮೆರಿಕಾದ ಅಧ್ಯಕ್ಷ ಒಬಾಮಾ ಯಾವ ನ್ಯಾಯಾಲಯದ ಮಧ್ಯಪ್ರವೇಶವೂ ಇಲ್ಲದೆ, ಕೇವಲ ನೈತಿಕ ಜವಾಬ್ದಾರಿಯ ಆಧಾರದ ಮೇಲೆ ತಕ್ಷಣವೇ ಹೇಗೆ ಆ ಕಂಪನಿಯಿಂದ ಬೃಹತ್ ಪ್ರಮಾಣದ ಪರಿಹಾರ ಮೊತ್ತವನ್ನು ಕಕ್ಕಿಸತೊಡಗಿದ್ದಾರೆ ಎಂಬುದನ್ನು ಸುಮ್ಮನೆ ಮೆಚ್ಚುಗೆಯಿಂದ ನೋಡಬಲ್ಲೆವು.) ಇದೆಲ್ಲ ಯಾವುದರ ಸೂಚನೆ, ಎಂತಹ ಸಮಾಜದ, ಪ್ರಪಂಚದ ಸೃಷ್ಟಿಗೆ ನಾಂದಿ ಎಂಬ ಆಲೋಚನೆಯೇ ಈಗ ನಮ್ಮ ಬಳಿ ಸುಳಿಯದು... ಎಷ್ಟಾದರೂ, ನಮ್ಮೆಲ್ಲರ ಆತ್ಮ ಕಬ್ಬಿಣವಾಗಿಬಿಟ್ಟಿದೆಯಲ್ಲವೇ?

* * * * *

ಈ ದುರಂತ ಕುರಿತ ತೀರ್ಪು ಹೊರಬಿದ್ದ ನಂತರ ಮಾಧ್ಯಮಗಳು ಎಬ್ಬಿಸಿದ ಹಾಹಾಕಾರ (ಮಾಧ್ಯಮಗಳಾದರೂ ಈವರೆಗೆ–ಪ್ರತಿ ವರ್ಷ ಭೂಪಾಲ್ ದುರಂತ ದಿನವನ್ನು ವಿಶೇಷ ವರದಿಗಳ ಮೂಲಕ ಸ್ಪರ್ಧಾತ್ಮಕವಾಗಿ ಆಚರಿಸುವುದರ ಹೊರತಾಗಿ– ಏನು ಮಾಡುತ್ತಿದ್ದವೋ?) ಮತ್ತು ಇಡೀ ಪ್ರಕರಣದ ನಿರ್ವಹಣೆಯಲ್ಲಿ ವಿವಿಧ ಸರ್ಕಾರಗಳು ಅಂದಿನಿಂದ ಇಂದಿನವರೆಗೆ ತೋರುತ್ತಿರುವ ಜನ ವಿರೋಧಿಯಾದ ಬೇಜವಾಬ್ದಾರಿತನಗಳು ಒಂದೊಂದಾಗಿ ಬಯಲಾಗುತ್ತಾ, ಅವೆಲ್ಲ ಒಟ್ಟಾಗಿ ಇಂದಿನ

ಸರ್ಕಾರದ ಬುಡಕ್ಕೇ ಬರತೊಡಗಿದಾಗ, ಸರ್ಕಾರ ಹಾಹಾಕಾರದ ತೀವ್ರತೆಯನ್ನು ಕಡಿಮೆಗೊಳಿಸಲು ಸಮಸ್ಯೆಯ ಪರಿಹಾರಕ್ಕೆಂದು ಸಚಿವ ಸಮಿತಿಯೊಂದನ್ನು ರಚಿಸಿದೆ. ಅದು ಸಾವಿರ ಕೋಟಿ ಹೊಸ ಪರಿಹಾರ ಸೂತ್ರವೊಂದನ್ನು ರೂಪಿಸಿ ಸಂತ್ರಸ್ತರಿಗೆ ಸಹಾನುಭೂತಿ ತೋರಿಸಲು ಹೊರಟಿದೆ. ಆದರೆ ಕಳೆದ ಇಪ್ಪತ್ತೈದು ವರ್ಷಗಳ ಔದಾಸೀನ್ಯದಿಂದಾಗಿ ಸಂತ್ರಸ್ತರ ಪಟ್ಟಿಯ ಗೊಂದಲವೇ ಇನ್ನೂ ಇತ್ಯರ್ಥವಾಗದಿರುವಾಗ ಹೊಸ ಪರಿಹಾರವನ್ನು ಹೇಗೆ ವಿತರಿಸಲಾಗುವುದೋ ತಿಳಿಯದು! ಹಾಗೇ, ವಿಷಾನಿಲದಿಂದ ಮಲಿನಗೊಂಡು ಇಪ್ಪತ್ತೈದು ವರ್ಷಗಳಿಂದ ಹಾಗೇ ಬಿದ್ದಿರುವ ಭೂಪಾಲ್‌ನ ನೆಲ-ಜಲಗಳನ್ನು ೩೦೦ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಸ್ವಚ್ಛೀಕರಿಸಲು ಹೊರಟಿದೆ. ಅಲ್ಲದೆ, ದುರಂತ ಪೀಡಿತರಿಗಾಗಿ ಸ್ಥಾಪಿಸಲಾಗಿರುವ ಆಸ್ಪತ್ರೆಯನ್ನು ಹೆಚ್ಚುವರಿ ಸೌಲಭ್ಯಗಳೊಂದಿಗೆ ಉನ್ನತ ದರ್ಜೆಗೆ ಏರಿಸಲಾಗುವುದಂತೆ. ಇದೆಲ್ಲವೂ ನಡೆಯಲಿರುವುದು ಶ್ರೀಸಾಮಾನ್ಯನ ಹಣದಿಂದ! ಯೂನಿಯನ್ ಕಾರ್ಬೈಡ್ ಅಥವಾ ಡೋ ಕೆಮಿಕಲ್ಸ್‌ನಿಂದ ಹಣ ವಸೂಲು ಮಾಡುವ ಪ್ರಯತ್ನದ ಪ್ರಸ್ತಾಪವೇ ಇಲ್ಲ. ಇದೆಲ್ಲ ಆಮೇಲಂತೆ!

ಇನ್ನು ಆರೋಪ ಪಟ್ಟಿಯನ್ನು ಆಪಾದಿತರಿಗೆ ಅನುಕೂಲವಾಗುವಂತೆ ಪರಿಷ್ಕರಿಸಿದ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು (ಒಮ್ಮೆ ಒಂದು ಕಾನೂನಿನಡಿಯಲ್ಲಿ ಶಿಕ್ಷೆಗೊಳಗಾದವರನ್ನು ಮತ್ತೆ ಇನ್ನೊಂದು ಕಾನೂನಡಿ ವಿಚಾರಣೆಗೊಳಪಡಿಸುವುದಕ್ಕೆ ಅವಕಾಶವಿಲ್ಲ ಎಂಬುದು ಕಾನೂನು ಪರಿಣತರ ಅಭಿಪ್ರಾಯವಿದ್ದರೂ) ಸರ್ಕಾರ ಈಗ ಪ್ರಶ್ನಿಸಲಿದೆಯಂತೆ ಮತ್ತು ಕೈಗಾರಿಕಾ ದುರಂತಗಳಿಗೆ ನಿಖರ ಜವಾಬ್ದಾರಿಯನ್ನು ನಿಗದಿಪಡಿಸುವ ಮತ್ತು ಹೆಚ್ಚಿನ ಪರಿಹಾರಕ್ಕೆ ಅವಕಾಶ ಮಾಡಿಕೊಡುವ ಕಾನೂನು ರಚಿಸಲಿದೆಯಂತೆ! ಎಲ್ಲಕ್ಕಿಂತ ಮುಖ್ಯವಾಗಿ, ಈಗಾಗಲೇ ಸಾವಿನ ಅಂಚಿನಲ್ಲಿರುವ ಆಂಡರ್ಸನ್ನನನ್ನು ಇಲ್ಲಿಗೆ ಕರೆಸಿ ಮತ್ತೆ ವಿಚಾರಣೆಗೊಳಿಪಡಿಸುವ ಪ್ರಯತ್ನ ಮಾಡಲಿದೆಯಂತೆ! ಅಪರಾಧಿಯನ್ನು ಗೌರವಾನ್ವಿತ ಅತಿಥಿಯಂತೆ ಸದ್ದಿಲ್ಲದೆ(ಅಂದರೆ ಯಾವುದೇ ಇಲಾಖೆಯಲ್ಲಿ ದಾಖಲೆಯೇ ಇಲ್ಲದಂತೆ) ಸುರಕ್ಷಿತವಾಗಿ ಸ್ವದೇಶಕ್ಕೆ ಕಳಿಸಿಕೊಟ್ಟ ವ್ಯವಸ್ಥೆಯು ಕ್ಷಮೆ ಅಥವಾ ಕನಿಷ್ಟ ಪಶ್ಚಾತ್ತಾಪದ ಒಂದು ಮಾತಿಲ್ಲದೆ ಈ ಮಾತುಗಳನ್ನಾಡಿದಾಗ ನಾವು ಈ ಮಾತುಗಳನ್ನು ಅದರ ಮುಖಬೆಲೆಯಲ್ಲೇ ನಂಬಬೇಕೆ? ತೀರ್ಪು ಬರುವವರೆಗೆ ಎಲ್ಲಕ್ಕೂ ಕಣ್ಣು ಮುಚ್ಚಿಕೊಂಡಿದ್ದ ವ್ಯವಸ್ಥೆ ಇದ್ದಕ್ಕಿದ್ದಂತೆ ಯಾರನ್ನೆಲ್ಲ ರಕ್ಷಿಸಲು ಈ ಎಲ್ಲ ಹೊಸ ನಾಟಕ ಹೂಡಿದೆ? ವ್ಯವಸ್ಥೆ ತನ್ನ ಮಾನ ಮುಚ್ಚಿಕೊಳ್ಳಲು ಮತ್ತು ತನ್ನ ಲೂಟಿಯನ್ನು ಮುಂದುವರೆಸಲಷ್ಟೆ ಈ ಎಲ್ಲ ಬೂಟಾಟಿಕೆಯಲ್ಲವೇ? ಪ್ರಸಕ್ತ ವ್ಯವಸ್ಥೆಯ ಮುಖ್ಯಸ್ಥರಾಗಿರುವ ಪ್ರಧಾನ ಮಂತ್ರಿ ಏಕೆ ಈ ಬಗ್ಗೆ ಒಂದು ಮಾತನ್ನೂ ಆಡಿಲ್ಲ? ನವ ಕೈಗಾರಿಕಾ ಸಾಮ್ರಾಜ್ಯಶಾಹಿಯ ದೊಡ್ಡ ವಕ್ತಾರರಾಗಿರುವ ಅವರು ಹೇಗೆ ಇಪ್ಪತ್ತೈದು ವರ್ಷಗಳ ಈ ದೊಡ್ಡ ವಂಚನೆಯನ್ನು ರಾಜಕೀಯವಾಗಿ ವಿವರಿಸಬಲ್ಲರು?

ಇಲ್ಲ, ಸಂಪೂರ್ಣವಾಗಿ ಉಳ್ಳವರ ಕೈವಶವಾಗಿರುವ ಈ ವ್ಯವಸ್ಥೆಯ ಅಡಿಗಲ್ಲುಗಳನ್ನು

ಅಲ್ಲಾಡಿಸದ ಹೊರತು, ವ್ಯವಸ್ಥೆಗೆ ಹೊಸ ರೂಪ ಕೊಡದ ಹೊರತು ಇದಾವುದೂ ನಿಲ್ಲದು. ಇದಕ್ಕಾಗಿ ನಾನು ಸಮಾನ ಮನಸ್ಕ ಗೆಳೆಯರ ನಡುವೆ ಸುಮ್ಮನೆ ಚರ್ಚೆಗಾಗಿ ಎರಡು ಸಲಹೆಗಳನ್ನು ನೀಡಬಯಸುವೆ. ***ಒಂದು:*** ಕೈಗಾರಿಕೀಕರಣ ಇನ್ನು ಸಾಕು ಎಂಬ ಆಂದೋಲನವನ್ನು ಸಣ್ಣ ಪ್ರಮಾಣದಲ್ಲಿ ಅಥವಾ ಸ್ಥಳೀಯ ಮಟ್ಟದಲ್ಲಿ ಆರಂಭಿಸುವುದು. ***ಎರಡು:*** ವಿವಿಧ ಮಟ್ಟಗಳ ಚುನಾವಣೆಗಳಿಗೆ ನಿಲ್ಲಲು ವಿವಿಧ ಮಟ್ಟದ ಗರಿಷ್ಠ ಆದಾಯ ಮಿತಿಗಳನ್ನು *(ಅಭ್ಯರ್ಥಿಗಳಿಗೆ)* ವಿಧಿಸುವಂತೆ ಚುನಾವಣಾ ಕಾನೂನು ಬದಲಾವಣೆಗೆ ಒತ್ತಾಯಿಸುವುದು. ಏಕೆಂದರೆ, ಬಡವರ(ಪ್ರತಿನಿಧಿಗಳ ಅಲ್ಲ) ಸರ್ಕಾರವೊಂದೇ–ಅದೆಷ್ಟೇ ರೂಕ್ಷವಾದರೂ–ಇವೊತ್ತಿಗೆ ಪರ್ಯಾಯವೇನೋ... ತಿಳಿಯದು!

(ಜುಲೈ ೨೦೧೦)

■

ಮುಂಬೈ ದಾಳಿಯ ಪಾಠಗಳು

ನಗರಗಳೇ ಹಾಗೆ. ಅದರ ಕೈ ಕಾಲು, ಬಾಯಿ ಇತ್ಯಾದಿ ಅಂಗಗಳು ಸದಾ ಕ್ರಿಯಾಶೀಲವಾಗಿದ್ದರೂ, ಮನಸ್ಸು ಮಾತ್ರ ಸ್ಥಗಿತಗೊಂಡಿರುತ್ತದೆ. ನಮ್ಮ ಮಾಧ್ಯಮ ತಜ್ಞರು ಮತ್ತು ಸಾಮಾಜಿಕ ಮುಖಂಡರು ಇದನ್ನು ನಗರ ಜೀವನದ ವಿಶಿಷ್ಟ 'ಸ್ಥೈರ್ಯ'ವೆಂದೂ ಕರೆಯುವುದುಂಟು! ಈ ಹಿಂದಿನ ಭಯೋತ್ಪದನಾ ಪ್ರಕರಣಗಳ ಸಂದರ್ಭದಲ್ಲಿ, ಭಯೋತ್ಪಾದನೆಯ ಅನಾಹುತಗಳೆಲ್ಲ ಮುಗಿದ ಒಂದೇ ದಿನದಲ್ಲೋ, ಒಂದೇ ತಾಸಿನಲ್ಲೋ ನಗರದ ಜನಜೀವನ ಮತ್ತೆ ಮಾಮೂಲು ಸ್ಥಿತಿಗೆ ಮರಳಿದೆ ಎಂದು ತಮ್ಮ ನಗರದ spiritನ್ನು ಹಾಡಿ ಹೊಗಳಿದವರೇ ಇವರೆಲ್ಲ. ಅಂದರೆ, ಇವರ ಪ್ರಕಾರ ಇವರು ಪ್ರತಿನಿಧಿಸುವ ಹಿತಾಸಕ್ತಿಗಳ ವ್ಯಾಪಾರ-ವ್ಯವಹಾರಗಳಿಗೆ ಯಾವುದೇ ಅಡೆ-ತಡೆಯಾಗದಿರುವುದೇ ನಗರದ spirit!

ಎರಡು ವಾರಗಳ ಹಿಂದಷ್ಟೇ ನಾನು ಹಿಂದೂವಾದಿ ಗುಂಪುಗಳ ಭಯೋತ್ಪಾದನೆಯ ಬಗ್ಗೆ ಬರೆಯುತ್ತಾ, 'ಇದು ರಾಷ್ಟ್ರಕ್ಕೆ ಅಗ್ನಿ ಪರೀಕ್ಷೆಯ ಕಾಲ' ಎಂದಿದ್ದೆ. ಆದರೆ ಅಂತಹ ಅಗ್ನಿ ಪರೀಕ್ಷೆ ಇಷ್ಟು ಬೇಗ ಹೀಗೆ ಎದುರಾಗುತ್ತದೆಂದು ನಾನು ನಿರೀಕ್ಷಿಸಿರಲಿಲ್ಲ. ನಾನೇ ಏನು, ಬಹುಶಃ ಯಾರೂ ನಿರೀಕ್ಷಿಸಿರಲಾರರು. ನವೆಂಬರ್ ೨೬ರ ಸಂಜೆ ಸಮುದ್ರದ ಮೇಲಿಂದ ಬಂದ ಭಯೋತ್ಪಾದಕರ ಗುಂಪೊಂದು ಮುಂಬೈನ ವಿವಿಧೆಡೆ ನಡೆಸಿರುವ ಹಿಂಸಾಚಾರ ಇಡೀ ದೇಶವನ್ನೇ ತಲ್ಲಣಗೊಳಿಸಿದೆ. ಛತ್ರಪತಿ ಶಿವಾಜಿ ರೈಲ್ವೇ ನಿಲ್ದಾಣ, ತಾಜ್, ಒಬೆರಾಯ್ ಹೊಟೆಲ್‌ಗಳು ಮತ್ತು ನಾರಿಮನ್ ಭವನದಲ್ಲಿದ್ದ ಅನೇಕ ವಿದೇಶೀಯರೂ ಸೇರಿದಂತೆ ಸುಮಾರು ಇನ್ನೂರು ಜನರನ್ನು ಕೊಂದು ಸುಮಾರು ಮುನ್ನೂರು ಜನರನ್ನು ಗಾಯಗೊಳಿಸಿರುವ ಈ ಗುಂಪು, ನಮ್ಮ ೨೦ ಜನ ಸಾಮಾನ್ಯ ಪೋಲೀಸರ ಜೊತೆಗೆ ಮೂವರು ಶ್ರೇಷ್ಠ ಪೋಲೀಸ್ ಅಧಿಕಾರಿಗಳನ್ನೂ ರಾಷ್ಟ್ರೀಯ ರಕ್ಷಣಾ ದಳದ ಇಬ್ಬರು ಕಮಾಂಡೋಗಳನ್ನೂ ಬಲಿ ತೆಗೆದುಕೊಂಡಿದೆ. ಭಯೋತ್ಪಾದನೆ ಎಂಬುದೀಗ ಗುಪ್ತ ಕಾರ್ಯಾಚರಣೆಯ ರೂಪವನ್ನು ಕಳಚಿಕೊಂಡು ಬಹಿರಂಗ 'ಯುದ್ಧ'ದ ರೂಪದಲ್ಲಿ ರುದ್ರ ನರ್ತನ ನಡೆಸುವ ಧಾರ್ಷ್ಟ್ಯ ಪ್ರದರ್ಶಿಸಿದೆ.

ಇದರ ಈ ಭಂಡ ಧೈರ್ಯ, ಸುಯೋಜಿತ ರೀತಿ ನೀತಿ, ಶಸ್ತ್ರಾಸ್ತ್ರ ಪರಿಣಿತಿ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಇದರ ಫಲವನ್ನು ಗಮನಿಸಿ, ಈ ರುದ್ರ ಕಾರ್ಯಾಚರಣೆಯ ಹಿಂದೆ ಅಲ್ ಖೈದಾದ ಸ್ಫೂರ್ತಿ ಇದೆ, ಲಷ್ಕರ್ ತೊಯ್ಬಾದ ತರಬೇತಿ ಇದೆ ಮತ್ತು ಕೆಲವು ಪಾಕಿಸ್ತಾನಿ ಶಕ್ತಿಗಳ ಬೆಂಬಲವಿದೆ ಎಂದು ಸಂಶಯಿಸಲಾಗುತ್ತಿದೆ. ಆದರೆ ಯಾವುದೂ ಇನ್ನೂ ಖಚಿತವಿಲ್ಲ. ಐದು ಸಾವಿರ ಜನರನ್ನು ಕೊಲ್ಲುವ ಉದ್ದೇಶದಿಂದ ಸಾಕಷ್ಟು ಶಸ್ತ್ರಸಜ್ಜಿತವಾಗಿ ಬಂದಿತ್ತೆಂದು ಹೇಳಲಾದ ಈ ಗುಂಪು, ನಗರದೆಲ್ಲಡೆ ರಕ್ತದ ಕೋಡಿ ಹರಿಸುವ ಮುನ್ನ ಅದರ ಬೆನ್ನು ಮುರಿದ ನಮ್ಮ ಯೋಧರಿಗೆ ಇಡೀ ದೇಶ ಕೃತಜ್ಞವಾಗಬೇಕಿದೆ. ಈ ವೀರ 'ಯೋಧ'ರಲ್ಲಿ ಒಬ್ಬರಾದ ಮಹಾರಾಷ್ಟ್ರ ಭಯೋತ್ಪಾದನಾ ನಿಗ್ರಹ ದಳದ ಮುಖ್ಯಸ್ಥರಾಗಿದ್ದ ಹೇಮಂತ ಕರ್ಕರೆ, ಇತ್ತೀಚೆಗೆ ಹಿಂದೂವಾದಿ ಗುಂಪುಗಳ ಭಯೋತ್ಪಾದನೆಯ ತನಿಖೆ ನಡೆಸಿದ್ದ ಹಿನ್ನೆಲೆಯಲ್ಲಿ ಈ ಗುಂಪುಗಳಿಂದ ತೀವ್ರ ಅಪಪ್ರಚಾರಕ್ಕೆ ಮತ್ತು ಕೊಲೆ ಬೆದರಿಕೆಗಳಿಗೆ ಈಡಾಗಿದ್ದರು ಎಂಬುದನ್ನೂ ಗಮನಿಸಬೇಕಿದೆ. ಈ ಹಿನ್ನೆಲೆಯಲ್ಲಿ, ಈ ದಾಳಿಯ ಸಂದರ್ಭವನ್ನು ರಾಜಕೀಯವಾಗಿ ದುರುಪಯೋಗ ಪಡಿಸಿಕೊಳ್ಳಲು ಮುಂಬೈಗೆ ಬಂದಿಳಿದ (ಆಗಿನ) ಗುಜರಾತ್‌ನ ಮುಖ್ಯಮಂತ್ರಿ ನರೇಂದ್ರ ಮೋದಿ ಈ ಯೋಧರಿಗಾಗಿ ಪ್ರಕಟಿಸಿದ ಬೃಹತ್ ಪರಿಹಾರ ಮೊತ್ತವನ್ನು ಸ್ವೀಕರಿಸಲು ಕರ್ಕರೆಯವರ ಪತ್ನಿ ನಿರಾಕರಿಸುವುದು ಸಹಜವೇ ಆಗಿದೆ.

ಮೂರು ದಿನಗಳ ಈ ಅಪೂರ್ವ ಕಾರ್ಯಾಚರಣೆಯಲ್ಲಿ ಬಹುಶಃ ಒಬ್ಬನ ಹೊರತಾಗಿ ಮಿಕ್ಕೆಲ್ಲ ಭಯೋತ್ಪಾದಕರೂ ಸತ್ತಂತಿದೆ. ಹಾಗಾಗಿ, ವಿವಿಧ ರಾಷ್ಟ್ರೀಯತೆಗಳ ಮುಸ್ಲಿಂ ತರುಣರು ಸೇರಿ ನಡೆಸಿದಂತೆ ತೋರುವ ಈ ಅಂತಾರಾಷ್ಟ್ರೀಯ ಮಟ್ಟದ ಭಯೋತ್ಪಾದನಾ ಕೃತ್ಯದ ನಿರ್ದಿಷ್ಟ ಉದ್ದೇಶವಾದರೂ ಏನು ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಬಂಧನದಲ್ಲಿರುವ ಭಯೋತ್ಪಾದಕನ ವಿವರವಾದ ವಿಚಾರಣೆ ಮತ್ತು ಈವರೆಗೆ ದೊರೆತಿರುವ ಸಾಕ್ಷ್ಯಗಳ ತಾರ್ಕಿಕ ಜೋಡಣೆಯ ನಂತರವಷ್ಟೆ ಈ ಎಲ್ಲ ಪ್ರಶ್ನೆಗಳಿಗೆ ಉತ್ತರ ದೊರಕಬಹುದು.

ಆದರೆ ಅದಕ್ಕೆ ಮುನ್ನ ನಮ್ಮ ಕೆಲವು ಕನ್ನಡ ವಾರ್ತಾ ವಾಹಿನಿಗಳು ಮಾಡಲು ಯತ್ನಿಸಿದಂತಹ, ಅಗ್ಗದ ಭಾಷೆಯಲ್ಲಿ ಅವಸರದ ತೀರ್ಮಾನಗಳನ್ನು ಜನರಿಗೆ ಮುಟ್ಟಿಸುವಂತಹ ಕೆಲಸಗಳನ್ನು ಇಂತಹ ಸೂಕ್ಷ್ಮ ಸಂದರ್ಭಗಳಲ್ಲಿ ರಾಷ್ಟ್ರ ವಿರೋಧಿ ಕೆಲಸಗಳೆಂದೇ ಪರಿಗಣಿಸಬೇಕಾಗುತ್ತದೆ. ಉದಾಹರಣೆಗೆ, ಒಂದು ವಾಹಿನಿಯ ತಲೆಹೋಕ ನಿರೂಪಕನೊಬ್ಬ, ಸೆರೆ ಸಿಕ್ಕಿರುವ ಭಯೋತ್ಪಾದಕ ಪಾಕಿಸ್ತಾನಿ ಎಂದು ಪ್ರಕಟಿಸುತ್ತಾ; ತನ್ನ ವರದಿಗಾರನಿಗೆ ತಕ್ಷಣ ಕೇಳಿದ ಪ್ರಶ್ನೆ ಇದು: 'ಈ ಪಾಕಿಸ್ತಾನವನ್ನು ಮಟ್ಟ ಹಾಕಲು ಸಾಧ್ಯವಿಲ್ಲವಾ?' ಅದಕ್ಕೆ ಆ ಕಡೆಯಿಂದ ವಿಶೇಷ ವರದಿಗಾರನಿಂದ ಬಂದ ಪರಿಣತ ಉತ್ತರ: 'ಅಮೆರಿಕಾ ಸಹಕಾರ ನೀಡಿದರೆ ಸಾಧ್ಯವಾಗಬಹುದು!' ಜೊತೆಗೆ ಈ ನಿರೂಪಕ, 'ಚೀನಾದಲ್ಲಿ ನೋಡಿ, ಭಯೋತ್ಪಾದನೆಯ ಸುಳಿವೇ ಇಲ್ಲ...' ಎಂದು ತನ್ನ ತನ್ನ ಅಪಾರ ಅಜ್ಞಾನದ ಬಾಗಿಲನ್ನು ಬೇರೆ ತೆರೆದಿಟ್ಟ. ಇನ್ನೊಂದು ವಾಹಿನಿ ತನ್ನ ಉಗ್ರ

ರಾಷ್ಟ್ರೀಯ ವಾರ್ತೆಯಲ್ಲಿ, ಇಂಗ್ಲೆಂಡ್ ತಂಡ ತನ್ನ ಕ್ರಿಕೆಟ್ ಪ್ರವಾಸವನ್ನು ಮುಂಬೈ ಭಯೋತ್ಪಾದನೆಯ ಹಿನ್ನೆಲೆಯಲ್ಲಿ ಮೊಟಕುಗೊಳಿಸಿದ್ದನ್ನು ವರ್ಣಿಸಿದ್ದು ಹೀಗೆ: 'ಸೋತು ಸುಣ್ಣವಾದ ಇಂಗ್ಲೆಂಡ್ ತಂಡದ ಪಲಾಯನ!' ಬೀದಿಯಲ್ಲಿ ಹೋಗುವವರನ್ನೆಲ್ಲ ಅಗ್ಗದ ಸಂಬಳಕ್ಕೆ ಕರೆತಂದು ನಿರೂಪಕರೆಂದೋ, ವರದಿಗಾರರೆಂದೋ ತಂದು ಕೂರಿಸುತ್ತಿರುವ ನಮ್ಮ ಕೆಲವು ವಾಹಿನಿಗಳು ಅಂತರಾಷ್ಟ್ರೀಯ ಸಂಬಂಧಗಳ ರಾಜಕಾರಣವನ್ನು ಕಡ್ಲೇಕಾಯಿ ವ್ಯಾಪಾರದ ಮಟ್ಟಕ್ಕೆ ಇಳಿಸಿರುವುದು ಹೀಗೆ.

ಅಷ್ಟೇ ಅಲ್ಲ, ಈ ವಾಹಿನಿಗಳು ಭಯೋತ್ಪಾದನೆಯ ವಿರುದ್ಧದ ಕಾರ್ಯಾಚರಣೆಯಲ್ಲಿ ಭಾಗವಹಿಸಿ ಮರಣವನ್ನಪ್ಪಿದ ವೀರ ಪೋಲೀಸ್ ಅಧಿಕಾರಿಗಳ ಮತ್ತು ಯೋಧರ ಅಂತಿಮ ಯಾತ್ರೆಯ ಸಂದರ್ಭಗಳನ್ನು; ಅವುಗಳ ವಿಷಾದ-ಗಾಂಭೀರ್ಯಗಳನ್ನು ಲೆಕ್ಕಿಸದೆ, ಮಧ್ಯಯುಗೀನ ಯುದ್ಧ ವರ್ಣನೆಯ ಪರಿಭಾಷೆಯಲ್ಲಿ ನಿರೂಪಿಸುತ್ತಾ, ಸಂಭ್ರಮಪೂರ್ಣ ದೇಶಪ್ರೇಮ ಗೀತೆಗಳ ತುಣುಕುಗಳ ಮೂಲಕ 'ಆಚರಿಸಿದ' ಶೈಲಿ ಮತ್ತು ಕೋಮುವಾದಿ ಸಂಘಟನೆಯ ಜಾಲವೊಂದು ಚಲಾಯಿಸಿದ ಎಸ್‌ಎಂಎಸ್‌ಗಳನ್ನು, ಅವು ಇಡೀ ದೇಶದ ಭಾವನೆಯನ್ನು ಪ್ರತಿಬಿಂಬಿಸುವಂತೆ ಪ್ರಸಾರಿಸಿದ ವಿಶೇಷ ರೀತಿ, ನಮ್ಮ ರಾಷ್ಟ್ರಪ್ರೇಮ ಹೇಗೆ ತನ್ನೆಲ್ಲ ಘನತೆಯನ್ನು ಕಳೆದುಕೊಂಡು ಅಗ್ಗದ ಮಾತಿನ ರಾಜಕಾರಣವಾಗಿ ಅವನತಿಗೊಂಡಿದೆ ಎಂಬುದನ್ನು ಸೂಚಿಸುವಂತಿತ್ತು. ಹಾಗೇ ಇದೇ ಸಮಯವೆಂದು, ದೇಶ ರಕ್ಷಿಸಬೇಕಾದ ಕಮಾಂಡೋಗಳು ಸರ್ಕಸ್‌ನಲ್ಲಿನ ವಿದೂಷಕರಂತಿರುವ ರಾಜಕಾರಣಿಗಳ ಅಂಗರಕ್ಷಕರಾಗುತ್ತಿದ್ದಾರೆ ಎಂದು ತೆರೆಯ ಹಿಂದೆ ಕೂತು ಹೇಳಿಸುವ ಟಿ.ವಿ.ವಾಹಿನಿಯ ಸುದ್ದಿ ಸಂಪಾದಕನ ಸಿನಿಕತೆ ಮತು ಬೇಜವಾಬ್ದಾರಿತನ ಕೂಡಾ ಇಂತಹ ಅಗ್ಗದ ಮತ್ತು ಸುಲಭ ಮಾತಿನ ದೇಶಪ್ರೇಮದಿಂದ ಹುಟ್ಟಿದುದೇ ಆಗಿದೆ. ಮಾಧ್ಯಮಗಳ ಖಾಸಗೀಕರಣದ ನಿಜವಾದ ಅಪಾಯಗಳೇನು ಎಂಬುದು ನಮ್ಮ ಗಮನಕ್ಕೆ ಬರುವುದು ಇಂತಹ ರಾಷ್ಟ್ರ ಪರೀಕ್ಷೆಯ ಕಾಲದಲ್ಲೇ ಇರಬಹುದು....

ರಾಷ್ಟ್ರ ಮತ್ತೆ ಮತ್ತೆ ಭಯೋತ್ಪಾದನೆಗೆ ಬಲಿಯಾಗುತ್ತಿರುವುದಕ್ಕೂ, ಇಂತಹ ಅಗ್ಗದ ಮತ್ತು ಸುಲಭ ಮಾತಿನ ಉಗ್ರ ರಾಷ್ಟ್ರಪ್ರೇಮಕ್ಕೂ ಸಂಬಂಧವಿದೆ ಎನ್ನುವುದು ಇಲ್ಲಿ ಮುಖ್ಯ ಸಂಗತಿ. ನಿಜವಾಗಿ ರಾಷ್ಟ್ರವನ್ನು ಹೇಗೆ ಮತ್ತು ಯಾರಿಗಾಗಿ ಕಟ್ಟಲಾಗುತ್ತಿದೆ, ಈ ರಾಷ್ಟ್ರ ನಿರ್ಮಾಣದ ಪ್ರಕ್ರಿಯೆಯಲ್ಲಿ ಯಾರ ಯಾರ ಮತ್ತು ಯಾವ ಯಾವ ಆಶಯಗಳು ಅಭಿವ್ಯಕ್ತಗೊಳ್ಳುತ್ತಿವೆ ಎಂಬುದರ ಸೂಕ್ಷ್ಮ ಅವಲೋಕನವನ್ನು ಆಧರಿಸದ ಬರೀ ಟೊಳ್ಳು ಘೋಷಣೆಗಳ ರಾಷ್ಟ್ರ ಪ್ರೇಮ, ನಮ್ಮಲ್ಲಿ ಆತ್ಮಘಾತುಕವಾದ ಅಮಲನ್ನು ಮಾತ್ರ ಸೃಷ್ಟಿಸಬಲ್ಲುದು. ಈಗ ಆಗುತ್ತಿರುವಂತೆ. ಸದ್ಯದ ಮುಂಬೈ ಭಯೋತ್ಪಾದನಾ ಪ್ರಕರಣ ನಮ್ಮನ್ನು ಇಂತಹ ಆತ್ಮಘಾತುಕ ರಾಷ್ಟ್ರಪ್ರೇಮದ ಅಮಲಿನಿಂದ, ಮಂಪರಿನಿಂದ ಎಚ್ಚರಿಸಬೇಕು. ಮುಂಬೈ ನಗರವನ್ನು ಹೊಕ್ಕಿದ್ದ ಭಯೋತ್ಪಾದಕರನ್ನು ನಮ್ಮ ವೀರ ಪೋಲೀಸರು ಮತ್ತು ಕಮಾಂಡೋಗಳು ಹುಲಿಗಳಂತೆಯೋ, ಸಿಂಹಗಳಂತೆಯೋ

ಕಾದಾಡಿ ಮಣಿಸಿದ್ದಾರೆಂದು 'ಭಾರತ್ ಮಾತಾ ಕಿ ಜೈ' ಎಂದೋ, 'ವಂದೇ ಮಾತರಂ' ಎಂದೋ ಘೋಷಣೆ ಕೂಗಿ ಸುಲಭ ಮತ್ತು ಸುಕ್ಷೇಮ ವೀರಾವೇಶ ಪ್ರಕಟಿಸುವ ಬದಲು, ಈ ಭಯೋತ್ಪಾದನೆ ಮತ್ತೆ ಮತ್ತೆ ಏಕೆ ನಮ್ಮನ್ನು ಕಾಡುತ್ತಿದೆ ಮತ್ತು ಇದನ್ನು ಏಕೆ ಶಾಶ್ವತವಾಗಿ ನಿರ್ಮೂಲನ ಮಾಡಲಾಗುತ್ತಿಲ್ಲ ಎಂಬುದನ್ನು ಯೋಚಿಸಿ, ಆ ಬಗ್ಗೆ ಕ್ರಮ ಕೈಗೊಳ್ಳುವಂತಹ ವಾತಾವರಣವನ್ನು ನಿರ್ಮಿಸುವುದು ಇಂದಿನ ಸಂದರ್ಭದಲ್ಲಿ ನಿಜವಾದ ದೇಶಪ್ರೇಮದ ಅಭಿವ್ಯಕ್ತಿ ಎನಿಸಿಕೊಳ್ಳುತ್ತದೆ. ಈ ದೃಷ್ಟಿಯಿಂದ ಸದ್ಯದ ಮುಂಬೈ ಭಯೋತ್ಪಾದನೆ ಪ್ರಕರಣ ನಮ್ಮನ್ನು ಈ ಎರಡೂ ಪ್ರಶ್ನೆಗಳ ಸಮೀಪಕ್ಕೆ ಕೊಂಡೊಯ್ಯುತ್ತದೆ.

ಈ ಭಯೋತ್ಪಾದಕರು ಎಷ್ಟು ಆರಾಮವಾಗಿ ಮುಂಬೈ ನಗರವನ್ನು ಪ್ರವೇಶಿಸಿ ಬಹಿರಂಗ ಹಿಂಸಾಚಾರಕ್ಕೆ ಇಳಿದರು ಎಂದರೆ, ಈ ದೇಶ ಮತ್ತು ಈ ನಗರ ಭಯೋತ್ಪಾದನೆಯ ತಲ್ಲಣವನ್ನು ಈ ಮುಂಚೆ ಎದುರಿಸಿಯೇ ಇಲ್ಲವೇನೋ ಎಂಬಷ್ಟು ನಿರಾಂತಕದಲ್ಲಿತ್ತು ಎಂಬುದನ್ನು ನಾವು ಗಮನಿಸಬೇಕು. ಸಾಮಾನ್ಯ ಜನರ, ಆಡಳಿತಗಾರರ, ರಾಜಕಾರಣಿಗಳ ಸಾರ್ವಜನಿಕ ನಿರ್ಲಕ್ಷ್ಯದ ಪರಮಾವಧಿ ಇದು. ಇದರ ಹಿಂದೆ ಇತ್ತೀಚೆಗೆ ಕಟ್ಟಲಾಗುತ್ತಿರುವ ಒಂದು ರಾಷ್ಟ್ರೀಯ ಜೀವನ ದೃಷ್ಟಿಕೋನದ ದೊಡ್ಡ ದೋಷವೇ ಇದೆ. ವಿಶೇಷವಾಗಿ ನಮ್ಮ ನಗರ-ಪಟ್ಟಣಗಳಲ್ಲಿ ಇದು ಎದ್ದು ಕಾಣುವಂತಿದೆ. ಅದೆಂದರೆ, ಜೀವನ ಇರುವುದು ಸ್ಪರ್ಧಾತ್ಮಕ ದುಡಿಮೆಯಲ್ಲಿ ಮುಳುಗಿ ಆದಷ್ಟೂ ಹೆಚ್ಚು ಸಂಪಾದಿಸುವುದು ಮತ್ತು ಇದಕ್ಕೆ ತಕ್ಕ ಹಾಗೆ ಸೃಷ್ಟಿಯಾಗುತ್ತಿರುವ ಹೊಸ ಹೊಸ ರೀತಿಯ ಮೋಜು-ಮಸ್ತಿಗಳಲ್ಲಿ ತೊಡಗಿ ಮೈಮರೆಯುವುದು. ಇದು ಎಲ್ಲರಿಗೂ ಸಾಧ್ಯವಾಗಿಲ್ಲ ಎನ್ನುವುದು ನಿಜವಾದರೂ, ಈ 'ತೀಟೆ' ಎಲ್ಲರ ಮೈ ಹೊಕ್ಕಿದೆ ಎಂಬುದಂತೂ ನಿಜ. ಹಾಗಾಗಿಯೇ ಭಯೋತ್ಪಾದಕರು ರಾಜಾರೋಷವಾಗಿ ಜನರ ಮಧ್ಯೆಯೇ ದೋಣಿಗಳಲ್ಲಿ ಬಂದಿಳಿದು, ಜನರ ಮಧ್ಯೆಯೇ ಶಸ್ತ್ರಾಸ್ತ್ರಗಳ ಚೀಲಗಳನ್ನು ಹೊತ್ತುಕೊಂಡು ತಂತಮ್ಮ ಕಾರ್ಯಾಚರಣೆಗಳ ಜಾಗಗಳನ್ನು ಸೇರಿದ್ದಾರೆ. ಅಷ್ಟೇ ಅಲ್ಲ, ತೆರೆದಿಟ್ಟಿದ್ದ ಪೋಲೀಸ್ ಜೀಪುಗಳನ್ನು ಹೊಕ್ಕು ಪರಾರಿಯಾಗಲೂ ಅವರಿಗೆ ಸಾಧ್ಯವಾಗಿದೆ. ಕುತೂಹಲಗೊಂಡ ಒಂದಿಬ್ಬರು ಭಯೋತ್ಪಾದಕರನ್ನು ನೀವು ಯಾರೆಂದು ವಿಚಾರಿಸುವ ಪ್ರಯತ್ನ ಮಾಡಿದರಾದರೂ, ಅವರು ಕೊಟ್ಟ 'ನಿಮ್ಮ ಕೆಲಸ ನೀವು ನೋಡಿಕೊಳ್ಳಿ' ಎಂಬ ಉತ್ತರದಿಂದ ಸಂತೃಪ್ತಗೊಂಡು, ಇದನ್ನು ಪೋಲೀಸರಿಗೂ ತಿಳಿಸದಷ್ಟು ನಿರಾತಂಕಿತರಾಗಿ ತಮ್ಮ ದಾರಿ ಹಿಡಿದಿದ್ದಾರೆ! ಇಂತಹ ಲೋಕಾಭಿರಾಮೀ ಜನರಿರುವ ದೇಶವನ್ನು ಭಯೋತ್ಪಾದನೆ ಪೀಡಿತ ದೇಶವೆಂದು ಕರೆಯುವುದಾದರೂ ಹೇಗೆ?

ನಗರಗಳೇ ಹಾಗೆ. ಅದರ ಕೈ ಕಾಲು, ಬಾಯಿ ಇತ್ಯಾದಿ ಅಂಗಗಳು ಸದಾ ಕ್ರಿಯಾಶೀಲವಾಗಿದ್ದರೂ, ಮನಸ್ಸು ಮಾತ್ರ ಸ್ಥಗಿತಗೊಂಡಿರುತ್ತದೆ. ನಮ್ಮ ಮಾಧ್ಯಮ ತಜ್ಞರು ಮತ್ತು ಸಾಮಾಜಿಕ ಮುಖಂಡರು ಇದನ್ನು ನಗರ ಜೀವನದ ವಿಶಿಷ್ಟ

'ಸ್ಥೈರ್ಯ'ವೆಂದೂ ಕರೆಯುವುದುಂಟು! ಈ ಹಿಂದಿನ ಭಯೋತ್ಪದನಾ ಪ್ರಕರಣಗಳ ಸಂದರ್ಭದಲ್ಲಿ, ಭಯೋತ್ಪಾದನೆಯ ಅನಾಹುತಗಳೆಲ್ಲ ಮುಗಿದ ಒಂದೇ ದಿನದಲ್ಲೋ, ಒಂದೇ ತಾಸಿನಲ್ಲೋ ನಗರದ ಜನಜೀವನ ಮತ್ತೆ ಮಾಮೂಲು ಸ್ಥಿತಿಗೆ ಮರಳಿದೆ ಎಂದು ತಮ್ಮ ನಗರದ spiritನ್ನು ಹಾಡಿ ಹೊಗಳಿದವರೇ ಇವರೆಲ್ಲ. ಅಂದರೆ, ಇವರ ಪ್ರಕಾರ ಇವರು ಪ್ರತಿನಿಧಿಸುವ ಹಿತಾಸಕ್ತಿಗಳ ವ್ಯಾಪಾರ-ವ್ಯವಹಾರಗಳಿಗೆ ಯಾವುದೇ ಅಡೆ-ತಡೆಯಾಗದಿರುವುದೇ ನಗರದ spirit! ಇಂತಹ ಆತ್ಮಘಾತುಕ spiritನಲ್ಲಿ ಅಂತರ್ಗತವಾಗಿರುವ ವೇಗ ಮತ್ತು ಗದ್ದಲಗಳೇ ಇಂದು ಮುಂಬೈಯನ್ನು ಯುದ್ಧಭೂಮಿಯಾಗಿಸಲು ಕಾರಣವಾಗಿದ್ದುದು. ಈ ವೇಗ ಮತ್ತು ಗದ್ದಲಗಳು ನಿಂತಿರುವುದೇ ನಾವೊಂದು ಸಮಾಜ ಮತ್ತು ರಾಷ್ಟ್ರ ಎಂಬ ಮರೆವಿನ ಮೇಲೆ. ಈ ಮರೆವೇ ನಮ್ಮ ವ್ಯವಸ್ಥೆಯ ಎಲ್ಲ ಅಸಮಾನತೆ, ಭ್ರಷ್ಟತೆ, ಸಿನಿಕತೆ, ಹಿಂಸೆ ಮತ್ತು ಕೋಮುವಾದಗಳಿಗೆ ಕಾರಣವಾಗಿರುವುದು.

ಈ ರೋಗಗಳಿಗೆ ಒಳಗಾದ ವ್ಯವಸ್ಥೆ, ಎಲ್ಲ ರೀತಿಯಲ್ಲೂ ಅಸೂಕ್ಷ್ಮವಾಗಿ, ಬೇಜವಾಬ್ದಾರವಾಗಿ ಹೊರಗಿನ ಆಕ್ರಮಣವನ್ನು ಎದುರಿಸುವ ಪ್ರತಿರೋಧ ಶಕ್ತಿಯನ್ನು ಕಳೆದುಕೊಳ್ಳುತ್ತದೆ. ಅಷ್ಟೇ ಅಲ್ಲ, ಇಂತಹ ಆಕ್ರಮಣಗಳ ಸಾಧ್ಯತೆಗೂ ಜಡವಾಗುವ ಸ್ಥಿತಿಗೆ ಈಡಾಗುತ್ತದೆ. ಒಂದೇ ಮಾತಿನಲ್ಲಿ ಹೇಳುವುದಾದರೆ, ಇಂದಿನ ಅಭೂತಪೂರ್ವ ಎಂದು ಹೇಳಲಾಗುತ್ತಿರುವ 'ಪ್ರಗತಿ'ಯ ರೀತಿ ನೀತಿಗಳು ಮನುಷ್ಯರನ್ನು ಹಂದಿಗಳನ್ನಾಗಿ ಮಾಡುತ್ತಿದೆ. ಇವರಲ್ಲಿ ರಾಜಕಾರಣಿಗಳು, ಅಧಿಕಾರಿಗಳು, ಬುದ್ಧಿಜೀವಿಗಳು, ಉದ್ಯಮಿಗಳು, ನೌಕರರು, ಬೇಹುಗಾರರು, ಸಾಮಾನ್ಯ ಜನ ಎಲ್ಲ ಸೇರಿದ್ದಾರೆ. ಹೀಗಾಗಿ, ಅನಿವಾರ್ಯವಾದಾಗಲಾದರೂ ಒಂದಿಷ್ಟು ಮೌನಕ್ಕೆ, ಆತ್ಮಾವಲೋಕನಕ್ಕೆ ಅವಕಾಶವಿಲ್ಲದ 'ನಿರಂತರ ದುಡಿಮೆ ಮತ್ತು ಮಜಾ' ಸಂಸ್ಕೃತಿಯೇ ಇಂದು ರಾಷ್ಟ್ರದ ಹೆಮ್ಮೆಯ 'ಅಭಿವೃದ್ಧಿ ಸಂಸ್ಕೃತಿ' ಎನ್ನಿಸಿಕೊಂಡುಬಿಟ್ಟಿದೆ. ಅದು ನಮ್ಮ ಇಡೀ ವ್ಯವಸ್ಥೆಯನ್ನು ಬುಡದಿಂದ ತುದಿವರೆಗೆ ನೈತಿಕವಾಗಿ ದಿವಾಳಿ ಎಬ್ಬಿಸಿ, ನಮ್ಮ ನಗರಗಳು ಪದೇ ಪದೇ ಭಯೋತ್ಪಾದನೆಗೆ ಬಲಿಯಾಗುತ್ತಿರುವುದಕ್ಕೆ ಕಾರಣವಾಗಿದೆ. ಇದಕ್ಕೆ ಯಾವುದೇ ಅಪವಾದವಿಲ್ಲದೆ, ನಮ್ಮ ಎಲ್ಲ ರಾಜಕೀಯ ಪಕ್ಷಗಳ ಸಮಾನ ಕೊಡುಗೆ ಇದೆ ಎಂಬುದನ್ನೂ ನಾವು ಮರೆಯಬಾರದು

ಇನ್ನು ಈ ಬಾರಿ ಭಯೋತ್ಪಾದಕರನ್ನು ಹಿಡಿಯಲು, ಕೊಲ್ಲಲು ನಮ್ಮ ರಕ್ಷಣಾ ದಳ ಪಟ್ಟ ಪರಿಶ್ರಮವನ್ನೇ ಗಮನಿಸಿ. ಚಲಿಸುತ್ತಲೇ ಇರುವ ದಟ್ಟ ಜನಸಂದಣಿ, ಶಾಖೋಪಶಾಖೆಗಳಾಗಿ ಒಡೆದು ವಿಸ್ತರಿಸಿಕೊಳ್ಳುತ್ತಲೇ ಹೋಗುವ ಇಕ್ಕಟ್ಟಾದ ರಸ್ತೆಗಳು, ಒತ್ತೊತ್ತಾಗಿ ಕಟ್ಟಲ್ಪಟ್ಟಿರುವ ಬೃಹತ್ ಕಟ್ಟಡಗಳು, ಅಂತಾರಾಷ್ಟ್ರೀಯ ಆಡಳಿತ ಜಾಲಕ್ಕೆ ಸೇರಿದ ಮತ್ತು ಜಟಿಲ ವಾಸ್ತು ವಿನ್ಯಾಸದ ಹಲವು ಅಂತಸ್ತುಗಳ ನೂರಾರು ಕೋಣೆಗಳ ಹೋಟೆಲ್‌ಗಳು ಮತ್ತು ಭವನಗಳು. ಇವುಗಳ ಒಳಹೊಕ್ಕ ಹತ್ತು ಜನ ಭಯೋತ್ಪಾದಕರನ್ನು ಹಿಡಿಯಲು, ಕೊಲ್ಲಲು ನಮ್ಮ ಕಮಾಂಡೋಗಳಿಗೆ ನೂರಕ್ಕೂ ಹೆಚ್ಚು ಜನ ಅಮಾಯಕರ

ಸಾವು ಮತ್ತು ಮೂರು ದಿನಗಳು ಬೇಕಾದವು! ಹಾಗೆ ನೋಡಿದರೆ, ನಮ್ಮ ನಗರಗಳ ಸ್ವರೂಪವೇ ಭಯೋತ್ಪಾದಕರಿಗೆ ಆಹ್ವಾನ ನೀಡುವಂತಿದೆ. ಗಾಂಧಿ ತಮ್ಮ 'ಹಿಂದ್ ಸ್ವರಾಜ್'ನಲ್ಲಿ ನಗರಗಳು ಎಂದರೆ ಹಾವಿನ ಹುತ್ತಗಳು ಇದ್ದಂತೆ ಎಂದಿದ್ದುದು ಈ ಅರ್ಥದಲ್ಲಿಯೇ. ನಗರ ಎಂದರೆ, ಎಲ್ಲ ಕಳ್ಳಕಾಕರು, ದುಷ್ಟರು, ಭ್ರಷ್ಟರು, ತಲೆಹಿಡುಕರು ಒಬ್ಬರನ್ನೊಬ್ಬರು ಅವಲಂಬಿಸಿಕೊಂಡು ಸುರಕ್ಷಿತವಾಗಿರಲು ವಿನ್ಯಾಸ ಮಾಡಿಕೊಂಡಿರುವ ವ್ಯವಸ್ಥೆ ಎಂದು ವರ್ಣಿಸಿ, ಇಂತಹ ನಗರೀಕರಣವನ್ನು ಪ್ರೋತ್ಸಾಹಿಸುವ–ಆಕಾಶಕ್ಕೆ ಏಣಿ ಹಾಕಿಕೊಂಡ–ಕೈಗಾರಿಕೀಕೃತ ಅಭಿವೃದ್ಧಿಗೆ ಬದಲಾಗಿ, ತನ್ನ ಮಿತಿಗಳಲ್ಲೇ ನೆಮ್ಮದಿಯನ್ನು ಸೃಷ್ಟಿಸಬಲ್ಲ–ಈ ಭೂಮಿಗೇ ಅಂಟಿಕೊಂಡ–ಕೃಷಿ ಸಂಸ್ಕೃತಿ ಆಧಾರಿತ ಗ್ರಾಮ 'ಸ್ವರಾಜ್ಯ'ದ ಹಾದಿಯಲ್ಲಿ ನಡೆಯಬೇಕೆಂದು ಸೂಚಿಸಿದ್ದರು. ಅವರ ಮಾತುಗಳನ್ನು ಕೇಳಿ ನಕ್ಕಿದ್ದ ಭಾರತ, ಇಂದು ಆ ನಗುವಿನ ಹಿಂದಿದ್ದ ವ್ಯಂಗ್ಯಕ್ಕೆ ತಾನೇ ಈಡಾಗುತ್ತಿದೆ.

ಇಂದು ಆಧುನಿಕ ಭಾರತ 'ಪ್ರಗತಿ'ಯ ಹೆಸರಿನಲ್ಲಿ ಚಲಿಸುತ್ತಿರುವ ದಿಕ್ಕಿನಲ್ಲೇ, ಆ ಚಲನೆಯನ್ನು ನಿರ್ದೇಶಿಸುತ್ತಿರುವ ರಾಜಕಾರಣದಲ್ಲೇ ಹಿಂಸೆ ಅಂತರ್ಗತವಾಗಿದೆ. ಅದು ಎಲ್ಲ ರೂಪಗಳ ಮೂಲಕ ಹಾದುಹೋಗಿ ಈಗ ಭಯೋತ್ಪಾದನೆಯ ಅಂತಿಮರೂಪ ತಾಳಿದೆ. ಆದರೆ ಇಂದಿನ ಈ ಪ್ರಗತಿಯ ವೇಗಕ್ಕೆ ಸಿಕ್ಕಿರುವ ನಾವು, ಆ ವೇಗ ಹುಟ್ಟಿಸಿರುವ ಮನಸ್ಸಿನ 'ಗದ್ದಲ'ದಲ್ಲಿ ಇದನ್ನು ಅರ್ಥ ಮಾಡಿಕೊಳ್ಳುವ ವ್ಯವಧಾನವಾಗಲೀ, ಸಹನೆಯಾಗಲೀ ಇಲ್ಲದೆ, ಇದಕ್ಕೆ ಬೇರೇನೋ–Short cutಗಳ–ಪರಿಹಾರಗಳನ್ನು ಹುಡುಕುವ ಯತ್ನದಲ್ಲಿದ್ದೇವೆ. ಮತ್ತು ಈ ಪರಿಹಾರಗಳು ಪದೇ ಪದೇ ವಿಫಲಗೊಳ್ಳುತ್ತಿರುವುದನ್ನು ನೋಡಿ, ಇನ್ನಷ್ಟು ಹತಾಶರಾಗುತ್ತಿದ್ದೇವೆ. ಈ ಹತಾಶೆಯಲ್ಲಿ ಮನಸ್ಸಿನಲ್ಲಿ ಅಡಗಿದ್ದ ಭೂತಗಳೆಲ್ಲ ಎದ್ದು ಮನಸ್ಸಿನ ಕೋಮುವಾದೀಕರಣ, ವಿಕ್ಷಿಪ್ತೀಕರಣ, ಹಿಂಸೀಕರಣಗಳಿಗೆ ಕಾರಣವಾಗುತ್ತಿವೆ. ಮುಸ್ಲಿಂ ಭಯೋತ್ಪಾದನೆಯನ್ನು ಎದುರಿಸಲು ಹಿಂದೂ ಭಯೋತ್ಪಾದನೆಯ ಸೃಷ್ಟಿ, ಪಾಕಿಸ್ತಾನದ ನಾಶಕ್ಕೆ ಕರೆ, ಎಕೆ–೪೭ ಬಂದೂಕು ಇತ್ಯಾದಿ ಆಧುನಿಕ ಶಸ್ತ್ರಾಸ್ತ್ರಗಳನ್ನು ಕೊಳ್ಳಲು ಅನುಮತಿ ನೀಡುವಂತೆ ಖಾಸಗಿ ಕಂಪನಿಗಳು ಇಡಲಾರಂಭಿಸಿರುವ ಬೇಡಿಕೆ ಇತ್ಯಾದಿಗಳು ಇದಕ್ಕೆ ಉದಾಹರಣೆಗಳಷ್ಟೆ. ಇವು ಭಯೋತ್ಪಾದನೆ ಹೊಸ ಹೊಸ ರೂಪಗಳನ್ನು ತಾಳಿ ಮತ್ತು ಇನ್ನಷ್ಟು ಉಲ್ಬಣಗೊಳ್ಳಲು ಕಾರಣವಾಗುತ್ತವಷ್ಟೆ. ಎಷ್ಟು ದಿಕ್ಕುಗಳಲ್ಲಿ ಎಷ್ಟು ಜನರನ್ನು ಕಾಯುತ್ತೀರಿ? ಎಷ್ಟು ಜನರನ್ನು ಎಷ್ಟು ದಿನಗಳವರೆಗೆ ಕೊಲ್ಲುತ್ತಾ ಹೋಗುತ್ತೀರಿ? ಎಕೆ–೪೭ ಕೊಳ್ಳಬಲ್ಲವರಿಗಷ್ಟೆ ರಕ್ಷಣೆ ಸಾಕೆ? ಸದಾ ಆತಂಕದಲ್ಲಿ, ಎಚ್ಚರಿಕೆಯಲ್ಲಿರಬೇಕಾದ ಮನಸ್ಸಿಗೆ ಶಾಂತಿ ಎಲ್ಲಿ?

ಹಾಗಾಗಿ, ಮತ್ತೆ ಮತ್ತೆ ಎದುರಾಗುವ ಭಯೋತ್ಪಾದನಾ ಪ್ರಕರಣಗಳನ್ನು ಸಶಕ್ತವಾಗಿ ಎದುರಿಸುತ್ತಲೇ, ಇದರ ಕಾರಣಗಳನ್ನು ಕೂಲಂಕಶವಾಗಿ ಪರಿಶೀಲಿಸುವ ಸಹನೆ ಮತ್ತು ವ್ಯವಧಾನವನ್ನೂ ರೂಢಿಸಿಕೊಳ್ಳುವುದು ಇಂದಿನ ಅಗತ್ಯವಾಗಿದೆ. ಆಗ ಈ ಗಾಂಧಿ ಸತ್ಯಗಳು ಗೋಚರವಾಗಬಹುದು: ಹಾವಿನ ಹುತ್ತಗಳಂತಹ ನಗರಗಳನ್ನು ಕಟ್ಟುವ

ಅಭಿವೃದ್ಧಿ ಪಥವನ್ನು ಆದಷ್ಟು ಬೇಗ ತ್ಯಜಿಸಬೇಕು. ಜನರಲ್ಲಿ ಮಿತಿ ಮೀರಿದ ಸುಖಾಪೇಕ್ಷೆಗಳನ್ನು ಹುಟ್ಟಿಸುವಂತಹ ಸ್ಪರ್ಧಾತ್ಮಕ ದುಡಿಮೆಯ ಮಾದರಿಗಳಿಗೆ ಕಡಿವಾಣ ಹಾಕಬೇಕು. ಭಾರತ ಜಾಗತಿಕ ಶಕ್ತಿಯಾಗಿ ಮೆರೆಯುವ ಕನಸನ್ನೂ, ಹಂಬಲವನ್ನೂ ಕೈ ಬಿಡಬೇಕು. ಇದರ ಭಾಗವಾಗಿ, ತನ್ನ ನೆರೆಹೊರೆಯ ಎಲ್ಲ ದೇಶಗಳೊಂದಿಗೆ ಸಮಾನತೆಯ ಆಧಾರದ ಮೇಲೆ ಸಂಬಂಧಗಳನ್ನು ಪುನರ್ವಿನ್ಯಾಸಗೊಳಿಸಿಕೊಳ್ಳಬೇಕು. ವಿಶೇಷವಾಗಿ ಪಾಕಿಸ್ತಾನದೊಡನೆಯ ಗಡಿಯನ್ನು ಅಪ್ರಸ್ತುತಗೊಳಿಸಿಕೊಳ್ಳುವ ರೀತಿಯಲ್ಲಿ, ಎರಡೂ ಕಡೆ ವಿಶ್ವಾಸವನ್ನು ಕುದುರಿಸುವ ನಿರ್ಣಾಯಕ 'ದುಸ್ಸಾಹಸ'ಕ್ಕೆ ಸಿದ್ಧವಾಗುವ ಧೈರ್ಯ ತೋರಬೇಕು. ಸಂಪತ್ತು ಮತ್ತು ಸೇನೆಯ ಶಕ್ತಿಗಿಂತ ಹೆಚ್ಚಾಗಿ ನೈತಿಕ ಶಕ್ತಿಯ ಆಧಾರದ ಮೇಲೆ ಜಾಗತಿಕವಾಗಿ ತನ್ನ ಸ್ಥಾನದ ಮಹತ್ವವನ್ನು ಹೆಚ್ಚಿಸಿಕೊಳ್ಳುವ ಪ್ರಯತ್ನಗಳನ್ನು ಮಾಡಬೇಕು. ಪಶ್ಚಿಮದ ಕೈಗಾರಿಕಾ ನಾಗರೀಕತೆ ವೈವಿಧ್ಯಮಯ ಹಿಂಸೆಯನ್ನು ಜಗತ್ತಿನಾದ್ಯಂತ ಹುಟ್ಟುಹಾಕಿ ತನ್ನ ಗೋರಿಯನ್ನು ತಾನೇ ತೋಡಿಕೊಳ್ಳುತ್ತಿರುವ ಈ 'ಐತಿಹಾಸಿಕ' ಸಂದರ್ಭದಲ್ಲಿ, ಇದರಿಂದಾಗಿಯೇ ಸ್ವತಃ ಅಸಹನೀಯ ಹಿಂಸೆಗೆ ಗುರಿಯಾಗಿರುವ ಭಾರತ; ಹೀಗೆ ಜಗತ್ತಿಗೆ ಒಂದು ಪರಿಹಾರದ ಮಾದರಿಯನ್ನು ನಿರ್ಮಿಸಬಹುದಾಗಿದೆ.

ಇದೊಂದೇ–ಅಸಾಧ್ಯವೆನಿಸುವಷ್ಟು–ದೂರದಲ್ಲಿಯಾದರೂ ಕಾಣುತ್ತಿರುವ ಪರಿಹಾರವಾಗಿದೆ.

(ಡಿಸೆಂಬರ್, ೨೦೦೮)

■

ಹುಚ್ಚು ಹೊಳೆಯಲ್ಲಿ ತೇಲುತ್ತಾ ಮುಳುಗುತ್ತಾ.....

ಇವರೆಲ್ಲ ಸೇರಿ ಕಳೆದ ಐವತ್ತು ವರ್ಷಗಳಲ್ಲಿ ಬೆಂಗಳೂರನ್ನು ಸರಳ ಸುಂದರ ನಗರವನ್ನಾಗಿ ಸಂರಕ್ಷಿಸಿಕೊಂಡು ಬಂದಿದ್ದ ಬಡವರು ಮತ್ತು ಮಧ್ಯಮ ವರ್ಗದವರು ಇಂದು ಇಲ್ಲಿ ಮರ್ಯಾದೆಯಿಂದ ಬಾಳಲಾಗದ ಪರಿಸ್ಥಿತಿಯನ್ನು ನಿರ್ಮಿಸಿದ್ದಾರೆ. ಮರ್ಯಾದೆಯಿಂದ ಬಾಳುವುದು ಎನ್ನುವುದನ್ನು ಕೇವಲ ಜೀವನ ಮಟ್ಟದ ಮಾತನ್ನಾಗಿ ಮಾತ್ರವಲ್ಲ, ಜೀವನ ಶೈಲಿಯ ಮಾತನ್ನಾಗಿಯೂ ಅರ್ಥ ಮಾಡಿಕೊಳ್ಳಬೇಕಿದೆ. ಕಳೆದ ಹೊಸ ವರ್ಷಾಚರಣೆ ಸಂದರ್ಭದಲ್ಲಿ ಬೆಂಗಳೂರು ಒಂದೇ ರಾತ್ರಿಯಲ್ಲಿ ಕುಡಿದದ್ದು ೧೫ ಕೋಟಿ ರೂಪಾಯಿಗಳ ಮದ್ಯವನ್ನು(ರಾಜ್ಯದ ಉಳಿದ ಭಾಗ ಬಳಸಿದ್ದು ೧೦ ಕೋಟಿ ರೂಪಾಯಿಗಳ ಬೆಲೆಯ ಮದ್ಯವನ್ನು!) ಎಂದರೆ, ಬೆಂಗಳೂರು ಒಂದು ಸಂಸ್ಕೃತಿಯಾಗಿ ಎಂತಹ ಮತ್ತಿನಲ್ಲಿರಬೇಕು!

ಗೆಳೆಯ ಸುಗತಾ ಶ್ರೀನಿವಾಸರಾಜು ಬರೆದ 'ಬೆಂಗಳೂರೇಕೆ ಐ.ಟಿ. ಸಂಸ್ಕೃತಿಯನ್ನು ದ್ವೇಷಿಸುತ್ತದೆ?' ಎಂಬ ವರದಿಯೊಂದು ಹೋದ ವಾರದ 'ಔಟ್‌ಲುಕ್' ಪತ್ರಿಕೆಯಲ್ಲಿ ಪ್ರಕಟವಾಗಿದೆ. ಈ ವರದಿಯಲ್ಲಿ ಮಾತಾಡಿರುವ ಬೆಂಗಳೂರಿನ ಹಿರಿಯ ನಾಗರೀಕರ ಹಾಗೂ ಅನ್ಯ ವೃತ್ತಿಗಳ ಜನರ ಅಭಿಪ್ರಾಯಗಳಲ್ಲಿ ಹೊಸದೇನಿಲ್ಲವಾದರೂ, ನಮ್ಮ ವಿವೇಕವನ್ನು ಉಳಿಸಿಕೊಂಡು ಜಾಗತೀಕರಣದ ಲಾಭ-ಪ್ರಯೋಜನಗಳನ್ನು ಪಡೆಯಲು ಮುಂದಾಗಬಾರದೇಕೆ ಎಂದು ಪ್ರಶ್ನಿಸುತ್ತಿರುವವರಿಗೆ ಇವುಗಳಲ್ಲಿ ಕೆಲವು ಉತ್ತರಗಳೂ, ಸೂಚನೆಗಳೂ ಇವೆ. ಮುಖ್ಯ ಸೂಚನೆ ಎಂದರೆ, ಒಂದು ಮಿತಿಯನ್ನು ಮೀರಿದ ಹಣದ ಹರಿವು ಎಲ್ಲ ವಿವೇಕವನ್ನೂ ಕೊಚ್ಚಿಕೊಂಡು ಹೋಗಬಲ್ಲುದು ಎಂಬುದು. ಬೆಂಗಳೂರಿನ ಇಂದಿನ ದೊಡ್ಡ ಸಮಸ್ಯೆ ಎಂದರೆ, ಕೆಲವರಿಗೆ ತಮ್ಮ ಬಳಿ ಇದ್ದಕ್ಕಿದ್ದಂತೆ ಬಂದಿರುವ ಅಪಾರ ಹಣವನ್ನು ಹೇಗೆ ಖರ್ಚು ಮಾಡಬೇಕೆಂದು ಗೊತ್ತಾಗದ ದಿಗ್ಭ್ರಮೆಯಲ್ಲಿ ಎಲ್ಲ ವಿವೇಕ ಕಳೆದುಕೊಂಡಿರುವುದೇ ಆಗಿದೆ. ಇವರು 'ಔಟ್‌ಲುಕ್' ವರದಿ ಹೇಳುವಂತೆ, ಬರೀ ಐ.ಟಿ. ಜನರಲ್ಲ. ಬೆಂಗಳೂರಿನ ಐ.ಟಿ.-ಬಿ.ಟಿ. ಆಸ್ಫೋಟದಿಂದ ಪ್ರಯೋಜನ ಪಡೆದುಕೊಂಡಿರುವ ಇತರೆಷ್ಟೋ ವೃತ್ತಿಗಳವರು ಇವರಲ್ಲಿ ಸೇರಿದ್ದಾರೆ.

ಉದಾಹರಣೆಗೆ ಭೂ-ವ್ಯವಹಾರ ಮಾಡುವವರು, ಕಟ್ಟಡ ಗುತ್ತಿಗೆದಾರರು, ಷೇರು ದಲ್ಲಾಳಿಗಳು, ಹೊಟೆಲ್-ರೆಸಾರ್ಟ್‌ದಾರರು, ಮನರಂಜನೆ ಹಾಗೂ 'ಅಧ್ಯಾತ್ಮಿಕತೆ'ಯ ಉದ್ಯಮದವರು ಇತ್ಯಾದಿ.

ಇವರೆಲ್ಲ ಸೇರಿ ಕಳೆದ ಐವತ್ತು ವರ್ಷಗಳಲ್ಲಿ ಬೆಂಗಳೂರನ್ನು ಸರಳ ಸುಂದರ ನಗರವನ್ನಾಗಿ ಸಂರಕ್ಷಿಸಿಕೊಂಡು ಬಂದಿದ್ದ ಬಡವರು ಮತ್ತು ಮಧ್ಯಮ ವರ್ಗದವರು ಇಂದು ಇಲ್ಲಿ ಮರ್ಯಾದೆಯಿಂದ ಬಾಳಲಾಗದ ಪರಿಸ್ಥಿತಿಯನ್ನು ನಿರ್ಮಿಸಿದ್ದಾರೆ. ಮರ್ಯಾದೆಯಿಂದ ಬಾಳುವುದು ಎನ್ನುವುದನ್ನು ಕೇವಲ ಜೀವನ ಮಟ್ಟದ ಮಾತನ್ನಾಗಿ ಮಾತ್ರವಲ್ಲ, ಜೀವನ ಶೈಲಿಯ ಮಾತನ್ನಾಗಿಯೂ ಅರ್ಥ ಮಾಡಿಕೊಳ್ಳಬೇಕಿದೆ. ಕಳೆದ ಹೊಸ ವರ್ಷಾಚರಣೆ ಸಂದರ್ಭದಲ್ಲಿ ಬೆಂಗಳೂರು ಒಂದೇ ರಾತ್ರಿಯಲ್ಲಿ ಕುಡಿದದ್ದು ೧೫ ಕೋಟಿ ರೂಪಾಯಿಗಳ ಮದ್ಯವನ್ನು (ರಾಜ್ಯದ ಉಳಿದ ಭಾಗ ಬಳಸಿದ್ದು ೧೦ ಕೋಟಿ ರೂಪಾಯಿಗಳ ಬೆಲೆಯ ಮದ್ಯವನ್ನು!) ಎಂದರೆ, ಬೆಂಗಳೂರು ಒಂದು ಸಂಸ್ಕೃತಿಯಾಗಿ ಎಂತಹ ಮತ್ತಿನಲ್ಲಿರಬೇಕು! ಈ ಮತ್ತಿನಲ್ಲಿ 'ವಿವೇಕ'ವೆಂಬ ಶಬ್ದವೇ ಅರ್ಥಾಂತರಕ್ಕೊಳಗಾಗಿದ್ದರೂ ಸಾಕು!

ಐ.ಟಿ. ಸಂಬಂಧಿತ ಉದ್ಯಮಗಳ ಪಾಳಿ ಕೆಲಸದ ಮಹಿಳೆಯರು ಒಂದಲ್ಲ ಒಂದು ರೀತಿಯಲ್ಲಿ ಸದಾ ಪ್ರಾಣ ಭಯದಿಂದ ಕೆಲಸ ಮಾಡುವಂತಾಗಿರುವುದು-ಇತ್ತೀಚಿನ ದಿನಗಳಲ್ಲಿ ಕೊಲೆಗೆ ಈಡಾಗುತ್ತಿರುವುದೂ-ಆ ಉದ್ಯಮದ ಸ್ವರೂಪವೇ ಪ್ರೇರೇಪಿಸುವ ಜೀವನ ಶೈಲಿಯಿಂದ ಉದ್ಭವಿಸಿರುವ ಅಪಾಯವಾಗಿದೆ. ಇದು ಅವರ ಜೀವನ 'ಶೈಲಿ'ಗಳನ್ನು ಹತ್ತಿರದಿಂದ ಕಂಡವರ ಅಭಿಪ್ರಾಯವಾಗಿದೆ. ಇಂದು ಮೂಲ ಬೆಂಗಳೂರಿಗರು ಈ ಹೊಸ 'ಸಾಹುಕಾರ'ರನ್ನು ದ್ವೇಷಿಸಲು ಮುಖ್ಯ ಕಾರಣ; ಅವರು ಬೆಂಗಳೂರಿಗೆ ನಿಜವಾಗಿ ಏನನ್ನೂ ಕೊಡದೆ, ತಮ್ಮ ಜೀವನ ಶೈಲಿಗಳ ಒತ್ತಡಗಳು ಹಾಗೂ ಬೇಡಿಕೆಗಳ ಮೂಲಕ ಅದನ್ನು ನಾಶ ಮಾಡತೊಡಗಿರುವುದು. ಭೌತಿಕವಾಗಿ ಹಾಗೂ ಆತ್ಮಿಕವಾಗಿ-ಈ ಎರಡೂ ನೆಲೆಗಳಲ್ಲಿ. ಇದನ್ನು ಅತ್ಯಂತ ಪರಿಣಾಮಕಾರಿಯಾಗಿ ಇತ್ತೀಚೆಗೆ ಹೇಳಿರುವವರು ಭಾರತದ ಅತ್ಯಂತ ಶ್ರೇಷ್ಠ ವಿಜ್ಞಾನಿ ಎನಿಸಿರುವ ಡಾ॥ ಸಿ.ಎನ್.ಆರ್.ರಾವ್ ಅವರು. ಅವರು 'ಔಟ್‌ಲುಕ್'ಗಾಗಿ ಸುಗತಾ ಅವರಿಗೆ ಹೇಳಿರುವ ಮಾತುಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ನೀಡುತ್ತಿರುವೆ:

'ನಾನೊಬ್ಬ ನಿಜವಾದ ಬೆಂಗಳೂರಿಗ. ಬಸವನಗುಡಿಯಲ್ಲಿ ಹುಟ್ಟಿ ಬೆಳೆದವನು. ಬೆಂಗಳೂರಿನ ದೊಡ್ಡ ಗುಣ ಎಂದರೆ, ಇಲ್ಲಿ ಸರಳ ಸಂತೋಷಕ್ಕೆ ಅವಕಾಶವಿತ್ತು. ವಿದ್ಯಾರ್ಥಿ ಭವನದಲ್ಲಿ ಒಂದು ಮಸಾಲೆ ದೋಸೆ ತಿಂದು ಕಾಫಿ ಕುಡಿದರೆ ಅದೇ ಒಂದು ದೊಡ್ಡ ಸಂತೋಷ. ಈಗ ಆ ಸಂತೋಷ ಬೆಂಗಳೂರಲ್ಲಿ ಕಾಣೆಯಾಗಿದೆ. ಈಗ ಇದೊಂದು ಭಯಂಕರ ನಗರವಾಗಿ ಬೆಳೆದಿದೆ. ಐ.ಟಿ. ಸ್ಫೋಟದ ಮುನ್ನ ಇಲ್ಲಿ ಕಾವ್ಯ ಹಾಗೂ ಸಂಗೀತ ಹೆಚ್ಚಿರುತ್ತಿತ್ತು. ಇತ್ತೀಚಿನ ದಿನಗಳಲ್ಲಿ ಈ ನಗರ ಕೊಳೆತು ನಾರುತ್ತಿದೆ-ಐ.ಟಿ. ಕೈಗಾರಿಕೆಯವರು ತಂದು ಒಟ್ಟುತ್ತಿರುವ ಬೌದ್ಧಿಕ ಕಸವೂ ಸೇರಿದಂತೆ,

ಎಲ್ಲ ತರದ ಕಸ-ಕೊಳೆ ಊರು ತುಂಬಾ ಬಿದ್ದಿದೆ: ವಾತಾವರಣವನ್ನು ಮಲಿನಗೊಳಿಸಿದೆ.

ಬೆಂಗಳೂರು ಒಂದು ಬೌದ್ಧಿಕ ನಗರವಾಗಿತ್ತು. ಇದನ್ನು ತೋಟಗಳ ನಗರ ಎಂದು ಕರೆಯಲಾಗುತ್ತಿತ್ತಾದರೂ, ಭಾರತದ ಇತರ ನಗರಗಳಿಗಿಂತ ಇಲ್ಲಿ ಹೆಚ್ಚು ವಿಜ್ಞಾನವಿತ್ತು. ಈಗ ಯಾರೂ ಈ ಬಗ್ಗೆ ಮಾತಾಡುವುದಿಲ್ಲ. ಇದು ಈಗ ಐ.ಟಿ. ನಗರ. ನಮ್ಮ ಹೆಚ್ಚೆಚ್ಚು ಯುವಜನರಿಗೆ ಒಳ್ಳೊಳ್ಳೆಯ ಸಂಬಳ ಸಿಗುವಂತಾಗುವುದು ಸಂತೋಷದ ವಿಷಯವೇ. ಆದರೆ ಅದು ಇತರ ವೃತ್ತಿಗಳ ಪ್ರಾಣವನ್ನೇ ಹೀರುವಂತಾಗ ಬಾರದು. ಕ್ಷಿಪ್ರ ಹಣದ ಹಿಂದೆ ಬಿದ್ದ ಬಹಳಷ್ಟು ಬುದ್ಧಿವಂತ ಯುವಜನರು ತಮ್ಮ ಬೌದ್ಧಿಕತೆಯ ಬಹು ಕಡಿಮೆ ಮಟ್ಟದ ವೃತ್ತಿಗಳಲ್ಲಿ, ಸಂಬಳದ ಮೇಲಿನ ಕೂಲಿಗಳಂತೆ ಕೆಲಸ ಮಾಡುತ್ತಿದ್ದಾರೆ. ಇದು ವಕ್ರ ಬೆಳವಣಿಗೆ. ಇದರಿಂದ ರಾಷ್ಟ್ರಕ್ಕೂ ಒಳ್ಳೆಯದಾಗದು. ಸಮಾಜದಲ್ಲಿ ಎಲ್ಲ ರೀತಿಯ ಸೃಜನ ಶಕ್ತಿಗಳ ಸಮತೋಲನವಿರಬೇಕು-ಒಳ್ಳೆಯ ಕವಿಗಳಿರಬೇಕು, ಒಳ್ಳೆಯ ಅರ್ಥಶಾಸ್ತ್ರಜ್ಞರಿರಬೇಕು, ಒಳ್ಳೆಯ ಇತಿಹಾಸಕಾರರಿರಬೇಕು, ಅತ್ಯುತ್ತಮ ವಿಜ್ಞಾನಿಗಳೂ, ಎಂಜಿನಿಯರ್‌ಗಳೂ ಇರಬೇಕು. ಐ.ಟಿ.ಯಲ್ಲಿ ಜಗತ್ತಿನಲ್ಲೇ ಅಪೂರ್ವ ಸಾಧನೆ ಮಾಡಿರುವುದಾಗಿ ಹೇಳಿಕೊಳ್ಳುವ ನಮ್ಮ ದೇಶದಲ್ಲಿ, ಕಂಪ್ಯೂಟರ್ ವಿಜ್ಞಾನ ಕ್ಷೇತ್ರದಲ್ಲಿ ಏಕೆ ವರ್ಷಕ್ಕೆ ಕೇವಲ ೨೫ ಪಿ.ಎಚ್.ಡಿ.ಗಳು ಮಾತ್ರ ಸಾಧ್ಯವಾಗುತ್ತಿದೆ? ಇದಕ್ಕೆ ಉತ್ತರ ಕೊಡುವರಾರು?

ಕೆಲವರಿಗೆ ಅಪಾರ ಹಣ ತಂದು ಕೊಟ್ಟಿರುವುದರ ಹೊರತಾಗಿ ಐ.ಟಿ. ಇಲ್ಲಿ ಏನು ಸಾಧಿಸಿದೆ? ತನ್ನದೇ ಆದ ಉತ್ತಮ ಗುಣಮಟ್ಟದ ವಿಶ್ವವಿದ್ಯಾಲಯವೊಂದನ್ನು ಕಟ್ಟಲು ಸಾಧ್ಯವಾಗಿದೆಯಾ ಅದಕ್ಕೆ? ನಮ್ಮ ಈ ಸಮಾಜ; ಈ ನಗರದ ಮಾತ್ರವಲ್ಲ, ಇಡೀ ಭಾರತದ ಭವಿಷ್ಯವನ್ನು, ನಮ್ಮ ಮೌಲ್ಯ ವ್ಯವಸ್ಥೆಯನ್ನು ವಿಕೃತಗೊಳಿಸುತ್ತಿರುವ ಅನುಕರಣೆಯ ಮೂರ್ತಿಗಳನ್ನೂ, ಉದಾಹರಣೆಗಳನ್ನೂ ಅದು ನಿರ್ಮಿಸುತ್ತಿದೆ. ನಮ್ಮ ಜನಕ್ಕೆ ಜ್ಞಾನ-ವಿಜ್ಞಾನಗಳ ಬಗ್ಗೆ ಗೌರವವೇ ಹೋಗಿಬಿಟ್ಟಿದೆ. ಹಣ ಹಾಗೂ ವಾಣಿಜ್ಯದ್ದೇ ಸಾಮ್ರಾಜ್ಯವೀಗ. ಐ.ಟಿ. ನಮ್ಮ ಆಧಾರ ಮೌಲ್ಯಗಳನ್ನೇ ನಾಶ ಮಾಡಹೊರಡುವು ದಾದರೆ, ಬೆಂಗಳೂರಿಗೂ, ಐ.ಟಿ.ಗೂ ಒಟ್ಟಿಗೇ ಬೆಂಕಿ ಹಾಕಬಹುದು.'

ಸಿ.ಎನ್.ಆರ್. ರಾವ್ ಅವರ ಈ ಸಾತ್ವಿಕ ಕೋಪ, ಸದ್ಯದ ಬೆಂಗಳೂರನ್ನು ಕುರಿತಾದದ್ದಾದರೂ; ಬೆಂಗಳೂರು ಐ.ಟಿ. ಲೋಕ ಪ್ರತಿನಿಧಿಸುವ ಕೆಳ ಮಟ್ಟದ ಬೌದ್ಧಿಕತೆಯೊಂದಿಗೆ ಬಹು ಮೇಲ್ಮಟ್ಟದ ಜೀವನ ಶೈಲಿ ಸಾಧ್ಯವಾಗಿ, ಅದಕ್ಕೊಂದು 'ಗೌರವಾನ್ವಿತತೆ' ಒದಗಿಸಿರುವ ಹೊಸ ಜೀವನ ಸಂಸ್ಕೃತಿಯನ್ನು ಕುರಿತಾದದ್ದೂ ಆಗಿದೆ ಎಂಬುದನ್ನೂ ನಾವು ಗಮನಿಸಬೇಕು. ದಿನೇ ದಿನೇ ಬಹು ಜನಪ್ರಿಯವಾಗುತ್ತಿರುವ- ಅಂದರೆ ಈ 'ಗೌರವಾನ್ವಿತತೆ'ಗೆ ಪಾತ್ರವಾಗುವ ಹಂಬಲ ಇಟ್ಟುಕೊಂಡವರ-ಈ 'ಕು'ಸಂಸ್ಕೃತಿ ಉಂಟು ಮಾಡುತ್ತಿರುವ ಸಾಮಾಜಿಕ ಒತ್ತಡಗಳನ್ನು ಯಾರೂ ಅಷ್ಟು ಗಂಭೀರವಾಗಿ ಗಮನಿಸಿದಂತಿಲ್ಲ: ಮಕ್ಕಳು ಪೋಷಕರ ನಿರೀಕ್ಷೆ ಮುಟ್ಟಲಾಗದೆ ಆತ್ಮಹತ್ಯೆಗೆ ಶರಣಾಗುತ್ತಿವೆ; ಹದಿ ಹರೆಯಕ್ಕೂ ಕಾಲಿಡದ ಹುಡುಗರು ಸುಪಾರಿ ಪಡೆದು ಕೊಲೆಗಳಿಗೆ ಕೈ

ಹಾಕತೊಡಗಿದ್ದಾರೆ, ಉನ್ನತ ಮಟ್ಟದ ಶಾಲೆಗಳಲ್ಲಿ ಮಕ್ಕಳು ತಮ್ಮ ಬಾಲ ಜಗಳಗಳನ್ನು ಅಪ್ಪನ ಪಿಸ್ತೂಲನ್ನು ಬಳಸಿ ಪರಿಹರಿಸಕೊಳ್ಳತೊಡಗಿದ್ದಾರೆ; ಮಕ್ಕಳಿಗೆ ಉದಾಹರಣೆಗಳಾಗಬೇಕಾಗಿರುವ ಉಪಾಧ್ಯಾಯರುಗಳೇ ಪರೀಕ್ಷಾ ಉತ್ತರ ಪತ್ರಿಕೆಗಳನ್ನು ಬದಲಾಯಿಸುವುದನ್ನು ಒಂದು ದಂಧೆ ಮಾಡಕೊಳ್ಳತೊಡಗಿದ್ದಾರೆ; ವಿಶ್ವವಿದ್ಯಾಲಯಗಳ ಪ್ರಶ್ನೆ ಪತ್ರಿಕೆಗಳು ಯಾವುದೇ ಅಡೆತಡೆ ಇಲ್ಲದೆ ಒಂದಾದರ ಮೇಲೊಂದರಂತೆ ಬಯಲಾಗುತ್ತಲೇ ಇವೆ; ಕಣ್ಣೆದುರಿಗೇ ನೂರಾರು ಕಾರ್ಮಿಕರನ್ನೂ, ಯಂತ್ರಗಳನ್ನೂ ಬಳಸಿಕೊಂಡು ಸಾವಿರಾರು ಎಕರೆ ಭೂಮಿಯಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿದ್ದರೂ, ಪ್ರಭುತ್ವಕ್ಕೆ ಅದನ್ನು ಗಮನಿಸಲಾಗದಂತಹ ಕುರುಡು ಉಂಟಾಗಿದೆ; ಸರ್ಕಾರಿ ಖಜಾನೆಯನ್ನು ಲೂಟಿ ಹೊಡೆದು ಮೂಟೆಗಟ್ಟಲೆ ಹಣ ಸಂಗ್ರಹಿಸಿಟ್ಟುಕೊಂಡು, ಆದರೆ ಕಿಂಚಿತ್ತೂ ಸಂಕೋಚವಿಲ್ಲದೆ ರಾಷ್ಟ್ರ ನಿರ್ಮಾಣದ ಮೌಲ್ಯಗಳ ಬಗ್ಗೆ ಮಾತಾಡುವ ರಾಜಕಾರಣಿಗಳು; ಹಾಗೂ ಅದಕ್ಕಿಂತ ಮುಖ್ಯವಾಗಿ, ಎಲ್ಲ ಗೊತ್ತಿದ್ದೂ ಅವರ ಮಾತುಗಳಿಗೆ ಮೆಚ್ಚುಗೆಯಿಂದ ಚಪ್ಪಾಳೆ ತಟ್ಟುವ-ಆತ್ಮಸಾಕ್ಷಿ ಕಳೆದುಕೊಂಡ-ಮಹಾ ಘಾತುಕ ಜನಸ್ತೋಮವೊಂದು ಇಂದು ದೊಡ್ಡದಾಗಿ ಎದ್ದು ನಿಂತಿದೆ.

ಹೀಗೆ ಇಡೀ ವ್ಯವಸ್ಥೆ ಕುಸಿದು ಅರಾಜಕವಾಗುವ ಶೀಲ ಶಿಥಿಲತೆಯ ಭಯಾನಕ ಉದಾಹರಣೆಗಳು ಒಂದೊಂದೇ ಬೆಳಕಿಗೆ ಬರತೊಡಗಿವೆ. ಆದರೂ ನಾವು-ಸಾಮಾನ್ಯ ಜನ-ಇದೆಲ್ಲ ಎಲ್ಲ ಕಾಲದಲ್ಲೂ ಇರುವಂತಹುದೇ ಎಂದು ಈ ಬಗ್ಗೆ ಒಂಚೂರೂ ವಿಚಲಿತರಾಗದೆ; ಲೋಕಾಭಿರಾಮವಾಗಿ, ಹೊಸ ಭೋಗವಾದದ ಏಣಿ ಹತ್ತಿ ಆಕಾಶ ಮುಟ್ಟುವ ರೋಮಾಂಚನದ ನಮ್ಮ ಅವಕಾಶಕ್ಕಾಗಿ ಸರತಿ ಸಾಲಿನಲ್ಲಿ ಕಾದು ನಿಂತಿದ್ದೇವೆ. ಹೀಗೆ ಜಗತ್ತಿನ 'ಅಮೆರಿಕನ್ನೀಕರಣ'ವೆಂಬ ಜಾಗತೀಕರಣ ಪ್ರಕ್ರಿಯೆ, ಒಂದು ಜಾಗತಿಕ ರಾಜಕೀಯ ಕಾರ್ಯಕ್ರಮವಾಗಿ ಎಗ್ಗಿಲ್ಲದೆ ಸಾಗಿದೆ. ಬೆಂಗಳೂರೂ, ನಾವೂ, ನಮ್ಮ ಮಕ್ಕಳೂ ನಮ್ಮದೇ ರೀತಿಯ ಪ್ರತಿರೋಧಗಳ ನಡುವೆಯೂ ಇದಕ್ಕೆ ಹೊರತಾಗಲಾರದ ಪರಿಸ್ಥಿಗೆ ಸಿಕ್ಕಿ ಬಿದ್ದಿದ್ದೇವೆ. ಇದರ ಮಧ್ಯೆ ವಿವೇಕವನ್ನು ಹುಡುಕುವುದು ಕುರುಕ್ಷೇತ್ರದ ಮಧ್ಯೆ ಧರ್ಮವನ್ನು ಹುಡುಕಿದಂತೆಯೇ ಸರಿ. ಆದರೂ ಧರ್ಮ ಉಳಿದು ಕಾಣಿಸಿಕೊಳ್ಳಲೇ ಬೇಕಲ್ಲ! ಉಳಿಯದಿದ್ದರೆ ಅದು ಧರ್ಮವಾದರೂ ಹೇಗಾದೀತು?

ಬಹುಶಃ ಈ ಆಸೆಯಲ್ಲೇ, ಈ ನಿರೀಕ್ಷೆಯಲ್ಲೇ ಸಿ.ಎನ್.ಆರ್. ರಾವ್ ಹಾಗೂ ಅವರಂತೆ ಯೋಚಿಸುವ ಜನ ಇನ್ನೂ ಭರವಸೆಯಿಂದ ಬದುಕಿರುವುದು!

(ಡಿಸೆಂಬರ್ ೨೮, ೨೦೦೭)

■

ಮಾರುಕಟ್ಟೆ ಮತ್ತು ಮೌಢ್ಯಾಚಾರ

ಲೌಕಿಕ ನೈತಿಕತೆಯೇ ದೇವರು ಧರ್ಮಗಳೆಂಬ ಪಾರಮಾರ್ಥಿಕ ಪರಿಕಲ್ಪನೆಯ ಮೂಲ ತಳಹದಿ ಎಂಬುದನ್ನೇ ಅರಿಯದ ಈ 'ದೇಶಪ್ರೇಮಿ' ಮತ್ತು 'ಧರ್ಮಪ್ರೇಮಿ'ಗಳ ಮೌಢ್ಯ, ದೇಶಘಾತುಕವೂ ಧರ್ಮಘಾತುಕವೂ ಆಗಿದೆ. ಕುವೆಂಪು ಎಪ್ಪತ್ತರ ದಶಕದಲ್ಲಿ ಎಲ್ಲ ತರಹದ ಪುರೋಹಿತಶಾಹಿಯ ವಿರುದ್ಧ ಸಮರ ಸಾರಿದ್ದ 'ಒಕ್ಕೂಟ'ದ ಸದಸ್ಯರನ್ನು ಉದ್ದೇಶಿಸಿ ಮಾತನಾಡುತ್ತಾ, 'ಮೊದಲು ಕ್ಲೀನ್ ಆಗಬೇಕಾದದ್ದು ನಿಮ್ಮ... ನಿಮ್ಮ... ತಲೆಗಳೇ' ಎಂದಿದ್ದುದು ಬಹುಶಃ ಇಂತಹವರನ್ನು ಗಮನದಲ್ಲಿಟ್ಟುಕೊಂಡೇ. ಆದರೆ ಇಂದು ಘಾತುಕ ವೈದಿಕರೂ, ಖೂಳ ಶೂದ್ರರೂ ಸೇರಿ ಇಂದು ದೇಶವನ್ನು ಮೌಢ್ಯಾಚಾರಗಳ ನರಕವನ್ನಾಗಿಸುತ್ತದ್ದಾರೆ. ಇವರು ತಮ್ಮ ರಾಜಕೀಯ ಅಧಿಕಾರ ಮತ್ತು ಸಂಪತ್ತುಗಳನ್ನು ರಕ್ಷಿಸಿಕೊಳ್ಳಲು, ನಮ್ಮ ನವೋದಯದ ಭಾಗವಾಗಿ ಮೂಡಿದ ವೈಚಾರಿಕ ಆಂದೋಲನದ ಫಲಗಳನ್ನು ನಾಶಗೊಳಿಸುತ್ತಿದ್ದಾರೆ.

ಅಂದು ನನ್ನ ಗೆಳೆಯರೊಬ್ಬರು ತಮ್ಮ ಮಗ ಪಿಯುಸಿಯಲ್ಲಿ ಪದೇ ಪದೇ ಫೇಲಾಗುತ್ತಿದ್ದ ಸಮಸ್ಯೆಯನ್ನು ಬಗೆಹರಿಸಲು ಬೆಂಗಳೂರಿನ ಸುಪ್ರಸಿದ್ಧ ವಾಸ್ತು ತಜ್ಞರ ಸಲಹೆಯ ಮೇರೆಗೆ ಅವನ 'ಓದುವ ಕೋಣೆ'ಯ ವಾಸ್ತುವನ್ನು ಬದಲಿಸಿ ಸರಿ ಮಾಡಿದ್ದರೂ, ಆತ ಮತ್ತೆ ಫೇಲಾಗಿ ಉಂಟಾಗಿದ್ದ ಅಸಂಗತ ಪರಿಸ್ಥಿತಿಯನ್ನು ಕಣ್ಣಾರೆ ಕಂಡು ಸುಸ್ತಾಗಿ ಮನೆಗೆ ಬಂದೆ. ವಾರ್ತೆಗಳಿಗಾಗಿ ಟಿವಿ ಹಾಕಿದರೆ, 'ಕಸ್ತೂರಿ ವಾರ್ತೆ'ಯಲ್ಲಿ ಸೊಟ್ಟ ಮೂತಿಯ ಹೋರಾಶಾಸ್ತ್ರಿಯೊಬ್ಬ ಅಭಿನವ್ ಬಿಂದ್ರಾಗೆ ಒಲಪಿಂಕ್ಸ್‌ನಲ್ಲಿ ಚಿನ್ನದ ಪದಕ ಬಂದದ್ದೇ ಬರಲಿರುವ ಚಂದ್ರಗ್ರಹಣದ ಪ್ರಭಾವದಿಂದ ಎಂದರೆ ನೀವು ನಂಬುತ್ತೀರಾ? ಎಂಬ ಅಪದ್ಧ ವಿಶ್ಲೇಷಣೆಯನ್ನು ಆಸ್ಫೋಟಕ ಶೈಲಿಯಲ್ಲಿ ಆರಂಭಿಸಿದ್ದ. ದೇವೇಗೌಡರ ಮನೆತನದ ಮೌಢ್ಯ ಅವರ ಒಡೆತನದ ವಾಹಿನಿಗೂ ಹರಡಿದೆ ಎನಿಸಿ ಬೇರೆ ವಾಹಿನಿ ಹಾಕಿದರೆ, ಅಲ್ಲಿಯೂ ಇನ್ನೊಬ್ಬ ಬುರುಡೆದಾಸ ಚಂದ್ರ ಗ್ರಹಣದ ಫಲಾಫಲಗಳನ್ನು ವಿವರಿಸುತ್ತಿದ್ದ! ಯಾವ ಯಾವ ರಾಶಿಯವರು ಯಾವ ಯಾವ ದೋಷಕ್ಕಾಗಿ ಯಾವ ಯಾವ ದೇವರ ಬಳಿ ಯಾವ ಯಾವ ಶಾಂತಿಗಳನ್ನು

ಮಾಡಿಸಿಕೊಳ್ಳಬೇಕೆಂಬುದರ ವಿವರಗಳನ್ನು ದೊಡ್ಡ ಗಂಟಲಲ್ಲಿ ಬೊಗಳುತ್ತಿದ್ದ.

ನನ್ನ ಈ ಒರಟು ಭಾಷೆಗಾಗಿ ಕ್ಷಮಿಸಿ. ನನಗೆ ತಲೆ ಕೆಟ್ಟಂತಾಗಿತ್ತು. ನಿಧಾನವಾಗಿ ಯೋಚಿಸಿದಾಗ ತಲೆ ಕೆಟ್ಟಿರುವುದು ನನಗಲ್ಲ, ಈ ದೇಶಕ್ಕೆ ಅನಿಸಿತು. ಇನ್ನೂ ನಿಧಾನವಾಗಿ ಯೋಚಿಸಿದಾಗ ತಲೆ ಕೆಟ್ಟಿರುವುದು ದೇಶಕ್ಕಲ್ಲ, ಈ ದೇಶವನ್ನು ತಮ್ಮ ಕೈಗೆ ತೆಗೆದುಕೊಂಡಿರುವ ಕೆಲವು ವರ್ಗಗಳಿಗೆ ಎನಿಸಿತು: ಇತ್ತೀಚಿನ ಸೂರ್ಯಗ್ರಹಣದ ಸಂದರ್ಭದಲ್ಲಿ ಯಾವುದೋ ತುರ್ತು ಕೆಲಸದ ಮೇಲೆ ಹೊರ ಹೋಗಿದ್ದ ನನ್ನ ಹೆಂಡತಿ, ಇಡೀ ಊರು ಶೋಕಾಚರಣೆಯಲ್ಲಿ ತೊಡಗಿರುವಂತೆ, ಮನೆ–ಅಂಗಡಿಗಳೆಲ್ಲ ಮುಚ್ಚಿ; ಬೀದಿಗಳು ಬಿಕೋ ಎನ್ನುತ್ತಿದ್ದುದನ್ನು ಕಂಡು ಗಾಬರಿಯಾಗಿ, ತನ್ನ ಕೆಲಸ ಮುಗಿಸಲಾರದೆ ವಾಪಸ್ ಬಂದಿದ್ದಳು. ಅವಳು, 'ಇದೇ ಊರಿನಲ್ಲಿ ಹುಟ್ಟಿ ಬೆಳೆದ ನನಗೆ ಎಂದೂ ಗ್ರಹಣದ ದಿನ ಈ ತರಹ ಸೂತಕದ ವಾತಾವರಣ ಕಂಡಿರಲಿಲ್ಲ. ಈ ದೇಶಕ್ಕೆ ಯಾವುದೋ ಮಹಾ ಸೂತಕ ಕಾದಿದೆ!' ಎಂದು ತನ್ನ ಊರಿನ ಮೇಲಿನ ಸಿಟ್ಟನ್ನು ದೇಶದ ಮೇಲೆ ಹಾಕುತ್ತಾ, ನನ್ನ ಹೊಟ್ಟೆ ತಣಿವನ್ನು ಪೂರೈಸುವ ಸಲುವಾಗಿ ಸಂಜೆಯ ತಿಂಡಿ ಮಾಡಲು ಅಣಿಯಾದಳು. ಅವಳಿಗೆ ತನ್ನೂರು ಮಾತ್ರವಲ್ಲ, ಇಡೀ ದೇಶವೇ ಸೂತಕದಲ್ಲಿದ್ದಂತಿತ್ತು ಎಂಬುದು ಗೊತ್ತಿರಲಿಲ್ಲವೆಂದಲ್ಲ. ತನ್ನೂರು ಶಿವಮೊಗ್ಗವೂ ಹೀಗಾಯಿತಲ್ಲ ಎಂಬ ವಿಷಾದವಷ್ಟೆ ಅವಳದು!

ನನ್ನ ಹೆಂಡತಿ ದೈವಭಕ್ತೆಯಲ್ಲದಿದ್ದರೂ, ವಿಚಾರವಾದಿಯಂತೂ ಅಲ್ಲ. ಇಡೀ ಜಗತ್ತು ಯಾವುದೋ ಒಂದು ದೊಡ್ಡ ಶಕ್ತಿಯಿಂದ ನಡೆಸಲ್ಪಡುತ್ತಿದೆ ಎಂದು ನಂಬಿದವಳು. ಕಂಡ ಕಂಡಲ್ಲೆಲ್ಲ ಅಲ್ಲದಿದ್ದರೂ, ಶ್ರದ್ಧೆ ಕಂಡೆಡೆ ಕೈಮುಗಿಯುವವಳು. ತನ್ನ ಕುಟುಂಬದ ಹಿನ್ನೆಲೆಯ ಆರ್ಯಸಮಾಜದ ತತ್ವಗಳ ನೆರಳಿನಲ್ಲಿ ಬೆಳೆದವಳು. ರಾಮಕೃಷ್ಣ ಪರಮಹಂಸ ಮತ್ತು ರಮಣ ಮಹರ್ಷಿಗಳಲ್ಲದೆ ದೊಡ್ಡೇರಿಯ ಸತ್‌ಉಪಾಸಿ ಮಲ್ಲಣ್ಣನವರ ಉಪದೇಶಗಳಲ್ಲಿಯೂ ತನ್ನ ಪಾಲಿನ ಸತ್ಯವನ್ನು ಕಂಡುಕೊಂಡವಳು. ಹಾಗಾಗಿ, ಈ ಗ್ರಹಣಗಳ ಆಚರಣೆಗಳ ಕುರಿತ ಅವಳ ಈ ಅತೀವ ಬೇಸರದ ಬಗ್ಗೆ ನಾನು ಮೌನವಾಗಿ ಆಲೋಚಿಸುತ್ತಾ, ಗ್ರಹಣದ ಸಮಯದಲ್ಲಿ ಅವಳು ಮಾಡಿಕೊಟ್ಟ ನನ್ನ ಪ್ರೀತಿಯ ಉಪ್ಪಿಟ್ಟನ್ನು ತಿಂದು ಮುಗಿಸುತ್ತಿದ್ದಂತೆ, ಪಕ್ಕದ ಗಣಪತಿ ದೇವಸ್ಥಾನದಲ್ಲಿ ಘಂಟೆ ಮೊಳಗಿತು. ಗ್ರಹಣ ಮುಗಿದಿತ್ತು. ಬೀದಿಯಲ್ಲಿ ಜನ ಕಾಣಿಸತೊಡಗಿದರು. ನಾನು ಮತ್ತು ನನ್ನ ಹೆಂಡತಿ ಅನ್ಯ ಮನಸ್ಕರಾಗಿ ಗಾಳಿ ಸೇವನೆಗೆ ಹೊರಟೆವು.

ಗಣಪತಿ ದೇವಸ್ಥಾನದ ಬಳಿ ಜನವೋ ಜನ. ಜನ ತಮ್ಮ ನಂಬಿಕೆಗಳಿಗನುಸಾರ ವಿಭೂತಿಯನ್ನೂ ಗಂಧವನ್ನೋ ಧರಿಸಿ, ಅಲ್ಲಿ ಮಂತ್ರಘೋಷಗಳ ಮೊಳಗಿನೊಂದಿಗೆ ಭರ್ಜರಿಯಾಗಿ ನಡೆದಿದ್ದ ಗ್ರಹಣ ದೋಷ ಪರಿಹಾರದ ಹೋಮ–ಹವನ–ಶಾಂತಿ ಪೂಜೆಗಳ ಫಲ ಸ್ವೀಕರಿಸಲು ಕಾತುರರಾಗಿ ನೆಲದ ಮೇಲೇ ನಿಸ್ಸಂಕೋಚವಾಗಿ ಆಸೀನರಾಗಿದ್ದರು. ಕುತೂಹಲದಿಂದ ಆ ಜನಸ್ತೋಮವನ್ನು ಗಮನಿಸಿದಾಗ, ಅಲ್ಲಿನ ಅರ್ಧ ಭಾಗ ತರುಣ ತರುಣಿಯರಿಂದಲೇ ತುಂಬಿಹೋಗಿದ್ದುದನ್ನು ಕಂಡು ಕೊಂಚ

ಗಾಬರಿಯೇ ಆಯಿತು. ಅದನ್ನು ನನ್ನ ಹೆಂಡತಿಯ ಗಮನಕ್ಕೆ ತಂದಾಗ ಅವಳು ನನ್ನ ಆಶ್ಚರ್ಯಕ್ಕೆ ಉತ್ತರಕೊಡುವಂತೆ, 'ಅದಿರಲಿ, ಅಲ್ಲಿರುವವರು ಯಾವ ತರಹದ ಜನ ಗಮನಿಸಿ' ಎಂದಳು. ನಾನು ಸುಮ್ಮನೆ ನೋಡಿದೆ. ಹೆಚ್ಚೂ ಕಡಿಮೆ ಅಲ್ಲಿದ್ದವರೆಲ್ಲರೂ ನಮ್ಮ ಕಾಲೋನಿಯ ಅನುಕೂಲಸ್ಥರ ಮನೆಗಳವರೇ! ಬಡವರಂತೆ ಕಂಡವರು ಬಾಲ್ಯದಲ್ಲಿನ ನಮ್ಮಂತಯೇ, ಪ್ರಸಾದವೇನಾದರೂ ವಿನಿಯೋಗವಾಗುತ್ತದೇನೋ ಎಂದು ಗುಡಿಯ ಸುತ್ತ ಸಂಕೋಚದಿಂದ ಸುಳಿದಾಡುತ್ತಿದ್ದರಷ್ಟೆ.. ಮನಸ್ಸು ಖಿನ್ನವಾಯಿತು. ಗಾಳಿ ಇದ್ದಕ್ಕಿದ್ದಂತೆ ತನ್ನ ಚಲನೆ ಕಳೆದುಕೊಂಡಂತಾಗಿ, ನಿಧಾನವಾಗಿ ಉಸಿರುಗಟ್ಟಿದ ಅನುಭವವಾಗಿ;ಅರ್ಧ ಬೇಸರ–ಅರ್ಧ ವಿಷಾದದಿಂದ ನಾವು ಗಾಳಿ ಸೇವನೆಗೆ ಮುಂದುವರಿಯದೆ, ಮನೆಗೆ ವಾಪಸ್ಸು ಬಂದೆವು. ಟಿವಿಯಲ್ಲಿ ಬೆಂಗಳೂರಿನಲ್ಲಿ ನ್ಯಾಷನಲ್ ಕಾಲೇಜಿನ ಮುಂದೆ ಎಚ್ಚೆನ್ ಶಿಷ್ಯರು ಈ ಮಡ್ಡರನ್ನು ಗೇಲಿಮಾಡಲೆಂಬಂತೆ ಗ್ರಹಣದ ಸಮಯದಲ್ಲೇ ತಿನ್ನಲು ಕಡಲೆ ಪುರಿ ಹಂಚುತ್ತಿದ್ದುದರ ಸುದ್ದಿ ಪ್ರಸಾರವಾಗುತ್ತಿತ್ತು. ಇಲ್ಲ, ಈ ಸಮಾಜದಲ್ಲಿ ಇನ್ನೂ 'ಜೀವ'ವಿದೆ ಎನ್ನಿಸಿ, ಮನಸ್ಸು ಸ್ವಲ್ಪ ನಿಸೂರಾಯಿತು.

ನಾನು ಹಳ್ಳಿಯಲ್ಲಿ ಗುಡಿ–ಗುಂಡಾರಗಳು, ಊರ ಪರವು, ತೇರು, ಹಬ್ಬ–ಹರಿದಿನಗಳ ಮಧ್ಯೆಯೇ; ಬ್ರಾಹ್ಮಣ ಮತ್ತು ವೈಶ್ಯರ ಸನಿಹದಲ್ಲೇ ಬೆಳೆದು ಬಂದವನಾದರೂ, ಈಗ–ಕಳೆದ ಐದು ಹತ್ತು ವರ್ಷಗಳಲ್ಲಿ–ನೋಡುತ್ತಿರುವಂತಹ ಮೌಢ್ಯಾಚರಣೆಗಳನ್ನು–ಅದೂ ಈ ವೈದಿಕ ವೈಭವಗಳೊಂದಿಗೆ–ನಾನೆಂದೂ ನೋಡಿಲ್ಲ. ಬಾಲ್ಯದಲ್ಲಿ ನೋಡುತ್ತಿದ್ದ ಆಚರಣೆಗಳಲ್ಲಿ ಹೆಚ್ಚಿನವು ಸಾಮೂಹಿಕವಾಗಿರುತ್ತಿದ್ದವು ಮತ್ತು ಆ ಕಾರಣದಿಂದಾಗಿಯೋ ಏನೋ, ಧಾರ್ಮಿಕಕ್ಕಿಂತ ಹೆಚ್ಚಾಗಿ ಸಾಂಸ್ಕೃತಿಕ ಹುರುಪು ಹುಟ್ಟಿಸುವಂತಿದ್ದವು. ಇನ್ನು, ನಾನು ಬೆಳೆದ ಕಾಲ ವೈಚಾರಿಕತೆಯ ಕಾಲ. ಕಾಲೇಜು ದಿನಗಳಲ್ಲಂತೂ, ಪೆರಿಯಾರ್, ಕೋವೂರ್, ಧರ್ಮಲಿಂಗಂ, ಎಂಡಿಎನ್‌ರಲ್ಲದೆ ನಮ್ಮ ಅಧ್ಯಾಪಕರುಗಳೇ ಆದ ಎಚ್ಚೆನ್, ಜಿಟಿಎನ್ ಮತ್ತು ಜೆ.ಆರ್ ಲಕ್ಷ್ಮಣರಾವ್ ಅಂತಹವರು ವಿವಿಧ ಸ್ತರಗಳ ವಿಚಾರವಾದಿ ಚರ್ಚೆಗಳನ್ನು ಹುಟ್ಟು ಹಾಕಿದ್ದ ಕಾಲ. ಇವುಗಳ ಮಧ್ಯೆ ನನ್ನಂತಹವರು ದೇವರು ಧರ್ಮಗಳ ಬಗ್ಗೆ ಅನುಮಾನಗಳನ್ನು ಬೆಳೆಸಿಕೊಂಡರೂ; ಮನುಷ್ಯ ಬರೀ ಭೌತಿಕ ಜೀವಿಯಾಗಿ ಬದುಕಲಾರನೇನೋ ಎಂಬ ಅನುಮಾನದಲ್ಲಿದ್ದಾಗ, ಕುವೆಂಪು, ಕಾರಂತ, ತೇಜಸ್ವಿ, ಅನಂತಮೂರ್ತಿ, ಲಂಕೇಶ್ ಮುಂತಾದವರು ಬೇರೆ ಬೇರೆ ತರಂಗಾಂತರಗಳಲ್ಲಾದರೂ, ಒಟ್ಟು ಪರಿಣಾಮದಲ್ಲಿ ಈ ಒಣ ಭೌತಿಕ ತಾರ್ಕಿಕತೆಗೆ ಒಂದು ಸೃಜನಶೀಲ ಸ್ಪಂದನವನ್ನು ನೀಡಿ ನಮ್ಮನ್ನು ಆಕರ್ಷಿಸಿದ್ದರು.

ಹಾಗಾಗಿಯೇ ನನ್ನಂತಹವರು, ತಮ್ಮನ್ನು ವೈಯಕ್ತಿಕವಾಗಿ ನಾಸ್ತಿಕನೆಂದು ಕರೆದುಕೊಂಡರೂ, ಸಾರ್ವಜನಿಕ ಜೀವನದಲ್ಲಿ ಅಜ್ಞೇಯತಾವಾದಿಯಾಗಿ ನಮ್ಮ ಸಾಂಸ್ಕೃತಿಕ ಪರಂಪರೆಯ ಬಗ್ಗೆ ಅಪಾರ ಜ್ಞಾನವನ್ನೂ, ಹೆಮ್ಮೆಯನ್ನೂ, ಕಾಳಜಿಯನ್ನೂ ಹೊಂದಿದ್ದ ಡಾ॥ ರಾಮಮನೋಹರ ಲೋಹಿಯಾರ ಸಮಾಜವಾದಿ ಚಿಂತನೆ ಕಡೆ ಸೆಳೆಯಲ್ಪಟ್ಟಿದ್ದು. ಅವರು ನಮ್ಮ ಧರ್ಮ–ಸಂಸ್ಕೃತಿ–ಪರಂಪರೆಗಳ ಬಗ್ಗೆ ಕಟು ವಿಮರ್ಶೆ

ಮಾಡುತ್ತಿದ್ದರಾದರೂ (ಉದಾ: 'ಭಾರತವೆಂಬುದು ಅಲ್ಲಲ್ಲಿ ಸುಂದರವಾಗಿ ಅರಳಿದ ತಾವರೆಗಳಿರುವ ದೊಡ್ಡ ಕೊಚ್ಚೆ ಕೊಳ'), ರಾಮಾಯಣ ಕಥೆಯ ಸ್ಥಿತ್ಯಂತರ ಬಿಂದುವಿನಂತಿರುವ 'ಚಿತ್ರಕೂಟ'ವನ್ನು ಗುರುತಿಸಿ; ಅಲ್ಲಿ ತಮ್ಮ ಪಕ್ಷದ ವತಿಯಿಂದ 'ರಾಮಾಯಣ ಮೇಳ'ವನ್ನೂ ಆಯೋಜಿಸುತ್ತಿದ್ದರು. ಎಡಪಂಥೀಯರೆನಿಸಿಕೊಂಡವರು ಧಾರ್ಮಿಕ ಕ್ಷೇತ್ರಗಳ ಬಗ್ಗೆ ಮಾತಾಡುವುದೇ ಪಂಥ ವಿರೋಧಿ ಎಂದು ಭಾವಿಸಿದ್ದಾಗ, ಅವರು ಜನತೆಯ ಆರೋಗ್ಯದ ದೃಷ್ಟಿಯಿಂದ ಅಜ್ಮೇರ್ ಸೇರಿದಂತೆ ದೇಶದ ಎಲ್ಲ ಯಾತ್ರಾ ಸ್ಥಳಗಳನ್ನೂ ನಾಗರಿಕ ಸೌಲಭ್ಯಗಳನ್ನೊದಗಿಸಿ ಅಭಿವೃದ್ಧಿಪಡಿಸಬೇಕೆಂದೂ, ಅಲ್ಲಿನ ನದಿಗಳನ್ನು ಸ್ವಚ್ಛಗೊಳಿಸಬೇಕೆಂದೂ ಆಗ್ರಹಿಸಿದ್ದರು. ಆದರೆ ವಾರಾಣಸಿಯಲ್ಲಿ ರಾಷ್ಟ್ರಪತಿ ರಾಜೇಂದ್ರ ಪ್ರಸಾದರು 'ಪರಂಪರೆ'ಯ ಹೆಸರಿನಲ್ಲಿ ಸಾರ್ವಜನಿಕವಾಗಿ ೧೦೧ ಜನ ಬ್ರಾಹ್ಮಣರ ಪಾದ ಪೂಜೆಯಲ್ಲಿ ತೊಡಗಿದಾಗ. ಅದೊಂದು ಹೀನ ಅಭಿರುಚಿಯ, ರಾಷ್ಟ್ರೀಯ ನಾಚಿಕೆಗೇಡಿನ ಅನಾಚಾರ ಎಂದು ಕಿಡಿಕಿಡಿಯಾದರು. ಹಾಗೆ ಪಾದಪೂಜೆಗೆಂದು ಆಯ್ಕೆಯಾಗಿ ಅಲ್ಲಿಗೆ ಹೋಗಿ, ಆದರೆ ಅಲ್ಲಿನ ದೃಶ್ಯ ಭೀಭತ್ಸವೆನಿಸಿ ವಾಪಸು ಬಂದು ವಿಷಯ ತಿಳಿಸಿದ ಓರ್ವ ಬ್ರಾಹ್ಮಣನನ್ನು ರಾಷ್ಟ್ರದ ಶ್ರೇಷ್ಠ ಪ್ರಜೆಯೆಂದು ಬಣ್ಣಿಸಿದ ಲೋಹಿಯಾ, ಇಂತಹವರಿಂದಲೇ ರಾಷ್ಟ್ರದ ಪರಂಪರೆ ಸ್ವಚ್ಛವಾದೀತೆಂದು ಆಶಿಸಿದರು.

ಆದರೆ ಇಂತಹ ಭೀಭತ್ಸ ಧರ್ಮಾಚರಣೆಯಲ್ಲಿ ಪಾದಪೂಜೆ ಮಾಡಿಸಿಕೊಂಡು ಬಂದವರಲ್ಲೊಬ್ಬರಾದ ನಮ್ಮ ದೇವುಡು ನರಸಿಂಹಶಾಸ್ತ್ರಿ ನಮ್ಮ ಕೆಲವು ಸಾಂಸ್ಕೃತಿಕ ವಕ್ತಾರರ ಪ್ರಕಾರ ನಮ್ಮ ಶ್ರೇಷ್ಠ ಧಾರ್ಮಿಕ ಪಂಡಿತ ಮತ್ತು ಲೇಖಕ! ಈ ಶ್ರೇಷ್ಠ ವಿಪ್ರೋತ್ತಮರೇ ಕುವೆಂಪು ಅವರ 'ನಿರಂಕುಶಮತಿಗಳಾಗಿ' ಎಂಬ–ಆಧುನಿಕ ಕನ್ನಡ ಪ್ರಜ್ಞೆ ಎಂಬುದೇನಾದರೂ ಇದ್ದರೆ, ಅದರ ಬಾಗಿಲು ತೆಗೆದ–ಭಾಷಣದ ವಿರುದ್ಧ ಸರ್ಕಾರಕ್ಕೆ ದೂರು ಸಲ್ಲಿಸಿ, ಅವರನ್ನು ಸೇವೆಯಿಂದ ಅಮಾನತುಗೊಳಿಸುವಂತೆ ಕೋರಿದ್ದುದು! ಇಂತಹ ಮೂಢ ಪುರೋಹಿತರನ್ನು ನಮ್ಮ ಸಾಂಸ್ಕೃತಿಕ ಸಂಪತ್ತೆಂದು ಕೊಂಡಾಡುವ ಸಂತತಿಗೆ ಮತ್ತೆ ಬಲ ಬಂದಿರುವುದರಿಂದಲೇ ಮತ್ತೆ ಇಂದು ಈ ಮತಿಹೀನ ಮತಾಚರಣೆಗಳ ಆರ್ಭಟ ಜೋರಾಗಿರುವುದು. ಹಾಗೆ ನೋಡಿದರೆ, ಈ ಸಂತತಿಯನ್ನು ಈಗ ಸಾಕುತ್ತಿರುವವರಾದರೂ ಯಾರು? ದೇವಸ್ಥಾನಗಳಿಗೆ, ಮಠಗಳಿಗೆ, ಸಾಹಿತ್ಯ ಪ್ರತಿಷ್ಠಾನಗಳ ಹೆಸರಲ್ಲಿನ ಜಾತಿ ಗೂಡುಗಳಿಗೆ ಸರ್ಕಾರದ ಖಜಾನೆಯಿಂದ ಕೋಟಿಗಟ್ಟಲೆ ಹಣ ಹಂಚುತ್ತಿರುವ ಶೂದ್ರ ಗುಗ್ಗುಗಳೇ. ರೇಷ್ಮೆ ಶಾಲು–ಪಂಚೆಗಳ ಹುಸಿ ಮಡಿ ಮತ್ತು ಹಸಿ ರೋಮಾಂಚನದಲ್ಲಿ, ರಾಜ್ಯಕ್ಕೆ ಬಡಿದಿರುವ ದೋಷ ಪರಿಹಾರಕ್ಕಾಗಿಯೋ ಅಥವಾ ತಮ್ಮ ಹಳೆಯ ಪಾಪ ಪರಿಹಾರಕ್ಕಾಗಿಯೋ; ತಮ್ಮ ಕಂಠಪಾಠ ಪಾಂಡಿತ್ಯವನ್ನು ಮೆರೆಯುತ್ತಾ ಯಾರಿಗೂ ಅರ್ಥವಾಗದ ಮಂತ್ರಗಳನ್ನು ಅರಚುವ ಕಳ್ಳ ಪೂಜಾರಿಗಳ ಮತ್ತು ಅವರು ಸಾಕಿಕೊಂಡಿರುವ ಸುಳ್ಳು ದೇವರುಗಳ ಮುಂದೆ ಹರಕೆಯ ಕುರಿಗಳಂತೆ ತಲೆಬಾಗಿ ನಿಲ್ಲುತ್ತಿರುವ ಭ್ರಷ್ಟ ಶೂದ್ರ ನಾಯಕರೇ.

ಹಳೆಯ ಎಂಜಿನಿಯರುಗಳು ಗಾಳಿ ಬೆಳಕುಗಳ ಅಗತ್ಯ ನೋಡಿ ಕಟ್ಟಿರುವ ಅಧಿಕೃತ ಮನೆಗಳನ್ನು, ತಮ್ಮ ಅಧಿಕಾರ ಸಂಪತ್ತುಗಳ ಅಭದ್ರತೆಯ ಭಯದಿಂದ ವಾಸ್ತು ತಜ್ಞರೆಂಬ ಆಧುನಿಕ ಪುರೋಹಿತಶಾಹಿಯ ಉಪದೇಶಗಳ ಮೇರೆಗೆ ಪದೇ ಪದೇ ಒಡೆಸಿ ಸಾರ್ವಜನಿಕ ಹಣದಲ್ಲಿ ಅವನ್ನು ಬದಲಾಯಿಸಿಕೊಂಡು ಹುಸಿ ರಕ್ಷಣೆಯ ಭಾವನೆಯಲ್ಲಿ ಮುಳುಗಿರುವ ಶೂದ್ರಶ್ರೀಗಳೇ!

ಲೌಕಿಕ ನೈತಿಕತೆಯೇ ದೇವರು ಧರ್ಮಗಳೆಂಬ ಪಾರಮಾರ್ಥಿಕ ಪರಿಕಲ್ಪನೆಯ ಮೂಲ ತಳಹದಿ ಎಂಬುದನ್ನೇ ಅರಿಯದ ಈ 'ದೇಶಪ್ರೇಮಿ' ಮತ್ತು 'ಧರ್ಮಪ್ರೇಮಿ'ಗಳ ಮೌಢ್ಯ, ದೇಶಘಾತುಕವೂ ಧರ್ಮಘಾತುಕವೂ ಆಗಿದೆ. ಕುವೆಂಪು ಎಪ್ಪತ್ತರ ದಶಕದಲ್ಲಿ ಎಲ್ಲ ತರಹದ ಪುರೋಹಿತಶಾಹಿಯ ವಿರುದ್ಧ ಸಮರ ಸಾರಿದ್ದ 'ಒಕ್ಕೂಟ'ದ ಸದಸ್ಯರನ್ನು ಉದ್ದೇಶಿಸಿ ಮಾತನಾಡುತ್ತಾ, 'ಮೊದಲು ಕ್ಲೀನ್ ಆಗಬೇಕಾದದ್ದು ನಿಮ್ಮ... ನಿಮ್ಮ... ತಲೆಗಳೇ' ಎಂದಿದ್ದುದು ಬಹುಶಃ ಇಂತಹವರನ್ನು ಗಮನದಲ್ಲಿಟ್ಟುಕೊಂಡೇ. ಆದರೆ ಇಂದು ಘಾತುಕ ವೈದಿಕರೂ, ಖೂಳ ಶೂದ್ರರೂ ಸೇರಿ ಇಂದು ದೇಶವನ್ನು ಮೌಢ್ಯಾಚಾರಗಳ ನರಕವನ್ನಾಗಿಸುತ್ತದ್ದಾರೆ. ಇವರು ತಮ್ಮ ರಾಜಕೀಯ ಅಧಿಕಾರ ಮತ್ತು ಸಂಪತ್ತುಗಳನ್ನು ರಕ್ಷಿಸಿಕೊಳ್ಳಲು, ನಮ್ಮ ನವೋದಯದ ಭಾಗವಾಗಿ ಮೂಡಿದ ವೈಚಾರಿಕ ಆಂದೋಲನದ ಫಲಗಳನ್ನು ನಾಶಗೊಳಿಸುತ್ತಿದ್ದಾರೆ.

ನಮ್ಮ ಮನೆಗಳು, ಊರು, ರಾಜ್ಯ ಮತ್ತು ದೇಶದ ಇತ್ತೀಚಿನ ಬೆಳವಣಿಗೆಗಳನ್ನು ನೋಡಿದರೆ, ಶಾಂತಿ ನೆಮ್ಮದಿಗಳ ಮೂಲವಾಗಿದ್ದ ಧರ್ಮಾಚರಣೆಗಳು ಸಂಪತ್ತು ಮತ್ತು ಅಧಿಕಾರದ ಸಂಪರ್ಕ ದೊರೆತೊಡನೆ, ಮತಿಹೀನ ಮತಾಚರಣೆಗಳಾಗಿ ಮಾರ್ಪಾಡಾಗಿ, ಸಾರ್ವಜನಿಕ ಅಶಾಂತಿಗೆ ಕಾರಣವಾಗುತ್ತಿರುವುದನ್ನು ಗಮನಿಸ ಬಹುದಾಗಿದೆ. ಮಾರುಕಟ್ಟೆ ಮತ್ತು ಮತಿಹೀನತೆ ಒಟ್ಟೊಟ್ಟಿಗೆ ಬೆಳೆಯುತ್ತಿರುವುದನ್ನು ನಾವಿಂದು ನೋಡುತ್ತಿದ್ದೇವೆ. ಹೆಚ್ಚೂ ಕಡಿಮೆ ನಿಂತೇ ಹೋಗಿದ್ದ ಬಲಿ ಆಚರಣೆಗಳು ಇಂದು ಊರ ದೇವತೆ ಹಬ್ಬದ ಹೆಸರಿನಲ್ಲಿ ಸಾಮೂಹಿಕ ಪ್ರಾಣಿ ಬಲಿಯ ಮೂಲಕ ಇಡೀ ಊರ ರಸ್ತೆಗಳನ್ನು ರಕ್ತದಿಂದ ತೊಯ್ಸಿ ಭಯಾನಕ ದೃಶ್ಯ ನಿರ್ಮಿಸುತ್ತಿವೆ. ಇದಕ್ಕೆ ತಕ್ಕಂತೆ, ಇದು ಶೂದ್ರ ಜಾತಿಗಳ ಸಾಂಸ್ಕೃತಿಕ ಮರುಸ್ಥಾಪನೆಯ ಪ್ರತೀಕ ಎಂದು ವಿಶ್ಲೇಷಿಸುವ ಶೂದ್ರ ಸಂಸ್ಕೃತಿ ಚಿಂತಕರೂ ನಮ್ಮಲ್ಲಿ ತಯಾರಾಗಿದ್ದಾರೆ. ಹಾಗೇ ವೈದಿಕ ಪುರೋಹಿತಶಾಹಿಯಿಂದ ಹೊಸ ಹೊಸ ಹಬ್ಬ ಹರಿದಿನಗಳು ಆವಿಷ್ಕಾರಗೊಳ್ಳುತ್ತಾ, ಹೊಸ ಹೊಸ ಸಿದ್ಧಿಗಳು ಪ್ರಚುರಗೊಂಡು, ಹೊಸ ಹೊಸ ವಿಶೇಷ ಪೂಜೆಗಳು ವಿನ್ಯಾಸಗೊಳ್ಳುತ್ತಿವೆ. ಇದಕ್ಕೆ ತಕ್ಕಂತೆ ಮಾರುಕಟ್ಟೆಗಳು ಸದಾ ಗಿಜುಗುಡುತ್ತಾ, ದೇವಸ್ಥಾನಗಳ ಮತ್ತು ತೀರ್ಥಕ್ಷೇತ್ರಗಳ ಬಳಿ ಜನರ ನೂಕು ನುಗ್ಗಲು ಹೆಚ್ಚಿ; ಜನರ ಪುಣ್ಯಾರ್ಜನೆಯ ಕೆಲಸ, ಸರ್ಕಾರದ ಪಾಲಿಗೆ ಶಾಂತಿ ಮತ್ತು ಸುವ್ಯವಸ್ಥೆಯ ಗಂಭೀರ ಸಮಸ್ಯೆಯಾಗಿ ಮಾರ್ಪಾಡಾಗಿದೆ. ಇನ್ನು ನಮ್ಮ ಮದುವೆ–ಮುಂಜಿ–ನಾಮಕರಣ–ತಿಥಿ ಇತ್ಯಾದಿಗಳೆಲ್ಲ ಕೌಟುಂಬಿಕತೆಯ ಆತ್ಮೀಯ ಸ್ಪರ್ಶವನ್ನೇ ಕಳೆದುಕೊಂಡು, ಅಸಭ್ಯ ಸಂಪತ್ತಿನ ಅಶ್ಲೀಲ

ಪ್ರದರ್ಶನಗಳಿಗೆ ವೇದಿಕೆಗಳಾಗಿವೆ. ಆದರೆ ಇದನ್ನು ನಮ್ಮ ಶತಾವಧಾನಿಗಳು, ಅಷ್ಟಾವಧಾನಿಗಳು ನಮ್ಮ ಸಾಂಸ್ಕೃತಿಕ ಶ್ರೀಮಂತಿಕೆಯ ಪುನರುತ್ಥಾನವೆಂದು ವರ್ಣಿಸುತ್ತಾ, ನಮ್ಮ ಭ್ರಷ್ಟ ಆಡಳಿತಗಾರರನ್ನೂ, ಅವರ ಚೇಲಾಗಳನ್ನೂ ಇನ್ನಷ್ಟು ಭ್ರಷ್ಟಗೊಳಿಸುವ ಕೆಲಸ ಮಾಡುತ್ತಿದ್ದಾರೆ.

ಇದಕ್ಕೆಲ್ಲ ಮೂಲ ಕಾರಣ, ಮಾರುಕಟ್ಟೆಯ ಅಸಹಜ ವಿಸ್ತರಣೆ ಮನುಷ್ಯನ ಆಸೆ-ಆಕಾಂಕ್ಷೆಗಳ ಮಟ್ಟವನ್ನು ಅಸಹಜವಾಗಿ ಏರಿಸುತ್ತಿರುವುದು. ಅದು ಅವನ ವಿವೇಕದ ಮಟ್ಟವನ್ನು ಕಡಿಮೆ ಮಾಡುತ್ತಾ; ಅವನನ್ನು ಹೆಚ್ಚೆಚ್ಚು ಅಭದ್ರ, ಅಸ್ಥಿರ ಮತ್ತು ಅಶಾಂತನನ್ನಾಗಿ ಮಾಡುತ್ತಿರುವುದು. ಇದರ ಪ್ರತಿಬಿಂಬವೇ ಈ ಬಲಿ, ಹವನ, ಹೋಮ ಶಾಂತಿ, ವಾಸ್ತು ಇತ್ಯಾದಿ ಅನುಮಾನಾಸ್ಪದ ಆಚರಣೆಗಳ ಹೆಚ್ಚಳ. ಇದು ನಮ್ಮ ಹಳೆಯ ಊಳಿಗಮಾನ್ಯಶಾಹಿ ವ್ಯವಸ್ಥೆಯ 'ಆಧುನಿಕ' ರೂಪವಷ್ಟೆ. ನಾವು ಹೊರ ರೂಪದಲ್ಲಿ ಆಧುನಿಕರಾಗಿದ್ದೇವೆಯೇ ಹೊರತು, ಒಳ ರೂಪದಲ್ಲಿ ಹಾಗೇ ಇದ್ದೇವೆ: ಅದೇ ಮತಿಗೆಟ್ಟ ಶೂದ್ರ 'ರಾಜ'ರು ಮತ್ತು ಅವರಿಗೆ ಕುಂಕುಮ ಹಚ್ಚಿ ಕುಣಿಸುವ ಪ್ರಳಯಾಂತಕ ಬುದ್ಧಿಯ ಪುರೋಹಿತರು! ಹಾಗಾಗಿ, ಇಂದಿನ ಈ ಮತಿಹೀನ, ಆತಂಕಕಾರಿ, ಅವೈಚಾರಿಕ ಆಚರಣೆಗಳನ್ನು ನಮ್ಮ ಟೊಳ್ಳು ಆಧುನಿಕತೆಯ ಪೊಳ್ಳು ಫಲಗಳೆಂದೇ ನಾನು ಕರೆಯಬಯಸುತ್ತೇನೆ. ಮನುಷ್ಯನ ಹೊರ ಅಗತ್ಯಗಳ ಕಡೆ ಕೊಟ್ಟಷ್ಟು ಗಮನವನ್ನು ಒಳ ಅಗತ್ಯಗಳ ಕಡೆ ಕೊಡಲಾಗದ ಈ ಆಧುನಿಕತೆ, ಸಹಜವಾಗಿಯೇ ಇವೆರಡರ ಮಧ್ಯೆ ಸಮತೋಲನ ಸಾಧಿಸುವಲ್ಲಿ ಸೋತಿದೆ. ಇದಕ್ಕೆ ಮುಖ್ಯ ಕಾರಣ, ಈ ಆಧುನಿಕತೆ ತನ್ನ ಹಿಂದಿನ ಪರಂಪರೆಯ ಶೀಲವನ್ನು ಅಸಿಂಧುಗೊಳಿಸುತ್ತಾ ಹೋದಂತೆ, ತನ್ನದೇ ಶೀಲವೊಂದನ್ನು ಕಟ್ಟಿಕೊಳ್ಳುವ ಕಡೆ ಗಮನ ಹರಿಸದೇ ಹೋದದ್ದು; ಸಂಸ್ಕೃತಿಯ ಕಡೆ ಅದರ ಗಮನ ಅಷ್ಟಾಗಿ ಹೋಗದೇ ಹೋದದ್ದು. ಹಾಗಾಗಿ ಅದನ್ನು ಈಗ ಹಳೆಯ ಪರಂಪರೆಯಿಂದಲೇ recycle ಮಾಡಿ ತುಂಬಿಕೊಳ್ಳುವ ಅಸಂಗತ ಮತ್ತು ಅಪದ್ಧ ಪ್ರಯತ್ನಗಳು ನಡೆದಿವೆ.

ಆಧುನಿಕತೆಯ ಮುಖಾಮುಖಿಯಲ್ಲಿ ಹುಟ್ಟಿದ ವರ್ಡ್ಸ್‌ವರ್ತ್ ಅಥವಾ ಬ್ಲೇಕ್‌ರ ವಿಷಣ್ಣ ಉದ್ಗಾರಗಳ ಹಿಂದಿನ ಒಳನೋಟಗಳಿಂದಾಗಲಿ; ನಮ್ಮವರೇ ಆದ ಡಿವಿಜಿಯವರ 'ಹೊಸ ಚಿಗುರು ಹಳೆ ಬೇರು' ಅಥವಾ ಕುವೆಂಪು ಅವರ 'ಹಳೆಯ ಆಭರಣಗಳ ಹೊಸ ವಿನ್ಯಾಸ'ದ ತತ್ವಗಳಿಂದಾಗಲೀ, ಆಧುನಿಕತೆಯ shockಗಳನ್ನು ಹೀರಿಕೊಳ್ಳಬಲ್ಲ ಸಾಂಸ್ಕೃತಿಕ ಆಕೃತಿಗಳನ್ನು ರೂಪಿಸಿಕೊಳ್ಳಲಾಗದಷ್ಟು ನಾವು ಮೈಮರೆತು ಬಾಳಿದ್ದೇವೆ. ಹಾಗಾಗಿ ಈಗ, ಮೌಢ್ಯ ಸಾಮ್ರಾಜ್ಯದ ಪ್ರಜೆಗಳಾಗುವ ಖಂಡನೆಯನ್ನು ಎದುರಿಸಲು ಅರ್ಹರೇ ಆಗಿದ್ದೇವೆ.

(೨೯ ಆಗಸ್ಟ್, ೨೦೦೮)

■

ಮರ-ಕಟುಕತನದಿಂದ ಮನ-ಕಟುಕತನದತ್ತ...

ಇಂದು ನಗರಗಳ ಬೀದಿಗಳಲ್ಲಿ ಯಾವುದಾವುದೋ ಕ್ಷುಲ್ಲಕ ಕಾರಣಕ್ಕೆ ಜನರನ್ನು ಹಾಡು ಹಗಲೇ ಕಡಿದುಹಾಕಲಾರಂಭಿಸಿರುವ ಭೀಭತ್ಸ ದೃಶ್ಯಗಳನ್ನು ನಾವು ನೋಡುವಂತಾಗಿರುವುದು, ನಮ್ಮ ಬೀದಿಗಳಲ್ಲಿನ ಮರಗಿಡಗಳನ್ನು ಸರ್ಕಾರಿ ಸಿಬ್ಬಂದಿಯೇ ಪ್ರಜ್ಞಾಶೂನ್ಯರಾಗಿ ಕಡಿದುಹಾಕುತ್ತಿರುವುದರ ಮತ್ತು ಅದನ್ನು ನಾವು ಅಷ್ಟೇ ಪ್ರಜ್ಞಾಶೂನ್ಯರಾಗಿ ನೋಡುತ್ತಿರುವುದರ ದೂರದ ಪರಿಣಾಮವೇ ಇರಬಹುದಲ್ಲವೇ? ಬಹುಶಃ ಇದು ಇದ್ದರೂ ಇರಬಹುದೆಂಬ ಆಲೋಚನೆಯೂ ಸುಳಿಯದಷ್ಟು ನಾವು ನಮ್ಮ 'ಅಂತರಂಗ'ವನ್ನು ಕಳೆದುಕೊಂಡಿದ್ದೇವೆ.

ನಾನು ವಾಸವಾಗಿರುವ ಶಿವಮೊಗ್ಗದ ಕಲ್ಲಳ್ಳಿ ಬಡಾವಣೆಯ ನನ್ನ ಮನೆಯಲ್ಲಿ ಮೊನ್ನೆ ಮಟ ಮಟ ಮಧ್ಯಾಹ್ನ ಏನೋ ಓದುತ್ತಾ ಕೂತಿದ್ದೆ. ಇದ್ದಕ್ಕಿದ್ದಂತೆ ಹೊರಗೆ ಒಂದೇ ಸಮನೆ ಏನೋ ಕಡಿದು ಬೀಳುತ್ತಿರುವ ಸದ್ದಾದಂತಾಗಿ ಬಾಗಿಲು ತೆಗೆದು ಹೋಗಿ ನೋಡಿದರೆ ನನ್ನ ಮನೆ ಮುಂದಿನ ಮೂರು ಮರಗಳಲ್ಲಿ ಎರಡು ತಮ್ಮ ಸಮೃದ್ಧ ಕೊಂಬೆಗಳನ್ನು ಕಳೆದುಕೊಂಡು ಬರೀ ಕಾಂಡ ರೂಪದಲ್ಲಿ ಬೋಳಾಗಿ ನಿಂತಿವೆ. ಇನ್ನೊಂದರ ಮೇಲೆ ವಿದ್ಯುತ್ ಇಲಾಖೆಯ ಸಹಾಯಕನೊಬ್ಬ ಮಚ್ಚು ಹಿಡಿದು ಕೊಂಬೆಗಳನ್ನು ಕೊಚ್ಚುತ್ತಿದ್ದಾನೆ. ಕಾರಣ, ಅವು ವಿದ್ಯುತ್ ಇಲಾಖೆಯ ತಂತಿಗಳಿಗೆ ತಾಗುವುವೆಂಬುದು. ನಾವೇ ನೆಟ್ಟು ಐದು ವರ್ಷಗಳಿಂದ ನೀರು ಹಾಕಿ ಬೆಳೆಸಿದ್ದ ಎರಡು ಹೊಂಗೆ ಮರಗಳು ಹಾಗೂ ಪಕ್ಕದಲ್ಲೇ ಬಹು ಹಿಂದಿನಿಂದಲೂ ಬೆಳೆದು ನಿಂತಿದ್ದ ಸಂಪಿಗೆ ಮರವನ್ನು ಇಷ್ಟು ವರ್ಷ ಇವರ ಮರಕಟುಕತನದಿಂದ ಹೇಗೋ ರಕ್ಷಿಸಿ ಕಾಪಾಡಿದ್ದ ನಮಗೆ ಎಂತಹ ಆಘಾತವಾಗಿರಬೇಡ! ಹತ್ತು ನಿಮಿಷಗಳ ಹಿಂದಷ್ಟೇ ನನ್ನ ಹೆಂಡತಿ ಹೊರಗೆ ಹೋಗುವಾಗ ಚೈತ್ರ ಮಾಸದ ಆ ಮರಗಳ ತುಂಬು ಸೊಬಗನ್ನೂ, ಅವುಗಳಲ್ಲಿ ಸಂಸಾರ ಹೂಡಿದ್ದ ಹಲವು ಪಕ್ಷಿಗಳ ಚಿಲಿಪಿಲಿಯನ್ನೂ ಕಂಡು, ಕೇಳಿ ಹರ್ಷಿಸಿ ಹೋಗಿದ್ದಳು. ಈಗ ನೋಡಿದರೆ ಎಲ್ಲ ಬೋಳು! ಹೊರೆ ಹೊರೆಯಾದ ಹಸಿರು ರಾಶಿ ಮನೆ ಮುಂದೆ ಕಡಿದು ಬಿದ್ದಿದೆ... ನನ್ನ ಅಸಹಾಯಕತೆಯನ್ನು ಅವಳಿಗೆ ಹೇಗೆ ಹೇಳುವುದು?

ಈ ಮರಕಟುಕ ಸಿಬ್ಬಂದಿಯೊಂದಿಗೆ ಮಾತಾಡುವುದೇ ಒಂದು ಎದೆ ಬಿರಿಯುವ ಅನುಭವ. ರಾಜ್ಯದಲ್ಲಿ ನಗರಾಭಿವೃದ್ಧಿಯ ಭಾಗವಾಗಿ ಮರಗಿಡ ನೆಡುವ ಕಾರ್ಯಕ್ರಮ ದೊಡ್ಡ ಪ್ರಮಾಣದಲ್ಲಿ ಆರಂಭವಾದಾಗಿನಿಂದ, ಅದನ್ನು ಹಂತಾನುಹಂತವಾಗಿ ನಾಶ ಮಾಡುತ್ತಾ ಬಂದಿರುವ ನಮ್ಮ ವಿದ್ಯುತ್ ಇಲಾಖೆ ಅಧಿಕಾರಿಗಳಿಗೆ, ಇದಕ್ಕೊಂದು ಶಾಶ್ವತ (ತಾಂತ್ರಿಕ) ಪರಿಹಾರ ಕಂಡುಹಿಡಿಯಬೇಕೆಂಬ ಯೋಚನೆಯೇ ಬಂದಂತಿಲ್ಲ. ಹಾಗಾಗಿಯೇ ನಗರಸಭೆಗಳು ಇತ್ತೀಚೆಗೆ ಬೀದಿಗಳಲ್ಲಿ ಮರಗಿಡಗಳನ್ನು ನೆಡುವ ಕಾರ್ಯಕ್ರಮವನ್ನು ನಿಲ್ಲಿಸಿದಂತೆ ಕಾಣುತ್ತದೆ. ಇನ್ನು ಮರಕಟುಕ ಸಿಬ್ಬಂದಿಗೆ ಮೇಲಧಿಕಾರಿಗಳಿಂದ, ತಮ್ಮ ಇಲಾಖೆಗೆ ತೊಂದರೆಯಾಗದಂತೆ ಮರ-ಗಿಡಗಳನ್ನು ಹೇಗೆ ನಾಜೂಕಾಗಿ ಸವರಿಕೊಂಡು ಹೋಗಬೇಕೆನ್ನುವ ಸೂಚನೆಗಳಾಗಲೀ, ಪೌರರೊಂದಿಗೆ ಹೇಗೆ ವರ್ತಿಸಬೇಕೆಂಬುದರ ಬಗೆಗಿನ ತರಬೇತಿಯಾಗಲೀ ಇಲ್ಲವೆಂದು ಕಾಣುತ್ತದೆ. ಅವರು ನಡೆಸುವ ಸಾರಾ ಸಗಟಾದ ಮರಕಟುಕ ಕೃತ್ಯದಲ್ಲಿ ಮಧ್ಯ ಪ್ರವೇಶಿಸಲು ಯತ್ನಿಸುವ ನಮ್ಮಂತಹವರ ಮೇಲೆ ಅವರು ಹರಿಹಾಯುವ ರೀತಿ ನಾವು ಯಾವ ವ್ಯವಸ್ಥೆಯಲ್ಲಿ ಬದುಕುತ್ತಿದ್ದೇವೆ ಎಂದು ಆಶ್ಚರ್ಯಪಡುವಷ್ಟು ಅನಾಗರಿಕವಾಗಿರುತ್ತದೆ.

ನಾವು ನೆಟ್ಟು, ವರ್ಷಗಳ ಕಾಲ ನೀರು ಹಾಕಿ ಬೆಳಸಿದ ಮರಗಿಡಗಳಿವು, ನಿಮ್ಮ ವಿದ್ಯುತಂತಿಗೆ ತಾಗುವ ಕೊಂಬೆಗಳನ್ನಷ್ಟೇ ಕಡಿದುಕೊಂಡು ಹೋಗಿರಿ ಎಂದು ಪರಿ ಪರಿಯಾಗಿ ಕೇಳಿಕೊಂಡರೂ, ಬೀದಿ ಬದಿಯ ಮರಗಿಡಗಳ ಮೇಲೆ ನಿಮಗೆ ಯಾವುದೇ ಅಧಿಕಾರವಿಲ್ಲ ಎಂದು ಘೋಷಿಸುತ್ತಾ, ಆಳೆತ್ತರದ ಸೌದೆ ಕಡಿದು ಹಾಕಿ ಹೋಗುತ್ತಾರೆ. ನಂತರ ಯಾರೋ ಬಂದು ಅದನ್ನು ಸಾಗಿಸಿಕೊಂಡು ಹೋಗುತ್ತಾರೆ. ನಾವು ಮಾತಿನ ಮಧ್ಯೆ, ಇಂದಿನ ಪರಿಸ್ಥಿತಿಯಲ್ಲಿ ಮರಗಿಡಗಳ ಮಹತ್ವದ ಬಗ್ಗೆ ಹೇಳುವ ಮಾತುಗಳಿಗೆ ಅವರಿಂದ ಬರುವ ವ್ಯಂಗ್ಯ- ಕುಹಕದ ಪ್ರತಿಕ್ರಿಯೆಗಳಂತೂ ಹೃದಯವನ್ನು ಇರಿಯುವಂತಹವು. ಇದರ ಜೊತೆಗೆ ನಾವು ಪ್ರತಿ ದಿನ ನೋಡಿ ಸಂತೋಷಿಸುತ್ತಿದ್ದ ಪುಟ್ಟ ಪಕ್ಷಿಗಳು, ಕಡಿದು ಬಿದ್ದ ಕೊಂಬೆಗಳ ಮೇಲಿದ್ದ ತಮ್ಮ ಮೊಟ್ಟೆ- ಮರಿ ಕಳೆದುಕೊಂಡು ಇಡೀ ದಿನ ಮಾಡುವ ಆರ್ತನಾದ ಕೇಳುವುದು ನಮಗೆ ಇನ್ನೊಂದು ಹೃದಯ ಕಲಕುವ ಸಂಗತಿ.

ಇದೆಲ್ಲದಕ್ಕಿಂತ ಆಘಾತಕರ ಸಂಗತಿ ಎಂದು ನನಗನಿಸಿದ್ದು, ನಾನು ಈ ಮರಕಟುಕತನದ ಬಗ್ಗೆ ಇಲಾಖೆಯ ಸಿಬ್ಬಂದಿಯೊಂದಿಗೆ ವಾದ- ವಿವಾದದಲ್ಲಿದ್ದ ಸಂದರ್ಭದಲ್ಲಿ ಬೀದಿಯಲ್ಲಿ ಬಿಸಿಲ ತಾಪ ತಾಳಲಾರದೆ ತಲೆಗೆ ಟವಲ್ ಸುತ್ತಿಕೊಂಡೋ, ಛತ್ರಿ ಹಿಡಿದುಕೊಂಡೋ ಬಸವಳಿದು ಹೋಗುತ್ತಿದ್ದ ಜನರಲ್ಲಿ (ಅಕ್ಕಪಕ್ಕದ ಮನೆಯರೂ ಸೇರಿದಂತೆ) ಯಾರೊಬ್ಬರೂ ಈ ಬಗ್ಗೆ ಕುತೂಹಲ ಅಥವಾ ಆಸಕ್ತಿ ತಾಳದೆ, ತಮಗೂ ಇದಕ್ಕೂ ಯಾವುದೇ ಸಂಬಂಧವಿಲ್ಲದಂತೆ ವರ್ತಿಸುತ್ತಿದ್ದುದು! ಒಂದು ಕಡೆ ಅಭೂತಪೂರ್ವ 'ಅಭಿವೃದ್ಧಿ'ಯ ಹೆಸರಿನಲ್ಲಿ ಶಿವಮೊಗ್ಗ ಜಿಲ್ಲೆಯಾದ್ಯಂತ ಕಳೆದ ಎರಡು- ಮೂರು ವರ್ಷಗಳಿಂದ ನೂರಾರು ವರ್ಷಗಳಷ್ಟು ಹಳೆಯದಾದ ಹಾಗೂ

ವೈವಿಧ್ಯಮಯ ಪ್ರಾಣಿ- ಪಕ್ಷಿಗಳಿಗೆ ಆಶ್ರಯ ನೀಡಿದ್ದ ಸಾವಿರಾರು ಮರಗಳ ಮಾರಣ ಹೋಮ ನಡೆದಿದೆ. ಇನ್ನೊಂದು ಕಡೆ ಕೋಟ್ಯಾಂತರ ರೂಪಾಯಿಗಳ ವೆಚ್ಚದಲ್ಲಿ ಸರ್ಕಾರದ ಕಡೆಯಿಂದ ವಿವಿಧ ಹೆಸರುಗಳಲ್ಲಿ ಪರಿಸರ ಆಂದೋಲನದ ಪ್ರೋತ್ಸಾಹ ಕಾರ್ಯಕ್ರಮಗಳೂ ನಡೆದಿವೆ. ಆದರೆ ಶಿವಮೊಗ್ಗ ನಗರ ಬೆಳೆಯುತ್ತಿರುವ ತನ್ನ ವಿಸ್ತಾರಕ್ಕೆ ತಕ್ಕ ಒಂದೂ ಹೊಸ ಉದ್ಯಾನವನದ ನಿರ್ಮಾಣ ಕಾಣದೆ, ತಾಪಮಾನ ೪೦ ಡಿಗ್ರಿ ಸೆ. ಮುಟ್ಟಿದೆ. ಜನ, ಪಶು- ಪಕ್ಷಿ-ಪ್ರಾಣಿ ಮತ್ತು ಮರ ಗಿಡಗಳು ತತ್ತರಿಸಿ ಹೋಗುತ್ತಿವೆ. ಇದರ ಮಧ್ಯೆ ಅಣ್ಣಾ ಹಜಾರೆಯವರು ವಿಜಯ ಸಾಧಿಸಿದರೆಂದು ರಾಜಕೀಯ ಭ್ರಷ್ಟಾಚಾರದ ವಿರೋಧಿ ಆಂದೋಲನಕಾರರಿಂದ ಸಿಹಿ ಹಂಚಿಕೊಂಡು ತಿನ್ನುವ ಕಾರ್ಯಕ್ರಮ ಬೇರೆ! ಮಾಧ್ಯಮದವರಿಗೂ ಇಂದು ಇಂತಹ ರೋಚಕ- ಸಂಭ್ರಮಗಳ ಸುದ್ದಿಯೇ ಬೇಕಾಗಿದೆ ಎಂದು ಕಾಣುತ್ತದೆ...

ಇದನ್ನೆಲ್ಲ ಗಮನಿಸಿದಾಗ, ಇಂದು ನಾವು ಯಾವುದರ ವಿರುದ್ಧ ಹೋರಾಡಲು ಹೊರಟಿದ್ದೀವೆಯೋ ಆ ಬೃಹತ್ ಭ್ರಷ್ಟಾಚಾರ ನಿಜವಾಗಿ ಎಲ್ಲಿಂದ ಆರಂಭವಾಗಿದೆ ಎಂದು ಯೋಚಿಸುವಂತಾಗುತ್ತದೆ. ನಮ್ಮ ಹತ್ತಿರದ ಗಿಡಮರಗಳ ಮತ್ತು ಅದನ್ನವಲಂಬಿಸಿದ ಜೀವಜಗತ್ತಿನ ಬಗೆಗೆ ಕನಿಷ್ಠ ಸಂವೇದನೆಯನ್ನೂ, ಜವಾಬ್ದಾರಿಯ ಅರಿವನ್ನೂ ಕಳೆದುಕೊಂಡಿರುವುದಕ್ಕೂ ಭ್ರಷ್ಟಾಚಾರ ಹೀಗೆ ಬೆಳೆದಿರುವುದಕ್ಕೂ ಸಂಬಂಧವಿದೆ ಅನ್ನಿಸುವುದಿಲ್ಲವೆ? ಈ ಭ್ರಷ್ಟಾಚಾರವೇನು ಇದ್ದಕ್ಕಿದ್ದಂತೆ ಬೃಹದಾಕಾರವಾಗಿ ಬೆಳೆದುಬಿಟ್ಟಿತೆ? ಅದರ ಬೇರುಗಳು ಸೂಕ್ಷ್ಮ ಸಂವೇದನೆಗಳನ್ನೇ ಕಳೆದುಕೊಳ್ಳುತ್ತಿರುವ ನಮ್ಮ ವ್ಯಕ್ತಿತ್ವಗಳ ಬುಡಗಳಲ್ಲೇ ಇವೆಯಲ್ಲವೇ? ಇಂದು ನಗರಗಳ ಬೀದಿಗಳಲ್ಲಿ ಯಾವುದಾವುದೋ ಕ್ಷುಲ್ಲಕ ಕಾರಣಕ್ಕೆ ಜನರನ್ನು ಹಾಡು ಹಗಲೇ ಕಡಿದುಹಾಕಲಾರಂಭಿಸಿರುವ ಭೀಭತ್ಸ ದೃಶ್ಯಗಳನ್ನು ನಾವು ನೋಡುವಂತಾಗಿರುವುದು, ನಮ್ಮ ಬೀದಿಗಳಲ್ಲಿನ ಮರಗಿಡಗಳನ್ನು ಸರ್ಕಾರಿ ಸಿಬ್ಬಂದಿಯೇ ಪ್ರಜ್ಞಾಶೂನ್ಯರಾಗಿ ಕಡಿದುಹಾಕುತ್ತಿರುವುದರ ಮತ್ತು ಅದನ್ನು ನಾವು ಅಷ್ಟೇ ಪ್ರಜ್ಞಾಶೂನ್ಯರಾಗಿ ನೋಡುತ್ತಿರುವುದರ ದೂರದ ಪರಿಣಾಮವೇ ಇರಬಹುದಲ್ಲವೇ? ಬಹುಶಃ ಇದು ಇದ್ದರೂ ಇರಬಹುದೆಂಬ ಆಲೋಚನೆಯೂ ಸುಳಿಯದಷ್ಟು ನಾವು ನಮ್ಮ 'ಅಂತರಂಗ'ವನ್ನು ಕಳೆದುಕೊಂಡಿದ್ದೇವೆ. ಆದುದರಿಂದಲೇ ನಾವು ಅಣ್ಣಾ ಹಜಾರೆ ಉಪವಾಸ ನಿಲ್ಲಿಸಿದರೆಂದ ಕೂಡಲೇ ವಿಜಯೋತ್ಸವ ಶುರು ಮಾಡುವಷ್ಟು ನಮ್ಮ ವ್ಯಕ್ತಿತ್ವಗಳ ಟೊಳ್ಳುತನದ 'ಬಹಿರಂಗ' ಪ್ರದರ್ಶನ ಆರಂಭಿಸುತ್ತಿದ್ದೇವೆ.

ಹಾಗಾಗಿಯೇ ನಾನು ವಿದ್ಯುತ್ ಇಲಾಖೆಯ ಮರಕಟುಕರಿಗೆ, ನೀವು ಹೀಗೇ ಮರಗಿಡಗಳನ್ನು ಕಡಿಯುವುದನ್ನು ಮುಂದುವರೆಸಿದರೆ, ಯಾರಾದರೂ ನಿಮ್ಮಂತೆಯೇ ಯಾವುದೋ ಕಾರಣಕ್ಕೆ ಪ್ರಜ್ಞಾಶೂನ್ಯರಾಗಿ ನಿಮ್ಮ ಮಕ್ಕಳನ್ನೋ, ಮೊಮ್ಮಕ್ಕಳನ್ನೋ ಬೀದಿಗಳಲ್ಲಿ ಹೀಗೇ ಕಡಿದು ಹಾಕುವಂತಹ ದಿನಗಳು ಬರಲು ಬಹಳ ಕಾಲ ಕಾಯಬೇಕಿಲ್ಲ ಎಂದು ಎಚ್ಚರಿಸಬೇಕೆಂದಿದ್ದವನು ಕೆಟ್ಟ ಹಾರೈಕೆಗಳು ಬೇಡವೆಂದು ಸುಮ್ಮನಾದೆ.

(ಏಪ್ರಿಲ್, ೨೦೧೧)

ಮೈ ಮರೆತಂತಿರುವ ನಮ್ಮ ಸೆಕ್ಯುಲರ್ ರಾಜಕಾರಣ...

ಒಂದಂತೂ ನಿಜ. ಈ ಹಿಂದೆ ಎಡಪಂಥೀಯ ಅಥವಾ ಪ್ರಗತಿಪರ ರಾಜಕೀಯ ಚಟುವಟಿಕೆಗಳ ಕಡೆ ಒಲಿಯುತ್ತಿದ್ದ ಯುವಜನತೆ ಇಂದು ಬಹು ಸುಲಭವಾಗಿ ಕೋಮುವಾದಿ ರಾಜಕಾರಣದ ತೆಕ್ಕೆಗೆ ಜಾರುತ್ತಿದ್ದಾರೆ. ಯಾಕೆ? ಎಡಪಂಥೀಯರು ತಮ್ಮ ತಾತ್ವಿಕ ಶ್ರೇಷ್ಠತೆಯ ಅಹಂಕಾರದಲ್ಲಿ, ನಮ್ಮ ಇತಿಹಾಸ–ಪರಂಪರೆಯ ಬಗ್ಗೆ ಸಂಪೂರ್ಣ ಸಿನಿಕರಾಗಿ, ಅದನ್ನು ಸಾರಾಸಗಟಾಗಿ ಅವಹೇಳನ ಮಾಡುವುದೇ ಪ್ರಗತಿಪರತೆ ಎಂಬ ಅಭಿಪ್ರಾಯ ಕ್ರಮೇಣ ಜನ ಸಾಮಾನ್ಯರಲ್ಲಿ ಮೂಡುವಂತಹ ಉಡಾಫೆ ರಾಜಕಾರಣದಲ್ಲಿ ಮೈಮರೆತಿದ್ದೇ, ಹೊಸ ತಲೆಮಾರು ನಮ್ಮ ಮಾತುಗಳನ್ನು ಅನುಮಾನದಿಂದ ನೋಡುವಂತೆ ಮಾಡಿದೆಯಲ್ಲವೇ?

ಕಳೆದ ವಾರ ನಮ್ಮ ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನವು ಕರ್ನಾಟಕ ಸಮಾಜವಾದಿ ಅಧ್ಯಯನ ವೇದಿಕೆ ಹಾಸನದಲ್ಲಿ ಎರಡು ದಿನಗಳ 'ಸಂಸ್ಕೃತಿ ಶಿಬಿರ'ವೊಂದನ್ನು ಆಯೋಜಿಸಿತ್ತು. ಹೋದ ಡಿಸೆಂಬರ್‌ನಲ್ಲಿ ಕುಪ್ಪಳಿಯಲ್ಲಿ ನಡೆದ ಸಮಾಜವಾದಿ ಅಧ್ಯಯನ ಶಿಬಿರಕ್ಕೆ ಶಿಬಿರಾರ್ಥಿಯಾಗಿ ಬಂದಿದ್ದ ಬಿ. ಶಿವಕುಮಾರ್ ಆ ಶಿಬಿರದಿಂದ ಸ್ಫೂರ್ತಿಗೊಂಡು, ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ತಾವು ನಡೆಸುವ 'ವಿವೇಕ ಬ್ಯೂರೋ' ಎಂಬ ಪಾಠದ ಮನೆಯ ತಮ್ಮ ವಿದ್ಯಾರ್ಥಿಗಳಿಗಾಗಿ ಈ ಶಿಬಿರವನ್ನು ಪ್ರಾಯೋಜಿಸಿದ್ದರು. ಶಿಬಿರವನ್ನು ಕಿ.ರಂ. ನಾಗರಾಜ ಅವರು ಉದ್ಘಾಟಿಸಿದರೆ, ಕೆ.ವಿ.ನಾರಾಯಣ ಅವರದು ಸಮಾರೋಪ. ಎರಡು ದಿನಗಳ ಒಟ್ಟು ಎಂಟು ಗೋಷ್ಠಿಗಳಲ್ಲಿ ವಿವಿಧ ಕ್ಷೇತ್ರಗಳ ಪರಿಣತರು ಧರ್ಮ, ಇತಿಹಾಸ, ಸಾಹಿತ್ಯ, ಸಮೂಹ ಮಾಧ್ಯಮಗಳು, ವಿಜ್ಞಾನ, ಜಾಗತೀಕರಣ ಇತ್ಯಾದಿ ವಿಷಯಗಳ ಬಗ್ಗೆ ಮಾತನಾಡಿ ಚರ್ಚೆಗಳನ್ನು ನಡೆಸಿಕೊಟ್ಟರು. ಬಿ. ಶಿವಕುಮಾರರ ಒತ್ತಾಯಕ್ಕೆ ಮಣಿದೆಂಬಂತೆ ಶುಲ್ಕ ನೀಡಿ ಶಿಬಿರಕ್ಕೆ ಬಂದಿದ್ದ ಸುಮಾರು ನಲವತ್ತು ಜನ ಶಿಬಿರಾರ್ಥಿಗಳು, ಶಿಬಿರದ ಕೊನೆಯ ಹೊತ್ತಿಗೆ ತಂತಮ್ಮ ಪಠ್ಯಗಳ ಹೊರತಾಗಿಯೂ ಕಲಿಯಬೇಕಾದ ಎಷ್ಟೊಂದು ವಿಷಯಗಳಿವೆ, ಪ್ರತಿಯೊಂದು ವಿಷಯಕ್ಕೂ ಎಷ್ಟೊಂದು ಮಗ್ಗುಲುಗಳಿವೆ ಎಂದು ಆಶ್ಚರ್ಯ ಪಡುತ್ತಾ, ಮುಗ್ಧ ಪ್ರಶ್ನೆಗಳನ್ನು ಕೇಳುತ್ತಾ ಕುತೂಹಲ, ಶ್ರದ್ಧೆ, ಆಸಕ್ತಿಗಳಿಂದ ಚರ್ಚೆಯಲ್ಲಿ ಪಾಲ್ಗೊಂಡರು.

ಈ ಶಿಬಿರದಿಂದ ಬಿ.ಶಿವಕುಮಾರರ ವಿದ್ಯಾರ್ಥಿಗಳಿಗೆ ನಿಜವಾಗಿಯೂ ಎಷ್ಟು ಪ್ರಯೋಜನವಾಯಿತೋ ತಿಳಿಯದು. ಆದರೆ, ಶಿಬಿರದ ನಿರ್ದೇಶಕನಾಗಿದ್ದ ನನಗೆ ಮತ್ತು ಇತರೆ ಸಂಪನ್ಮೂಲ ವ್ಯಕ್ತಿಗಳಿಗೆ ಈ ಶಿಬಿರ, ನಮ್ಮ ಯುವಜನರ ಮನೋಲೋಕದ ಬಗ್ಗೆ ಹೊಸ ತಿಳುವಳಿಕೆ ನೀಡುವ, ಆ ಮೂಲಕ ಹೊಸ ಜವಾಬ್ದಾರಿಯೊಂದನ್ನು ಅರಿವು ಮಾಡಿಕೊಡುವ ಕೆಲಸದಲ್ಲಂತೂ ಯಶಸ್ವಿಯಾಯಿತು. ನಮ್ಮ ಯುವಜನರ ತಲೆಗಳಲ್ಲಿ ನಮ್ಮ ಧರ್ಮ, ಇತಿಹಾಸ ಮತ್ತು ವರ್ತಮಾನಗಳ ಬಗ್ಗೆ ಎಂತೆಂತಹ ವಿಷ ಬೀಜಗಳನ್ನು ಬಿತ್ತಲಾಗಿದೆ ಎಂಬ ಅರಿವುಂಟಾಗಿ ನಾವು ಕೆಲವರು ತತ್ತರಿಸಿದೆವು. ಶಿಬಿರದ ಉದ್ಘಾಟನೆಯ ನಂತರದಲ್ಲೇ ಆರಂಭವಾದ ಧರ್ಮ ಕುರಿತ ಗೋಷ್ಠಿಗೆ ಪ್ರಾಸ್ತಾವಿಕವಾಗಿ, ಇತ್ತೀಚೆಗೆ ದೆಹಲಿ ವಿಶ್ವವಿದ್ಯಾಲಯದಲ್ಲಿ ರಾಮಾಯಣದ ಬಹುಮುಖತೆ ಕುರಿತ ಪಠ್ಯವನ್ನು ಕೆಲವರು ಇತಿಹಾಸ ಪ್ರಾಧ್ಯಾಪಕರ ಮೇಲೆ ಹಲ್ಲೆ ಮಾಡುವ ಮೂಲಕ ವಿರೋಧಿಸಿದ್ದರ ಬಗ್ಗೆ ನಾನು ಮಾತನಾಡುತ್ತಿದ್ದಂತೆಯೇ, ಪ್ರಶ್ನೆಗಳಿಗೆ ವೇದಿಕೆ ಸಿದ್ಧವಾಯಿತು! ಲಕ್ಷ್ಮೀಶ ತೋಳ್ಪಾಡಿಯವರ ಮುಖ್ಯ ಭಾಷಣ ಕೇಳಿದ ನಂತರ ಪ್ರಶ್ನೆಗಳನ್ನು ಕೇಳಬಹುದು ಎಂದು ಅವರನ್ನು ಸುಮ್ಮನಿರಿಸಲಾಯಿತಾದರೂ, ಭಾಷಣ ಮುಗಿದ ತಕ್ಷಣವೇ ಮೊದಲ ಪ್ರಶ್ನೆ ಬಾಣದಂತೆ ಬಂತು:'ಬಹುಜನರ ಭಾವನೆಗಳನ್ನು ನೋಯಿಸುವಂತಹ ಪಠ್ಯಗಳನ್ನು ಇಟ್ಟವರನ್ನೇಕೆ ಹೊಡೆಯಬಾರದು?'

ಆತ ತೋಳ್ಪಾಡಿಯವರ ಭಾಷಣವನ್ನು ಕೇಳಿದ್ದರೆ, ಇಂತಹ ಪ್ರಶ್ನೆಯನ್ನೇ ಕೇಳುತ್ತಿರಲಿಲ್ಲ. ಆದರೆ ಆತ ಕೇಳಲು ಬಂದಂತಿರಲಿಲ್ಲ, ತಾನು ಈಗಾಗಲೇ ತಲೆಯಲ್ಲಿ ತುಂಬಿಕೊಂಡಿರುವುದನ್ನು ಹೇಳಲು ಮಾತ್ರ ಬಂದಂತಿದ್ದ. ವೇದೋಪನಿಷತ್ತುಗಳ ಜೊತೆಗೆ ಆಧುನಿಕ ಸಾಹಿತ್ಯ-ವಿಚಾರಗಳನ್ನೂ ಕರತಲಾಮಲಕ ಮಾಡಿಕೊಂಡಿರುವ ಲಕ್ಷ್ಮೀಶರು ಧರ್ಮ ಎಂದರೆ, ಮನುಷ್ಯನಿಗೆ ತನಗೆ ಗೊತ್ತು ಎಂಬುದು ಗೊತ್ತಾಗುವ ಮುನ್ನ ಇದ್ದ ಸ್ಥಿತಿಯ ಅರಿವು; ಅದೊಂದು ಪದ್ಧತಿ-ಸವೆದ ಹಾದಿ-ಅಲ್ಲ; ನಿರಂತರ ಹುಡುಕಾಟ ಎಂದು, ಒಂದೂವರೆ ತಾಸು ಹಲವು ನೆಲೆಗಳಲ್ಲಿ ಅದನ್ನು ಅತ್ಯದ್ಭುತವಾಗಿ ವಿವರಿಸಿದ್ದರು. ಆದರೆ ಅದನ್ನು ಕೇಳುವ ವ್ಯವಧಾನವಾಗಲಿ, ಸಂಯಮವನ್ನಾಗಲಿ, ಕುತೂಹಲವನ್ನಾಗಲಿ, ಶ್ರದ್ಧೆಯನ್ನಾಗಲೀ ತೋರದ ಈತ 'ಉದ್ವಿಗ್ನಗೊಳಿಸುವ ರಾಜಕಾರಣ ಇಲ್ಲಿ ಬೇಡ' ಎಂಬ ನನ್ನ ಮನವಿಗೆ ಪ್ರತಿಕ್ರಿಯಿಸಿದ್ದು ಹೀಗೆ: 'ನಮ್ಮದು ಉದ್ವಿಗ್ನತೆಯ ರಾಜಕಾರಣವಾದರೆ, ನಿಮ್ಮದು ವೈಚಾರಿಕ ರಾಜಕಾರಣವಷ್ಟೆ'! ರಾಜಕಾರಣ ಮಾಡಬೇಕಾದದ್ದೇ ವೈಚಾರಿಕ ನೆಲೆಯಲ್ಲಿ-ಚರ್ಚೆಯ ಮೂಲಕ-ಅಲ್ಲವೇ ಎಂಬ ನಮ್ಮ ಮಾತಿನಿಂದ ಸ್ವಲ್ಪ ಅವಾಕ್ಕದ ಈತ, ತನ್ನ ಬೆಂಬಲಕ್ಕೆ ಪಕ್ಕದಲ್ಲಿದ್ದ ತನ್ನ ಗೆಳೆಯನನ್ನು ಪ್ರಚೋದಿಸಿದ್ದು ಈ ಪ್ರಶ್ನೆಯ ಮೂಲಕ: 'ಹಿಂದೂ ಧರ್ಮ ರಕ್ಷಣೆಗಾಗಿ ಹಿಂಸೆಗೆ ಇಳಿದರೆ ತಪ್ಪೇನು?' ಈತನೊಬ್ಬ ಕಾಲೇಜು ಅಧ್ಯಾಪಕ ಎಂದು ಕೇಳಿ ನನ್ನೆದೆ ಝಲ್ಲೆಂದಿತು...

ಅದೇನೇ ಇರಲಿ, ತಮ್ಮ ಉದ್ಘಾಟನಾ ಭಾಷಣದಲ್ಲಿ, ಸಂಸ್ಕೃತಿ ಎಂದರೆ

ಸ್ಥಗಿತಗೊಂಡಿದ್ದನ್ನು ಚಲನಶೀಲಗೊಳಿಸುವ ಕ್ರಿಯಾಶಕ್ತಿ ಎಂದೂ ವ್ಯಾಖ್ಯಾನಿಸಿದ್ದ ಕಿ.ರಂ., ಈ ಹೊತ್ತಿಗೆ ಇವರ ಹಿನ್ನೆಲೆಯನ್ನು ಗುರುತಿಸಿದವರಂತೆ; ಬಹುಸಂಖ್ಯಾತರು ಎಂದರೆ ಯಾರು, ಹಲವು ರಾಮಾಯಣಗಳನ್ನು ಸೃಷ್ಟಿಸಿದವರು ಯಾರು, ಈ ಹಲವು ರಾಮಾಯಣಗಳು ಹೇಳುವ ಸತ್ಯ ಯಾರನ್ನು ಯಾಕೆ ನೋಯಿಸುತ್ತದೆ ಎಂಬ ಪ್ರಶ್ನೆಗಳನ್ನೆತ್ತಿಕೊಂಡು, ಹಿಂಸೆ ಹೇಗೆ ವಿವೇಚನೆ ಕಳೆದುಕೊಂಡವರ ಅಸ್ತ್ರ ಎಂಬುದನ್ನು ಸಾವಧಾನವಾಗಿ ವಿವರಿಸಲು ಯತ್ನಿಸಿದರು. ಕಲಿಯಲೆಂದೇ ಮುಕ್ತ ಮನಸ್ಸಿಟ್ಟು ಬಂದಿದ್ದ ಇತರ ಶಿಬಿರಾರ್ಥಿಗಳು ಕಿ.ರಂ.ರ ಮಾತುಗಳನ್ನು ಶಾಂತರಾಗಿ ಕೇಳಿದರಾದರೂ, ಮನಸ್ಸನ್ನು ಪೂರ್ತಿ ಮುಚ್ಚಿಕೊಂಡು ಬಂದಿದ್ದ ಆ ಇಬ್ಬರು ಮುವ್ವರು 'ಹಿಂದೂ ಧರ್ಮ ಮುಸ್ಲಿಮರ ದಾಳಿಗೆ ಸಿಕ್ಕಿ ತತ್ತರಿಸುತ್ತಿರುವ ಇಂದಿನ ಸಂದರ್ಭದಲ್ಲಿ ಈ ಚರ್ಚೆಯೆಲ್ಲ ಅನಗತ್ಯ' ಎಂಬ ಧಾಟಿಯಲ್ಲಿ ಮಾತನಾಡತೊಡಗಿದರು. ಆಗ ಸ್ವತಃ 'ಹಿಂದೂವಾದಿ'ಗಳೊಂದಿಗೆ ಸಾಂಸ್ಕೃತಿಕವಾಗಿಯಾದರೂ ಗುರುತಿಸಲ್ಪಟ್ಟಿರುವ ಲಕ್ಷ್ಮೀಶರು ತಳಮಳಿಸಿ ಹೇಳಿದ್ದು: 'ದಯವಿಟ್ಟು ಹಿಂದೂ ಧರ್ಮವನ್ನು ಇಸ್ಲಾಮೀಕರಿಸಿ ಹಾಳು ಮಾಡಬೇಡಿ!'. ಅಂದರೆ, ಧರ್ಮ ಬೆಳೆಯುವುದು ಮತ್ತು ಆ ಮೂಲಕ ಉಳಿಯುವುದು ತನ್ನನ್ನು ಸದಾ ವಿಮರ್ಶೆಗೆ ತೆರೆದುಕೊಂಡಿರುವ ಮೂಲಕ; ಸತ್ಯದ ಬಹುಮುಖತೆಯನ್ನು ಸಹಾನುಭೂತಿಯೊಡನೆ ಅರಿಯುವ ಮೂಲಕ. ಇದನ್ನು ಲಕ್ಷ್ಮೀಶರು ಪಕ್ರು ಎಂಬ ನಾಗರೀಕ ಲೋಕಕ್ಕೇ ತೆರೆದುಕೊಳ್ಳದ ಅನಕ್ಷರಸ್ಥ ತುಳುವನೊಬ್ಬ ತನ್ನದೇ ರಾಮಾಯಣವನ್ನು ಹೇಳಿದ್ದನ್ನೂ, ಅದು 'ಪಕ್ರು ರಾಮಾಯಣ'ವೆಂದೇ ದಾಖಲಾಗಿರುವುದನ್ನೂ ವಿವರಿಸಿದರು. ಹಾಗೇ ಆ ಪಕ್ರುವನ್ನೂ ಒಬ್ಬ ಗೌರವಾನ್ವಿತ ಹಿಂದೂ ಎಂದು ಪರಿಗಣಿಸದ ಹಿಂದೂ ಧರ್ಮಕ್ಕೆ ಭವಿಷ್ಯವಿಲ್ಲವೆಂದು ಲಕ್ಷ್ಮೀಶ್ ಎಚ್ಚರಿಸಿದಾಗ, ಅವರು ಛೀಮಾರಿ ಹಾಕಿಸಿಕೊಂಡವರಂತೆ ಸುಮ್ಮನೆ ಕೂತರಾದರೂ, ಇದರಿಂದಾಗಿ ಅವರಿಗೆ ತಮ್ಮ ರಾಜಕೀಯ ನಂಬಿಕೆ ಬಗ್ಗೆ ಅನುಮಾನಗಳೆದ್ದಂತೇನೂ ತೋರಲಿಲ್ಲ.

ಇದು ಇನ್ನಷ್ಟು ಸ್ಪಷ್ಟವಾದದ್ದು, ಮಾರನೆಯ ದಿನ ಖ್ಯಾತ ಇತಿಹಾಸ ಸಂಶೋಧಕರಾದ ಡಾ॥ ರಾಜಾರಾಮ ಹೆಗಡೆಯವರು ಇತಿಹಾಸ ಎಂದರೇನು ಎಂಬ ಬಗ್ಗೆ ಉಪನ್ಯಾಸ ನೀಡಿ, ಪಾಶ್ಚಾತ್ಯರ ಸಾಕ್ಷ್ಯಾಧಾರಿತ ಇತಿಹಾಸದ ಕಲ್ಪನೆ ಹಾಗೂ ಭಾರತೀಯರ ಪೌರಾಣಿಕ ಇತಿಹಾಸದ ಕಲ್ಪನೆಗಳು ಆಧುನಿಕ ಕಾಲದಲ್ಲಿ ಹೇಗೆ ಮುಖಾಮುಖಿಯಾಗಿ ಗೊಂದಲಗಳನ್ನು ಸೃಷ್ಟಿಸುತ್ತಿವೆ ಎಂಬುದನ್ನು ವಿಷದೀಕರಿಸುತ್ತಾ, ರಾಮಾಯಣದ ಸತ್ಯಾಸತ್ಯತೆಯನ್ನು ಕುರಿತ ಸದ್ಯದ ಚರ್ಚೆಯೇ ಅಸಂಗತ ಎಂದಾಗ. ಕೂಡಲೇ, ಹಿಂದಿನ ದಿನದ ಇಬ್ಬರ ಪ್ರಶ್ನೆಗಳು ಇಂದು ಹಲವರ ಪ್ರಶ್ನೆಗಳಾಗಿ ಮಾರ್ಪಾಡಾದವು! ಹಲವು ಶಿಬಿರಾರ್ಥಿಗಳಲ್ಲಿ 'ರಾಮಾಯಣ ಹಾಗಾದರೆ ಸುಳ್ಳೋ?' ಎಂಬ ಪ್ರಶ್ನೆ ಎದ್ದು, ಒಂದಿಬ್ಬರು ಹೆಗ್ಗಡೆಯವರ 'ಭಾರತೀಯತೆ'ಯನ್ನೇ ಪ್ರಶ್ನಿಸಲು ಯತ್ನಿಸಿದರು! ಹೆಗಡೆಯವರು 'ರಾಮಾಯಣ ಮಹಾಭಾರತಗಳ ಬಗ್ಗೆ ಇಂತಹ ಪ್ರಶ್ನೆ ಕೇಳುವುದೇ ಅಸಂಗತ. ನಮ್ಮ ಪೂರ್ವಿಕರು ಅವು ನಿಜವೋ ಸುಳ್ಳೋ ಎಂಬ ಪ್ರಶ್ನೆಯನ್ನೇ

ಮುಖ್ಯ ಮಾಡಿಕೊಳ್ಳದೆ, ಅವನ್ನು ಗೌರವಿಸುತ್ತಾ, ಅವುಗಳಿಂದ ಸ್ಫೂರ್ತಿ ಪಡೆಯುತ್ತಾ ತಮ್ಮ ಬದುಕಿಗಾಗಿ ಮೌಲ್ಯ ನಿರ್ಮಾಣ ಮಾಡಿಕೊಳ್ಳುತ್ತಾ ಬಂದಿದ್ದಾರೆ. ಇಂತಹ ಪ್ರಶ್ನೆಗಳೆದ್ದಿರುವುದು ಪಾಶ್ಚಾತ್ಯ ಇತಿಹಾಸ ಕಲ್ಪನೆಯನ್ನೇ ಇತಿಹಾಸ ಕಲ್ಪನೆಯ ಏಕೈಕ ಹಾಗೂ ನಿಜವಾದ ಮಾದರಿ ಎಂದು ನಂಬಿರುವವರಿಂದ' ಎಂದು ಎಷ್ಟೇ ಸ್ಪಷ್ಟಪಡಿಸಿದರೂ, ರಾಮಾಯಣ ವಾಸ್ತವಿಕವಾಗಿ ನಡೆಯದೇ ಇದ್ದರೂ ಇರಬಹುದು–ಅಂದರೆ ಸುಳ್ಳಿರಬಹುದು–ಎಂಬ ಅನುಮಾನದಿಂದ ಆಘಾತಗೊಂಡವರಂತೆ ಕಂಡುಬಂದ ಈ ಎಳೆಯರು, ರಾಮಾಯಣ ನಡೆದೇ ಇದೆಯೆಂದು ತಾವು ನಂಬಲು ಇರುವ ಸಾಕ್ಷ್ಯಗಳ ಕಡೆ ಹೆಗಡೆಯವರ ಗಮನ ಸೆಳೆಯತೊಡಗಿದರು...

ಸಮುದ್ರದಲ್ಲಿ ರಾಮಸೇತು ಕಣ್ಣಿಗೆ ಕಾಣುವಂತೆಯೇ ಇದೆಯಲ್ಲಾ? ಅಯೋಧ್ಯೆಯಲ್ಲಿ ಬಿದ್ದ ಮಸೀದಿಯ ಕೆಳಗೆ ದೇವಸ್ಥಾನದ ಅವಶೇಷಗಳು ಸಿಕ್ಕಿವೆ ಎಂದು ಸರ್ಕಾರ ನೇಮಿಸಿದ್ದ ಆಯೋಗವೇ ಹೇಳುತ್ತಿದೆಯಲ್ಲವೇ? ರಾವಣನ ಅರಮನೆ ಇದೆಯೆಂದು ಶ್ರೀಲಂಕಾದವರೇ ಒಪ್ಪಿಕೊಂಡಿದ್ದಾರೆ! ಈ ಎಲ್ಲ 'ಸಾಕ್ಷ್ಯ'ಗಳನ್ನು ಕೇಳಿ, ಇವೆಲ್ಲ ಮೂಲತಃ 'ಸುದ್ದಿ'ಗಳೇ ಹೊರತು ನಂಬಲರ್ಹವಾದ ಸಾಕ್ಷ್ಯಗಳು ಏಕಲ್ಲ ಎಂದು ವಿವರಿಸಿದ ಹೆಗಡೆಯವರು, ಇತಿಹಾಸದ ವಿಷಯದಲ್ಲಿ ಇತಿಹಾಸ ಶಾಸ್ತ್ರವನ್ನು ಅಧ್ಯಯನ ಮಾಡಿದ ಇತಿಹಾಸಕಾರರನ್ನು ನೀವು ನಂಬುತ್ತೀರೋ ಅಥವಾ ಬೀದಿ ಬದಿ ಭಾಷಣ ಮಾಡುವ ರಾಜಕಾರಣಿಯ ಹಾಗೂ ಮಾರುಕಟ್ಟೆಯನ್ನಷ್ಟೇ ಗಮನದಲ್ಲಿಟ್ಟುಕೊಂಡು ಪ್ರಕಟವಾಗುವ ಪತ್ರಿಕೆಗಳ ವರದಿಗಳನ್ನು ನಂಬುತ್ತೀರೋ ಎಂದು ಕೇಳಿದರು. ಇದಕ್ಕೆ ಪ್ರತಿಕ್ರಿಯೆ ಎಂಬಂತೆ, ಇತಿಹಾಸಕಾರನ ಬದಲಾಗಿ ರಾಜಕಾರಣಿಗಳನ್ನೂ, ಪತ್ರಿಕೆಗಳನ್ನೂ ನಂಬಲು ಸಿದ್ಧರಿರುವ ಸಂಖ್ಯೆಯೇನೂ ಕಡಿಮೆಯಲ್ಲ ಎಂಬ ಸೂಚನೆ ದೊರೆತು ನಾವು ತಲ್ಲಣಗೊಂಡೆವು!

ಒಂದಷ್ಟು ಜನ ವಿಚಾರವಾದಿಗಳು ಮತ್ತು ಬುದ್ಧಿಜೀವಿಗಳೆನಿಸಿಕೊಂಡವರು ನಮ್ಮ ಹೆಮ್ಮೆಯ ಸಂಸ್ಕೃತಿಗೆ ಅಪಚಾರವೆಸಗುವ ಪಿತೂರಿ ನಡೆಸಿದ್ದಾರೆ ಎಂಬ ರಾಜಕೀಯ ಪ್ರಚಾರಕ್ಕೆ ಇವರೆಲ್ಲ ಬಲಿಯಾಗಿದ್ದಾರೆ ಎನಿಸಿದರೂ, ನಾವು ಎಷ್ಟೆಲ್ಲ ಆಧಾರ–ವಿಚಾರಗಳೊಂದಿಗೆ ಸ್ಪಷ್ಟಪಡಿಸಿದರೂ ಇವರೇಕೆ ನಮ್ಮ ಮಾತುಗಳನ್ನು ನಂಬಲು ಹಿಂಜರಿಯುತ್ತಿದ್ದಾರೆ ಎಂಬ ಆಶ್ಚರ್ಯ ಮತ್ತು ಪ್ರಶ್ನೆಗಳು ನಮ್ಮನ್ನು ಕಾಡದಿರಲಿಲ್ಲ. ಶಿಬಿರ ಮುಗಿಯುವವರೆಗೂ ತಮ್ಮ ಹಿಂದೆ ಬಿದ್ದ ಇಂತಹವರ ಶಂಕೆ–ಸಂದೇಹ–ಪ್ರಶ್ನೆಗಳಿಗೆ ಉತ್ತರಿಸಿ, ವಿವರಣೆ ನೀಡಿ ಸುಸ್ತಾಗಿದ್ದ ಹೆಗಡೆಯವರಿಗೆ ಕೊನೆಗೆ ಅನಿಸಿದ್ದು: 'ಇವರೊಂದಿಗೆ ಮಾತಾಡುವುದೇ ಮೂರ್ಖತನ'. ನಂತರ ತಮ್ಮ ಅನ್ನಿಸಿಕೆಯನ್ನು ತಿದ್ದಿಕೊಂಡದ್ದು ಹೀಗೆ: 'ಇದು ನಮ್ಮ ಕಾಲೇಜುಗಳಲ್ಲಿ ಪಾಠ ಮಾಡುವ ಇತಿಹಾಸದ ಅಧ್ಯಾಪಕರು ಸೃಷ್ಟಿಸಿರುವ ಮೂರ್ಖತನ'. ತದನಂತರ ತಮ್ಮೊಳಗೆ ತಾವೇ ಯೋಚಿಸಿದವರಂತೆ ಆತಂಕದಿಂದ ಹೇಳಿದ್ದು: 'ಇವರ ಮನಸ್ಸಿಗೆ ಒಪ್ಪುವಂತೆ ಹೇಳುವ ವಿಧಾನವನ್ನು ಆದಷ್ಟು ಬೇಗ ನಾವು ರೂಪಿಸಿಕೊಳ್ಳದಿದ್ದರೆ, ಯಾವುದೇ ವಿಷಯದ ಅಧ್ಯಯನವೆಂಬುದಕ್ಕೇ ಉಳಿಗಾಲವಿಲ್ಲದಾಗುತ್ತದೆ.'

ನನಗೂ ಹಾಗೆ ಅನಿಸಿದ್ದು ನಾನು ಗಾಂಧೀಜಿಯ 'ಹಿಂದ್ ಸ್ವರಾಜ್' ಬಗ್ಗೆ ಮಾತಾಡಿ ಕೂತ ನಂತರ. ಆವರೆಗೆ ಬಾಯಿ ಬಿಚ್ಚದೆ ಕೂತಿದ್ದ ಹುಡುಗಿಯೊಬ್ಬಳು ಮೆಲ್ಲಗೆ, 'ನೀವು ಏನೇ ಹೇಳಿದರೂ ಗಾಂಧಿಯನ್ನು ಒಪ್ಪಲು ಸಾಧ್ಯವಿಲ್ಲ' ಎಂದಾಗ! ಆಕೆ ಇತರರೆಲ್ಲಿ ನನ್ನ ಮಾತು ಕೇಳಿ ಗಾಂಧಿಯನ್ನು ಒಪ್ಪಿಕೊಂಡು ಬಿಡುವರೋ ಎಂಬ ಆತಂಕದಲ್ಲಿದ್ದಂತಿತ್ತು... ಹಾಗಾಗಿಯೇ ಆಕೆ 'ಸುಭಾಷ್ ಚಂದ್ರಬೋಸರು ಎಲ್ಲಿ ಹೋದರು ಸರ್?' ಎಂಬ ಪ್ರಶ್ನೆಯನ್ನೂ ಎಸೆದಳು. ಆಕೆಯ ಈ ಪ್ರಶ್ನೆಯ ಹಿಂದೆ ಸುಭಾಷ್ ಕಣ್ಮರೆಯಾಗಲು ಗಾಂಧೀಜಿಯೇ ಕಾರಣ ಎಂಬ ನಂಬಿಕೆ ಇದ್ದಂತಿತ್ತು. ಹಾಗೇ ಹುಡುಗನೊಬ್ಬ 'ಭಗತ್ ಸಿಂಗರನ್ನು ಕೊಂದ ಇಂಗ್ಲಿಷರು ಗಾಂಧಿಯನ್ನೇಕೆ ಕೊಲ್ಲಲಿಲ್ಲ?' ಎಂದು ಕೇಳಿದ. ಆತನ ಅನುಮಾನ: ಗಾಂಧೀಜಿ ಇಂಗ್ಲಿಷರೊಂದಿಗೆ ಶಾಮೀಲಾಗಿದ್ದುದರಿಂದ ಅವರನ್ನು ಕೊಲ್ಲಲಿಲ್ಲ! ಇಂತಹ ಪ್ರಶ್ನೆಗಳಿಂದ ಸ್ಫೂರ್ತಿಗೊಂಡ ಮತ್ತೊಬ್ಬ ಹುಡುಗ ತನ್ನೊಳಗಿನ ಅನುಮಾನವನ್ನು ಮುಗ್ಧವಾಗಿ ಹೊರಹಾಕಿದ: 'ಮುಸ್ಲಿಮರೆಲ್ಲ ಭಯೋತ್ಪಾದಕರಾಗಿ ಹಿಂದೂಗಳನ್ನು ಕೊಲ್ಲುತ್ತಿರುವಾಗ, ಗಾಂಧೀಜಿಯ ಹಿಂದೂ-ಮುಸ್ಲಿಂ ಐಕ್ಯತೆಯ ಸಂದೇಶವನ್ನು ಇಂದು ಒಪ್ಪಿಕೊಳ್ಳುವುದಾದರೂ ಹೇಗೆ?'

ಗಾಬರಿಯಾಗುವುದಲ್ಲವೇ? ಈ ಎಲ್ಲ ಪ್ರಶ್ನೆಗಳಿಗೆ ನಾವು ಆಯಾ ಪ್ರಶ್ನೆಗಳ ಹಿಂದಿದ್ದ ವ್ಯಂಗ್ಯ ಹಾಗೂ ಅನುಮಾನಗಳನ್ನನುಸರಿಸಿ ಚುರುಕು ಮುಟ್ಟುವಂತೆ, ಅನುಮಾನಗಳು ಪರಿಹಾರವಾಗುವಂತೆ ಉತ್ತರ ಕೊಟ್ಟೆವಾದರೂ; ಮತ್ತು ಸಮಾರೋಪ ಭಾಷಣ ಮಾಡಿದ ಕೆ.ವಿ. ನಾರಾಯಣರು, 'ನಿಮ್ಮದಲ್ಲದ ಸಾಂಸ್ಕೃತಿಕ ವಾರಸುದಾರಿಕೆಯನ್ನು ನಿಮ್ಮದೆಂಬಂತೆ ನಂಬಿಸಿ, ಅದನ್ನು ಆತ್ಮಹತ್ಯಾ ಬಾಂಬ್‌ನಂತೆ ನಿಮ್ಮ ಸೊಂಟಕ್ಕೆ ಕಟ್ಟಲಾಗಿದೆ. ಅದರ ರಿಮೋಟ್ ಕಂಟ್ರೋಲ್ ಕೂಡಾ ಅವರ ಕೈಯಲ್ಲೇ ಇದೆ ಎಂಬುದನ್ನು, ಅವರು ಸ್ವಿಚ್ ಒತ್ತುವ ಮುನ್ನ ನೀವು ತಿಳಿದರೆ ಒಳ್ಳೆಯದು!' ಎಂದು ಎಚ್ಚರಿಸಿದರಾದರೂ, ನಮ್ಮ ಮಾತುಗಳ ಪರಿಣಾಮದ ಬಗ್ಗೆ ನಮಗೇ ಪೂರ್ಣ ನಂಬಿಕೆ ಬರದಂತಹ ವಾತಾವರಣ ಅಲ್ಲಿ ಸೃಷ್ಟಿಯಾಗುತ್ತಿದ್ದುದು ನಮ್ಮ ಗಮನಕ್ಕೆ ಬರತೊಡಗಿತ್ತು. ನಮ್ಮನ್ನು ಪ್ರಚೋದಿಸಿದಂತಹ ಪ್ರಶ್ನೆಗಳನ್ನು ಕೇಳಿದವರು ಕೆಲವರೇ ಆದರೂ, ಮಿಕ್ಕವರನ್ನು ಪ್ರಭಾವಿಸುವ ಅವರ ತಂತ್ರ, ರೊಚ್ಚು, ಕೆಚ್ಚು, ಮುನ್ನೋಟ, ಬದ್ಧತೆಗಳು ನಮ್ಮ ಕಣ್ಣಿಗೆ ರಾಚುವಂತಿದ್ದವು. ಕೋಮುವಾದಿ ರಾಜಕಾರಣ ಅಷ್ಟೇನೂ ಬೇರೂರಿರದ ಹಾಸನದಲ್ಲೇ ಪರಿಸ್ಥಿತಿ ಹೀಗಿದ್ದರೆ, ಇತರ ಕಡೆ?

ಒಂದಂತೂ ನಿಜ. ಈ ಹಿಂದೆ ಎಡಪಂಥೀಯ ಅಥವಾ ಪ್ರಗತಿಪರ ರಾಜಕೀಯ ಚಟುವಟಿಕೆಗಳ ಕಡೆ ಒಲಿಯುತ್ತಿದ್ದ ಯುವಜನತೆ ಇಂದು ಬಹು ಸುಲಭವಾಗಿ ಕೋಮುವಾದಿ ರಾಜಕಾರಣದ ತೆಕ್ಕೆಗೆ ಜಾರುತ್ತಿದ್ದಾರೆ. ಯಾಕೆ? ಎಡಪಂಥೀಯರು ತಮ್ಮ ತಾತ್ವಿಕ ಶ್ರೇಷ್ಠತೆಯ ಅಹಂಕಾರದಲ್ಲಿ, ನಮ್ಮ ಇತಿಹಾಸ-ಪರಂಪರೆಯ ಬಗ್ಗೆ ಸಂಪೂರ್ಣ ಸಿನಿಕರಾಗಿ, ಅದನ್ನು ಸಾರಾಸಗಟಾಗಿ ಅವಹೇಳನ ಮಾಡುವುದೇ ಪ್ರಗತಿಪರತೆ ಎಂಬ ಅಭಿಪ್ರಾಯ ಕ್ರಮೇಣ ಜನ ಸಾಮಾನ್ಯರಲ್ಲಿ ಮೂಡುವಂತಹ ಉಡಾಫೆ

ರಾಜಕಾರಣದಲ್ಲಿ ಮೈಮರೆತಿದ್ದೇ, ಹೊಸ ತಲೆಮಾರು ನಮ್ಮ ಮಾತುಗಳನ್ನು ಅನುಮಾನದಿಂದ ನೋಡುವಂತೆ ಮಾಡಿದೆಯಲ್ಲವೇ? ಉದಾಹರಣೆಗೆ, ಸಮಾಜವಾದಕ್ಕೆ ಒದಗಿರುವ ಗತಿ ನೋಡಿ. ಅದು ಮೂಲತಃ ಸಾಂಸ್ಕೃತಿಕ ರಾಷ್ಟ್ರೀಯತೆಯನ್ನೂ ತನ್ನ ಸ್ಫೂರ್ತಿ ಕೇಂದ್ರವೊಂದನ್ನಾಗಿ ಮಾಡಿಕೊಂಡು ಕಟ್ಟಿಕೊಂಡ ಸಾಮಾಜಿಕ ನ್ಯಾಯದ ಸಂಕೀರ್ಣ ರಾಜಕಾರಣ. ಆದರೆ ನಾವು ಕಳೆದ ಮುವ್ವತ್ತು ವರ್ಷಗಳಲ್ಲಿ ಅದಕ್ಕೆ ಪೆರಿಯಾರ್‌ವಾದ, ಹಾವನೂರ್‌ವಾದ, ಅಹಿಂದವಾದ ಇತ್ಯಾದಿ ನಮ್ಮದೇ ಬಣ್ಣಗಳನ್ನು ಬಳಿದು ಅದರ ಸಂಕೀರ್ಣತೆಯನ್ನೆಲ್ಲ ಕಳೆದು, ಅದನ್ನೊಂದು ಅಗ್ಗದ ಜಾತಿ ರಾಜಕಾರಣದ ಸಾಧನವನ್ನಾಗಿ ಮಾರ್ಪಡಿಸಿ ಅದರ ವಿಶ್ವಾಸಾರ್ಹತೆಯನ್ನೇ ಕಳೆದಿದ್ದೇವೆ.

ಹೀಗಾಗಿ, ತನ್ನೆಲ್ಲ ಅಧ್ಯಾತ್ಮಿಕತೆಯನ್ನು (ಅಂದರೆ ತನ್ನ ಆವೃತ ದೃಷ್ಟಿಕೋನವನ್ನು) ಕಳೆದುಕೊಂಡಿರುವ, ಈ ಜಾತಿವಾದಿ ರಾಜಕಾರಣದ ಹಿಂದಿನ ಫಲಾನುಭವಿಗಳೇ ಇಂದು ಕೋಮುವಾದಿ ರಾಜಕಾರಣದ ಬೆನ್ನೆಲುಬಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ನಮ್ಮ ಎಡಪಂಥೀಯ ಪ್ರಗತಿಪರತೆ ತನ್ನ ಈ ಅನುಯಾಯಿಗಳನ್ನು ಅರ್ಧ ಮನುಷ್ಯರನ್ನಾಗಿ ಮಾಡಿ ಕೈಬಿಟ್ಟಿದೆ. ಇನ್ನರ್ಧಕ್ಕಾಗಿ ಅವರ ಮುಂದಿರುವ ಏಕೈಕ ಹಾಗೂ ಸುಲಭ ಆಯ್ಕೆ, ತಮ್ಮ ಸಾಂಸ್ಕೃತಿಕ ಅಹಂಕಾರದ ಅಗತ್ಯವನ್ನು ತಣಿಸಬಲ್ಲ 'ಭವ್ಯ' ಭೂತವೊದನ್ನು ಕಟ್ಟಿಕೊಡುವ ಕೋಮುವಾದಿ ರಾಜಕಾರಣವೇ ಆಗಿರುವಂತೆ ತೋರುತ್ತದೆ. ಏಕೆಂದರೆ ಇಂದಿನ ನಮ್ಮ 'ಸೆಕ್ಯುಲರ್' ರಾಜಕಾರಣ ತನ್ನೆಲ್ಲ ಉದಾತ್ತ ಆಶಯಗಳನ್ನು ಕಳೆದುಕೊಂಡು, ಬರೀ ಹೇಗಾದರೂ ಗಳಿಸಿ, ತಿಂದು, ಕುಡಿದು ನಲಿದು ಸಾಯುವ ಬರೀ ಪದಾರ್ಥ ರಾಜಕಾರಣವಾಗಿ ಮಾರ್ಪಟ್ಟಿದೆ. ಯಾರಾದರೂ ಇದರ ಬಗ್ಗೆ ಯೋಚಿಸುವ ವ್ಯವಧಾನ ತೋರಬಲ್ಲರೇ?

(ಏಪ್ರಿಲ್ ೪, ೨೦೦೮)

■

ವಂದೇಮಾತರಂ ಮತ್ತು ಸೆಕ್ಯುಲರಿಸಂ

ಈಗಲಾದರೂ ನಾವು 'ಸೆಕ್ಯುಲರಿಸಂ' ತತ್ವವನ್ನು ಪುನರ್‌ನಿರೂಪಿಸುವ ಕಡೆ ಗಮನಹರಿಸಬೇಕಿದೆ. ಅದು ತನ್ನ ಪಾಶ್ಚಿಮಾತ್ಯ ಆಧುನಿಕ ಅರ್ಥದಲ್ಲಿ, ರಾಷ್ಟ್ರ ವಿಭಜನೆಯ ಉದ್ವಿಗ್ನ ಸಂದರ್ಭದಲ್ಲಿ ತನ್ನ ವಿಶಿಷ್ಟ ಕೊಡುಗೆ ಸಲ್ಲಿಸಿ; ನಂತರ ಒಂದು ರಾಜಕೀಯ ಸಾಧನವಾಗಿ ಅವನತಿಗೊಂಡು, ತನ್ನ ಮೂಲ ಆಶಯಕ್ಕೆ ವ್ಯತಿರಿಕ್ತವಾದ ರಾಜಕಾರಣಕ್ಕೆ ದಾರಿಮಾಡಿಕೊಟ್ಟಿದೆ. ಆದುದರಿಂದ ಈಗ ಅದಕ್ಕೆ, ಅಂತರ್ಧರ್ಮೀಯ ಸಂದರ್ಭದ ಮತ ವಿಶಿಷ್ಟ ಭಾರತೀಯ ವ್ಯಕ್ತಿತ್ವವನ್ನು ಅರ್ಥ ಮಾಡಿಕೊಂಡು ರಾಜಕೀಯವನ್ನು ನಿರ್ವಹಿಸುವ ಒಂದು ಸಾಂಸ್ಕೃತಿಕ ಗ್ರಹಿಕೆಯ ಆಯಾಮವನ್ನು ನೀಡಬೇಕಾಗಿದೆ. ಧರ್ಮವನ್ನು ಒಂದು ಏಕಶಿಲಾ ರೂಪದ ಜಡಶಕ್ತಿಯಾಗಿ ನೋಡಿ ಅದು ಪ್ರಜಾಪ್ರಭುತ್ವವಾದಿ ರಾಜಕಾರಣಕ್ಕೆ ಕಂಟಕವೆಂದು ಭಾವಿಸುವ ತಪ್ಪು ಮಾಡದೆ, ಅದರೊಳಗಿನ ಬಹುಮುಖಿ ಚಲನಶೀಲತೆಯನ್ನು ಪ್ರಜಾಪ್ರಭುತ್ವವಾದಿ ರಾಜಕಾರಣದ ಗುರಿ ಸಾಧನೆಗೆ ಬಳಸುವ ಪ್ರತಿಭೆಯನ್ನು ಅದಕ್ಕೆ ರೂಢಿಸಿ ಕೊಡಬೇಕಿದೆ.

ಎಡಪಂಥೀಯ ರಾಜಕಾರಣ ಈಗ ಅದರೆಲ್ಲ ಆವೃತ್ತಿಗಳಲ್ಲಿ ಸಿದ್ಧ ಮಾದರಿಗೆ ಬಿದ್ದಂತೆ ತೋರುತ್ತಿದೆ. ತಮ್ಮ ರಾಜಕಾರಣಕ್ಕೆ ಯಾರದಾದರೂ ಸರಿ, ಹೇಗಾದರೂ ಸರಿ ಬೆಂಬಲ ಸಂಘಟಿಸಿಕೊಳ್ಳಲು ನಡೆಸುತ್ತಿರುವ ಪ್ರಯತ್ನ ಎಡಪಂಥೀಯ ರಾಜಕಾರಣದ ಉದ್ದೇಶಗಳನ್ನೇ ಸಂದೇಹಾಸ್ಪದಗೊಳಿಸಿದೆ. ಇದು ನಿಜವಾಗಿಯೂ ಆತಂಕದ ವಿಷಯ.

ನಾವು ಇತ್ತೀಚಿನ ದಿನಗಳಲ್ಲಿ ನಮ್ಮದೇ ಆದ 'ಸಾಮಾನ್ಯ ಭಾಷೆ'ಯಲ್ಲಿ ಮಾತನಾಡುವುದನ್ನು ಮರೆತಿದ್ದೇವೆ ಅನ್ನಿಸುತ್ತಿದೆ. ಬಾಯಿ ಬಿಟ್ಟರೆ ಬರುವುದು ನಾವು ನಂಬಿದ, ನಮ್ಮ ನಿಷ್ಠೆ ಇರುವ ರಾಜಕೀಯ ಪಕ್ಷದ ಅಥವಾ ಸಿದ್ಧಾಂತದ ಪರಿಭಾಷೆಯೇ. ಆ ಪರಿಭಾಷೆಯೂ ಆ ಪಕ್ಷದ ಅಥವಾ ಸಿದ್ಧಾಂತದ ತಾತ್ವಿಕತೆಯಿಂದ ಹುಟ್ಟಿದ್ದಲ್ಲ; ಬದಲಾಗಿ ಸದ್ಯದ ಪರಿಸ್ಥಿತಿಯಲ್ಲಿ ತನ್ನ ಎದುರಾಳಿ ಎನಿಸಿರುವ ರಾಜಕೀಯ ಪಕ್ಷದ ಅಥವಾ ಸಿದ್ಧಾಂತದ ವಿಶ್ವಾಸಾರ್ಹತೆಯನ್ನು ನಾಶ ಮಾಡುವ ಗುರಿಯನ್ನಷ್ಟೇ ಹೊಂದಿದ ಪ್ರತಿಕ್ರಿಯಾತ್ಮಕ ಪರಿಭಾಷೆ ಅದು. ಇಂತಹ ಪರಿಭಾಷೆಯ ಬಳಕೆಯಿಂದ ಯಾವ

ಚರ್ಚೆಯೂ ಬೆಳೆಯಲಾರದು; ಯಾವ ಸತ್ಯವನ್ನೂ ಬಿಚ್ಚಿಡಲಾಗದು. ಬದಲಾಗಿ ಸತ್ಯ ಮತ್ತಷ್ಟು ಮುಚ್ಚಿ ಹೋಗುವ ಸಂಭವವೇ ಹೆಚ್ಚು. ಇದಕ್ಕೆ ಉದಾಹರಣೆ, 'ವಂದೇ ಮಾತರಂ' ಬಗ್ಗೆ ಈಗ ನಾಡಿನಾದ್ಯಂತ ಹಿಂದೂ ರಾಷ್ಟ್ರೀಯವಾದಿ ಎಂದು ಹೇಳಲಾಗುವ ಬಿಜೆಪಿ ಮತ್ತು ಅದರ ಪರಿವಾರ ಹಾಗೂ ಸೆಕ್ಯುಲರ್ ಎಂದು ಹೇಳಲಾಗುವ ಕಾಂಗ್ರೆಸ್ ಮತ್ತು ಅದರ ಮಿತ್ರ (ಹಾಗೂ ಎಡಪಂಥೀಯ) ಪಕ್ಷಗಳ ನಡುವೆ ನಡೆಯುತ್ತಿರುವ ಪರೋಕ್ಷ ಚರ್ಚೆ.

ಮೊದಲಾಗಿ ಈ ಚರ್ಚೆಗೆ ಮೂಲಕಾರಣವಾದ ಸಂಗತಿಯೇ ಚರ್ಚಾರ್ಹವಾಗಿದೆ. ಇದೇ ಸೆಪ್ಟೆಂಬರ್ ೭ಕ್ಕೆ 'ವಂದೇ ಮಾತರಂ'ಗೆ ನೂರು ವರ್ಷವಂತೆ. ಯಾವ ಆಧಾರದ ಮೇಲೆ ಇದನ್ನು ನಿರ್ಧರಿಸಲಾಯಿತೋ ತಿಳಿಯದು. ಏಕೆಂದರೆ ಈ ಗೀತೆ ಒಳಗೊಂಡಿರುವ ಬಂಕಿಮಚಂದ್ರ ಚಟರ್ಜಿ ಅವರ ಬಂಗಾಳಿ ಕಾದಂಬರಿ ಮೊದಲ ಪ್ರಕಟವಾದದ್ದು ೧೮೮೨ರಲ್ಲಿ. ಆದರೆ ಈ ಗೀತೆಯನ್ನು ಕಾದಂಬರಿ ಭಾಗವಾಗಿ ಬರೆಯಲಾಗಲಿಲ್ಲ. ಅದಕ್ಕೆ ಆರು ವರ್ಷಗಳ ಮುಂಚೆಯೇ ಚಟರ್ಜಿ ಆ ಗೀತೆಯನ್ನು ಒಂದು ಸ್ವತಂತ್ರ ಭಕ್ತಿಗೀತೆಯನ್ನಾಗಿ ಬರೆದು ಪ್ರಚುರಪಡಿಸಿದ್ದರು. ಅದು ಬಂಗಾಳಿ ಸಾರಸ್ವತ ಲೋಕದಲ್ಲಿ ಜನಪ್ರಿಯವಾದ ಪರಿಣಾಮವಾಗಿಯೇ ಏನೋ ಮತ್ತು ಆರು ವರ್ಷಗಳ ನಂತರ ತಾವು ಬರೆದ 'ಆನಂದ ಮಠ' ಕಾದಂಬರಿಯ ವಸ್ತುವಿಗೆ ಸೂಕ್ತವಾದುದು ಎಂದೆನ್ನಿಸಿಯೇ ಏನೋ, ಚಟರ್ಜಿ ಆ ಹಾಡನ್ನು ಆ ಕಾದಂಬರಿಯಲ್ಲಿ ಸ್ಫೂರ್ತಿ ಗೀತೆಯಾಗಿ ಬಳಸಿದರು. ಹೀಗಾಗಿ ಈ ಹಾಡಿಗೆ ಈಗ ೧೩೦ ವರ್ಷ.

ಕಾದಂಬರಿಯನ್ನೇ ಲೆಕ್ಕಕ್ಕೆ ತೆಗೆದುಕೊಂಡರೆ, ೧೨೪ ವರ್ಷ. ಆದರೆ ಕೇಂದ್ರ ಮಾನವ ಸಂಪನ್ಮೂಲ ಸಚಿವ ಅರ್ಜುನ್‌ಸಿಂಗ್‌ರ ದಾಖಲೆಗಳ ಪ್ರಕಾರ ಈ ಗೀತೆಗೆ ಈಗ ಶತಮಾನೋತ್ಸವದ ಸಂಭ್ರಮ! ಬಹುಶಃ ಗೀತೆ ಮೊದಲ ಬಾರಿಗೆ ಸ್ವಾತಂತ್ರ್ಯ ಸಂಗ್ರಾಮದ ಸ್ಫೂರ್ತಿ ಗೀತೆಯಾಗಿ ಬಳಕೆಯಾಗಿ ಒಂದುನೂರು ವರ್ಷಗಳಾಗಿರುವ ಸಂದರ್ಭವಿರಬಹುದು. (ಇದು ೧೯೦೬ರ ವಾರಾಣಾಸಿ ಕಾಂಗ್ರೆಸ್ ಸಮ್ಮೇಳನದಲ್ಲಿ ರವೀಂದ್ರನಾಥ ಠಾಕೂರರು ಈ ಗೀತೆಯನ್ನು ಹಾಡಿದ್ದರ ಶತಮಾನೋತ್ಸವವೆಂದೂ ಹೇಳಲಾಗುತ್ತದೆ.) ಒಂದು ನೂರು ವರ್ಷಗಳ ಹಿಂದಷ್ಟೆ (೧೯೦೮) ಪ್ರಥಮ ಬಾರಿಗೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಈ ಹಾಡಿನ ಬಳಕೆಯ ಬಗ್ಗೆ ಮುಸ್ಲಿಂ ಲೀಗ್ ತನ್ನ ಆಕ್ಷೇಪಣೆಯನ್ನು ವ್ಯಕ್ತಪಡಿಸಿತು. ಆದರೆ ಯಾರೂ ಇದನ್ನೆಲ್ಲ ದಾಖಲೆಗಳೊಂದಿಗೆ ಸ್ಪಷ್ಟಗೊಳಿಸುವ ಗೋಜಿಗೆ ಹೋಗಿಲ್ಲ. ಬಿಜೆಪಿಯೊಂದಿಗೆ ರಾಷ್ಟ್ರ ಭಕ್ತಿ ಮೆರೆಯುವ ಸ್ಪರ್ಧೆಯ ತುರುಸಿನಲ್ಲಿ ಅರ್ಜುನ್ ಸಿಂಗ್‌ರಿಗೆ ಇದೆಲ್ಲ ಅಗತ್ಯವಾಗಿಯೇ ಕಂಡಿಲ್ಲ!

ಅರ್ಜುನ ಸಿಂಗರೇನೋ ರಾಷ್ಟ್ರ ಭಕ್ತಿ ಮೆರೆಯುವ ಹುರುಪಿನಲ್ಲಿ, ಸೆ. ೭ರಂದು ರಾಷ್ಟ್ರದ ಎಲ್ಲ ಶಾಲೆಗಳಲ್ಲೂ 'ವಂದೇ ಮಾತರಂ' ಹಾಡಬೇಕು ಎಂಬ ಆದೇಶ ಹೊರಡಿಸಿದರು. ಆದರೆ ಈ ಆದೇಶದ ಬೆನ್ನಿಗೇ ಕೆಲವು ಮುಸ್ಲಿಂ ಧಾರ್ಮಿಕ ನಾಯಕರಿಂದ ಅಪಸ್ವರಗಳೂ ಕೇಳ ಹೊರಟವು. ಇದಕ್ಕೊಂದು ಹಿನ್ನೆಲೆಯೂ ಇತ್ತು. ೧೯೯೯ರಲ್ಲಿ

ಉತ್ತರ ಪ್ರದೇಶದಲ್ಲಿ ಅಧಿಕಾರದಲ್ಲಿದ್ದ ಬಿಜೆಪಿ 'ವಂದೇ ಮಾತರಾಂ' ಗೀತೆಯನ್ನು ರಾಜ್ಯದ ಎಲ್ಲ ಶಾಲೆಗಳಲ್ಲೂ ಪ್ರತಿದಿನ ಹಾಡುವುದನ್ನು ಕಡ್ಡಾಯಗೊಳಿಸುವ ಆದೇಶ ಹೊರಡಿಸಿ, ಆಗಿನ ಪ್ರಧಾನಿ ವಾಜಪೇಯಿಯವರ ಮಧ್ಯಸ್ಥಿಕೆಯಲ್ಲಿ ಅದನ್ನು ವಾಪಸ್ ಪಡೆದಿತ್ತು. ಆಗ ಎತ್ತಿದ್ದ ಆಕ್ಷೇಪಣೆಗಳನ್ನೇ ಈಗಲೂ ಮುಸ್ಲಿಂ ಧಾರ್ಮಿಕ ನಾಯಕರು ಪುನರುಚ್ಚರಿಸುತ್ತಿದ್ದಾರೆ. ಅರ್ಜುನ್‌ಸಿಂಗ್‌ರೇನೋ ಹಾಡುವುದು ಕಡ್ಡಾಯವೆಂದು ತಮ್ಮ ಆದೇಶದಲ್ಲಿ ಹೇಳಿಲ್ಲ ಎಂದು ಈಗ ಸಮಜಾಯಿಷಿ ನೀಡಿ, ರಾಷ್ಟ್ರ ಭಕ್ತಿಯ ಜೊತೆಗೆ ಸ್ವಲ್ಪ ಸೆಕ್ಯುಲರಿಸಂನ್ನೂ ಬೆರೆಸಿ ಕಾಂಗ್ರೆಸ್ ನಿಲುವನ್ನು ಬ್ಯಾಲೆನ್ಸ್ ಮಾಡಲು ಹೊರಟಿದ್ದಾರೆ. ಆದರೆ ತಮ್ಮ ನಿಲುವಿನ ಬಗ್ಗೆ ತಮಗೇ ನಂಬಿಕೆ ಅಥವಾ ಭರವಸೆ ಇಲ್ಲದ್ದನ್ನು ಸೂಚಿಸುವ ಈ ಸಮಜಾಯಿಷಿ ಹುಟ್ಟು ಹಾಕಿರುವ ರಾಜಕಾರಣ, ಎಷ್ಟು ಅಪಾಯಕಾರಿ ಎಂಬುದರ ಪರಿವೆಯೇ ಅವರಿಗೆ ಇದ್ದಂತಿಲ್ಲ.

ದೆಹಲಿಯ ಷಾಹಿ ಇಮಾಂ 'ವಂದೇ ಮಾತರಂ' ಹಾಡುವುದು ಇಸ್ಲಾಂಗೆ ಬಗೆದ ದ್ರೋಹವೆಂದು ಘೋಷಿಸಿದ್ದಾರೆ. ಹೈದರಬಾದ್‌ನ ಇಬ್ಬರು ಮೌಲ್ವಿಗಳು, ಅದೆಷ್ಟೇ ಒಳ್ಳೆಯ ಗುಣಮಟ್ಟದ ಶಾಲೆಯಾಗಿದ್ದರೂ ಅಲ್ಲಿ 'ವಂದೇ ಮಾತರಂ' ಹಾಡುವಂತಿದ್ದರೆ, ಅಂತಹ ಶಾಲೆಗಳಿಂದ ತಮ್ಮ ಮಕ್ಕಳನ್ನು ಬಿಡಿಸಿಕೊಂಡು ಬರಲು ಮುಸ್ಲಿಮರಿಗೆ ಸೂಚನೆ (ಫತ್ವಾ) ನೀಡಿದ್ದಾರೆ. ಮುಸ್ಲಿಂ ವೈಯುಕ್ತಿಕ ಕಾನೂನು ಮಂಡಳಿಯ ಸದಸ್ಯರೊಬ್ಬರು-ಅವರು ಆಧುನಿಕ ವಿದ್ಯೆ ಪಡೆದವರು-ಪತ್ರಿಕೆಯೊಂದರಲ್ಲಿ ಪ್ರಕಟವಾದ 'ವಂದೇ ಮಾತರಂ' ವಿವಾದ ಕುರಿತ ವಿಶ್ಲೇಷಣಾತ್ಮಕ ಲೇಖನವು, ಆ ಲೇಖನದ ಜೊತೆಗೆ ಪ್ರಕಟವಾಗಿರುವ ಭಾರತ ಮಾತೆಯ ಚಿತ್ರದ ಕಾರಣದಿಂದಾಗಿ ಮೈಲಿಗೆಗೊಂಡಿದೆ ಎಂದು ಟಿ.ವಿ. ಸಂದರ್ಶನವೊಂದರಲ್ಲಿ ಹೇಳಿದ್ದಾರೆ!

ಬಿಜೆಪಿಯವರಂತೂ ರಾಷ್ಟ್ರ ಭಕ್ತಿಯು 'ವಂದೇ ಮಾತರಂ'ನಲ್ಲಿ ಮಾತ್ರ ಅಡಗಿರುವಂತೆ, ಕೆಲ ಮುಸ್ಲಿಂ ಧಾರ್ಮಿಕ ನಾಯಕರ ಅಸಮಾಧಾನವನ್ನು ಇಡೀ ಮುಸ್ಲಿಂ ಸಮಾಜದ ಮೇಲೆ ಹೊರಿಸಿ, ತನ್ನ ಹಿಂದೂ ರಾಷ್ಟ್ರೀಯವಾದಿ ರಾಜಕಾರಣ ಕುರಿತು ಇತ್ತೀಚೆಗೆ ತನ್ನಲ್ಲೇ ಉಂಟಾಗಿದ್ದ ಕೆಲವು ಅಪನಂಬಿಕೆಗಳನ್ನು ಪರಿಹರಿಸಿಕೊಳ್ಳಲು ಹಾತೊರೆಯುತ್ತಿರುವಂತಿದೆ. ಹಾಗಾಗಿಯೇ ಅದು ಈಗ ತಾನು ಆಳುತ್ತಿರುವ ರಾಜ್ಯಗಳಲ್ಲಿ 'ವಂದೇ ಮಾತರಂ' ಗೀತೆಯನ್ನು ಶಾಲೆಗಳಲ್ಲಿ ಕಡ್ಡಾಯ ಮಾಡಿ ಆದೇಶ ಹೊರಡಿಸಿದೆ. ಈ ಗೊಂದಲದ ಮಧ್ಯೆ ಎಡಪಂಥೀಯರೆನಿಸಿಕೊಂಡ ಕೆಲವರು ತಮ್ಮ ಉಗ್ರ ಕ್ರಾಂತಿಕಾರಕತೆಯ ಅಂಗವಾಗಿ ಅಲ್ಪಸಂಖ್ಯಾತರ ಹಿತರಕ್ಷಣೆಗೆ ಮುಂದಾಗುವ ಉತ್ಸಾಹದಲ್ಲಿ ಸೆಕ್ಯುಲರಿಸಂ ಹೆಸರಿನಲ್ಲಿ 'ವಂದೇ ಮಾತರಂ' ಹಾಡಿನ ಬಗ್ಗೆಯೇ ಜನರಲ್ಲಿ ತಪ್ಪು ತಿಳುವಳಿಕೆ ಉಂಟು ಮಾಡಲು ಯತ್ನಿಸುತ್ತಿರುವುದು ವಿಷಾದಕರ. ಇತ್ತೀಚಿನ ದಿನಗಳಲ್ಲಿ ನಮ್ಮ 'ಪ್ರಗತಿಪರ' ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುವ ಲೇಖನಗಳೇ ಇದಕ್ಕೆ ಸಾಕ್ಷಿ.

ಈ ಹಿನ್ನೆಲೆಯಲ್ಲಿ ಮೊದಲು ಸ್ಪಷ್ಟಪಡಿಸಬೇಕಾದದ್ದು ಎಂದರೆ, 'ವಂದೇ ಮಾತರಂ' ಗೀತೆಗೆ 'ಆನಂದ ಮಠ' ಕಾದಂಬರಿಯ ಹೊರತಾಗಿಯೂ, ಅದು ಕಾದಂಬರಿ ರಚನೆಗೆ

ಮುನ್ನವೇ ರಚಿತವಾಗಿ ಜನಪ್ರಿಯವಾಗಿದ್ದುದರಿಂದ, ಒಂದು ಸ್ವತಂತ್ರ ಅಸ್ತಿತ್ವವಿದೆ. ಹಾಗೂ, ಅದು ಬಳಕೆಯಾಗಿರುವ ಈ ಕಾದಂಬರಿ, ಭಾರತವು ಒಂದು ರಾಷ್ಟ್ರವಾಗಿ (ನೇಷನ್ ಸ್ಟೇಟ್ ಅನ್ನುವ ಅರ್ಥದಲ್ಲಿ) ಕಲ್ಪನೆಗೆ ಬರುವ ಮುನ್ನವೇ ರಚಿತವಾದ ಕೃತಿಯಾಗಿದ್ದು, ಮುಘಲರ ಆಳ್ವಿಕೆಯ ಕೊನೆಯ ಘಟ್ಟದ ರಾಜಕೀಯ ಸ್ಥಿತ್ಯಂತರವನ್ನು ಆಗಿನ ಬಂಗಾಳದ ಸಂದರ್ಭದಲ್ಲಿ ಚಿತ್ರಿಸುವ ಒಂದು ಐತಿಹಾಸಿಕ ಕಾಂಬರಿಯಾಗಿದೆ ಎಂಬುದು. ಎರಡು ಸಂಸ್ಕೃತಿಗಳ ಘರ್ಷಣೆಯೇ ಇದರ ವಸ್ತು. ಹತ್ತೊಂಭತ್ತನೇ ಶತಮಾನದ ಬರವಣಿಗೆಯ ಭಾವನಾತ್ಮಕ ಶೈಲಿ ಹಾಗೂ ಐತಿಹಾಸಿಕ ಕಾದಂಬರಿ ಪ್ರಕಾರ ಬೇಡುವ ರಭಸಗತಿ, ಈ ಘರ್ಷಣೆಯನ್ನು ಅತಿ ಆವೇಶಭರಿತವನ್ನಾಗಿ ಮಾಡಿದೆಯಾದರೂ, ಈ ಕೆಲ 'ಪ್ರಗತಿಪರ' ಲೇಖಕರ ಲೇಖನಗಳು ತಿಳಿಸುವಂತೆ ಎಲ್ಲಿಯೂ ಮುಸ್ಲಿಮರ ರಕ್ತದೋಕುಳಿಯ ಸಂಭ್ರಮದಲ್ಲಿ ಹಿಂದೂಗಳು 'ವಂದೇ ಮಾತರಂ' ಹಾಡುವ ಹುಚ್ಚುತನ ಚಿತ್ರಿತವಾಗಿಲ್ಲ. ಎಲ್ಲ ಭಾರತೀಯ ಭಾಷೆಗಳ ಸಾಹಿತ್ಯದ ನವೋದಯಕ್ಕೆ ಸ್ಫೂರ್ತಿ ನೀಡಿದ ವಂಗ ನವೋದಯದ ಪಿತಾಮಹರೆನಿಸಿದ ಬಂಕಿಮರು ಅಷ್ಟು ರೂಕ್ಷ ಲೇಖಕರಲ್ಲ.

ಕಾದಂಬರಿಯಲ್ಲಿ 'ವಂದೇ ಮಾತರಂ' ಬಳಕೆಯಾಗಿರುವುದು ಮುಸ್ಲಿಂ ಆಳ್ವಿಕೆ ವಿರುದ್ಧ ಹೋರಾಟಕ್ಕೆ ಜನರನ್ನು ಸಜ್ಜುಗೊಳಿಸುವ ಸ್ಫೂರ್ತಿಗೀತೆಯಾಗಿ. ಆದರೆ ಈ ಗೀತೆಯಲ್ಲೆಲ್ಲೂ, ಈ ಲೇಖಕರು ತಿಳಿಸಿರುವಂತೆ ಮುಸ್ಲಿಮರನ್ನು ಮ್ಲೇಚ್ಛರು, ಯುವನರು ಎಂದು ಕರೆದು ಅವರನ್ನು ಕೊಚ್ಚು ಕಡಿ ಎಂದು ಕರೆ ಕೊಡುವ ಸಾಲುಗಳಿಲ್ಲ. ಇದ್ದರೆ ಯಾವ ಆವೃತ್ತಿಯಲ್ಲಿ ಎಂಬುದನ್ನು ದಯವಿಟ್ಟು ಇವರು ತೋರಿಸಿಕೊಡುವುದು ಒಳ್ಳೆಯದು. ಏಕೆಂದರೆ ಈ ಗೀತೆಯು ಕಾದಂಬರಿಗೆ ಹೊರತಾದ ಸ್ವತಂತ್ರ ರಚನೆಯಾಗಿದ್ದು, ತನ್ನ ಸಂದರ್ಭದ ರಾಷ್ಟ್ರ ಕಲ್ಪನೆ ಕುರಿತಾದ ಭಕ್ತಿ-ಶ್ರದ್ಧೆಗಳಷ್ಟೇ ಅಲ್ಲಿ ಪ್ರತಿಬಿಂಬಿತವಾಗಿವೆ. ವಿಷಾದವೆಂದರೆ, ಈ ಸಂದರ್ಭದಲ್ಲಿ ಈ ಗೀತೆಯನ್ನು ಬೆಂಬಲಿಸುವ ಮತ್ತು ಖಂಡಿಸುವ ಇಬ್ಬರಿಗೂ ಈ ಸಂಸ್ಕೃತ ಭೂಯಿಷ್ಠ ಗೀತೆಯ ಪೂರ್ಣ ಪಾಠದ ಪರಿಚಯವಾಗಲಿ, ಅದರ ವಿವಿಧ ಆವೃತ್ತಿ ಹಾಗೂ ಸಂಪಾದಿತ ರೂಪಗಳ ಹಿನ್ನೆಲೆಗಳಾಗಲೀ ತಿಳಿದಂತಿಲ್ಲ.

ಆದರೆ ನಮ್ಮ 'ಪ್ರಗತಿಪರ'ರೆನ್ನಿಸಿಕೊಂಡ ಕೆಲ ಗೆಳೆಯರು ತಮ್ಮ ರಾಜಕೀಯಕ್ಕಾಗಿ ಈ ಗೀತೆಯನ್ನು ಖಂಡಿಸಲು ಮುಸ್ಲಿಂ ಧಾರ್ಮಿಕ ನಾಯಕರಿಗಿಂತ ಮುಂದೆ ಹೋಗಿದ್ದಾರೆ. ನಮ್ಮದೇ ವಿಜಯನಗರ ಸಾಮ್ರಾಜ್ಯದ ಪತನದ ಕಥೆಯನ್ನು ಹಿಂದೂ-ಮುಸ್ಲಿಂ ಘರ್ಷಣೆಯ ಕಥೆಯನ್ನಾಗಿ ಪರಿಭಾವಿಸಬಾರದೆಂದು ಜನರಿಗೆ ವಿವೇಕ ಹೇಳುವ ನಾವು, ಬಂಗಾಳದ ಕಥೆ ಬಗ್ಗೆ ಏಕೆ ಹೀಗೆ ವಿವೇಕ ಕಳೆದುಕೊಂಡಂತೆ ವರ್ತಿಸುತ್ತೇವೆ? 'ಆನಂದ ಮಠ' ಕಾದಂಬರಿಯನ್ನು ಬಳಸಿಕೊಂಡು 'ವಂದೇ ಮಾತರಂ'ನ ಐತಿಹಾಸಿಕತೆ ಯನ್ನೇಕೆ ಅಲ್ಲಗಳೆಯಲು ಹೊರಟಿದ್ದೇವೆ? ಈ ಮೂಲಕ ನಾವು ಮಾಡುತ್ತಿರುವ ರಾಜಕಾರಣದ ಪರಿಣಾಮಗಳಾದರೂ ಎಂತಹವು? ಯೋಚಿಸಬೇಕಾಗಿದೆ.

ಇಪ್ಪತ್ತನೇ ಶತಮಾನದ ಆರಂಭದ ಹೊತ್ತಿಗೆ ವಂಗ ನವೋದಯ ಪ್ರಭಾವ

ದೇಶಾದ್ಯಂತ ಆಗುತ್ತಿದ್ದಂತೆ, ಆ ವೇಳೆಯಲ್ಲಿ ಗರಿಗೆದರುತ್ತಿದ್ದ ಸ್ವಾತಂತ್ರ್ಯ ಆಂದೋಲನಕ್ಕೆ 'ವಂದೇ ಮಾತರಂ' ಒಂದು ಘೋಷಣೆಯನ್ನು ನೀಡಿತಲ್ಲದೆ, ಸ್ಫೂರ್ತಿ ಗೀತೆಯೂ ಆಯಿತು. ಹಿಂದೂ-ಸಿಖ್-ಮುಸ್ಲಿಂ-ಕ್ರಿಶ್ಚಿಯರೆನ್ನದೇ ದೇಶಾದ್ಯಂತ ಜನಸ್ತೋಮ, ಈ ಘೋಷಣೆ-ಗೀತೆಯೊಂದಿಗೆ ಪ್ರಭಾತ್ ಫೇರಿಗಳನ್ನು ನಡೆಸುತ್ತಿತ್ತು. ಹಾಗೂ ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ಜನರನ್ನು ಸಂಘಟಿಸಲು ಇದೊಂದು ಭಾವನಾತ್ಮಕ ಸಾಧನವಾಗಿ ಪರಿಣಮಿಸಿತು. ೧೯೦೮ರಲ್ಲಿಯೇ ತನ್ನ ಅಮೃತಸರ ಸಮಾವೇಶದಲ್ಲಿ ಅಖಿಲ ಭಾರತ ಮುಸ್ಲಿಂ ಲೀಗ್ ಈ ಗೀತೆಯ ಬಗ್ಗೆ, ಅದರ ಧಾರ್ಮಿಕ ಸ್ವರೂಪದ ಬಗ್ಗೆ ಅಪಸ್ವರವೆತ್ತಿತಾದರೂ, ಲೀಗ್ ಆಗಲಿ, ಸ್ವಾತಂತ್ರ್ಯ ಆಂದೋಲನದ ಮುಂಚೂಣಿಯಲ್ಲಿದ್ದ ಕಾಂಗ್ರೆಸ್ಸಾಗಲೀ, ಆಗ ಅವು ಇನ್ನೂ ಪರಿಣಾಮಕಾರಿ ಸಂಸ್ಥೆ, ಸಂಘಟನೆಗಳಾಗಿ ಬೆಳದಿರಲಿಲ್ಲವಾದ್ದರಿಂದ ಅದೊಂದು ದೊಡ್ಡ ವಿವಾದವಾಗಿ ಬೆಳೆಯಲಿಲ್ಲ.

ಆದರೆ ಮೂವತ್ತರ ದಶಕದ ಹೊತ್ತಿಗೆ 'ವಂದೇ ಮಾತರಂ' ಬಳಕೆಯೂ, ಕಾಂಗ್ರೆಸ್ಸೂ, ಮುಸ್ಲಿಂ ಲೀಗೂ ದೊಡ್ಡದಾಗಿ ಬೆಳೆದಿದ್ದವು. ಹಾಗಾಗಿ ವಿವಾದವೂ ದೊಡ್ಡದಾಯಿತು. ಆಗ ಕಾಂಗ್ರೆಸ್ ಈ ಬಗ್ಗೆ ನೆಹರೂ ಅಧ್ಯಕ್ಷತೆಯಲ್ಲಿ ಬಹುಧರ್ಮೀಯರ ಒಂದು ಪರಿಶೀಲನಾ ಸಮಿತಿ ನೇಮಿಸಿತು. ೧೯೩೭ರಲ್ಲಿ ಈ ಸಮಿತಿ 'ವಂದೇ ಮಾತರಂ'ಗೆ 'ಆನಂದ ಮಠ' ಕಾದಂಬರಿ ಹೊರತಾಗಿಯೂ ಸ್ವತಂತ್ರ ಅಸ್ತಿತ್ವವಿದೆಯೆಂದು ಘೋಷಿಸಿತಲ್ಲದೆ, ಈ ಗೀತೆ ಸ್ವಾತಂತ್ರ್ಯಾಂದೋಲನದ ಅವಿಭಾಜ್ಯ ಅಂಗವೆಂದು ಪರಿಗಣಿಸಿತು. ಜೊತೆಗೇ, ಈ ಗೀತೆಯ ಮೊದಲೆರಡು ಭಾಗಗಳು ಯಾವುದೇ ಧಾರ್ಮಿಕ ಸ್ವರೂಪ ಹೊಂದಿಲ್ಲವಾದ್ದರಿಂದ ಕಾಂಗ್ರೆಸ್ ಕಾರ್ಯಕ್ರಮಗಳಲ್ಲಿ ಆ ಭಾಗಗಳನ್ನಷ್ಟೇ ಹಾಡಬಹುದಾಗಿದೆ ಎಂದು ಸಲಹೆ ಮಾಡಿತು. ಅಲ್ಲಿಯವರೆಗೆ ಕೂಡಾ, ಈ ಭಾಗಗಳು ಸಾಹಿತ್ಯಿಕವಾಗಿ ಲಲಿತ ಸುಂದರವೂ, ಸುಭಗವೂ ಮತ್ತು ಲಯ ಮಾಧುರ್ಯದಿಂದ ಕೂಡಿದ್ದರಿಂದ ಮತ್ತು ಮುಂದಿನ ಭಾಗಗಳು ಕ್ಲಿಷ್ಟವೂ ಬಹುಶಃ ಹಾಡಲು ಕಷ್ಟವೂ ಆಗಿದ್ದರಿಂದ, ಗೀತೆಯ ಮೊದಲೆರಡು ಭಾಗಗಳನ್ನಷ್ಟೇ ಹಾಡಲಾಗುತ್ತಿತ್ತು. ಈಗ ಅದಕ್ಕೆ ಅಧಿಕಾರ ಮುದ್ರೆ ಬಿದ್ದು ವಿವಾದಕ್ಕೆ ತೆರೆ ಎಳೆಯಲಾಯಿತಷ್ಟೆ.

ಸ್ವಾತಂತ್ರ್ಯ ಘೋಷಣೆಯ ಸಂದರ್ಭದಲ್ಲೂ ಸಂವಿಧಾನ ರಚನಾ ಸಭೆಯಲ್ಲಿಯೂ ಈ ಗೀತೆ ಚರ್ಚೆಗೆ ಬಂತು. ರಾಷ್ಟ್ರ ವಿಭಜನೆಯ ಕಹಿ ವಾತಾವರಣದ ಕಾರಣದಿಂದಾಗಿ, ಆ ಹೊತ್ತಿಗಾಗಲೇ ವಾದ್ಯವೃಂದದಲ್ಲಿ 'ಭಾರತದ ರಾಷ್ಟ್ರೀಯ ಸೇನಾ (ಐ.ಎನ್.ಎ) ಗೀತೆ'ಯಾಗಿ ಜನಪ್ರಿಯವಾಗಿದ್ದ ಠಾಕೂರರ 'ಜನಗಣಮನ'ವನ್ನು ರಾಷ್ಟ್ರಗೀತೆಯನ್ನಾಗಿಯೂ, 'ವಂದೇ ಮಾತರಂ'ನ್ನು (ಮೊದಲೆರಡು ಭಾಗಗಳನ್ನಷ್ಟೇ ಒಳಗೊಂಡ ಸಂಪಾದಿತ ರೂಪವನ್ನು) ಸಮಾನ ಗೌರವದೊಡನೆ ರಾಷ್ಟ್ರೀಯ ಗೀತೆಯನ್ನಾಗಿಯೂ (ನ್ಯಾಷನಲ್ ಸಾಂಗ್) ಅಂಗೀಕರಿಸಲಾಯಿತು. ಆದುದರಿಂದ, ಅಧಿಕೃತವಾಗಿ ಈಗ 'ವಂದೇ ಮಾತರಂ' ಎಂದರೆ ಅದರ ಮೊದಲೆರಡು ಭಾಗಗಳಷ್ಟೇ. ರಾಷ್ಟ್ರದ ಅಧಿಕೃತ ಧ್ವನಿ ಎನಿಸಿರುವ ಆಕಾಶವಾಣಿ ಪ್ರತಿದಿನ ತನ್ನ ಕಾರ್ಯಕ್ರಮಗಳನ್ನು ಆರಂಭಿಸುವುದು

'ವಂದೇ ಮಾತರಂ'ನ ಈ ಆವೃತ್ತಿಯೊಂದಿಗೇ. ಮುಸ್ಲಿಂ ಧಾರ್ಮಿಕ ನಾಯಕರಿಗೆ ಈ ಬಗ್ಗೆಯೆಲ್ಲಾ ನಮ್ಮ 'ಪ್ರಗತಿಪರ' ಚಿಂತಕರಿಗಿಂತ ಹೆಚ್ಚು ಮಾಹಿತಿ ಇದ್ದಂತಿದೆ.

ಹಾಗಾಗಿಯೇ ಈ ನಾಯಕರು ಇಂದು ವಿರೋಧ ವ್ಯಕ್ತಪಡಿಸುತ್ತಿರುವುದು, 'ಆನಂದ ಮಠ' ಕಾದಂಬರಿಯ ಹಿನ್ನೆಲೆಯಲ್ಲಾಗಲೀ ಅಥವಾ ಗೀತೆಯ ಪೂರ್ಣಪಾಠದಲ್ಲಿ ದೇಶವನ್ನು ದುರ್ಗೆಯಾಗಿ ಕಂಡಿರುವ ಹಿಂದೂ ವಿಶಿಷ್ಟ ಗ್ರಹಿಕೆ ಬಗ್ಗೆಯಾಗಲೀ ಅಲ್ಲ. ಅವರ ವಿರೋಧವಿರುವುದು, ಗೀತೆಯ ಈ ಅಧಿಕೃತ ಆವೃತ್ತಿಯಲ್ಲೂ ದೇಶವನ್ನು 'ಮಾತೆ'ಯಾಗಿ ದೈವೀಕರಿಸಿ ಅದಕ್ಕೆ ವಂದನೆ ಸಲ್ಲಿಸುವ ಉಕ್ತಿ ಭಂಗಿ ಇರುವುದಕ್ಕಾಗಿ. ಏಕದೇವತಾ ಶ್ರದ್ಧೆಯ ಇಸ್ಲಾಂ ಧರ್ಮದಲ್ಲಿ ಅಲ್ಲಾಹು ಹೊರತಾಗಿ ಮಿಕ್ಕಾವ ದೈವಕ್ಕೂ ವಂದನೆ ಸಲ್ಲಿಸುವ ಅವಕಾಶವಿಲ್ಲದಿರುವುದರಿಂದ, ಈ ಗೀತೆಯನ್ನು ಹಾಡುವುದು ಧರ್ಮ ದ್ರೋಹವೆನಿಸಿಕೊಳ್ಳುವುದು ಎಂಬುದು ಅವರ ವಾದ. ಸಾಮಾನ್ಯ ನೋಟಕ್ಕೆ, ನಾವು ಒಪ್ಪಿಕೊಂಡಿರುವ ಪ್ರಜಾಪ್ರಭುತ್ವ ಹಾಗೂ ಸೆಕ್ಯುಲರ್ ತತ್ವಗಳ ಸಾಂವಿಧಾನಿಕ ನೆಲೆಯಲ್ಲಿ ಈ ವಾದ ಸರಿಯೆನಿಸುತ್ತದೆ. ಆದರೆ ಈ ವಾದದಲ್ಲಿರುವ ಜಡ ದೃಷ್ಟಿಕೋನವನ್ನೊಮ್ಮೆ ಭೇದಿಸಿ ನೋಡಿದಾಗ, ಇದು ಕೇವಲ ಮೊಂಡು ಹಠವೆನ್ನಿಸುತ್ತದೆ.

ಮುಸ್ಲಿಂ ಧರ್ಮದ ಪ್ರಕಾರ, ಇರುವುದೊಂದೇ ದೈವ–ಅಲ್ಲಾಹು. ಈ ದೈವ ಅಮೂರ್ತ, ಅನಂತ. ಇಂತಹ ಅಮೂರ್ತ ಅನಂತತೆ, ಮುಸ್ಲಿಮರು ವಾಸಿಸುವ ಯಾವುದೇ ರಾಷ್ಟ್ರ ವ್ಯವಸ್ಥೆ(ಅಥವಾ ಜಾಗ ಎಂದೇ ಎನ್ನಿ)ಯೂ ಸೇರಿದಂತೆ ಸಕಲವನ್ನೂ ಒಳಗೊಂಡಿರಬೇಕಲ್ಲವೇ? ಹಾಗಿರುವಾಗ, ಇಂಥಹ ರಾಷ್ಟ್ರ ಕಲ್ಪನೆಗೆ ವಂದಿಸಿದರೆ ಆ ವಂದನೆ ಆ ಅಲ್ಲಾಹುಗೇ ಸಲ್ಲುವುದಲ್ಲವೇ? ಇನ್ನು ಮಾತೆ ಸ್ತ್ರೀಲಿಂಗವಾಗಿರುವದರಿಂದ ಅಲ್ಲಾಹುಗೆ ಲಿಂಗಾರೋಪ ಮಾಡಲಾಗಿದೆ ಎನ್ನುವ ಕಾರಣಕ್ಕೂ ಕೆಲವರಿಂದ ವಿರೋಧ ವ್ಯಕ್ತವಾಗುತ್ತಿದೆ. ಗೀತೆ, ದೇಶದ ಪ್ರಕೃತಿ ಸೌಂದರ್ಯ ಹಾಗೂ ಭಾಷಾ ಮಾಧುರ್ಯಗಳನ್ನು ಕಾವ್ಯಭಾಷೆಯಲ್ಲಿ ಮಂಡಿಸುತ್ತಿರುವುದರಿಂದ, ಆ ಭಾಷೆಯ ಜಾಯಮಾನಕ್ಕೆ ತಕ್ಕಂತೆ ಆ ವರ್ಣನೆಯ ವಸ್ತುವಿಗೆ ಸಹಜವಾಗಿಯೇ ಸ್ತ್ರೀಲಿಂಗ ಆರೋಪಿತವಾಗಿದೆ. ಧರ್ಮ ಈ ಕಾವ್ಯ ತರ್ಕವನ್ನೂ ಸಹಿಸಲಾಗದಷ್ಟು ಅಸೂಕ್ಷ್ಮವೂ, ಜಡವೂ ಆಗಿರಬಲ್ಲದೇ? ಇರಲಾರದು. ಆ ಅಸೂಕ್ಷ್ಮತೆ, ಜಡತೆ ವ್ಯಾಖ್ಯಾನಕಾರರದು–ಧಾರ್ಮಿಕ ನಾಯಕರದು. ಆದರೆ ಸೆಕ್ಯುಲರಿಸಂ ಹೆಸರಿನಲ್ಲಿ ಇದನ್ನು ಪ್ರೋತ್ಸಾಹಿಸುವುದು ಎಂತಹ ಮೂರ್ಖತನ!

ಮಹಮ್ಮದ್ ಪೈಗಂಬರರೇ ಜಗತ್ತಿನ ಕೊನೆಯ ಪ್ರವಾದಿ ಎಂದು ನಂಬಿರುವ ಇಸ್ಲಾಂ, ಕಾಲ– ದೇಶಾನುಸಾರವಾದ ವ್ಯಾಖ್ಯಾನಗಳಿಗೆ ಅವಕಾಶವೀಯದೆ ಮುಚ್ಚಿಕೊಂಡ (closed) ಧರ್ಮ ಎನ್ನುವ ಸಾಮಾನ್ಯ ಅಭಿಪ್ರಾಯವಿದೆ. ಇದು ಇಸ್ಲಾಮನ್ನು ಅನ್ಯರ ಧರ್ಮವೆಂದು, ಹೊರಗಿನಿಂದಷ್ಟೇ ನೋಡುವವರ ಅಭಿಪ್ರಾಯವಿರಬಹುದು. ಆದರೆ ಇಸ್ಲಾಂನೊಳಗೇ ಎಲ್ಲ ಧರ್ಮಗಳಲ್ಲಿರುವಂತೆಯೇ ಉದಾರವಾದಿ ಹಾಗೂ ಜಡವಾದಿ ನಿರೂಪಣೆಗಳಷ್ಟೇ ಅಲ್ಲದೆ, ಅವುಗಳ ನಡುವೆಯೇ ಅನೇಕ ಧಾರೆಗಳಿದ್ದು, ವೈವಿಧ್ಯಮಯ ಮುಸ್ಲಿಂ ಜೀವನ ಶೈಲಿ, ನಂಬಿಕೆಗಳಿಗೆ ಕಾರಣವಾಗಿದೆ. ಎಷ್ಟಾದರೂ ಧರ್ಮವನ್ನು

ಬದುಕಲ್ಲಿ ಕಾರ್ಯಶೀಲಗೊಳಿಸಬೇಕಾದುದು, ಸ್ಪಂದನಶೀಲವಾದ ಜನಸಮೂಹವೇ ಅಲ್ಲವೆ? ಕಾಲ ದೇಶಗಳಿಗೆ ತಕ್ಕಂತೆ ಧರ್ಮ–ಸಂಹಿತೆ ಮರುವ್ಯಾಖ್ಯಾನಗೊಳ್ಳಬೇಕೆಂದು ಕುರ್‍ರಾನ್ ಗ್ರಂಥವೇ ತಿಳಿಸುತ್ತದೆಂದು ಹೇಳುವ ಉದಾರವಾದಿ ಧಾರೆಯೊಂದು–ಇಜ್ತಿಹಾದ್–ಇಸ್ಲಾಮೀ ಜಗತ್ತಿನಾದ್ಯಂತ ಕ್ರಿಯಾಶೀಲವಾಗಿದೆ. ಆದರೆ ಜಡವಾದಿ ಧಾರೆ ಇದನ್ನು 'ಪರಿಶುದ್ಧ ಇಸ್ಲಾಂ' ಹೆಸರಿನಲ್ಲಿ ದಮನ ಮಾಡುತ್ತಾ ಬರುತ್ತಿದೆ.

ಈ ಪರಿಶುದ್ಧ ಇಸ್ಲಾಮಿಗಳ ಪ್ರಕಾರ ಕಾರ್ಗಿಲ್ ಯುದ್ಧ ಸಂದರ್ಭದಲ್ಲಿ 'ವಂದೇ ಮಾತರಂ' ಘೋಷಣೆ ಆಧರಿಸಿ ದೇಶಭಕ್ತಿ ಗೀತೆಗಳನ್ನು ಬರೆದ ಜಾವೆದ್ ಅಖ್ತರ್ ನಿಜ ಮುಸ್ಲಿಮನೇ ಅಲ್ಲವಂತೆ! (ಹಾಗಾಗಿಯೇ ಆತ, ದೇವಬಂದಿ ಮೌಲ್ವಿಯು 'ವಂದೇ ಮಾತರಂ' ಹಾಡಬಾರದೆಂದರೆ ನಾನು ಅದನ್ನು ಎರಡು ಬಾರಿ ಹಾಡುತ್ತೇನೆ; ಸಂಘ ಪರಿವಾರದವರು ಹಾಡಲೇಬೇಕೆಂದು ಒತ್ತಾಯಿಸಿದರೆ ಒಮ್ಮೆಯೂ ಹಾಡುವುದಿಲ್ಲ ಎನ್ನುತ್ತಾನೆ!) ಇನ್ನು ಶತಮಾನಗಳ ಹಿಂದೆಯೇ ಸರಸ್ವತಿ ಸ್ತುತಿ ಬರೆದ ಬಿಜಾಪುರದ ಸುಲ್ತಾನನಿಂದ ಹಿಡಿದು, ಇತ್ತೀಚಿನ ನಮ್ಮ 'ನಟವರ ಗಂಗಾಧರ' ಖ್ಯಾತಿಯ ಕರೀಂ ಖಾನ್ ಹಾಗೂ ಕಾಶಿ ವಿಶ್ವನಾಥನ ಭಕ್ತರಾದ ಬಿಸ್ಮಿಲ್ಲಾಖಾನರ ಗತಿಯೇನು? ಹಾಗೇ 'ವಂದೇ ಮಾತರಂ'ನ್ನು ಧ್ಯಾನಸ್ಥರಾಗಿ ಹಾಡುವ ಸೂಫಿ ಗಾಯಕರಾದ ಖಾನ್ ಬಂಧುಗಳು ಮತ್ತು ಈ ಗೀತೆಗೆ ಆಧುನಿಕ ಲಯ ಅಳವಡಿಸಿ ಜನಪ್ರಿಯಗೊಳಿಸಿರುವ ಎ.ಆರ್. ರೆಹಮಾನ್?

ಹೀಗೆ ಮುಸ್ಲಿಮರೇ ಈ ಜಡವಾದಿ ವ್ಯಾಖ್ಯಾನವನ್ನು ಧಿಕ್ಕರಿಸುತ್ತಿರುವಾಗ, ನಾವು ಸೆಕ್ಯುಲರಿಸಂ ಹೆಸರಿನಲ್ಲಿ ಇವರನ್ನು ನಿಜವಾದ ಮುಸ್ಲಿಮರೇ ಅಲ್ಲ ಎಂದು ತೀರ್ಪು ನೀಡುವ ಸಂಪ್ರದಾಯವಾದಿಗಳೊಂದಿಗೆ ನಿಂತಿರುವುದು ಎಂಥ ವಿಚಿತ್ರ! ಬಹುಮುಖಿ ಸಂಸ್ಕೃತಿಯ ಪ್ರತಿಪಾದಕರೆನಿಸಿಕೊಂಡ ನಾವು ಎಡಪಂಥೀಯರು ನಿಜವಾಗಿ ಗುರುತಿಸಿಕೊಳ್ಳಬೇಕಾದ್ದು, ರಾಷ್ಟ್ರೀಯ ಹೋರಾಟದ ದಟ್ಟ ನೆನಪು ತಂದುಕೊಡುವ ಗೀತೆಯೊಂದರ ಶತಮಾನೋತ್ಸವ ಸಂದರ್ಭದಲ್ಲಿ ಅದನ್ನು ಹಾಡಿ ಸಂಭ್ರಮಿಸೋಣ ಎಂದೊಡನೆ, ಮತಾಂತರದ ಭೀತಿಗೊಳಗಾದವರಂತೆ ಆಡುವ ಮತೀಯವಾದಿಗಳೊಂದಿಗೋ ಅಥವಾ ಇವರನ್ನು ಧಿಕ್ಕರಿಸಿ ನಿಂತವರೊಂದಿಗೋ? ಇವರಲ್ಲಿ ಯಾರು ಸೆಕ್ಯುಲರಿಸ್ಟರು? ಬಲಪಂಥೀಯ ಎದುರಾಳಿ ರಾಜಕಾರಣವನ್ನು ಎದುರಿಸಲು, ಮತೀಯ ಬಲಪಂಥೀಯತೆಗೆ ಪ್ರೋತ್ಸಾಹ ನೀಡುವುದು ಎಡಪಂಥೀಯ ರಾಜಕಾರಣವೆನ್ನಿಸಿಕೊಳ್ಳುತ್ತದೆಯೇ? ಸೆಕ್ಯುಲರ್ ರಾಜಕಾರಣವೆನ್ನಿಸಿಕೊಳ್ಳತ್ತದೆಯೇ? ವಿಚಿತ್ರವೆಂದರೆ ಮತೀಯವಾದಿ ಇಸ್ಲಾಮೀ ಗುಂಪುಗಳು ತಮ್ಮ ರಕ್ಷಣೆಗೆ ಬಳಸಿಕೊಳ್ಳುತ್ತಿರುವುದೇ 'ಸೆಕ್ಯುಲರಿಸಂ' ಅಸ್ತ್ರವನ್ನು. ಅವುಗಳ ಪ್ರಕಾರ ಸೆಕ್ಯುಲರಿಸಂ ಎಂದರೆ ಮತೀಯತೆಯ ಆಚರಣೆಯ ಸ್ವಾತಂತ್ರ್ಯ!

ಇದು ನಾವು ಕಳೆದ ಐವತ್ತು ವರ್ಷಗಳಿಂದೀಚೆಗೆ, 'ಸೆಕ್ಯುಲರಿಸಂ' ತತ್ವವನ್ನು ನಿರೂಪಿಸುತ್ತಾ, ಆಚರಿಸುತ್ತಾ ಬಂದ ರೀತಿ ನೀತಿಗಳ ಫಲವೇ ಆಗಿದೆ. ಸೆಕ್ಯುಲರಿಸಂ

ಎಂಬ ಶಬ್ದಕ್ಕೆ ಸಮಾನಾಂತರವಾದ ಭಾರತೀಯ ಶಬ್ದದ ಬಗೆಗೆ ನಾವು ಈವರೆಗೆ ಒಮ್ಮತಕ್ಕೆ ಬರಲಾಗದಿರುವುದೇ ಈ ಬಿಕ್ಕಟ್ಟಿನ ಆಳವನ್ನು ಸೂಚಿಸುತ್ತದೆ. ನಾವೀಗ ಪರ್ಯಾಯ ಶಬ್ದಗಳಂತೆ ಬಳಸುವ ಜಾತ್ಯಾತೀತತೆ, ಸರ್ವಧರ್ಮ ಸಮಭಾವ, ಧರ್ಮ ನಿರಪೇಕ್ಷತೆ ಮುಂತಾದ ಶಬ್ದಗಳು ಹೊರಡಿಸುವ ಅರ್ಥಗಳೇ ಬೇರೆ ಬೇರೆ ನೆಲೆಯದಾಗಿದೆ. ಎಷ್ಟಾದರೂ ಸೆಕ್ಯುಲರ್ ಎನ್ನುವ ಕಲ್ಪನೆಯೇ ಪಶ್ಚಿಮದ ಸಂಸ್ಕೃತಿಯಿಂದ ಕಡ ಪಡೆದುಕೊಂಡ ಕಲ್ಪನೆ.

ಇದನ್ನು ಈವರೆಗೆ ದೇಶೀಯಗೊಳಿಸಿಕೊಳ್ಳಲು ನಮಗೆ ಸಾಧ್ಯವೇ ಆಗಿಲ್ಲದಿರುವುದಕ್ಕೆ, ಆರಂಭದಲ್ಲೇ ಅದಕ್ಕೆ 'ದೀರ್ಘಾವಧಿ ರಾಜಕಾರಣವೇ ಧರ್ಮ; ಅಲ್ಪಾವಧಿ ಧರ್ಮವೇ ರಾಜಕಾರಣ' ಎಂದು ನಂಬಿದ್ದ ಗಾಂಧಿ ಮಾದರಿ ಇದ್ದರೂ, ಆಧುನಿಕತೆಯ ಹುರುಪಿನಲ್ಲಿ ರಾಜಕಾರಣವನ್ನು ಧರ್ಮದಿಂದ ಪ್ರತ್ಯೇಕಿಸುವ ತತ್ವವೆಂದು ಅರ್ಥಕೊಟ್ಟುಕೊಂಡಿದ್ದೇ ಕಾರಣವಾಗಿದೆ. ನಮ್ಮ ಮೊದಲ ಪ್ರಧಾನಮಂತ್ರಿ ಹಾಗೂ ರಾಷ್ಟ್ರೀಯ ಹೀರೋ ನೆಹರೂ ತಮ್ಮನ್ನು ನಾಸ್ತಿಕನೆಂದು ಗುರುತಿಸಿಕೊಂಡಿದ್ದೂ ಇದಕ್ಕೆ ಕಾರಣವಿರಬಹುದು. ಆದರೆ ಭಾರತದ ಸರಾಸರಿ ಪ್ರಜೆ– ಆತ ಯಾವ ಧರ್ಮಕ್ಕೇ ಸೇರಿರಲಿ–ತನ್ನ ಧರ್ಮವನ್ನು ಮತಾಚರಣೆಗಳ ರೂಪದಲ್ಲಿ ತನ್ನ ವ್ಯಕ್ತಿತ್ವದ ಅವಿಭಾಜ್ಯ ಅಂಗ ಮಾಡಿಕೊಂಡ ಒಂದು ವಿಶಿಷ್ಟ ಸಾಂಸ್ಕೃತಿಕ ಪರಂಪರೆಗೆ ಸೇರಿದವನಾಗಿದ್ದಾನೆ. ಕಳೆದ ಐವತ್ತು ವರ್ಷಗಳ ಆಧುನೀಕರಣದ ಯಾವ ಶಕ್ತಿಯೂ, ಸಾಮಾನ್ಯ ಭಾರತೀಯನ ಮನೋಮಾತೃಕೆಯಲ್ಲಿನ ಈ ಮತಮೂಲವಾದ ಸಾಂಸ್ಕೃತಿಕ ಲಂಗರುಗಳನ್ನು ಕಳಚಿ ಹಾಕಲಾಗಿಲ್ಲ ಮತ್ತು ಆತನ ವ್ಯಕ್ತಿತ್ವದಿಂದ ಮತವನ್ನು ಪ್ರತ್ಯೇಕಗೊಳಿಸಲಾಗಿಲ್ಲ.

ಹೀಗಾಗಿ ಆಧುನಿಕ ಅರ್ಥದ ಸೆಕ್ಯುಲರಿಸಂ, ಭಾರತೀಯ ರಾಜಕಾರಣದ ಆಂತರಂಗಿಕ ಸತ್ಯಗಳಿಗೇ ಎರವಾಗಿದ್ದುಕೊಂಡು, ಈ ಕಾರಣದಿಂದಾಗಿಯೇ ತನ್ನ ಅರ್ಥೋದ್ದೇಶಕ್ಕೆ ವ್ಯತಿರಿಕ್ತವಾದ ಕೆಲಸಗಳನ್ನೇ ಪ್ರೇರೇಪಿಸುತ್ತಾ ಬಂದಿದೆ. ಸರ್ದಾರ್ ಪಟೇಲರು ಗುಜರಾತ್‌ನಲ್ಲಿ ಸರ್ಕಾರಿ ವೆಚ್ಚದಲ್ಲಿ ಕೈಗೊಂಡ ಸೋಮನಾಥ ದೇವಾಲಯದ ಪುನರುದ್ಧಾರದ ಕಾರ್ಯದಿಂದ ಹಿಡಿದು, ಕೇರಳದಲ್ಲಿ ಕಮ್ಯೂನಿಷ್ಟರು ಮುಸ್ಲಿಂ ಬಹು ಸಂಖ್ಯಾತ ಮಲಪ್ಪುರಂ ಜಿಲ್ಲೆ ನಿರ್ಮಾಣ ಮಾಡಿದ್ದು, ರಾಜೀವ್‌ಗಾಂಧಿ ಷಾ ಬಾನು ಪ್ರಕರಣದಲ್ಲಿ ನ್ಯಾಯಾಲಯದ ತೀರ್ಪನ್ನೇ ಬುಡಮೇಲುಗೊಳಿಸಿದ್ದು ಹಾಗೂ ಆ ಅನಾಹುತವನ್ನು ಬ್ಯಾಲೆನ್ಸ್ ಮಾಡಲೆಂಬಂತೆ ಬಾಬ್ರಿ ಮಸೀದಿಯ ಬೀಗ ತೆಗೆಸಿ ಪೂಜೆಗೆ ಅವಕಾಶ ಮಾಡಿಕೊಟ್ಟಿದ್ದವರೆಗೆ, ಈ ಘನ ಕೆಲಸಗಳ ವೈವಿಧ್ಯ ಹಬ್ಬಿದೆ. ಇದಕ್ಕೆ ಕಾರಣ ಬಹುಧರ್ಮೀಯ ಸಂದರ್ಭದ ಸಮಾಜವೊಂದರಲ್ಲಿ ಮತಾಚರಣೆಗಳು ತಮ್ಮ ಸಾಂಸ್ಕೃತಿಕ ಆಶಯಗಳನ್ನು ಮೀರಿ, ರಾಜಕೀಯ ಶಕ್ತಿಯಾಗಿ ಪ್ರದರ್ಶಿತವಾಗುವ ಅಪಾಯದ ಬಗ್ಗೆ ಅರಿವೇ ಇರದಂತೆ, ನಮ್ಮ ರಾಜಕಾರಣವನ್ನು ಮತ–ಧರ್ಮಗಳ ಚಲನಶೀಲತೆಯಿಂದ ಬೇರ್ಪಡಿಸಿಟ್ಟು ಸರಳೀಕರಿಸಿರುವುದೇ ಆಗಿದೆ.

ಇದರಿಂದಾಗಿ ಭಾರತೀಯ ರಾಜಕಾರಣ ತನ್ನ ದೃಷ್ಟಿಕೇಂದ್ರವನ್ನೇ ಕಳೆದುಕೊಂಡಿದೆ.

ಹೀಗಾಗಿ ಕಳೆದ ೧೫-೨೦ ವರ್ಷಗಳಲ್ಲಿ ರಾಜಕಾರಣದ ಅರ್ಥ-ಆದ್ಯತೆಗಳೇ ಬುಡ ಮೇಲುಗೊಂಡು, ಕೋಮುವಾದಿ ರಾಜಕಾರಣ ಕ್ರಮೇಣ ಜನಸಮೂಹದ ವಿಶ್ವಾಸಾರ್ಹತೆ ಹಾಗೂ ಮಾನ್ಯತೆ ಗಳಿಸಿಕೊಂಡು ರಾಷ್ಟ್ರಜೀವನದ ಮಧ್ಯರಂಗಕ್ಕೆ ಬರುವಂತಾಗಿರುವುದು. ಮತ್ತು ಇದರ ಸಂಕೀರ್ಣ ಪರಿಣಾಮವಾಗಿ ಈಗ ಇಡೀ ದೇಶ ಮತೀಯ ಭಯೋತ್ಪಾದನೆಗೆ ಸಿಕ್ಕಿ ತಲ್ಲಣಗೊಂಡಿರುವುದು; ಸದಾ ತನ್ನ ಕಟ್ಟೆಚ್ಚರದಲ್ಲಿರುವ ಭಯಂಕರ ಶಿಕ್ಷೆಗೆ ಒಳಗಾಗಿರುವುದು.

ಆದುದರಿಂದ ಈಗಲಾದರೂ ನಾವು 'ಸೆಕ್ಯುಲರಿಸಂ' ತತ್ವವನ್ನು ಪುನರ್‌ನಿರೂಪಿಸುವ ಕಡೆ ಗಮನ ಹರಿಸಬೇಕಿದೆ. ಅದು ತನ್ನ ಪಾಶ್ಚಿಮಾತ್ಯ ಆಧುನಿಕ ಅರ್ಥದಲ್ಲಿ, ರಾಷ್ಟ್ರ ವಿಭಜನೆಯ ಉದ್ವಿಗ್ನ ಸಂದರ್ಭದಲ್ಲಿ ತನ್ನ ವಿಶಿಷ್ಟ ಕೊಡುಗೆ ಸಲ್ಲಿಸಿ; ನಂತರ ಒಂದು ರಾಜಕೀಯ ಸಾಧನವಾಗಿ ಅವನತಿಗೊಂಡು, ತನ್ನ ಮೂಲ ಆಶಯಕ್ಕೆ ವ್ಯತಿರಿಕ್ತವಾದ ರಾಜಕಾರಣಕ್ಕೆ ದಾರಿಮಾಡಿಕೊಟ್ಟಿದೆ. ಆದುದರಿಂದ ಈಗ ಅದಕ್ಕೆ, ಅಂತರ್ಧರ್ಮೀಯ ಸಂದರ್ಭದ ಮತ ವಿಶಿಷ್ಟ ಭಾರತೀಯ ವ್ಯಕ್ತಿತ್ವವನ್ನು ಅರ್ಥ ಮಾಡಿಕೊಂಡು ರಾಜಕೀಯವನ್ನು ನಿರ್ವಹಿಸುವ ಒಂದು ಸಾಂಸ್ಕೃತಿಕ ಗ್ರಹಿಕೆಯ ಆಯಾಮವನ್ನು ನೀಡಬೇಕಾಗಿದೆ. ಧರ್ಮವನ್ನು ಒಂದು ಏಕಶಿಲಾ ರೂಪದ ಜಡಶಕ್ತಿಯಾಗಿ ನೋಡಿ ಅದು ಪ್ರಜಾಪ್ರಭುತ್ವವಾದಿ ರಾಜಕಾರಣಕ್ಕೆ ಕಂಟಕವೆಂದು ಭಾವಿಸುವ ತಪ್ಪು ಮಾಡದೆ, ಅದರೊಳಗಿನ ಬಹುಮುಖಿ ಚಲನಶೀಲತೆಯನ್ನು ಪ್ರಜಾಪ್ರಭುತ್ವವಾದಿ ರಾಜಕಾರಣದ ಗುರಿ ಸಾಧನೆಗೆ ಬಳಸುವ ಪ್ರತಿಭೆಯನ್ನು ಅದಕ್ಕೆ ರೂಢಿಸಿ ಕೊಡಬೇಕಿದೆ.

ಇದಕ್ಕೆ ಮೊದಲಾಗಿ ನಮ್ಮ ಜಾತ್ಯಾತೀತವಾದಿಗಳು ಹಾಗೂ ಪ್ರಗತಿಪರರು ಎನ್ನಿಸಿಕೊಂಡವರು, ಧರ್ಮ ಕುರಿತ ತಮ್ಮ ಇಬ್ಬಂದಿ ನಿಲುವನ್ನು ನಿವಾರಿಸಿಕೊಳ್ಳಬೇಕಿದೆ. ಆಗ ಮಾತ್ರ ಧರ್ಮದ ಹೆಸರಲ್ಲಿ ನಡೆಯುವ ಮತೀಯ ರಾಜಕಾರಣವನ್ನು ಅದರೆಲ್ಲ ಅವತಾರಗಳಲ್ಲಿ ಸ್ಪಷ್ಟವಾಗಿ ಗುರುತಿಸಿ ಎದುರಿಸಲು ಸಾಧ್ಯವಾಗುತ್ತದೆ: ಶಿವಮೊಗ್ಗೆಯ ಬೀದಿ ಬೀದಿಗಳಲ್ಲಿ ಗಣಪತಿ ವಿಸರ್ಜನೆ ಸಂದರ್ಭದಲ್ಲಿ ಹತ್ತು-ಹನ್ನೆರಡು ವರ್ಷಗಳ ಬಾಲಕರೂ ಕೆಂಪು ತಿಲಕವಿಟ್ಟು ಕೇಸರಿ ತಲೆಪಟ್ಟಿ ಕಟ್ಟಿಕೊಂಡು ರಸ್ತೆಗಳಲ್ಲಿ ಉದ್ರಿಕ್ತವಾಗಿ ಕುಣಿಯುವುದನ್ನು ಕಂಡಾಗ ಆಗುವಷ್ಟೇ ಗಾಬರಿ; ಬೀದಿ ಬೀದಿಗಳಲ್ಲಿ ಹೆಚ್ಚುತ್ತಿರುವ ಬುರ್ಖಾ, ಗಡ್ಡ, ಟೋಪಿಗಳನ್ನು ಕಂಡಾಗಲೂ ಆಗತೊಡಗುತ್ತದೆ. ಇವೆರಡೂ ದೃಶ್ಯಗಳು ಇತ್ತೀಚಿನವರೆಗೆ ಭಾರತದ ಹೆಮ್ಮೆ ಎನಿಸಿದ್ದ ಬಹುಮುಖಿ ಧಾರ್ಮಿಕ ಸಂಸ್ಕೃತಿಯ ಸ್ಥಾನವನ್ನು ಏಕಮುಖಿ ಧಾರ್ಮಿಕ ರಾಜಕಾರಣ ಆಕ್ರಮಿಸಿಕೊಳ್ಳುತ್ತಿರುವುದರ ದ್ಯೋತಕಗಳೇ ಆಗಿವೆ.

ಇದರ ಬಗ್ಗೆ ತಾತ್ವಿಕ ಸ್ಪಷ್ಟತೆ ಹಾಗೂ ರಾಜಕೀಯ ಮುನ್ನೋಟ ಇದ್ದುದರಿಂದಲೇ ಸಮಾಜವಾದಿ ನಾಯಕ ಡಾ॥ ರಾಮಮನೋಹರ ಲೋಹಿಯಾ ಅವರು ಏಕರೂಪದ ನಾಗರೀಕ ಸಂಹಿತೆಯನ್ನು ೧೯೬೭ರಲ್ಲಿ ಚುನಾವಣಾ ವಿಷಯವನ್ನಾಗಿ ಮಾಡಿಕೊಂಡು, ಅದರ ಪರವಾಗಿ ಪ್ರಚಾರ ನಡೆಸುವ ದಿಟ್ಟತನ ತೋರಿದ್ದರು. ಇದರಿಂದಾಗಿ ಗಣನೀಯ

ಮುಸ್ಲಿಂ ಜನಸಂಖ್ಯೆ ಇದ್ದ ಕ್ಷೇತ್ರಗಳಲ್ಲಿ ಅವರ ಪಟ್ಟ ಶಿಷ್ಯ ಕಿಷನ್ ಪಟ್ನಾಯಕ್ ಸೇರಿದಂತೆ ಅವರ ಅನೇಕ ಅಭ್ಯರ್ಥಿಗಳು ಸೋತರು. ಆದರೆ ರಾಜಕೀಯ ಮುತ್ಸದ್ದಿಯಾಗಿದ್ದ ಲೋಹಿಯಾಗೆ ರಾಜಕಾರಣವೆಂದರೆ ಬರೀ ಪಕ್ಷ ಕಟ್ಟುವುದಲ್ಲ, ದೇಶ ಕಟ್ಟುವುದೂ ಆಗಿತ್ತು; ನಿಜವಾದ ರಾಜಕಾರಣವೆಂದರೆ ದೇಶ ಕಟ್ಟುವುದರ ಅಂಗವಾಗಿ ಪಕ್ಷ ಕಟ್ಟುವುದೇ ಆಗಿದೆ ಎಂಬುದು ಗೊತ್ತಿತ್ತು.

ಆದರೆ ನಾವು ಇದನ್ನು ಅರ್ಥ ಮಾಡಿಕೊಳ್ಳಲು ಸತತವಾಗಿ ನಿರಾಕರಿಸುತ್ತಿದ್ದೇವೆ. ಸೆಕ್ಯುಲರಿಸಂನ ಈಚಿನ ಆವೃತ್ತಿ ಪ್ರಕಾರ, 'ಹಿಂದೂ ಒಬ್ಬ ದುಷ್ಟ ಶತ್ರು; ಅವನನ್ನು ನಮ್ಮ ಪುರಾತನರು ಅವನ ಪುರಾತನರನ್ನು ದಮನ ಮಾಡಲು ಬಳಸಿಕೊಂಡ ಬಲ ಪ್ರಯೋಗದ ಮೂಲಕವೇ ನಿಗ್ರಹಿಸಬೇಕು' ಎಂಬ ಘೋಷಣಾ ಸಾಹಿತ್ಯವನ್ನು ಬಹಿರಂಗವಾಗಿ ಹಂಚಿ ಲಷ್ಕರ್‌ನ್ನು ಬೆಳೆಸಿದ ಹಫೀಜ್ ಮಹಮ್ಮದ್ ಸಯೀದ್‌ನನ್ನು ಒಬ್ಬ ರಾಷ್ಟ್ರ ದ್ರೋಹಿ ಎಂದು ಪರಿಗಣಿಸದೆ, ಒಬ್ಬ ತಲೆಕೆಟ್ಟ ಮತೀಯವಾದಿ ಎಂದಷ್ಟೇ ಲಘುವಾಗಿ ಪರಿಗಣಿಸಿ ಉದಾಸೀನವಾಗಿರಲು ಸಾಧ್ಯವಾಯಿತು. ಇಂತಹ ರಾಜಕೀಯ ಅಪಾರ್ಥದಿಂದಾಗಿ ಉಂಟಾದ ವಾತಾವರಣದಿಂದಾಗಿಯೇ, ೧೯೯೯ರಲ್ಲಿ ಔರಂಗಾಬಾದ್‌ನಲ್ಲಿ 'ನಮ್ಮ ದೇಶ ಇಸ್ಲಾಂ; ಭಾರತವಲ್ಲ' ಎಂಬ ಭಾಷಣ–ಘೋಷಣೆಗಳು ಮೊಳಗಿದ ಸಿಮಿ(SIMI)ಸಮ್ಮೇಳನ ಯಾರ ಗಮನವನ್ನೂ ಸೆಳೆಯದೆ ನಡೆಯಲು ಸಾಧ್ಯವಾದದ್ದು.

ಈ ಸಮ್ಮೇಳನದಲ್ಲಿಯೇ ಈಚಿನ ಅಮಾನವೀಯ ಮುಂಬೈ ರೈಲು ಸರಣಿಸ್ಫೋಟ ದುರಂತವರೆಗೆ ಮುಟ್ಟಿರುವ ಭಯೋತ್ಪಾದನಾ ಕಾರ್ಯಕ್ರಮದ ಹಿಂದಿರುವ ಜಾಲದ ರಚನೆ ಆರಂಭವಾದದ್ದು ಎಂದು ಹೇಳಲಾಗಿದೆ. ಇದನ್ನು ಗುಪ್ತಚರ ಇಲಾಖೆಯೂ ಈಗ ಖಚಿತಪಡಿಸಿದೆ. (ವಿವರಗಳಿಗೆ ನೋಡಿ: ಜುಲೈ ೨೮, ೨೦೦೬ರ 'ಫ್ರಂಟ್ ಲೈನ್') ಅಷ್ಟೇ ಅಲ್ಲ, ಮುಂಬೈ ರೈಲು ಸರಣಿ ಸ್ಫೋಟಗಳ ನಂತರ ಹಬ್ಬಿದ 'ಎಲ್ಲಾ ಮುಸ್ಲಿಮರೂ ಭಯೋತ್ಪಾದಕರಲ್ಲ; ಅದು ಭಯೋತ್ಪಾದಕರೆಲ್ಲರೂ ಮುಸ್ಲಿಮರೇ' ಎಂಬ ಎಸ್ಸೆಮ್ಮೆಸ್‌ಗೆ ಈಗ ಅಧಿಕೃತ ಮುದ್ರೆಯೂ ಬಿದ್ದಿದೆ: ಸ್ಥಳೀಯ ಮುಸ್ಲಿಮರ' ಸಹಕಾರವಿಲ್ಲದೆ ಹೊರಗಿನವರು ಇಷ್ಟು ವ್ಯವಸ್ಥಿತವಾಗಿ ಹಾಗೂ ಕರಾರುವಾಕ್ಕಾಗಿ ಭಯೋತ್ಪಾದಕ ಕೃತ್ಯಗಳನ್ನು ನಡೆಸಲು ಸಾಧ್ಯವಿಲ್ಲವೆಂದು ಭಯೋತ್ಪಾದನಾ ನಿಗ್ರಹದಳವೇ ಈಗ ಹೇಳಿದೆ. ಇದು ನಿಜವಾದ ದುರಂತ. ಮುಸ್ಲಿಂ ಸಮಾಜದ ದುರಂತ ಹಾಗೂ ನಮ್ಮೆಲ್ಲರ ದುರಂತ–ರಾಷ್ಟ್ರೀಯ ದುರಂತ.

ಇದಕ್ಕೇನು ಕಾರಣ? ಸೆಕ್ಯುಲರಿಸಂ ಹೆಸರಿನಲ್ಲಿ ಮುಸ್ಲಿಂ ಸಮಾಜವನ್ನು ಒಂದು 'ಪ್ರತ್ಯೇಕ ಖಂಡ' ಎಂದು ನೋಡಿ, ಅದರೊಳಗಿನ ಸಂಪರ್ಕಶೀಲ ಬಹುಮುಖಿ ಸಂಸ್ಕೃತಿ ಸ್ರೋತವನ್ನು ಗುರುತಿಸಿ ಪ್ರೋತ್ಸಾಹಿಸದೇ ಹೋಗಿದ್ದು. ಈಗಲೂ ಅಲ್ಲಲ್ಲಿ ಈ ಸಮಾಜದಲ್ಲಿ ಅಂತಹ ಸಂಸ್ಕೃತಿಯ ಕಿಡಿಗಳು ಕಾಣುವುವಾದರೂ, ಅವು ಪೂರಕ ವಾತಾವರಣವಿಲ್ಲದೆ ಕ್ಷಣಿಕವಾಗಿ ಉರಿದು ಆರುತ್ತಾ, ಒಟ್ಟಾಗಿ ಒಂದು ಶಕ್ತಿಯಾಗಿ ಹೊರಹೊಮ್ಮಲಾಗದೆ ಉಳಿದಿವೆ. ಹಾಗೆ ಸಾಧ್ಯವಿದ್ದುದಾದರೆ ಸದ್ಯದ ಪರಿಸ್ಥಿತಿ ನಿಭಾಯಿಸಲು

ಭಯೋತ್ಪಾದನಾ ಚಟುವಟಿಕೆಗಳ ಮೇಲೆ ನಿಗಾ ಇಡಲು ಮುಸ್ಲಿಂ ಸಮಾಜದೊಳಗೇ ಒಂದು ಜಾಗೃತಿ ಆಂದೋಲನ ಉಂಟಾಗಬೇಕಿತ್ತು; ಆದಂತೆ ತೋರುತ್ತಿಲ್ಲ. ಆದರೆ ಇಂದು ಇದು ಒಂದು ರಾಷ್ಟ್ರೀಯ ಅಗತ್ಯವಾಗಿದೆ.

ಏಕೆಂದರೆ ಮತೀಯ ಉಗ್ರವಾದಿ ಗುಂಪುಗಳೊಂದಿಗೆ ರಾಜಕೀಯ ಉಗ್ರಗಾಮಿ ಗುಂಪುಗಳು ಸಂಪರ್ಕ ಸಾಧಿಸುತ್ತಿವೆಯೆಂದು ಹೇಳಲಾಗುತ್ತಿದೆ. ಆದುದರಿಂದ ಇದನ್ನು ತುರ್ತಾಗಿ–ಮುಸ್ಲಿಂ ಲೇಖಕರ, ಚಿಂತಕರ, ಪ್ರಗತಿಪರ ಧಾರ್ಮಿಕ ನಾಯಕರ ಮುತುವರ್ಜಿಯಲ್ಲಿ–ಎಲ್ಲರೂ ಸೇರಿ ರೂಪಿಸಬೇಕಾಗಿದೆ. ಆಗ ಅದು ಇಡೀ ಭಾರತೀಯ ಸಮಾಜದ ಹೊಸ ಜಾಗೃತಿ ಆಂದೋಲನವಾಗಿ ವಿಸ್ತರಿಸಬಲ್ಲದು. ಅದಕ್ಕಾಗಿ ನಮ್ಮ ಹಳೆಯ ಸೆಕ್ಯುಲರ್ ಹ್ಯಾಂಗೋವರ್‌ಗಳಿಂದ ಕಳಚಿಕೊಂಡ ಒಂದು ಹೊಸ ಮನೋಭೂಮಿಕೆಯೇ ಸಿದ್ಧವಾಗಬೇಕಿದೆ. ಅದುವೇ ಹೊಸ ಸೆಕ್ಯುಲರಿಸಂನ ನಿಜವಾದ ಉದಯ. ಅಲ್ಲಿಂದಲೇ 'ವಂದೇ ಮಾತರಂ'ನ್ನು ಕಡ್ಡಾಯಗೊಳಿಸಲು ಹಾತೊರೆಯುವ ಮನಸ್ಸುಗಳ ಪ್ರತೀಕವೆನಿಸುವ ರಾಜಕಾರಣದ ಅಸ್ತಮಾನ ಕೂಡಾ.

(ಅಕ್ಟೋಬರ್,೨೦೦೬)

■

ಮತಾಂತರದ ಅವಾಂತರಗಳು

ಧರ್ಮವೊಂದರಲ್ಲಿ ಇಕ್ಕಟ್ಟಿಗೆ ಸಿಕ್ಕ ಜನಸಮುದಾಯಗಳು ಉಳಿಯಲು, ಬೆಳೆಯಲು ಅನುಸರಿಸುವ ಮಾರ್ಗವೇ ಅದು. ಅವು ತಾವಿರುವ ಸಂಸ್ಕೃತಿಯೊಳಗೇ ಸುರಂಗವೊಂದನ್ನು ತೋಡಿಕೊಂಡು, ಅಲ್ಲಿ ಸುಭದ್ರತೆಯ (ಹುಸಿ) ಭಾವನೆಯಲ್ಲಿ ಬದುಕತೊಡಗುತ್ತವೆ. ಹಿಂದೂ ಧರ್ಮದ ಭಕ್ತಿ ಪಂಥದಿಂದ ಚೂರುಪಾರು ಸಾಂತ್ವನ ಪಡೆದುಕೊಂಡ ನಮ್ಮ ಅನೇಕ ಶೂದ್ರ ಜಾತಿಗಳು ತಂತಮ್ಮ ನಂಬಿಕೆ–ಆಚರಣೆಗಳ ಮೂಲಕ ಸ್ವತಃ ಒಂದೊಂದು ಧರ್ಮದಂತೆ ಕಾಣುತ್ತಿರುವುದೂ ಈ ಕಾರಣಕ್ಕಾಗಿಯೇ. ಹಾಗಾಗಿಯೇ ಅವುಗಳನ್ನು ಜಾತಿ ಬಂಧನಗಳಿಂದ ಬಿಡಿಸಿಕೊಂಡು ಬಂದು ನಿಜವಾದ ಆಧುನಿಕ ಸಮಾಜ ಕಟ್ಟಲು ಯಾವುದೇ ಪ್ರಗತಿಪರ ಚಳುವಳಿಗೆ ಸಾಧ್ಯವಾಗದೇ ಇರುವುದು.

ಕೆಲವು ತಿಂಗಳುಗಳ ಹಿಂದೆ ನನ್ನ ಕೆಲವು ಸ್ನೇಹಿತರು ಹಿಂದೂ ಧರ್ಮದಿಂದ ಬೌದ್ಧ ಧರ್ಮಕ್ಕೆ ಮತಾಂತರಗೊಂಡಾಗ ನಾನು ಅದನ್ನು ವಿರೋಧಿಸಿದ್ದೆ. ಮತಾಂತರದ ಮೂಲಕ ನಾವು ನಮ್ಮ ಬದುಕಿನಲ್ಲಿ ಮತಕ್ಕೆ ಸಲ್ಲದ ಪ್ರಾಧಾನ್ಯ ಕೊಟ್ಟಂತಾಗುತ್ತದೆ ಎಂಬುದು ನನ್ನ ವಾದವಾಗಿತ್ತು. ಅಲ್ಲದೆ, ಹಿಂದೂವಾಗಿದ್ದುಕೊಂಡೇ ಬೌದ್ಧನೂ ಆಗಿರಬಹುದು ಎಂಬುದು ನನ್ನ ತಿಳುವಳಿಕೆಯಾಗಿತ್ತು. ಆದರೆ, ಆಗ ಮತಾಂತರಗೊಂಡ ನನ್ನ ಆ ಬಹುತೇಕ ಗೆಳೆಯರು ದಲಿತರೇ ಆಗಿದ್ದುದರಿಂದ, ಆ ಬಗ್ಗೆ ನಾನು ಅವರೊಂದಿಗೆ ಹೆಚ್ಚಿನ ವಾದಕ್ಕೆ ಇಳಿಯಲಿಲ್ಲ. ಏಕೆಂದರೆ ಹಿಂದೂ ಧರ್ಮದಲ್ಲಿ ಉದಾರವಾದಿ ಮತ್ತು ಸಂಕುಚಿತವಾದಿ ಎಂಬ ಎರಡು ಧಾರೆಗಳಿದ್ದು, ಮೊದಲನೆಯದು ಪ್ರಮುಖವಾಗಿ ಬೌದ್ಧ ಸ್ಫೂರ್ತಿಯೊಂದಿಗೆ ಕ್ರಿಯಾಶೀಲವಾಗಿದ್ದರೆ, ಎರಡನೆಯದು ಪ್ರಮುಖವಾಗಿ ವೈದಿಕ ಸ್ಫೂರ್ತಿಯೊಂದಿಗೆ ಕ್ರಿಯಾಶೀಲವಾಗಿದೆ ಎಂದು ನಂಬಿದವನು ನಾನು. ಅಂದ ಮಾತ್ರಕ್ಕೆ ಈ ಎರಡೂ ಪೂರ್ಣ ಪ್ರತ್ಯೇಕ ಧಾರೆಗಳೆಂದು ನಾನು ಹೇಳುತ್ತಿಲ್ಲ. ಅವು ಸ್ಥೂಲ ವಿಂಗಡಣೆಗಳಷ್ಟೆ.

ಆದರೆ ಕಳೆದ ಕೆಲವು ವರ್ಷಗಳಿಂದೀಚೆಗೆ ಎರಡನೆಯ ಧಾರೆ ಮೊದಲನೆಯ

ಧಾರೆಯನ್ನು ನುಂಗಲಾರಂಭಿಸಿದ್ದು, ಇದರಿಂದಾಗಿ ಹೆಚ್ಚಾಗಿ ಕಷ್ಟಕ್ಕೆ ಸಿಲುಕಿಕೊಂಡವರು ದಲಿತ ನಾಯಕರು. ವಿಶೇಷವಾಗಿ, ಗಾಂಧಿವಾದಿ ದಲಿತ ನಾಯಕರು. ಇವರಿಗೆ ಇಂದಿನ 'ಹಿಂದೂ ಜಾಗೃತಿ'ಯ ಹೆಸರಿನಲ್ಲಿ ಮೂಡುತ್ತಿರುವ ಹಿಂದೂ ಧಾರ್ಮಿಕ ಚೌಕಟ್ಟಿನಲ್ಲಿ ದಲಿತರಿಗೆ ಮತ್ತು ಅಕ್ಕಪಕ್ಕದ ಶೂದ್ರ ಜಾತಿಗಳಿಗೆ ಮಾನಸಿಕ ಜೀತದಿಂದ (ಇನ್ನೂ ಸ್ಪಷ್ಟವಾಗಿ ಹೇಳುವುದಾದರೆ ಅಸಮಾನ ಜಾತಿ ಬಂಧನಗಳಿಂದ ಮತ್ತು ಅಷ್ಟರಮಟ್ಟಿಗಿನ ಅವಕಾಶ ವಂಚನೆಯಿಂದ) ಬಿಡುಗಡೆ ಸಾಧ್ಯವೇ ಇಲ್ಲವೆಂದೆನಿಸಿ, ಅವರು ಬೌದ್ಧ ಮತಕ್ಕೆ ಮತಾಂತರ ಹೊಂದಿರಬಹುದೆಂದು ನಾನು ಭಾವಿಸಿದೆ. ಅಂಬೇಡ್ಕರ್ ಐವ್ವತ್ತು ವರ್ಷಗಳ ಹಿಂದೆ ಅವಸರದಲ್ಲಿ–ತಾವು ಹಿಂದೂವಾಗಿ ಸಾಯಲಾರೆ ಎಂದು ಹಿಂದೊಮ್ಮೆ ಹೇಳಿದ ಮಾತನ್ನು ಅಸು ನೀಗುವ ಮುನ್ನ ಪರಿಪಾಲಿಸಲೋ ಎಂಬಂತೆ–ಮಾಡಿದ್ದನ್ನು, ನನ್ನ ಸ್ನೇಹಿತರು ಅಂಬೇಡ್ಕರರ ಈ ಆಘಾತ ಚಿಕಿತ್ಸೆಯಿಂದ ಹಿಂದೂಗಳು ಸುಧಾರಿಸುತ್ತಾರೇನೋ ಎಂದು ನೋಡೀ ನೋಡೀ, ಕಾದೂ ಕಾದೂ ಸುಸ್ತಾಗಿ ಈಗ ಮಾಡುತ್ತಿದ್ದಾರಷ್ಟೆ ಎಂದು ಸಮಾಧಾನ ಪಟ್ಟುಕೊಂಡೆ. ಅಲ್ಲದೆ ಅವರು ಮತಾಂತರವಾದದ್ದು ಭಾರತೀಯ ಮೂಲ ಸಂಸ್ಕೃತಿಯಲ್ಲೇ ಹುಟ್ಟಿದ ಬೌದ್ಧ ಧರ್ಮಕ್ಕೇ ಎಂಬುದು ಇನ್ನೊಂದು ಕಾರಣವಿರಬಹುದು.

ಅಂಬೇಡ್ಕರ್ ಮತಾಂತರಕ್ಕಾಗಿ ಬಹಳ ವರ್ಷಗಳ ಕಾಲ ಅಧ್ಯಯನ ಮಾಡಿ, ಇತರ ಆಯ್ಕೆಗಳೊಂದಿಗೆ ತೂಗಿ ನೋಡಿ ಬೌದ್ಧ ಧರ್ಮವನ್ನು ಆಯ್ಕೆ ಮಾಡಿದ್ದರು. ಅಪಾರ ಮತ್ತು ಅಮಾನವೀಯ ಕಷ್ಟ–ಅವಮಾನಗಳನ್ನು ಸಹಿಸಿ ಮೇಲೆ ಬಂದಿದ್ದ ಅಂಬೇಡ್ಕರ್, ಬಹು ಸೂಕ್ಷ್ಮ ಹೃದಯಿಯೂ ಆಗಿದ್ದುದರಿಂದ; ರಾಜಕೀಯವಾಗಿ ಕ್ರಿಯಾಶೀಲರಾಗಿ ಉಳಿಯಲು ಹೊರಗೆ 'ದ್ವೇಷವೇ ನನ್ನ ಶಕ್ತಿ' ಎಂದು ಹೇಳುತ್ತಿದ್ದರಾದರೂ, ಒಳಗೆ ತಮ್ಮನ್ನು ತಾವೇ ಸಂರಕ್ಷಿಸಿಕೊಳ್ಳಲು ಮೃದು ಹೃದಯಿಯೂ ಆಗಿದ್ದರು. ಹಾಗಾಗಿಯೇ ಅವರು ತಮ್ಮ ತೀವ್ರ ರಾಜಕೀಯ ಕಾರ್ಯಾಚರಣೆಯಿಂದ ತಮ್ಮ ಅಪಾರ ಸಂಖ್ಯೆಯ ಅನುಯಾಯಿಗಳು ತಮ್ಮ ಸಾಂಸ್ಕೃತಿಕ ಬೇರುಗಳನ್ನು ಕಳೆದುಕೊಳ್ಳದಂತೆ ಎಚ್ಚರ ವಹಿಸಿದ್ದರು. ಇದರ ಭಾಗವಾಗಿಯೇ, ಯಾವುದನ್ನು ತಾವು ಹಿಂದೂ ಧರ್ಮವೆಂದು ಗುರುತಿಸಿದ್ದರೋ ಆ ಹಿಂದೂ ಧರ್ಮದ ವೈದಿಕ ಧಾರೆಯ ಕೆಲ ಅವೈಚಾರಿಕತೆಯ ಮತ್ತು ಅಮಾನವೀಯತೆಯ ನೆಲೆಗಳನ್ನು ತನ್ನ ಶೂನ್ಯ ಮೀಮಾಂಸೆಯ ಮೂಲಕ ಎತ್ತಿ ತೋರಿಸಿ ಸತ್ಯದ ಹೊಸ ದಾರಿಯನ್ನು ತೋರುವ ಮೂಲಕ ಆ ಧರ್ಮವನ್ನು ಯಾವ ಮಹಾಪುರುಷ ಪುನರುಜ್ಜೀವನಗೊಳಿಸಿದನೋ, ಆ ಬುದ್ಧನನ್ನೇ ತಮ್ಮ ಅನುಯಾಯಿಗಳು ಸಾಂಸ್ಕೃತಿಕ ಸ್ಫೂರ್ತಿಯನ್ನಾಗಿ ಮಾಡಿಕೊಳ್ಳುವಂತೆ ನೋಡಿಕೊಂಡಿದ್ದರು. ನಿಜ, ಅವರು ತಮ್ಮದೇ ಶೈಲಿಯಲ್ಲಿ ಬುದ್ಧ ಧರ್ಮವನ್ನು ನಿರೂಪಿಸಿಕೊಂಡು ಅದು ದಲಿತರ ಮೂಲ ಮತ್ತು ಸಹಜ ಧರ್ಮವೆಂದು ಪ್ರತಿಪಾದಿಸಿದ್ದರು ಮತ್ತು ಅದಕ್ಕಾಗಿ ಕೆಲವು ಬೌದ್ಧ ಧರ್ಮಗುರುಗಳಿಂದ ಆಕ್ಷೇಪಣೆಗಳನ್ನೂ ಎದುರಿಸಿದ್ದರು.

ಧರ್ಮವೊಂದರಲ್ಲಿ ಇಕ್ಕಟ್ಟಿಗೆ ಸಿಕ್ಕ ಜನಸಮುದಾಯಗಳು ಉಳಿಯಲು, ಬೆಳೆಯಲು

ಅನುಸರಿಸುವ ಮಾರ್ಗವೇ ಅದು. ಅವು ತಾವಿರುವ ಸಂಸ್ಕೃತಿಯೊಳಗೇ ಸುರಂಗವೊಂದನ್ನು ತೋಡಿಕೊಂಡು, ಅಲ್ಲಿ ಸುಭದ್ರತೆಯ (ಹುಸಿ) ಭಾವನೆಯಲ್ಲಿ ಬದುಕತೊಡಗುತ್ತವೆ. ಹಿಂದೂ ಧರ್ಮದ ಭಕ್ತಿ ಪಂಥದಿಂದ ಚೂರುಪಾರು ಸಾಂತ್ವನ ಪಡೆದುಕೊಂಡ ನಮ್ಮ ಅನೇಕ ಶೂದ್ರ ಜಾತಿಗಳು ತಂತಮ್ಮ ನಂಬಿಕೆ-ಆಚರಣೆಗಳ ಮೂಲಕ ಸ್ವತಃ ಒಂದೊಂದು ಧರ್ಮದಂತೆ ಕಾಣುತ್ತಿರುವುದೂ ಈ ಕಾರಣಕ್ಕಾಗಿಯೇ. ಹಾಗಾಗಿಯೇ ಅವುಗಳನ್ನು ಜಾತಿ ಬಂಧನಗಳಿಂದ ಬಿಡಿಸಿಕೊಂಡು ಬಂದು ನಿಜವಾದ ಆಧುನಿಕ ಸಮಾಜ ಕಟ್ಟಲು ಯಾವುದೇ ಪ್ರಗತಿಪರ ಚಳುವಳಿಗೆ ಸಾಧ್ಯವಾಗದೇ ಇರುವುದು. ಆದರೆ ಈಗ ಹಿಂದೂ ಸಂಕುಚಿತ ಧಾರೆ ಈ ಶೂದ್ರ ಜಾತಿಗಳಿಗೆ ಅವರದೇ ಆ ನಂಬಿಕೆ-ಆಚರಣೆಗಳ ತಿರುಮಂತ್ರ ಹಾಕಿ ಅವರ ಸುರಂಗಗಳಿಂದ ಹೊರತಂದು ತಮ್ಮ ತಾಳಗಳಿಗೆ ತಕ್ಕಂತೆ ಕುಣಿಸತೊಡಗಿದೆ. ಅವರಿಗೆ ಇಂದಿನ ಸಂದರ್ಭದಲ್ಲಿ ಈ ಸಂಕುಚಿತ ಧಾರೆಯ ವೈದಿಕ ನಾಯಕರಿಗಿಂತ ಹೆಚ್ಚು ವಿಶ್ವಾಸಾರ್ಹ ನಾಯಕರು ಕಾಣುತ್ತಿಲ್ಲ. ಕನಿಷ್ಠ ಈ ನಾಯಕರು ತಮ್ಮ ರಾಜಕೀಯ ಸ್ವಾರ್ಥಕ್ಕೇ ಆದರೂ, ಅವರ ಭಾವನಾತ್ಮಕ ಅಗತ್ಯಗಳನ್ನಾದರೂ ಪೂರೈಸುತ್ತಿದ್ದಾರೆ. ಆದರೆ ಹಿಂದೂ ಉದಾರವಾದಿ ಧಾರೆಯ ನಾಯಕರು ಅವರನ್ನು ಅವರ ಸಂಸ್ಕೃತಿಯ ಪರಿಧಿಯಾಚೆಗೆ ಎಳೆದು ತಂದು ನಂತರ ದಿಕ್ಕೆಡಿಸಿ ಬಿಟ್ಟು ಹೋಗುವ ಎಡಬಿಡಂಗಿಗಳೆನಿಸಿಕೊಂಡಿದ್ದಾರೆ.

ಇದಕ್ಕೆ ಕಾರಣ ಹಿಂದೂ ಉದಾರವಾದದ ಆಸರೆಯೂ, ಆಶ್ವಾಸನೆಯೂ ಆಗಿದ್ದ ಗಾಂಧಿ ಈಗಿಲ್ಲದಿರುವುದು. ಭೌತಿಕವಾಗಿಯಷ್ಟೇ ಅಲ್ಲ, ಅವರು ಸ್ಫೂರ್ತಿಯೂ ಆಗಿ ಉಳಿಯದಿರುವುದು. ಹೀಗೆ ಉದಾರವಾದಿಗಳು ಕೈಬಿಟ್ಟ ಗಾಂಧಿಯನ್ನು, ಹಿಂದೂ ಧರ್ಮದ ಯಾವ ಸಂಕುಚಿತ ಧಾರೆ ತಮ್ಮ ಹಿತಾಸಕ್ತಿಗಳನ್ನು ಭಂಗಗೊಳಿಸುತ್ತಿರುವ ನಾಯಕ ಎಂದು ಕೊಂದಿತ್ತೋ, ಅದರ ಅನುಯಾಯಿಗಳೇ ಈಗ ಸಾರ್ವತ್ರಿಕ ಸಾಮಾಜಿಕ ಮಾನ್ಯತೆಗಾಗಿ ಅವರನ್ನು ತಮ್ಮ 'ಪ್ರಾತಃಸ್ಮರಣೀಯ'ರಲ್ಲೊಬ್ಬರನ್ನಾಗಿ ಪ್ರತಿಷ್ಠಾಪಿಸಿಕೊಂಡಿದ್ದಾರೆ ಮತ್ತು ತಮ್ಮ ವಿಚಾರಗಳನ್ನು ಹರಡಲು ಅವರ ಬಿಡಿ ಬಿಡಿ ಹೇಳಿಕೆಗಳನ್ನು ಬಳಸಿಕೊಳ್ಳುತ್ತಿದ್ದಾರೆ. ಇದಕ್ಕೆ ಮತ್ತೆ ಕಾರಣ, ಉದಾರವಾದಿಗಳೆನಿಸಿಕೊಂಡವರು ಕ್ರಮೇಣ ಗಾಂಧಿಯನ್ನು ಮರೆಯುತ್ತಾ ಬಂದು, ಆಧುನಿಕತೆಯ ಹುರುಪಿನಲ್ಲಿ ಪಶ್ಚಿಮದ 'ಸೆಕ್ಯುಲರ್' ಎಂದು ಹೇಳಲಾಗುವ ಚಿಂತಕರನ್ನೇ ತಮ್ಮ ಚಿಂತನೆಯ ಆದರ್ಶಗಳನ್ನಾಗಿ, ಅಧ್ಯಯನದ ಮಾದರಿಗಳನ್ನಾಗಿ ಮಾಡಿಕೊಂಡು ಜನಜೀವನದ ಮುಖ್ಯವಾಹಿನಿಯ ಸೂಕ್ಷ್ಮಗಳಿಂದ ದೂರವಾಗತೊಡಗಿದ್ದು. ಇದು ನೆಹರೂ ಅವರ ಒಂದೆಡೆಯ ನಾಸ್ತಿಕವಾದಿ ವೈಜ್ಞಾನಿಕತೆ, ಮತ್ತೊಂದೆಡೆಯ ಆಸ್ತಿಕವಾದಿ ಪರಂಪರೆ ಬಗೆಗಿನ ಮೆಚ್ಚುಗೆಗಳ ನಡುವಣ ದ್ವಂದ್ವವನ್ನು ಪರಿಹರಿಸಿಕೊಳ್ಳಲಾಗದೇ ಹೋದ; ಆಧುನಿಕ ಚಿಂತನಾ ಲಹರಿಯ ಬಿಕ್ಕಟ್ಟಿನ ಫಲವೇ ಆಗಿದೆ.

ನೆಹರೂ ಪ್ರಣೀತ ಭಾರತದ ಆಧುನಿಕತೆಯ ಈ ಬಿಕ್ಕಟ್ಟನ್ನು ಗುರುತಿಸಿದ್ದ ಭಾರತೀಯ ಸಮಾಜವಾದಿ ಚಳುವಳಿಯು ಇದನ್ನು ಶೂದ್ರ ಜಾಗೃತಿಯ ಮೂಲಕ ಎದುರಿಸಲು

ಹೋಗಿ; ಅದರ ರಾಜಕಾರಣದಲ್ಲಿ ಸಿಕ್ಕಿಹಾಕಿಕೊಂಡು ಸಮಾಜವಾದವನ್ನೇ ಮರೆಯಿತು. ಇದರಿಂದಾಗಿ, ಅದು ಸ್ಥೂಲ ಶೂದ್ರವಾದವಾಗಿ ಕೊನೆಗೊಂಡು ಚದುರಿಹೋಗುವಂತಾಯಿತು. ಇನ್ನು ನಮ್ಮ ಕಮ್ಯುನಿಸ್ಟರಾದರೋ, ತಮ್ಮ ಭೌತವಾದಿ ನಂಬಿಕೆಗಳ ಮೂಲಕ ಸಂಸ್ಕೃತಿಯ ಪ್ರಶ್ನೆಯನ್ನು ಅಪ್ರಸ್ತುತಗೊಳಿಸಿಕೊಂಡು ರಾಷ್ಟ್ರದ ಸಾಂಸ್ಕೃತಿಕ ಜೀವನದ ಹತ್ತಿರಕ್ಕೂ ಬರಲಾಗದಾದರು. ಹೀಗಾಗಿ ಇಂದು ಭಾರತದಲ್ಲಿ ಧಾರ್ಮಿಕ ಉದಾರವಾದವೆಂಬುದೇ ವಿಶ್ವಾಸಾರ್ಹ ನಾಯಕತ್ವ ಮತ್ತು ಅವಲಂಬನಾರ್ಹ ಸಾಮಾಜಿಕ ಮತ್ತು ಸಂಸ್ಕೃತಿಕ ರೂಪಗಳ ಕೊರತೆಯಿಂದಾಗಿ ಅನುಮಾನಾಸ್ಪದವೂ, ಅವ್ಯಾವಾಹಾರಿಕವೂ ಎನಿಸಿ, ಹಿನ್ನೆಲೆಗೆ ಸರಿಯುವಂತಾಗಿದೆ.

ದುರಂತವೆಂದರೆ, ಇದು ಹಿಂದೂ ಧರ್ಮಕ್ಕೆ ಮಾತ್ರ ಸಂಬಂಧಿತವಾದ ಬೆಳವಣಿಗೆಯಾಗಿಲ್ಲ. ಭಾರತದ ಇನ್ನೆರಡು ಪ್ರಮುಖ ಧರ್ಮಗಳಾದ ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳಲ್ಲೂ ಈ ಬೆಳವಣಿಗೆ ಸಂಭವಿಸಿದೆ. ಬಹು ಸಂಸ್ಕೃತಿಯ ಹಿಂದೂ ಧರ್ಮಕ್ಕಿಂತ, ಸ್ಥೂಲವಾಗಿಯಾದರೂ ಏಕ ಸಂಸ್ಕೃತಿರೂಪಿಯಾಗಿರುವ ಈ ಎರಡೂ ಧರ್ಮಗಳಲ್ಲೇ, ಈ ಬೆಳವಣಿಗೆ ಬಹು ತ್ವರೆ ಮತ್ತು ತೀವ್ರತೆಯಿಂದ ನಡೆದಿದೆ. ಇದು, ಹೊರನೋಟಕ್ಕೆ ಬಹು ಉದಾರವೆಂದು ತೋರುವ ಕ್ರೈಸ್ತ ಧರ್ಮ ಜಗತ್ತಿನಾದ್ಯಂತ ಇತರರನ್ನು ಮತಾಂತರಿಸಿ 'ಉದ್ಧಾರ' ಮಾಡಲು ನಡೆಸುತ್ತಾ ಬಂದಿರುವ ಅದರ ಮೇಲಿರಿಮೆಯ ಹಿಂದಿನ ಸಂಕುಚಿತ ಲೋಕದೃಷ್ಟಿಯಲ್ಲೇ ನಿರಂತರವಾಗಿ ವ್ಯಕ್ತವಾಗುತ್ತಿದೆ. ಇನ್ನು ಇತ್ತೀಚಿನ ವರ್ಷಗಳಲ್ಲಿ ಇಸ್ಲಾಂನ ಸಂಕುಚಿತೀಕರಣವಂತೂ ಕಣ್ಣಿಗೆ ರಾಚುವಷ್ಟು ಜಗತ್ಪ್ರಸಿದ್ಧವಾಗಿದೆ. ಹಾಗೆ ನೋಡಿದರೆ, ದೈವಿಕ ಸತ್ಯದ ಏಕಸ್ವಾಮ್ಯ ಪಡೆದಂತೆ ವರ್ತಿಸತೊಡಗಿರುವ ಮರಳುಭೂಮಿಯ ಈ ಎರಡೂ ಧರ್ಮಗಳು, ಜಾಗತಿಕ ಶಕ್ತಿ ರಾಜಕಾರಣದ ಒಳಸುಳಿಗಳಿಗೆ ಸಿಕ್ಕಿ–ಈವರೆಗೆ ತಾವೂ ಸೇರಿ ಪರಸ್ಪರ ಅನುಸಂಧಾನದಲ್ಲಿ ಸೃಷ್ಟಿಸಿದ್ದ–ಭಾರತೀಯ ಸಂಸ್ಕೃತಿಯ ಬಹುತ್ವದ ಪ್ರತೀಕವಾದ ಧಾರ್ಮಿಕ ಉದಾರತೆಯನ್ನೇ ಘಾಸಿಗೊಳಿಸಿವೆ ಮತ್ತು ಧಾರ್ಮಿಕ ಶಠತ್ವ ಬೆಳೆಯಲು ಕಾರಣವಾಗಿವೆ.

ಇದರ ಇತಿಹಾಸದ ಇತ್ತೀಚಿನ ಉದಾಹರಣೆಯೆಂದರೆ, ಷಾ ಬಾನು ಪ್ರಕರಣದಲ್ಲಿ ಮುಸ್ಲಿಂ ಪುರೋಹಿತಶಾಹಿಯಷ್ಟೇ ಅಲ್ಲ, ಅದರ ಬುದ್ಧಿಜೀವಿ ವರ್ಗ ಸೇರಿದಂತೆ, ಇಡಿಯಾಗಿ ಮುಸ್ಲಿಂ ಸಮಾಜ ತಳೆದ ನಿಲುವು. ಅದಕ್ಕೂ ಮುಖ್ಯವಾಗಿ, ಇದಕ್ಕೆ ರಾಷ್ಟ್ರವನ್ನು ಅತ್ಯಾಧುನಿಕತೆಯೆಡೆಗೆ ಕೊಂಡೊಯ್ಯುವ ಸಂಕಲ್ಪ ಮಾಡಿದ್ದ ಆಗಿನ ನಮ್ಮ ರಾಜಕೀಯ ನಾಯಕತ್ವ ಪ್ರತಿಸ್ಪಂದಿಸಿದ ರೀತಿ. ಇವೆರಡೂ ಸೇರಿ ದೊಡ್ಡ ಅನಾಹುತವನ್ನೇ ಉಂಟು ಮಾಡಿದವು. ಗಾಂಧಿ ಕೊಲೆಯ ಹಿನ್ನೆಲೆಯಲ್ಲಿ ಸಂಶಯಕ್ಕೀಡಾಗಿ ಸಾರ್ವಜನಿಕವಾಗಿ ಬಾಯಿ ಮುಚ್ಚಿಕೊಂಡಿದ್ದ ಹಿಂದೂ ಸಂಕುಚಿತ ಧಾರೆಯನ್ನು ಆವರೆಗೆ ಹಿಂದೂ ಉದಾರವಾದಿ ಧಾರೆ ತನ್ನೆಲ್ಲ ಬೌದ್ಧಿಕ ವಯ್ಯಾರಗಳ ಹೊರತಾಗಿಯೂ ತಹಬಂದಿಯಲ್ಲೇ ಇಟ್ಟಿತ್ತು. ಆದರೀಗ ಹಿಂದೂ ಸಂಕುಚಿತಧಾರೆ ಜನ ಬೆಂಬಲದೊಂದಿಗೆ ಒಮ್ಮೆಗೇ ಸ್ಫೋಟಿಸಿತು. ಉದಾರವಾದಿಗಳ ತಾತ್ವಿಕತೆ ಮತ್ತು ಅದರ ರಾಜಕೀಯ

ವಾರಸುದಾರರಂತಿದ್ದ ಸೆಕ್ಯುಲರ್ ಪಕ್ಷಗಳ ರಾಜಕಾರಣ ಒಟ್ಟಿಗೇ ದಿವಾಳಿ ಎದ್ದ ಸಂದರ್ಭವದು. ನೆಹರೂ ಪ್ರಣೀತ ರಾಜಕೀಯ ಆಧುನಿಕತೆಯ ಅವಿಭಾಜ್ಯ ಅಂಗವಾಗಿದ್ದ ಸೆಕ್ಯುಲರಿಸಂ, ಅವರ ಮೊಮ್ಮಗನ ರಾಜಕಾರಣದ ಕಾಲಕ್ಕೆ ತನ್ನೆಲ್ಲ ಆಧುನಿಕತೆಯನ್ನು ಕಳೆದುಕೊಂಡು ಕೇವಲ ಒಂದು ಪೆದ್ದು ಪರಿಕಲ್ಪನೆಯ ಮಟ್ಟಕ್ಕೆ ಇಳಿಯಿತು ಮತ್ತು ಸಾಮಾನ್ಯ ಜನರ ಕಣ್ಣಲ್ಲಿ ಹಾಸ್ಯಾಸ್ಪದ ರಾಜಕೀಯ ಉಪಕರಣವೆಂದೆನಿಸಿಕೊಂಡಿತು. 'ಖೋಟಾ ಸೆಕ್ಯುಲರಿಸಂ' ಎಂಬುದು ಭಾರತದ ರಾಜಕೀಯ ಜೀವನದಲ್ಲಿ ಒಂದು ವಿಶ್ವಾಸಾರ್ಹ ಶಬ್ದವಾಗಿ ಚಲಾವಣೆಯಾಗ ತೊಡಗಿದ್ದು ಆಗಿನಿಂದಲೇ.

ಇಂತಹ ಖೋಟಾ ಸೆಕ್ಯಲರಿಸಮ್ಮನ್ನು ಸೃಷ್ಟಿಸಿದ ಖೋಟಾ ಆಧುನಿಕತೆಯೇ, ಇಂದು ಒರಿಸ್ಸಾದ ಕಂಧಮಹಲ್‌ನಲ್ಲಿ ಮತಾಂತರ ರಾಜಕಾರಣದ ಹಿನ್ನೆಲೆಯಲ್ಲಿ ಸೃಷ್ಟಿಯಾಗಿರುವ ಕೋಮು ಹಿಂಸಾಚಾರಕ್ಕೂ ಕಾರಣವಾಗಿರುವುದು. ಏಕೆಂದರೆ, ಮಿಷನರಿಗಳು ಮತಾಂತರಕ್ಕಾಗಿ ಆಯ್ಕೆ ಮಾಡುತ್ತಿರುವುದು ನಮ್ಮ ಆಧುನೀಕರಣದ ಯಾವ ಕಾರ್ಯಾಚರಣೆಗಳೂ ಮುಟ್ಟದ ಇಂತಹ ಅತಿ ಹಿಂದುಳಿದ ಪ್ರದೇಶಗಳ ಅತಿ ಹಿಂದುಳಿದ-ದಲಿತ ಮತ್ತು ಬುಡಕಟ್ಟು-ಸಮುದಾಯಗಳನ್ನೇ. ಹಾಗಾಗಿ, ಕ್ರೈಸ್ತ ಸಂಸ್ಥೆಗಳು ತಮ್ಮ ಮತಾಂತರಗಳ ಮೂಲಕ ಯಾವ ಜನಸಮುದಾಯಗಳಿಗೆ ಸಾಮಾಜಿಕ ಚೇತರಿಕೆ ನೀಡಲಾರಂಭಿಸಿವೆಯೋ, ಆ ಜನಸಮುದಾಯಗಳನ್ನು ನಮ್ಮ ಆಧುನೀಕರಣದ ಯೋಜನೆಗಳು ಈವರೆಗೆ ಏಕೆ ಮುಟ್ಟಲಾಗಿಲ್ಲ ಮತ್ತು ಚೇತರಿಸಲಾಗಿಲ್ಲ ಎಂಬ ಪ್ರಶ್ನೆಯನ್ನೂ ನಾವಿಲ್ಲಿ ಕೇಳಿಕೊಳ್ಳಬೇಕಾಗಿದೆ. ಇದು ನಮ್ಮ ಆಧುನೀಕರಣ ಎಷ್ಟು ಖೋಟಾ ಆಗಿದೆ ಎಂಬುದನ್ನಷ್ಟೇ ಬಯಲುಗೊಳಿಸುತ್ತದೆ. ನಾವು ಆರಿಸಿಕೊಂಡಿರುವ ಆಧುನಿಕತೆ ಸ್ವಯಂಚಾಲಿತವಾಗಿದ್ದು, ಅದು ಅಗತ್ಯಗಳ ಮಾನವೀಯ ಸಂದರ್ಭಗಳನ್ನು ಗುರುತಿಸಿ ಅಲ್ಲಿ ಚೇತರಿಕೆಯನ್ನುಂಟುಮಾಡುವಂತಹ ಆಯ್ಕೆಯ ಅಥವಾ ಮಾದರಿಗಳ ಅವಕಾಶಗಳನ್ನೇ ಹೊಂದಿಲ್ಲ. ಹಾಗೆ ಹೊಂದಿದ್ದರೆ ಇಂದು ಭಾರತದಲ್ಲಾಗುತ್ತಿರುವಂತೆ ಚೇತರಿಕೆಯ ಸಮೃದ್ಧ ದ್ವೀಪಗಳು ಒಂದೆಡೆ ಮತ್ತು ಬರೀ ನಿರಾಶೆ-ನಿಟ್ಟುಸಿರುಗಳ ವಿಶಾಲ ಸ್ಮಶಾನಗಳು ಇನ್ನೊಂದೆಡೆ ಸೃಷ್ಟಿಯಾಗುತ್ತಿರಲಿಲ್ಲ. ಇದು ಕೋಮು ವೈರ ಮತ್ತು ಹಿಂಸಾಚಾರಗಳಿಗೆ ಫಲವತ್ತಾದ ರಾಜಕೀಯ ಸಂದರ್ಭಗಳನ್ನು ಹುಟ್ಟು ಹಾಕಬಲ್ಲ ಬೆಳವಣಿಗೆಯೇ ಆಗಿದೆ.

ಕಂಧಮಹಲ್‌ನಲ್ಲಿ ಈಗ ಸೃಷ್ಟಿಯಾಗಿರುವದು ಇಂತಹ ರಾಜಕೀಯ ಸಂದರ್ಭವೇ. ಅಲ್ಲಿ ಮತಾಂತರಕ್ಕೊಳಗಾಗುತ್ತಿರುವವರು ಹಿಂದೂ ಸಂಕುಚಿತವಾದಿ ಮತಾಚರಣೆಗಳಿಂದ ಶಾಪಗ್ರಸ್ತರಾಗಿ ದಟ್ಟ ದರಿದ್ರ ಸ್ಥಿತಿಯಲ್ಲಿರುವ ಅಸ್ಪೃಶ್ಯರು. ನಾವು ಕೈಬಿಟ್ಟಿರುವ ಜನರನ್ನು ಇತರರು ಕೈ ಹಿಡಿಯಲು ಬಂದರೆ ಅದನ್ನು ಪ್ರತಿಭಟಿಸುವುದು ಅಮಾನವೀಯವಾಗುತ್ತದೆ., ನಿಜ. ಆದರೆ ಸೆಕ್ಯುಲರಿಸಂ ಸತ್ತುಬಿದ್ದಿರುವ ಇಂದಿನ ಪರಿಸ್ಥಿತಿಯಲ್ಲಿ ಮತಾಂತರ ಒಂದು ಮತೀಯ ಆಚರಣೆ ಮಾತ್ರವಾಗಿ ಪರಿಗಣಿತವಾಗದೆ, ಒಂದು ರಾಜಕೀಯ ವಿದ್ಯಮಾನವೂ ಆಗಿ ಪ್ರಸ್ತುತಗೊಳ್ಳುವಂತಾಗಿದೆ. ಹಾಗಾಗಿ ಇಲ್ಲಿ ಮಾನವೀಯ ದೃಷ್ಟಿಕೋನಕ್ಕೆ

ಆಸ್ಪದವೇ ಇಲ್ಲವಾಗಿದೆ. ಇದು ನಿಜವಾದ ದುರಂತ.

ಹಿಂದೂ ಸಾಮ್ರಾಜ್ಯ ಸ್ಥಾಪನೆಗಾಗಿ ಹಿಂದೂ ಸಂಕುಚಿತವಾದಿಗಳು ಆರಂಭಿಸಿರುವ ಯುದ್ಧಕ್ಕೆ ಕಾಲಾಳುಗಳು ಬೇಕಿದೆ. ಹಾಗಾಗಿಯೇ ಇವರು ಈ ಮತಾಂತರ ವಿರೋಧಿ ಕಾರ್ಯಾಚರಣೆಯಲ್ಲಿ ಅಸ್ಪೃಶ್ಯರ ವಿರುದ್ಧ ಎತ್ತಿ ಕಟ್ಟಿರುವುದು ಸ್ಥಳೀಯ ಬುಡಕಟ್ಟಿನವರನ್ನೇ. ಹೀಗೆ ಈ ಮತಾಂತರದ ಅವಾಂತರದಲ್ಲಿ ಹೊಡೆದಾಡಿ ಸಾಯುತ್ತಿರುವುದು ಎರಡು ದಲಿತ ಸಮುದಾಯಗಳೇ ಆಗಿವೆ. ಹಿಂದೂ ಸಂಕುಚಿತವಾದಿ ರಾಜಕಾರಣದಲ್ಲಿ ಅಡಗಿರುವ ಕ್ರೌರ್ಯವಿದು. ಅಸ್ಪೃಶ್ಯತೆ ಹಿಂದೂ ಧರ್ಮದ ಅವಿಭಾಜ್ಯ ಅಂಗವೆಂದು ಬಹಿರಂಗವಾಗಿ ಸಾರಬಲ್ಲ ಶಂಕರಾಚಾರ್ಯರ ವಿರುದ್ಧ ಒಂದು ಪ್ರತಿಭಟನೆಯನ್ನೂ ಸಂಘಟಿಸಲಾಗದ ಇವರಿಗೆ, ಈ ಮತಾಂತರದ ವಿರುದ್ಧ ಪ್ರತಿಭಟಿಸುವ ಯಾವ ನೈತಿಕ ಹಕ್ಕೂ ಇಲ್ಲ. ಹಾಗೆಂದು ಹೇಳಿದರೆ ಇವರಿಗೆ ಅರ್ಥವೂ ಆಗುವುದಿಲ್ಲ. ಏಕೆಂದರೆ ಅಂತಹ ನೈತಿಕ ಪ್ರಜ್ಞೆ ಏನಾದರೂ ಇವರಿಗಿದ್ದದ್ದಲ್ಲಿ, ವರ್ಷಾನುಗಟ್ಟಲೆ ಕೋಟ್ಯಾಂತರ ರೂಪಾಯಿಗಳ ವೆಚ್ಚದಲ್ಲಿ ಅನೇಕ 'ಧಾರ್ಮಿಕ' ಅಭಿಯಾನಗಳನ್ನು ನಡೆಸುತ್ತಿರುವ ಇವರು, ತಮ್ಮ ಹಿಂದೂ ಸಾಮ್ರಾಜ್ಯ ಸ್ಥಾಪನೆಯ ಯೋಜನೆಯ ಅಂಗವಾಗಿಯಾದರೂ ಈ ಹೊತ್ತಿಗೆ ಓರ್ವ ಶಂಕರಾಚಾರ್ಯರ ಸ್ಥಾನಕ್ಕೆ ಅಸ್ಪೃಶ್ಯನೊಬ್ಬನ್ನು ತಯಾರು ಮಾಡುವ ಅಭಿಯಾನವೊಂದನ್ನು ಆರಂಭಿಸಬೇಕಿತ್ತು. ಅಂತಹ ಯಾವ–ಕನಿಷ್ಠ, ಸಾರ್ವತ್ರಿಕ ದೇವಾಲಯಗಳಲ್ಲಿ ಕೆಲವದರಲ್ಲಾದರೂ ಅಸ್ಪೃಶ್ಯರನ್ನೂ, ಶೂದ್ರರನ್ನೂ ಅರ್ಚಕರನ್ನಾಗಿ ನಿಯಮಿಸುವ–ಅಭಿಯಾನವನ್ನು ಆರಂಭಿಸದ ಇವರು ಕಟ್ಟುವ ಹಿಂದೂ ಸಾಮ್ರಾಜ್ಯವು ಹಾಗಾಗಿ, ಬುದ್ಧಪೂರ್ವ ಯುಗದ್ದೇ ಆಗಿದೆ. ಆದ್ದರಿಂದ ಇವರ ಮತಾಂತರ ವಿರೋಧಿ ಕಾರ್ಯಾಚರಣೆ ಯಾವ ಮತ್ತು ಯಾರ ಸಹಾನುಭೂತಿಗೂ ಅರ್ಹವಾಗದಾಗಿದೆ.

(೯, ಸೆಪ್ಟಂಬರ್, ೨೦೦೮)

■

ಬುದ್ಧ ಮತ್ತು ಹಿಂದೂ ಧರ್ಮ: ಕೆಲವು ಚಿಂತನೆಗಳು

ಹಿಂದೂ ಧರ್ಮವೆನ್ನುವುದು ಹಲವು ಮತಗಳ ಕಲಸು ಮೇಲೋಗರವಾಗಿದ್ದು, ಇದರಲ್ಲಿ ಬೌದ್ಧ ಧರ್ಮವೂ ತನ್ನ ಅನೇಕ ಆವೃತ್ತಿಗಳ ರೂಪದಲ್ಲಿ ಹಾಸುಹೊಕ್ಕಾಗಿದೆ. ಅದು ಹಿಂದೂ ಧರ್ಮವು ವೈದಿಕ ಧರ್ಮವಾಗಿ ಪರಿವರ್ತಿತವಾಗದಂತೆ ತಡೆಯುತ್ತಿರುವ ಶಕ್ತಿಯಾಗಿ ಅನೇಕ ರೂಪಗಳಲ್ಲಿ ಕೆಲಸ ಮಾಡುತ್ತಿದೆ. ಹಾಗೆ ನೋಡಿದರೆ, ಭಾರತದಲ್ಲಿ ಬೌದ್ಧ ಧರ್ಮ ಅನೇಕ ರೂಪಾಂತರಗಳನ್ನು ಕಂಡು ತನ್ನ ಮೂಲ ಚಹರೆಗಳನ್ನು ಕಳೆದುಕೊಳ್ಳುತ್ತಾ, ಕಾಲಕ್ರಮದಲ್ಲಿ ಸನಾತನ ಧರ್ಮ(ಅಂದರೆ, ಆದಿ ಧರ್ಮ ಎಂಬರ್ಥದಲ್ಲಿ)ದೊಂದಿಗೆ ಅನುಸಂಧಾನಗೊಳ್ಳುತ್ತಾ ಹೋದ ಪರಿಣಾಮವಾಗಿ; ವೈದಿಕ ಧರ್ಮವೂ ಅನೇಕ ರೂಪಾಂತರಗಳನ್ನು ತಾಳಿ, ತನ್ನ ಮೂಲ ಚಹರೆಗಳನ್ನು ಕಳೆದುಕೊಂಡಿದೆ. ಹಿಂದೂ ಕೋಮುವಾದಿ ತಾತ್ವಿಕತೆಯ ಮೂಲ ಸಿಟ್ಟೂ ಇದೇ ಆಗಿದ್ದು, ಇತರ ಮತಗಳನ್ನು ಕುರಿತ ಅದರ ಅಸಹನೆ ಈ ಮೂಲದಿಂದಲೇ ಬಂದಂತಹುದಾಗಿದೆ.

'ವಿಕ್ರಾಂತ ಕರ್ನಾಟಕ'ದ ಕಳೆದ ಸಂಚಿಕೆಯಲ್ಲಿ, ಕೆಲವು ವಾರಗಳ ಹಿಂದೆ ಬೆಂಗಳೂರಿನಲ್ಲಿ ಕೆಲವು ದಲಿತ ಗೆಳೆಯರ ನೇತೃತ್ವದಲ್ಲಿ ಎರಡು ಸಾವಿರ ಜನರು ಬೌದ್ಧ ಧರ್ಮಕ್ಕೆ ಮತಾಂತರವಾದ ಘಟನೆ ಬಗ್ಗೆ ಎರಡು ಬರಹಗಳಿವೆ. ಒಂದು, ಸಹಾನುಭೂತಿಪರವಾದ ವರದಿಯಂತಿದ್ದರೆ, ಇನ್ನೊಂದು ಅದನ್ನು ವಿಮರ್ಶಿಸುವ ಸಂಪಾದಕೀಯ ಲೇಖನವಾಗಿದೆ. ಮತಾಂತರ ಇಂದು ಭಾವನೆಗಳನ್ನು ಕೆರಳಿಸುವ ವಿದ್ಯಮಾನವೆನಿಸಿದ್ದರೆ, ಅದಕ್ಕೆ ಕಾರಣ ಬಹುಪಾಲು ಎಲ್ಲ ಮತಾಂತರಗಳೂ ಬಹುಸಂಖ್ಯಾತ ಹಿಂದೂ ಧರ್ಮದಿಂದ ಇತರ ಧರ್ಮಗಳಿಗೆ ಆಗುತ್ತಿರುವುದೂ ಮತ್ತು ಇವುಗಳ ಹಿಂದೆ ಧಾರ್ಮಿಕ ಕಾರಣಗಳಿಗೆ ಹೊರತಾದ ಬೇರೆಯೇ ಕಾರಣಗಳಿವೆ ಎಂಬ ನಂಬಿಕೆಯೇ ಆಗಿದೆ. ಆದರೆ, ಬೌದ್ಧ ಧರ್ಮಕ್ಕೆ ಆಗುವ ಮತಾಂತರಗಳ ಬಗ್ಗೆ ಹಿಂದೂ ಧರ್ಮಪಾಲಕರಲ್ಲಿ ಅಷ್ಟೇನೂ ಕ್ಷೋಭೆ ಉಂಟಾಗದಿರಲು, ಅದು ಹಿಂದೂ ಧರ್ಮದ ಒಂದು ಭಾಗವೇ ಆಗಿದೆ ಎಂಬ ಸುಪ್ತ ಭಾವನೆಯೇ ಕಾರಣವಾಗಿದೆ.

ಹತ್ತಾರು ಜನ ಹಿಂದೂಗಳು ಕ್ರಿಶ್ಚಿಯನ್ನರೋ, ಮುಸಲ್ಮಾನರೋ ಆಗ ಹೊರಟಾಗ ಹಿಂದೂ ಸಂಘಟನೆಗಳು ಮಾಡುವ ರಾದ್ಧಾಂತ, ಐವತ್ತು ವರ್ಷಗಳ ಹಿಂದೆ ಅಂಬೇಡ್ಕರ್ ಅವರು ತಮ್ಮ ಸಾವಿರಾರು ಅನುಯಾಯಿಗಳೊಂದಿಗೆ ಆರಂಭಿಸಿದ ಬೌದ್ಧ ಧರ್ಮದೆಡಗಿನ ಮತಾಂತರದಿಂದ ಹಿಡಿದು ಮೊನ್ನೆಯ ಮೈಸೂರಿನ ಮತಾಂತರದವರೆಗೆ ಎಲ್ಲಿಯೂ ಕಂಡುಬಂದಿಲ್ಲ ಎಂಬುದು ಗಮನಾರ್ಹ. ರವೀಂದ್ರ ರೇಷ್ಮೆಯವರ ಸಂಪಾದಕೀಯದಲ್ಲಿ ಕಾಣಬರುವ 'ಇದರಿಂದೇನು ಪ್ರಯೋಜನ?' ಎಂಬಂತಹ ಗೊಣಗಾಟಗಳ ಹೊರತಾಗಿ ಮತ್ತಾವ ರೀತಿಯ ಉಗ್ರ ಪ್ರತಿಕ್ರಿಯೆಗಳನ್ನೂ ಈ ಮತಾಂತರಗಳು ಎದುರಿಸಿಲ್ಲ.

ಹಾಗೆ ನೋಡಿದರೆ, ಭಾರತ ತನ್ನ ಇತಿಹಾಸದಲ್ಲಿ ಇಂತಹ ಅನೇಕ ಮತಾಂತರಗಳನ್ನು ಕಂಡಿದೆ. ಬದುಕಿನ ಅರ್ಥವನ್ನು ತಿಳಿಯುವ ಮನುಷ್ಯನ ಮೂಲಭೂತ ಹಂಬಲದಿಂದ ಪ್ರೇರಿತವಾದ ತಾತ್ವಿಕ ಅನ್ವೇಷಣೆಯ ಪರಿಣಾಮವಾಗಿ ನಡೆದ ಮತಾಂತರಗಳು ಮನುಷ್ಯನ ಬದುಕನ್ನು ಹೆಚ್ಚೆಚ್ಚು ಸಂಪನ್ನಗೊಳಿಸಿವೆ. ಕ್ರಿಪೂ. ಮೂರರಿಂದ ಆರನೇ ಶತಮಾನದವರೆಗೆ ಭಾರತದಲ್ಲಿ ನಡೆದ ಇಂತಹ ತಾತ್ವಿಕ ಅನ್ವೇಷಣೆಗಳು ಶ್ರಮಣ ಸಂಸ್ಕೃತಿಯ ರೂಪದಲ್ಲಿ ಭಾರತೀಯ ತತ್ವಜ್ಞಾನಕ್ಕೆ ಅನೇಕ ಅಭೂತಪೂರ್ವ ಕೊಡುಗೆಗಳನ್ನು ನೀಡಿದೆ. ಭಾರತೀಯ ತತ್ವಜ್ಞಾನದ ಷಡ್ದರ್ಶನಗಳು ಸ್ಪಷ್ಟ ರೂಪು ತಳೆದದ್ದೇ ಇಂತಹ ಅನೇಕ 'ಮತಾಂತರ'ಗಳ ಮೂಲಕ. ಮತಾಂತರ ಎಂದರೆ, ಬದುಕನ್ನು ಕುರಿತ ಹೊಸ ಒಳನೋಟಗಳ ಮೂಲಕ ತನ್ನ ಆಧಾರ ನಂಬಿಕೆಗಳನ್ನು ಬದಲಿಸಿಕೊಳ್ಳುವುದು ಎಂದರ್ಥ.

ಆದರೆ, ನಾಗರೀಕತೆಯ ಬೆಳವಣಿಗೆಯೊಂದಿಗೆ (ಇದರಲ್ಲಿ ಸಂಸ್ಕೃತಿ ವಿಸ್ತರಣೆಯೂ ಸೇರಿದೆ), ಅಲ್ಲಲ್ಲಿ ಹರಡಿ ಹೋಗಿದ್ದ ಜನಸಮುದಾಯಗಳು ಪರಸ್ಪರ ಸಂಪರ್ಕ ಸಾಧಿಸಿಕೊಂಡು ಬೆರೆಯುವ ಅನಿವಾರ್ಯತೆಯೂ ಉಂಟಾಯಿತು. ಇದರಿಂದಾಗಿ ಪರಸ್ಪರ ನಂಬಿಕೆಗಳ ಮೇಲಾಟ ಶುರುವಾಗಿ ಮತನಿಷ್ಠೆಯು ರಾಜಕೀಯ ನಿಷ್ಠೆಯಾಗಿ ಪರಿವರ್ತಿತವಾಗತೊಡಗಿತು. ಮತಾಂತರದ ಅರ್ಥವೇ ಬದಲಾಯಿತು. ಇದರ ಪರಿಣಾಮಗಳು ತಾತ್ವಿಕ ಅನ್ವೇಷಣೆಯ ರೀತಿ–ನೀತಿಗಳ ಮೇಲೂ ಆಗದಿರಲಿಲ್ಲ. ಹೀನಯಾನ–ಮಹಾಯಾನ–ವಜ್ರಯಾನ, ಥೇರವಾದ, ಯೋಗಾಚಾರ, ಚಾರ್ವಾಕ, ಶೈವ, ವೈಷ್ಣವ, ಶಾಕ್ತ, ಕಾಳಾಮುಖ ಮುಂತಾಗಿ ಉಂಟಾದ ಸೂಕ್ಷ್ಮ ವಿಂಗಡಣೆ – ಉಪ ವಿಂಗಡಣೆಗಳು ಮತ್ತು ಅವಕ್ಕೆ ಸಂಬಂಧಪಟ್ಟ ಶಾಸ್ತ್ರಾಚಾರಗಳೂ ಇದರ ಫಲಗಳೇ. ಗುಡಿಗಳು, ವಿಹಾರಗಳು, ಬಸದಿಗಳು ಕೇವಲ ಮತಶ್ರದ್ಧೆಯ ಕೇಂದ್ರಗಳಾಗದೆ, ರಾಜಕೀಯ ಶಕ್ತಿ ಕೇಂದ್ರಗಳೂ ಆಗತೊಡಗಿದ್ದೂ, ಪುರೋಹಿತಶಾಹಿಯೆಂಬ ಮಧ್ಯವರ್ತಿ ವರ್ಗವೊಂದು ಸೃಷ್ಟಿಯಾದದ್ದೂ ಹಾಗೂ ಮತ ಮತ್ತು ರಾಜಕಾರಣ ಪರಸ್ಪರ ಹಾಸು ಹೊಕ್ಕಾಗತೊಡಗಿದ್ದೂ ಈ ಸಂಕ್ರಮಣ ಕಾಲಘಟ್ಟದಲ್ಲೇ.

ಈ ಪ್ರಕ್ರಿಯೆಯಲ್ಲಿ, ಜನಸಮುದಾಯದ ಮಟ್ಟಿಗೆ ಅನೇಕ ತಾತ್ವಿಕ ಸೂಕ್ಷ್ಮಗಳು ಸ್ಥೂಲಗೊಂಡು ಆವರೆಗಿನ ಎಲ್ಲ ತಾತ್ವಿಕ ಪ್ರಯೋಗಗಳೂ ಕಲಸು ಮೇಲೋಗರವಾದ ಬದುಕಿನ ಮಾದರಿಯೊಂದು ವಿಕಾಸವಾಯಿತು. ಇದರ ಸಗಟು ರೂಪವೇ–ಸಿಂಧು

ನದಿಯಾಚೆಯ ಜನ ಸಮುದಾಯದ ಜೀವನ ಕ್ರಮ ಎಂಬರ್ಥದಲ್ಲಿನ-'ಹಿಂದೂ ಧರ್ಮ'ವೆಂಬುದು ಗುರುತಿಸಲ್ಪಟ್ಟು, ವಿಕಾಸ ಹೊಂದುತ್ತಾ ನಡೆಯಿತು. ಈ ಸಂಕ್ರಮಣ ಸಂದರ್ಭದಲ್ಲಿ ಹೊರಗಿನಿಂದ ಬಂದ ಅನೇಕ ಕುಲಗಳು(ಉದಾ: ಯವನರು, ಹೂಣರು, ಕುಶಾನರು ಇತ್ಯಾದಿ) ಇಲ್ಲಿನ ಈ ಮತ-ರಾಜಕಾರಣದ ಸಂಘರ್ಷದಲ್ಲಿ ಪಾಲು ಭಾಗಿಯಾಗಿ, ಅದರ ಫಲವಾದ ಹೊಸ ಮತ-ರಾಜಕೀಯ ವ್ಯವಸ್ಥೆಯ ಭಾಗವೇ ಆಗಿ; ಇಲ್ಲಿನ ಕುಲಗಳೊಳಕ್ಕೇ ಸೇರಿಹೋದರು.

ಪುರಾತನ ವರ್ಣವ್ಯವಸ್ಥೆಯಿಂದ ಕಾಲಾನುಕ್ರಮದಲ್ಲಿ ಮೂಡಿದ (ಅಥವಾ 'ಹಾಗೆ ಬಂದ) ಜಾತಿವ್ಯವಸ್ಥೆಯ ಎರಕದಲ್ಲಿ ಈ ಮತಾಧಾರಿತ ರಾಜಕೀಯ ವ್ಯವಸ್ಥೆಯು ಒಂದು ಸ್ಥಿರ ಸ್ಥಿತಿಯನ್ನು ತಲುಪಿತು. ಆದರೆ, ನಂತರದ ದಿನಗಳಲ್ಲಿ ವಿವಿಧ ಉದ್ದೇಶಗಳೊಂದಿಗೆ ಬರಲಾರಂಭಿಸಿದ ಕುಲಗಳು (ಉದಾ: ಅರಬ್ಬರು, ಪರ್ಷಿಯನ್ನರು, ಯೂರೋಪಿಯನ್ನರು) ಬರಿ ಕುಲಗಳಾಗಿರದೆ, ಮತನಿಷ್ಠ ಸಮುದಾಯಗಳೂ ಆಗಿದ್ದುದರಿಂದ, ಭಾರತದಲ್ಲಿ ಮತ-ರಾಜಕಾರಣದ ಮತ್ತೊಂದು ತಳಮಳ ಶುರುವಾಯಿತು. ಯಾವ ಜಾತಿ ಪದ್ಧತಿ ಈ ಮುನ್ನ ಭಾರತೀಯ ಕುಲ ವ್ಯವಸ್ಥೆಯ ಸ್ಥಿರತೆಗೆ ಕಾರಣವಾಗಿತ್ತೋ, ಅದೇ ಜಾತಿ ಪದ್ಧತಿ ಈಗ ಈ ಹೊಸ ತಳಮಳದ ವೇಗವರ್ಧಕವಾಗಿ ಕೆಲಸ ಮಾಡುವ ವಿಪರ್ಯಾಸ ಸೃಷ್ಟಿಯಾಯಿತು. ಮೊದಮೊದಲು ಒಂದು ಸಾಮಾಜಿಕ ಒಪ್ಪಂದದಂತೆ ಕೆಲಸ ಮಾಡುತ್ತಿದ್ದ ಜಾತಿ ಪದ್ಧತಿ, ಕಾಲಕ್ರಮದಲ್ಲಿ ಸಾಮಾಜಿಕವಾಗಿ ಶ್ರೇಣೀಕರಣಗೊಂಡ ಪ್ರತ್ಯೇಕತೆಗಳನ್ನು ನಿರ್ಮಿಸಿದ್ದುದರಿಂದ, ಈ ಹೊಸ ಮತೀಯ ಕುಲಗಳೊಂದಿಗೆ ಆತ್ಮವಿಶ್ವಾಸದಿಂದ ಅನುಸಂಧಾನ ನಡೆಸುವ ಅವಕಾಶವನ್ನೂ, ಶಕ್ತಿಯನ್ನೂ ಈ 'ಹಿಂದೂ ಧರ್ಮ' ಕಳೆದುಕೊಂಡಿತು. ಇದರಿಂದಾಗಿ, ಈ ತಳಮಳದಲ್ಲಿ ಅನುಸಂಧಾನಕ್ಕಿಂತ ಸಂಘರ್ಷವೇ ಮೇಲುಗೈ ಪಡೆಯಿತು.

ಮಧ್ಯಯುಗದಲ್ಲಿನ ಭಕ್ತಿ ಪಂಥ, ಸೂಫಿ ಪಂಥ ಹಾಗೂ ಆಧುನಿಕ ಯುಗದಲ್ಲಿನ ಮಿಷನರಿ ಸೇವೆ ಮತ್ತು ಹೊಸ ವೈಚಾರಿಕತೆ-ವೈಜ್ಞಾನಿಕತೆಗಳ ಅನಾವರಣವು ಈ ತಳಮಳದ ಅಂಗವಾಗಿ ನಡೆದ ಅನುಸಂಧಾನಗಳ ಸಿಹಿ ಫಲಗಳು. ಹಾಗೇ, ರಾಜಕೀಯ ಪ್ರೇರಿತ ಮತಾಂತರಗಳು, ಅವು ಸಾಮಾಜಿಕ ಜೀವನದಲ್ಲಿ ಉಂಟು ಮಾಡಿದ ಅನೇಕ ರೀತಿಯ ಅಲ್ಲೋಲಕಲ್ಲೋಲಗಳು ಮತ್ತು ಎಲ್ಲಕ್ಕಿಂತ ಹೆಚ್ಚಾಗಿ, ಭಾರತವೆಂಬ ಆಧುನಿಕ ರಾಷ್ಟ್ರ ವ್ಯವಸ್ಥೆಯ ಉದಯದೊಂದಿಗೇ ಸಂಭವಿಸಿದ ರಾಷ್ಟ್ರ ವಿಭಜನೆ ಈ ತಳಮಳ ಸೃಷ್ಟಿಸಿದ ಕಹಿ ಫಲಗಳು. ಆದರೆ, ಸಿಹಿ ಫಲಗಳ ಸಿಹಿಗಿಂತ ಕಹಿ ಫಲಗಳ ಕಹಿಯೇ ಹೆಚ್ಚಾಗಿದ್ದರೆ, ಅದಕ್ಕೆ ಈ ತಳಮಳದಲ್ಲಿ ಮತ ಮತ್ತು ರಾಜಕಾರಣಗಳು ಪರಸ್ಪರ ಅನುಸಂಧಾನಗೊಳ್ಳದೆ, ಕ್ರಮೇಣ ಏಕೀಕರಣಗೊಳ್ಳುತ್ತಾ ಹೋದುದೇ ಕಾರಣವಾಗಿದೆ. ಇದಕ್ಕೆ ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಹುಟ್ಟಿಕೊಂಡ ಕೋಮುವಾದಿ ಎಂದು ಕರೆಯಲಾಗುವ ಸಂಸ್ಥೆಗಳು ಎಷ್ಟು ಕಾರಣವೋ, ಈ ಹೋರಾಟದ ನೇತೃತ್ವ ವಹಿಸಿದ್ದ ಕಾಂಗ್ರೆಸ್‌ನ ಅನೇಕ ನಾಯಕರ ಮತೀಯ ವರ್ತನೆಗಳೂ ಕಾರಣವಾಗಿತ್ತು. ಸ್ವತಃ

ಮಹಾತ್ಮ ಗಾಂಧಿಯವರು ಹೋರಾಟದ ಆರಂಭದಲ್ಲಿ ತಮ್ಮ ಹೊಸ ರಾಜಕಾರಣದ ಬಲವೃದ್ಧಿಗಾಗಿ; ಹಿಂದೂ-ಮುಸ್ಲಿಂ ಐಕ್ಯತೆ ವರ್ಧಿಸುವುದೆಂದು (ಬಹುಶಃ ತಪ್ಪಾಗಿ) ಭಾವಿಸಿ, ಜಾಗತಿಕ ಮುಸ್ಲಿಂ ಆಂದೋಲನದ ಬೀಜರೂಪದಂತಿದ್ದ ಖಿಲಾಫತ್ ಆಂದೋಲನಕ್ಕೆ ಬೆಂಬಲ ಘೋಷಿಸುವ ಮೂಲಕ ಜನ ಸಂಘಟನೆಯನ್ನು ತಮ್ಮ ಹೆಜ್ಜೆಯೊಂದಿಗೆ ಆರಂಭಿಸಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದಾಗಿದೆ.

ನಂತರ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಇದಕ್ಕೆ ತದ್ವಿರುದ್ಧವಾಗಿ ಹೊಸ ವೈಚಾರಿಕತೆ-ವೈಜ್ಞಾನಿಕತೆಗಳು ಪರಿಚಯಿಸಿದ 'ಸೆಕ್ಯುಲರಿಸಂ' ಎಂಬ ಪರಿಕಲ್ಪನೆಯ ಮೂಲಕ ಮತ ಮತ್ತು ರಾಜಕಾರಣಗಳನ್ನು ಸಂಪೂರ್ಣವಾಗಿ ಪ್ರತ್ಯೇಕಿಸಲು ಎಡಬಿಡಂಗಿ ಪ್ರಯತ್ನಗಳನ್ನು ಮಾಡಲಾಯಿತು. ಭಾರತದ ಬಹು ಮತೀಯ ಸಂದರ್ಭದಲ್ಲಿ ಇದು, ಅನೇಕ ರೀತಿಯ ಸಾಮಾಜಿಕ-ಸಾಂಸ್ಕೃತಿಕ ಬಿಗುವುಗಳನ್ನು ಸೃಷ್ಟಿಸಿತು. ಅವೇ ಇಂದು ಕೋಮುವಾದಿ ರಾಜಕಾರಣದ ಮೂಲಕ ಅಭಿವ್ಯಕ್ತಿ ಕಂಡುಕೊಳ್ಳುತ್ತಿರುವುದು. ಹೀಗಾಗಿ, ಹಳೆಯ ಮತೀಯತೆ ಮತ್ತು ಹೊಸ ಆಧುನಿಕತೆಯ ನಡುವಣ ಸಂವೇದನಾಹೀನ ಹಾಗೂ ಸಂವಾದಹೀನ ಸಂಬಂಧವೇ ಇಂದಿನ ಎಲ್ಲ ಮತೀಯ (ಮತ್ತು ಜಾತೀಯ) ವಿಕೃತಿಗಳಿಗೆ ಕಾರಣವಾಗಿದೆ ಎನ್ನಬಹುದು.

ಈಚಿನ ಬೌದ್ಧ ಮತಾಂತರ ಕೂಡ ಇಂತಹ ವಿಕೃತಿಗಳ ಬಗೆಗಿನ ಒಂದು ಸ್ಥಳೀಯ ಪ್ರತಿಕ್ರಿಯೆಯೇ ಆಗಿದೆ. ಇದಕ್ಕೆ ಸದ್ಯದ ಪ್ರೇರಣೆ ಭೈರಪ್ಪನವರು 'ಆವರಣ'ದ ಮೂಲಕ ಪ್ರಯತ್ನಿಸಿದ 'ಸತ್ಯಾನ್ವೇಷಣೆ' ಎಂಬ ವಿಕೃತಿಯೇ ಆಗಿದ್ದರೆ ಆಶ್ಚರ್ಯ ಪಡಬೇಕಿಲ್ಲ. ಏಕೆಂದರೆ, ದಲಿತರ ಒಂದು ಸಂಘಟಿತ ಗುಂಪು ಅಂಬೇಡ್ಕರ್‌ರ ಮತಾಂತರದ ಐವತ್ತನೇ ವರ್ಷದ ಸಂದರ್ಭದಲ್ಲಿ 'ಮರಳಿ ಮನೆಗೆ' ಎಂಬ ಆಂದೋಲನದಡಿ ಸಾಮೂಹಿಕವಾಗಿ ಬೌದ್ಧರಾಗುವ ಕಾರ್ಯಕ್ರಮ ರೂಪಿಸಿದೆಯಾದರೂ, ಅದಿನ್ನೂ ಪೂರ್ಣ ಪ್ರಮಾಣದಲ್ಲಿ ಚಾಲನೆಗೊಳ್ಳುವ ಮುನ್ನವೇ ಇದ್ದಕ್ಕಿದ್ದಂತೆ ಈ ಮತಾಂತರ ನಡೆದಿದೆ.

ಅದೇನೇ ಇರಲಿ, ಈ ಮತಾಂತರವು ಸ್ಥಳೀಯ ಹಿಂದೂ ಮೂಲಭೂತವಾದಿಗಳಿಗೆ ಒಂದು ಸ್ಥಳೀಯ ಎಚ್ಚರಿಕೆ ಕೊಟ್ಟದ್ದರ ಹೊರತಾಗಿ ಸಾಧಿಸಿದ್ದಾದರೂ ಏನು? ಇಂದಿನ ಸಂದರ್ಭದಲ್ಲಿ ಮತಾಂತರ ಅಂದರೆ, ಒಂದು ಪುರೋಹಿತಶಾಹಿಯಿಂದ ಇನ್ನೊಂದು ಪುರೋಹಿತಶಾಹಿಯ ವಶಕ್ಕೆ ಹೋದಂತೆ ಅಷ್ಟೆ. ಕೆಲವು ವರ್ಷಗಳ ಹಿಂದೆ ಗೆಳೆಯ ಕೆ.ಬಿ.ಸಿದ್ದಯ್ಯನವರ ಮಗಳ ಮದುವೆ ಬೌದ್ಧ ವಿಧಿಗಳನುಸಾರ, ಯಾರಿಗೂ ಅರ್ಥವಾಗದ ಪಾಳಿ ಭಾಷೆಯಲ್ಲಿ ಹಾಗೂ ವೈದಿಕ ಆಚರಣೆಗಳನ್ನೂ ನಾಚಿಸುವಂತಹ ಶಾಸ್ತ್ರಾಚಾರಗಳೊಂದಿಗೆ ನಡೆದ ರೀತಿ ನೋಡಿ ನಾವು ಗಾಬರಿಯಾಗಿದ್ದೆ, ಈಗ ದೇವನೂರ ಮಹಾದೇವ ಅವರು ಸದರಿ ಮತಾಂತರದ ಸಮಾರಂಭದಲ್ಲಿ ತಮ್ಮ ಗೆಳೆಯರೊಂದಿಗೆ ಬೌದ್ಧ ಪುರೋಹಿತರ ಮಧ್ಯೆ ಬುದ್ಧ ಪ್ರತಿಮೆಯ ಮುಂದೆ ಕೈಮುಗಿದು ನಿಂತ ಭಂಗಿ ನೋಡಿ ಮತ್ತಷ್ಟು ಗಾಬರಿಯಾಗಿದೆ! ಅವರನ್ನು ಹತ್ತಾರು ವರ್ಷಗಳಿಂದ ಹತ್ತಿರದಿಂದ

ಬಲ್ಲ ನನಗೆ ಅವರ ಈ ಭಂಗಿ ನಗೆಯನ್ನೂ, ಮರುಕವನ್ನೂ ಒಟ್ಟಿಗೆ ಉಂಟು ಮಾಡಿತು. ಹಾಗಾದರೆ, ಮಹಾದೇವ ಇನ್ನು ಮುಂದೆ ಬದುಕನ್ನು ಕುರಿತ ಮೂಲ ನಂಬಿಕೆಗಳಲ್ಲಿ, ಅವರ ಹಾಗೆ ಮತಾಂತರಗೊಳ್ಳದ ನಮಗಿಂತ ಭಿನ್ನವೇ? ಹಾಗಾದರೆ, ಯಾವ ರೀತಿ? ಬಹುಶಃ ಇದನ್ನೇ ತಮ್ಮ ಸಂಪಾದಕೀಯ ಶೀರ್ಷಿಕೆಯಲ್ಲಿ ರೇಷ್ಮೆಯವರು 'ಧರ್ಮ ಬದಲಾದರೆ, ಮನೋಧರ್ಮ ಬದಲಾದೀತೆ?' ಎಂದು ಕೇಳಿರುವುದು. ಇದನ್ನೇ ಇನ್ನೊಂದು ರೀತಿಯಲ್ಲಿ ಬೌದ್ಧ ಗುರು ದಲೈಲಾಮ ಹೀಗೆ ಹೇಳಿರುವುದು: ಬೌದ್ಧನಾಗಲು ಯಾರೇ ತಮ್ಮ ಧರ್ಮ ಬದಲಾಯಿಸುವ ಅಗತ್ಯವಿಲ್ಲ. ಇದರರ್ಥ, ಬೌದ್ಧ ಧರ್ಮ ಮೂಲತಃ ಒಂದು ಮನೋಧರ್ಮವಾಗಿದ್ದು, ಸಾರತಃ ಮತೀಯ ವಿಧಿ-ವಿಧಾನಗಳಿಂದ ಹೊರತಾಗಿದೆ. ಹಾಗಾಗಿ, ಬೌದ್ಧನಾಗಲು ಬೌದ್ಧಮತಕ್ಕೆ ಔಪಚಾರಿಕವಾಗಿ ಸೇರುವ ಅಗತ್ಯವಿಲ್ಲ.

ಹಿಂದೂ ಧರ್ಮವೆನ್ನುವುದು ಹಲವು ಮತಗಳ ಕಲಸು ಮೇಲೋಗರವಾಗಿದ್ದು, ಇದರಲ್ಲಿ ಬೌದ್ಧ ಧರ್ಮವೂ ತನ್ನ ಅನೇಕ ಆವೃತ್ತಿಗಳ ರೂಪದಲ್ಲಿ ಹಾಸುಹೊಕ್ಕಾಗಿದೆ. ಅದು ಹಿಂದೂ ಧರ್ಮವು ವೈದಿಕ ಧರ್ಮವಾಗಿ ಪರಿವರ್ತಿತವಾಗದಂತೆ ತಡೆಯುತ್ತಿರುವ ಶಕ್ತಿಯಾಗಿ ಅನೇಕ ರೂಪಗಳಲ್ಲಿ ಕೆಲಸ ಮಾಡುತ್ತಿದೆ. ಹಾಗೆ ನೋಡಿದರೆ, ಭಾರತದಲ್ಲಿ ಬೌದ್ಧ ಧರ್ಮ ಅನೇಕ ರೂಪಾಂತರಗಳನ್ನು ಕಂಡು ತನ್ನ ಮೂಲ ಚಹರೆಗಳನ್ನು ಕಳೆದುಕೊಳ್ಳುತ್ತಾ, ಕಾಲಕ್ರಮದಲ್ಲಿ ಸನಾತನ ಧರ್ಮ (ಅಂದರೆ, ಆದಿ ಧರ್ಮ ಎಂಬರ್ಥದಲ್ಲಿ) ದೊಂದಿಗೆ ಅನುಸಂಧಾನಗೊಳ್ಳುತ್ತಾ ಹೋದ ಪರಿಣಾಮವಾಗಿ; ವೈದಿಕ ಧರ್ಮವೂ ಅನೇಕ ರೂಪಾಂತರಗಳನ್ನು ತಾಳಿ, ತನ್ನ ಮೂಲ ಚಹರೆಗಳನ್ನು ಕಳೆದುಕೊಂಡಿದೆ. ಹಿಂದೂ ಕೋಮುವಾದಿ ತಾತ್ವಿಕತೆಯ ಮೂಲ ಸಿಟ್ಟೂ ಇದೇ ಆಗಿದ್ದು, ಇತರ ಮತಗಳನ್ನು ಕುರಿತ ಅದರ ಅಸಹನೆ ಈ ಮೂಲದಿಂದಲೇ ಬಂದಂತಹುದಾಗಿದೆ. (ಇದರ ವಿಷದೀಕರಣಕ್ಕಾಗಿ ಎಸ್. ಎಲ್. ಭೈರಪ್ಪನವರ 'ಸಾರ್ಥ' ಓದಿ.). ಮುಖ್ಯವಾಗಿ, ಅನಾತ್ಮವಾದಿಯಾದ ಬೌದ್ಧ ಧರ್ಮ ಆತ್ಮವಾದಿಯಾದ ವೈದಿಕ ಧರ್ಮದ ಆತ್ಮ ಮೀಮಾಂಸೆಯನ್ನು ಅದ್ವೈತ, ದ್ವೈತ, ವಿಶಿಷ್ಟಾದ್ವೈತ, ಶಕ್ತಿ ವಿಶಿಷ್ಟಾದ್ವೈತ ಮುಂತಾದ ಅನೇಕಾನೇಕ ಮೀಮಾಂಸಾ 'ಆವರಣ'ಗಳಿಗೆ ಸಿಲುಕಿಸಿ ಅಲುಗಾಡಿಸಿದೆ. ಇದರಿಂದಾಗಿ ವೈದಿಕ ಧರ್ಮದ ಸಾಮಾಜಿಕ ರಚನೆಗೆ ಅಡಿಗಲ್ಲಿನಂತಿದ್ದ ವರ್ಣ ವ್ಯವಸ್ಥೆಯು ತಾತ್ವಿಕ ಆಧಾರಗಳೇ ಅಲುಗಾಡಿ, ಇಂದು ಜಾತಿ ವ್ಯವಸ್ಥೆ ಪ್ರಶ್ನಾರ್ಹವೆನಿಸಿಕೊಂಡಿದೆ ಎಂಬುದನ್ನೂ ನಾವು ಗಮನಿಸಬೇಕು.

ಹೀಗೆ ಬೌದ್ಧ ಧರ್ಮ ಹಿಂದೂ ಧರ್ಮದ ಒಂದು ಒಳಕುದಿಯಾಗಿಯೇ ಕೆಲಸ ಮಾಡುತ್ತಾ, ಕರ್ಮಕಾಂಡದ ರೂಪದಲ್ಲಿದ್ದ ಅದರ 'ಅವಿದ್ಯೆ'ಯನ್ನು ತನ್ನ ಜ್ಞಾನ ಕಾಂಡದ ಮೂಲಕ ನಿವಾರಿಸುವ ಪ್ರಯತ್ನ ಮಾಡಿತು. ಇಂದಿನ ನಮ್ಮ ಅನೇಕ ದೇವರುಗಳು, ಅದರ ಮೂರ್ತಿಗಳು, ಸಂನ್ಯಾಸ, ಮಠ, ಪೂಜೆ, ಧ್ಯಾನ, ಪ್ರಾರ್ಥನೆ, ವ್ರತ, ಹರಕೆ, ಜಾತ್ರೆ, ಅನೇಕ ಜಾನಪದ ಆಚರಣೆಗಳು, ಪ್ರದರ್ಶಕ ಕಲೆಗಳು; ಪ್ರಜ್ಞಾಶಾಸ್ತ್ರವಾಗಿ

ಬೆಳೆದಿದ್ದ ಬೌದ್ಧ ಧರ್ಮದ ವಿವಿಧ ಆವೃತ್ತಿಗಳ ಮೂಲಕ ಮಾನಸಿಕ ಚಿಕಿತ್ಸಾ ರೂಪಗಳಲ್ಲಿ ಹಿಂದೂ ಧರ್ಮಕ್ಕೆ ದತ್ತವಾದವು. ಇವುಗಳಲ್ಲಿ ಕೆಲವು ಮೌಢ್ಯಾಚರಣೆಗಳಾಗಿದ್ದರೆ, ಅದಕ್ಕೆ ಆಯಾ ಬೌದ್ಧ ಆವೃತ್ತಿಗಳೇ ಹೊಣೆಯಾಗಿವೆ ಎಂಬುದನ್ನು ನಾವು ಮರೆಯಬಾರದು. ಹೀಗಾಗಿ ಬೌದ್ಧ ಧರ್ಮವನ್ನು ಭಾರತದಿಂದ ಓಡಿಸಲಾಯಿತು ಎಂಬುದು ಅರ್ಧ ಸತ್ಯ ಮಾತ್ರ. ಏಷ್ಯಾದ ವಿವಿಧ ದೇಶಗಳಲ್ಲಿ ಅದು ವಿವಿಧ ರೂಪಗಳಲ್ಲಿದ್ದಂತೆ ಅದು ಭಾರತದಲ್ಲೂ ಹಿಂದೂ ಧರ್ಮದ ಬಹುಮುಖಿ ಆಚರಣೆ-ನಂಬಿಕೆಗಳಲ್ಲಿ ತನ್ನ ಅಸ್ತಿತ್ವವನ್ನು ಕಾಪಾಡಿಕೊಂಡು ಬಂದಿದೆ. ಶಂಕರನಿಂದ ಹಿಡಿದು ನಮ್ಮ ಅಲ್ಲಮ-ಬಸವರೂ ಸೇರಿದಂತೆ ಪರಮಹಂಸ-ವಿವೇಕಾನಂದ-ಮಹಾತ್ಮ ಗಾಂಧಿ-ರಮಣರವರೆಗೆ, ಬುದ್ಧ ಭಾರತೀಯ ಜೀವನ ಮತ್ತು ದರ್ಶನಗಳಲ್ಲಿ ವಿವಿಧ ಪ್ರಮಾಣಗಳಲ್ಲಿ ಮತ್ತು ಹದದಲ್ಲಿ ಅಭಿವ್ಯಕ್ತಗೊಂಡಿದ್ದಾನೆ. ಬಹುಸಂಖ್ಯಾತ ಹಿಂದೂಗಳ ಮನೆಯಲ್ಲಿ ಬುದ್ಧನ ಚಿತ್ರವೋ, ಪ್ರತಿಮೆಯೋ ಇರುವುದರ ಅರ್ಥವಾದರೂ ಏನು?

ಇಂದು ಹಿಂದೂ ಕೋಮುವಾದಿಗಳೆನಿಸಿಕೊಂಡವರು, ತಮ್ಮ ಕೃತ್ಯಗಳ ಸಮರ್ಥನೆಯಾಗಿ ತಮ್ಮ ಧರ್ಮ ಇತರ ಧರ್ಮಗಳಿಗೆ ಹೋಲಿಸಿದರೆ, ಸಹನಶೀಲ, ಪ್ರಬುದ್ಧ, ಉದಾರಿ ಎಂದು ಹೇಳಿಕೊಳ್ಳುತ್ತಿದ್ದಾರೆ. ಆದರೆ, ಅದಕ್ಕೆ ಅದರೊಳಗೆ ಕ್ರಿಯಾಶೀಲವಾಗಿರುವ ಬೌದ್ಧ ಧಾರೆಯೇ ಕಾರಣವಾಗಿದೆ ಎಂಬುದನ್ನು ಅವರು ಅರಿಯದವರಾಗಿದ್ದಾರೆ. ಹಾಗೆ ನೋಡಿದರೆ, ಡಾ॥ ಅಂಬೇಡ್ಕರ್‌ರ ಮತಾಂತರಕ್ಕೆ ಚಾರಿತ್ರಿಕ ಮಹತ್ವವಿದ್ದಷ್ಟು, ಧಾರ್ಮಿಕ ಮಹತ್ವವಿರಲಾರದು. ಏಕೆಂದರೆ, ಅವರು ಮಾರ್ಕ್ಸ್‌ವಾದಿ ಮೀಮಾಂಸೆಯ ನೆಲೆಯಲ್ಲಿ ಬೌದ್ಧ ಧರ್ಮದ ಮೂಲ ಆಧಾರ ಕಲ್ಪನೆಯಾದ 'ದುಃಖ'ವನ್ನು ಆಸ್ತಿಗೆ ಸಮೀಕರಿಸುವ ಮೂಲಕ ಅದರ ಭೌತವಾದಿ ನಿರೂಪಣೆಯನ್ನಷ್ಟೇ ಮಂಡಿಸಿ, ಅದಕ್ಕೆ ತಮ್ಮನ್ನೊಪ್ಪಿಸಿಕೊಂಡವರು. ಆದರೆ, ಬೌದ್ಧ ಧರ್ಮದ ಬಹುತೇಕ ಜಿಜ್ಞಾಸುಗಳು ಅವರ ಈ ನಿರೂಪಣೆಯನ್ನು ಒಪ್ಪಿಲ್ಲವೆಂದು ಹೇಳಲಾಗುತ್ತಿದೆ. ಸ್ವತಃ ಅವರೇ ಹೇಳಿಕೊಂಡಂತೆ, 'ದ್ವೇಷ'ದ ಮೇಲೇ ("...ದ್ವೇಷ ಭಾವನೆಯಲ್ಲಿಯೇ ನನ್ನ ನಿಜವಾದ ಶಕ್ತಿ ಅಡಗಿದೆ... ಈ ದ್ವೇಷವೇ ನಾನು ಬಲವಾಗಿ ನಂಬಿರುವಂತಹ ತತ್ವಗಳು ಮತ್ತು ಧ್ಯೇಯಗಳ ಬಗ್ಗೆ ನಾನು ಹೊಂದಿರುವ ಪ್ರೀತಿಯ ಪ್ರತಿಬಿಂಬಗಳಾಗಿವೆ." : '*ರಾನಡೆ, ಗಾಂಧಿ ಮತ್ತು ಜಿನ್ನಾ*' ಪುಸ್ತಕದ ಪ್ರಸ್ತಾವನೆ) ತಮ್ಮ ರಾಜಕಾರಣವನ್ನು ಕಟ್ಟಿಕೊಳ್ಳಬೇಕಾದ ಅನಿವಾರ್ಯತೆಗೆ ಅಂಬೇಡ್ಕರ್ ಸಿಕ್ಕಿದ್ದರು. ಆದರೆ ತಮ್ಮ ಜೀವನದ ಕೊನೆಯ ದಿನಗಳಲ್ಲಿ ತಮ್ಮ ಮಾತನ್ನು ಉಳಿಸಿಕೊಳ್ಳಲು ಮಾತ್ರವೆಂಬಂತೆ, ಅವರು ಎಲ್ಲ 'ದುಃಖ'ದ ಅಂತಿಮ ಪರಿಹಾರವಾಗಿ 'ಕರುಣಾ'ವನ್ನು (ಅಂದರೆ, ಸಕಲ ಜೀವರಾಶಿಯೊಂದಿಗೆ ಸಹ-ಅನುಭೂತಿ) ಬೋಧಿಸಿದ ಧರ್ಮದ ಮೊರೆ ಹೋಗಬೇಕಾದುದು ಒಂದು ರೀತಿಯಲ್ಲಿ ಸಹಜ ಧಾರ್ಮಿಕ ನ್ಯಾಯವೇ ಆಗಿದೆ. ಆದರೆ ಆನಂತರ ಅವರ ಅನುಯಾಯಿಗಳು ಪ್ರತೀಕಾರ-ಪ್ರತಿಭಟನಾರ್ಥವಾಗಿ ಬೌದ್ಧ ಧರ್ಮ ಸೇರಿ ಏನಾಯಿತು? ನವ ಬೌದ್ಧರೆಂಬ ಹೊಸ 'ಜಾತಿ' ಸೃಷ್ಟಿಯಾಗಿ, ಮತ್ತೆ

ಜಾತಿ–ಅಸ್ಪೃಶ್ಯತೆಗಳ ಶಾಪ–ತಾಪಗಳನ್ನು ತಪ್ಪಿಸಿಕೊಳ್ಳಲು ಮೀಸಲಾತಿಗಾಗಿ ಹೊಡೆದಾಡುವ ಸಂದರ್ಭ ಉಂಟಾಯಿತು... ಬುದ್ಧ ಹೇಳಿದ ಮೊದಲ ಆರ್ಯ ಸತ್ಯವಾದ 'ಸಂಸಾರ ದುಃಖಮಯ' ಎಂಬುದು ಆಳವಾಗಿ ಮನವರಿಕೆಯಾಗದ ಹೊರತು, ಯಾರೂ ಬೌದ್ಧರೆನಿಸಿಕೊಳ್ಳಲಾರು ಮತ್ತು ಬುದ್ಧನ ಹಾದಿಯಲ್ಲಿ ಒಂದು ಹೆಜ್ಜೆಯನ್ನೂ ಮುಂದಿಡಲಾರರು. ಅಲ್ಲಿಯವರೆಗೆ ಅವರಿಗೆ ಹಿಂದೂ ಧರ್ಮವೇ ಸರಿಯಾದ ಜಾಗ; ಅಭ್ಯಾಸ ಕ್ಷೇತ್ರ!

ಪರಿಸ್ಥಿತಿ ಹೀಗಿರುವಾಗ, ಮೊನ್ನೆಯ ಮತಾಂತರದ ಸಂದರ್ಭದಲ್ಲಿ ಮಹಾದೇವ ಅವರು ಹೇಳಿದ 'ಇದರಿಂದ ದಲಿತರೇನೂ ಕಳೆದುಕೊಳ್ಳುವುದಿಲ್ಲ' ಎಂಬ ಮಾತು ಜಾತಿ ಪದ್ಧತಿ ಮತ್ತು ಅಸ್ಪೃಶ್ಯತೆಗಳ ಮೇಲಿನ ಸಿಟ್ಟಿನ ನೆಲೆಯಲ್ಲಿ ಮಾತ್ರ ಸತ್ಯವೆನಿಸುವ ಮಾತು. ಇಂತಹ ಮತಾಂತರದಿಂದ ಅಸ್ಪೃಶ್ಯರು ಆ ಸಿಟ್ಟಿನ ನೈತಿಕ ಹಕ್ಕನ್ನು ಕಳೆದುಕೊಳ್ಳುತ್ತಾರೆ ಮಾತ್ರವಲ್ಲ; ತಮ್ಮಂತೆ ಸಾಂಕೇತಿಕವಾಗಿ ಮತಾಂತರಗೊಳ್ಳಲಾಗದಿರುವ ಅಸಂಖ್ಯಾತ ಅಸ್ಪೃಶ್ಯ ಶ್ರೀಸಾಮಾನ್ಯರನ್ನು ತಬ್ಬಲಿಗಳನ್ನಾಗಿ ಮಾಡುತ್ತಾರೆ. ಎಲ್ಲಕ್ಕಿಂತ ಮುಖ್ಯವಾಗಿ, ಇವರು ತಮ್ಮ ಪ್ರತಿಭಟನೆ ಹಾಗೂ ಪರಿಷ್ಕಾರಗಳ ಮೂಲಕ ಹಿಂದೂ ಧರ್ಮದೊಳಗಿನ ಬೌದ್ಧ ಆವೃತ್ತಿಯನ್ನೇ ಸುಧಾರಿಸುತ್ತಾ, ಅದನ್ನು ಬಹು ಸಂಖ್ಯಾತರ 'ನಿಜ'ವೆನ್ನಿಸುವ ಬೌದ್ಧ ಧರ್ಮವನ್ನಾಗಿ ವಿಸ್ತರಿಸುವ ಐತಿಹಾಸಿಕ ಕರ್ತವ್ಯದಿಂದ ಕಳ್ಳ ತಪ್ಪಿಸಿಕೊಂಡು ಹೋಗಿ, ಭಾರತದಲ್ಲಿ ಸಾಂಕೇತಿಕವಾಗಿ ಮಾತ್ರ ಅಸ್ತಿತ್ವದಲ್ಲಿರುವ 'ಅಧಿಕೃತ' ಬೌದ್ಧ ಧರ್ಮದ ಹುದಲಲ್ಲಿ ಕಳೆದು ಹೋಗುತ್ತಾರೆ.

ಇಷ್ಟೆಲ್ಲ ಹೇಳಿದ ಮೇಲೆ ಕೆಲವರು ಆಡುವ ಒಂದು ಮಾತನ್ನು ಬಲವಾಗಿ ಅಲ್ಲಗೆಳೆಯಲೇ ಬೇಕಿದೆ. ಅದೆಂದರೆ, ಬೌದ್ಧ ಧರ್ಮವಿರುವ ದೇಶಗಳು ಸರ್ವಾಧಿಕಾರಿ ರಾಷ್ಟ್ರಗಳೋ ಅಥವಾ ಜಪಾನಿನಂತೆ ಉಪಗ್ರಹ ರಾಷ್ಟ್ರವೋ ಆಗಿವೆ ಎಂಬುದು. ಆದರೆ ಇದು ಎರಡೂವರೆ ಸಾವಿರ ವರ್ಷಗಳ ಇತಿಹಾಸವಿರುವ ಒಂದು ಧರ್ಮದ ಬಗ್ಗೆ ಅರ್ಧ ಶತಮಾನದ ಆಧುನಿಕ ರಾಜಕೀಯ ಇತಿಹಾಸವನ್ನಷ್ಟೇ ಗಮನದಲ್ಲಿಟ್ಟುಕೊಂಡು ಆಡಿರುವ ತುಂಬಾ ಸುಲಭದ ಹಾಗೂ ಬಿಡುಬೀಸಾದ ಮಾತಾಗಿದೆ ಎಂದೇ ಹೇಳಬೇಕಿದೆ. ಹಾಗೆ ನೋಡಿದರೆ, ಜಗತ್ತಿನ ಎಲ್ಲ ಧಾರ್ಮಿಕ ಸಮಾಜಗಳೂ ಎಲ್ಲ ತೆರೆನ ರಾಜಕೀಯ ಪ್ರಯೋಗಗಳಿಗೂ ಒಳಗಾಗುತ್ತಾ ಬಂದಿವೆ. ಭಾರತದಲ್ಲಿ ಸಾಮ್ರಾಜ್ಯ ಸ್ಥಾಪನೆಯ ಮೊದಲ ಪ್ರಯತ್ನ ನಡೆಯುತ್ತಿದ್ದ ಸಂದರ್ಭದಲ್ಲಿ ಧರ್ಮ ಪ್ರಚಾರ ಆರಂಭಿಸಿದ ಬುದ್ಧ, ಇಂತಹ ಪ್ರಯತ್ನಗಳ ವಿರುದ್ಧ ರಕ್ಷಣೆಯಾಗಿ ಗ್ರಾಮ ಗಣ ರಾಜ್ಯಗಳ ಮಹಾಪೋಷಕನಾಗಿದ್ದ ಎಂಬುದನ್ನು ನಾವು ಮರೆಯಬಾರದು. ಹಾಗೇ, ಪ್ರಪಂಚದ ಏಕೈಕ 'ಹಿಂದೂ ರಾಷ್ಟ್ರ'ವೆನಿಸಿದ್ದ ನೇಪಾಳ ನಿನ್ನೆ ಮೊನ್ನೆಯವರೆಗೂ 'ಅಣಕು ಪ್ರಜಾಪ್ರಭುತ್ವ'ವೆನಿಸಿಕೊಂಡು ರಾಜಶಾಹಿ ರಾಷ್ಟ್ರವಾಗಿಯೇ ಉಳಿದಿತ್ತು ಎಂಬುದನ್ನು ಕೂಡ.

(ಜುಲೈ ೧೩, ೨೦೦೭)

ಬುದ್ಧನ ನೆನಪಲ್ಲಿ ಕೆಲವು ಸತ್ಯಗಳನ್ನು ಧ್ಯಾನಿಸುತ್ತಾ....

ವೈರಾಗ್ಯ ಮತ್ತು ಭೋಗಗಳನ್ನು ಎರಡು ಅತಿಗಳೆಂದು ಬೋಧಿಸುವ ಪ್ರಜ್ಞೆಯನ್ನು ರೂಢಿಸುವುದೇ ಬುದ್ಧನ ಮಧ್ಯಮ ಮಾರ್ಗ. ಈ ಮಾರ್ಗ ಯಾರಿಗಾದರೂ ಒಂದು ಧರ್ಮ ಮಾರ್ಗವಾಗಿ ಅರ್ಥಪೂರ್ಣವೆನಿಸಿಕೊಳ್ಳುವುದು, ಈ ಧರ್ಮದ ಮೊದಲ ಸತ್ಯ–ಸಂಸಾರ ದುಃಖಮಯ ಎಂಬುದು–ಅವರಿಗೆ ಒಂದಲ್ಲ ಒಂದು ಸ್ತರದಲ್ಲಿ ಅನುಭವಕ್ಕೆ ಬಂದು, ಸತ್ಯವೆನಿಸಿದಾಗ ಮಾತ್ರ ಆದರೆ ಇಂತಹ ಅನುಭವದ ಅಥವಾ ಸತ್ಯದ ಹತ್ತಿರಕ್ಕೂ ಸುಳಿಯದ ನಾವು ಬುದ್ಧನ ಬಗ್ಗೆ ಆತನ ಈ ಧರ್ಮದ ಬಗ್ಗೆ ಭಾವಾವೇಶದಿಂದ ಮಾತನಾಡತೊಡಗುತ್ತೇವೆ. ಸುಖದ ಬೆನ್ನು ಹತ್ತಿ, ಜಗತ್ತಿನ ಸಕಲ ಜಂಜಾಟಗಳಲ್ಲಿ ಸಿಲುಕಿಕೊಂಡು ಬದುಕಿನ 'ದಾಹ'ವನ್ನು ವಿವಿಧ ನೆಲೆಗಳಲ್ಲಿ ಹೆಚ್ಚಿಸಿಕೊಳ್ಳುತ್ತಿರುವಾಗಲೂ, ಬುದ್ಧನೇ ನಮ್ಮ ಆದರ್ಶ ಎಂದು ಘೋಷಿಸಿಕೊಳ್ಳುತ್ತೇವೆ! ಅಷ್ಟೇ ಅಲ್ಲ, ಬೌದ್ಧ ಧರ್ಮದ ದೀಕ್ಷೆಯನ್ನೂ ಪಡೆದು ನಿರಾಳವಾಗುತ್ತೇವೆ!

ಕೆಲವು ವರ್ಷಗಳ ಹಿಂದೆ ನನ್ನ ವಿಚಾರವಾದಿ ಗೆಳೆಯರ ಗುಂಪೊಂದು ಬುದ್ಧ ಹೇಳಿದ್ದ ಪ್ರಾಥಮಿಕ ಸತ್ಯವೆಂದು ಅವರು ನಂಬಿದ್ದ 'ಆಸೆಯೇ ದುಃಖಕ್ಕೆ ಕಾರಣ' ಎಂಬ ಹೇಳಿಕೆ ಬಗ್ಗೆ ಚರ್ಚೆ ನಡೆಸಿದ್ದರು. ಅವರಲ್ಲೊಬ್ಬರು ಆಸೆ ಇಲ್ಲದೆ ಬದುಕಲು ಹೇಗೆ ಸಾಧ್ಯ ಎಂದು ಕೇಳಿದ ಪ್ರಶ್ನೆಯೇ ಈ ಚರ್ಚೆಗೆ ಕಾರಣವಾಗಿತ್ತು! ಇದಕ್ಕೆ ಗುಂಪಿನ ನಾಯಕ ಆಸೆ ಎಂಬ ಶಬ್ದವನ್ನು ಬುದ್ಧ ದುರಾಸೆ ಅನ್ನುವ ಅರ್ಥದಲ್ಲಿ ಬಳಸಿದ್ದಾನೆ ಎಂಬ ಸಮರ್ಥನೆಯನ್ನು ನೀಡಿದಾಗ ಮತ್ತೊಬ್ಬರು ಎದ್ದು ನಿಂತು, ಇದು ನಿಜವಾಗಿದ್ದರೆ ಬುದ್ಧನಿಗೆ ಭಾಷಾ ಬಡತನವಿತ್ತೆಂದು ಹೇಳಬೇಕಾಗುತ್ತದೆ ಎಂದರು. ಹಾಗಿಲ್ಲದಿದ್ದರೆ, ಬುದ್ಧ ಆಸೆ ಎಂಬ ಶಬ್ದದ ಬದಲಾಗಿ ದುರಾಸೆ ಎಂಬ ಶಬ್ದವನ್ನೇ ಬಳಸುತ್ತಿದ್ದ ಎಂಬುದು ಅವರ ವಾದ! ಈ ವಾದ–ವಿವಾದ ಬಿಸಿ ಬಿಸಿ ಚರ್ಚೆಗೆ ಕಾರಣವಾಗುತ್ತಿದ್ದಂತೆ, ಇದು ಬುದ್ಧನ ಶಾಂತಿ–ಸಮಾಧಾನಗಳ ವ್ಯಕ್ತಿತ್ವಕ್ಕೆ ಒಗ್ಗುವುದಿಲ್ಲವೆಂದು ನಾನು ಎದ್ದು ನಿಂತು ಎರಡು ವಿಷಯಗಳನ್ನು ಸ್ಪಷ್ಟಪಡಿಸ ಬೇಕಾಯಿತು. ಒಂದು: ಬುದ್ಧ ಕನ್ನಡ ಭಾಷೆಯಲ್ಲಿ ಬೋಧನೆ ಮಾಡಲಿಲ್ಲ. ಎರಡು: ನೀವು ಚರ್ಚಿಸುತ್ತಿರುವುದು

ನೀವು ತಿಳಿದಂತೆ ಬುದ್ಧ ಹೇಳಿದ ಪ್ರಾಥಮಿಕ ಸತ್ಯ ಅಲ್ಲ.

ನನ್ನ ಮೊದಲನೆಯ ಸ್ಪಷ್ಟನೆ ಕೆಲವರಲ್ಲಿ ಲಘುವಾಗಿ ನಗೆಯುಕ್ಕಿಸಿದರೆ, ಮತ್ತೆ ಕೆಲವರನ್ನು ಯೋಚನೆಗೆ ಹಚ್ಚಿತು. ಬುದ್ಧನ ಈ ಸತ್ಯ ಆತ ಮಾತನಾಡುತ್ತಿದ್ದ ಪಾಲಿ ಭಾಷೆಯಲ್ಲಿ ದಾಖಲಾಗಿದ್ದು, ಅದರಲ್ಲಿರುವ 'ತನ್ಹಾ' ಎಂಬ ಶಬ್ದ ಕನ್ನಡದಲ್ಲಿ 'ಆಸೆ' ಎಂದು ಅನುವಾದಿತವಾಗಿ ಈ ಎಲ್ಲ ಚರ್ಚೆ-ಗೊಂದಲಗಳಿಗೆ ಕಾರಣವಾಗಿದೆ ಎಂದು ವಿವರಿಸಿದೆ. ಈ ತನ್ಹಾ ಎಂಬುದು ಸಂಸ್ಕೃತದಲ್ಲಿ 'ತೃಷ್ಣಾ'ಗೆ ಸಮಾನಾರ್ಥಕವಾದ ಶಬ್ದ. ಕನ್ನಡದಲ್ಲಿ ಇದಕ್ಕೆ ಹತ್ತಿರದ ಸಮಾನಾರ್ಥಕ ಶಬ್ದವೆಂದರೆ ದಾಹ. ದಾಹ ಎಂಬುದಕ್ಕೆ ಆಸೆ ಎಂಬುದು ಒಂದು ಅರ್ಥ ಛಾಯೆಯಷ್ಟೆ. ವಾಸ್ತವವಾಗಿ, ಬುದ್ಧನ ಉಪದೇಶಗಳ ಒಟ್ಟು ಹಿನ್ನೆಲೆಯಲ್ಲಿ ದಾಹ ಎಂದರೆ, ಇರುವಿಕೆಯ, ಬದುಕುವ, 'ಜೀವಿ'ಸುವ ದಾಹ. ಅಂದರೆ ದೇಹಭಾವಕ್ಕಾಗಿ ಮತ್ತು ನಂತರ ಅದು ಅನುಭವಿಸುವ ಕೊರತೆಗಳನ್ನು ನೀಗಿಸಿಕೊಳ್ಳುವ ದಾಹ. ಇದನ್ನು ಇಂಗ್ಲಿಷ್‌ನಲ್ಲಿ craving ಎಂದು ಕರೆಯಬಹುದು. ಪಾರಮಾರ್ಥಿಕ ಭಾಷೆಯಲ್ಲಿ ಇದನ್ನು ಭವರೋಗ ಎಂದು ಕರೆಯುವರು. ಈ ಭವರೋಗದ ಮೂಲ ನೆಲೆ, ಮಮಕಾರ-attachment. ಇದೇ ದುಃಖಕ್ಕೆ ಕಾರಣ ಎನ್ನುತ್ತಾನೆ ಬುದ್ಧ. ಆದರೆ ಇದು ಬುದ್ಧನ ಪ್ರಾಥಮಿಕ ಸತ್ಯವಲ್ಲ. ಇದು ಆತ ಹೇಳಿದ ನಾಲ್ಕು ಮುಖ್ಯ(ಆರ್ಯ) ಸತ್ಯಗಳಲ್ಲಿ ಎರಡನೆಯದು. ಮೊದಲ ಸತ್ಯ 'ಸಂಸಾರ ದುಃಖಮಯ' ಎಂಬುದು. ಇದನ್ನು ಅರಿಯದೆ ಎರಡನೇ ಸತ್ಯವನ್ನು ಅರ್ಥ ಮಾಡಿಕೊಳ್ಳಲೆಳಿಸಿದ್ದರಿಂದಲೇ ಈ ಎಲ್ಲ ಗೊಂದಲ. ಆದುದರಿಂದ ಬುದ್ಧನನ್ನು ಸಮಗ್ರವಾಗಿ ಅರ್ಥ ಮಾಡಿಕೊಳ್ಳಲು (ಹಾಗೆ ಮಾತ್ರ ಅರ್ಥಮಾಡಿಕೊಳ್ಳಲು ಸಾಧ್ಯ.) ನಾವು ಆತ ಹೇಳಿದ ಮೊದಲ ಸತ್ಯದಿಂದಲೇ ಆರಂಭಿಸಬೇಕು.

ಈ ಮೊದಲನೇ ಸತ್ಯದಲ್ಲಿನ 'ಸಂಸಾರ' ಎಂದರೆ, ಕುಟುಂಬ ಅಥವಾ ಜಗತ್ತು ಎಂದರ್ಥವಲ್ಲ. ಅದು ಭವಚಕ್ರ-ಹುಟ್ಟು ಸಾವುಗಳ ಸುಳಿ. ಇದರಲ್ಲಿ ಸಿಕ್ಕಿ ಹಾಕಿಕೊಂಡಿರುವುದರಿಂದಲೇ ಇಡೀ ಜೀವ ಜಗತ್ತು ದುಃಖದಲ್ಲಿ ತೊಳಲಾಡುತ್ತಿದೆ ಎಂದ ಬುದ್ಧ. ಇದು ಕೆಲವರಿಗೆ ವಿಚಿತ್ರ ಅನ್ನಿಸಬಹುದು. ಬುದ್ಧನ ಪ್ರಕಾರ ಹಾಗಾದರೆ, ಬದುಕಿನಲ್ಲಿ ಸುಖವೆಂಬುದೇ ಇಲ್ಲವೆ? ಹಾಗೆ ನೋಡಿದರೆ, ಬುದ್ಧನ ಪರಿಭಾಷೆಯಲ್ಲಿ ಸುಖವೆಂಬ ಶಬ್ದವೇ ಇಲ್ಲ! ಇಲ್ಲದ ಅದರ ಹುಡುಕಾಟದಲ್ಲೇ ಮನುಷ್ಯ ದುಃಖಿತನಾಗಿರುವುದು ಎನ್ನುತ್ತಾನೆ ಆತ. ಇಲ್ಲಿ ಇಲ್ಲ ಎಂದರೆ, ಶಾಶ್ವತವಲ್ಲ, ನಿತ್ಯವಲ್ಲ -ಎಲ್ಲ ಕ್ಷಣ ಭಂಗುರ - ಎಂದರ್ಥವಷ್ಟೆ. ಹಾಗಾಗಿ ಅದು-ಸುಖವೆನಿಸುವುದು- ನಿಜವಲ್ಲ ಎಂದೂ ಅರ್ಥ. ಮನುಷ್ಯ ಈ ನಿಜವಲ್ಲದ್ದನ್ನು ಅರಸುತ್ತಾ, ಅದನ್ನು ತನ್ನ ಸಾವಿನಲ್ಲಿ ಕಳೆದುಕೊಳ್ಳುವ (ಅಶಾಶ್ವತತೆಯ)ಆತಂಕದಲ್ಲೇ ಜೀವನ ದೂಡುತ್ತಾ ಆತ್ಯಂತಿಕವಾಗಿ ದುಃಖಿಯೇ ಆಗಿರುತ್ತಾನೆ. ಈ ದುಃಖವನ್ನು, ಹುಟ್ಟು ಸಾವುಗಳನ್ನು ಮೀರುವ ಮೂಲಕ ನಿವಾರಿಸಿಕೊಳ್ಳಬಹುದು ಎಂಬುದು ಬುದ್ಧನ ಮೂರನೆಯ ಸತ್ಯ. ಈ ಮೀರುವಿಕೆಯನ್ನೇ ನಿರ್ವಾಣವೆನ್ನುವುದು. ಆ ಸ್ಥಿತಿಯನ್ನೇ ಶೂನ್ಯತಾ ಎನ್ನುವುದು.

ಇದನ್ನು ಸಾಧಿಸಲು ಆತ ಹೇಳುವ ಅಷ್ಟಾಂಗ ಮಾರ್ಗವೇ ನಾಲ್ಕನೇ ಸತ್ಯ. ಜಗತ್ತೆಂಬುದು ಇದೆ ಮತ್ತು ಇಲ್ಲ ಎಂಬೆರಡು ಸ್ಥಿತಿಗಳಾಚೆಯ ಅನುಭವವೆಂಬ ಅರಿವನ್ನು ತಂದುಕೊಡುವ ಈ ಅಷ್ಟಾಂಗ ಮಾರ್ಗ, ಎಂಟು ಕುಶಲತೆಗಳನ್ನು ಒಳಗೊಂಡಿದೆ. ಸ್ಥೂಲವಾಗಿ ಹೇಳುವುದಾದರೆ ಅವು: ಸದಾಚಾರ, ಸದಾಶಯ, ಸನ್ನುಡಿ, ಸನ್ನಡತೆ, ಸಜ್ಜೀವನ, ಸತ್ಪ್ರಯತ್ನ, ಸದ್ಭಾವನೆ ಮತ್ತು ಸದ್ಧ್ಯಾನ.

ವೈರಾಗ್ಯ ಮತ್ತು ಭೋಗಗಳನ್ನು ಎರಡು ಅತಿಗಳೆಂದು ಬೋಧಿಸುವ ಪ್ರಜ್ಞೆಯನ್ನು ರೂಢಿಸುವುದೇ ಬುದ್ಧನ ಮಧ್ಯಮ ಮಾರ್ಗ. ಈ ಮಾರ್ಗ ಯಾರಿಗಾದರೂ ಒಂದು ಧರ್ಮ ಮಾರ್ಗವಾಗಿ ಅರ್ಥಪೂರ್ಣವೆನಿಸಿಕೊಳ್ಳುವುದು, ಈ ಧರ್ಮದ ಮೊದಲ ಸತ್ಯ–ಸಂಸಾರ ದುಃಖಮಯ ಎಂಬುದು–ಅವರಿಗೆ ಒಂದಲ್ಲ ಒಂದು ಸ್ತರದಲ್ಲಿ ಅನುಭವಕ್ಕೆ ಬಂದು, ಸತ್ಯವೆನಿಸಿದಾಗ ಮಾತ್ರ. ಆದರೆ ಇಂತಹ ಅನುಭವದ ಅಥವಾ ಸತ್ಯದ ಹತ್ತಿರಕ್ಕೂ ಸುಳಿಯದ ನಾವು ಬುದ್ಧನ ಬಗ್ಗೆ ಆತನ ಈ ಧರ್ಮದ ಬಗ್ಗೆ ಭಾವಾವೇಶದಿಂದ ಮಾತನಾಡತೊಡಗುತ್ತೇವೆ. ಸುಖದ ಬೆನ್ನು ಹತ್ತಿ, ಜಗತ್ತಿನ ಸಕಲ ಜಂಜಾಟಗಳಲ್ಲಿ ಸಿಲುಕಿಕೊಂಡು ಬದುಕಿನ 'ದಾಹ'ವನ್ನು ವಿವಿಧ ನೆಲೆಗಳಲ್ಲಿ ಹೆಚ್ಚಿಸಿಕೊಳ್ಳುತ್ತಿರುವಾಗಲೂ, ಬುದ್ಧನೇ ನಮ್ಮ ಆದರ್ಶ ಎಂದು ಘೋಷಿಸಿಕೊಳ್ಳುತ್ತೇವೆ! ಅಷ್ಟೇ ಅಲ್ಲ, ಬೌದ್ಧ ಧರ್ಮದ ದೀಕ್ಷೆಯನ್ನೂ ಪಡೆದು ನಿರಾಳವಾಗುತ್ತೇವೆ! ಇಂತಹ ಆತ್ಮದ್ರೋಹದ ಆವೇಶದಲ್ಲಿ ನಮ್ಮಲ್ಲಿ ಕೆಲವರು ಬುದ್ಧನನ್ನು ಭಾರತೀಯ ಧರ್ಮ ಪರಂಪರೆಯ ಪ್ರತಿನಾಯಕನಂತೆ ಪ್ರಸ್ತುತ ಪಡಿಸುತ್ತಾ, ಆತನ ಮತ್ತು ಆತನ ಧರ್ಮದ ಸ್ವಾಯತ್ತತೆಯನ್ನೇ ಅಲ್ಲಗೆಳೆಯುವ ಮೂರ್ಖತನಕ್ಕೂ ಕೈ ಹಾಕುತ್ತಿದ್ದೇವೆ. ವಿಶೇಷವಾಗಿ ವೈದಿಕ ಧರ್ಮದ ಅನ್ಯಾಯಗಳ ವಿರುದ್ಧ ಬಂಡೆದ್ದ ಧಾರ್ಮಿಕ ನಾಯಕನೆಂಬಂತೆ ಆತನ ಚಿತ್ರ ಕಟ್ಟುತ್ತಾ, ದೊಡ್ಡ ರಾಜಕೀಯ ಗೊಂದಲವನ್ನೇ ಸೃಷ್ಟಿಸುತ್ತಿದ್ದೇವೆ. ಆ ಮೂಲಕ ನಮ್ಮ ವರ್ತಮಾನವನ್ನು ಪುನಾರಚಿಸಿಕೊಳ್ಳಲು ಅಗತ್ಯವಾದ ಚರಿತ್ರೆಯ ಮರು ಓದಿಗೆ ನಾವೇ ಅಪಚಾರವೆಸಗಿ ಕೊಳ್ಳುತ್ತಿದ್ದೇವೆ. ಇದು ಇಂದು ಆರಂಭವಾದ ಗೊಂದಲ ಅಥವಾ ಅಪಚಾರದ ಪ್ರಯತ್ನವೇನೂ ಅಲ್ಲ. ಬೌದ್ಧ ಧರ್ಮದಲ್ಲಿ ಪುರೋಹಿತಶಾಹಿ ಸೃಷ್ಟಿಯಾದ ಕಾಲದಿಂದಲೂ ನಡೆಯುತ್ತಿರುವ ಧರ್ಮಕಾರಣವಿದು.

ಇಂದಿನ ಪುರೋಹಿತಶಾಹಿಯನ್ನು ಹಿಂದೂ ಎಂದು ಗುರುತಿಸುತ್ತಾ, ಅದರ ವಿರುದ್ಧದ ಹೋರಾಟದ ಆವೇಶದಲ್ಲಿ ನಾವು ಚರಿತ್ರೆಯ ನಿರಂತರತೆಯನ್ನೇ ಮರೆತು, ಇದಕ್ಕೆ ಕಾರಣವಾದ ಹಿಂದಿನ ಬೌದ್ಧ ಎಂದು ಕರೆಯಬಹುದಾದ ಪುರೋಹಿತಶಾಹಿಯ ಅನಾಚಾರಗಳನ್ನು ಮಾನ್ಯ ಮಾಡುತ್ತಿರುವಂತೆ ತೋರುತ್ತಿದೆ. ಭಾರತದ ಧಾರ್ಮಿಕ ಚರಿತ್ರೆ ಕುರಿತು ಅಂಬೇಡ್ಕರ್ ಕಟ್ಟಿರುವ ಸಂಕಥನಗಳಲ್ಲಿ ಈ ದೋಷವನ್ನು ಢಾಳಾಗಿ ಕಾಣಬಹುದು. ಕೆಲವು ದಿನಗಳ ಹಿಂದೆ, ಗೆಳೆಯ ಎನ್.ಎಸ್.ಶಂಕರ್ ಅನುವಾದಿಸಿರುವ 'ಬ್ರಾಹ್ಮಣ ದಿಗ್ವಿಜಯ' ಎಂಬ ಅಂಬೇಡ್ಕರರ ಕಿರುಪುಸ್ತಕವೊಂದನ್ನು ಬಿಡುಗಡೆ ಮಾಡುತ್ತಾ ನಾನು ಪರೋಕ್ಷವಾಗಿ ಹೇಳಿದ್ದು ಇದನ್ನೇ: ವರ್ತಮಾನದ ಧರ್ಮಕಾರಣದ ಸಂಕಥನದಲ್ಲಿ

ನಾವು ಸೃಷ್ಟಿಸಿಕೊಂಡಿರುವ ಈ 'ಬ್ರಾಹ್ಮಣ' ಎಂಬ ಶತ್ರು ಚಾರಿತ್ರಿಕವಾಗಿ ಎಷ್ಟು ನಿಜವಾದವನು? ನಿಜವಾಗಿ ಯಾರೀತ? ನಾವು ಈ ಬ್ರಾಹ್ಮಣರ ಮೂಲ ವಂಶಸ್ಥರೆಂದು ನಂಬಿರುವ ಆರ್ಯರಿಗೂ ಮುಂಚೆ ಬ್ರಾಹ್ಮಣರೆಂಬುವರು ಇಲ್ಲಿದ್ದರು ಮತ್ತು ಅವರ ವಿರುದ್ಧವೇ ಈ ಆರ್ಯರ 'ಇಂದ್ರ'ರು ಯುದ್ಧ ಮಾಡಿದ್ದು ಎಂಬ ಚಾರಿತ್ರಿಕ ಸಂಶೋಧನೆಗಳು-ಅವೈದಿಕ ಧಾರೆಯ ಧರ್ಮಾನಂದ ಕೊಸಾಂಬಿಯವರಂತಹ ಚರಿತ್ರಕಾರರ ಮೂಲಕವೇ-ಅಸ್ಪಷ್ಟವಾಗಿಯಾದರೂ ಬೆಳಕಿಗೆ ಬಂದಿವೆಯಲ್ಲ? ಹಾಗಾದರೆ ಭಾರತದಲ್ಲಿ ಬೌದ್ಧ ಧರ್ಮದ ನಾಶಕ್ಕೆ ಕಾರಣನಾದನೆಂದು ಅಂಬೇಡ್ಕರ್ ಹೇಳುವ ಪುಷ್ಯಮಿತ್ರ ಯಾವ, ಎಂತಹ ಬ್ರಾಹ್ಮಣ? ಕ್ರಿಪೂ. ಎರಡನೇ ಶತಮಾನದ ಈ ಬ್ರಾಹ್ಮಣ ರಾಜ ಮನುಧರ್ಮ ಶಾಸ್ತ್ರವನ್ನು ಬರೆಸಿ, ಅದರ ಜಾರಿಯ ಮೂಲಕ; ಆ ಮುನ್ನ ಒಂದೂವರೆ ಶತಮಾನಗಳ ಕಾಲ ಮೌರ್ಯ ಸಾಮ್ರಾಜ್ಯದ ರಾಜ ಧರ್ಮವಾಗಿದ್ದ ಬೌದ್ಧ ಧರ್ಮವನ್ನು ನಾಶ ಮಾಡಿ, ಅದರ ಜಾಗದಲ್ಲಿ ಬ್ರಾಹ್ಮಣ ಧರ್ಮವನ್ನು ಸ್ಥಾಪಿಸಿದನೆಂದು ಅಂಬೇಡ್ಕರ್ ಹೇಳುತ್ತಾರೆ.

ಆದರೆ ಹಾಗೆ ಹೇಳುವಾಗ ಅವರು ಎರಡು ಮುಖ್ಯ ಅಂಶಗಳನ್ನು ಗಮನಿಸಿದಂತೆ ಕಾಣುವುದಿಲ್ಲ. ಒಂದು: ಬೌದ್ಧ ಧರ್ಮವನ್ನು ರಾಜಧರ್ಮವೆಂದು ಘೋಷಿಸಿದನೆಂದು ಹೇಳಲಾಗುವ ಅಶೋಕನ ಶಾಸನಗಳಲ್ಲೆಲ್ಲೂ ನಿರ್ದಿಷ್ಟವಾಗಿ ಬೌದ್ಧ ಧರ್ಮದವೆಂದೇ ಹೇಳಬಹುದಾದ ಉಪದೇಶಗಳಿಲ್ಲವೇಕೆ? ಬದಲಿಗೆ ಅವು ಪ್ರಚಲಿತ ಎಲ್ಲ ಪಾಶಂಡ(ನಂಬಿಕೆ-ಸಂಪ್ರದಾಯ)ಗಳನ್ನೂ ಸಮಾನ ಗೌರವದಿಂದ ಕಾಣಬೇಕೆಂದು ಹೇಳುತ್ತ, ಸಾರ್ವತ್ರಿಕ ಸದಾಚಾರಗಳನ್ನಷ್ಟೆ ಪ್ರಚಾರ ಮಾಡುತ್ತವಲ್ಲ? ಸ್ವತಃ ಅಶೋಕನೇ ಬೌದ್ಧ ಧರ್ಮ ಪ್ರತಿಪಾದಿಸುವ ಅಜ್ಞೇಯತಾವಾದಕ್ಕೆ(ಇದನ್ನು ನಾಸ್ತಿಕವಾದ ಎಂದು ತಪ್ಪಾಗಿ ಕರೆಯುವುದೂ ಹಳೆಯ 'ಬೌದ್ಧ ಪುರೋಹಿತಶಾಹಿ'ಯ ರಾಜಕಾರಣವೇ.) ವಿರುದ್ಧವಾಗಿ ತನ್ನನ್ನು ತಾನು 'ದೇವನಾಂಪ್ರಿಯ'(ದೇವರಿಗೆ ಪ್ರಿಯನಾದವನು)ನೆಂದೇಕೆ ಕರೆದುಕೊಂಡಿದ್ದಾನೆ? ಎರಡು: ಅಂಬೇಡ್ಕರ್ ಹೇಳುವ ಬೌದ್ಧ ಧರ್ಮದ ನಾಶ ಮತ್ತು ಬ್ರಾಹ್ಮಣ ಧರ್ಮದ ಪುನರ್‌ಸ್ಥಾಪನೆಯ ನಂತರವೂ, ಬೌದ್ಧ ಧರ್ಮ ಕಿ.ಶ. ಎರಡನೇ ಶತಮಾನದ ಶಾತವಾಹನರ ಕಾಲದಲ್ಲೂ ರಾಜಾಶ್ರಯ ಪಡೆದು ವೈಭವದ ಬಾಳು ಬಾಳಿದ ಸ್ಪಷ್ಟ ಚರಿತ್ರೆಯೇ ಇದೆಯಲ್ಲ? ಕ್ರಿ.ಶ. ಒಂದನೇ ಶತಮಾನದ ಚಕ್ರವರ್ತಿ ಕಾನಿಷ್ಕ, ಸ್ವತಃ ತಾನೇ ಮೇಲ್ವಿಚಾರಣೆ ವಹಿಸಿಕೊಂಡು ಬೌದ್ಧ ಮಹಾಸಮ್ಮೇಳನವನ್ನು ನಡೆಸಿದ್ದರ ವಿವರಗಳನ್ನು ಹ್ಯೂನೆತ್ಸಾಂಗ್ ವರ್ಣಿಸಿದ್ದಾನಲ್ಲ?

ಹಾಗೆ ನೋಡಿದರೆ, ಕ್ರಿ.ಶ. ಏಳನೇ ಶತಮಾನದ ಅಂತ್ಯದವರೆಗೂ-ಇಂದು ವೈದಿಕ ಮಹಾಗುರು ಎಂದೇ ಮಾನ್ಯ ಮಾಡಲ್ಪಟ್ಟಿರುವ ಶಂಕರಾಚಾರ್ಯರ ಧೃತಿಗೆಡಿಸುವಷ್ಟರ ಮಟ್ಟಿಗೆ-ಅದು ಬಾಳಿದ ಚರಿತ್ರೆ ಇದೆಯಲ್ಲ? ಇವರ ಗುರುಗಳ ಗುರುಗಳಾದ ಗೌಡಪಾದರ ಧರ್ಮ ಮೀಮಾಂಸೆಯೆಲ್ಲ ಬುದ್ಧನ ಶೂನ್ಯವಾದವನ್ನೇ (ನಾನೂ, ನೀನೂ, ಅವನೂ, ಯಾರೂ ಇಲ್ಲ! ಅದು, ಇದು ಯಾವುದೂ ಇಲ್ಲ! ಹಿಂದೆ, ಇಂದು, ಮುಂದೆ

ಎಂಬುದೂ ಇಲ್ಲ!) ಅವಲಂಬಿಸಿ ಬೆಳೆದಿತ್ತಲ್ಲ? ಅಷ್ಟೇ ಅಲ್ಲ, ತಮ್ಮನ್ನು ಶುದ್ಧ ವೈದಿಕರು ಎಂದು ಕರೆದುಕೊಳ್ಳುವ ಆಚಾರ್ಯರೆಲ್ಲ ಶಂಕರರನ್ನು ಪ್ರಚ್ಛನ್ನ(ವೇಷ ಮರೆಸಿಕೊಂಡ) ಬುದ್ಧ ಎಂದು ಕರೆವರಲ್ಲ? ಹೋಗಲಿ, ಹತ್ತೊಂಭತ್ತನೇ ಶತಮಾನದ–ಹಿಂದೂ ಧರ್ಮದ ಪುನರುದ್ಧಾರಕರೆಂದೇ ಪ್ರಸಿದ್ಧರಾದ–ರಾಮಕೃಷ್ಣ ಪರಮಹಂಸರ ಮತ್ತು ನಮ್ಮದೇ ಇಪ್ಪತ್ತನೇ ಶತಮಾನದ ರಮಣ ಮಹರ್ಷಿಗಳ ಉಪದೇಶಗಳನ್ನು ಓದುತ್ತಿದ್ದಂತೆ, ಅವುಗಳ ಹಿನ್ನೆಲೆಯಲ್ಲಿ ಬುದ್ಧನೇ ಕಾಣತೊಡಗುತ್ತಾನಲ್ಲ? ಪರಮಹಂಸರು ವಿವೇಕಾನಂದರ ಬಾಯಲ್ಲಿ ಅವರ ಬುದ್ಧ ಗಯಾ ಯಾತ್ರೆಯ ವರ್ಣನೆ ಕೇಳಿ 'ಸಮಾಧಿ'ಗೆ ಹೋದರೆ, ಆತ್ಮವಾದಿಯಾದ ರಮಣರು ಬುದ್ಧನ 'ಅನಾತ್ಮವಾದ'ವೇ ತಮ್ಮ 'ನಾನು ಯಾರು?' ಎಂಬ ಪ್ರಶ್ನೆಯ ಮೀಮಾಂಸೆಯ ಹಿಂದೆಯೂ ಇರುವುದು ಎಂದು ಸೂಚಿಸುತ್ತಾರಲ್ಲ?

ಇದನ್ನೆಲ್ಲ ಗಮನಿಸಿದಾಗ ಬೌದ್ಧ ಧರ್ಮವನ್ನು ಯಾರೋ ನಾಶ ಮಾಡಿದರು ಅಥವಾ ಅದನ್ನು ಭಾರತದಿಂದ ಹೊರಕ್ಕೆ ಓಡಿಸಲಾಯಿತು ಎಂಬ ಮಾತುಗಳೇ ಅಸಂಗತವಾಗಿ ಕಾಣುತ್ತವೆ. ಏಕೆಂದರೆ ಬೌದ್ಧ ಧರ್ಮ ತನ್ನ ಉಚ್ಛ್ರಾಯ ಕಾಲದಲ್ಲೇ ಇತರೆ ದೇಶಗಳಿಗೆ ಹರಡಿತ್ತು. ಹಾಗೇ, ಬ್ರಾಹ್ಮಣ ಅಥವಾ ವೈದಿಕ ಧರ್ಮದ ಕಾರಣದಿಂದಲೇ ಅದು ಭಾರತದಲ್ಲಿ ನಾಶವಾಯಿತೆನ್ನುವವರು, ಮಧ್ಯ ಏಷ್ಯಾದುದ್ದಕ್ಕೂ ಬೇರೂರಿದ್ದ ಬೌದ್ಧ ಧರ್ಮ ಏಕೆ ಅಲ್ಲಿ ಕಾಣೆಯಾಯಿತು ಎಂಬುದಕ್ಕೂ ಉತ್ತರ ಹೇಳಬೇಕಾಗುತ್ತದೆ. ನಮ್ಮ ವರ್ತಮಾನದ ರಾಜಕಾರಣದ ಬೇಳೆ ಬೇಯಿಸಿಕೊಳ್ಳುವ ಆತುರದಲ್ಲಿ ನಾವು ಇತಿಹಾಸವನ್ನು ನಮ್ಮ ಅಗತ್ಯಗಳಿಗೆ ತಕ್ಕಂತೆ ಸರಳೀಕರಿಸಿಕೊಳ್ಳುವ, ನಮ್ಮದೇ ಇಕ್ಕಟ್ಟುಗಳಲ್ಲಿ ಸಂಕುಚಿತಗೊಳಿಸಿಕೊಳ್ಳುವ ತಪ್ಪು ಮಾಡುತ್ತಿದ್ದೇವೆ. ಇತಿಹಾಸದಲ್ಲಿ ಹಾಲು ಕುಡಿದ ಮಕ್ಕಳೇ ಬದುಕಿಲ್ಲ. ಇನ್ನು ವಿಷ ಕುಡಿಯುವ ಮಕ್ಕಳು ಬದುಕಿಯಾವೇ? ನಾವು ಕೇಳಿಕೊಳ್ಳಬೇಕಾದ ಮುಖ್ಯ ಪ್ರಶ್ನೆ ಇದು. ಪ್ರಾಚೀನ ಭಾರತದ–ಬುದ್ಧಪೂರ್ವ ಭಾರತದ–ಇತಿಹಾಸ ಅನೇಕ ಗೊಂದಲಗಳ ಗೂಡಾಗಿದೆ. ರೂಪಕ ಭಾಷೆಯಲ್ಲಿ ಪುರಾಣವಾಗಿ ಮಾತ್ರ ದಾಖಲಾಗಿರುವ ಭಾರತದ ಇತಿಹಾಸವನ್ನು, ಆಧುನಿಕರಾದ ನಾವೀಗ 'ವಾಸ್ತವವಾದಿ ದಾಖಲೆ'ಗಳನ್ನು ಆಧರಿಸಿದ ಪಾಶ್ಚಿಮಾತ್ಯ ಇತಿಹಾಸ ದೃಷ್ಟಿಯನ್ನು ಆವಾಹಿಸಿಕೊಂಡು ನೋಡುತ್ತಾ, ಅನೇಕ ತಪ್ಪು ತೀರ್ಮಾನಗಳಿಗೆ ಬರುತ್ತಿದ್ದೇವೆ.

ಇದರಿಂದಾಗಿರುವ ದೊಡ್ಡ ತಪ್ಪೆಂದರೆ, ಭಾರತದ ಧಾರ್ಮಿಕ ಇತಿಹಾಸವನ್ನು ಅಚ್ಚುಕಟ್ಟಾಗಿ–ಗೆರೆ ಹೊಡೆದಂತೆ–ವೈದಿಕ ಮತ್ತು ಬೌದ್ಧ ಧರ್ಮಗಳ ಮುಖಾಮುಖಿ ಮಾತ್ರವೆಂಬಂತೆ ನೋಡುವ ಸರಳೀಕರಣ. ಬ್ರಾಹ್ಮಣ ಮತ್ತು ಶ್ರಮಣ ಪರಂಪರೆಗಳಿಗೆ ದೀರ್ಘ ಮತ್ತು ಸಂಕೀರ್ಣ ಇತಿಹಾಸವಿದ್ದು, ಇವುಗಳ ಮಧ್ಯೆ ಅನೇಕ ಸಂಕರಗಳು ನಡೆದು ಚರಿತ್ರೆಯ ಮೇಲೆ ಪ್ರಭಾವ ಬೀರಿದ ಅನೇಕಾನೇಕ ಧಾರ್ಮಿಕ–ಅತ್ತ ಆಸ್ತಿಕವೂ ಅಲ್ಲದ, ಇತ್ತ ನಾಸ್ತಿಕವೂ ಅಲ್ಲದ; ಈ ವಿಭಾಗೀಕರಣವೇ ಅಸಂಗತವೆನ್ನಿಸುವಂತಹ–ಸಂಪ್ರದಾಯಗಳು ಇಲ್ಲಿ ಬಾಳಿ ಹೋಗಿವೆ. ಅವುಗಳಲ್ಲಿ ಹಲವು ಇನ್ನೂ ನಮ್ಮ ಕಾಲದಲ್ಲೂ ವಿವಿಧ ರೂಪಗಳಲ್ಲಿ ಕ್ರಿಯಾಶೀಲವಾಗಿವೆ. ಇವೆಲ್ಲ ಸೇರಿ ಇಂದು ಜನಪ್ರಿಯ ಭಾಷೆಯಲ್ಲಿ

ಹಿಂದೂ ಧರ್ಮವೆನಿಸಿಕೊಂಡಿದೆ. ಹೀಗಿರುವಾಗ ನಾವು ಶ್ರಮಣ ಪರಂಪರೆಯ ಅತ್ಯುತ್ಕೃಷ್ಟ ಉತ್ಪನ್ನವಾದ ಬುದ್ಧನನ್ನು ಬ್ರಾಹ್ಮಣ–ಇಂದಿನ ಹಿಂದೂ–ಧರ್ಮದ ವಿರುದ್ಧ, ಅದರ ಜಾತಿ ಪದ್ಧತಿ ವಿರುದ್ಧ ಬಂಡಾಯ ಹೂಡಿದ ಹೋರಾಟಗಾರನೆಂದೂ, ನಾಸ್ತಿಕನೆಂದೂ, ಭೌತವಾದಿ ವೈಚಾರಿಕನೆಂದೂ ಪ್ರಸ್ತುತ ಪಡಿಸುತ್ತಾ–ನಮ್ಮ ಇಂದಿನ ಸಂಕಟಗಳಿಗೆ ಅವನ ಈ ಚಿತ್ರದಲ್ಲಿ ಉತ್ತರಗಳನ್ನು ಹುಡುಕುವ ಪ್ರಯತ್ನದಲ್ಲಿ–ಅವನ ವ್ಯಕ್ತಿತ್ವ ಹಾಗೂ ಬೋಧನೆಗಳನ್ನು ವಿರೂಪಗೊಳಿಸುತ್ತಿದ್ದೇವೆ.

ಬುದ್ಧ ಎಂದೂ ಯಾವುದರ ಬಗ್ಗೆಯೂ ಋಣಾತ್ಮಕವಾಗಿ ಮಾತಾಡಿದ ದಾಖಲೆಗಳಿಲ್ಲ. ಕೊನೆಗೆ ದೇವರ ಬಗೆಗಿನ ಪ್ರಶ್ನೆಗೂ ಅವನ ಉತ್ತರ ಅರ್ಥಪೂರ್ಣ ಮೌನವಾಗಿತ್ತೇ ಹೊರತು, ನಿರಾಕರಣೆಯದಾಗಿರಲಿಲ್ಲ. ಅನೇಕ 'ಸುತ್ತ'ಗಳಲ್ಲಿ ಅವನು ಶ್ರಮಣರೊಂದಿಗೆ, ಬ್ರಾಹ್ಮಣರನ್ನೂ ಗೌರವಿಸಿರಿ ಎಂದು ಹೇಳುತ್ತಾನೆ. ಆದರೆ ಬಹುಶಃ ವರ್ಣಧರ್ಮ ಜಾತಿ ಪದ್ಧತಿಯಾಗಿ ಮಾರ್ಪಾಡುಗೊಳ್ಳುತ್ತಿದ್ದ ಆ ಸಂದರ್ಭದಲ್ಲಿ, ಬ್ರಾಹಣನನ್ನು ಹುಟ್ಟಿನಿಂದ ಗುರುತಿಸುವ ಪ್ರವೃತ್ತಿ ಹೇಗೆ ಅಸಂಗತವೆಂದೂ ಆತ ವಿವರಿಸುತ್ತಿದ್ದ. ಬುದ್ಧನ ಪ್ರಕಾರ ಬ್ರಾಹ್ಮಣನೆನಿಸಿಕೊಳ್ಳಲು ಒಂದು ಕಡ್ಡಾಯ ಅರ್ಹತೆ ಎಂದರೆ, ಆತನಿಗೆ ಶ್ರಮಣರಂತೆ ತನ್ನದೆನ್ನುವ ಆಸ್ತಿಯಿರಕೂಡದು. 'ಬ್ರಾಹ್ಮಣ ಧಮ್ಮಿಕ ಸುತ್ತ'ದಲ್ಲಿ ಬುದ್ಧ, ಮೊದಲು ಸರಳ ಜೀವಿಗಳಾಗಿದ್ದ ಬ್ರಾಹ್ಮಣರು ಹೇಗೆ ಲೋಕರುಚಿಗಳ ಮೋಹಕ್ಕೆ ಸಿಕ್ಕಿ, ರಾಜನೊಬ್ಬನಿಗೆ ಮಹಾ ಯಜ್ಞ ಮಾಡಿಸುವಂತೆ ದುಂಬಾಲು ಬಿದ್ದು ಅವನತಿಗೊಂಡರು ಎಂಬುದನ್ನು ಸಾಂಕೇತಿಕವಾಗಿ ವಿವರಿಸುತ್ತಾನೆ.

ಅನುಭವ ಮತ್ತು ವಿಚಾರಗಳ ಆಧಾರವಿಲ್ಲದೆ ಯಾವುದನ್ನೂ, ಯಾರು ಹೇಳಿದ್ದನ್ನೂ ನಂಬಬಾರದೆಂದು ಹೇಳುತ್ತಿದ್ದ ಬುದ್ಧ, ಸಹಜವಾಗಿಯೇ ವೇದ ಪ್ರಾಮಾಣ್ಯವನ್ನು ಒಪ್ಪದ ಶುದ್ಧ ಪ್ರಜ್ಞಾವಾದಿ. ಹಾಗಾಗಿಯೇ ಬೌದ್ಧ ಧರ್ಮ ಶುದ್ಧ ಮಾನವ ಧರ್ಮವೆನಿಸಿ, ಅವನ ಕಾಲದಲ್ಲೇ ಅನೇಕ 'ವೈದಿಕ' ಬ್ರಾಹ್ಮಣರು ಅವನಿಗೆ ಶರಣಾಗಿ ಬೌದ್ಧರಾದರು. ಇದರ ಅದ್ಭುತ ಮತ್ತು ಅರ್ಥಪೂರ್ಣ ಚಿತ್ರವೊಂದನ್ನು ಇಂದಿನ ಹಲವು ಆಧುನಿಕ 'ಬಂಡಾಯಗಾರ'ರಿಂದ ಹಿಂದೂ ಸನಾತನಿ ಎಂದು ಕರೆಸಿಕೊಂಡ ಮಾಸ್ತಿ ತಮ್ಮ 'ಸಾರಿಪುತ್ತನ ಕೊನೆಯ ದಿನಗಳು' ಎಂಬ ಕಥೆಯಲ್ಲಿ ಕಟ್ಟಿಕೊಡುತ್ತಾರೆ. ಈ ಕಥೆಯಲ್ಲಿ ಮಾಸ್ತಿ ಬುದ್ಧನನ್ನು, ಕತ್ತಲ ದಾರಿ ಹಿಡಿದಿದ್ದ ಸನಾತನ ಧರ್ಮವನ್ನು ಮತ್ತೆ ಬೆಳಕಿನ ದಾರಿಗೆ ಕೊಂಡೊಯ್ದ ಮಹಾ ಪುರುಷನಂತೆ ಚಿತ್ರಿಸುತ್ತಾರೆ. ಈ ಚಿತ್ರಣದಲ್ಲಿ, ತನ್ನ ಬ್ರಾಹ್ಮಣ ಶಿಷ್ಯ ಸಾರಿಪುತ್ತನ ಪೂರ್ವಾಶ್ರಮದ ಪ್ರವೃತ್ತಿಯೊಂದಿಗೆ ಸಹಾನುಭೂತಿ ತೋರಿಸುವ ಬುದ್ಧ, ಆತನಿಗೆ ತನ್ನನ್ನು ದೇವರೆಂದು ಪೂಜಿಸಲು ಅನುಮತಿಯನ್ನೂ ನೀಡುತ್ತಾನೆ!

ಇದು ನಮ್ಮ ಕಾಲದ ಮಾಸ್ತಿಯವರ ಕಥಾ ಕಲ್ಪನೆ ಮಾತ್ರವಲ್ಲವೆಂಬುದನ್ನು ತಿಳಿಯಲು, ಬುದ್ಧನ ನಂತರದ ಐದು ನೂರು ವರ್ಷಗಳಲ್ಲಿ–ಕ್ರಿ.ಶ. ಒಂದನೇ ಶತಮಾನದ ಹೊತ್ತಿಗೆ–ನಾಗಾರ್ಜುನನಿಂದ ರೂಪುಗೊಂಡ ಬೌದ್ಧ ಮಹಾಯಾನದ ಆಕಾರಗಳನ್ನು

ಗಮನಿಸಬೇಕು. ತನ್ನ ಧರ್ಮ ಮೀಮಾಂಸೆಗೆ ಪಾಲಿ ಭಾಷೆಗೆ ಬದಲಾಗಿ ಸಂಸ್ಕೃತವನ್ನು ಅಳವಡಿಸಿಕೊಂಡ ಈ ಮಹಾಯಾನ, ಲೋಕ ಮಾಯೆ ಎಂಬ 'ಅವಿದ್ಯೆ'ಯನ್ನು ದಾಟಲು ಜೀವ ಕರುಣೆಯನ್ನು ಊರುಗೋಲಾಗಿಸಿಕೊಂಡ 'ಪ್ರಜ್ಞೆ'ಯನ್ನು ರೂಢಿಸಿಕೊಳ್ಳುವ ಪ್ರಜ್ಞಾಶಾಸ್ತ್ರವೊಂದನ್ನು ಅನಾವರಣಗೊಳಿಸಿತು. ಇದರ ಅಂಗವಾಗಿ ಧ್ಯಾನವನ್ನೂ ಒಂದು ಆಚರಣೆಯನ್ನಾಗಿ ಮಾರ್ಪಡಿಸಿದ ಅದು, ಆ ಹೊತ್ತಿಗೆ ಪುನರುಜ್ಜೀವನಗೊಳ್ಳತೊಡಗಿದ್ದ ಯಜ್ಞ-ಯಾಗಗಳ ವೈದಿಕ ಧರ್ಮವನ್ನು ಸಾಮಾನ್ಯ ಜನತೆಯ ನೆಲೆಯಲ್ಲಿ ಎದುರಿಸಲೋ ಎಂಬಂತೆ, ಕ್ರಮೇಣ ಮೂರ್ತಿ ಪೂಜೆಯು ದೊಡ್ಡ ಆಂದೋಲನವಾಗಿ ಮಾರ್ಪಾಡಾಯಿತು! ಇದರೊಂದಿಗೆ ಗಾಂಧಾರ ಶಿಲ್ಪವೂ ವಿಕಾಸಗೊಂಡು, ಬೌದ್ಧ ಧರ್ಮವನ್ನು ಒಂದು ಸಂಸ್ಕೃತಿಯನ್ನಾಗಿ ಹರಡುವಲ್ಲಿ ಸಹಾಯಕವಾಯಿತು. ಇದರ ಫಲವಾಗಿ ಅನೇಕ ತಂತ್ರ-ಮಂತ್ರಗಳ, ಪೂಜೆ-ಆಚರಣೆಗಳ ಮತಲೋಕವೊಂದು ರೂಪುಗೊಂಡು, 'ಸಿದ್ಧಿ'ಯನ್ನರಸುವ ಅನೇಕ-ತಾಂತ್ರಿಕ-ಪಂಥಗಳು ಸೃಷ್ಟಿಯಾಗುವುದನ್ನು ನಾವು ಕಾಣುತ್ತೇವೆ. ಬೋಧಿಸತ್ವರ ಕಲ್ಪನೆ ಜಾತಕ 'ಕಥೆ'ಗಳಿಗೆ ದಾರಿ ಮಾಡಿಕೊಟ್ಟು, ಬುದ್ಧ ಪೂಜಾರ್ಹ ದೇವರೇ ಆಗುತ್ತಾನೆ. ಅವನ ಪರಿವಾರವಾಗಿ ಅನೇಕ ಹೆಣ್ಣು ದೇವತೆಗಳೂ, ಗಂಡು ದೇವತೆಗಳೂ, ಯಕ್ಷ-ಕಿಂಪುರುಷರೂ ಸೇರಿಕೊಂಡು, ಕಾಲ ಕ್ರಮೇಣ ಒಂದು 'ಅಭಯ' ಲೋಕವೇ ಸೃಷ್ಟಿಯಾಗುತ್ತದೆ.

ಬೌದ್ಧ 'ಶೂನ್ಯತೆ'ಯ ಜಿಜ್ಞಾಸೆಯೇ ಕಾರಣವಾಗಿ ಮುಂದೆ ರೂಪುತಾಳಿದ ಕಾಶ್ಮೀರಿ ಶೈವವಾದ, ಅದರ ವೈವಿಧ್ಯಮಯ ಟಿಸಿಲುಗಳು ಕ್ರಿಯೆ-ಪ್ರತಿಕ್ರಿಯೆಗಳಿಗೆ ಸಿಕ್ಕಿ ವೈಷ್ಣವ ಪಂಥಗಳು ಹುಟ್ಟಿ (ವೈಷ್ಣವ ಗುರು ಚೈತನ್ಯ ಮಹಾಪ್ರಭುವಿನ ಮೊಮ್ಮಗ ವೀರಭದ್ರ! ಆತ ಮದೀನಾಬಾಯಿಯೆಂಬ ಸೂಫಿಯಿಂದ ಕಲಿತು ರೂಪಿಸಿದ ಭೌಲ್ ಗಾಯನ ಪಂಥದ ಸ್ಫುಟವಾದ ಬೌದ್ಧ ಚಹರೆಗಳನ್ನು ನಾವು ಗಮನಿಸಬೇಕು) ಹಿಂದೂ ಧರ್ಮವೆಂಬುದು (ಅಂದರೆ ಸಿಂಧೂ ನದಿಯಾಚೆಯ ಧಾರ್ಮಿಕ ನಂಬಿಕೆಗಳು) ಒಂದು ಹೊಸ ಒಕ್ಕೂಟ ಧರ್ಮವಾಗಿ ಗುರುತಿಸಲ್ಪಟ್ಟಿತೆಂದು ತೋರುತ್ತದೆ. ಈ ಅರ್ಥದಲ್ಲಿ ಹಿಂದೂ ಎಂಬುದು ಒಂದು ಧರ್ಮವಲ್ಲ. ಅದು ರಾಜಕಾರಣ! (ಕಾಬಾ-ಪೂಜನೀಯ ಕಲ್ಲು-ಪ್ರದಕ್ಷಿಣೆಯನ್ನು ಆಚರಣೆಯನ್ನಾಗುಳ್ಳ ಇಸ್ಲಾಂ ಕೂಡಾ ಇದರ ಒಂದು ದೂರದ ಟಿಸಿಲು ಎಂದೂ ಹೇಳಲಾಗುತ್ತದೆ. ಅಲ್ಲದೆ, ಈ ಹಿಂದೆ ಏಸು ಕೂಡ ಕಾಶ್ಮೀರಕ್ಕೆ ಬಂದು ಬೌದ್ಧ ಧರ್ಮದ ಆ ಟಿಸಿಲುಗಳಿಂದ ಪ್ರಭಾವಿತನಾಗಿ ಹೋದ ಎಂಬ 'ಕಥೆ'ಯೂ ಇದೆ)

ಇದೆಲ್ಲದರ ಪರಿಣಾಮವಾಗಿ ಬೌದ್ಧ ಭಿಕ್ಷು-ಭಿಕ್ಷುಣಿಯರಿಗೆ ಸಾಮಾನ್ಯ ಜನತೆಯಲ್ಲದೆ, ಶ್ರೀಮಂತರ ಮತ್ತು ರಾಜ-ರಾಣಿಯರ ಅಪಾರ ಸಂಪತ್ತಿನ ದಾನ-ದತ್ತಿಗಳೂ ದೊರೆತು, ವಿಹಾರಗಳು ಕ್ರಮೇಣ ವಿಶಾಲವೂ, ವೈಭವೋಪೇತವು ಆಗತೊಡಗಿ; ಬೌದ್ಧ ಪುರೋಹಿತಶಾಹಿಯೊಂದು ಸೃಷ್ಟಿಯಾಗುವುದರ ಸೂಚನೆಗಳನ್ನು ಶಾತವಾಹನರ ಕಾಲದ ಅನೇಕ ದತ್ತಿ-ದಾನಗಳ ಶಾಸನಗಳಲ್ಲಿಯೇ ನಾವು ಕಾಣುತ್ತೇವೆ. ಹಾಗೇ, ನಂತರದ ಕಾಲದ 'ಮೃಚ್ಛಕಟಿಕ', '-ಮತ್ತ ವಿಲಾಸ' ಇತ್ಯಾದಿ ನಾಟಕಗಳು ಮತ್ತು ಅನೇಕ

ಕಥಾನಕಗಳಲ್ಲಿ ನೂರಾರು ಆನೆಗಳ ಸರದಾರರಾದ ಭಿಕ್ಷು ಮಹಾರಾಜರ ಮತ್ತು ಮೈ ತುಂಬಾ ವಸ್ತ್ರಾಭರಣಗಳಿಂದ ಅಲಂಕೃತರಾಗಿದ್ದ ಭಿಕ್ಷುಣಿ ಮಹಾರಾಣಿಯರ ವಿಹಾರ-ವಿಲಾಸಗಳು ಹಾಗೂ ಕಳ್ಳ-ಸುಳ್ಳ-ಖದೀಮರೆಲ್ಲ ಬೌದ್ಧ ಸಂನ್ಯಾಸಿಗಳ ವೇಷ ತೊಟ್ಟು ಸಂಕಷ್ಟದಿಂದ ಪಾರಾಗುವ ಅನೇಕ ಪ್ರಸಂಗಗಳು ವಿಡಂಬನಾತ್ಮಕವಾಗಿ ನಿರೂಪಿತವಾಗಿರುವುದನ್ನು ನಾವು ಗಮನಿಸಬಹುದು. ಹೀಗೆ ತನ್ನದೇ ಪುರೋಹಿತಶಾಹಿಯನ್ನು ನಿರ್ಮಿಸಿಕೊಂಡ ಬೌದ್ಧ ಧರ್ಮ ತನ್ನ ಅನನ್ಯ ಗುರುತನ್ನು ಕಳೆದುಕೊಂಡು, ಭಾರತದ ಅಂದಿನ ಧಾರ್ಮಿಕ ಕೋಲಾಹಲದಲ್ಲಿ ಅನೇಕ ಸಂಪ್ರದಾಯಗಳ ಮಧ್ಯೆ ಲೀನವಾಗುತ್ತಾ, ಕ್ರಮೇಣ ಕಳೆದು ಹೋಯಿತಷ್ಟೇ.

ಆದರೆ ಸಂಪೂರ್ಣವಾಗಿಯೇನೂ ಕಳೆದು ಹೋಗಿಲ್ಲ. ಏಕೆಂದರೆ ಅದು, ನಾಗಾರ್ಜುನ ತನ್ನ 'ಮೂಲ ಮಾಧ್ಯಮಕಾರಿಕಾ'ದಲ್ಲಿ 'ಪ್ರಜ್ಞಾ ಪಾರಮಿತ' (ಪ್ರಜ್ಞೆಯ ಪರಿಪೂರ್ಣತೆ)ದ ಸಾಧನೆಯ ಅಂಗವಾಗಿ ನಿರೂಪಿಸಿರುವ 'ಜಗತ್ತು ಒಂದು ಸಂಕೀರ್ಣ ಕಾರ್ಯ ಕಾರಣ ಸಂಬಂಧಗಳ ಜಾಲವಾಗಿದ್ದು, ಪ್ರತಿಯೊಂದು ಜೀವಿಯೂ ಪ್ರತಿ ಇನ್ನೊಂದು ಜೀವಿಯ ಸಂಬಂಧದಲ್ಲಷ್ಟೇ ತನ್ನ ಅಸ್ತಿತ್ವದ ಅರ್ಥಪೂರ್ಣತೆಯನ್ನು ಕಂಡುಕೊಳ್ಳಬಹುದು' ಎಂಬರ್ಥದ 'ಪ್ರತೀತ್ಯ ಸಮುತ್ಪಾದ ತತ್ವ' ಅನೇಕ ರೂಪಗಳಲ್ಲಿ ನಮ್ಮ ಮಧ್ಯೆ ಇನ್ನೂ ಜೀವಂತವಾಗಿದೆ. ಪುರಾತನ ಮೌಢ್ಯಗಳು ಮತ್ತು ಆಧುನಿಕ ಬದುಕಿನ ಜಂಜಾಟಗಳ ನಡುವೆಯೂ ಇನ್ನೂ ನಮ್ಮಲ್ಲಿ ಸಂಪೂರ್ಣ ಬತ್ತಿ ಹೋಗಿರದ 'ಸಕಲ ಜೀವಿಗಳಿಗೆ ಲೇಸನ್ನೇ ಬಯಸುವ' ಮತ್ತು 'ದಯೆಯೇ ಧರ್ಮದ ಮೂಲವಯ್ಯ' ಎಂಬ ಆಳದ ಸಾರ್ವತ್ರಿಕ ಅರಿವಿನ ಹಿಂದಿನ 'ಕರುಣಾ'ವಾಗಿ, ಅದು ಭಾರತದ ಜನಮನದ ಹೃದಯದಲ್ಲಿ ಇಂದೂ ಅನುರಣಿಸುತ್ತಿದೆ. ಈ ದೃಷ್ಟಿಯಿಂದ ನೋಡಿದಾಗ ಇಂದು ಜನಪ್ರಿಯ ನೆಲೆಯಲ್ಲಿ ಹಿಂದೂ ಧರ್ಮವೆಂದು ಕರೆಸಿಕೊಳ್ಳುವ ಹಲವು ಸಂಪ್ರದಾಯ-ನಂಬಿಕೆಗಳ ಕಲಸು ಮೇಲೋಗರದಂತಿರುವ 'ಧರ್ಮ'ಕ್ಕೆ, ಜೀವ ಕೇಂದ್ರವಾಗಿರುವುದು ಬೌದ್ಧ ಧರ್ಮವೇ. ಹಾಗಾಗಿಯೇ ಈ 'ಹಿಂದೂ ಧರ್ಮ'. ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು'ವಿನಲ್ಲಿ ಪುರಾತನ ವೈದಿಕ ಪುರೋಹಿತಶಾಹಿಯ ಮೌಢ್ಯ ಮತ್ತು ಆಧುನಿಕ ಕ್ರಿಶ್ಚಿಯನ್ ಮತದ ಲೌಕಿಕ ಆಕರ್ಷಣೆಗಳೆರಡನ್ನೂ 'ಮಧ್ಯಮ ಮಾರ್ಗ'ದಲ್ಲಿ ಎದುರಿಸಿ ನಿಲ್ಲುತ್ತಾ,

ಇಲ್ಲಿ
ಯಾರೂ ಮುಖ್ಯರಲ್ಲ
ಯಾರೂ ಅಮುಖ್ಯರಲ್ಲ
ಯಾವುದೂ ಯಃಕಶ್ಚಿತವಲ್ಲ.

ಇಲ್ಲಿ
ಯಾವುದಕ್ಕೂ ಮೊದಲಿಲ್ಲ.

ಯಾವುದಕ್ಕೂ ತುದಿಯಿಲ್ಲ
ಯಾವುದೂ ಎಲ್ಲಿಯೂ ನಿಲ್ಲುವುದಿಲ್ಲ
ಕೊನೆ ಮುಟ್ಟುವುದೂ ಇಲ್ಲ.

ಇಲ್ಲಿ,
ಅವಸರವೂ ಸಾವಧಾನದ ಜೊತೆಗಿರಿದೆ.

ಇಲ್ಲಿ
ಎಲ್ಲದಕ್ಕೂ ಇದೆ ಅರ್ಥ
ಯಾವುದೂ ಅಲ್ಲ ವ್ಯರ್ಥ
ನೀರೆಲ್ಲ ಊ ತೀರ್ಥ.

ಎಂಬ ಬೌದ್ಧ 'ಪ್ರತೀತ್ಯ ಸಮುತ್ಪಾದ' ತತ್ವವೇ ಆದ ಈ ಬೀಜವಾಕ್ಯವನ್ನು ತನ್ನ ಜೀವನ ದರ್ಶನವನ್ನಾಗಿ ಅದ್ಭುತ ರೀತಿಯಲ್ಲಿ ಘೋಷಿಸಿಕೊಳ್ಳಲು ಸಾಧ್ಯವಾಗಿರುವುದು. ಆದರೆ ತನ್ನ ಜೀವನ ದರ್ಶನಕ್ಕೆ ವಿರುದ್ಧವಾದ ಇದನ್ನು ಸಹಿಸಲಾಗದ ಹೊಸ ವೈದಿಕ ಪುರೋಹಿತಶಾಹಿಯು ಇಂದು ವಿಭಿನ್ನ ತಾತ್ವಿಕ ಹಾಗೂ ಸಾಮಾಜಿಕ ನೆಲೆಗಳಲ್ಲಿ ಪುನರ್‌ಸಂಘಟಿತಗೊಂಡು, 'ಹಿಂದುತ್ವ'ವೆಂಬ ಹೊಸ ಹೆಸರಲ್ಲಿ ಹಿಂದೂ ಧರ್ಮದ ಈ ಬೌದ್ಧ ಹೃದಯ ಕೇಂದ್ರವನ್ನು ನಾಶ ಪಡಿಸುವ ಪ್ರಯತ್ನದಲ್ಲಿ ತೊಡಗಿದೆ. ಇದನ್ನು ಇಂದಿನ ಪರಿಸ್ಥಿತಿಯಲ್ಲಿ ನಾವು 'ಹಿಂದೂ'ವಾಗಿ ಇದ್ದುಕೊಂಡೇ ಬುದ್ಧನಿಗೆ ನಮಸ್ಕರಿಸುವ ಮೂಲಕ ಮಾತ್ರ ಪರಿಣಾಮಕಾರಿಯಾಗಿ ಎದುರಿಸಬಹುದು. ಆ ಮೂಲಕ ಮಾತ್ರ ಹಿಂದೂ ಧರ್ಮ ತನ್ನ ಬಹುಮುಖಿ ಸಂಸ್ಕೃತಿಯನ್ನು ಉಳಿಸಿಕೊಂಡು ಬುದ್ಧನಿಂದ ಸ್ಫೂರ್ತಿಯನ್ನು ಪಡೆಯಬಹುದು ಎಂಬುದು ನನ್ನ ನಮ್ರ ಅಭಿಪ್ರಾಯವಾಗಿದೆ.

(೩೦, ಮೇ ೨೦೦೮)

■

ಇತರ ಮಠ ಮತ್ತು ಮಠಾಧೀಶರ ಮೇಲೂ ಒತ್ತಡಗಳು ಉಂಟಾಗುತ್ತಿದ್ದು, ಅವರೂ ಜಾತಿ, ಧರ್ಮ, ಸಮಾಜ ಕುರಿತ ತಮ್ಮ ನಿಲುವುಗಳನ್ನು ಉದಾರಗೊಳಿಸಿಕೊಳ್ಳಲು, ಆಧುನೀಕರಿಸಿಕೊಳ್ಳಲು ಒತ್ತಡಗಳು ಉಂಟಾಗುತ್ತಿವೆ.

ಅಂದ ಮಾತ್ರಕ್ಕೆ ಇತರೆ ಮಠಾಧೀಶರಿಗೆ ಹೋಲಿಸಿದರೆ, ಇವರು ಸರ್ವಶ್ರೇಷ್ಠರು ಎಂದಲ್ಲ. ಇವರಿಗಿಂತ ವಿದ್ಯಾವಂತರಾದವರು, ಪಂಡಿತರಾದವರು, ಜನಸೇವೆಯಲ್ಲಿ ತೊಡಗಿದ ಅನೇಕ ಮಠಾಧೀಶರು ಕರ್ನಾಟಕದಲ್ಲಿ ಉಂಟು. ಉದಾಹರಣೆಗೆ ಸಿದ್ಧಗಂಗಾ ಮಠದ ಶ್ರೀ ಶಿವಕುಮಾರ ಸ್ವಾಮಿಗಳು ವಿದ್ಯಾ ಮತ್ತು ಪ್ರಸಾದ ಸೇವೆಯಿಂದಲೇ ಎಲ್ಲರಿಗಿಂತ ಶ್ರೇಷ್ಠರಾಗಿದ್ದಾರೆ. ಅವರ ಸಾಮಾಜಿಕ ಕಳಕಳಿ ಮತ್ತು ವಿದ್ವತ್ತುಗಳೂ ಶ್ರೇಷ್ಠವಾದುವೇ. ಆದರೆ ಸಾಮಾಜಿಕ ಬದಲಾವಣೆ ಕುರಿತ ಅವರ ತುಡಿತ ಅಷ್ಟೇನೂ ತೀವ್ರವಾದದ್ದಲ್ಲ. ಅವರ ಮಠ ಮತ್ತು ಜನಸೇವೆಯೂ ಜಾತಿ ಪದ್ಧತಿಯ ಬಂಧನಗಳಿಂದ ಕಳಚಿಕೊಂಡಿವೆ ಎಂದೇನೂ ಹೇಳುವಂತಿಲ್ಲ. ಮುಖ್ಯವಾಗಿ, ಶಾಸ್ತ್ರ ಮತ್ತು ಧರ್ಮಗ್ರಂಥಗಳನ್ನು ಇಂದಿನ ಕಾಲದ ಅಗತ್ಯಗಳಿಗೆ ತಕ್ಕಂತೆ ಪುನರ್‌ವ್ಯಾಖ್ಯಾನಿಸಬೇಕಿದೆ ಎಂದು ಅವರಿಗೆ ಅನ್ನಿಸಿದ ಬಗ್ಗೆ ಯಾವ ಪುರಾವೆಗಳೂ ಇಲ್ಲ. ಅವರ ಮಠದ ನಾಲ್ಕಾರು ಜನ ವಿದ್ಯಾರ್ಥಿಗಳು ನನಗೆ ಶಾಲಾ ದಿನಗಳಲ್ಲಿ ಉಪಾಧ್ಯಾಯರಾಗಿ ದೊರೆತಿದ್ದರು. ಜಾತಿಪ್ರಜ್ಞೆಯೇ ಇಲ್ಲದೆ ಬದುಕುತ್ತಿದ್ದ ನನ್ನ ಬಾಲ್ಯದಲ್ಲಿ ಜಾತಿಪ್ರಜ್ಞೆಯನ್ನು ಕೆರಳಿಸಿದವರು ಇವರೇ. ರಚನಾತ್ಮಕ ಅರ್ಥದಲ್ಲಿ ಅಲ್ಲ. ಅವರ ಲಿಂಗಾಯತ ಜಾತೀಯತೆಯ ಘಾಟು ನಮ್ಮ ಉಸಿರುಗಟ್ಟಿಸುವಂತಿತ್ತು. ಸಂಸ್ಕೃತ ಉಪಾಧ್ಯಾಯರೂ ಆಗಿದ್ದ, ದೊಡ್ಡಕಲ್ಲ ದೇವರು ಎಂಬ ಅಷ್ಟು ಕನ್ನಡ ಹೆಸರು ಪಡೆದಿದ್ದ ಒಬ್ಬ ಉಪಾಧ್ಯಾಯರಂತೂ, ನನ್ನ ದಲಿತ ಸಹಪಾಠಿಗಳನ್ನು ಎಷ್ಟು ದಾರುಣವಾಗಿ ಗೋಳು ಹೊಯ್ದುಕೊಳ್ಳುತ್ತಿದ್ದರೆಂದರೆ, ಹಲವು ಬಾರಿ ನನಗೇ ಕಣ್ಣೀರು ಬರುತ್ತಿತ್ತು. ಸಿದ್ಧಗಂಗೆ ಮಠಾಧೀಶರು ನಮ್ಮೂರಿಗೆ ಆಗಾಗ್ಗೆ ಭಕ್ಷಕ್ಕೆ ಬಂದು ಮಾಡುತ್ತಿದ್ದ ಸಾರ್ವಜನಿಕ ಭಾಷಣಗಳ ಎತ್ತರ ಮತ್ತು ಅಲ್ಲಿ ತಯಾರಾದ ಈ ಶಿಷ್ಯರು ಮುಟ್ಟುತ್ತಿದ್ದ ಈ ಪಾತಾಳಗಳ ಅಂತರ ಅರ್ಥವಾಗದ ನಾನು ಅನೇಕ ಸಲ ಗೊಂದಲಗಳಿಗೆ ಒಳಗಾಗುತ್ತಿದ್ದೆ.

ಇದು ಒಂದು ಮಠದ ಉದಾಹರಣೆ ಅಷ್ಟೆ. ಇನ್ನೂ ನಾಲ್ಕಾರು ಜಾತಿಗಳ ನಾಲ್ಕಾರು ಮಠಗಳಲ್ಲಿ ತಯಾರಾದ ವಿದ್ಯಾರ್ಥಿಗಳೂ ನನ್ನ ಸ್ನೇಹಿತರಾಗಿದ್ದಾರೆ. ಅವರಿಗೆ ತಮ್ಮನ್ನು 'ತಯಾರು' ಮಾಡಿದ ಈ ಮಠಗಳ ಬಗ್ಗೆ ಸಾಕಷ್ಟು ಸಿಟ್ಟಿದೆ, ವಿಷಾದವಿದೆ. ಕೆಲವರಲ್ಲಿ ಭಯ ಕೂಡಾ ಇದೆ! ಹೀಗಿರುವಾಗ ನಾನು ಚಿತ್ರದುರ್ಗ ಆಕಾಶವಾಣಿಯಲ್ಲಿ ಐದು ವರ್ಷಗಳಿದ್ದ ಅವಧಿಯಲ್ಲಿ ಮುರುಘರಾಜೇಂದ್ರ ಮಠದೊಂದಿಗೆ ಸಂಪರ್ಕವೇರ್ಪಟ್ಟು, ನನಗೆ ಮಠಗಳ ಬಗ್ಗೆ ಇದ್ದ ಕಲ್ಪನೆಯೇ ಬದಲಾಯಿತೆಂದು ಹೇಳಬೇಕು. ನನ್ನ ಚಿತ್ರದುರ್ಗ ಸೇವಾವಧಿಯ ಕೊನೆಯಲ್ಲಿ ಸ್ವಾಮೀಜಿಯವರ ವೈಯಕ್ತಿಕ ಆಹ್ವಾನವನ್ನು ತಿರಸ್ಕರಿಸಲಾಗದೆ ಮಠಕ್ಕೊಮ್ಮೆ ಹೋಗಿ ಅವರ ಪ್ರೀತಿಯ 'ಬೀಳ್ಕೊಡುಗೆ ಸತ್ಕಾರ'ವನ್ನು ಸ್ವೀಕರಿಸಿ ಬಂದಿದ್ದರ ಹೊರತಾಗಿ, ನಾನೆಂದೂ ಅವರ ಮಠದ ಆವರಣ

ಪ್ರವೇಶಿಸಿದವನಲ್ಲ. ಅವರ ಯಾವ ಕಾರ್ಯಕ್ರಮಕ್ಕೂ–ಹಲವು ಬಾರಿ ಆಹ್ವಾನವಿದ್ದರೂ– ಅತಿಥಿಯಾಗಿ ಆಗಲಿ, ಸಭಿಕನಾಗಿಯಾಗಲಿ ಹೋಗಿಬಂದವನಲ್ಲ. ಮಠ ಪ್ರತಿವರ್ಷ ಘೋಷಿಸುವ 'ಬಸವಶ್ರೀ' ಪ್ರಶಸ್ತಿಗಾಗಿ ಅರ್ಹರನ್ನು ಮತ್ತು ನಡೆಸುವ ಶರಣ ಸಂಸ್ಕೃತಿ ಉತ್ಸವದ ಅತಿಥಿಗಳನ್ನು ನಿರ್ಣಯಿಸುವಲ್ಲಿ ಹಾಗೂ ಅವರನ್ನು ಕರೆಸುವಲ್ಲಿ ಸ್ವಾಮೀಜಿಯ ಆಪ್ತ ಬಳಗದವರು ನನ್ನ ಸಲಹೆಗಳನ್ನು, ಸಹಾಯವನ್ನು ಕೇಳುತ್ತಿದ್ದುದುಂಟು. ಮತ್ತು ಹಲವು ಬಾರಿ ನನ್ನ ಸಲಹೆಗಳನ್ನು ಅವರು ಮಾನ್ಯ ಮಾಡುತ್ತಿದ್ದುದೂ ಉಂಟು. ಹೀಗೆ ಬಸವಶ್ರೀ ಪ್ರಶಸ್ತಿ ಪಡೆದ ಮೇಧಾ ಪಾಟ್ಕರ್ ಮತ್ತು ಅಣ್ಣಾ ಹಜಾರೆ ನಮ್ಮ ಮನೆಗೂ ಬಂದು ನಮ್ಮ ಆತಿಥ್ಯ ಸ್ವೀಕರಿಸಿದ ಸೌಭಾಗ್ಯವೂ ನಮ್ಮ ಪಾಲಿನದಾಗಿತ್ತು.

ಆದರೆ ಒಂದು ಬಾರಿ ಬಸವಶ್ರೀ ಪ್ರಶಸ್ತಿಗೆ ನಿಜವಾಗಿ ಅರ್ಹರಾಗಿದ್ದ ಸಮಾಜವಾದಿ ಚಿಂತಕ ಹಾಗೂ ಹೋರಾಟಗಾರ ಕಿಷನ್ ಪಟ್ನಾಯಕ್ (ಈಗ ದಿವಂಗತರು) ಅವರಿಗೆ, ಅವರು ಅಷ್ಟು ಪ್ರಸಿದ್ಧರಲ್ಲ ಎಂಬ ಕಾರಣದ ಮೇಲೆ ನನ್ನ ಸಲಹೆಯನ್ನು (ಇದರ ಹಿಂದೆ ದೇವನೂರು ಮಹಾದೇವರ ಶಿಫಾರ್ಸೂ ಇತ್ತು) ಮಠ ತಿರಸ್ಕರಿಸಿ, ಇಂತಹ ಪ್ರಶಸ್ತಿಗಳೆಲ್ಲವನ್ನೂ ಮೀರಿ ಬೆಳೆದಿದ್ದ ದಲೈಲಾಮಾರಿಗೆ ಕೇವಲ ತಮ್ಮ ಪ್ರಸಿದ್ಧಿಗಾಗಿ ಬಸವಶ್ರೀ ಪ್ರಶಸ್ತಿ ನೀಡಿದಾಗ, ನನಗೆ ನಿಜವಾಗಿ ಜಿಗುಪ್ಸೆಯಾಯಿತು. ಇದು ನನ್ನನ್ನು ಎಷ್ಟು ಬೇಸರಗೊಳಿಸಿತೆಂದರೆ, ಒಂದು ವರ್ಷದ ಅವಧಿಯಲ್ಲಿ ನಾನೇ ನನ್ನ ಸಮಾಜವಾದಿ ಗೆಳೆಯರ ಸಹಕಾರದಿಂದ ಬಸವಶ್ರೀ ಪ್ರಶಸ್ತಿ ಮೊತ್ತವಾದ ಒಂದು ಲಕ್ಷ ರೂಪಾಯಿಗಳಿಗೂ ಮೀರಿ ಹಣ ಸಂಗ್ರಹಿಸಿ, ಶಿವಮೊಗ್ಗದಲ್ಲಿ ಕಿಷನ್ ಪಟ್ನಾಯಕ್ ಅಭಿನಂದನಾ ಸಮಾರಂಭ ಏರ್ಪಡಿಸಿ ಅವರಿಗೆ ಅರ್ಪಿಸಿದಾಗಲೇ ನನಗೆ ಸಮಾಧಾನವಾದದ್ದು!

ಮುರುಘಾ ಮಠಾಧೀಶರಿಗೆ ಪ್ರಸಿದ್ಧಿಯ ಹಪಾಹಪಿ ಎನ್ನುತ್ತಾರೆ. ಆದರೆ ಇದು ಯಾವ ಮಠಾಧೀಶರಿಗಿಲ್ಲ? ಹೋದ ಕಡೆಗೆಲ್ಲ ತಾವು ಸಾಕಿದ ಪತ್ರಿಕಾ ಛಾಯಾಗ್ರಾಹಕರನ್ನೂ, ವರದಿಗಾರರನ್ನೂ ಕರೆದುಕೊಂಡು ಹೋಗುವ ಮಠಾಧೀಶರೆಷ್ಟಿಲ್ಲ? ಮುರುಘರಾಜೇಂದ್ರ ಶರಣರಿಗೆ ಪ್ರಸಿದ್ಧಿಯ ಹಂಬಲವಿದ್ದರೆ, ಅದಿರುವುದು ತಾವು ತುಳಿಯುತ್ತಿರುವ ವಿಭಿನ್ನ ಹಾದಿಗೆ ಜನಬೆಂಬಲ ಗಳಿಸಿಕೊಳ್ಳಬೇಕೆಂಬುದೇ ಕಾರಣ ಎಂದು ನಾನು ಭಾವಿಸಿದ್ದೇನೆ. ಆದರೂ ಇದಕ್ಕಾಗಿ ಒಮ್ಮೊಮ್ಮೆ ಅವರು ದುಡುಕಿನ ಹೆಜ್ಜೆಗಳನ್ನಿಡುವುದೂ ಉಂಟು ಎಂದು ನನಗನ್ನಿಸಿದೆ. ಅವರು ತಾವು ಏರ್ಪಡಿಸುವ ಸಮಾರಂಭಗಳನ್ನು, ದೀಪ ಬೆಳಗಿಸುವುದು ವೈದಿಕ ಸಂಪ್ರದಾಯವೆಂದು ಬೇರೆ ರೂಪಗಳಲ್ಲಿ – ಉದಾ: ಗಿಡಕ್ಕೆ ನೀರೆರೆಯುವುದು–ಉದ್ಘಾಟಿಸುವ ವ್ಯವಸ್ಥೆ ಮಾಡುವುದು, ಸಾರ್ವಜನಿಕ ಸ್ಥಳಗಳಲ್ಲಿನ ಮೂರ್ತಿಗಳಿಗೆ ಚಪ್ಪಲಿ ಹಾರ ಹಾಕುವ ಇತ್ತೀಚಿನ ಕಿಡಿಗೇಡಿ ಕಾರ್ಯಗಳನ್ನು, ಚಪ್ಪಲಿ ಹಾರವೂ ಶ್ರೇಷ್ಠ ಎಂದು ವಿವರಿಸಿ ಸಮನ್ವಯಗೊಳಿಸುವ ಪ್ರಯತ್ನ ಮಾಡುವುದು ಇತ್ಯಾದಿಗಳನ್ನು ಅತಿ ವೈಚಾರಿಕತೆಯ ವ್ಯಾಖ್ಯಾನಗಳೆಂದೇ ಕರೆಯಬೇಕಾಗುತ್ತದೆ.

ಮಠ ವ್ಯವಸ್ಥೆಯ ನಿಜವಾದ ದುರಂತವೆಂದರೆ ಅವು ಹುಟ್ಟಿನಿಂದಲೇ sectarian ಆಗಿರುವುದು. ಹಾಗೇ, ತಮ್ಮ ಜಾತಿ ಅಥವಾ ಜನಾಂಗದ 'ತತ್ವಜ್ಞಾನ'ವನ್ನು ಅತ್ಯಂತಿಕ

ಸತ್ಯವೆಂದು ನಂಬಿರುವ ಅವು, ತಮ್ಮ ಜಾತಿ-ಜನಾಂಗಗಳ 'ತತ್ವಜ್ಞಾನ' ಉದಯಿಸಿದ ನಂತರ ತತ್ವಜ್ಞಾನ ಅಪಾರವಾಗಿ ಹಲವು ದಿಕ್ಕುಗಳಲ್ಲಿ ಬೆಳೆದಿದೆ, ಹಲವು ಹೊಸ ಸತ್ಯಗಳನ್ನು ಆವಿಷ್ಕರಿಸಿದೆ; ಅವುಗಳ ತಿಳುವಳಿಕೆ ಪಡೆದು ತಮ್ಮ ಮಠ ಅಥವಾ ಜಾತಿಯ ತತ್ವಜ್ಞಾನವನ್ನು ಪುನರ್‌ರೂಪಿಸಿಕೊಳ್ಳಬೇಕಿದೆ ಅಥವಾ ಪುನರ್ವ್ಯಾಖ್ಯಾನಗಳಿಗೆ ಒಳಪಡಿಸಬೇಕಿದೆ ಎಂಬ ಅರಿವೇ ಉಂಟಾಗದಂತೆ ಮಠದ ವ್ಯವಸ್ಥೆ ಮತ್ತು ಅದರ ಸುತ್ತಲಿನ ವಾತಾವರಣವನ್ನು ಕಟ್ಟಿಕೊಂಡಿರುವುದು. ಆಧುನಿಕತೆಯ ಎಲ್ಲ ಲೌಕಿಕ ಸೌಲಭ್ಯಗಳನ್ನು-ಭದ್ರವಾದ, ಸುಂದರವಾದ, ತಾಂತ್ರಿಕವಾಗಿ ಸುಸಜ್ಜಿತವಾದ ಕಟ್ಟಡಗಳು, ಹೈಟೆಕ್ ಕಾರುಗಳು ಇತ್ಯಾದಿ- ದೊರಕಿಸಿಕೊಳ್ಳಲು ಹಿಂಜರಿಯದ ಮಠಾಧೀಶರು ತಮ್ಮ ವಿಚಾರಗಳನ್ನು ಆಧುನೀಕರಿಸಿಕೊಳ್ಳಲು ಮಾತ್ರ ಏಕೋ ಹಿಂಜರಿಯುತ್ತಾರೆ!

ಮುರುಘ ರಾಜೇಂದ್ರ ಶರಣರಲ್ಲಿ ನಾನು ಕಂಡ ಒಂದು ದೊಡ್ಡ ಕೊರತೆಯೆಂದರೆ, ವಚನ ಸಾಹಿತ್ಯದಾಚೆಗೂ ಜ್ಞಾನ ದಿಗಂತಗಳಿವೆ ಎಂದು ನಂಬಲು ನಿರಾಕರಿಸಿರುವುದು ಮತ್ತು ಇತರ ಜ್ಞಾನ ಕ್ಷೇತ್ರಗಳ ಗ್ರಂಥಗಳನ್ನು ಓದದಿರುವುದು. ಇದರ ಬಗ್ಗೆ ಒಂದೆರಡು ಬಾರಿ, ಆಕಾಶವಾಣಿ ಕಾರ್ಯಕ್ರಮಗಳನ್ನು ನೀಡಲು ಬಂದಾಗ ಅವರ ಬಳಿಯೇ ಪ್ರಸ್ತಾಪಿಸಿ, ಕೆಲವು ಪುಸ್ತಕಗಳನ್ನು ಸ್ವತಃ ನಾನೇ ಕೊಂಡು ನೀಡಿದ್ದೇನೆ. ಆದರೆ ಅವರು ಓದಿದಂತಿಲ್ಲ. ಬದಲಿಗೆ, ಇತರ ದೃಷ್ಟಿಕೋನಗಳ ಪುಸ್ತಕಗಳನ್ನು ಓದಿದರೆ ತಮ್ಮ ದೃಷ್ಟಿಕೋನ ವಿಚಲಿತವಾಗಿಬಿಡಬಹುದೆಂಬ ಆತಂಕ ವ್ಯಕ್ತಪಡಿಸಿ ನನ್ನನ್ನು ದಂಗುಬಡಿಸಿದರು. ಆದರೆ, ಜ್ಞಾನದ ಹಸಿವೇ ದೊಡ್ಡ ಹಸಿವು. ಆ ಹಸಿವಿನ ಭಾಗವಾಗಿಯೇ ಪರಿವರ್ತನೆಯಾಗಬೇಕು ಎಂದು ಭಾವಿಸುವ ನಾವು, ಬಹಳ ಬಾರಿ ಜ್ಞಾನದ ಹಸಿವನ್ನು ಪೂರೈಸುಕೊಳ್ಳುವ ಧಾವಂತದಲ್ಲಿ ಪರಿವರ್ತನೆಯ ಕೆಲಸವನ್ನು ಮರೆತುಬಿಟ್ಟಿರುವುದೇ ಹೆಚ್ಚು. ಹಾಗಾಗಿ ನನ್ನ ದಂಗಿನ ಹೊರತಾಗಿಯೂ ಸಾಮಾಜಿಕ ಪರಿವರ್ತನೆಯ ಕೆಲಸಕ್ಕೆ ಆದ್ಯತೆ ನೀಡಿರುವ ಶರಣರ ಬಗ್ಗೆ ನನ್ನ ಪ್ರೀತಿ-ಗೌರವ ಹಾಗೇ ಉಳಿದಿದೆ.

ಈ ಪ್ರೀತಿ ಗೌರವಗಳ ಭಾಗವಾಗಿಯೇ, ಈ ವರ್ಷದ ಅಕ್ಟೋಬರ್‌ನಲ್ಲಿ ನಡೆದ ಶರಣ ಸಂಸ್ಕೃತಿ ಉತ್ಸವದ ಭಾಗವಾಗಿ ನನ್ನನ್ನು ಮತ್ತು ನನ್ನ ಪತ್ನಿಯನ್ನು ಮುರುಘಾ ಮಠ 'ಅಂತರ್‌ಜಾತೀಯ ಮದುವೆಗಳು ಮತ್ತು ಸಾಮಾಜಿಕ ಪರಿವರ್ತನೆ' ಎಂಬ ಸಂವಾದ ಕಾರ್ಯಕ್ರಮಕ್ಕೆ ಆಹ್ವಾನಿಸಿದಾಗ ನಾವು ಆಹ್ವಾನವನ್ನು ನಿರಾಕರಿಸದೆ ಹೋಗಬೇಕಾಯಿತು. ಜೊತೆಗೆ ಅಂದೇ ಮಠ ಏರ್ಪಡಿಸಿದ್ದ ಸಾಮೂಹಿಕ ವಿವಾಹ ಸಮಾರಂಭದಲ್ಲಿ ಗೆಳೆಯ ದೇವನೂರ ಮಹಾದೇವ ಅವರ ಮಗಳು ಮಿತಾಳ ವಿವಾಹವೂ ನೆರವೇರುವುದಿದ್ದುದು, ನಾವು ಆಹ್ವಾನವನ್ನು ಒಪ್ಪಲು ಕಾರಣವಾಗಿದ್ದಿರಬಹುದು. ಇದು ನಾನು ಭಾಗವಹಿಸಿದ ಮೊದಲ ಶರಣ ಸಂಸ್ಕೃತಿ ಉತ್ಸವ. ನಾನು ಈವರೆಗೆ ಇದರಲ್ಲಿ ಭಾಗವಹಿಸದಿದ್ದುದಕ್ಕೆ ಕಾರಣ, ಇದು ಸಂತೆಯ ರೀತಿಯಲ್ಲಿ ನಡೆಯುವುದೆಂದು; ಭಕ್ತರ ಹೆಸರಲ್ಲಿ ಕಳ್ಳ ಅಧಿಕಾರಿಗಳೂ, ಸುಳ್ಳ ರಾಜಕಾರಣಿಗಳೂ ಸೇರಿದಂತೆ ಎಲ್ಲ ರೀತಿಯ ಅಂಡ-ಭಂಡರು ಇದರಲ್ಲಿ ಸೇರಿಕೊಂಡು, ಶರಣರು ವರ್ಷ ಪೂರ್ತಿ

ಪ್ರತಿಪಾದಿಸುವ ಜನಪರ ವಿಚಾರ ಪ್ರಣಾಲಿಯ ರುಚಿಯನ್ನೇ ಕೆಡಿಸುವವರೆಂದು. ನಾನು ಈ ಹಿಂದೆ ಸೂಚಿಸಿದ ಮಠವ್ಯವಸ್ಥೆಯ ಮೂಲದಲ್ಲೇ ಇರುವ ದುರಂತವಿದು. ಆಳುವ ಪ್ರಭುಗಳನ್ನು–ಇವರಲ್ಲಿ ಬರೀ ರಾಜಕಾರಣಗಳೇ ಅಲ್ಲದೆ, ಅಧಿಕಾರಿಗಳು, ಉದ್ಯಮಿಗಳು, ಕಂತ್ರಾಟುದಾರರು, ಧರ್ಮಾಧಿಕಾರಿಗಳು, ಸಾಹಿತ್ಯ ಪುಢಾರಿಗಳೂ ಸೇರಿರುತ್ತಾರೆ– ದೂರವಿಟ್ಟು ಮಠ ಕೆಲಸ ಮಾಡಲಾರದು. ಕನಿಷ್ಠ ಆ ಶಕ್ತಿಯನ್ನು ಚಿತ್ರದುರ್ಗದ ಮುರುಘಾಮಠ ಇನ್ನೂ ಗಳಿಸಿಕೊಂಡಿಲ್ಲವೆಂದೇ ಹೇಳಬೇಕು. ಏಕೆಂದರೆ ಆ ಶಕ್ತಿ ಗಳಿಸಿಕೊಂಡೊಡನೆ ಅದು ಮಠವಾಗಿ ಉಳಿದಿರಲಾರದು!

ನಾನು ಅಂದು ಸಾಮೂಹಿಕ ವಿವಾಹ ಸಮಾರಂಭದ ಬಳಿಗೆ ಹೋದಾಗ, ಶರಣರು ಭಾಷಣ ಮಾಡುತ್ತಿದ್ದರು. ಅವರು ತಾವು ಪ್ರತಿ ತಿಂಗಳು ಏರ್ಪಡಿಸುತ್ತಿರುವ ಇಂತಹ ಸಾಮೂಹಿಕ ವಿವಾಹ ಸಮಾರಂಭಗಳ ಮಹತ್ವ ಮತ್ತು ವೈಶಿಷ್ಟ್ಯವನ್ನು ವಿವರಿಸುತ್ತಿದ್ದರು. ಅದರ ಕೆಲವು ಅಂಶಗಳು ನನ್ನನ್ನು ಬೆರಗುಗೊಳಿಸಿದವು. ಅವರು ರಾಹುಕಾಲದಲ್ಲಿ ವಿವಾಹ ಮಾಡಿಸುವರು. ಯಾವ ಪುರೋಹಿತನ ಮಧ್ಯಸ್ಥಿಕೆ ಇಲ್ಲದೆ, ಯಾವ ಶಾಸ್ತ್ರಭಾರಗಳಿಲ್ಲದೆ ಅಂತರ್‌ಜಾತೀಯ ಮತ್ತು ವಿಧವಾ ವಿವಾಹಗಳೂ ಸೇರಿದಂತೆ ಅನೇಕ ಸಾಮಾನ್ಯ ಕುಟುಂಬಗಳ ವಿವಾಹಗಳನ್ನು ಅವರು ನಡೆಸಿದ್ದಾರೆ. ಇಂತಹ ವಿದ್ಯಮಾನಗಳು ಮಠವೊಂದರಲ್ಲಿ ನಡೆಯುವುದು ದೊಡ್ಡ ವಿಷಯವೇ ನಿಜ. ಆದರೆ ಅಂದು ನನಗೆ ಅದಕ್ಕಿಂತ ದೊಡ್ಡ ವಿಷಯವೆನಿಸಿದ್ದು, ಶರಣರ ಈ ಭಾಷಣವನ್ನು ಜನಸಾಮಾನ್ಯರಿಂದಲೇ ತುಂಬಿ ತುಳುಕುತ್ತಿದ್ದ ಆ ಸಭೆ ಪದೇಪದೇ ಚಪ್ಪಾಳೆ ತಟ್ಟಿ ಸ್ವಾಗತಿಸುತ್ತಿದ್ದುದು! ಅಂದಿನ ಸಮಾರಂಭದಲ್ಲಿ ಮಿತಾ ದಂಪತಿಗಳೂ ಸೇರಿದಂತೆ, ನಾಲ್ಕೈದು ಅಂತರ್‌ಜಾತಿ ಜೋಡಿಗಳಿದ್ದವು. ಶರಣರು ಅವರನ್ನೆಲ್ಲ ಎದ್ದು ನಿಲ್ಲಿಸಿ, ಈ ಜೋಡಿಗಳ ಕಡೆ ವಿಶೇಷ ಗಮನ ಸೆಳೆದರು. ಪರೋಕ್ಷವಾಗಿ, ಜಾತಿ ಮೀರಿದ ವಿವಾಹಗಳಿಗೆ ತಮ್ಮ ವಿಶೇಷ ಪ್ರೋತ್ಸಾಹ ಎಂಬುದನ್ನು ಸೂಚಿಸಿದರು. ನಮ್ಮ ಎಷ್ಟು ಜನ ಮಠಾಧಿಪತಿಗಳಿಗೆ ಸಾರ್ವಜನಿಕವಾಗಿ ಹೀಗೆ ಘೋಷಿಸುವ ನೈತಿಕ ಧೈರ್ಯವಿದೆ? ಅದೂ, ವಿಧವಾ ವಿವಾಹ ಮತ್ತು ಅಂತರ್‌ಜಾತಿ ವಿವಾಹಗಳಿಗೆ ಶಾಸ್ತ್ರ ಸಮ್ಮತಿ ಇಲ್ಲದಿರುವುದರಿಂದ ಅವುಗಳನ್ನು ಪ್ರೋತ್ಸಾಹಿಸಲಾರೆ ಎಂದು ಹೇಳುವಂತಹ ಮಠಾಧೀಶರೊಬ್ಬರು ಇಂದು ಮತಾಂತರದ ಹುಯ್ಲಿನಲ್ಲಿ ನಮ್ಮ ಮಠಾಧಿಪತಿಗಳ ನೇತೃತ್ವ ವಹಿಸುತ್ತಿರುವಾಗ!

ಮಧ್ಯಾಹ್ನ ನಡೆದ ಸಂವಾದ ಕಾರ್ಯಕ್ರಮದಲ್ಲಿ ಅಂತರ್ಜಾತಿ ವಿವಾಹಿತರಾದ ನಾವು ನಾಲ್ಕೈದು ಜನ ದಂಪತಿಗಳು ಭಾಗವಹಿಸಿದ್ದೆವು. ನಮ್ಮೊಂದಿಗೆ ಇಂದಿರಾ ಕೃಷ್ಣಪ್ಪ ಸೇರಿದಂತೆ, ರವಿವರ್ಮಕುಮಾರ್, ಬಂಜಗೆರೆ ಜಯಪ್ರಕಾಶ್ ದಂಪತಿಗಳು ಮತ್ತು ಕಾರ್ಯಕ್ರಮ ನಡೆಸಿಕೊಟ್ಟ ಸ್ವಾಮಿ ಆನಂದ್ ಭಾಗವಹಿಸಿದ್ದರು. ಎಲ್ಲರೂ ಅಂತರ್‌ಜಾತಿ ವಿವಾಹದ ತಂತಮ್ಮ ಕಷ್ಟ ಸುಖಗಳನ್ನು ಅಲ್ಲಿ ತಂದೆ ತಾಯಿಗಳೇ ಹೆಚ್ಚಿದ್ದ ಸಭಿಕರೊಂದಿಗೆ ಹಂಚಿಕೊಂಡರು. ಎಲ್ಲರ ಮನವಿ ಒಂದೇ: ನಿಮ್ಮ ಮಕ್ಕಳನ್ನು

ಜಾತಿ ವಾತಾವರಣದಿಂದ ಮುಕ್ತಗೊಳಿಸಿ ಬೆಳೆಸಿ ಹಾಗೂ ನಿಮ್ಮ ಮಕ್ಕಳು ಜಾತಿ ಮೀರಿ ಮದುವೆಯಾಗ ಬಯಸಿದರೆ, ಅವರಿಗೆ ತೊಂದರೆ ಕೊಡದೆ ನೀವೇ ನಿಂತು ಮದುವೆ ಮಾಡಿಸಿ. ಅದರಿಂದ ಸಮಾಜಕ್ಕೂ, ರಾಷ್ಟ್ರಕ್ಕೂ ಒಳಿತಿದೆ, ಸುಖವಿದೆ. ನಾನು ಹೇಳಿದ್ದು: ಜಾತಿ ಬಿಡುಗಡೆಯ ಸುಖ ಅದನ್ನು ಅನುಭವಿಸಿದವರಿಗಷ್ಟೇ ಗೊತ್ತು. ಅದು ಎಷ್ಟೊಂದು ನೆಲೆಗಳ ಬಂಧನಗಳಿಂದ ಬಿಡುಗಡೆ! ಇದು ಭಾರತದಲ್ಲಿ ಎಲ್ಲ ಬಿಡುಗಡೆಗಳಿಗಿಂತ ದೊಡ್ಡ ಬಿಡುಗಡೆ ಮತ್ತು ಎಲ್ಲ ಬಿಡುಗಡೆಗಳ ನಾಂದಿ ಬಿಡುಗಡೆ. ಅಂತರ್‌ಜಾತಿ ವಿವಾಹಗಳ ನಿರ್ಧಾರಗಳ ಹಿಂದೆ ಪ್ರೀತಿ ಮತ್ತು ವೈಚಾರಿಕತೆ ಎರಡೂ ಇರಬೇಕು. ಯಾವೊಂದಿಲ್ಲದಿದ್ದರೂ, ಅವು ತಮ್ಮ ಉದ್ದೇಶಗಳಲ್ಲಿ–ಸಂಪೂರ್ಣ ಸಾಮಾಜಿಕ ಬಿಡುಗಡೆಯಲ್ಲಿ–ವಿಫಲವಾಗುವ ಸಾಧ್ಯತೆ ಇದೆ. ಇಂದು ನಮ್ಮ ಸಾಮಾಜಿಕ ನ್ಯಾಯ ಚಳುವಳಿ, ಇಂತಹ ಪ್ರೀತಿ ಮತ್ತು ವೈಚಾರಿಕತೆಗಳನ್ನು ಆಧರಿಸಿದ ಅಂತರ್‌ಜಾತಿ ವಿವಾಹಗಳನ್ನು ತನ್ನ ಒಂದು ಭಾಗವನ್ನಾಗಿ ಮಾಡಿಕೊಳ್ಳದಿರುವುದೇ, ಅದು ಒಂದು ಜಾತೀಯ ಚಳುವಳಿಯಾಗಿ ಅವನತಿಗೊಳ್ಳಲು ಕಾರಣವಾಗಿರುವುದು.

ಈ ಹಿನ್ನೆಲೆಯಲ್ಲಿ ನನ್ನ ಅಸಮಧಾನವೊಂದನ್ನು ತೋಡಿಕೊಳ್ಳುತ್ತಾ, ಶರಣರು ಜಾತಿಗೊಂದು ಮಠ ಮತ್ತು ಮಠಾಧೀಶರನ್ನು ತಯಾರು ಮಾಡುತ್ತಿರುವುದು ವಿಷಾದನೀಯ ಎಂದೆ. ಶರಣರೇನೋ ಈ ಬಗ್ಗೆ ತಮ್ಮಲ್ಲಿ ಪುನರಾಲೋಚನೆಗೆ ಅವಕಾಶವಿದೆ ಎಂಬಂತೆ ತಲೆಯಲ್ಲಾಡಿಸಿದರು. ಆದರೆ ಆದಿಜಾಂಬವರ ಮಠದ ಸ್ವಾಮೀಜಿ ಕೊನೆಯಲ್ಲಿ ಮಾತನಾಡುತ್ತಾ, ತಮ್ಮ ಅತಿ ಅಸ್ಪೃಶ್ಯ ಜಾತಿಗೆ ಮಠದ ಆವರಣದಲ್ಲಿ ಮಾನ್ಯತೆ ನೀಡಿ ತಮ್ಮನ್ನು ಸಮಾನ ಗೌರವದಿಂದ ನೋಡಿಕೊಳ್ಳುತ್ತಿರುವುದು ನಿಜವಾದ ಪ್ರಗತಿಯ ಹೆಜ್ಜೆಯೇ ಎಂದು ಪ್ರತಿಪಾದಿಸಿದಾಗ, ನನಗೆ ಶರಣರು ಈ ಮೂಲಕ ಮಾಡುತ್ತಿರುವುದು ಹಿರಿದಾದ ಅರ್ಥದಲ್ಲಿ ಒಂದು ದೊಡ್ಡ ಅಂತರ್‌ಜಾತಿ 'ವಿವಾಹ'ವೇ ಎನ್ನಿಸದಿರಲಿಲ್ಲ. ಆದರೆ ಇಲ್ಲಿಗೇ ತೃಪ್ತಿಪಟ್ಟುಕೊಂಡು, ಇದನ್ನು ಜಾತಿನಾಶ ಕಾರ್ಯಕ್ರಮದ ನೆಲೆಯಲ್ಲಿ ವಿಸ್ತರಿಸದೇ ಹೋದರೆ ಒಂದು ದೊಡ್ಡ ಜಾತಿ ವಿಷವ್ಯೂಹವನ್ನೇ ನಿರ್ಮಿಸಿದ ಆರೋಪಕ್ಕೆ ಶರಣರು ಗುರಿಯಾಗಬೇಕಾಗುತ್ತದೆ ಎಂದೂ ಎನ್ನಿಸಿತು.

ಇದನ್ನು ಶರಣರಿಗೆ ತಿಳಿಸಿದಾಗ, ಅವರು 'ನೀವೆಲ್ಲ ನಮ್ಮ ಜೊತೆ ಇದ್ದರೆ ಎಲ್ಲ ಸರಿ ಹೋಗುತ್ತದೆ' ಎಂದರು. ಈಗ ಉತ್ತರಿಸುವ ಹೊಣೆ ನನ್ನದಾಗಿತ್ತು! ನಾನು ನಿಜವಾಗಿಯೂ ಕಷ್ಟಕ್ಕೆ ಸಿಲುಕಿದ್ದೆ...

(ನಂತರದ ಟಿಪ್ಪಣಿ: ಈ ಶರಣರು ಇತ್ತೀಚೆಗೆ ಆಕಾಶದೆತ್ತರದ ಬಸವಣ್ಣನ ಕಂಚಿನ ಪ್ರತಿಮೆ ಸ್ಥಾಪಿಸಲು ಹೊರಟಿರುವುದು ಅವರಲ್ಲಿ ನಾನು ಕಂಡಿದ್ದ ಹೊಸ ಧಾರ್ಮಿಕ ಹಾದಿಗೆ ತದ್ವಿರುದ್ಧವಾಗಿದೆ ಎಂಬುದನ್ನೂ ಇಲ್ಲಿ ದಾಖಲಿಸಬಯಸುವೆ.)

(೧೯ ಡಿಸೆಂಬರ್, ೨೦೦೮)

‘ಅಹಿಂದ’ದ ಅಧಿಕಾರ ರಾಜಕಾರಣ*

ಜಾತಿ ಎಂಬುದೇ ಬ್ರಾಹ್ಮಣೇತರರಿಗೆ, ನಿರ್ದಿಷ್ಟವಾಗಿ ಇಂದಿನ ಹಿಂದುಳಿದ ವರ್ಗಗಳಿಗೆ ಅನ್ಯಾಯಕ್ಕೆ ಕಾರಣವಾಗಿದ್ದರೆ, ಅದನ್ನೇಕೆ ಬಿಟ್ಟು ಬಿಡಬಾರದು? ಜಾತಿಯ ಮರ್ಮವೇ ಅದು : ಅದರಲ್ಲಿನ ಶ್ರೇಣೀಕರಣದ ನೋವು–ಅವಮಾನ–ಅನ್ಯಾಯಗಳು ನಮಗೆ ಮಾತ್ರ; ನಮಗಿಂತ ತಳಗಿನವರಲ್ಲಿ ಅದು ಇನ್ನೂ ಹೆಚ್ಚು ನೋವು ಅವಮಾನ ಅನ್ಯಾಯಗಳನ್ನು ಎಸಗುತ್ತದೆ ಎಂಬುದನ್ನು ನಮ್ಮ ಅರಿವಿಗೆ ತರುವುದಿಲ್ಲ. ನಮ್ಮ ಕಣ್ಣು, ಶ್ರೇಣೀಕರಣದಲ್ಲಿ ನಮಗಿಂತ ಮೇಲಿರುವವರು ಪಡೆದಿರುವ ಹಕ್ಕು–ಅಧಿಕಾರ–ಸಂಪತ್ತುಗಳನ್ನು ಪಡೆಯುವ ಕಡೆಗಷ್ಟೇ. ಸಮಾಜದಲ್ಲಿ ಹಂಚಿ ಹರಡಿ ಹೋಗದಿದ್ದಲ್ಲಿ, ಆ ಹಕ್ಕು–ಅಧಿಕಾರ–ಸಂಪತ್ತುಗಳು ಕೆಡುಕನ್ನಷ್ಟೇ ಉಂಟುಮಾಡುವುವು ಎಂಬ ಪರಿವೆಯೇ ನಮಗಿಲ್ಲ. ಅಂದರೆ ಜಾತಿ ನಮ್ಮ ಮನಸ್ಸುಗಳನ್ನೇ, ನಮ್ಮ ಚಿಂತನಾಕ್ರಮವನ್ನೇ ಶ್ರೇಣೀಕರಿಸಿ ಗೊಳಿಸಿಬಿಟ್ಟಿದೆ. ಹಾಗಾಗಿಯೇ ಬ್ರಾಹ್ಮಣರ ಅಧಿಕಾರದ ಮೇಲಷ್ಟೇ ಕಣ್ಣಿಟ್ಟ ಕಳೆದ ಶತಮಾನದ ಬ್ರಾಹ್ಮಣೇತರ ಚಳುವಳಿಗೆ, ಸಂಖ್ಯಾಬಲವಿದ್ದ ಜಾತಿಗಳಾಚೆಗೆ ಕಣ್ಣು ಹಾಯಿಸುವ ವ್ಯವಧಾನವೇ ಉಂಟಾಗಲಿಲ್ಲ. ಅಷ್ಟೇ ಅಲ್ಲ, ಗಣನೀಯ ಸಂಖ್ಯಾಬಲವಿದ್ದ ದಲಿತರನ್ನು ತನ್ನವರೆಂದು ಭಾವಿಸುವ ಹೃದಯವನ್ನೇ ಪಡೆಯಲಿಲ್ಲ.

ಹಿರಿಯರೇ ಮತ್ತು ಸ್ನೇಹಿತರೇ,

‘ಅಹಿಂದ’ದ ಹುಟ್ಟು ಯಾವ ಹಿನ್ನೆಲೆಯಲ್ಲೇ ಆಗಿರಲಿ, ಅದು ಈಚಿನ ದಿನಗಳಲ್ಲಿ ಪ್ರಕಟಪಡಿಸುತ್ತಿರುವ ಉದ್ದೇಶಗಳು ಏನೇ ಇರಲಿ, ಅದು ಸದ್ಯಕ್ಕೆ ಸಿದ್ಧರಾಮಯ್ಯನವರ ರಾಜಕೀಯ ಅಳಿವು ಉಳಿವಿನ ಹೋರಾಟದ ವೇದಿಕೆಯಾಗಿದೆ ಎಂಬುದನ್ನು ಮರೆಯದೆ, ನಮ್ಮ ಮಾತುಗಳನ್ನು ಆಡಬೇಕಾಗಿದೆ. ಏಕೆಂದರೆ ಇಂದು ಸಿದ್ಧರಾಮಯ್ಯನವರು ನಮ್ಮಂತಹ ಕೆಲವರಲ್ಲಿ ಬದಲೀ ರಾಜಕಾರಣದ ಆಸೆ ಹುಟ್ಟಿಸಿದ್ದಾರೆ. ಹಾಗಾಗಿ ಇಂದು

* ‘ಚಿಂತನ ಅಹಿಂದ’ವು ೩–೧೧–೨೦೦೫ರಂದು ಬೆಂಗಳೂರಿನಲ್ಲಿ ಏರ್ಪಡಿಸಿದ್ದ ‘ಅಹಿಂದ ಚಳುವಳಿ ಮತ್ತು ಸಾಮಾಜಿಕ ಆಯಾಮಗಳು’ ಕುರಿತ ವಿಚಾರ ಸಂಕಿರಣದ ಮೊದಲ ಗೋಷ್ಠಿಯ ಅಧ್ಯಕ್ಷ ಭಾಷಣದ ಬರಹ ರೂಪ

ನಾವು ಆಡುವ ಮಾತುಗಳಿಗೆ ಸದ್ಯದ ರಾಜಕೀಯ ತುರ್ತು ಎಷ್ಟರಮಟ್ಟಿಗೆ ಇರುತ್ತದೋ, ಅಷ್ಟರಮಟ್ಟಿಗೆ ಚಾರಿತ್ರಿಕ ಅರಿವು – ಎಚ್ಚರಗಳೂ ಇರಬೇಕಾಗುತ್ತದೆ. ಏಕೆಂದರೆ ಕಳೆದ ೨೫–೩೦ ವರ್ಷಗಳಲ್ಲಿ ಇಂತಹ ವೇದಿಕೆ, 'ಚಳುವಳಿ'ಗಳ ಮೂಲಕ ಸೃಷ್ಟಿಸಲಾದ ಕನಸುಗಳನ್ನು ನಾವು ನಮ್ಮ ತಪ್ಪು ಮಾತುಗಳಿಂದ, ಬೇಜವಾಬ್ದಾರಿ ನಡವಳಿಕೆಗಳಿಂದ, ಅವರಸರದ ಕಾರ್ಯಕ್ರಮಗಳಿಂದ ಕೈಯಾರ ಕೆಡಿಸಿ ಹಾಕಿದ್ದೇವೆ. ಇದು, ನಿರ್ದಿಷ್ಟ ಉದಾಹರಣೆಗಳು ಅನಗತ್ಯವಾಗುವಷ್ಟು ಸ್ಪಷ್ಟವಾಗಿದೆ.

'ಅಹಿಂದ'ದ ಸದ್ಯದ ಅವಸ್ಥೆಯನ್ನು ಅಥವಾ ಆಶೋತ್ತಗಳನ್ನಷ್ಟೇ ಗಮನಿಸಿ ಇಂದು ಮಾತನಾಡಿದರೆ ಸಾಲದು. ಇಂದು 'ಅಹಿಂದ' ಕುರಿತು ನಮಗೆ ಪ್ರೀತಿ ಇದ್ದರೆ, ಅದು ನಮ್ಮದು ಎಂಬ ಭಾವನೆಯಿಂದ ನಾವು ಇಲ್ಲಿಗೆ ಬಂದಿದ್ದರೆ, ಅದಕ್ಕೆ ಕಾರಣ, ಅದಕ್ಕೊಂದು ದೀರ್ಘ ಪರಂಪರೆ ಇದೆ – ಅದಕ್ಕೊಂದು ಆಳವಾದ, ವಿಶಾಲವಾದ ದರ್ಶನ ಅಂದರೆ Vision ಇದೆ; ನಾವು ಅದಕ್ಕೆ ಹಕ್ಕುದಾರರು ಎಂಬುದೇ ಆಗಿದೆ. ಈ ಪರಂಪರೆಯನ್ನು ಸ್ಥೂಲವಾಗಿ ಅವೈದಿಕ ಪರಂಪರೆ ಎಂದು ಗುರುತಿಸಬಹುದು. ಅಂದರೆ, ಅದು ಬ್ರಾಹ್ಮಣೇತರ ಜಾತಿ ಪರಂಪರೆಯಷ್ಟೇ ಅಲ್ಲ. ಅದೊಂದು ಬದಲೀ ಚಿಂತನಾ ಕ್ರಮ. ಬದಲೀ ದೃಷ್ಟಿಕೋನ, ಮೌಲ್ಯ ಹಾಗೂ ಪಾವಿತ್ರ್ಯಗಳುಳ್ಳ ಪರಂಪರೆ. ಅದು ಯಾವುದೇ ಜಾತಿಗೆ ಅಥವಾ ಜಾತಿಗಳಿಗೆ ಸೀಮಿತವಾಗದ ಜಾತ್ಯತೀತ ಪರಂಪರೆ. ಹಾಗಾಗಿಯೇ ನಾವು ಬುದ್ಧ–ಬಸವ–ಗಾಂಧಿ, ಇತ್ತೀಚೆಗೆ ಕುವೆಂಪು ಅವರನ್ನೂ ಸೇರಿಸಿಕೊಂಡು, ನಮ್ಮ ಪರಂಪರೆಯ ಮೈಲಿಗಲ್ಲುಗಳನ್ನು ಗುರುತಿಸಿಕೊಂಡಿದ್ದೇವೆ.

ಇದು ಬಹಳ ಸ್ಥೂಲವಾದ ಗುರುತಿಸುವಿಕೆ ಎಂದೇ ನನ್ನ ಭಾವನೆ. ಹಾಗೆ ನೋಡಿದರೆ ಈ ಪರಂಪರೆಯನ್ನು ಇನ್ನಷ್ಟು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಲು ಅದನ್ನು ಎರಡು ಧಾರೆಗಳನ್ನಾಗಿ, ಅವು ಪರಸ್ಪರ ಪ್ರತ್ಯೇಕವಲ್ಲದಿದ್ದರೂ, ನೋಡಬಹುದು. ಒಂದು ಅಧ್ಯಾತ್ಮಿಕ ಧಾರೆ, ಇನ್ನೊಂದು ಲೌಕಿಕ ಧಾರೆ. ಈ ಆಧ್ಯಾತ್ಮಿಕ ಧಾರೆ ಬುದ್ಧ–ಬಸವ ವಿವೇಕಾನಂದ – ನಾರಾಯಣಗುರು ಮುಂತಾದ ಸಂತರಿಂದ, ಅವರ ತತ್ವ ಮೀಮಾಂಸೆಯ ಮೂಲಕ ಗುರುತಿಸಲ್ಪಟ್ಟಿದ್ದರೆ; ಲೌಕಿಕ ಧಾರೆ ಮಹಾತ್ಮ ಫುಲೆ–ಶಾಹು ಮಹಾರಾಜ್–ಪೆರಿಯಾರ್–ಸಿ.ಆರ್.ರೆಡ್ಡಿ–ತಂಬೂ ಚೆಟ್ಟಿ–ಕಾಂತರಾಜ ಅರಸ್–ದೇವರಾಜ ಅರಸರಂತಹ (ಉ.ಕರ್ನಾಟಕದಲ್ಲಿ ಅರಟಾಳ ರುದ್ರಗೌಡರು ಮತ್ತು ಸಿದ್ಧಪ್ಪ ಕಂಬಳಿ) ಹೋರಾಟಗಾರ–ಆಡಳಿತಗಾರರಿಂದ, ಅವರ ಕಾರ್ಯಕ್ರಮಗಳ ಮೂಲಕ ಗುರುತಿಸಲ್ಪಟ್ಟಿದೆ. ಗಾಂಧಿ ಲೋಹಿಯಾ–ಅಂಬೇಡ್ಕರ್ ಈ ಎರಡೂ ಧಾರೆಗಳನ್ನು ಅವಿಭಾಜ್ಯವಾಗಿ ಜೋಡಿಸುವ ಪ್ರಯತ್ನ ಮಾಡಿದ ದ್ರಷ್ಟಾರರು ಎಂದು ಹೇಳಬಹುದು.

೨೦೦೫, ಈ ತಾತ್ವಿಕ ಧಾರೆಯ ಇತಿಹಾಸದ ದೃಷ್ಟಿಯಿಂದ, ವಿಶೇಷವಾಗಿ ಕರ್ನಾಟಕ ಚರಿತ್ರೆಯ ದೃಷ್ಟಿಯಿಂದ, ಬಹುಮುಖ್ಯ ವರ್ಷ. ಈಗ್ಗೆ ನೂರುವರ್ಷಗಳ ಹಿಂದಷ್ಟೇ ಈ 'ಅಹಿಂದ'ದ ಮೂಲ ಬೀಜ ಬಿತ್ತಲ್ಪಟ್ಟಿದುದು. ೧೯೦೫ರಲ್ಲಿ ಮೈಸೂರು ಸಂಸ್ಥಾನದಲ್ಲಿ ಮೊಟ್ಟಮೊದಲ ಬ್ರಾಹ್ಮಣೇತರ ಸಂಘಟನೆ, ಲಿಂಗಾಯಿತರ ಸಂಘ ಸ್ಥಾಪನೆಯಾಯಿತು.

ನಂತರದ ವರುಷಗಳಲ್ಲೇ ಒಕ್ಕಲಿಗರ ಸಂಘ, ಮುಸ್ಲಿಮರ ಸಂಘ, ಆದಿದ್ರಾವಿಡರ ಸಂಘ ಮುಂತಾಗಿ ಎಚ್ಚೆತ್ತ ಜಾತಿ – ಜನವರ್ಗಗಳ ಸಂಘಗಳು ಸ್ಥಾಪನೆಯಾದವು. ಇವು ಮೂಲತಃ ರಾಜ್ಯಾಡಳಿತದ ಹೆಚ್ಚು ಕಡಿಮೆ ಎಲ್ಲ ಸ್ಥಾನಮಾನಗಳನು ಮೇಲ್ಜಾತಿಯವೇ (ಬ್ರಾಹ್ಮಣರೇ) ಪಡೆದಿದ್ದಾರೆ ಎಂಬ ಸಾಮಾಜಿಕ ಅರಿವಿನಿಂದ ಹುಟ್ಟಿದ ಬ್ರಾಹ್ಮಣೇತರ ಜಾತಿ ಪ್ರಜ್ಞೆಯ ಕೂಸುಗಳು. ಇವುಗಳೆಲ್ಲದರ ಫಲವೇ ೧೯೧೭ರ ಹೊತ್ತಿಗೆ ರಚನೆಯಾದ ಕರ್ನಾಟಕದ ಪ್ರಪ್ರಥಮ ಬ್ರಾಹ್ಮಣೇತರ ರಾಜಕೀಯ ಸಂಘಟನೆ 'ಪ್ರಜಾಮಿತ್ರ ಮಂಡಳಿ'. ಆದರೆ ನಾವು ಗಮನಿಸಬೇಕಾದ್ದು ಇದಿಷ್ಟನ್ನೇ ಅಲ್ಲ; ಈ ಸಾಮಾಜಿಕ ಜಾಗೃತಿ ಉಂಟಾದದ್ದು, ಬ್ರಿಟಿಷರು ಅಧಿಕಾರವನ್ನು ಹಂತಾನುಹಂತವಾಗಿ ಹಸ್ತಾಂತರ ಮಾಡುವ ಪ್ರಕ್ರಿಯೆ ಆರಂಭದ ಮೊದಲ ಸುಳಿವು ದೊರಕಲಾರಂಭಿಸಿದ ಮೇಲೆ; ಅವರಿಂದ ಹಸ್ತಾಂತರವಾಗುವ ಅಧಿಕಾರ ಯಾರ ಕೈಗೆ ಹೋಗಲಿದೆ ಎಂಬುದನ್ನು ಊಹೆ ಮಾಡಿಕೊಳ್ಳಲು ಸಾಧ್ಯವಾದಾಗಷ್ಟೇ ಎಂಬುದನ್ನೂ ಗಮನಿಸುವುದು ಮುಖ್ಯ.

ಅಂದರೆ, ನಾವು ಇಂದು ಈ 'ಅಹಿಂದ'ವನ್ನು ಬೆಳೆಸುವ, ಅದಕ್ಕೊಂದು ದಿಕ್ಕು ತೋರಿಸುವ ಮಾತನಾಡುತ್ತಿರುವವರು, ಆ ದಿಕ್ಕಿನಲ್ಲಿ ನಡೆಯಲು ಸಜ್ಜಾಗಿರುವವರು ಮುಖ್ಯವಾಗಿ ಗಮನಿಸಬೇಕಾದ್ದು, ಈ ಹಿಂದುಳಿದ ವರ್ಗಗಳ ಚಳುವಳಿ ಅಥವಾ ಸಂಘಟನೆಗೆ ಸ್ಫೂರ್ತಿ ಒದಗಿಸಿದ ಇಪ್ಪತ್ತನೇ ಶತಮಾನದ ಎರಡನೇ ದಶಕದಲ್ಲಿ ಆರಂಭವಾದ ಬ್ರಾಹ್ಮಣೇತರ ಜಾತಿಗಳ ಸಂಘಟನೆ ಮೂಲತಃ ಅಧಿಕಾರದ ಹಂಚಿಕೆಯನ್ನಷ್ಟೇ–ಅದರ ಶೀಲ ಮತ್ತು ಸ್ವರೂಪವನ್ನು ಬದಲಾಯಿಸುವುದಲ್ಲ–ದೃಷ್ಟಿಯಲ್ಲಿಟ್ಟುಕೊಂಡು ರೂಪುಗೊಂಡವು ಎಂಬುದನ್ನು. ಇಂದು 'ಅಹಿಂದ'ವೂ ಅದೇ ದೃಷ್ಟಿಯನ್ನಿಟ್ಟುಕೊಂಡು ಮತ್ತು ಅದೊಂದೇ ದೃಷ್ಟಿಯನ್ನಿಟ್ಟುಕೊಂಡು ಮಾತನಾಡುತ್ತಿದ್ದರೆ, ಈ ಬ್ರಾಹ್ಮಣೇತರ ಚಳುವಳಿಯಿಂದ ಟಿಸಿಲೊಡೆದ ಈ ಹಿಂದುಳಿದ ವರ್ಗಗಳ 'ಚಳುವಳಿ' ಬೆಳೆದೇ ಇಲ್ಲ, ಚರಿತ್ರೆಯಿಂದ ಏನನ್ನೂ ಕಲಿತೇ ಇಲ್ಲ ಎಂದು ಹೇಳಬೇಕಾಗುತ್ತದೆ. ಈ ಹಿನ್ನೆಲೆಯಲ್ಲೇ, ನಾನು ಮೊದಲಲ್ಲೇ ಪರಂಪರೆಯ ಮಾತೆತ್ತಿ, ಅದರ ಆಧ್ಯಾತ್ಮಿಕ ಹಾಗೂ ಲೌಕಿಕ ಧಾರೆಗಳ ಪ್ರಸ್ತಾಪ ಮಾಡಿದ್ದು.

ಬುದ್ಧ ಎನ್ನುತ್ತೇವೆ, ಬಸವ ಎನ್ನುತ್ತೇವೆ, ಅವರು ಜಾತಿ ಪದ್ಧತಿ ವಿರುದ್ಧ ಹೋರಾಡಿದರು ಎಂದು ಬಿಡುತ್ತೇವೆ. ಆದರೆ ಜಾತಿ ಪದ್ಧತಿ ವಿರುದ್ಧದ ಅವರ ಹೋರಾಟ ಬದುಕನ್ನು ಕುರಿತ ಅವರ ಯಾವ ದರ್ಶನದ ಒಂದು ಭಾಗವಾಗಿ ಬಂದಿತ್ತು ಎಂಬುದನ್ನು ನಾವು ಯೋಚಿಸಿದ್ದೇವೆಯೇ? ಆ ದರ್ಶನದ ಭಿತ್ತಿ ಇಲ್ಲದೆ ಹೋಗಿದ್ದರೆ, ಜಾತಿ ಪದ್ಧತಿ ಕುರಿತ ಅವರ ನಿಲುವುಗಳು ಚರಿತ್ರೆಯಲ್ಲಿ ಇಷ್ಟು ಉಜ್ವಲವಾಗಿ ಉಳಿದು ಇನ್ನು ಮಾರ್ದನಿಗೊಳ್ಳಲು ಸಾಧ್ಯವಿರುತ್ತಿತ್ತೇ? ಬುದ್ಧ ಬದುಕಿನ ಅಶಾಶ್ವತತೆಯ ಮೀಮಾಂಸೆಯನ್ನು ಮಂಡಿಸಿದ್ದ. ಜಗತ್ತು ಆಸೆಯಿಂದ ಹುಟ್ಟಿದುದು; ದುಃಖದಿಂದ ಕೂಡಿದೆ ಎಂದ. ಆ ದುಃಖದ ನಿವಾರಣೆಯ ಮಾರ್ಗದ ಅನಾವರಣ ಮಾಡಿದ. ಈ ಅನಾವರಣದ ಭಾಗವಾಗಿ ಜಾತಿ ಪದ್ಧತಿಯ ಅಸಂಬದ್ಧತೆಯ ಬಗ್ಗೆ ಮಾತನಾಡಿದ;

ಜಾತಿ ಎಂಬುವುದಿಲ್ಲ ಎಂದ. ಬಸವಣ್ಣ 'ನಾನು ಮಾದರ ಚನ್ನಯ್ಯನ ಮಗ' ಎಂದೆನ್ನುತ್ತಾ ಜಾತಿ ಪದ್ಧತಿಯಲ್ಲಿ ಅಂತರ್ಗತವಾಗಿರುವ ಶ್ರೇಣೀಕರಣವನ್ನು ಪ್ರಶ್ನಿಸಿದ. ಜಾತಿಪದ್ಧತಿ ವಿರುದ್ಧದ ಕಾರ್ಯಕ್ರಮವಾಗಿ, ಪ್ರತಿಯೊಬ್ಬರ ಆತ್ಮಗೌರವಕ್ಕೂ ಆಧಾರವಾಗಬಲ್ಲ 'ಕಾಯಕ' ಗೌರವದ ಕಲ್ಪನೆಯನ್ನು ಮಂಡಿಸಿದ. ಹೆಚ್ಚು ಗಳಿಸಿದವರು ಇತರರೊಡನೆ ಹಂಚಿಕೊಂಡು ತಿನ್ನುವ ಕಲ್ಪನೆಯನ್ನು ಆಧರಿಸಿದ 'ದಾಸೋಹ' ಪದ್ಧತಿಯನ್ನು ರೂಢಿಸಿಕೊಟ್ಟ, ಇವುಗಳ ಆಧಾರದ ಮೇಲೆ ಜಾತ್ಯಾತೀತವಾದ ಶರಣ ಸಂಸ್ಕೃತಿ ಕಟ್ಟಿದ.

ಇನ್ನು ನಾವು ವಿವೇಕಾನಂದ-ನಾರಾಯಣ ಗುರುಗಳ ಬಗ್ಗೆ ಮಾತನಾಡುವುದೇ ಇಲ್ಲ. ಇದು ದೊಡ್ಡ ಆಶ್ಚರ್ಯ. ಏಕೆಂದರೆ ಈ ಇಬ್ಬರೂ ನಮ್ಮ ಹತ್ತಿರದ ಚರಿತ್ರೆಗೆ ಸೇರಿದವರು. ಕಳೆದ ಶತಮಾನದ ಬ್ರಾಹ್ಮಣೇತರ ಚಳುವಳಿಗೆ ಆಧ್ಯಾತ್ಮಿಕ ಭಿತ್ತಿ ಒದಗಿಸಿದವರು. ವಿವೇಕಾನಂದರು ಹಿಂದೂ ಧರ್ಮದ ಪುನರುಜ್ಜೀವನದ ಕಾರ್ಯಕ್ರಮದ ಅಂಗವಾಗಿ – ಇದಕ್ಕಾಗಿ ಅವರು ವೈದಿಕ ಚೌಕಟ್ಟನ್ನು ಹಲವಾರು ಬಾರಿ ಮೀರಿ ನಿಂತರು – ಮುನ್ನೋಡಿದ 'ಶೂದ್ರ ಭಾರತ'ದ ಪರಿಕಲ್ಪನೆ ಹಾಗೂ ಅದಕ್ಕೆ ಒತ್ತಾಸೆಯಾಗಿ ಮಂಡಿಸಿದ ಸಲಹೆ –ಸೂಚನೆಗಳ ಬಲವಿಲ್ಲದೆ, ನಾವು ಇಂದು ಬಹುವಾಗಿ ಉಲ್ಲೇಖಿಸುವ ನಾಲ್ವಡಿ ಕೃಷ್ಣರಾಜ ಒಡೆಯರರ 'ಶೂದ್ರ ಪ್ರಜ್ಞೆ' ಚಿಗುರೊಡೆಯುತ್ತಿರಲಿಲ್ಲ ಎಂಬುದನ್ನೇಕೆ ಗಮನಿಸುತ್ತಿಲ್ಲ? ಹಾಗೆಯೇ, ವಿವೇಕಾನಂದರ ಕೇರಳ ಯಾತ್ರೆಯೇ ಆಧುನಿಕ ಕಾಲದ ಶೂದ್ರ ಸಂತ ನಾರಾಯಣ ಗುರುಗಳ 'ಒಂದೇ ಕುಲ, ಒಂದೇ ದೈವ' ಚಳುವಳಿಗೆ ನಾಂದಿ ಹಾಡಿದ್ದು ಎಂಬುದನ್ನು ನಾವೇಕೆ ಮರೆಯುತ್ತೇವೆ? ಇಂತಹ ಮರೆವುಗಳೇ ಹಿಂದುಳಿದ ವರ್ಗಗಳ ಚಳುವಳಿಯನ್ನು, ರಾಜಕೀಯ ಅಧಿಕಾರ-ಉದ್ಯೋಗ ಮೀಸಲಾತಿ ಎಂಬೆರಡ ಅಂಶಗಳ ಬೇಡಿಕೆಯನ್ನಾಧರಿಸಿದ ಕಾರ್ಮಿಕ ಸಂಘಗಳ ಮಟ್ಟಕ್ಕೆ ತಂದು ನಿಲ್ಲಿಸಿರುವುದು. ಇಂದು ಕಾರ್ಮಿಕ ಸಂಘಗಳಿಗೆ ಏನು ಗತಿ ಬಂದಿದೆ ಮತ್ತು ಏಕೆ ಎಂದು ಯೋಚಿಸಿದರೆ, ಈ ಮರೆವು ಎಷ್ಟು ದುಬಾರಿ ಎಂಬುದು ಗೊತ್ತಾಗುತ್ತದೆ.

ಬುದ್ಧ-ಬಸವ-ವಿವೇಕಾನಂದ-ನಾರಾಯಣ ಗುರುಗಳನ್ನು ನೆನಪಿಸಿಕೊಳ್ಳುವುದು ಎಂದರೆ ಮುಖ್ಯವಾಗಿ ಎರಡು ವಿಷಯಗಳನ್ನು ನೆನಪಿಸಿಕೊಂಡಂತೆ. ಒಂದು, ಅವರೆಲ್ಲರೂ ಇಡೀ ಸಮಾಜವನ್ನು ಮುನ್ನಡೆಸುವ 'ಇಡಿ' ನಾಯಕರಾಗಿದ್ದರು. ಎಂದೂ ವರ್ಗದ, ಸಮಾಜದ ಒಂದು ಭಾಗದ 'ಬಿಡಿ' ನಾಯಕರಾಗಿ ಗುರುತಿಸಿಕೊಂಡು ತಮ್ಮ ದರ್ಶನವನ್ನು ರೂಪಿಸಿಕೊಡಲಿಲ್ಲ. ಎರಡು, ಅವರು ಆಧ್ಯಾತ್ಮವಾದಿಗಳಾಗಿದ್ದರು. ಆಧ್ಯಾತ್ಮ ಎಂದರೆ ಕೆಲವರು ಹೇಳುವಂತೆ ಅಮೂರ್ತ ಚಿಂತನೆ ಎಂದಲ್ಲ. ಬದಲಾಗಿ ಅಮೂರ್ತಗಳನ್ನು ಚಲನಶೀಲಗೊಳಿಸುವ ಸಾಹಸವದು. ಅಂದರೆ, ಅವರು ಎಲ್ಲವನ್ನೂ ಏಕೆ ಮತ್ತು ಹೇಗೆ ಎಂಬ ಪ್ರಶ್ನೆಗಳ ಆಧಾರದ ಮೇಲೆ ಅವುಗಳ ತಾಳಿಕೆ –ಬಾಳಿಕೆಗಳನ್ನು ನೋಡುವವರಾಗಿದ್ದರು. ಉದಾಹರಣೆಗೆ ಆಸ್ತಿ, ಅಧಿಕಾರಗಳು, ಏಕೆ ಮತ್ತು ಹೇಗೆ ಎಂಬ ಪ್ರಶ್ನೆಗಳನ್ನು ಎದುರುಗೊಳ್ಳದೆ, ಅವಕ್ಕೆ ಅಸ್ತಿತ್ವವೇ ಇಲ್ಲ ಎಂದು ಪ್ರತಿಪಾದಿಸುವವರಾಗಿದ್ದರು. ಹಾಗಾಗಿಯೇ ಅವರೆಲ್ಲರೂ ಅವರ ದಿನಗಳಲ್ಲಿ ಕಟು

ಸಾಮಾಜಿಕ ವಾಸ್ತವವೆನಿಸಿದ ಜಾತಿಪದ್ಧತಿಯನ್ನು ಅಲ್ಲಗೆಳೆದೂ, ಉಳಿದು ಬೆಳೆದರು. ನಮ್ಮ ತನಕವೂ ತಲುಪಿದರು. ಆದುದರಿಂದ ಇಂದು ಆಸ್ತಿ-ಅಧಿಕಾರಗಳ ನೆಲೆಗಳ ಮೇಲೆ ನಿಂತು ಬೆಳೆಯಬಯಸುತ್ತಿರುವ 'ಅಹಿಂದ' ತನ್ನ ಆಧ್ಯಾತ್ಮವಾದಿ ಪರಂಪರೆಯೊಂದಿಗೆ ತನ್ನನ್ನು ಜೋಡಿಸಿಕೊಂಡು ತನ್ನ ದಿಕ್ಕು-ದೆಸೆಗಳನ್ನು ನಿರ್ಧರಿಸಿಕೊಳ್ಳದೆ ಹೋದರೆ, ಬಹುಬೇಗನೆ ಕೊಳೆತು ಕಳೆದುಹೋಗುವ ಅಪಾಯವನ್ನು ಎದುರಿಸುತ್ತದೆ.

ಕರ್ನಾಟಕದ ಹಿಂದುಳಿದ ವರ್ಗಗಳ ತಾಯಿ ಚಳುವಳಿ ಎನಿಸಿರುವ ಬ್ರಾಹ್ಮಣೇತರ ಚಳುವಳಿಯ ಮೊದಲ ಬಲಿ, ಕನ್ನಡ ನಾಡು ಕಂಡ ಮಹಾ ಮೇಧಾವಿಯೂ, ಜಾತ್ಯಾತೀತರೂ, ದಕ್ಷರೂ ಆಗಿದ್ದ ಸರ್. ಎಂ. ವಿಶ್ವೇಶ್ವರಯ್ಯನವರು ಎಂಬುದನ್ನು ನಾವು ಮರೆಯದಿರೋಣ. ಅಂತಹ ಬಲಿಯನ್ನುಂಡ ಚಳುವಳಿಗೆ ಎಂತಹ ಜವಾಬ್ದಾರಿ ಇರಬೇಕಾಗುತ್ತದೆ! ಜಾತಿ ಎಂಬುದೇ ಬ್ರಾಹ್ಮಣೇತರರಿಗೆ, ನಿರ್ದಿಷ್ಟವಾಗಿ ಇಂದಿನ ಹಿಂದುಳಿದ ವರ್ಗಗಳಿಗೆ ಅನ್ಯಾಯಕ್ಕೆ ಕಾರಣವಾಗಿದ್ದರೆ, ಅದನ್ನೇಕೆ ಬಿಟ್ಟು ಬಿಡಬಾರದು? ಜಾತಿಯ ಮರ್ಮವೇ ಅದು : ಅದರಲ್ಲಿನ ಶ್ರೇಣೀಕರಣದ ನೋವು-ಅವಮಾನ-ಅನ್ಯಾಯಗಳು ನಮಗೆ ಮಾತ್ರ; ನಮಗಿಂತ ತಳಗಿನವರಲ್ಲಿ ಅದೂ ಇನ್ನೂ ಹೆಚ್ಚು ನೋವು ಅವಮಾನ ಅನ್ಯಾಯಗಳನ್ನು ಎಸಗುತ್ತದೆ ಎಂಬುದನ್ನು ನಮ್ಮ ಅರಿವಿಗೆ ಬರುವುದಿಲ್ಲ. ನಮ್ಮ ಕಣ್ಣು, ಶ್ರೇಣೀಕರಣದಲ್ಲಿ ನಮಗಿಂತ ಮೇಲಿರುವವರು ಪಡೆದಿರುವ ಹಕ್ಕು-ಅಧಿಕಾರ-ಸಂಪತ್ತುಗಳನ್ನು ಪಡೆಯುವ ಕಡೆಗಷ್ಟೇ. ಸಮಾಜದಲ್ಲಿ ಹಂಚಿ ಹರಡಿ ಹೋಗದಿದ್ದಲ್ಲಿ, ಆ ಹಕ್ಕು-ಅಧಿಕಾರ-ಸಂಪತ್ತುಗಳು ಕಡುಕನ್ನಷ್ಟೇ ಉಂಟುಮಾಡುವುವು ಎಂಬ ಪರಿವೆಯೇ ನಮಗಿಲ್ಲ. ಅಂದರೆ ಜಾತಿ ನಮ್ಮ ಮನಸ್ಸುಗಳನ್ನೇ, ನಮ್ಮ ಚಿಂತನಾಕ್ರಮವನ್ನೇ ಶ್ರೇಣೀಕರಿಸಿಗೊಳಿಸಿ ಬಿಟ್ಟಿದೆ. ಹಾಗಾಗಿಯೇ ಬ್ರಾಹ್ಮಣರ ಅಧಿಕಾರದ ಮೇಲಷ್ಟೇ ಕಣ್ಣಿಟ್ಟ ಕಳೆದ ಶತಮಾನದ ಬ್ರಾಹ್ಮಣೇತರ ಚಳುವಳಿಗೆ, ಸಂಖ್ಯಾಬಲವಿದ್ದ ಜಾತಿಗಳಾಚೆಗೆ ಕಣ್ಣು ಹಾಯಿಸುವ ವ್ಯವಧಾನವೇ ಉಂಟಾಗಲಿಲ್ಲ. ಅಷ್ಟೇ ಅಲ್ಲ, ಗಣನೀಯ ಸಂಖ್ಯಾಬಲವಿದ್ದ ದಲಿತರನ್ನು ತನ್ನವರೆಂದು ಭಾವಿಸುವ ಹೃದಯವನ್ನೇ ಪಡೆಯಲಿಲ್ಲ.

ಬ್ರಾಹ್ಮಣೇತರ ಚಳುವಳಿಯ ನಾಯಕರಲ್ಲಿ ಮುನ್ನೋಟವಿದ್ದ ಏಕೈಕ ನಾಯಕ ಸಿ.ಆರ್. ರೆಡ್ಡಿ ಅವರು ಬ್ರಾಹ್ಮಣೇತರರಿಗೆ ದೊರಕುವ ಸವಲತ್ತುಗಳು ದಲಿತರಿಗೂ ದೊರೆಯಬೇಕೆಂದಾಗ – ಅವರಿಗೆ ಸಾರ್ವಜನಿಕ ಶಾಲಾ ಪ್ರವೇಶದ ಹಕ್ಕನ್ನು ಪ್ರಸ್ತಾಪಿಸಿದಾಗ – ಬ್ರಾಹ್ಮಣೇತರರಿಂದಲೇ ಪ್ರಬಲ ವಿರೋಧವುಂಟಾಗಿ, ಅವರು ಹತಾಶರಾಗಿ ರಾಜ್ಯವನ್ನೇ ಬಿಟ್ಟು ಹೋದರು. ನಂತರ ಮೇಲ್ಜಾತಿಗಳನ್ನೇ ಮೇಲಕ್ಕೆ ತಂದು ಕೂರಿಸುವ ವಿಶ್ವೇಶ್ವರಯ್ಯನವರ ಕೈಗಾರಿಕಾ ಪ್ರಧಾನವಾದ ಆರ್ಥಿಕ ನೀತಿಗೆ ವಿರುದ್ಧವಾಗಿ ಕೃಷಿ ಮತ್ತು ಕೈಕಸುಬು ಪ್ರಧಾನವಾದ ಆರ್ಥಿಕ ಹಾಗೂ ಆಡಳಿತ ನೀತಿಯನ್ನು ಪ್ರತಿಪಾದಿಸಿದ ದಿವಾನ್ ಕಾಂತರಾಜ ಅರಸರ ತಾತ್ವಿಕ ಪ್ರೇರಣೆಯ ಹಿಂದಿದ್ದ ದೃಢ ನಂಬಿಕೆಗಳಿಂದಾಗಿ, ಪ್ರಭುತ್ವದ ಕಡೆಯಿಂದ ಅಸ್ಪೃಶ್ಯರನ್ನು ಜನಸಮುದಾಯದ ಮುಖ್ಯ ಧಾರೆಗೆ ತರುವ ವಿಧಾಯಕ ಕ್ರಮಗಳು ಮುಂದುವರೆದುವು. ಇದರ ಹಿಂದೆ ವಿವೇಕಾನಂದರಿಂದ

ಆಧ್ಯಾತ್ಮಿಕ ಪ್ರೇರಣೆ ಪಡೆದಿದ್ದ ದೊರೆ ನಾಲ್ವಡಿಯವರ ಸಹಾನುಭೂತಿ, ಬೆಂಬಲಗಳೂ ಇದ್ದವು ಎಂಬುದನ್ನೂ ಮರೆಯಲಾಗದು. ಆದರೆ ಈ ವಿಧಾಯಕ ಕ್ರಮಗಳಿಗೆ ಬ್ರಾಹ್ಮಣೇತರ ಚಳುವಳಿಯ ಬೆಂಬಲ ಸಿಗಲಿಲ್ಲ. ಬ್ರಾಹ್ಮಣರ ಬೆಂಬಲವಂತೂ ಇಲ್ಲವೇ ಇಲ್ಲ. ವಿಚಿತ್ರವೆಂದರೆ, ನಂತರದ ದಿನಗಳಲ್ಲಿ ಮತ್ತೆ ಮೈಸೂರು ಸಂಸ್ಥಾನದಲ್ಲಿ ಇಂತಹ ವಿಧಾಯಕ ಕ್ರಮಗಳನ್ನು ಜನಸಮುದಾಯದ ಕಡೆಯಿಂದ ಕೈಗೆತ್ತಿಕೊಂಡವರೆಂದರೆ, ಗಾಂಧೀಜಿಯಿಂದ ಪ್ರೇರಣೆ ಪಡೆದ ಕುದ್ಮಲ್ ರಂಗರಾವ್ ಹಾಗೂ ನರಸಿಂಹ ಅಯ್ಯಂಗಾರ್‌ರಂತಹ ಬ್ರಾಹ್ಮಣರೇ.

ಹೀಗಾಗಿ ಬ್ರಾಹ್ಮಣೇತರ ಚಳುವಳಿ, ಸವಲತ್ತುಗಳು ಸಿಕ್ಕಂತೆಲ್ಲಾ ಬ್ರಾಹ್ಮಣೇತರರ ಜಾತಿವಾದಿ ಚಳುವಳಿಯಾಗಿ ಮಾರ್ಪಟ್ಟು, ಜಾತಿ ಗುಂಪುಗಳ ಒಡಕು ರಾಜಕಾರಣವೇ ಮೇಲುಗೈ ಪಡೆದು, ಅವುಗಳ ಮುಖ್ಯ ಪಕ್ಷವಾದ 'ಪ್ರಜಾಮಿತ್ರ ಮಂಡಳಿ'ಯು ದುರ್ಬಲಗೊಳ್ಳುತ್ತಾ ಹೋಯಿತು. ಅಂತಿಮವಾಗಿ ಅದು ತನ್ನ ಚಹರೆಗಳನ್ನು ಮೈಸೂರು ಕಾಂಗ್ರೆಸ್‌ನಲ್ಲಿ ಕರಗಿಸಿಕೊಂಡಿತು. ಈ ಪ್ರವೃತ್ತಿಯ ಮುಂದುವರಿಕೆಯೇ ಇಂದಿನ ಒಳಮೀಸಲಾತಿ ಪ್ರಸ್ತಾವನೆ. ಈ ಒಳಮೀಸಲಾತಿ ಕುರುಬ-ಈಡಿಗ ಇತ್ಯಾದಿಗಳಿಗಷ್ಟೇ ನಿಲ್ಲುವಂತಹುದೇ? ಅದಕ್ಕೆ ನಿಲುಗಡೆ ಎಂಬುದಿದೆಯೇ? ಈ ನಿಲುಗಡೆಯನ್ನು ಅದು ತಲುಪುವ ವೇಳೆಗೆ ಅದು ಸಮಾಜದ ಎಷ್ಟು 'ಒಳ'ಗಳನ್ನು ಕೊರೆಯುತ್ತಾ ಹೋಗಬಹುದು? ಈ ಕಡೆ ಗಮನವಿರದ ಯಾವುದೇ ಚಳುವಳಿ ಸಾಮಾಜಿಕ ಚಳುವಳಿ ಎನ್ನಿಸಿಕೊಳ್ಳಲಾರದು. ನಮ್ಮ ಕಣ್ಮುಂದೆಯೇ ಇತ್ತೀಚಿನ ದಾರುಣ ಉದಾಹರಣೆ ಇದೆ. ಕರ್ನಾಟಕ ಕಂಡ ಅತ್ಯಂತ ಸಮರ್ಥ ಹಾಗೂ ನ್ಯಾಯಯುತ ಚಳುವಳಿಯೆನಿಸಿಕೊಂಡಿದ್ದ ದಲಿತ ಚಳುವಳಿಯನ್ನು ಬಲಿ ತೆಗೆದುಕೊಂಡಿದ್ದಾದರೂ ಯಾವುದು?

ಜಾತಿ ಎಂದರೆ ತಾರತಮ್ಯ. ಇದನ್ನಿಟ್ಟುಕೊಂಡು ಸಮಾನತೆಯೆಡೆಗೆ ಚಳುವಳಿಯನ್ನು ನಡೆಸುವುದು ಸಾಧ್ಯವೇ? ಜಾತಿಯನ್ನಿಟ್ಟುಕೊಂಡೇ ಎಲ್ಲಾ ಜಾತಿಗಳಿಗೂ ಸಮಾನ ಅಧಿಕಾರ ಸಾಧ್ಯವೇ? ಅಧಿಕಾರವೆಂದರೆ ಏನು? ಅದೇನು ಅಂಕಗಣಿತದ ಆಟವೇ, ಲೆಕ್ಕಾಚಾರದಂತೆ ಹಂಚಲು? ದೇವರಾಜ ಅರಸರ ಹೆಸರು ಹೇಳುತ್ತೇವೆ. ಅದೇ ಉಸಿರಿನಲ್ಲಿ ಅವರು ಹಿಂದುಳಿದ ಜಾತಿಗೆ ಸೇರಿದವರಲ್ಲ ಎಂದು ಹೇಳುತ್ತೇವೆ! ಅದೇನೇ ಇರಲಿ, ದೇವರಾಜ ಅರಸರ ಹಿಂದುಳಿದ ಜಾತಿಗಳ ಪ್ರಗತಿಪರ ರಾಜಕಾರಣ ಅವರ ಕಾಲದಲ್ಲೇ, ಅವರೇ ಅದಕ್ಕೆ ಬಲಿಯಾಗುವ ರೀತಿಯಲ್ಲಿ ಏಕೆ ಅವಸಾನವಾಯಿತು? ಅರಸರು ಒಂದು ಕಡೆ ಈ ಪ್ರಗತಿಪರ ರಾಜಕಾರಣ ನಡೆಸಲು, ಇನ್ನೊಂದೆಡೆ ಭ್ರಷ್ಟಾಚಾರವನ್ನು ಸಂಸ್ಥೀಕರಿಸುವ ಕೆಲಸವನ್ನು ಮಾಡುವ ಅನಿವಾರ್ಯತೆಗೂ ಈಡಾಗಬೇಕಾಯಿತು ಏಕೆ? ಈ ಪ್ರಶ್ನೆಗಳನ್ನು ಈಗ ಕೇಳಿಕೊಳ್ಳಬೇಕಲ್ಲವೆ? ಇದೆಲ್ಲವುಗಳ ಪರಿಣಾಮ ಎಂತಹುದು ಎಂಬುದನ್ನು ಇಲ್ಲಿ ವಿವರಿಸುವ ಅಗತ್ಯವಿಲ್ಲ. ಶೀಲವಿಲ್ಲದ ಯಾವುದೇ ಚಳುವಳಿ ಬೆಳೆಯಲಾರದು. ಇದು ದೇವರಾಜ ಅರಸರ ರಾಜಕಾರಣದ ದುರಂತದಿಂದ ಕಲಿಯಬೇಕಾದ ಪಾಠ. ಸಾಮಾಜಿಕ ನ್ಯಾಯವೆಂಬುದು ಕೇವಲ ಸಮಾಜದ ಕೆಳವರ್ಗಗಳಿಗೆ ಕೆಲ ಸವಲತ್ತುಗಳನ್ನು

ಮತ್ತು ಅಧಿಕಾರದ ನಾಯಕತ್ವವನ್ನು ಕಲ್ಪಿಸಿಕೊಡುವುದಲ್ಲ. ಇಡೀ ಸಮಾಜದ ಒಳಿತನ್ನು ಅನುಸಂಧಾನಿಸಿಕೊಂಡು ರೂಪಿಸಿಕೊಡಬೇಕಾದ / ಪಡೆಯಬೇಕಾದ ನ್ಯಾಯ.

ಇಂದು ಸಿದ್ಧರಾಮಯ್ಯನವರು ಕುಟುಂಬ ರಾಜಕಾರಣದ ವಿರುದ್ಧ ಗುಡುಗುತ್ತಿದ್ದಾರೆ. ಅದೇ ತಮ್ಮ ಪದಚ್ಯುತಿಗೆ ಕಾರಣವಾಯಿತು ಎಂದು ಹೇಳುತ್ತಿದ್ದಾರೆ. ನಿಜವಿರಬಹುದು. ಕುಟುಂಬದ ರಾಜಕಾರಣ ನೆಲೆಗಳಾದರೂ ಯಾವುವು? ಜಾತಿ–ಹಣ–ಅಧಿಕಾರದ ಪರಸ್ಪರ ಸಂಬಂಧಗಳು. ಯಾರಾದರೂ ತಮ್ಮ ಮಕ್ಕಳಿಗೆ ರಾಜಕೀಯ ವಾರಸುದಾರಿಕೆಗಾಗಿ ಏಕೆ ಹಂಬಲಿಸುವರು? ಏಕೆಂದರೆ ಅಲ್ಲಿ ಹಣ–ಅಧಿಕಾರವಿದೆ; ಅದಕ್ಕೆ ಜಾತಿ ರಾಜಕಾರಣದ ಆಧಾರವಿದೆ. ಇದೊಂದು ಸಾಮಾಜಿಕ ಶ್ರೇಣೀಕರಣವಿರುವ ಊಳಿಗ ವ್ಯವಸ್ಥೆಯಿಂದ ಪೋಷಿಸಲ್ಪಟ್ಟ ಮತ್ತು ಅದರಿಂದ ಮಾತ್ರ ಉಳಿದುಕೊಳ್ಳಬಹುದಾದ ಸಾಮ್ರಾಜ್ಯ. ಅದುದರಿಂದ ಸಿದ್ಧರಾಮಯ್ಯನವರು 'ಅಹಿಂದ'ದ ನಾಯಕರಾಗಿ ಮೊದಲು ಮಾಡಬೇಕಾದ ಕೆಲಸ, ರಾಜಕಾರಣದಲ್ಲಿನ ಜಾತಿ–ಹಣ–ಅಧಿಕಾರಗಳ ಗುದಮುರಿಗೆಯನ್ನು ನಾಶಮಾಡುವ ಸಾಹಸಕ್ಕೆ ಕೈ ಹಾಕುವುದೇ ಆಗಿದೆ. ಇಲ್ಲದಿದ್ದರೆ ಸ್ವತಃ ಅವರು ಸಹಜವಾಗಿಯೇ, ತಮ್ಮದೇ ಕುಟುಂಬ ರಾಜಕಾರಣಕ್ಕೆ ಬಲಿಯಾಗಬೇಕಾಗುತ್ತದೆ.

ಈ ಸಾಹಸಕ್ಕೆ ಕೈ ಹಾಕಬಯಸುವವರು ಒಂದು ಹೊಸ ರಾಜಕೀಯ ದರ್ಶವನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಇಲ್ಲದೆ ಹೋದರೆ, ರಾಜಕೀಯ ಉಳಿವಿಗಷ್ಟೇ ಅನುಕೂಲಿತವಾದ ಪ್ರತಿಕ್ರಿಯೆಗಳಿಗೆ ಮೊರೆಹೋಗಬೇಕಾಗುತ್ತದೆ. ಉದಾಹರಣೆಗೆ, ಇನ್‌ಫೋಸಿಸ್‌ನ ನಾರಾಯಣಮೂರ್ತಿ ಅವರ ಭೂದಾಹದ ಬಗ್ಗೆ ದೇವೇಗೌಡರು ಮಾಡಿದ ಟೀಕೆಯನ್ನು, ನನ್ನ ಶತ್ರುವಿನ ಶತ್ರು ನನ್ನ ಮಿತ್ರ ಎಂಬ ಸರಳೀಕೃತ ರಾಜಕಾರಣದ ಆಧಾರದ ಮೇಲೆ ಖಂಡಿಸುವ ಅನಿವಾರ್ಯತೆಗೆ, ಇಕ್ಕಟ್ಟಿಗೆ ಸಿಕ್ಕಿಕೊಳ್ಳಬೇಕಾಗುತ್ತದೆ. ಸಿದ್ಧರಾಮಯ್ಯನವರು ಮಾಡಿದ್ದು ಅದನ್ನೇ. ಇಂದು ಜಾಗತೀಕರಣ ನಮ್ಮ ಆರ್ಥಿಕ–ಸಾಮಾಜಿಕ–ಸಾಂಸ್ಕೃತಿಕ ಬೇರುಗಳನ್ನೇ ಕತ್ತರಿಸಿ ಹಾಕುತ್ತಾ, ನಮ್ಮ ಕಾಲ ಕೆಳಗಿನ ನೆಲವನ್ನೇ ಜರುಗಿಸ ಹೊರಟಿದೆ. ಸರ್ಕಾರಿ ಕಾಮಗಾರಿ ಗುತ್ತಿಗೆದಾರರು, ನಂತರ ಹೆಂಡದ ದೊರೆಗಳು ನಡೆಸುತ್ತಿದ್ದ ಸಮಾನಾಂತರ ಸರ್ಕಾರಗಳನ್ನು ದೂಷಿಸುತ್ತಿದ್ದ ನಾವು, ಈಗ ಐ.ಟಿ. ಉದ್ಯಮದ ಗುತ್ತಿಗೆದಾರರು ಕಟ್ಟುತ್ತಿರುವ ಸಮಾನಾಂತರ ಪ್ರಪಂಚವನ್ನು ಮೆಚ್ಚುಗೆಂಯ ಬೆರಗುಗಣ್ಣುಗಳಿಂದ ನೋಡುತ್ತಾ ಕೂತಿದ್ದೇವೆ. ನೀವು ವಶಪಡಿಸಿಕೊಳ್ಳಲೆತ್ನಿಸುತ್ತಿರುವ ಸರ್ಕಾರಕ್ಕೆ ಈ ಸಮಾನಾಂತರ ಪ್ರಪಂಚದಲ್ಲಿ ಮೂರು ಕಾಸಿಗೂ ಬೆಲೆ ಇರಲಾರದು. ಇಷ್ಟು ಆಳವಾಗಿ ಅಥವಾ ದೀರ್ಘಕಾಲೀನವಾಗಿ ಯೋಚನೆ ಮಾಡುವಷ್ಟು ವ್ಯವಧಾನ 'ಅಹಿಂದ'ಕ್ಕೆ ಇನ್ನೂ ಸಿದ್ಧಿಸಿಲ್ಲವೆಂದು ಸದ್ಯಕ್ಕೆ ಇಟ್ಟುಕೊಳ್ಳೋಣ. ಆದರೆ ಭ್ರಷ್ಟಾಚಾರ ವಿರೋಧಿ ಕಾರ್ಯಾಚರಣೆಯಲ್ಲಿ ಎದುರಾಗಿರುವ ಅಸಹಾಯಕತೆ ಬಗ್ಗೆ ನ್ಯಾ. ವೆಂಕಟಾಚಲ ದಿನನಿತ್ಯ ಹಾಕುತ್ತಿರುವ ಒಂಟಿ ಕೂಗಿಗೆ ಒಂದು ಬೆಂಬಲದ ಮಾತನ್ನು ಆಡಲಾಗದಷ್ಟು 'ಸಾಮಾಜಿಕ ನ್ಯಾಯ ರಾಜಕಾರಣ'ದ ಗರ ಬಡಿದುಕೊಂಡರೆ? ಜಾತಿ ನ್ಯಾಯದ ಹೊರತಾಗಿ ಮಿಕ್ಕಿದ್ದೆಲ್ಲದಕ್ಕೂ ಅಸೂಕ್ಷ್ಮವಾಗಿ ಹೋಗಿರುವಂತೆ

ತೋರುವ 'ಅಹಿಂದ'ದ ನಾಯಕತ್ವಕ್ಕೆ ಮುಖ್ಯಮಂತ್ರಿ ಪದವಿ ಸಿಕ್ಕಿದರೂ ಫಲವೇನು? ಫಲವಿದ್ದರೂ ಅದನ್ನು ಉಣ್ಣುವವರು ಯಾರು? ಅದಕ್ಕೇ ನಾನು ಮೊದಲೇ ಹೇಳಿದ್ದು, ಅಧಿಕಾರದ ಪರಿಕಲ್ಪನೆಯನ್ನು ಆಧ್ಯಾತ್ಮೀಕರಿಸಿಕೊಳ್ಳದೆ – ಕನಿಷ್ಟ ಕಾಂತರಾಜೇ ಅರಸರ ಮಟ್ಟಕ್ಕಾದರೂ – ಅಂದರೆ ನನಗೆ ಅಧಿಕಾರ ಏಕೆ? ಮತ್ತು ಹೇಗೆ? ಎಂಬ ಪ್ರಶ್ನೆಗಳನ್ನು ಎದುರಿಸದೆ ಮಾಡುವ ಯಾವುದೇ ರಾಜಕಾರಣ, ಅದು ಮುಂದುವರಿದವರೇ ಮಾಡಲಿ, ಹಿಂದುಳಿದವರೇ ಮಾಡಲಿ, ಅದರ ಫಲಾನುಭವಿಗಳು ಕೆಲವೇ ಕೆಲವರು ಮಾತ್ರ, ಮಿಕ್ಕವರು ಕೊಸರಿಗಾಗಿ ಕಾಯುತ್ತಾ ಕೂತಿರಬೇಕಷ್ಟೆ.

ಯಾರೇ ಏನೇ ಹೇಳಲಿ, ಹೊಸ ರಾಜಕಾರಣದ ಸುಪ್ತ ಬಯಕೆ ಜನರಲ್ಲಿ ಇಂದು ಒಡಮೂಡಿದೆ. ಅವರು ಹಳೇ, ಜಡ್ಡುಗಟ್ಟಿದ ರಾಜಕಾರಣದಲ್ಲಿ ಮುಳುಗಿದಂತೆ ತೋರುತ್ತಿದ್ದರೂ, ಹೊಸ ರಾಜಕಾರಣದ ನಾಯಕನಿಗಾಗಿ ಕಾಯುತ್ತಿದೆ. ಆ ತವಕ ಇಂದಿನ ಸಾಮಾಜಿಕ ಅಶಾಂತಿ ಗೊಂದಲದ–ವಾತಾರವಣದಲ್ಲಿ, ಯಾವುದೋ ಒಂದು ತರಂಗಾಂತರದಲ್ಲಿ ಅನುರಣಿಸುತ್ತಿದೆ. ಈ ತರಂಗಾಂತರಕ್ಕೆ ಕಿವುಡಾಗಿರುವವರಿಗೆ ಹಣ ಮತ್ತು ಜಾತಿ ಶಕ್ತಿಗಳಾಚೆಯ ರಾಜಕಾರಣದ ಸಾಧ್ಯತೆಯೇ ಹೊಳೆಯಲಾರದು. ಅವರು ಹೊಸ ರಾಜಕಾರಣವನ್ನೂ ಮಾಡಲಾರರು. ಸಿದ್ಧರಾಮಯ್ಯನವರಿಗೆ ಇದೊಂದು ಐತಿಹಾಸಿಕ ಸಂದರ್ಭ, ಹೊಸ ರಾಜಕಾರಣದ ನಾಂದಿ ಹಾಡಲು. ಅಪಾರ ಹಣ ಹಾಗೂ ಜಾತಿ ಲೆಕ್ಕಾಚಾರವಿಲ್ಲದ ಹೊಸ ರಾಜಕಾರಣ ಮಾಡುವ ಧೈರ್ಯವನ್ನೂ, ವಿವೇಕವನ್ನೂ ಅವರು ತೋರಬೇಕಿದೆ. ಖಂಡಿತ ಕರ್ನಾಟಕ ಅವರಿಗೆ ಸ್ಪಂದಿಸಲಿದೆ – ಅವರನ್ನು ಮುಖ್ಯಮಂತ್ರಿ ಮಾಡಿ ಬಿಡುತ್ತದೆ ಎಂದೇನೂ ನಾನು ಹೇಳುತ್ತಿಲ್ಲ. ಅದಕ್ಕಿಂತ ದೊಡ್ಡ ಸ್ಥಾನ ಅವರಿಗೆ ನೀಡಲಿದೆ. ಗೋಪಾಲಗೌಡರ ಉದಾಹರಣೆ ನಮ್ಮ ಮುಂದೆಯೇ ಇದೆ. ಆ ಸ್ಥಾನವನ್ನು ಕಲ್ಪಿಸಿಕೊಳ್ಳುವ ತಾಕತ್ತು ಸಿದ್ಧರಾಮಯ್ಯ ಅವರಲ್ಲಿ ಸಂಚಯವಾಗಿದೆ ಎಂದು ಭಾವಿಸಿಯೇ, ಇಷ್ಟು ಮಾತುಗಳನ್ನು ನಾನು ಆಡಿರುವೆ.

ಇಂತಹ ರಾಜಕಾರಣವು ಸಮಗ್ರವೂ, ಜಾತ್ಯತೀತವೂ ಆಗಿರಬೇಕಾಗುತ್ತದೆ. ಗಾಂಧೀಜಿ ಅದರ ಹೊಳಹು ಬಿಟ್ಟು ಹೋಗಿದ್ದಾರೆ. ಲೋಹಿಯಾ ಹಾಗೂ ಅಂಬೇಡ್ಕರ್ ಅದನ್ನು ವಿಸ್ತರಿಸಿದ್ದಾರೆ. ನಮ್ಮದೇ ಸ್ಥಳೀಯ ಪ್ರಯೋಗಗಳಾದ ದಲಿತ ಮತ್ತು ರೈತ ಚಳುವಳಿಗಳು ಈ ವಿಸ್ತರಣೆಯ ಎಡರು – ತೊಡರುಗಳ ಕಡೆ ಬೊಟ್ಟು ಮಾಡಿವೆ. ಇವುಗಳ ಆಧಾರದ ಮೇಲೆ ಕಟ್ಟಿದೆ ತಾತ್ವಿಕ ನೆಲೆಯಲ್ಲಿ ಸಿದ್ಧರಾಮಯ್ಯನವರು ರಾಜಕಾರಣ ಮಾಡುವುದಾದರೆ 'ಅಹಿಂದ'ಕ್ಕೆ ಜೀವ ಹಾಗೂ ಗೌರವ ಎರಡೂ ದಕ್ಕಿತು. ಇಲ್ಲವಾದರೆ 'ಅಹಿಂದ' ಮತ್ತು ಸಿದ್ಧರಾಮಯ್ಯ ಒಟ್ಟಿಗೇ – ಅವರಿಗೆ ಮುಖ್ಯಮಂತ್ರಿತ್ವ ದೊರಕಿದರೂ, ಅದರ ಜೊತೆಗೇ – ಇತಿಹಾಸದ ಕಸದ ಬುಟ್ಟಿಗೆ ಎಸೆಯಲ್ಪಡುತ್ತಾರೆ.

(ಮಾರ್ಚ್, ೨೦೦೬)

■

ಸುಲಭ ರಾಜಕಾರಣದ ಸಂದಿಗ್ಧಗಳು

ಸಿದ್ಧರಾಮಯ್ಯ ಮುಖ್ಯ ಮಂತ್ರಿಯಾಗಬೇಕೆಂಬುದೇ ಅವರಲ್ಲಿ ವಿಶ್ವಾಸವಿಟ್ಟಿರುವ ಎಲ್ಲರ ಆಸೆ. ಆದರೆ ಅವರು ಅದಕ್ಕಾಗಿ ಮಾಡುವ ರಾಜಕಾರಣ ಎಂತಹದು ಎಂಬುದರ ಬಗ್ಗೆಯೂ, ಹಾಗೆ ಆಸೆ ಪಟ್ಟ ಎಲ್ಲರ ಆತಂಕ–ಕುತೂಹಲ–ಕಾಳಜಿಗಳಿವೆ. ಜಾಗತೀಕರಣದ ಆಘಾತಗಳನ್ನು ಎದುರಿಸುವಂತಹ ರಾಜಕಾರಣ ಮಾಡುವ ಮೂಲಕ ಅವರು ಮುಖ್ಯಮಂತ್ರಿಯಾಗುವುದಾದರೆ ಮಾತ್ರ ಅವರು ತಮ್ಮ ಕೇಂದ್ರ ಕಾಳಜಿಯನ್ನು ಮಾಡಿಕೊಂಡಿರುವ ಹಾಗೂ ಯಾವುದರ ಆಧಾರದ ಮೇಲೆ ಅವರು ಹೊಸ ರಾಜಕಾರಣದ ಆಸೆ ಹುಟ್ಟಿಸಿದ್ದರೋ, ಆ ಸಾಮಾಜಿಕ ನ್ಯಾಯದ ಪ್ರಶ್ನೆಯನ್ನು ಇಡಿಯಾಗಿ ಎದುರಿಸಬಲ್ಲರು. ಇದು ಕಾಂಗ್ರೆಸ್‌ನಲ್ಲಿ ಸಾಧ್ಯವೇ? ಅಸಾಧ್ಯವೆನಿಸುವುದಾದರೆ, ಸಿದ್ಧರಾಮಯ್ಯನವರು ಸದ್ಯದ ರಾಜಕಾರಣಕ್ಕೆ ಇರುವ ಅರ್ಥವಾದರೂ ಏನು? ಕುರುಬನೊಬ್ಬ ಮುಖ್ಯಮಂತ್ರಿಯಾಗಿ ಕುರುಬ ಜನಾಂಗದವರನ್ನು ಸಂತೋಷ ಪಡಿಸುವುದಷ್ಟೇ ಅವರ ಈ ಸಾಮಾಜಿಕ ನ್ಯಾಯ ರಾಜಕಾರಣದ ಉದ್ದೇಶವಾದರೆ, ಅಂತಹ ಮುಖ್ಯಮಂತ್ರಿತ್ವವನ್ನು ಉಳಿಸಿಕೊಳ್ಳುವುದೇ ಕಾಂಗ್ರೆಸ್‌ನಲ್ಲಿ ಸಿದ್ಧರಾಮಯ್ಯನವರಿಗೆ ದೊಡ್ಡ ಹಾಗೂ ಏಕೈಕ ಉದ್ಯೋಗವಾದೀತು. ಅದು ಸಿದ್ಧರಾಮಯ್ಯನವರಂತಹ ಸ್ವಾಭಿಮಾನಿ ಹಾಗೂ ಮರ್ಯಾದಸ್ಥ ರಾಜಕಾರಣಿಗೆ ನರಕವೇ ಸರಿ, ಅವರು ಆವರೆಗೆ ಸ್ವಾಭಿಮಾನ ಹಾಗೂ ಮರ್ಯಾದಸ್ತಿಕೆ ಉಳಿಸಿಕೊಂಡಿದ್ದರೆ!

ಕೊನೆಗೂ ಸಿದ್ದರಾಮಯ್ಯ ಕಾಂಗ್ರೆಸ್ ಸೇರಿದ್ದಾರೆ. ಇದನ್ನು ತಮ್ಮ ರಾಜಕೀಯ ಜೀವನದ ಅನಿವಾರ್ಯತೆ ಎಂದು ಬಣ್ಣಿಸಿಕೊಂಡಿದ್ದಾರೆ. ಇದೇ ಸಂದರ್ಭದಲ್ಲಿ ತಾವೇನೂ ಸಂನ್ಯಾಸಿಯಲ್ಲವೆಂದು (ಹಾಗೆಂದು ಭಾವಿಸಿದ್ದವರಾದರೂ ಯಾರು?) ಹೇಳಿಕೊಂಡು, ಈ ಅನಿವಾರ್ಯತೆ ಎಂಬುದರ ಅರ್ಥವನ್ನು ಸೂಚ್ಯವಾಗಿ ನಿರೂಪಿಸಿದ್ದಾರೆ. ಆ ಮೂಲಕ ರಾಜ್ಯದ ಮುಖ್ಯಮಂತ್ರಿಯಾಗುವ ತಮ್ಮ ಕನಸನ್ನು ಜೀವಂತವಾಗಿರಿಸಿಕೊಂಡಿರುವ ಸಂದೇಶವನ್ನು ತಮ್ಮ ಅಭಿಮಾನಿ–ಅನುಯಾಯಿಗಳಿಗೆ ರವಾನಿಸಿದ್ದಾರೆ. ಆದರೆ ಈ ಸಂದೇಶದ ಜೊತೆಗೇ ಈ ಸಂದರ್ಭದಲ್ಲಿ ಪತ್ರಿಕೆಗಳ

ಮುಖಪುಟಗಳಲ್ಲಿ ಪ್ರಕಟವಾಗಿರುವ ಚಿತ್ರಗಳಲ್ಲಿ, ಸಿದ್ಧರಾಮಯ್ಯ ಮಂದಸ್ಮಿತರಾಗಿ ಹೆಗಲ ಮೇಲೆ ಕೈ ಹಾಕಿರುವ ವ್ಯಕ್ತಿಗಳ ಚಹರೆಗಳನ್ನು ಬಲ್ಲ ಕರ್ನಾಟಕದ ಜನತೆಗೆ ಇನ್ನೊಂದು ಸಂದೇಶವೂ ರವಾನೆಯಾಗಿದೆ: ಅಧೋಗತಿಗೆ ಇಳಿದಿರುವ ಕರ್ನಾಟಕದ ರಾಜಕಾರಣಕ್ಕೆ ಸದ್ಯಕ್ಕೆ ಮುಕ್ತಿಯಿಲ್ಲ.

ಸಿದ್ಧರಾಮಯ್ಯ ಈಚಿನ ವರ್ಷಗಳಲ್ಲಿನ ರಾಜ್ಯದ ರಾಜಕಾರಣಗಳ ಪೈಕಿ ಸ್ವಲ್ಪ ವಿಭಿನ್ನವಾಗಿ ಕಂಡವರು. ಗೋಪಾಲಗೌಡರ ನಿಧನಾನಂತರ ಕ್ರಮೇಣ ವಿಶ್ವಾಸ ಕಳೆದುಕೊಳ್ಳುತ್ತಾ ಹೋದ ಸಮಾಜವಾದಿ ರಾಜಕಾರಣವು ಜೆ.ಹೆಚ್. ಪಟೇಲರ ಮಂತ್ರಿಗಿರಿ–ಮುಖ್ಯಮಂತ್ರಿಗಿರಿಗಳು ಮುಗಿಯುವ ಹೊತ್ತಿಗೆ ಸಮಾಧಿಯಾಗಿ ಹೋಗಿದ್ದ ಸಂದರ್ಭದಲ್ಲಿ, ಜನಸಾಮಾನ್ಯರ ರಾಜಕಾರಣದ ಬಗ್ಗೆ ಮತ್ತೆ ಆಸೆ ಹುಟ್ಟಿಸಿದವರು ಸಿದ್ಧರಾಮಯ್ಯ. ಅಂತಹ ಪ್ರಖರ ಸಮಾಜವಾದಿ ತಾತ್ವಿಕ ಅಥವಾ ಹೋರಾಟದ ರಾಜಕಾರಣದ ಹಿನ್ನಲೆ ಇರದಿದ್ದರೂ ತಮ್ಮ ಪಾರದರ್ಶಕ ವ್ಯಕ್ತಿತ್ವ ಹಾಗೂ ಪ್ರಾಮಾಣಿಕ ನಡವಳಿಕೆಯ ಮೂಲಕ, ದಿನೇ ದಿನೇ ಹೊಲಸಾಗಿ ಅಧ್ವಾನಗೊಳ್ಳುತ್ತಿದ್ದ ರಾಜ್ಯ ರಾಜಕಾರಣದ ಮಧ್ಯೆ ಹೊಸ ಭರವಸೆ ಮೂಡಿಸಿದ್ದರು. ಜೊತೆಗೆ ಅಯೋಧ್ಯಾ ಪ್ರಕರಣದಿಂದಾಗಿ ತೊಂಭತ್ತರ ದಶಕದಿಂದೀಚೆಗೆ ರಾಷ್ಟ್ರ ರಾಜಕಾರಣದಲ್ಲಿ ಚರ್ಚೆಗೆ ಒಳಗಾದ ಜಾತ್ಯಾತೀತತೆ ಹಾಗೂ ಸಾಮಾಜಿಕ ನ್ಯಾಯಗಳ ಪರಿಕಲ್ಪನೆಗಳ ಹಿನ್ನೆಲೆಯಲ್ಲಿ ಅವರ ಸಮಾಜವಾದಿ ಒಲವುಗಳು ಹಾಗೂ ಬದ್ಧತೆ ಅವರನ್ನು ರಾಜಕಾರಣದ ಮುನ್ನೆಲೆಗೆ ತಂದು ನಿಲ್ಲಿಸಿದ್ದವು. ಮುಖ್ಯಮಂತ್ರಿಯಾಗುವ ಎರಡು ಅವಕಾಶಗಳ ಸಂದರ್ಭಗಳಲ್ಲೂ, ಯಾವ ರಾಜಕೀಯ ಅನುಕೂಲ ಪರಿಸ್ಥಿತಿಯಿಂದಾಗಿ ತಮ್ಮ ರಾಜಕೀಯ ಜೀವನದಲ್ಲಿ ಒಮ್ಮೆಗೇ ಉತ್ಕರ್ಷ ಕಂಡಿದ್ದರೋ ಅಂತಹ ರಾಜಕೀಯ ಅನುಕೂಲ ಪರಿಸ್ಥಿತಿಯ ಲಾಭ ಇನ್ನೊಬ್ಬರ ಪಾಲಾದ ಕಾರಣದಿಂದಾಗಿ ಉಪ ಮುಖ್ಯಮಂತ್ರಿ ಪಟ್ಟವನ್ನಷ್ಟೇ ಪಡೆದು, ಆ ಸ್ಥಾನದಲ್ಲೇ ತಮ್ಮ ದಕ್ಷತೆಯನ್ನು ಮೆರೆದಿದ್ದರು. ಆದರೆ ದೇವೇಗೌಡರೆಂಬ ಹಿರಿಯ ಹಾಗೂ ೨೪ ತಾಸುಗಳ ರಾಜಕಾರಣಿಯನ್ನು ನೆಚ್ಚಿಕೊಂಡು ಕಳೆದ ೨೪ ವರ್ಷಗಳ ಕಾಲ ಕಾಂಗ್ರೆಸ್ ವಿರೋಧಿ ರಾಜಕಾರಣವನ್ನು ಮಾಡಿಕೊಂಡು ಬಂದಿದ್ದ ಅವರು ಈಗ (ಅಂದರೆ ಆರು ತಿಂಗಳಿನಿಂದೀಚೆಗೆ) ದಿಢೀರನೇ ದೇವೇಗೌಡರ ವಿರುದ್ಧ ತಿರುಗಿ ಬಿದ್ದು ಕಾಂಗ್ರೆಸ್ ತೆಕ್ಕೆಗೆ ಜಾರಿಕೊಳ್ಳುವ ಮೂಲಕ ತಮ್ಮ ರಾಜಕೀಯ ವ್ಯಕ್ತಿತ್ವದ ದೃಢತೆಯ ಬಗ್ಗೆ ಜನರಿಟ್ಟುಕೊಂಡಿದ್ದ ನಂಬಿಕೆಗೇ ಭಂಗ ತಂದೊಡ್ಡಿಕೊಂಡಿದ್ದಾರೆ. ಸಿದ್ಧರಾಮಯ್ಯನವರಂತಹ ವಿಶಿಷ್ಟ ವ್ಯಕ್ತಿತ್ವದ ರಾಜಕಾರಣಿ, ಎಲ್ಲ ವ್ಯಕ್ತಿತ್ವಗಳೂ ಕಲೆಸಿ ಹೋಗುವಂತಹ ಸಗಟು ರಾಜಕಾರಣ ಮಾಡುವ ಕಾಂಗ್ರೆಸ್ ಪಕ್ಷದಲ್ಲಿ ಎಷ್ಟು ಕಾಲ ಬಾಳಿಕೆಯಲ್ಲಿರಬಲ್ಲರು ಎಂಬ ಪ್ರಶ್ನೆಯ ಹೊರತಾಗಿಯೂ, ಅವರೀಗ ಪ್ರದರ್ಶಿಸುತ್ತಿರುವ ರಾಜಕೀಯದ ಮಾದರಿ, ಸದ್ಯದ ರಾಜಕೀಯ ಸಂದರ್ಭದಲ್ಲಿ ಅನೇಕ ಮುಖ್ಯ ಪ್ರಶ್ನೆಗಳನ್ನು ಎತ್ತುತ್ತದೆ.

–೨–

ಸಕಲ ರಾಜಕೀಯ ಪಕ್ಷಗಳೂ ಇಂದು ಜಾಗತೀಕರಣ ಪ್ರಕ್ರಿಯೆಗೆ ಪೂರಕವಾದ ನಿಲವುಗಳನ್ನೇ ಪ್ರದರ್ಶಿಸುತ್ತಿವೆ. ಎರಡು ಕಮ್ಯೂನಿಸ್ಟ್ ಪಕ್ಷಗಳೂ ಇದಕ್ಕೇನೂ ಹೊರತಾಗಿಲ್ಲ.

ಅವು ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ವಿದೇಶಿ ಬಂಡವಾಳದ ಆಹ್ವಾನ, ಸರ್ಕಾರಿ ಉದ್ಯಮಗಳ ಖಾಸಗೀಕರಣ ಮುಂತಾದ 'ಆರ್ಥಿಕ ಸುಧಾರಣೆ'ಗಳನ್ನು ಕೈಗೊಳ್ಳುತ್ತಾ, ಆ ರಾಜ್ಯಗಳ ಹೊರಗಷ್ಟೇ ಒಂದು ತಾತ್ವಿಕ ಚಾಳಿಯೆಂಬಂತೆ ಜಾಗತೀಕರಣ ವಿರೋಧಿ ಪ್ರತಾಪವನ್ನು ತೋರಿಸುತ್ತಿವೆ. ಹೀಗಾಗಿ ನಮ್ಮ ಸದ್ಯದ ರಾಷ್ಟ್ರೀಯ ರಾಜಕೀಯ ಸಂದರ್ಭವೇ, ಜಾಗತೀಕರಣದ ಅನಿವಾರ್ಯತೆಯನ್ನು ಇಡಿಯಾಗಿ ಒಪ್ಪಿಕೊಂಡಂತೆ ಕಾಣುತ್ತಿದೆ. ಇದಕ್ಕೆ ಮುಖ್ಯ ಕಾರಣ, ಇಂದಿನ ರಾಜಕಾರಣ ಯಾವೊಬ್ಬ ಸೃಜನಶೀಲ ಚಿಂತಕನನ್ನೂ ತನ್ನ ನಾಯಕತ್ವದ ಪರಿಧಿಯೊಳಕ್ಕೆ ಬಿಟ್ಟುಕೊಳ್ಳದಷ್ಟು ಜಡಗೊಂಡಿರುವುದೇ ಆಗಿದೆ. ಹಾಗಾಗಿಯೇ ಇಂದಿನ ರಾಜಕಾರಣಕ್ಕೆ ಕಳೆದ ೧೦–೧೫ ವರ್ಷಗಳಲ್ಲಿ ರಾಷ್ಟ್ರಾದ್ಯಂತ ಆತ್ಮಹತ್ಯೆ ಮಾಡಿಕೊಂಡ ರೈತರ ಸಂಖ್ಯೆ ಒಂದು ಲಕ್ಷವನ್ನು ದಾಟಿದ್ದರೂ, ಇದನ್ನು ರಾಷ್ಟ್ರೀಯ ದುರಂತವೆಂದು ಪರಿಗಣಿಸಲು ಹಾಗೂ ಇದರ ಹಿಂದೆ ಜಾಗತಿಕ ರಾಜಕಾರಣದ ಒತ್ತಡಗಳೇನಾದರೂ ಕೆಲಸ ಮಾಡಿವೆಯೆ ಎಂಬುದನ್ನು ಪರಿಶೀಲಿಸಲು ಸಾಧ್ಯವಾಗದೇ ಹೋಗಿದೆ.

ಗ್ರಾಮವೇ ಭಾರತದ ಹೃದಯ, ರೈತನೇ ದೇಶದ ಬೆನ್ನೆಲುಬು ಎಂಬ ನಂಬಿಕೆ–ಘೋಷಣೆಗಳೊಂದಿಗೆ ರಾಷ್ಟ್ರೀಯ ನವೋದಯದ ಸಂದರ್ಭದಲ್ಲಿ ಆರಂಭವಾದ ರಾಷ್ಟ್ರ ನಿರ್ಮಾಣದ ಕೆಲಸ ಈಗ ರೈತರ ಎಡೆಬಿಡದ ಆತ್ಮಹತ್ಯೆಗಳ ಸರಮಾಲೆಯನ್ನು ತನ್ನ ಕೊರಳಿಗೆ ಹಾಕಿಕೊಳ್ಳುವ ಸ್ಥಿತಿ ತಲುಪಿದೆ. ಯಾಕೆ ಹೀಗಾಯಿತು? ರಾಷ್ಟ್ರ ನಿರ್ಮಾಣಕ್ಕಾಗಿ ನಾವು ಆರಿಸಿಕೊಂಡ ಅಭಿವೃದ್ಧಿ ಮಾದರಿಯ ಅಸಮರ್ಪಕತೆಯೇ ಇದಕ್ಕೆ ಕಾರಣವಾಗಿರಬಹುದೇ? ಈ ಮಾದರಿಗೆ ಆಧಾರವಾದ ಆಧುನೀಕರಣದ ಪರಿಕಲ್ಪನೆಯೇ ನಮಗೆ ಕೈಕೊಟ್ಟಿತೆ? ಪಶ್ಚಿಮದ ವೈಜ್ಞಾನಿಕತೆಯನ್ನೇ ತನ್ನ ಪರಮ ಧರ್ಮವನ್ನಾಗಿ ಒಪ್ಪಿಕೊಂಡ ಆಧುನೀಕರಣದ ಪರಿಕಲ್ಪನೆಯೇ ನಮ್ಮ ರೈತ ಕೇಂದ್ರಿತ ಗ್ರಾಮ ಸಮಾಜದ ಎಲ್ಲ ಆಯಾಮಗಳನ್ನು ಒಳಗೊಳ್ಳಲು, ಅರ್ಥಮಾಡಿಕೊಳ್ಳಲು ಸಾಧ್ಯವಾಗದೇ ಹೋಯಿತೇ? ಇಂತಹ ಆಧುನೀಕರಣ ಪ್ರಕ್ರಿಯೆಯಲ್ಲಿ ಗ್ರಾಮ ಹಾಗೂ ರೈತತನದ 'ಮೂಲ ಮಾತೃಕೆ'ಗಳೇ ಸೀಳುಬಿಟ್ಟಿವೇ? ಆಧುನೀಕರಣದ ಹೊರ ಆಕರ್ಷಣೆ (ಹಸಿರು ಕ್ರಾಂತಿಯ ತತ್ಕಾಲೀನ ಆರ್ಥಿಕ ಲಾಭಗಳು) ಒಳಗಾದ ರೈತ ತನ್ನ ಒಳಗಿನ ಸ್ಮೃತಿ ಕರೆಗೆ ಓಗೊಡದಾದನೆ? ಆ ಮೂಲಕ ತಳಗೆ ಬೇರು ಕಳಚಿಕೊಳ್ಳುತ್ತಿರುವ ಅನುಭವಕ್ಕೆ ಎರವಾದನೇ?

ಅಪ್ಪಟ ಮಣ್ಣಿನ ಮಗನಾಗಿ ಮೂಡಿ, ರೈತ ಪ್ರತಿನಿಧಿಯಾಗಿ ರಾಜಕಾರಣ ಮಾಡುತ್ತ ಬಂದ ದೇವೇಗೌಡರೇ, ಭೂ–ಪರಿಮಿತಿ ಹಾಗೂ ಭೂ–ಪರಭಾರೆ ಕಾಯಿದೆಗಳಿಗೆ ತಿದ್ದುಪಡಿ ತರುವಂತಾದುದು ಹೇಗೆ? ಸಮಾಜವಾದಿ ಹಿನ್ನಲೆಯ ಪ್ರೊ॥ ನಂಜುಂಡಸ್ವಾಮಿ ಮತ್ತವರ ಗೆಳೆಯರ ನೇತೃತ್ವದ ರೈತ ಚಳುವಳಿ ರೈತನಿಗೆ ಒಂದು ವ್ಯಕ್ತಿತ್ವವನ್ನು ಸಂಘಟಿಸಿಕೊಡುವ ಬದಲಾಗಿ ಆತನನ್ನು ಉತ್ಪಾದಕ ಮಾತ್ರನನ್ನಾಗಿ ನೋಡಿದುದರ ಹಿಂದಿನ ಮರ್ಮವೇನು? ದಲಿತರ ಪಾಲಿಗೆ ಹಳ್ಳಿ ನರಕ ಎಂಬ ಅಂಬೇಡ್ಕರ್ ನಿಲುವನ್ನು ಪೂರ್ಣ ಸತ್ಯವಾಗಿ ಪರಿಗಣಿಸದೆ ಬೆಳೆದ ಕರ್ನಾಟಕದ ದಲಿತ ಚಳುವಳಿಯನ್ನು,

ನಂತರ ಆರಂಭಗೊಂಡ ರೈತ ಚಳುವಳಿ ಹಿನ್ನಲೆಗೆ ಸರಿಸಿ, ಕ್ರಮೇಣ ತಾನೇ ಹಿನ್ನಲೆಗೆ ಸರಿಯುವಂತಾದುದರ ದುರಂತಕ್ಕೆ ಏನು ಕಾರಣ? ಇದನ್ನು ದಿ. ನಂಜುಂಡಸ್ವಾಮಿಯವರ ಸ್ಮಾರಕವಾಗಿ 'ಅಮೃತ ಭೂಮಿ' ಎಂಬ ಅಂತಾರಾಷ್ಟ್ರೀಯ ಟ್ರಸ್ಟ್ ಸ್ಥಾಪನೆಯಾದುದರ ಹಿಂದೆ ಕೆಲಸ ಮಾಡಿದ ಜಾಗತಿಕ (ರೈತ) ರಾಜಕಾರಣದಲ್ಲಿ ಹುಡುಕೋಣವೇ?

(ಪಶ್ಚಿಮದ ಸ್ಫೂರ್ತಿಯ) ಆಧುನೀಕರಣವೆಂದರೆ ಒಕ್ಕಣ್ಣಿನ ಅಭಿವೃದ್ಧಿ. ನಗರೀಕರಣವೇ ಅದರ ಪರಮಾರ್ಥ. ನಗರೀಕರಣವೆಂದರೆ ನಿಲ್ಲದ ನಡಿಗೆ, ತಣಿಯದ ದಾಹ, (ಅದರ ಆಯಾಸದಲ್ಲಿ) ಕಳೆದುಹೋಗುವ ಮನುಷ್ಯ. ಹಳ್ಳಿಯಲ್ಲಿದ್ದೂ, ಈ ಆಧುನೀಕರಣಕ್ಕೆ ಒಳಗಾದವರ ಗತಿಯೂ ಅದೇನೇ. ಹಾಗಾಗಿಯೇ ಆಧುನೀಕರಣ ನಮ್ಮ ಹಳ್ಳಿಗಳನ್ನು ಹಸಿರು ಕ್ರಾಂತಿಗೆ ತೆರಬೇಕಾದ ಬೆಲೆ ಎಂಬಂತೆ ಅವುಗಳನ್ನು ಕೊಂಪೆಗಳನ್ನಾಗಿ ಪರಿವರ್ತಿಸಿ, ಅದರಿಂದ ಅದರಿಂದ ಅನುಕೂಲ ಪಡೆದ ಮತ್ತು ಪಡೆಯದ ಇಬ್ಬರನ್ನೂ ಬೇರೆ ಬೇರೆ ಕಾರಣಗಳಿಗಾಗಿ ನಗರಗಳಿಗೆ ದಬ್ಬಿತು; ಜಾತಿವ್ಯವಸ್ಥೆಯ ಬಂಧನದಲ್ಲಿ ಒಂದು 'ಸ್ಥಿರತೆ'ಯಲ್ಲಿದ್ದ ಹಳ್ಳಿಗಳನ್ನು ಜಾತಿ ಕಟ್ಟು ಹಾಗೂ ಅದನ್ನು ಆಧರಿಸಿದ ಗ್ರಾಮಾಡಳಿತ ವ್ಯವಸ್ಥೆಯಿಂದ ಬಿಡುಗಡೆಗೊಳಿಸಿ, 'ಅಸ್ಥಿರತೆ'ಗೆ ದೂಡಿತಷ್ಟೆ; ಅದಕ್ಕೊಂದು ಹೊಸ ಸ್ಥಿರತೆಯನ್ನಾಗಲೀ – ಸಮತೋಲನವನ್ನಾಗಲೀ ಒದಗಿಸುವ ಬುದ್ಧಿಯಾಗಲೀ, ಹೃದಯವಾಗಲೀ ಅದಕ್ಕಿರಲಿಲ್ಲ. ಏಕೆಂದರೆ ಅದು ಹಳ್ಳಿಗಳ ಎಲ್ಲ ವಿದ್ಯೆ-ಕೌಶಲ್ಯಗಳನ್ನು, ಅವುಗಳಿಂದ ಭಟ್ಟಿಯಾಗುತ್ತಿದ್ದ ಪಾರಂಪರಿಕ ವಿವೇಕವನ್ನು ತನ್ನ ಹೊಸ ವಿಜ್ಞಾನ-ವಿದ್ಯೆಯ ಒರೆಗಲ್ಲಿಗೆ ಹಚ್ಚಿ ನೋಡಿತು. ಹಾಗೆ ನೋಡಿ, ಅವುಗಳನ್ನು ಸಾರಾಸಗಟಾಗಿ ಹಿಂದುಳಿದ ಸಮಾಜವೊಂದರ 'ರೋಗ ಲಕ್ಷಣ'ಗಳಂತೆ ಪರಿಗಣಿಸುವ, ಹೊಸ ಅಂತಾರಾಷ್ಟ್ರೀಯ ಔಷಧ (ಪದ್ಧತಿ) ಕಂಪನಿಯೊಂದರ ಸಗಟು ವ್ಯಾಪಾರಿಯಂತೆ ವರ್ತಿಸಿತು. ಹಳ್ಳಿಯ ಅಸ್ಮಿತೆಗೂ, ಆತ್ಮವಿಶ್ವಾಸಕ್ಕೂ ಆಘಾತ ಉಂಟುಮಾಡಿತು. ಹಳ್ಳಿಗಳ ಸ್ವಾಯತ್ತತೆಯನ್ನೇ ನಾಶ ಮಾಡಿ 'ಬಡತನ' ಎಂಬ ಭೀಕರ ರೋಗವೊಂದನ್ನು ಪತ್ತೆ ಹಚ್ಚಿತು, ನಿವಾರಣೆಯಾದಷ್ಟೂ ಹೆಚ್ಚುತ್ತಾ ಹೋಗುವ ಈ ವಿಚಿತ್ರ ರೋಗದ ಭಯ ಹುಟ್ಟಿಸಿತು.

ಆಧುನೀಕರಣದ ಮೊದಲ ಹೆಜ್ಜೆಗಳ ಸಪ್ಪಳದಲ್ಲೇ ಅದರ ಈ ಆಘಾತಕಾರಿ ತರಂಗಗಳನ್ನು ಗ್ರಹಿಸುವಷ್ಟು ಸೂಕ್ಷ್ಮರಾಗಿದ್ದ ಗಾಂಧೀಜಿ (ಅವರೂ ವ್ಯಾಪಾರಿಯೇ-ಆದರೆ ನಮ್ಮ ವ್ಯಾಪಾರಿ!) ತಮ್ಮ 'ಹಿಂದ್ ಸ್ವರಾಜ್'ನಲ್ಲಿ ಇದರ ವಿರುದ್ಧ ತಮ್ಮ ಮೊದಲ ಮತ್ತು ನಿಜವಾದ 'ಮಾಡು ಇಲ್ಲವೇ ಮಡಿ' ಕಾರ್ಯಕ್ರಮವನ್ನು ಘೋಷಿಸಿದ್ದರು. ಅವರ ೧೯೪೨ರ 'ಮಾಡು ಇಲ್ಲವೇ ಮಡಿ' ಘೋಷಣೆ ಏನಿದ್ದರೂ, ಮೊದಲಿನದರ ಕ್ಷೀಣ ಪ್ರತಿಧ್ವನಿ ಮಾತ್ರವಾಗಿತ್ತು; ಮೊದಲಿನದರ ಸೋಲನ್ನು ನುಂಗಿಕೊಂಡ ವಿಚಲತೆ ಅದರಲ್ಲಿತ್ತು. ಹಾಗಾಗಿಯೇ ಅದು ಗಾಂಧಿ ಆಶಯ ಮತ್ತು ನಿರೀಕ್ಷೆಗಳಿಗೆ ವಿರುದ್ಧವಾಗಿ ವ್ಯಾಪಕ ಹಿಂಸಾಚಾರಕ್ಕೆ ತಿರುಗಿ ವೈಭವೀಕರಣಗೊಳ್ಳುವ ಮೂಲಕ – ಅದರ ನೇತೃತ್ವ ವಹಿಸಿದ್ದ ಸಮಾಜವಾದಿಗಳಿಗೆ ಸ್ವತಃ ಗಾಂಧೀಜಿ ಹೇಳಿದಂತೆ – ದೇಶವಿಭಜನೆ ಸಂದರ್ಭದ ಕೋಮು ಹಿಂಸಾಚಾರಕ್ಕೆ ವಾತಾವರಣ ನಿರ್ಮಾಣ ಮಾಡಿಕೊಟ್ಟಿತು.

ಗಾಂಧೀಜಿ ಈ ಪಾಶ್ಚಿಮಾತ್ಯ ಶೈಲಿಯ ಆಧುನೀಕರಣದಲ್ಲಿ ಹಿಂಸೆ ಕಂಡಿದ್ದರು. ಹಾಗೆ ನೋಡಿದರೆ, ಗಾಂಧೀಜಿ ಆ ಕಾಲದ ದೊಡ್ಡ ಆಧುನಿಕರು : ಮಧ್ಯಯುಗೀನ ನಂಬಿಕೆಗಳಲ್ಲೇ ಲಂಗರು ಹಾಕಿದ್ದ ಭಾರತೀಯ ಸಮಾಜವನ್ನು ತಮ್ಮ 'ಸತ್ಯಾಗ್ರಹ'ದ ಪ್ರಯೋಗಗಳ ಮೂಲಕ ಅಂದಿನ ವಾಸ್ತವದ ಸತ್ಯಗಳಿಗೆ ಎಚ್ಚರಿಸಿದವರು; ಯಾವುದೇ ತರತಮವಿಲ್ಲದೆ, ಎಲ್ಲ ಮನುಷ್ಯರ ಘನತೆ ಸಮಾನವಾದುದೆಂದು ತಮ್ಮ ಜನ ಸಂಘಟನೆ ಹಾಗೂ ಹೋರಾಟದ ರೀತಿ ನೀತಿಗಳಿಂದಲೇ ತೋರಿಸಿಕೊಟ್ಟವರು. ಆ ನಂಬಿಕೆ ಮಾತ್ರ ಸಾಮ್ರಾಜ್ಯಶಾಹಿಯ ವಿರುದ್ಧದ ಹೋರಾಟಕ್ಕೆ ಧಾರಣ ಶಕ್ತಿ ನೀಡಬಲ್ಲದೆಂದು ಅವರು ಮನಗಂಡಿದ್ದರು. ಇದೇ, ಇಂದು ನಾವು ಅಧ್ವಾನಗೊಳಿಸಿ ವಿಷಯ ಚರ್ಚೆಗೆ ಕಾರಣ ಮಾಡಿರುವ 'ಸಾಮಾಜಿಕ ನ್ಯಾಯ'ದ ಮೂಲ ರೂಪ ಕೂಡಾ. ಹಾಗಾಗಿ ಗಾಂಧೀಜಿಗೆ ಬ್ರಿಟಿಷ್ ಸಾಮ್ರಾಜ್ಯಶಾಹಿಯಿಂದ ಪಡೆಯಬೇಕಾದ ಮುಕ್ತಿ, ಸಾಮಾಜಿಕ ನ್ಯಾಯ ಸ್ಥಾಪನೆಯ ಮೊದಲ ಕ್ರಮವಾಗಿತ್ತು. ಅಂದರೆ ಗಾಂಧೀಜಿಗೆ ನಿಜವಾದ ಆಧುನೀಕರಣ ವೆಂದರೆ ಸಾಮಾಜಿಕ ನ್ಯಾಯವೇ ಆಗಿತ್ತು. ಆದರೆ ಅದರಲ್ಲಿ ಇಂದಿನ ಸಾಮಾಜಿಕ ನ್ಯಾಯದಂತೆ ಆಡಳಿತದಲ್ಲಿ ಪಾಲು ಕೇಳುವುದಷ್ಟೇ ಅಲ್ಲ, ಉತ್ಪಾದನಾ ಪ್ರಕ್ರಿಯೆಯಲ್ಲೂ ಪಾಲು ಉಳಿಸಿಕೊಳ್ಳುವುದು ಕೂಡಾ ಸೇರಿತ್ತು. ಏಕೆಂದರೆ ಆಗ ಮಾತ್ರ ಸಾಮಾಜಿಕ ನ್ಯಾಯ ಸುಸ್ಥಿರವಾಗಬಲ್ಲದು ಎಂಬ ಮುನ್ನೋಟ ಅದಕ್ಕಿತ್ತು. ಇದು ಸಾಧ್ಯವಾಗುವುದು, ಆಧುನೀಕರಣವನ್ನು ಪಶ್ಚಿಮದ ನಗರೀಕರಣದ ಮಾದರಿಗೆ ಬದಲಾಗಿ ಗ್ರಾಮೀಣೀಕರಣದ ಮೂಲಕ ಕೈಗೊಂಡಾಗ ಮಾತ್ರ. ಗ್ರಾಮೀಣೀಕರಣ ಎಂದರೆ; ಭಾರತದ ಜೀವಸತ್ವ ಅಥವಾ ಸುಪ್ತಮನಸ್ಸು ಹಳ್ಳಿಯೇ ಆಗಿರುವುದರಿಂದ, ಅದರ ವಿಶಿಷ್ಟ ಪ್ರತಿಭೆಯೂ ಅಲ್ಲಿಂದಲೇ ಹೊರ ಹೊಮ್ಮುತ್ತಾದ್ದರಿಂದ, ಹಳ್ಳಿಯನ್ನು ಎಚ್ಚರಿಸುವುದೇ ಆಗಿದೆ. ಎಚ್ಚರಿಸುವುದು ಎಂದರೆ, ಜಡತೆಯಿಂದ ಹೊರತಂದು ಕ್ರಿಯಾಶೀಲಗೊಳಿಸುವುದು; ಕಳೆದು ಹೋಗುತ್ತಿರುವ ಅದರ ಸ್ವಾಯತ್ತತೆಯನ್ನು ಮರಳಿ ಸ್ಥಾಪಿಸಿವುದು.* ಅದರ ಸ್ವಾಯತ್ತತೆ ನಾಶವಾಗಿದ್ದೇ, ಅದರ ಉತ್ಪಾದನಾ ಸಾಮರ್ಥ್ಯಕ್ಕೆ ಪೆಟ್ಟು ಬಿದ್ದುದೇ, ಅಲ್ಲಿನ ಕಸುಬುದಾರಿಕೆಯು ಸಾಮ್ರಾಜ್ಯಶಾಹಿ ಶೋಷಣೆಯ ಅಸ್ತ್ರವಾಗಿ ಬಂದ ಬೃಹತ್ ಉತ್ಪಾದನೆಯನ್ನು ಸಾಧ್ಯಗೊಳಿಸಿದ ತಂತ್ರಜ್ಞಾನದ ಹಾಗೂ ಬಳಕೆದಾರಿಕೆಯ ಆಧುನೀಕರಣದಿಂದಾಗಿ.

ಇದನ್ನು ಗಾಂಧೀಜಿ, ಅನ್ನ ತಿನ್ನಲು ಕೈಗೆ ಬದಲಾಗಿ ಒಂದು ಯಂತ್ರ (ವೈಜ್ಞಾನಿಕ ಸಾಧನ)ವನ್ನು ಬಳಸಿಕೊಳ್ಳುವುದಕ್ಕೆ ಹೋಲಿಸುತ್ತಾರೆ : ಇದು, ಅನ್ನದ ಸ್ಪರ್ಶ, ಅಗತ್ಯಕ್ಕೆ ತಕ್ಕಂತೆ ತುತ್ತಿನ ಗಾತ್ರವನ್ನು ನಿರ್ಣಯಿಸುವ ಮನಸ್ಸು ಮತ್ತು ಬೆರಳುಗಳ ಸಹಜ ಹೊಂದಾಣಿಕೆಯ ನೆಮ್ಮದಿ ಹಾಗೂ ಬಾಯಿಗೆ ತಾನೊಂದು ಭಾಗವಾಗಿರುವ ದೇಹದ್ದೇ ಇನ್ನೊಂದು ಭಾಗವಾದ ಕೈ ತುತ್ತುಣಿಸುವುದರ ಹಿಂದಿನ ಜೀವ ಸ್ವಾಯತ್ತತೆಯ ನಿರಾಳತೆಯನ್ನು ಕಳೆದುಕೊಳ್ಳುವುದಕ್ಕೆ ಸಮನಾದ ದುರಂತ ಎಂದು ಎಚ್ಚರಿಸುತ್ತಾರೆ.

---

* ಈ ಬಗ್ಗೆ ಗಾಂಧೀಜಿಯ 'ನನ್ನ ಆದರ್ಶ ಗ್ರಾಮ' ಕಿರು ಪುಸ್ತಿಕೆಯನ್ನು ನೋಡಿ (ಸಂಕಲನ ಹಾಗೂ ಅನುವಾದ : ಕೆ.ಎಸ್. ನಾರಾಯಣ ಸ್ವಾಮಿ

ಇದು ನಿಜವಾಗಿಯೂ ಗ್ರಾಮದ ಆತ್ಮಸಾಕ್ಷಿಯನ್ನು, ಅದರೆಲ್ಲ ಆಳಗಳೊಂದಿಗೆ ಎಚ್ಚರಿಸುವ ಕೆಲಸ, ತಾನು ಸೃಜನಶೀಲವಾಗುಳಿಯದಂತೆ ತಡೆದ ಶಕ್ತಿಗಳನ್ನು ಗುರುತಿಸುವ ಕೆಲಸ ಹಾಗೂ ಅದರಿಂದಾಗಿಯೇ ಹೊರಗಿನ ಸೃಜನಶೀಲತೆಗೆ (ಪಾಶ್ಚಿಮಾತ್ಯ ಶೈಲಿಯ ಯಂತ್ರೀಕರಣ) ಪಕ್ಕಾಗಿ ತನ್ನ ಉತ್ಪಾದನಾಶೀಲತೆಯನ್ನು ಕಳೆದುಕೊಂಡುದರ ಪರಿಣಾಮಗಳ ಬಗ್ಗೆ ಆಳವಾಗಿ ಯೋಚಿಸುವ ಕೆಲಸ.

ಹೀಗೆ ವಿಚಾರಿಸಿದಾಗ ಗೊತ್ತಾಗುವುದು, ಹಳ್ಳಿಯ ಸಾಮಾಜಿಕ ರಚನೆ ಜಾತಿ ವ್ಯವಸ್ಥೆಯಾಗಿ ಸ್ಥಗಿತಗೊಂಡಿದ್ದುದೇ ಅದರ ಒಟ್ಟಾರೆ ಜಡತೆಗೆ, ಅದರ ಸೃಜನಹೀನತೆಗೆ, ಅದರ ಕಸಬುದಾರಿಕೆ ಆಧುನಿಕ ಯಂತ್ರೀಕರಣವನ್ನು ಎದುರಿಸಲಾರದೇ ಹೋದುದಕ್ಕೆ ಮೂಲ ಕಾರಣ ಎಂದು. ಹಾಗೇ, ಜಾತಿ ವ್ಯವಸ್ಥೆಯಲ್ಲಿನ ತರ–ತಮ ಶ್ರೇಣೀಕರಣ ಹೆಪ್ಪುಗೊಂಡಿದ್ದೇ ಕಸುಬಗಳನ್ನು ಕುರಿತಾದ ನಿಷೇಧ–ಮೈಲಿಗೆಗಳ (ಅ)ನೀತಿ ಸಂಹಿತೆಯಿಂದ ಎಂದು ಕೂಡ. ಈ ನೀತಿ ಸಂಹಿತೆ, ಗ್ರಾಮವು ಒಂದು ತೆರೆದುಕೊಂಡ ಸಮಾಜವಾಗಿ ಪ್ರಯೋಗಗಳಲ್ಲಿ ತೊಡಗುವುದನ್ನೇ ಬಂದ್ ಮಾಡಿತು. ಗಾಂಧೀಜಿ ತಿರುಗುವ ಚರಕದ ಮೂಲಕ ಹಳ್ಳಿಯನ್ನು ಮತ್ತೆ ಜೀವಂತಗೊಳಿಸಲು ಯತ್ನಿಸಿದರು. ಅದು ಆರಂಭ ಮಾತ್ರವಾಗಿತ್ತು. ಚರಕ, ಗಾಂಧಿ ಕಲ್ಪನೆಯ ಆಧುನೀಕರಣದ (ಗ್ರಾಮೀಣೀಕರಣದ) ಮೂಲ ಮಾತೃಕೆ ಇದ್ದಂತೆ. ಹಾಗೇ ಅದು ಸಾಮಾಜಿಕ ನ್ಯಾಯದ ಮೂಲ ಮಾತೃಕೆ ಕೂಡಾ : ಉತ್ಪಾದನೆಯಲ್ಲಿ ಸರ್ವರಿಗೂ ಸಮಾನಾವಕಾಶ ಒದಗಿಸುವಂತಹ ಸೃಜನಶೀಲ ತಾಂತ್ರಿಕತೆಯ ಮೂಲಕ ಕಟ್ಟುವ ಸಮಾಜದ ಒಡೆತನವು ಸಹಜವಾಗಿಯೇ ಸರ್ವರಲ್ಲೂ ಪ್ರಾತಿನಿಧಿಕವಾಗಿ ಹಂಚಿ ಹೋಗುವ ವ್ಯವಸ್ಥೆಯದು. ಆದರೆ ಭಾರತದ ಮುಚ್ಚಿಕೊಂಡ ಜಾತಿಸಮಾಜ, ಅದನ್ನು ಬಿಚ್ಚಲು ಹೊರಟ ಗಾಂಧೀಜಿಯನ್ನು ಕೊಂದು ಹಾಕುವ ಮೂಲಕ ಆ ವ್ಯವಸ್ಥೆಯ ಆಶಯವನ್ನೇ ನುಚ್ಚು ನೂರು ಮಾಡಿತು.

ಈ ನುಚ್ಚು ನೂರಾದ ಆಶಯವನ್ನೇ ತಮ್ಮ ಸಣ್ಣ ಘಟಕ ತಂತ್ರಜ್ಞಾನ, ಆಡಳಿತ ವಿಕೇಂದ್ರೀಕರಣ, ಜಾತಿ ವಿನಾಶ ಹಾಗೂ ಭಾರತೀಯ ಭಾಷಾ ಆಂದೋಲನಗಳ ಮೂಲಕ ಪುನರ್‌ಸಂಘಟಿಸಲು ಯತ್ನಿಸಿದ ಸಮಾಜವಾದಿಗಳು, ಗಾಂಧೀಜೀಯ 'ಅಹಿಂಸೆ'ಯ ತಿರುಳನ್ನೇ ಅರಿಯದೆ, ಕ್ರೋಧಕ್ಕೆ ಬಿದ್ದು ಸ್ವತಃ ತಾವೇ ನುಚ್ಚು ನೂರಾದರು: ಸಮಾಜವಾದಿ ಆಂದೋಲನವು ನೆಹರೂ ಅವರ 'ಆಧುನಿಕತೆ'ಯ ರಾಜಕಾರಣದ ಪ್ರಭಾವದಿಂದಾಗಿ, ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಭಾರಿ ಸೋಲಿನ ಆಘಾತವನ್ನನುಭವಿಸಿತು. ಅದರ ಪರಿಣಾಮವಾಗಿಯೋ ಎಂಬಂತೆ ಭಾರತದ ಸಮಾಜವಾದ ನಂತರ ತನ್ನ ಮಾರ್ಗವನ್ನು ಪಾಶ್ಚಿಮಾತ್ಯ ಶೈಲಿಯ ಆಧುನೀಕರಣವನ್ನೇ ಮೂಲಸ್ಫೂರ್ತಿಯನ್ನಾಗಿಸಿಕೊಂಡ ಮಾರ್ಕ್ಸ್‌ವಾದದಿಂದ ಸಂಪೂರ್ಣವಾಗಿ ಭಿನ್ನವಾಗಿಸಿಕೊಂಡು, ಗಾಂಧೀಜಿಯಿಂದ ಕಲಿತ ಪಾಠಗಳಾನ್ನಾಧರಿಸಿ ತನ್ನದೇ ಹಾದಿ ಹಿಡಿಯುವ ಸಂಕಲ್ಪ ಕೈಗೊಂಡಿತು. ಈ ಸಂಕಲ್ಪಕ್ಕೆ ಹಿನ್ನೆಲೆ ಒದಗಿಸಿದ ಲೋಹಿಯಾ ಅವರ 'ಭಾರತೀಯ ಸಮಾಜವಾದದ ತಾತ್ವಿಕ ಅಡಿಗಲ್ಲು' ಎಂಬ ಭಾಷಣವು (೧೯೫೨)

ಪ್ರಸ್ತಾಪಿಸುವ 'ಸಮಾಜವಾದಿ ಆಶ್ರಮ'ಗಳ ಪರಿಕಲ್ಪನೆಯೂ ಇದೇ ಆಶಯವನ್ನು ಹೊಂದಿದೆ. ಆದರೆ ಈ ಸಮಾಜವಾದಿಗಳು ತಾವು ಕಾಂಗ್ರೆಸ್‌ನೊಳಗಿದ್ದು ಅನುಭವಿಸಿದ ನೋವು ಸಂಕಷ್ಟಗಳಿಗೆ ಪ್ರತೀಕಾರ ರೂಪವೆಂಬಂತೆ ತಮ್ಮ ಚಳುವಳಿಯನ್ನು ಕಟ್ಟತೊಡಗಿದ್ದರಿಂದ, ಗಾಂಧಿಯಿಲ್ಲದ ಅವರ ಆಶ್ರಮದ ಕಲ್ಪನೆ, ಕೇವಲ ಕಳೆದು ಹೋದ ಕನಸಿನ ಕನವರಿಕೆಯಾಗಿ ಮಾತ್ರ ಉಳಿಯಿತಷ್ಟೇ.

ಆದರೆ ಈ ಕನಸು ಇನ್ನೂ ಬತ್ತಿ ಹೋಗಿಲ್ಲ. ಕಾಂಗ್ರೆಸ್ ಮೂಲದ ಸಮಾಜವಾದಿಗಳ ಕಾಲ ಮುಗಿದಿದೆ. ಅವರ ಮಾರ್ಗ ಬಿಟ್ಟು ಅವರ ಗುರಿಯನ್ನು ಅರಸುವ ಹಂಬಲ, ಅನೇಕ ರೂಪಗಳಲ್ಲಿ ಇಂದು ವ್ಯಕ್ತವಾಗುತ್ತಿದೆ. ಮೇಧಾ ಪಾಟ್ಕರ್‌ರ 'ನರ್ಮದಾ ಬಚಾವೋ ಆಂದೋಲನ' ಅದರ ಆಶಯದ ದೃಷ್ಟಿಯಿಂದ ಇಂತಹ ರೂಪಗಳ ಒಂದು ದೊಡ್ಡ ಮಾದರಿಯಾಗಿದೆ. ಹಾಗೇ ಅಣ್ಣಾ ಹಜಾರೆ ಅವರ ಮಾದರಿ ಗ್ರಾಮ ಪ್ರಯೋಗವು ಒಂದು ಚಿಕ್ಕ ಮಾದರಿಯಾಗಿದೆ. ಇದರ ಜೊತೆಯಲ್ಲೇ ಭಾರತದಾದ್ಯಂತ ಅನೇಕ ಸಣ್ಣ ಗುಂಪುಗಳು, ನೀರು, ಕಾಡು, ಖನಿಜ, ಬೀಜ, ಕಸುಬುಗಳ ಸಂರಕ್ಷಣೆಗಾಗಿ ಆಂದೋಲನಗಳನ್ನು ನಡೆಸಿವೆ. ಈ ಹಿನ್ನಲೆಯಲ್ಲಿ ರೈತರ ನಿಲ್ಲದ ಆತ್ಮಹತ್ಮೆ ಸರಣಿ ಇಂದಿನ ಒಂದು ದೊಡ್ಡ ರಾಷ್ಟ್ರೀಯ ತಳಮಳಕ್ಕೆ ರೂಪಕವಾಗಿ ನಿಲ್ಲುತ್ತದೆ. ಸಾಮ್ರಾಜ್ಯಶಾಹಿಯ ಹೊಸ (ಹಾಗೂ ಅಂತಿಮ?) ರೂಪವಾದ ಜಾಗತೀಕರಣವು ಸಾಮ್ರಾಜ್ಯಶಾಹಿಯಂತೆ ಕಸುಬುದಾರರ ಕೈಬೆರಳುಗಳನ್ನು ಕಡಿದು ಹಾಕುವಷ್ಟು ರೂಕ್ಷವಾಗುಳಿದಿಲ್ಲ. ಈಗಾಗಲೇ ಅನೇಕ 'ಮ್ಯಾನೇಜ್‌ಮೆಂಟ್' ಕೋರ್ಸುಗಳನ್ನು ಆವಿಷ್ಕರಿಸುವ ಅದು ಸಹಜವಾಗಿಯೇ, ಕಾಣದಂತೆ ಕೊಲ್ಲುವ ಕಲೆಯನ್ನು ಸಿದ್ಧಿಸಿಕೊಂಡಿದೆ.

ಭಾರತದ ಮಟ್ಟಿಗೆ ಜಾಗತೀಕರಣವೆಂದರೆ ಕೃತಕ ಉಸಿರಾಟದ ಮೇಲೆ ನಡೆಯುತ್ತಿರುವ ಆಧುನೀಕರಣದ ಮುಂದುವರಿಕೆ. ನೆಹರೂ ಖಯಾಲಿಯ ಆಧುನೀಕರಣ ಸ್ವಂತ ಉಸಿರಿನ ಮೇಲೆ ಆರಂಭವಾಗಿ, ಅವರ (ತತ್ವಶಾಲೆಯ) ಶಿಷ್ಯ ಚಂದ್ರಶೇಖರರ ಪ್ರಧಾನಮಂತ್ರಿತ್ವದ ಅವಧಿಯ ಹೊತ್ತಿಗೆ ದೇಶದ ಕಾಮು ಚಿನ್ನವನ್ನೆಲ್ಲ ವಿಶ್ವ ಬ್ಯಾಂಕ್‌ನ ಬಳಿ ಅಡವಿಡುವ ದಾರಿದ್ರ್ಯಕ್ಕೆ ದೇಶವನ್ನು ದೂಡಿದ್ದರೊಂದಿಗೆ ಕೊನೆಯುಸಿರೆಳೆಯಿತು. ಹೀಗಾಗಿ ಈಗ ವಿಶ್ವ ಬ್ಯಾಂಕ್ ಎಂಬ ಅಂತಾರಾಷ್ಟ್ರೀಯ ಚಿಕಿತ್ಸಾ ಘಟಕದ ಕೃತಕ ಉಸಿರಾಟದ ಉಪಕರಣದ ಅಳವಡಿಕೆಯೊಂದಿಗೆ – ಐ.ಟಿ. ಮತ್ತು ಬಿ.ಟಿ. ಇದರ ಉಸಿರಾಟದ ಎರಡು ನಳಿಕೆಗಳು – ಆಧುನೀಕರಣ, ಜಾಗತೀಕರಣವಾಗಿ ಮಾರ್ಪಟ್ಟು ಮುನ್ನಡೆಯುತ್ತಿದೆ. ಜಾಗತಿಕ ವ್ಯಾಪಾರ ಹಾಗೂ ಪರಿಸರ ಸಂರಕ್ಷಣೆಯ ಅಸಮ ಒಪ್ಪಂದಗಳಿಗೆ ನೀಡಲಾಗುವ ಒಪ್ಪಿಗೆಯೇ ಇದಕ್ಕೆ ಭಾರತದ ತೆರಬೇಕಾದ 'ಚಿಕಿತ್ಸಾ ಶುಲ್ಕ'ವಾಗಿದೆ. ಆದರೆ ಈ ವ್ಯವಸ್ಥೆ ಬಹಳ ಕಾಲ ನಡೆಯಲಾರದೆಂಬ ಮೊದಲ ಮತ್ತು ಮುಖ್ಯ ಸೂಚನೆಯೇ, ನಿಲ್ಲದ ರೈತರ ಆತ್ಮಹತ್ಯೆ ಸರಣಿ. ಇದರ ಹಿಂದಿರುವುದು ಕೇವಲ ಸಾಲ–ಸೋಲಗಳ ಆರ್ಥಿಕ ಪ್ರಶ್ನೆಯಲ್ಲ. ಇದು ಭಾರತದ ರೈತನ, ಅವನು ಪ್ರತಿನಿಧಿಸುವ ಗ್ರಾಮ ಸಮಾಜದ – ಅದರ ಸಾಮಾಜಿಕ ಹಾಗೂ ಸಾಂಸ್ಕೃತಿಕ ಆಯಾಮಗಳೂ

ಸೇರಿದಂತೆ–ಸಮಗ್ರ 'ವ್ಯಕ್ತಿತ್ವ'ದ ಸುಸ್ಥಿರತೆಯ / ನಾಶದ ಪ್ರಶ್ನೆ. ಜಾಗತೀಕರಣ ಭಾರತದ ಬೇರುಗಳಿರುವ–ಆಧುನೀಕರಣದ ಪರಿಣಾಮವಾಗಿ ಕೊಂಪೆಗಳಾಗಿರುವ – ಹಳ್ಳಿಗಳನ್ನು ಈಗ ಸ್ಮಶಾನ ಮಾಡ ಹೊರಟಿದೆ; ನಗರಗಳನ್ನು 'ಪರಿಹಾರವಾಗದ ಬಡತನ'ವೆಂಬ ಭೀಕರ ರೋಗಕ್ಕೆ ತುತ್ತಾಗಿಸಿ ನರಕಗಳನ್ನಾಗಿಸ ತೊಡಗಿದೆ.

ಹೀಗಾಗಿ ಜಾಗತೀಕರಣವೆಂದರೆ ಮತ್ತೇನೂ ಆಗಿರದೆ, ಗಾಂಧಿ ಮುನ್ನೋಡಿದ್ದ ಪಶ್ಚಿಮದ ಆಧುನಿಕ ನಾಗರೀಕತೆಯ ಅನಾಹುತದ ಅಂತಿಮ ರೂಪವೇ ಆಗಿದೆ. ಈ ಆಧುನೀಕರಣ ನಮ್ಮ ಗ್ರಾಮಗಳನ್ನು ಜಡತೆಯಿಂದ ಸ್ಥಿರತೆಗೆ ದೂಡಿದ್ದ ಜಾತಿ ವ್ಯವಸ್ಥೆಯನ್ನೇನೂ ಮುಖಾಮುಖಿಗೊಳಿಸಿಕೊಳ್ಳಲಿಲ್ಲ; ಬದಲಾಗಿ ಅದರೊಂದಿಗೆ 'ನನ್ನ ತಂಟೆಗೆ ನೀನು ಬರಬೇಡ, ನಿನ್ನ ತಂಟೆಗೆ ನಾನು ಬರುವುದಿಲ್ಲ' ಎಂಬ ಒಳ ಒಪ್ಪಂದದೊಂದಿಗೆ ಮುನ್ನಡೆಯಿತು. ಜಾಗತಿಕವಾಗಿ ರಾಷ್ಟ್ರಗಳನ್ನು, ಸಮಾಜಗಳನ್ನು, ಮನುಷ್ಯರನ್ನು ಒಡೆದು ನಿಲ್ಲಿಸಿರುವ ಈ ಆಧುನೀಕರಣ, ಈಗ ಜಾಗತೀಕರಣದ ರೂಪದಲ್ಲಿ – ಅದರೆಲ್ಲ ವಿಶ್ವಾತ್ಮಕತೆಯ ಆದರ್ಶದ ಬೆಡಗು ಬಿನ್ನಾಣಗಳೊಂದಿಗೆ – ನಮ್ಮೆಲ್ಲರ ಮನಸ್ಸಿನ ಗರ್ಭಗುಡಿಯನ್ನು ಪ್ರವೇಶಿಸಲು ಹೊಂಚು ಹಾಕುತ್ತಿದೆ; ಒಂದು 'ಪಾವಿತ್ರ್ಯ'ವಾಗಿ ಸ್ಥಾಪಿತಗೊಳ್ಳಲು ಹವಣಿಸುತ್ತಿದೆ. ಅದು ಮುನ್ನೋಡಿರುವ 'ಇತಿಹಾಸದ ಸಾವು' ಅಥವಾ 'ಇನ್ನು ಮುಂದೆ ಇತಿಹಾಸವಿಲ್ಲ' ಎಂಬುದರ ಅರ್ಥವಾದರೂ ಇದೇನೇ : ಭಾರತದಂತಹ ಸಮಾಜ ಹೀಗಿರುವಂತೆಯೇ ಸಮೃದ್ಧಿ–ದಾರಿದ್ರ್ಯಗಳ ದ್ವಂದ್ವದಲ್ಲಿ ಶಾಶ್ವತವಾಗಿ ತೊಳಲಾಡುತ್ತಿರಬೇಕಾಗುತ್ತದೆ; ಜಾಗತೀಕರಣ ನಿರೂಪಿಸಿರುವ ಕಸುಬು – ಕೌಶಲ್ಯಗಳನ್ನು ಪವಿತ್ರೀಕರಿಸಿಕೊಳ್ಳದೇ ಹೋದರೆ!

–೩–

ಇದು ಇಂದು ನಮ್ಮೆದುರಿಗಿರುವ ಅಂತಿಮ ಸವಾಲು. ಈಗಾಗಲೇ ವಿವರಿಸಿರುವಂತೆ, ಇದು ಬಹು ಆಯಾಮಗಳುಳ್ಳ ಸವಾಲು. ಇದನ್ನು ಸಮಗ್ರವಾಗಿ ಎದುರಿಸಲು ಹೊಸ ರಾಜಕಾರಣದಿಂದ ಮಾತ್ರ ಸಾಧ್ಯ. ಏಕೆಂದರೆ ಈ ಸವಾಲು ಸೃಷ್ಟಿಯಾಗಿರುವುದೇ ದೂರ ದೃಷ್ಟಿಯಿಲ್ಲದ ತಪ್ಪು ರಾಜಕಾರಣದಿಂದ. ಆದುದರಿಂದ ಇದನ್ನು ಎದುರಿಸಲು, ರಾಜಕಾರಣವನ್ನು ಪುನರ್‍ರೂಪಿಸುವ ತುರ್ತು ಅಗತ್ಯವಿದೆ. ತನ್ನ ದೃಷ್ಟಿಕೇಂದ್ರವನ್ನೇ ಕಳೆದುಕೊಂಡಿರುವ ನಮ್ಮ ರಾಜಕಾರಣವೀಗ ಈ ಮೊದಲು ಸೂಚಿಸಿದಂತೆ – ಅದರ ರೈತ ಮುಖವೂ ಸೇರಿದಂತೆ – ಗೊತ್ತಿದ್ದೊ ಗೊತ್ತಿಲ್ಲದೆಯೋ ಜಾಗತೀಕರಣದ ನಮ್ರ ಸೇವಕನಾಗಿ ಪರಿವರ್ತಿತವಾಗಿದೆ. ಇಂತಹ ಪರಿಸ್ಥಿತಿಯಲ್ಲಿ – ಈ ಲೇಖನದ ಮೊದಲ ಭಾಗದಲ್ಲಿ ತಿಳಿಸಿದ ಕಾರಣಗಳಿಂದಾಗಿ–ಕರ್ನಾಟಕದ ಮಟ್ಟಿಗಾದರೂ ಪರ್ಯಾಯ ರಾಜಕಾರಣದ ನಾಯಕತ್ವ ವಹಿಸಿಕೊಳ್ಳುವ ಸಾಧ್ಯತೆ ಇರುವವರಾಗಿ ಕಂಡವರು ಸಿದ್ಧರಾಮಯ್ಯ. ಇಂದಿನ ರಾಜಕಾರಣಿಗಳ ಮಧ್ಯೆ ಅಪರೂಪವೆಂಬಂತೆ ಜನ ಮನ್ನಣೆ–ಮರ್ಯಾದೆಗಳೆರಡನ್ನೂ ಉಳಿಸಿಕೊಂಡಿದ್ದ ಅವರು, ಹೊಸ ಆಲೋಚನೆಗಳಿಗೆ

ತೆರೆದುಕೊಳ್ಳುವವರಂತೆ ಕಂಡವರು; ಸದ್ಯದ ಕರ್ನಾಟಕದ ರಾಜಕಾರಣ ಮುಟ್ಟಿರುವ ಅಧೋಗತಿಯು (ಈಗ ಕರ್ನಾಟಕವನ್ನು ದಕ್ಷಿಣದ ಬಿಹಾರ ಎಂದೂ ಕರೆಯಲಾಗುತ್ತಿದೆಯಂತೆ!) ಸಂಕೇತದಂತಿರುವ ಮತ್ತು ಆಧುನೀಕರಣದ ವಿಕ್ಷಿಪ್ತ ರೂಪದಂತಿರುವ ದೇವೇಗೌಡರ ರಾಜಕಾರಣದ ವಿರುದ್ಧ ಕೊನೆಗೂ ಸೆಟೆದು ನಿಂತವರು; ಅಷ್ಟೇನೂ ಆಧುನೀಕರಣಕ್ಕೆ ಒಳಗಾಗದಂತೆ ತೋರುವ ಅವರು, ತಾವು ಬಹುವಾಗಿ ಹಂಬಲಿಸುತ್ತಿರುವ ಸಾಮಾಜಿಕ ನ್ಯಾಯದ ಮೂಲ ಬೇರು ಗ್ರಾಮೀಣೀಕರಣದಲ್ಲಿದೆ ಎಂಬ ಗಾಂಧಿ ಹೊಳಹನ್ನು ಕ್ರಮೇಣವಾಗಿಯಾದರೂ ಕಾಣಬಲ್ಲರೆಂಬ ವಿಶ್ವಾಸವನ್ನು, ತಮ್ಮ ನಡೆ – ನುಡಿಗಳ ಮೂಲಕ ಮೂಡಿಸಿದ್ದವರು. ಆದರೀಗ ಸಿದ್ಧರಾಮಯ್ಯ ಕಾಂಗ್ರೆಸ್ ಸೇರಿ ಯುದ್ಧ ಆರಂಭಿಸದೆಯೇ ಸೋತವರಂತೆ ಕಾಣಿಸತೊಡಗಿದ್ದಾರೆ.

ಸಿದ್ಧರಾಮಯ್ಯನವರ ಸದ್ಯದ ರಾಜಕಾರಣ ಹೀಗಾಗಲು, ಅವರು ನಾನು 'ಅಹಿಂದ' ಚಳುವಳಿ ಕುರಿತ ಲೇಖನದಲ್ಲಿ ಹೇಳಿದಂತೆ (ಈ ಹಿಂದಿನ ಲೇಖನವನ್ನು ನೋಡಿ) ಅಧಿಕಾರದ ಆಧ್ಯಾತ್ಮೀಕರಣಕ್ಕೆ – ನಾನು ರಾಜಕಾರಣ ಮಾಡುತ್ತಿರುವುದಾದರೂ ಏತಕ್ಕೆ ಮತ್ತು ಯಾರಿಗಾಗಿ ಎಂಬ ಪ್ರಶ್ನೆಗೆ – ಅವಕಾಶವೇ ಇರದ ಆಧುನೀಕತೆಯ ಎರಕದಿಂದ ಸಂಪೂರ್ಣವಾಗಿ ಹೊರಬರುವಷ್ಟು ಅವರ ರಾಜಕೀಯ ವ್ಯಕ್ತಿತ್ವ ಮಾಗದಿರುವುದೇ ಕಾರಣವಾಗಿದೆ. ಅವರ ಪ್ರಕಾರ, ಅವರು ಕಾಂಗ್ರೆಸ್ಸಿಗೆ ಸೇರಿದ್ದು ಮೂರು ಕಾರಣಗಳಿಗಾಗಿ: ಒಂದು, ಕರ್ನಾಟಕದಲ್ಲಿ ಪ್ರಾದೇಶಿಕ ಪಕ್ಷದ ರಚನೆಯ ಹಲವು ಪ್ರಯತ್ನಗಳು ವಿಫಲವಾಗಿರುವುದರಿಂದ; ಎರಡು, ಹೊಸ ಪಕ್ಷ ಕಟ್ಟುವಷ್ಟು ದುಡ್ಡಿಲ್ಲದಿರುವುದರಿಂದ; ಮೂರು, ಕೋಮುವಾದಿ ಶಕ್ತಿಗಳನ್ನು ಕರ್ನಾಟಕದಲ್ಲಿ ಹಿಮ್ಮೆಟ್ಟಿಸುವ ತುರ್ತು ಅಗತ್ಯವಿರುವುದರಿಂದ. ಆದರೆ ಈ ಮೂರು ಕಾರಣಗಳು ಸಿದ್ಧರಾಮಯ್ಯ ಹುಟ್ಟಿಸಿದ್ದ ನಿರೀಕ್ಷೆಗಳ ಹಿನ್ನೆಲೆಯಲ್ಲಿ ಅಸಂಬದ್ಧವಾಗಿ ಕಾಣುತ್ತವೆ.

ಕರ್ನಾಟಕದಲ್ಲಿ ಹೊಸ ರಾಜಕಾರಣ ಮಾಡುವ ಬದ್ಧತೆಯಿಂದ ಪ್ರಾದೇಶಿಕ ಪಕ್ಷದ ರಚನೆಯ ಸಾಮೂಹಿಕ (ಆಂದೋಲನ ರೂಪಿಯಾದ) ಗಂಭೀರ ಪ್ರಯತ್ನವಾದರೂ ಯಾವಾಗ ನಡೆದಿದೆ? ದುಡ್ಡಿನಿಂದಲೇ ನಡೆಯುವ ರಾಜಕಾರಣ ಮಾಡುವುದಾದರೆ, ಸಿದ್ಧರಾಮಯ್ಯ ಮಾಡಬಹುದಾದ ರಾಜಕಾರಣದಿಂದ ನಾವೇನು ನಿರೀಕ್ಷಿಸಬಹುದು? ಸಿದ್ಧರಾಮಯ್ಯನವರು ಈಗ ಸೇರಿರುವ ಪಕ್ಷದ ಅಧಿಕಾರಾವಧಿಯಲ್ಲೇ ಅಲ್ಲವೇ 'ಕೋಮುವಾದಿ ಶಕ್ತಿಗಳು' ಬೆಳೆದು ಈಗ ಅಧಿಕಾರಕ್ಕೆ ಬರುವಂತಾಗಿರುವುದು ಎಂಬುದು ಅವರಿಗೆ ಗೊತ್ತಿಲ್ಲದ ವಿಷಯವೇ? ಸಿದ್ಧರಾಮಯ್ಯ ನೇರ ನಡೆ ನುಡಿಗೆ ಹೆಸರಾದವರು. ಹಾಗಾಗಿ ಅವರು ಕಾಂಗ್ರೆಸ್ ಸೇರಲು ಇರುವ ಮೂಲ ಪ್ರೇರಣೆ ಏನೆಂಬುದನ್ನು ಬಾಯಿಬಿಟ್ಟು ಹೇಳಲು ಏಕೆ ಹಿಂಜರಿಯುತ್ತಿದ್ದಾರೋ ತಿಳಿಯದು. ತಾವೇನೂ ಸಂನ್ಯಾಸಿಯಲ್ಲ ಎಂದು ಹೇಳುವ ಮೂಲಕ ಹಾಗೂ ಇತ್ತೀಚಿನ ದಿನಗಳಲ್ಲಿ 'ನಾನ್ಯಾಕೆ ಮುಖ್ಯ ಮಂತ್ರಿಯಾಗಬಾರದು?' ಎಂಬ ಪ್ರಶ್ನೆಯನ್ನು ಪದೇ ಪದೇ ಕೇಳಿಕೊಳ್ಳುವ ಮೂಲಕ ಸಿದ್ಧರಾಯಮ್ಮ ಈಗಾಗಲೇ ತಮ್ಮ ಗುಟ್ಟು ಬಿಟ್ಟುಕೊಟ್ಟಿದ್ದಾರೆ. ಆದರೆ ಅದು ಸ್ವಲ್ಪ ಆಘಾತಕಾರಿ ಗುಟ್ಟೇ ಆಗಿದೆ....

ಸಿದ್ಧರಾಮಯ್ಯ ಮುಖ್ಯ ಮಂತ್ರಿಯಾಗಬೇಕೆಂಬುದೇ ಅವರಲ್ಲಿ ವಿಶ್ವಾಸವಿಟ್ಟಿರುವ ಎಲ್ಲರ ಆಸೆ. ಆದರೆ ಅವರು ಅದಕ್ಕಾಗಿ ಮಾಡುವ ರಾಜಕಾರಣ ಎಂತಹದು ಎಂಬುದರ ಬಗ್ಗೆಯೂ, ಹಾಗೆ ಆಸೆ ಪಟ್ಟ ಎಲ್ಲರ ಆತಂಕ–ಕುತೂಹಲ–ಕಾಳಜಿಗಳಿವೆ. ಜಾಗತೀಕರಣದ ಆಘಾತಗಳನ್ನು ಎದುರಿಸುವಂತಹ ರಾಜಕಾರಣ ಮಾಡುವ ಮೂಲಕ ಅವರು ಮುಖ್ಯಮಂತ್ರಿಯಾಗುವುದಾದರೆ ಮಾತ್ರ ಅವರು ತಮ್ಮ ಕೇಂದ್ರ ಕಾಳಜಿಯನ್ನು ಮಾಡಿಕೊಂಡಿರುವ ಹಾಗೂ ಯಾವುದರ ಆಧಾರದ ಮೇಲೆ ಅವರು ಹೊಸ ರಾಜಕಾರಣದ ಆಸೆ ಹುಟ್ಟಿಸಿದ್ದರೋ, ಆ ಸಾಮಾಜಿಕ ನ್ಯಾಯದ ಪ್ರಶ್ನೆಯನ್ನು ಇಡಿಯಾಗಿ ಎದುರಿಸಬಲ್ಲರು. ಇದು ಕಾಂಗ್ರೆಸ್‌ನಲ್ಲಿ ಸಾಧ್ಯವೇ? ಅಸಾಧ್ಯವೆನಿಸುವುದಾದರೆ, ಸಿದ್ಧರಾಮಯ್ಯನವರು ಸದ್ಯದ ರಾಜಕಾರಣಕ್ಕೆ ಇರುವ ಅರ್ಥವಾದರೂ ಏನು? ಕುರುಬನೊಬ್ಬ ಮುಖ್ಯಮಂತ್ರಿಯಾಗಿ ಕುರುಬ ಜನಾಂಗದವರನ್ನು ಸಂತೋಷ ಪಡಿಸುವುದಷ್ಟೇ ಅವರ ಈ ಸಾಮಾಜಿಕ ನ್ಯಾಯ ರಾಜಕಾರಣದ ಉದ್ದೇಶವಾದರೆ, ಅಂತಹ ಮುಖ್ಯಮಂತ್ರಿತ್ವವನ್ನು ಉಳಿಸಿಕೊಳ್ಳುವುದೇ ಕಾಂಗ್ರೆಸ್‌ನಲ್ಲಿ ಸಿದ್ಧರಾಮಯ್ಯನವರಿಗೆ ದೊಡ್ಡ ಹಾಗೂ ಏಕೈಕ ಉದ್ಯೋಗವಾದೀತು. ಅದು ಸಿದ್ಧರಾಮಯ್ಯನವರಂತಹ ಸ್ವಾಭಿಮಾನಿ ಹಾಗೂ ಮರ್ಯಾದಸ್ಥ ರಾಜಕಾರಣಿಗೆ ನರಕವೇ ಸರಿ, ಅವರು ಆವರೆಗೆ ಸ್ವಾಭಿಮಾನ ಹಾಗೂ ಮರ್ಯಾದಸ್ತಿಕೆ ಉಳಿಸಿಕೊಂಡಿದ್ದರೆ!

ಒಂದು ಸಂಗತಿಯಂತೂ ನಿಜ : ಜಾಗತೀಕರಣವೆಂಬ ಮಾಯಾಜಾಲವನ್ನು ಸೃಷ್ಟಿಸಿರುವ ಆಧುನೀಕರಣದ ರಾಜಕಾರಣದಿಂದಾಗಿ ಕಂಗಾಲಾಗಿರುವ ಹಾಗೂ ಆಯಾಸಗೊಂಡಿರುವ ಬೃಹತ್ ಜನಸ್ತೋಮವೊಂದು ಸರಳ, ನೆಮ್ಮದಿಯ ಹೊಸ ರಾಜಕಾರಣದ ಹುಡುಕಾಟದಲ್ಲಿದೆ. ಒಮ್ಮೆ ಹಿಂದಿರುಗಿ ನೋಡಲು ಹಿಂಜರಿಯದ, ಆಧುನೀಕರಣದ ಮೂಲಾರ್ಥವನ್ನು ಪುನರ್‌ಶೋಧಿಸುವ ಧೈರ್ಯ ವಹಿಸಬಲ್ಲ ನಾಯಕತ್ವಕ್ಕಾಗಿ ಅದು ಕಾಯುತ್ತಿದೆ. ಇದನ್ನರಿಯದೇ ಹೋದ ಸಿದ್ಧರಾಮಯ್ಯ ಸುಲಭ ರಾಜಕಾರಣದ ಹಾದಿ ಹಿಡಿದಿದ್ದಾರೆ.

(ಸೆಪ್ಟೆಂಬರ್, ೨೦೦೬)

■

ಕಂಬಾಲಪಲ್ಲಿ ಮೊಕದ್ದಮೆಯೂ, ಸಾಮಾಜಿಕ ನ್ಯಾಯ ಚಳುವಳಿಯೂ

ದಲಿತರ ಆತ್ಮಗೌರವದ ಚಳುವಳಿಯಾಗಿ ಆರಂಭವಾದ ದಲಿತ ಚಳುವಳಿ, ೨೫ ವರ್ಷಗಳ ಹಿಂದೆ ಶೇಷಗಿರಿಯಪ್ಪನ ಕೊಲೆ ಪ್ರಕರಣವನ್ನು ಹೇಗೆ ಯಶಸ್ವಿಯಾಗಿ ನಿರ್ವಹಿಸಿತೆಂಬುದನ್ನು ನೆನಪಿಸಿಕೊಂಡರೆ, ಕಂಬಾಲಪಲ್ಲಿ ಮೊಕದ್ದಮೆಯ ವೈಫಲ್ಯದ ಕಾರಣಗಳು ಹೊಳೆಯುತ್ತವೆ. ಶೇಷಗಿರಿಯಪ್ಪನ ಕೊಲೆ ಪ್ರಕರಣದ ವಿಷಯದಲ್ಲಿ ದಲಿತ ಚಳುವಳಿಗೆ ಇಡೀ ಸಮಾಜದ ಸಹಾನುಭೂತಿ ದೊರಕಿತ್ತು. ಆದರೆ, ಕಂಬಾಲಪಲ್ಲಿ ದೌರ್ಜನ್ಯದ ಹೊತ್ತಿಗೆ ದಲಿತ ಚಳುವಳಿ ಎಡ, ಬಲಗಳೆಂದು ಮಾತ್ರವಲ್ಲದೆ ವ್ಯಕ್ತಿನಿಷ್ಠ ಗುಂಪುಗಳಾಗಿ ಕೂಡ ಹಲವು ದಿಕ್ಕುಗಳಲ್ಲಿ ಒಡೆದು ಹೋಗಿತ್ತು. ಆ ಮೂಲಕ ಅದು ರಾಜಕೀಯ ಪುಢಾರಿಗಿರಿಯ ಹಾಳು ಮಂಟಪದಂತಾಗಿ ಸಾರ್ವಜನಿಕರ ಸಹಾನುಭೂತಿ ಕಳೆದುಕೊಂಡಿತ್ತು.

ಕಂಬಾಲಪಲ್ಲಿ ದೌರ್ಜನ್ಯದ ಮೊಕದ್ದಮೆಯ ಆಪಾದಿತರೆಲ್ಲರೂ ಬಿಡುಗಡೆಗೊಂಡ ಸುದ್ದಿ ಕಳೆದೊಂದು ತಿಂಗಳಿಂದ ವಿವಿಧ ವ್ಯಾಖ್ಯಾನ ರೂಪಗಳಲ್ಲಿ ಹಾರಾಡುತ್ತಿದೆ. ದಲಿತ ಸಂಘರ್ಷ ಸಮಿತಿಯ ವಿವಿಧ ಗುಂಪುಗಳ ವಕ್ತಾರರಿಂದ ಪತ್ರಿಕಾ ಹೇಳಿಕೆಗಳು, ಪ್ರತಿಭಟನೆಗಳು, ಧರಣಿ ಇತ್ಯಾದಿಗಳು ವೃತ್ತಪತ್ರಿಕೆಗಳಲ್ಲಿ ಸುದ್ದಿ ಮಾಡುತ್ತಿವೆ. ಈ ದೌರ್ಜನ್ಯವನ್ನು ರಾಷ್ಟ್ರೀಯ ಸುದ್ದಿಯಾಗಿ ಪ್ರತಿಬಿಂಬಿಸಿ, ರಾಷ್ಟ್ರೀಯ ಕರ್ತವ್ಯವೊಂದನ್ನು ಮಾಡಿದಂತೆ ಬೀಗಿದ ರಾಷ್ಟ್ರೀಯ ವಾರ್ತಾ ವಾಹಿನಿಗಳೂ, ಈಗ ತಮಗೂ ಇದಕ್ಕೂ ಸಂಬಂಧವಿಲ್ಲದಂತೆ ತೆಪ್ಪಗಾಗಿವೆ. ಏಕೆಂದರೆ, ಈ ಬಗ್ಗೆ ಅವು ತಮ್ಮ ಮಾಧ್ಯಮಗಳಲ್ಲಿ ಪ್ರಚಾರ ನಡೆಸಿ ಜನಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಇದರಲ್ಲಿ ಕೊಲೆಯಾದವರು, ಜೆಸ್ಸಿಕಾ ಲಾಲ್‌ರಂತಹ ಥಳಕು-ಬಳುಕು ಲೋಕದ ಕನ್ಯೆಯರಲ್ಲವಲ್ಲ! ಸರ್ಕಾರ ಕೂಡಾ, ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸುವ ಇಂಗಿತ ವ್ಯಕ್ತಪಡಿಸಿದ್ದರೂ, ಈ ದಿಸೆಯಲ್ಲಿ ತ್ವರಿತವಾಗಿ ಕ್ರಮ ಕೈಗೊಳ್ಳುವ ತುರ್ತೇನೂ ಕಾಣಬರುತ್ತಿಲ್ಲ. ಮೇಲ್ಮನವಿ ಸಲ್ಲಿಸಿದರೂ, ಹಂಗರಹಳ್ಳಿ ಜೀತ ಪ್ರಕರಣದಂತೆಯೇ ಈ ಪ್ರಕರಣವೂ ಅಂತಿಮವಾಗಿ

'ಏನೂ ಮಾಡಲಾಗದ ಪರಿಸ್ಥಿತಿ'ಯಿಂದಾಗಿ 'ಖುಲಾಸೆ'ಯಾದರೆ ಆಶ್ಚರ್ಯವಿಲ್ಲ...

ದೌರ್ಜನ್ಯಕ್ಕೆ ಒಳಗಾದವರೇ ಪ್ರತಿಕೂಲ ಸಾಕ್ಷ್ಯ ಅಥವಾ ಹೇಳಿಕೆ ನೀಡುವಂತಹ ಅಸಹಾಯಕ ಸಂದರ್ಭ ಸೃಷ್ಟಿಯಾದರೆ, ನ್ಯಾಯಾಲಯಗಳಾದರೂ ಏನು ಮಾಡಿಯಾವು? ಆದರೆ ಈಚೆಗೆ ಇಂತಹ ಸಂದರ್ಭಗಳಲ್ಲಿ ನ್ಯಾಯಾಲಯ ಮತ್ತು ನ್ಯಾಯಾಧೀಶರನ್ನೇ ಟೀಕಿಸುವ ಸಾಮಾಜಿಕ ನ್ಯಾಯವಾದಿಗಳಿಗೇನೂ ನಮ್ಮಲ್ಲಿ ಕೊರತೆಯಿಲ್ಲ. ಉದಾಹರಣೆಗೆ, ಇತ್ತೀಚೆಗೆ ಸರ್ವೋನ್ನತ ನ್ಯಾಯಾಲಯವು ಹಿಂದುಳಿದ ವರ್ಗಗಳಿಗೆ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಶೇ.೨೭ರಷ್ಟು ಮೀಸಲಾತಿ ನೀಡುವ ಕೇಂದ್ರ ಸರ್ಕಾರದ ಕ್ರಮಕ್ಕೆ ತಡೆಯಾಜ್ಞೆ ನೀಡಿದ್ದಕ್ಕೆ, ಈ ತೀರ್ಪು ನೀಡಿದ ನ್ಯಾಯಾಧೀಶರುಗಳ ಜಾತಿ ಹಿನ್ನೆಲೆಯೇ ಕಾರಣವೆಂದು ಉದಿತ್ ರಾಜ್ ಎಂಬ ಸಾಮಾಜಿಕ ನ್ಯಾಯವಾದಿಯೊಬ್ಬರು ಮೊನ್ನೆ ಟಿ.ವಿ. ಚರ್ಚೆಯೊಂದರಲ್ಲಿ ನೇರವಾಗಿ ಆಪಾದಿಸಿ, ಎಲ್ಲರನ್ನೂ ದಂಗುಬಡಿಸಿದರು. ಅಲ್ಲದೆ, ಚರ್ಚೆಯಲ್ಲಿ ಭಾಗವಹಿಸಿದ್ದ ಇತರರಿಗೆ ಮಾತನಾಡಲೂ ಅವಕಾಶ ಕೊಡದಷ್ಟು ಉದ್ವಿಗ್ನರಾಗಿ ಒಂದೇ ಸಮನೆ ಕಿರುಚಾಡಿ ಹಾಸ್ಯಾಸ್ಪದರೆನಿಸಿಕೊಂಡರು. ಇದು ಸಾಮಾಜಿಕ ನ್ಯಾಯದ ಪರಿಕಲ್ಪನೆ ಮತ್ತು ಚಳುವಳಿ ಮುಟ್ಟಿರುವ ಅಧೋಗತಿಯ ಸೂಚನೆಯಷ್ಟೆ. ತನ್ನ ಜಾತಿಯವರ ಹೊರತಾಗಿ ಉಳಿದವರಿಂದ ನ್ಯಾಯ ಸಿಗದು ಎಂಬ ನಂಬಿಕೆಯನ್ನು ಬಿತ್ತ ಬಯಸುವ ಚಳುವಳಿ ಎಂತಹ ಸಮಾಜವನ್ನು ನಿರ್ಮಿಸಹೊರಟಿದೆ ಎಂದು ಊಹಿಸಿದರೇ ಭಯವಾಗುತ್ತದೆ.

ಇದಕ್ಕೆ ಮುಖ್ಯ ಕಾರಣ, ಸಮಾಜವಾದಿ ಚಳುವಳಿಯ ಅಂಗವಾಗಿ ರೂಪು ತಳೆದ (ಹಿಂದುಳಿದ ವರ್ಗಗಳ ಚಳುವಳಿಯೆಂದು ಜನಪ್ರಿಯವಾಗಿ ಗುರುತಿಸಲ್ಪಡುವ) ಈ ಸಾಮಾಜಿಕ ನ್ಯಾಯ ಚಳುವಳಿ, ತನ್ನ ಆರಂಭಿಕ ಯಶಸ್ಸಿನ ಮತ್ತಿನಲ್ಲಿ ತನ್ನ ಗಂತವ್ಯವಾದ ಸಮಾಜವಾದವನ್ನೇ ಕೈಬಿಟ್ಟು ಹಿಡಿದು ಹೊರಟ ಅಡ್ಡದಾರಿಯೇ ಕಾರಣವಾಗಿದೆ. ಸಮಾಜವಾದ ಮುನ್ನೋಡಿದ್ದ ಜಾತಿರಹಿತ ಸಮಾಜ, ಜಾತ್ಯತೀತತೆ, ಸರಳ-ಸಭ್ಯ ಜೀವನ ಶೈಲಿ ಹಾಗೂ ಎಲ್ಲಕ್ಕಿಂತ ಮುಖ್ಯವಾಗಿ, ಮಿತಿಗಳುಳ್ಳ ಬದುಕಿನ ಕಲ್ಪನೆ-ಇವೆಲ್ಲವನ್ನೂ ಕೈಬಿಟ್ಟು, ತಮಗೆ ಅನ್ಯಾಯ ಮಾಡಿದುವೆಂದು ಹೇಳಲಾದ ಜಾತಿಗಳ ಸ್ಥಾನ-ಮಾನಗಳನ್ನು ಪಡೆಯುವುದನ್ನೇ ಸಾಮಾಜಿಕ ನ್ಯಾಯವೆಂದು ಪ್ರತಿಪಾದಿಸುವ ಜನಪ್ರಿಯ ರಾಜಕೀಯ ವರಸೆಗೆ ಈ ಚಳುವಳಿ ಬಲಿಯಾಯಿತು. ಇದರಿಂದಾಗಿ ಇದು, ಸಹಜವಾಗಿಯೇ ಕರ್ನಾಟಕದಲ್ಲಿನ ಇತರ ಸಾಮಾಜಿಕ ಚಳುವಳಿಗಳಾದ ದಲಿತ ಹಾಗೂ ರೈತ ಚಳುವಳಿಗಳನ್ನೂ ದಾರಿ ತಪ್ಪಿಸುವಲ್ಲಿ ಯಶಸ್ವಿಯಾಯಿತು. ಇವೆರಡು ಚಳುವಳಿಗಳೂ ಸಮಾಜವಾದಿ ಆಶಯಗಳೊಂದಿಗೆ ಆರಂಭವಾಗಿದ್ದರೂ, ಅವುಗಳ ನಾಯಕರ ಕೈಮೀರಿ ಅಂತಿಮವಾಗಿ ಅವು ಸೂಕ್ಷ್ಮವಾಗಿ ಜಾತಿ ಹಿತಾಸಕ್ತಿಗಳನ್ನು ಸಂರಕ್ಷಿಸಿಕೊಳ್ಳುವ ಸಾಮಾಜಿಕ ವಿಭಜನಾ ಶಕ್ತಿಗಳಾಗಿ ಕೊನೆಗೊಂಡಿದ್ದನ್ನು ನಾವು ವಿಷಾದದಿಂದ ಗಮನಿಸಿದ್ದೇವೆ. ಇದರಿಂದ ಬುದ್ಧಿ ಕಲಿಯದ ನಾವು, ಶೇ.೨೭ರ ಮೀಸಲಾತಿ ಬಗ್ಗೆ ಕೆಲವು ಸ್ಪಷ್ಟೀಕರಣಗಳನ್ನು ಕೇಳಿ ತಾತ್ಕಾಲಿಕ

ತಡೆಯಾಜ್ಞೆಯನ್ನಷ್ಟೇ ನೀಡಿರುವ ನ್ಯಾಯಾಂಗದ ವಿರುದ್ಧ ಬಂದ್, ಧರಣಿ, ಪ್ರದರ್ಶನ, ಗೊತ್ತುವಳಿ ಅಂಗೀಕಾರ, ಟೀಕೆ–ಟಿಪ್ಪಣಿ ಇತ್ಯಾದಿಗಳಿಗೆ ಕೈ ಹಾಕುವ ಮೂಲಕ ಸಾಮಾಜಿಕ ನ್ಯಾಯ ಚಳುವಳಿಯ ಎಂತಹ ಗುಣಾತ್ಮಕ ಹಿನ್ನಡೆಗೆ ಕಾರಣರಾಗುತ್ತಿದ್ದೇವೆ ಎಂಬುದನ್ನೇ ಅರಿಯದವ ರಾಗಿದ್ದೇವೆ. ನ್ಯಾಯಾಲಯ ಹಿಂದುಳಿದ ವರ್ಗಗಳಿಗೆ ಶೇ.೨೭ರ ಮೀಸಲಾತಿಯನ್ನು ಈಗಾಗಲೇ ತಾತ್ವಿಕವಾಗಿ ಒಪ್ಪಿಕೊಂಡಿದೆ ಹಾಗೂ ಅದರ ಅನುಷ್ಠಾನಕ್ಕೆ ಅಗತ್ಯವಾದ ಮಾಹಿತಿಯನ್ನಷ್ಟೇ ಅದು ಕೇಳುತ್ತಿದೆ. ಇದನ್ನು ಗಮನಿಸದೆಯೇ, ನ್ಯಾಯಾಂಗದ ಮೇಲೇ ಜಾತೀಯತೆಯ ಆರೋಪ ಹೊರಿಸುವುದು ನಮ್ಮ ಜಾತೀಯತೆಯ ಪ್ರದರ್ಶನ ಮಾತ್ರವಾಗುತ್ತದೆ ಎಂಬ ಪ್ರಜ್ಞೆ ನಮಗಿದ್ದರೆ ಒಳಿತು.

ಈ ಮೀಸಲಾತಿಯನ್ನು ವಿರೋಧಿಸುತ್ತಿರುವ ವಿದ್ಯಾರ್ಥಿ ಸಮೂಹವನ್ನು ನಾವು ಶತ್ರುವಂತೆ ನೋಡುವಂತಾಗಿದ್ದರೆ, ನಮ್ಮ ಸಾಮಾಜಿಕ ನ್ಯಾಯ ಚಳುವಳಿಯ ಚಿಂತನೆಯ ಮಟ್ಟ, ಕನಿಕರ–ಸಹಾನುಭೂತಿಗಳಿಗಷ್ಟೇ ಅರ್ಹವಾದ ಆ ವಿದ್ಯಾರ್ಥಿಗಳ ಚಿಂತನೆಯ ಮಟ್ಟಕ್ಕಿಂತ ಮೇಲೇರಿಲ್ಲವೆಂದೇ ಅರ್ಥ. ಒಂದು ಚಳುವಳಿ ಸಾಮಾಜಿಕ ಚಳುವಳಿ ಅನ್ನಿಸಿಕೊಳ್ಳಬೇಕಾದರೆ, ಅದು ಜಾತಿ–ವರ್ಗಗಳನ್ನು ಮೀರಿ ಇಡೀ ಸಮಾಜದ ಹಿತವನ್ನು ದೃಷ್ಟಿಯಲ್ಲಿರಿಸಿಕೊಂಡು ತನ್ನ ತಾತ್ವಿಕತೆಯನ್ನು ರೂಪಿಸಿಕೊಳ್ಳಬೇಕಾಗುತ್ತದೆ ಹಾಗೂ ಅದರ ಆಧಾರದ ಮೇಲೆ ತನ್ನ ಹೋರಾಟವನ್ನು ಕಟ್ಟಿಕೊಳ್ಳಬೇಕಾಗುತ್ತದೆ. ಸಾಮಾಜಿಕ ನ್ಯಾಯ ಚಳುವಳಿ ಸಮಾಜವಾದಿ ಚಳುವಳಿಯ ಅಂಗವಾಗಿ ಆ ರೀತಿಯಲ್ಲೇ ಹುಟ್ಟಿತಾದರೂ, ಹಾಗೇ ಬೆಳೆಯಲಿಲ್ಲವಾದ್ದರಿಂದಲೇ ಅದು ಇತ್ತೀಚೆಗೆ ಈ ಹಿಂದೆ ಇಲ್ಲದಿದ್ದ ಒಂದು ವರ್ಗದ ಪ್ರಬಲ ವಿರೋಧವನ್ನು ಸತತವಾಗಿ ಎದುರಿಸುವಂತಾಗಿದೆ. ಅಂದರೆ, ನಮ್ಮ ಸಾಮಾಜಿಕ ನ್ಯಾಯ ಚಳುವಳಿ ತನ್ನ ಜವಾಬ್ದಾರಿಗಳನ್ನು ಸರಿಯಾಗಿ ನಿರ್ವಹಿಸಿಲ್ಲವೆಂದೇ ನಾವು ತಿಳಿಯಬೇಕಿದೆ. ಇಂದು ನ್ಯಾಯಾಲಯ ಈ ಚಳುವಳಿಯ ಮುಂದೆ ಹಲವು ಪ್ರಶ್ನೆಗಳನ್ನಿಟ್ಟಿದ್ದರೆ, ಅದು ಈ ಚಳುವಳಿ ನಿರ್ವಹಿಸದೇ ಹೋದ ಈ ಜವಾಬ್ದಾರಿಗಳನ್ನು ತಾನು ನಿರ್ವಹಿಸ ಹೊರಟಿದೆ ಎಂದೇ ಅರ್ಥ. ಶೇ.೨೭ರ ಪ್ರಮಾಣ ನಿಗದಿಗೆ ಅನುಸರಿಸಿದ ಮಾನದಂಡವೇನು ಹಾಗೂ ಮೀಸಲಾತಿಯ ಹೊರತಾಗಿ ಸಾಮಾಜಿಕ ನ್ಯಾಯ ಸಾಧನೆಗೆ ಬೇರೆ ಮಾರ್ಗಗಳಿಲ್ಲವೇ ಎಂಬ ಪ್ರಶ್ನೆಗಳನ್ನು ನ್ಯಾಯಾಲಯ ಕೇಳಿದ್ದರೆ, ಸಾಮಾಜಿಕ ನ್ಯಾಯ ಚಳುವಳಿಕಾರರು ಇದು ತಮ್ಮ ಚಳುವಳಿಯ ಗುರಿಗಳ ವಿಶದೀಕರಣ ಹಾಗೂ ಸಮರ್ಥನೆಗಾಗಿಯೇ ಎಂದು ತಿಳಿಯುವಷ್ಟು ವಿನಯವನ್ನು ಮೈಗೂಡಿಸಿಕೊಳ್ಳಬೇಕಿತ್ತು.

ಆದರೆ, ನಮ್ಮ ಸಾಮಾಜಿಕ ಚಳುವಳಿಯ ನಾಯಕರು ಇದನ್ನು ತಿಳಿಯಲಾಗದಷ್ಟು ಮೀಸಲಾತಿ ಮೌಢ್ಯಕ್ಕೆ ಒಳಗಾಗಿರುವುದು ಎದ್ದು ಕಾಣುತ್ತಿದೆ. ಸಾಮಾಜಿಕ ನ್ಯಾಯ ಕಲ್ಪನೆಯನ್ನು ಉದ್ಯೋಗ ಮೀಸಲಾತಿಗಷ್ಟೇ ಸೀಮಿತಗೊಳಿಸಿರುವುದರಿಂದಾಗಿ ಸೃಷ್ಟಿಯಾಗಿರುವ ಇಂತಹ ಮೌಢ್ಯದಿಂದಾಗಿಯೇ, ಜನಗಣತಿಯಲ್ಲಿ ಜಾತಿಯ ಕಾಲಂಗಾಗಿ ಒತ್ತಾಯಿಸುವ ಕಾರ್ಯಕ್ರಮದ ಅಥವಾ ಚಳುವಳಿಯ ಅಗತ್ಯವೇ ಅದಕ್ಕೆ ಈವರೆಗೆ

ಹೊಳೆದಿಲ್ಲ. (ಅಂತೂ ಈಗ ಕರ್ನಾಟಕದಲ್ಲಿ ಜಾತಿ ಜನಗಣತಿ ನಡೆದು ಫಲಿತಾಂಶಗಳಿಗಾಗಿ ಎದುರು ನೋಡಲಾಗುತ್ತಿದೆ.) ಹಾಗೇ ಮೀಸಲಾತಿ ವ್ಯವಸ್ಥೆಯು, ಮೀಸಲಾತಿಯನ್ನು ಅಗತ್ಯಗೊಳಿಸಿದ ಜಾತಿವ್ಯವಸ್ಥೆಗೆ ಹೊಸ ಪಾವಿತ್ರ್ಯ ಹಾಗೂ ಮಾನ್ಯತೆಗಳನ್ನೊದಗಿಸುವ ದಾರಿ ಹಿಡಿದಿರುವ ಬಗೆಗೆ ಅದಕ್ಕೆ ಚಿಂತೆಯೂ ಇಲ್ಲದಾಗಿದೆ. (ದುರಂತವೆಂದರೆ ತಮ್ಮನ್ನು ಸಮಾಜವಾದಿ ಎಂದು ಹೇಳಿಕೊಳ್ಳುವ ನಮ್ಮ ಸಾಮಾಜಿಕ ನ್ಯಾಯ ಚಳುವಳಿಯ ನಾಯಕರೊಬ್ಬರು ಜಾತಿ ಜನಸಂಖ್ಯೆಗೆ ಅನುಸಾರವಾಗಿ ಮೀಸಲಾತಿ ಇರಬೇಕೆಂಬ ಅನಾಹುತಕಾರಿ ಸಲಹೆಯನ್ನು ನೀಡುವ ಮಟ್ಟಕ್ಕೆ ಹೋಗಿದ್ದಾರೆ. ಆದುದರಿಂದ ಸಾಮಾಜಿಕ ಚಳುವಳಿಗೇನಾದರೂ ಸಾಮಾಜಿಕ ಮರ್ಯಾದೆಯ ಪರಿವೆ ಇದ್ದಲ್ಲಿ, ಅದು ನ್ಯಾಯಾಲಯವನ್ನು ಕುರುಡಾಗಿ ಟೀಕಿಸದೆ; ನ್ಯಾಯಾಲಯ ಕೇಳಿರುವ ಮಾಹಿತಿಯನ್ನು ಪೂರೈಸುವ ದಿಸೆಯಲ್ಲಿ ತುರ್ತು ಕ್ರಮ ಕೈಗೊಳ್ಳುವಂತೆ ಹಾಗೂ ಅಲ್ಲಿಯವರೆಗೆ ಮೀಸಲಾತಿಗೆ ತಾತ್ಕಾಲಿಕ ಅನುಮತಿ ನೀಡುವಂತೆ ನ್ಯಾಯಾಲಯಕ್ಕೆ ಕೋರಿಕೆ ಸಲ್ಲಿಸಲು ಸರ್ಕಾರವನ್ನು ಒತ್ತಾಯಿಸಬೇಕಿದೆ.

ಕಂಬಾಲಪಲ್ಲಿ ಮೊಕದ್ದಮೆಯ ವೈಫಲ್ಯವೂ ಸಾಮಾಜಿಕ ನ್ಯಾಯ ಚಳುವಳಿಯ ಇಂತಹುದೇ ಅಡ್ಡದಾರಿಯ ಪರಿಣಾಮವೇ ಆಗಿದೆ. ದಲಿತರ ಆತ್ಮಗೌರವದ ಚಳುವಳಿಯಾಗಿ ಆರಂಭವಾದ ದಲಿತ ಚಳುವಳಿ, ೨೫ ವರ್ಷಗಳ ಹಿಂದೆ ಶೇಷಗಿರಿಯಪ್ಪನ ಕೊಲೆ ಪ್ರಕರಣವನ್ನು ಹೇಗೆ ಯಶಸ್ವಿಯಾಗಿ ನಿರ್ವಹಿಸಿತೆಂಬುದನ್ನು ನೆನಪಿಸಿಕೊಂಡರೆ, ಕಂಬಾಲಪಲ್ಲಿ ಮೊಕದ್ದಮೆಯ ವೈಫಲ್ಯದ ಕಾರಣಗಳು ಹೊಳೆಯುತ್ತವೆ. ಶೇಷಗಿರಿಯಪ್ಪನ ಕೊಲೆ ಪ್ರಕರಣದ ವಿಷಯದಲ್ಲಿ ದಲಿತ ಚಳುವಳಿಗೆ ಇಡೀ ಸಮಾಜದ ಸಹಾನುಭೂತಿ ದೊರಕಿತ್ತು. ಆದರೆ, ಕಂಬಾಲಪಲ್ಲಿ ದೌರ್ಜನ್ಯದ ಹೊತ್ತಿಗೆ ದಲಿತ ಚಳುವಳಿ ಎಡ, ಬಲಗಳೆಂದು ಮಾತ್ರವಲ್ಲದೆ ವ್ಯಕ್ತಿನಿಷ್ಠ ಗುಂಪುಗಳಾಗಿ ಕೂಡ ಹಲವು ದಿಕ್ಕುಗಳಲ್ಲಿ ಒಡೆದು ಹೋಗಿತ್ತು. ಆ ಮೂಲಕ ಅದು ರಾಜಕೀಯ ಪುಢಾರಿಗಿರಿಯ ಹಾಳು ಮಂಟಪದಂತಾಗಿ ಸಾರ್ವಜನಿಕರ ಸಹಾನುಭೂತಿ ಕಳೆದುಕೊಂಡಿತ್ತು. ಇಂತಹ ವಾತಾವರಣದಲ್ಲಿ ಈ ಸಂಬಂಧದ ಮೊಕದ್ದಮೆಯು ಕೇವಲ ಒಂದು ಸರ್ಕಾರಿ ಮೊಕದ್ದಮೆಯಾಗಿ ಪರಿವರ್ತಿತವಾಗಿ, ತಾನು ಕಾಣಬೇಕಾದ ಗತಿಯನ್ನೇ ಕಂಡಿದೆ. ಅನ್ಯಾಯಕ್ಕೊಳಗಾದವರಿಗೆ ಅಗತ್ಯ ಅಭಯ ಹಾಗೂ ರಕ್ಷಣೆ ಸಿಗದೆ, ಅವರು ಸಿಕ್ಕಿರುವ ಪರಿಹಾರದಲ್ಲಿ ಹೇಗೋ ಬದುಕಿಕೊಂಡರೆ ಸಾಕಪ್ಪಾ ಎಂಬ ಅಸಹಾಯಕತೆಗೆ ಶರಣಾಗಿ ಮೊಕದ್ದಮೆ ಬುಡಮೇಲುಗೊಂಡಿದೆ.

ಇದಕ್ಕೆ ಸರ್ಕಾರದ ಬೇಜವಾಬ್ದಾರಿತನ ಎಷ್ಟು ಕಾರಣವೋ, ದಲಿತ ಚಳುವಳಿಯ ಬೇಜವಾಬ್ದಾರಿತನವೂ ಅಷ್ಟೇ ಕಾರಣವಾಗಿದೆ. ದೌರ್ಜನ್ಯವಾದಾಗ ಹುಯಿಲೆಬ್ಬಿಸಿದ ದಲಿತ ನಾಯಕರು ಈಗ ಮತ್ತೆ ಸುದ್ದಿಯಲ್ಲಿರುವುದು ಮೊಕದ್ದಮೆ ವಿಫಲವಾದಾಗ ಹುಯಿಲೆಬ್ಬಿಸುವ ಮೂಲಕವೇ. ಇಂದಿನ ದಲಿತ ಚಳುವಳಿ ವರ್ಷ ಪೂರ್ತಿ ಅಂಬೇಡ್ಕರ್ ಜಯಂತಿ ಆಚರಿಸುತ್ತಾ ಸ್ವಯಂ ಮರುಕ ಹಾಗೂ ಅನ್ಯಾಕ್ರಮಣಗಳ ಸಂಭ್ರಮದಲ್ಲೇ

ಮುಳುಗಿ ಹೋಗಿದೆ. ಇಂತಹ ಸಂದರ್ಭದಲ್ಲಿ ಅಂಬೇಡ್ಕರ್ ಜಯಂತಿ ಆಚರಣೆಗಿಂತ ಮುಖ್ಯ ಕೆಲಸ ಕಂಬಾಲಪಲ್ಲಿ ಮೊಕದ್ದಮೆಯಲ್ಲಿ ನ್ಯಾಯ ಪಡೆಯುವುದು ಎಂಬುದು ಅದಕ್ಕೆ ಅರ್ಥವಾದಾಗ ಮಾತ್ರ ಅದು ಮತ್ತೆ ಆತ್ಮಗೌರವದ ಚಳುವಳಿಯಾಗಬಲ್ಲುದು ಹಾಗೂ ಈಚಿನ ದಿನಗಳಲ್ಲಿ ಹೆಚ್ಚುತ್ತಿರುವ ದಲಿತ–ಸವರ್ಣೀಯ ಘರ್ಷಣೆಗಳಿಗೆ ಕಡಿವಾಣ ಹಾಕಬಹುದು. ಆದರೆ ನಮ್ಮ ಎಲ್ಲ ಸಾಮಾಜಿಕ ಚಳುವಳಿಗಳು ತಮ್ಮ ಅಂತಿಮ ಗುರಿಗಳ ಕಲ್ಪನೆಯನ್ನೇ ಕಳೆದುಕೊಂಡು ಅಲ್ಪಾವಧಿ ಲಾಭಗಳಿಗಷ್ಟೇ ಎಚ್ಚೆತ್ತುಕೊಳ್ಳುವ ಹುಯಿಲುಗಳಾಗಿ ಅವನತಿಗೊಂಡಿರುವಾಗ ಯಾರೇನು ಮಾಡಬಲ್ಲರು?

(ಏಪ್ರಿಲ್ ೨೭, ೨೦೦೭)

■

ಅರವತ್ತು ವರ್ಷಗಳ ಸಂವಿಧಾನ: ತಳವರ್ಗಗಳಿಗೆ ಏನು ಮಾಡಿದೆ?: *ಸಮಾಜವಾದಿಯೊಬ್ಬನ ಚದುರಿದ ಚಿಂತನೆಗಳು...*

ಜಾತಿ ಪದ್ಧತಿಯ ಹಿಂದಿನ ತಾತ್ವಿಕತೆಯನ್ನು ಪ್ರತಿ ಜಾತಿಯೂ ತನ್ನ ಶೋಷಣೆಯ, ತನಗಾದ ಅನ್ಯಾಯದ ಸಂಕಥನವನ್ನು ಕಟ್ಟಿಕೊಳ್ಳಲು ತನ್ನದೇ ರೀತಿಯಲ್ಲಿ ಬಳಸಿಕೊಂಡಿತು. ಪರಂತು, ಜಾತಿ ಪದ್ಧತಿ ಎಂಬುದೇ ಹೇಗೆ ಒಂದು ಸಮಾಜ ವಿರೋಧಿ ಆಚರಣೆಯಾಗಿದ್ದು, ಅದು ಸಮಾಜದ ಇಡಿತನವನ್ನೇ ನಾಶ ಮಾಡಿ, ಅದರ ಚೈತನ್ಯವನ್ನೇ ಉಡುಗಿಸಿದೆ ಎಂಬ ಅರಿವಿಗೆ ತೆರೆದುಕೊಳ್ಳಲಿಲ್ಲ. ಹಾಗೇ, ಈ ಪದ್ಧತಿಯನ್ನು ನಿರಾಕರಿಸದ ಹೊರತು, ನಿರ್ಮೂಲನ ಮಾಡದ ಹೊರತು ಯಾರ ಸಮಸ್ಯೆಯೂ ಬಗೆ ಹರಿಯಲಾರದು ಎಂಬ ಒಟ್ಟಾರೆಯಾದ ರಾಷ್ಟ್ರೀಯ ಬೇಡ, ಒಂದು ಸಾಮಾಜಿಕ ದೃಷ್ಟಿಕೋನ ವನ್ನು ತನ್ನ ತಾತ್ವಿಕ ನಂಬುಗೆಯಾಗಿ ತಳವರ್ಗಗಳ ಹೋರಾಟ ರೂಢಿಸಿಕೊಳ್ಳಲಾಗಲಿಲ್ಲ. ಹಾಗಾಗಿ, ಇಂದು ಸಾಮಾಜಿಕ ನ್ಯಾಯದ ಹೆಸರಲ್ಲಿ ವಿತರಿಸಲಾಗುತ್ತಿರುವ ವಿಶೇಷ ಸವಲತ್ತುಗಳು ಮೂಲತಃ ಸಾಮಾಜಿಕ ನ್ಯಾಯುಯುವಲ್ಲ;ಬದಲಿಗೆ ಜಾತಿ ನ್ಯಾಯ ಮಾತ್ರವಾಗಿದೆ ಎಂದೇ ಹೇಳಬಹುದು.

ನಾನು ಸಂವಿಧಾನ ತಜ್ಞನೂ ಅಲ್ಲ, ತಳ ವರ್ಗಗಳ ಸ್ಥಿತಿಗತಿಗಳನ್ನು ಕುರಿತು ಕ್ಷೇತ್ರಾಧ್ಯಯನ ಮಾಡಿದ ಸಂಶೋಧಕನೂ ಅಲ್ಲ. ಆದರೆ ಕಳೆದ ಮುವ್ವತ್ತು-ಮುವ್ವತ್ತೈದು ವರ್ಷಗಳಿಂದ ಸಮಾಜವಾದಿ ತತ್ವ ಮತ್ತು ಆದರ್ಶಗಳಲ್ಲಿ ನಂಬಿಕೆಯಿಟ್ಟು ಕೆಲವು ಜನಪರ ಆಂದೋಲನಗಳೊಂದಿಗೆ ಸಂಪರ್ಕವಿಟ್ಟುಕೊಂಡು ಬಂದವನು. ಅವುಗಳ ಏಳು-ಬೀಳುಗಳನ್ನು ಹತ್ತಿರದಿಂದ ನೋಡಿದವನು ಮತ್ತು ಆ ಬಗ್ಗೆ ಚಿಂತಿಸಿದವನು. ಇವಿಷ್ಟೇ ಅರ್ಹತೆಗಳ ಆಧಾರದ ಮೇಲೆ ಈ ಕೆಲವು ಟಿಪ್ಪಣಿಗಳನ್ನು ನಾನಿಲ್ಲಿ ದಾಖಲಿಸುತ್ತಿದ್ದೇನೆ:

೧. ಸಂವಿಧಾನ ಮೂಡಿದ್ದು ಮುಖ್ಯವಾಗಿ ನಮ್ಮ ರಾಷ್ಟ್ರೀಯ ಚಳುವಳಿಯ (ಸ್ವಾತಂತ್ರ್ಯ ಹೋರಾಟದ) ಮೂಸೆಯಲ್ಲಿ ಹುಟ್ಟಿದ ಅಥವಾ ಗರಿಗಟ್ಟಿಕೊಂಡ ಆಶಯ

ಗಳಿಗನುಗುಣವಾಗಿ. ಅದು ಭಾರತದ ಶತ ಶತಮಾನಗಳ ಜಡತ್ವವನ್ನು ಕಲಕಿದ, ಹೊಸ ಆದರ್ಶಗಳನ್ನು ಎತ್ತಿ ಹಿಡಿದ ಕಾಲ. ಹಾಗಾಗಿ ಆ ಆದರ್ಶಗಳೆಲ್ಲವೂ ಬಹುಶಃ ಗಾಂಧೀಜಿಯ 'ಗ್ರಾಮ ಸ್ವರಾಜ್ಯ'ದ ನಮ್ಮ ಸಂವಿಧಾನದ ಪೀಠಿಕೆ, ಮೂಲಭೂತ ಹಕ್ಕುಗಳು ಮತ್ತು ರಾಜ್ಯ ನಿರ್ದೇಶಕ ತತ್ವಗಳಲ್ಲಿ ಅಡಕವಾದವು. ಮುಖ್ಯವಾಗಿ ಸ್ವಾತಂತ್ರ್ಯ, ಸಮಾನತೆ ಮತ್ತು ಸಾಮಾಜಿಕ ನ್ಯಾಯ. ಇವು ಅನೇಕ ಐತಿಹಾಸಿಕ ಕಾರಣಗಳಿಂದಾಗಿ ಅಸಮಾನ ಸಮಾಜವಾಗಿ ಬೆಳೆದು ನಿಂತಿದ್ದ ಭಾರತೀಯ ಸಮಾಜಕ್ಕೆ ಅತ್ಯಗತ್ಯವಾಗಿದ್ದ ಚಿಕಿತ್ಸಾತ್ಮಕ ಮೌಲ್ಯಗಳೇ ಆಗಿದ್ದವು. ವಿಶೇಷವಾಗಿ ತಳವರ್ಗಗಳ ಹಿತ ರಕ್ಷಣೆಯ ದೃಷ್ಟಿಯಿಂದ, ಪರಮಾಧಿಕಾರವುಳ್ಳ ಪ್ರಜಾಸತ್ತಾತ್ಮಕ ಗಣರಾಜ್ಯ ವ್ಯವಸ್ಥೆ ಈ ಮೌಲ್ಯಗಳಿಗೊಂದು ರಕ್ಷಣಾತ್ಮಕ ಚೌಕಟ್ಟನ್ನು ಒದಗಿಸಿತು. ಸಂವಿಧಾನದ ಪ್ರಕಾರ ತಳವರ್ಗಗಳು ಎಂದರೆ, ವಂಚಿತ ವರ್ಗಗಳು–ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದು, ಈ ರಾಜ್ಯವ್ಯವಸ್ಥೆಯ ನಿರ್ವಹಣೆಯಲ್ಲಿ ಸಮಾನ ಪಾಲುದಾರರಾಗಿ ಭಾಗವಹಿಸಲಾಗದ;ಹಾಗಾಗಿ ವಿಶೇಷ ಪ್ರೋತ್ಸಾಹಕ ಕ್ರಮಗಳ ಅಗತ್ಯವಿರುವ ವರ್ಗಗಳು. ಸ್ಥೂಲವಾಗಿ ಹೇಳುವುದಾದರೆ, ಅಸ್ಪೃಶ್ಯ ಮತ್ತು ಇತರೆ ದಲಿತ ಜಾತಿಗಳು, ಆದಿವಾಸಿಗಳು ಮತ್ತು ಭಾರತ ಪಾರಂಪರಿಕವಾಗಿ ಪಾಲಿಸುತ್ತಾ ಬಂದಿದ್ದ ವರ್ಣ ವ್ಯವಸ್ಥೆಯ ಶ್ರೇಣೀಕರಣದಲ್ಲಿ ತಳಸ್ಥಾನಗಳಲ್ಲಿರುವ ವರ್ಣಗಳ ವ್ಯಾಪ್ತಿಗೆ ಬರುವ ಜಾತಿಗಳು. ಈಗ ಈ ವರ್ಗಕ್ಕೆ ಶಾಸ್ತ್ರೀಯ ಅಧ್ಯಯನಗಳ ನೆಲೆಯಲ್ಲಿ ಮಹಿಳೆಯರು ಮತ್ತು ಮತೀಯ ಅಲ್ಪಸಂಖ್ಯಾತರನ್ನೂ ಸೇರಿಸಲಾಗುತ್ತಿದೆಯಾದರೂ, ಅದರ ಸಮರ್ಥನೆಗೆ ಇನ್ನೂ ಸರ್ವಸಮ್ಮತವಾದ ಶಾಸ್ತ್ರೀಯ ಮಾನದಂಡಗಳೂ, ಸಾಂವಿಧಾನಿಕ ಮಾನ್ಯತೆಯೂ ದೊರಕಬೇಕಿದೆ.

ಅದೇನೇ ಇರಲಿ, ಈ ಸಂವಿಧಾನದ ಕರಡು ಸಿದ್ಧಪಡಿಸುವ ಮುಂದಾಳತ್ವ ಆ ಹೊತ್ತಿಗೆ ಅತ್ಯಂತ ಶ್ರೇಷ್ಠ ಕಾನೂನು ತಜ್ಞರಾಗಿ, ಅದಕ್ಕಿಂತ ಹೆಚ್ಚಾಗಿ ತಳವರ್ಗಗಳ ಅಥೆಂಟಿಕ್ ಧ್ವನಿಯಾಗಿ ಮೂಡಿ ನಿಂತಿದ್ದ ಬಾಬಾ ಸಾಹೇಬ್ ಅಂಬೇಡ್ಕರ್ ಅವರಿಗೆ ಒದಗಿಬಂತು. (ಇದು ಸಾಧ್ಯವಾದದ್ದೂ, ಮೇಲೆ ಹೇಳಿದ ರಾಷ್ಟ್ರೀಯ ಆಂದೋಲನದ ಆದರ್ಶಗಳ ವಾತಾವರಣದಿಂದಾಗಿಯೇ) ಈ ಹಿನ್ನೆಲೆಯಲ್ಲಿ, ಆವರೆಗೆ ಸಾಮಾಜಿಕ ಭಾರತ ಯಾರ ಸುಪರ್ದಿಯಲ್ಲಿತ್ತೋ, ಅದನ್ನು ಆ ಪ್ರತಿಷ್ಠಿತ ವರ್ಗಗಳ ಏಕಸ್ವಾಮ್ಯದಿಂದ ಕೈ ತಪ್ಪಿಸಿ ತಳವರ್ಗಗಳನ್ನು ರಾಜ್ಯಾಧಿಕಾರದ ಅವಿಭಾಜ್ಯ ಅಂಗವಾಗಿಸಿಕೊಂಡ ಸಂವಿಧಾನ ರೂಪಿತವಾಯಿತು. ಇದರ ಪರಿಣಾಮವಾಗಿ ತಳ ವರ್ಗಗಳಿಗೆ ಕಾನೂನುಗಳಡಿ ಸಾಮಾಜಿಕ, ರಾಜಕೀಯ ಮತ್ತು ಶೈಕ್ಷಣಿಕ ನೆಲೆಗಳಲ್ಲಿ ವಿಶೇಷ ರಕ್ಷಣೆ ಮತ್ತು ಪ್ರೋತ್ಸಾಹ ದೊರಕಿತು. ಆದರೆ ಇದೇನೂ ಆಳದ ಸಾಮಾಜಿಕ ಸಮ್ಮತಿಯೊಂದಿಗೆ ಅನುಮೋದಿತವಾಯಿತೆಂದು ಹೇಳುವ ಹಾಗಿಲ್ಲ. ಏಕೆಂದರೆ, ರಾಷ್ಟ್ರ ಪ್ರಗತಿಶೀಲ ಸಂವಿಧಾನವನ್ನು ಒಪ್ಪಿಕೊಂಡಿದ್ದರ ಉತ್ಸಾಹ–ಸಂಭ್ರಮಗಳಿಗೆ ತಣ್ಣೀರೆರಚುವಂತೆ, ಅಂಬೇಡ್ಕರರ ಅಪೇಕ್ಷೆಯಂತೆ, ಬಹುಪಾಲು ರಾಷ್ಟ್ರ ಜೀವನವನ್ನು ಮಧ್ಯಯುಗೀನ ನಂಬಿಕೆ ಮತ್ತು ಕಟ್ಟುಪಾಡುಗಳಿಂದ

ಮುಕ್ತಗೊಳಿಸಬಲ್ಲದಾಗಿದ್ದ ಹಿಂದೂ ಕೋಡ್ ಬಿಲ್ ಪೂರ್ಣ ರೂಪದಲ್ಲಿ ಸಂಸತ್ತಿನಿಂದ ಅನುಮೋದನೆ ಪಡೆಯಲಾಗಲಿಲ್ಲ. ವಾಸ್ತವವೆಂದರೆ, ಮಸೂದೆಯ ಎರಡನೆಯ ಭಾಗವನ್ನು ಸಂಸತ್ತಿನ ಮುಂದೆ ಮಂಡಿಸಲೂ ಅವರಿಗೆ ಅವಕಾಶ ಒದಗಲಿಲ್ಲ. ಇದಕ್ಕೆ ರಾಷ್ಟ್ರೀಯ ಆಂದೋಲನದ ಪ್ರಗತಿಶೀಲತೆ ಮತ್ತು ಉದಾರವಾದಗಳ ಪ್ರತೀಕವೆಂದೇ ಬಿಂಬಿತವಾಗಿದ್ದ ಜವಹರಲಾಲ್ ನೆಹ್ರೂ ಅವರಿಂದಲೂ ಪೂರ್ಣ ಬೆಂಬಲ ಸಿಗದೆ, ಅಂಬೇಡ್ಕರರು ತಮ್ಮ ಕಾನೂನು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕಾಯಿತು. ಇದು ಭಾರತ ಒಂದು ಪ್ರಜಾಪ್ರಭುತ್ವವಾದಿ ಗಣರಾಜ್ಯವಾಗಿ ಅಷ್ಟೇನೂ ಭದ್ರವಾದ ಅಸ್ತಿವಾರ ಹಾಕಿಕೊಳ್ಳುವುದಕ್ಕೆ ಆಗಿನ್ನೂ ತಯಾರಾಗಿರಲಿಲ್ಲವೆಂಬುದನ್ನು ಸೂಚಿಸುತ್ತದಷ್ಟೆ.

ಈ ಮಾತನ್ನು ಹೇಳುವ ಸಂದರ್ಭದಲ್ಲೇ ತೀರ್ಥಹಳ್ಳಿಯ ಸಮಾಜವಾದಿ ನಾಯಕ ದಿ॥ ಜಿ. ಸದಾಶಿವರಾಯರು ಕಳೆದ ಶತಮಾನದ ಐವ್ವತ್ತರ ದಶಕದಲ್ಲಿ ತಳವರ್ಗಗಳ ಗೇಣಿದಾರರ ನಾಗರಿಕ ಹಕ್ಕುಗಳನ್ನು ಎತ್ತಿ ಹಿಡಿಯಲು ನಡೆದ ಕಾಗೋಡು ಸತ್ಯಾಗ್ರಹದ ಸಂಬಂಧವಾಗಿ ಆಡಿದ ಒಂದು ಅರ್ಥಪೂರ್ಣ ಮಾತನ್ನು ಉಲ್ಲೇಖಿಸಬೇಕು. ನಮ್ಮ ಸ್ವಾತಂತ್ರ್ಯ ಹೋರಾಟ ಸರಿಯಾಗಿ ನಡೆದಿದ್ದರೆ, ಕಾಗೋಡು ಸತ್ಯಾಗ್ರಹದಂತಹ ಚಳುವಳಿಗಳ ಅಗತ್ಯ ಬೀಳುತ್ತಿರಲಿಲ್ಲ ಎಂಬುದು ಅವರ ಮಾತು. ಇದರ ಧ್ವನಿತಾರ್ಥ: 'ಹಿಂದ್ ಸ್ವರಾಜ್'ನಲ್ಲಿ ವ್ಯಕ್ತವಾಗುವ ಸಮಗ್ರ ಕ್ರಾಂತಿಕಾರಿ ಆಶಯದ ಹೊರತಾಗಿಯೂ, ಗಾಂಧಿ ನೇತೃತ್ವದ ಸ್ವಾತಂತ್ರ್ಯ ಹೋರಾಟ ಆತ್ಯಂತಿಕವಾಗಿ ಬಾಹ್ಯ ವಸಾಹತುಶಾಹಿ ವಿರುದ್ಧ ಹೋರಾಟವಾಯಿತೇ ಹೊರತು ಆಂತರಿಕ ವಸಾಹತುಶಾಹಿ ವಿರೋಧಿ ಹೋರಾಟವಾಗಿ ರೂಪಿತವಾಗಲಿಲ್ಲ. ಗಾಂಧೀಜಿಯ ಕೊಲೆ ರಾಷ್ಟ್ರೀಯ ಹೋರಾಟದ ಈ ಅಪೂರ್ಣತೆಯ ಹಿಂದಿದ್ದ ಕಾರಣಗಳೇನು ಎಂಬುದನ್ನು ವಿವರಿಸುತ್ತದಷ್ಟೆ.

ಈ ಅಪೂರ್ಣತೆಯನ್ನು ನೆಹರೂ ತಮ್ಮ ಜನಪ್ರಿಯತೆಯನ್ನು ಬಳಸಿಕೊಂಡು ಪೂರ್ಣಗೊಳಿಸಬಹುದಿತ್ತು. ಆದರೆ ಅವರು ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಈ ಎಲ್ಲ ನೆಲೆಗಳಲ್ಲಿ ಸಮನ್ವಯದ ಸುಲಭ ಮಾರ್ಗ ಆರಿಸಿಕೊಂಡರು. ಅವರು ಭಾರತವನ್ನು ವೈವಿಧ್ಯತೆಯಲ್ಲಿನ ಏಕತೆಯ ಸುಂದರ ಪ್ರತೀಕ ಎಂದು ಬಣ್ಣಿಸಿದ್ದು, ಕೇವಲ ಸಾಂಸ್ಕೃತಿಕ ನೆಲೆಯಲ್ಲಿ ಎಂದು ಸರಳವಾಗಿ ತಿಳಿದವರಿಗೆ, ಭಾರತದಲ್ಲಿ ಸಂಸ್ಕೃತಿ ಎಂಬುದರ ಅರ್ಥ ಎಷ್ಟು ಆಳದವರೆಗೆ ಹಬ್ಬಿರುತ್ತದೆ ಎಂಬುದು ಗೊತ್ತಿಲ್ಲ ಎಂದು ಹೇಳಬೇಕಾಗುತ್ತದೆ. ಹಾಗಾಗಿಯೇ ನೆಹ್ರೂ ತಮ್ಮನ್ನು ಸಮಾಜವಾದಿ ಎಂದು ಬಣ್ಣಿಸಿಕೊಂಡರೂ, ಭಾರತವನ್ನು ಅದರ ತಳವರ್ಗಗಳ ಕಣ್ಣಲ್ಲಿ ಕಾಣುವ ಪ್ರಯತ್ನ ಮಾಡದೆ, ಪ್ರತಿಷ್ಠಿತ ವರ್ಗಗಳು ತಮ್ಮ ಉನ್ನತೀಕರಣಕ್ಕಾಗಿ ನಂಬಿದ್ದ 'ಅಭಿವೃದ್ಧಿ' ಕಲ್ಪನೆಗೆ ಜೋತು ಬಿದ್ದರು. ಅದು ಸಾಧಿತವಾದರೆ ತಾನೇ ತಾನಾಗಿ ತಳವರ್ಗಗಳೂ ಉನ್ನತಿಗೆ ಬರುವವು ಎಂಬ ಆಧುನಿಕ 'ಅಭಿವೃದ್ಧಿ' ರಾಜಕಾರಣದ ಸ್ವಯಂಚಾಲಿತ ತರ್ಕಕ್ಕೆ ಅವರು ಮರುಳಾದರು. ಭಾರತದ ವರ್ಣ ವ್ಯವಸ್ಥೆ ಉಂಟು ಮಾಡಿದ್ದ ಆಳವಾದ ಸಾಮಾಜಿಕ ಒಡಕಿನ ಆಳ ನೆಹ್ರೂ ಅವರಂತಹ ಆಧುನಿಕರ ಮನಸ್ಸನ್ನೂ

ಮಂಕುಗೊಳಿಸಿತ್ತು. ಅಥವಾ ಇದು ಅವರು ನಂಬಿದ್ದ ಆಧುನಿಕತೆಯೇ ಸೃಷ್ಟಿಸಿದ ಮಾಯೆಯೋ, ಹೇಳಲಾಗದು!

ಅವರು ತಳ ವರ್ಗಗಳ ಕಣ್ಣಿಂದ ಭಾರತವನ್ನು ನೋಡಿದ್ದರೆ, ಭಾರತ ವೈವಿಧ್ಯತೆಯಲ್ಲಿ ಒಂದಾಗಿಲ್ಲ, ಬದಲಿಗೆ ಒಡೆದು ಹೋಗಿದೆ ಎಂಬುದು ಕಾಣುತ್ತಿತ್ತು. ಈ ಒಡಕನ್ನು ಮುಚ್ಚುವುದೇ ನಿಜವಾಗಿ ರಾಷ್ಟ್ರ ಕಟ್ಟುವ ಕೆಲಸವಾಗಿದೆ ಮತ್ತು ಇದಕ್ಕಾಗಿ ಒಂದು ಹೊಸ (ಗಾಂಧಿ ಅಪೂರ್ಣವಾಗಿ ಉಳಿಸಿ ಹೋದ) ರಾಷ್ಟ್ರೀಯ ಆಂದೋಲನವನ್ನು ಮುಂದುವರಿಸಬೇಕಾಗಿದೆ ಎಂಬುದರ ಅರಿವಾಗುತ್ತಿತ್ತು. ಬಹುಶಃ, ಮೇಲೆ ಹೇಳಿದಂತೆ ಸಾರಾ ಸಗಟಾದ ಆಧುನಿಕತೆಯ ಪ್ರಭಾವದಿಂದಾಗಿ ಈ ಅರಿವು ಅವರಲ್ಲಿ ಮೂಡಲಿಲ್ಲ. ಈ ಕಾರಣದಿಂದಾಗಿಯೇ ಅವರು ಸಂವಿಧಾನದ ಆಶಯ ಮತ್ತು ನಿರ್ದೇಶಕ ತತ್ವಗಳನ್ನು ಬಳಸಿಕೊಂಡು, ಸ್ಥಾಪಿತ ಹಿತಾಸಕ್ತಿಗಳಾಗಿದ್ದ ಗುತ್ತೇದಾರಿ ಉದ್ಯಮಗಳ, ಜಮೀನ್ದಾರಿ ಪದ್ಧತಿಯ, ಜಾತಿ ವ್ಯವಸ್ಥೆಯ ಮತ್ತು ವರ್ಗ ಶಿಕ್ಷಣ ವ್ಯವಸ್ಥೆಯ ಅಡಿಗಲ್ಲುಗಳನ್ನು ಅಲ್ಲಾಡಿಸುವ ಕೆಲಸಕ್ಕೆ ಕೈಹಾಕಲಿಲ್ಲ. ತಳ ವರ್ಗಗಳ ಉತ್ಪಾದನಾ ತಂತ್ರ ಮತ್ತು ದಕ್ಷತೆಗಳನ್ನು ಹೆಚ್ಚಿಸುವ ಕಾರ್ಯಕ್ರಮಗಳ ಬಗ್ಗೆ ಯೋಚಿಸಲಾಗಲಿಲ್ಲ. ಅವರು ಭಾರತವನ್ನು ಅದಿದ್ದಂತೆ ಅಭಿವೃದ್ಧಿಗೊಳಿಸಲು ಯತ್ನಿಸಿದರಷ್ಟೆ. ತಳವರ್ಗಗಳೂ ಈ ಪ್ರಕ್ರಿಯೆಯ ಸಹಜ ಫಲಾನುಭವಿಗಳಾಗುತ್ತಾರೆ ಎಂದವರು ಪ್ರಾಮಾಣಿಕವಾಗಿ ನಂಬಿದಂತೆ ತೋರುತ್ತದೆ.

ಅಭಿವೃದ್ಧಿ ಎಂಬ ಹೊಸ ಕಲ್ಪನೆಗೆ ಮರುಳಾಗಿದ್ದ ಜನಸ್ತೋಮವೂ, ಇಂತಹ 'ಅಭಿವೃದ್ಧಿ'ಯ ವಿರುದ್ಧ ದನಿ ಎತ್ತಿದ ಲೋಹಿಯಾ ಮತ್ತು ಅವರ ಸಮಾಜವಾದಿ ಗೆಳೆಯರ ಮಾತನ್ನು ಆಲಿಸುವ ಮನಃಸ್ಥಿತಿಯಲ್ಲಿರಲಿಲ್ಲ. ಅಥವಾ ಅವರು ಆಲಿಸುವ ರೀತಿಯಲ್ಲಿ–ಅಗತ್ಯ ವ್ಯವಧಾನದಲ್ಲಿ–ಇವರು ಹೇಳಲಿಲ್ಲ. ಹೀಗಾಗಿ ವ್ಯವಸ್ಥೆಯಿಂದ ಎಂದೂ ಫಲಗಳನ್ನೇ ನಿರೀಕ್ಷಿಸದಿದ್ದ ತಳವರ್ಗಗಳಂತೂ, ಈ 'ಅಭಿವೃದ್ಧಿ ರಾಜಕಾರಣ'ದ ಮಂಕಿಗೆ ಒಳಗಾದವರಂತೆ ಈ ಅಭಿವೃದ್ಧಿಯ ಅಲ್ಪಸ್ವಲ್ಪವಾದ ಪರೋಕ್ಷ ಫಲಗಳಿಂದಲೇ ತೃಪ್ತರಾದರು. ಅಂಬೇಡ್ಕರ್ ಸುಸ್ತಾದವರಂತೆ ಬೌದ್ಧ ಧರ್ಮ ಸೇರಿ ಅಸ್ತಂಗತರಾದ ಮೇಲೆ ಸಂವಿಧಾನವು ತಳವರ್ಗಗಳ ಜಾಗೃತಿಯ ಕೈಪಿಡಿಯಾಗುವ ಪ್ರಕ್ರಿಯೆ ನಿಂತೇ ಹೋದಂತಾಗಿ, ಕೇವಲ ಒಂದು ಮೂಕ ದಾಖಲೆಯಾಯಿತು.

೨. ಈ ನೆಹರೂ ಅಭಿವೃದ್ಧಿ ರಾಜಕಾರಣ ನೆಹರೂ ನಂತರವೂ ಮುಂದುವರೆಯಿತು. ಒಂದು ವ್ಯತ್ಯಾಸವೆಂದರೆ, ನೆಹ್ರೂ ನಂತರ ರಾಷ್ಟ್ರೀಯ ಆಂದೋಲನದ ಆದರ್ಶಗಳನ್ನು ಕುರಿತ ಗೌರವದ ಔಪಚಾರಿಕತೆಯೂ ಮಾಯವಾಯಿತು. ಇದರ ಪರಿಣಾಮವಾಗಿ, ಅಭಿವೃದ್ಧಿ ಎಂಬುದು ಅಧಿಕಾರವನ್ನು ಓಲೈಸುವವರಿಗೆ ರೊಟ್ಟಿ ಹಂಚುವ ಕೆಲಸವಾಗಿ, 'ಕೊಡುವವರು' ಮತ್ತು 'ಪಡೆಯುವವರು' ಎಂಬೆರಡು ವರ್ಗಗಳನ್ನು ಸೃಷ್ಟಿಸಿ ರಾಜ್ಯವ್ಯಸ್ಥೆಯನ್ನು ಒಡೆದು ಹಾಕಿತು. ನೆಹರೂ ಅವರ ಸಾಕಷ್ಟು ದೀರ್ಘ ಕಾಲದ ಅಭಿವೃದ್ಧಿ ರಾಜಕಾರಣವು ವಿರುದ್ಧ ಪರಿಣಾಮ ಬೀರಿ, ಎದ್ದು ಕಾಣುವಂತೆ ಸೃಷ್ಟಿಸಿದ್ದ

ಉಳ್ಳವರು ಮತ್ತು ಇಲ್ಲದವರು ಎಂಬ ಸಾಮಾಜಿಕ ಒಡಕನ್ನು ಭಾವನಾತ್ಮಕವಾಗಿ ಬಳಸಿಕೊಳ್ಳುವ ಮೂಲಕ ಇದು ಸಾಧ್ಯವಾಗಿತ್ತು. ಆದರೆ ಈ ರಾಜಕಾರಣ ಆ ಹೊತ್ತಿಗೆ ರಾಜ್ಯ ವ್ಯವಸ್ಥೆಯ ಬಂಡವಾಳವನ್ನೇ ದಿವಾಳಿ ಎಬ್ಬಿಸಿ, 'ಪಡೆಯಲು' ಕಾತುರರಾಗಿದ್ದವರಿಗೆ 'ಕೊಡಲು' ಏನೂ ಉಳಿಯದಂತಹ ಸ್ಥಿತಿಗೆ ಅದನ್ನು ತಲುಪಿಸಿತ್ತು. ಇದರಿಂದಾಗಿ, ರಾಜ್ಯ ವ್ಯವಸ್ಥೆಯೇ ಬಿರುಕು ಬಿಡತೊಡಗಿ, ಆಳದ ಸಾಂವಿಧಾನಿಕ ಬಿಕ್ಕಟ್ಟು ಸೃಷ್ಟಿಯಾಯಿತು. ಅದೇ, ಐತಿಹಾಸಿಕ ತುರ್ತು ಪರಿಸ್ಥಿತಿಗೆ ನಿಜವಾದ ಕಾರಣವೂ ಆಗಿ, ಸಂವಿಧಾನ ಮೊದಲ ಬಾರಿಗೆ ಸ್ವಾತಂತ್ರ್ಯೋತ್ತರ ಭಾರತದ ರಾಜಕೀಯ ಸಂಕಥನದ ಕೇಂದ್ರಕ್ಕೆ ಬರುವಂತಾಯಿತು. ಸಂವಿಧಾನದ ದುರ್ಬಳಕೆ ಮತ್ತು ಸದ್ಬಳಕೆಗಳನ್ನು ಕುರಿತ ಆಳವಾದ ಚರ್ಚೆಗಳು ಆರಂಭವಾದವು.

ಆವರೆಗೆ ಸಂವಿಧಾನವು, ಸರ್ವೋಚ್ಚ ನ್ಯಾಯಾಲಯದ ಮುಂದೆ ಬಂದ ಹಲವು ಮೊಕದ್ದಮೆಗಳ ಮೂಲಕ ಉಳ್ಳವರ ಹಕ್ಕು ಬಾಧ್ಯತೆಗಳನ್ನು ರಕ್ಷಿಸುವ ಸಾಧನದಂತಷ್ಟೇ ಪ್ರತಿಬಿಂಬಿತವಾಗಿತ್ತು. ಅದರೆ ಈಗ ಜೆಪಿ ಚಳುವಳಿಯ–ಆ ಸಂದರ್ಭದಲ್ಲಿ ಸಂವಿಧಾನ ಕುರಿತ ನಡೆದ ವ್ಯಾಪಕ ಚರ್ಚೆಯ–ಪರಿಣಾಮವಾಗಿ, ಅದಕ್ಕೆ ಜನಸಾಮಾನ್ಯರ, ವಿಶೇಷವಾಗಿ ತಳ ವರ್ಗಗಳ ಹಕ್ಕು ಬಾಧ್ಯತೆಗಳ ಪರವಾದ ಇನ್ನೊಂದು ಮುಖವಿದೆ ಎಂಬುದೂ ಸಾರ್ವಜನಿಕರ ಗಮನಕ್ಕೆ ಬಂತು. ನಿಜ, ಈ ಸಂದರ್ಭದಲ್ಲೂ ತಳ ವರ್ಗಗಳು, ಸಂವಿಧಾನವೇ ನಿರೂಪಿಸಿದ್ದಂತಹ ವಿಶಿಷ್ಟ ವರ್ಗಗಳ ರೂಪದಲ್ಲಿ ತಮ್ಮ ಹಕ್ಕು ಬಾಧ್ಯತೆಗಳಿಗಾಗಿ ವಿಶೇಷ ಹೋರಾಟಗಳಿಗೆ ಮುಂದಾಗಲಿಲ್ಲ. ಹೆಚ್ಚೆಂದರೆ ಅವುಗಳಿಂದ, ಮನವಿ, ವಶೀಲಿಬಾಜಿ ರಾಜಕಾರಣವಷ್ಟೇ ನಡೆದಿತ್ತು. ಆದರೆ ಜೆಪಿ ಚಳುವಳಿ, ತಾನು ನಂಬಿದ್ದ ತುಕ್ಕು ಹಿಡಿದ ಗಾಂಧೀವಾದವನ್ನು ನವೀಕರಿಸಿ ಕ್ರಾಂತಿಕಾರಿ ಸಾಧನವನ್ನಾಗಿ ಮಾಡುವ ಕ್ರಿಯಾಶೀಲತೆ ಇಲ್ಲದ್ದರಿಂದಾಗಿ ಮತ್ತು ತನ್ನ ಆಂತರಿಕ ವಿರೋಧಾಭಾಸಗಳಿಂದಾಗಿ ಎಲ್ಲರ ನಿರೀಕ್ಷೆಗಳನ್ನು ಹುಸಿಗೊಳಿಸಿ ವಿಫಲವಾಯಿತು. ಆಗ ಮೊದಲ ಬಾರಿಗೆ ಈ ತಳವರ್ಗಗಳಲ್ಲಿ ತಾವು ಸಾರ್ವತ್ರಿಕ ಹೋರಾಟಗಳ ಸಂದರ್ಭದಲ್ಲಿ ಆವರೆಗೆ ವರ್ಗೀಕೃತವಾಗಿದ್ದ ಸಾರಾ ಸಗಟಾದ ದುಡಿಯುವ ವರ್ಗ ಎಂಬ ಸಾಮಾನ್ಯ ವರ್ಗಕ್ಕೆ ಸೇರಿದವರಲ್ಲ; ತಮಗೊಂದು ವಿಶಿಷ್ಟ ಐತಿಹಾಸಿಕ ಅನನ್ಯತೆ ಇದೆ, ಹಾಗಾಗಿ ವಿಶಿಷ್ಟ ಹೋರಾಟದ ಅಗತ್ಯವೂ ಇದೆ ಎಂಬ ನಿರ್ಣಾಯಕ ಅರಿವು ಮೂಡಿತು. ದಲಿತ ಮತ್ತು ಶೂದ್ರ ಶಕ್ತಿಗಳು ನೆಹ್ರೂ ಪ್ರಣೀತ ರಾಜಕೀಯ ಚೌಕಟ್ಟನ್ನು ಬೇಧಿಸಿ ತಮ್ಮದೇ ವಿಶಿಷ್ಟ ರೂಪಗಳಲ್ಲಿ ಮತ್ತು ವೇದಿಕೆಗಳಲ್ಲಿ ತಮ್ಮದೇ ಪ್ರಣಾಳಿಕೆಗಳೊಂದಿಗೆ ಸಂಘಟನೆಗೊಳ್ಳಲಾರಂಭಿಸಿದ್ದು ಆಗಲೇ.

ಇದರ ಫಲವಾಗಿ ಅಂಬೇಡ್ಕರ್, ಲೋಹಿಯಾ ಮತ್ತು ಮಾರ್ಕ್ಸ್‌ರ ಸಿದ್ಧ ತಾತ್ವಿಕ ಎರಕಗಳು ಕರಗಿ; ಅವುಗಳ ಪರಸ್ಪರ ಅನುಸಂಧಾನದಲ್ಲಿ, ಗಾಂಧಿ ಹೊಸ ರೂಪ ಮತ್ತು ಶಕ್ತಿಗಳೊಂದಿಗೆ ಹೊಮ್ಮಿದಂತೆ ಕಂಡ ಹೊಸ ಸಂಘಟನಾ ಮಾದರಿಗಳು ಸೃಷ್ಟಿಯಾದವು. ರಾಷ್ಟ್ರಾದ್ಯಂತ ಈ ಹಿಂದಿನಂತೆ ಬರೀ ಭಾವನಾತ್ಮಕ ನೆಲೆಯಲ್ಲಲ್ಲದೆ,

ಸಂವಿಧಾನದ ಆಶಯ ಮತ್ತು ತತ್ವಗಳ ವ್ಯವಹಾರಿಕ ಅರಿವಿನೊಂದಿಗೆ ದಲಿತರ, ಆದಿವಾಸಿಗಳ, ಭೂರಹಿತ ಕೃಷಿ ಕೂಲಿ ಕಾರ್ಮಿಕರ, ವಿದ್ಯಾರ್ಥಿಗಳ, ಪರಿಸರವಾದಿಗಳ, ಮಾನವ ಹಕ್ಕುಗಳ ಸಂಘಟನೆಗಳು ಹಬ್ಬಿದ ಕಾಲವದು. ಉದಾಹರಣೆಗೆ ಕರ್ನಾಟಕದಲ್ಲಿ ಜಾತಿ ವಿರೋಧಿ, ದಲಿತ, ರೈತ, ಕನ್ನಡ ಪರ, ಸ್ತ್ರೀಪರ ಮತ್ತು ಪರಿಸರಪರ ಸಂಘಟನೆಗಳು ಪುಟಿದೆದ್ದವು. ದೇವರಾಜ ಅರಸರ ಉಜ್ವಲವೆನಿಸುವ ಜನಪರ ಆಡಳಿತದ ಸಮಯದಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ, ಭೂಸುಧಾರಣೆ, ಜೀತ ಪದ್ಧತಿ ನಿಷೇಧ ಇತ್ಯಾದಿ-ಸಂವಿಧಾನದ ಬಲದ ಅರಿವಿನಿಂದ ಜಾರಿಯಾದ ತಳವರ್ಗಗಳ ಪರವಾದ-ಕಾರ್ಯಕ್ರಮಗಳು, ಇಂತಹ ಕಾಲಕ್ಕೆ ಪೂರ್ವಪೀಠಿಕೆ ಬರೆದುವೆಂದೇ ಹೇಳಬೇಕು.

ಈ ಎಲ್ಲ ಸಂಘಟನೆಗಳಲ್ಲಿ ಸಂವಿಧಾನದ ಬಗ್ಗೆ ವಿಶೇಷ ತಿಳುವಳಿಕೆ ಇದ್ದ ವಕೀಲರೋ, ಕಾನೂನು ಅಧ್ಯಾಪಕರೋ-ಕೆಲವೊಮ್ಮೆ ಅವುಗಳ ನೇತೃತ್ವ ವಹಿಸಿ-ಇರಲಾರಂಭಿಸಿದರು ಎಂಬುದು ಇಲ್ಲಿ ಗಮನಾರ್ಹ. ಹಾಗಾಗಿಯೇ ಈ ಸಂಘಟನೆಗಳು ತಮ್ಮ ಹೋರಾಟಗಳನ್ನು ಹಲವು ಬಾರಿ ಬೀದಿ ಮಾತ್ರಗಳಲ್ಲಲ್ಲದೆ, ನ್ಯಾಯಾಲಯಗಳವರೆಗೂ ತೆಗೆದುಕೊಂಡು ಹೋಗಬೇಕಾಯಿತು. ಒಟ್ಟಿನಲ್ಲಿ ಇದು ಎಲ್ಲ ಸಂಘಟನೆಗಳು ಮತ್ತು ಅವುಗಳ ಹೋರಾಟಗಳು ಸಂವಿಧಾನದಲ್ಲಿ ತಮ್ಮ ಪರವಾದ ಬಲ ಕಂಡುಕೊಂಡ ಕಾಲ ಎಂದು ಹೇಳಬಹುದು. ಸಂವಿಧಾನದ ಪರಿಭಾಷೆಯಲ್ಲಿ ಹೇಳುವುದಾದರೆ, ಇದು ತಳವರ್ಗಗಳ ಪಾಲಿಗೆ ಎಲ್ಲ ಕಾಲಕ್ಕೂ ರಕ್ಷಣೆ ಒದಗಿಸಬಲ್ಲ ಪ್ರಜಾಪ್ರಭುತ್ವದ ಜೊತೆಗೆ ಇರಬೇಕಾದ ಗಣರಾಜ್ಯತ್ವದ ಮಹತ್ವವನ್ನು ಕಂಡುಕೊಂಡ, ಅದರ ಅರ್ಥವನ್ನು ಅನ್ವೇಷಿಸಿಕೊಂಡ; ಹಾಗೇ ಅದನ್ನು ಬಲಪಡಿಸಲು ಪರೋಕ್ಷವಾಗಿ ನಡೆದ ಹೋರಾಟಗಳ ಕಾಲವೂ ಹೌದು.

೩. ಆದರೆ ಈ ಎಲ್ಲ ಹೋರಾಟಗಳೂ ಬಿಡಿ ಬಿಡಿಯಾದ ಬೇಡಿಕೆಗಳನ್ನು ಆಧರಿಸಿದ ಹೋರಾಟಗಳಾಗಿದ್ದುದರಿಂದ ಅನತಿ ಕಾಲದಲ್ಲೇ ತಮ್ಮ ದೃಷ್ಟಿಕೇಂದ್ರವನ್ನೇ ಕಳೆದುಕೊಂಡು ಬಿಡಾಡಿಯಾದವು. ಹಾಗಾಗಿ ಆ ಹೋರಾಟಗಳು ರಾಷ್ಟ್ರವನ್ನು, ಸಮಾಜವನ್ನು ಇಡಿಯಾಗಿ ನೋಡಿ, ಅಭಿವೃದ್ಧಿಯ ಸ್ವರೂಪ, ಗತಿ ಮತ್ತು ಆದ್ಯತೆಗಳನ್ನು ಬದಲಿಸುವಂತೆ ರಾಜ್ಯ ವ್ಯವಸ್ಥೆಯ ಮೇಲೆ ಒತ್ತಡ ಹೇರುವಂತಹ ಸುಸ್ಥಿರ ಮತ್ತು ಸಂಘಟಿತ ಪರಿಣಾಮವನ್ನು ಸೃಷ್ಟಿಸಲಾಗಲಿಲ್ಲ. ಆದರೆ ಇದರಿಂದಾಗಿ ದಿವಾಳಿಯ ಅಂಚಿನಲ್ಲಿದ್ದ ರಾಜ್ಯ ವ್ಯವಸ್ಥೆ, ನಿಲ್ಲದ ಈ ಬಿಡಾಡಿ ಹೋರಾಟಗಳ ಕೋಲಾಹಲವನ್ನು ಹತ್ತಿಕ್ಕಲಾಗದ ಮತ್ತು ಅವುಗಳ ಬೇಡಿಕೆಗಳನ್ನು ಪೂರೈಸಲಾಗದ ಒತ್ತಡಕ್ಕೆ ಸಿಕ್ಕಿದ್ದಂತೂ ನಿಜ. ಆಗ ಅದು, ತಾನು(ಅಂದರೆ ಅದರ ಹಿಂದಿದ್ದ ಸ್ಥಾಪಿತ ಹಿತಾಸಕ್ತಿಗಳು) ಉಳಿದುಕೊಳ್ಳಲು ಸಮಯ ನೋಡಿ, ತನ್ನ ನೆಹ್ರೂ ಮಾದರಿಯ ಸಮಾಜವಾದಿ ರಾಜಕಾರಣವನ್ನು ಸಂಪೂರ್ಣವಾಗಿ ತೊರೆಯಿತು. ಬಹು ಜಾಣತನದಿಂದ ಮಾರುಕಟ್ಟೆ ಆಧಾರಿತ ಮುಕ್ತ ಬಂಡವಾಳಶಾಹಿ ರಾಜಕಾರಣದ ಮಾರ್ಗ ಹಿಡಿಯಿತು. ಇದರ

ಹಿಂದೆ ಕೆಲಸ ಮಾಡಿದ ಜಾಗತಿಕ ರಾಜಕಾರಣವನ್ನು ನಾನಿಲ್ಲಿ ಚರ್ಚಿಸಲು ಹೋಗುವುದಿಲ್ಲ. ಇದು ಅದಕ್ಕೆ ಸೂಕ್ತ ವೇದಿಕೆಯೂ ಅಲ್ಲ. ಆದರೆ ಜನಾದೇಶವಿಲ್ಲದ ಈ ಬದಲಾವಣೆ ನಮ್ಮ ಸಂವಿಧಾನದ ಆಶಯ ಮತ್ತು ತತ್ವಗಳಿಗೆ ದ್ರೋಹ ಬಗೆದಿಲ್ಲವೇ ಎಂಬ ಪ್ರಶ್ನೆಯನ್ನು ಯಾರೂ–ನ್ಯಾಯಾಂಗವೂ ಸೇರಿದಂತೆ–ಕೇಳಲಾಗದಷ್ಟು 'ಪ್ರಯೋಜನ'ಗಳನ್ನು ಕೇಳಬಲ್ಲವರಿಗೆ ತಕ್ಷಣವೇ ಒದಗಿಸಿಕೊಟ್ಟದ್ದಂತೂ ನಿಜ. ಅಷ್ಟೇ ನಿಜ, ಇದರಲ್ಲಿ ತಳವರ್ಗಗಳ ರಾಜಕೀಯ ಮತ್ತು ಬೌದ್ಧಿಕ ನಾಯಕತ್ವವೂ ಒಂದು ಮಟ್ಟಕ್ಕಾದರೂ ಶಾಮೀಲಾಗಿದೆ ಎಂಬುದು. ಇದು ಪ್ರಸಕ್ತ ಚರ್ಚೆಯಲ್ಲಿ ಗಮನಿಸಬೇಕಾದ ಮುಖ್ಯ ಸಂಗತಿ.

ಮುಕ್ತ ಮಾರುಕಟ್ಟೆ ಆರ್ಥಿಕತೆ ಜಾರಿಗೆ ತಂದಿರುವ ಜಾಗತೀಕರಣ, ತಳವರ್ಗಗಳೇ ಹೆಚ್ಚಿರುವ ಬಡವರ ಸಂಖ್ಯೆಯನ್ನು ಹೆಚ್ಚಿಸಿದೆ. ಅಷ್ಟೇ ಅಲ್ಲ, ತಳ ವರ್ಗಗಳ ಮೇಲಿನ ದೌರ್ಜನ್ಯಗಳ ಸಂಖ್ಯೆಯ ಜೊತೆಗೆ; ವೈವಿಧ್ಯವನ್ನೂ ಹೆಚ್ಚಿಸಿದೆ. ಸರ್ಕಾರ ನಡೆಸಿದ ಸಮೀಕ್ಷೆಗಳೇ, ಮಾಧ್ಯಮಗಳ ಪ್ರತಿನಿತ್ಯದ ವರದಿಗಳೇ ಇದನ್ನು ಸಾರುತ್ತಿವೆ. ಆದರೂ ಇದರ ವಿರುದ್ಧ ತಳವರ್ಗಗಳು ಸಂಘಟಿತವಾಗುತ್ತಿಲ್ಲ. ಬದಲಿಗೆ ಜಾಗತೀಕರಣವೆಂಬುದು ಒಂದು ಅನಿವಾರ್ಯ ವಿದ್ಯಮಾನವೆಂದು ಅವು ನಂಬಿ ಅದರೊಂದಿಗೆ 'ಹೊಂದಾಣಿಕೆ' ಮಾಡಿಕೊಳ್ಳುವ ಸುಲಭ ಮಾರ್ಗ ಹಿಡಿದಿವೆ. ಇದಕ್ಕೆ ಮುಖ್ಯ ಕಾರಣ, ನೆಹ್ರೂ ಸಮಾಜವಾದಿ ರಾಜಕಾರಣ ತಮ್ಮಲ್ಲಿ ಹುಟ್ಟಿಸಿದ ಭಾರಿ ನಿರೀಕ್ಷೆಗಳು ಜಾಗತೀಕರಣದ ಮೂಲಕವಾದರೂ ಈಡೇರಿ ತಮಗೆ ಬಿಡುಗಡೆ ಸಿಗಬಹುದೆಂಬ ಆಸೆಯನ್ನು, ಅದು ಸೃಷ್ಟಿಸಿರುವ ಕಣ್ಣು ಕೋರೈಸುವಂತಹ ಸಮೃದ್ಧಿಯ ದ್ವೀಪಗಳು ಅವುಗಳಲ್ಲಿ ಹುಟ್ಟು ಹಾಕಿರುವುದು. ಆದರೆ ಇವು ದ್ವೀಪಗಳು, ಜಾಗತೀಕರಣ ಇಂತಹ ದ್ವೀಪಗಳನ್ನು ಮಾತ್ರ ಸೃಷ್ಟಿಸಬಲ್ಲದು ಮತ್ತು ಇಂತಹ ದ್ವೀಪಗಳೆಡೆಯ ಪಯಣದ ಆಕಾಂಕ್ಷೆಯೇ, ತಮ್ಮ ಪಾಲಿಗೆ ರಕ್ಷಣೆ ಒದಗಿಸಿರುವ ಸಂವಿಧಾನದ ಪ್ರಜಾಪ್ರಭುತ್ವವಾದಿ 'ಗಣರಾಜ್ಯ'ದ ಆಶಯಗಳನ್ನೆಲ್ಲ ಅಪ್ರಸ್ತುತಗೊಳಿಸಬಲ್ಲುದು; ಆ ಮೂಲಕ ಅದು ತಮ್ಮ ಪಾಲಿಗೆ ಒಂದು ಶಾಶ್ವತ ದುರಂತವೇ ಆಗಬಲ್ಲುದು ಎಂಬುದು ತಳವರ್ಗಗಳಿಗೆ ಇನ್ನೂ ಅರಿವಾದಂತೆ ಕಾಣುವುದಿಲ್ಲ. ಅರಿವಾದಾಗ ಅವು ತಮ್ಮ ಆಲೋಚನೆಯ ದಿಕ್ಕನ್ನು ಬದಲಿಸುತ್ತವೆ ಹಾಗೂ ಹೊಸ ನಾಯಕತ್ವದ ಹುಡುಕಾಟ ನಡೆಸುತ್ತದೆ.

೪. ಆದಿವಾಸಿಗಳ (ರಾಜ್ಯದಲ್ಲಿ ಮೀಸಲಾತಿ ಸೌಲಭ್ಯ ಅನುಭವಿಸುತ್ತಿರುವ ನಮ್ಮ ಕೆಲವು ಹುಸಿ 'ಬುಡಕಟ್ಟು'ಗಳಲ್ಲ) ಹೊರತಾಗಿ, ನಮ್ಮ ತಳವರ್ಗಗಳು ಪುರಾತನ ಜಾತಿ ಪದ್ಧತಿಯ ಅವಿಭಾಜ್ಯ ಅಂಗಗಳೇ ಆಗಿವೆ. ಏಕೆಂದರೆ, ಈ ಪದ್ಧತಿಯಿಂದ ಅತಿಯಾದ ಅನ್ಯಾಯಗಳಿಗೂ, ಅವಮಾನಗಳಿಗೂ ಒಳಗಾದ ಅಸ್ಪೃಶ್ಯ ಜಾತಿಯವರೂ ಸೇರಿದಂತೆ, ಈ ಎಲ್ಲ ಜಾತಿಗಳು ಎಂದೂ ಈ ಜಾತಿ ಪದ್ಧತಿಯಿಂದ ಹೊರಬರುವ ದೃಢ ನಿಶ್ಚಯಕ್ಕೆ ಬಂದಂತಿಲ್ಲ. ಇದೇ ಈ ಎಲ್ಲ ತಳವರ್ಗಗಳು ಸಂವಿಧಾನದ ಆಶಯ ಮತ್ತು ಅವಕಾಶಗಳನ್ನು ಪೂರ್ಣವಾಗಿ ಅರ್ಥ ಮಾಡಿಕೊಳ್ಳದಿರುವುದಕ್ಕೆ ಮತ್ತು

ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳದಿರುವುದಕ್ಕೆ ಮುಖ್ಯ ಕಾರಣ ಎಂದು ನನಗನ್ನಿಸುತ್ತದೆ. ಇದಕ್ಕೆ ತಳವರ್ಗಗಳ ಚಳುವಳಿಯ ನೇತೃತ್ವ ವಹಿಸಿರುವ ನಾಯಕರ ಬೌದ್ಧಿಕ ಮಿತಿಗಳೂ ಕಾರಣವಾಗಿದೆ.

ನಮ್ಮ ಈವರೆಗಿನ ಎಲ್ಲ ಜಾತಿ ವಿರೋಧಿ ಅಥವಾ ವಿನಾಶ ಕಾರ್ಯಕ್ರಮಗಳೂ ಬಹುಪಾಲು ವಿರುದ್ಧ ಪರಿಣಾಮ ಉಂಟು ಮಾಡಿದ್ದರೆ, ಅದಕ್ಕೆ ಮುಖ್ಯ ಕಾರಣಗಳು ಎರಡು. ಒಂದು: ಸಂವಿಧಾನವು ಜಾತಿ ಪದ್ಧತಿಯ ಒಳಿತು ಕೆಡಕುಗಳ ಬಗ್ಗೆ ಮಗುಮ್ಮಾಗಿದ್ದು, ಅದರ ಬಗ್ಗೆ ಒಂದು ಸ್ಪಷ್ಟ ನಿಲುವನ್ನು ನಿರ್ದೇಶಿಸದೇ ಇರುವುದು, ಅದರ ನಿವಾರಣೆಯನ್ನು ತನ್ನ ಉದ್ದೇಶಗಳಲ್ಲಿ ಒಂದೆಂದು ಘೋಷಿಸಿಕೊಳ್ಳದಿರುವುದು. ಜಾತಿ ವಿನಾಶ ನೀತಿಯನ್ನು ಪ್ರತಿಪಾದಿಸಿದ ಅಂಬೇಡ್ಕರರೇ ಸಂವಿಧಾನ ಕರಡು ರಚನಾ ಸಮಿತಿಯ ಅಧ್ಯಕ್ಷರಾಗಿದ್ದರು. ಅದರೂ ಈ ಉದ್ದೇಶ ಸಂವಿಧಾನದಲ್ಲಿ ಸ್ಪಷ್ಟಗೊಳ್ಳಲಿಲ್ಲವೆಂದರೆ, ರಾಷ್ಟ್ರದ ಅತ್ಯುನ್ನತ ಮನಸ್ಸುಗಳ ಸಮಾವೇಶವೆನಿಸಿದ ನಮ್ಮ ಸಂವಿಧಾನ ಸಭೆ ಎಷ್ಟು ಜಾತಿ ಮಲಿನವಾಗಿದ್ದಿರಬೇಕು ಎಂದು ಆಶ್ಚರ್ಯವಾಗುತ್ತದೆ. (ಇಂತಹ ಸಂದರ್ಭಗಳಲ್ಲಿಯೇ ಸಮಾಜವಾದಿಗಳು ಸಂವಿಧಾನ ಸಭೆಯನ್ನು ಬಹಿಷ್ಕರಿಸಿ ದೊಡ್ಡ ತಪ್ಪು ಮಾಡಿದರು ಎನ್ನಿಸುವುದು.) ಇದು ಕೇವಲ ಮೇಲ್ಜಾತಿ ಮಾನಸಿಕತೆಯ ಪ್ರಭಾವವಲ್ಲ ಎಂಬುದನ್ನೂ ನಾವು ಮುಖ್ಯವಾಗಿ ಗಮನಿಸಬೇಕು.

ಇದರಿಂದಾಗಿ, ಜಾತಿ ಪದ್ಧತಿಯ ಹಿಂದಿನ ತಾತ್ವಿಕತೆಯನ್ನು ಪ್ರತಿ ಜಾತಿಯೂ ತನ್ನ ಶೋಷಣೆಯ, ತನಗಾದ ಅನ್ಯಾಯದ ಸಂಕಥನವನ್ನು ಕಟ್ಟಿಕೊಳ್ಳಲು ತನ್ನದೇ ರೀತಿಯಲ್ಲಿ ಬಳಸಿಕೊಂಡಿತು. ಪರಂತು, ಜಾತಿ ಪದ್ಧತಿ ಎಂಬುದೇ ಹೇಗೆ ಒಂದು ಸಮಾಜ ವಿರೋಧಿ ಆಚರಣೆಯಾಗಿದ್ದು, ಅದು ಸಮಾಜದ ಇಡಿತನವನ್ನೇ ನಾಶ ಮಾಡಿ, ಅದರ ಚೈತನ್ಯವನ್ನೇ ಉಡುಗಿಸಿದೆ ಎಂಬ ಅರಿವಿಗೆ ತೆರೆದುಕೊಳ್ಳಲಿಲ್ಲ. ಹಾಗೇ, ಈ ಪದ್ಧತಿಯನ್ನು ನಿರಾಕರಿಸದ ಹೊರತು, ನಿರ್ಮೂಲನ ಮಾಡದ ಹೊರತು ಯಾರ ಸಮಸ್ಯೆಯೂ ಬಗೆ ಹರಿಯಲಾರದು ಎಂಬ ಒಟ್ಟಾರೆಯಾದ ರಾಷ್ಟ್ರೀಯ ಬೇಡ, ಒಂದು ಸಾಮಾಜಿಕ ದೃಷ್ಟಿಕೋನವನ್ನು ತನ್ನ ತಾತ್ವಿಕ ನಂಬುಗೆಯಾಗಿ ತಳವರ್ಗಗಳ ಹೋರಾಟ ರೂಢಿಸಿಕೊಳ್ಳಲಾಗಲಿಲ್ಲ ಎಂಬುದು ಎರಡನೇ ಮುಖ್ಯ ಕಾರಣ. ಸಮಾಜವಾದಿ ಆಂದೋಲನದ ಆರಂಭಿಕ ಹಂತ ಮತ್ತು ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಚಟುವಟಿಕೆಗಳ ಏರು ದಿನಗಳ ಕಾಲಮಾನ ಇದಕ್ಕೆ ಸ್ವಲ್ಪ ಮಟ್ಟಿಗೆ ಅಪವಾದಗಳೆಂದು ಹೇಳಬಹುದಷ್ಟೆ. ಹಾಗಾಗಿ, ಇಂದು ಸಾಮಾಜಿಕ ನ್ಯಾಯದ ಹೆಸರಲ್ಲಿ ವಿತರಿಸಲಾಗುತ್ತಿರುವ ವಿಶೇಷ ಸವಲತ್ತುಗಳು ಮೂಲತಃ ಸಾಮಾಜಿಕ ನ್ಯಾಯಯವಲ್ಲ;ಬದಲಿಗೆ ಜಾತಿ ನ್ಯಾಯ ಮಾತ್ರವಾಗಿದೆ ಎಂದೇ ಹೇಳಬಹುದು. ಇದು ಯಾರಿಗಾದರೂ ಜಾತಿ ಪದ್ಧತಿಯನ್ನು ನಾಶ ಮಾಡಲಲ್ಲ, ಬದಲಾಗಿ ಅದನ್ನು ಮುಂದುವರೆಸಿಕೊಂಡು ಹೋಗಲು ರೂಪಿಸಲಾಗಿರುವ ತಂತ್ರವಾಗಿ ಕಂಡರೆ ಆಶ್ಚರ್ಯವಿಲ್ಲ!

ಇದರ ಹಿಂದೆ ಜಾತಿ ಪದ್ಧತಿ ಕುರಿತಂತೆ ನವ ಭಾರತ ನಿರ್ಮಾಣಕ್ಕಾಗಿ ಕಟ್ಟಿಕೊಂಡ ಸಂಕಥನದ ದೊಡ್ಡ ದೋಷವಿದೆ. ಜಾತಿ ಪದ್ಧತಿ ಎಂದು ನಾವು ನಂಬಿರುವುದು, ಕ್ರಿಶ್ಚಿಯನ್ ಮಿಷನರಿಗಳು ಕಟ್ಟಿಕೊಟ್ಟ ಜಾತಿ ಸಂಕಥನವಾಗಿದೆ ಎಂಬ ಬೆಲ್ಜಿಯಂನ ಬಾಲಗಂಗಾಧರ ರಾವ್ ಮತ್ತು ಇಲ್ಲಿನ ಅವರ ಶಿಷ್ಯರ ವಾದದ ಬಗ್ಗೆ ನಮ್ಮ ಭಿನ್ನಾಭಿಪ್ರಾಯ ಏನೇ ಇರಲಿ, ಅವರು ಹೇಳುತ್ತಿರುವುದರಲ್ಲಿ ಅರ್ಧ ಸತ್ಯವಿದೆ (ಅದೇ ಅದರ ಅಪಾಯ ಕೂಡಾ!) ಎಂಬುದನ್ನು ನಾವು ಗಮನಿಸಬೇಕು. ನಾವು ಜಾತಿ ಪದ್ಧತಿಯನ್ನು ನಮ್ಮ ನಮ್ಮ ಜಾತಿ ನೆಲೆಗಳಲ್ಲೇ ನಿಂತು ನಮ್ಮ ನಮ್ಮ ಅನುಕೂಲಗಳಿಗೆ ತಕ್ಕಂತೆ ಶ್ರೇಣೀಕೃತ ಶೋಷಣೆಯ ಸಾಧನವನ್ನಾಗಿ ನೋಡಿದೆವೇ ಹೊರತು, ಒಮ್ಮೆಯಾದರೂ–ಪ್ರಾಯೋಗಿಕವಾಗಿಯಾದರೂ–ಅದರ ಹೊರಗೆ ನಿಂತು ಅದನ್ನು ಸಮಗ್ರವಾಗಿ ನೋಡಲಿಲ್ಲ. ಆ ಮೂಲಕ ದೊರೆಯಬಹುದಾದ; ಅದು ಸಮಾಜದ ಆತ್ಮಸಾಕ್ಷಿಯನ್ನೂ, ಸೃಷ್ಟಿಶೀಲತೆಯನ್ನೂ ನಾಶ ಮಾಡಿರುವ ನಮ್ಮ ದಿನ ನಿತ್ಯದ ಎಲ್ಲ ನಡವಳಿಕೆ–ಆಚರಣೆಗಳಲ್ಲಿ ಅಡಗಿರುವ ನಮ್ಮ ಮನಸ್ಸಿನ ಗೆದ್ದಲೇ ಆಗಿದೆ ಎಂಬ ಅರಿವಿಗೇ ನಮ್ಮನ್ನು ನಾವು ತೆರೆದುಕೊಳ್ಳಲಿಲ್ಲ. ಒಟ್ಟಿನಲ್ಲಿ ನಮ್ಮ ಸಾಮಾಜಿಕ ನ್ಯಾಯ ಪರಿಕಲ್ಪನೆಯ ಹಿಂದಿನ ಜಾತಿ ಪದ್ಧತಿ ಕುರಿತ ನಿಲುವು ವಸ್ತುನಿಷ್ಠವಾಗಿರದೆ, ಸ್ವಾರ್ಥಪೂರಿತವಾಗಿದೆ ಎಂದೇ ಹೇಳಬಹುಧು.

ಇದಕ್ಕೆ, ಜಾತಿ ಪದ್ಧತಿ ಕುರಿತ ಈ ಸಂಕಥನವನ್ನು ಕಟ್ಟುವುದರ ಜೊತೆ ಜೊತೆಯಲ್ಲೇ–ಅದರ ತರ್ಕವನ್ನನುಸರಿಸಿಯೇ–ಆಧುನಿಕ ಅಭಿವೃದ್ಧಿ ಸಂಕಥನವನ್ನೂ ಇಲ್ಲಿ ಕಟ್ಟಲಾಯಿತು ಎಂಬುದೇ ಕಾರಣವಾಗಿದೆ. ಹಾಗಾಗಿ ಇಲ್ಲಿ ಜಾತಿ ಆಚರಣೆ ಮತ್ತು ಅಭಿವೃದ್ಧಿಯ ಕಲ್ಪನೆ ಒಟ್ಟೊಟ್ಟಿಗೇ ನಡೆದು, ತಳವರ್ಗಗಳನ್ನು ಶಾಶ್ವತ ಅತೃಪ್ತ ಮತ್ತು ಅಶಾಂತರನ್ನಾಗಿ ಮಾಡಿ ಕೂರಿಸಿವೆ. ಏಕೆಂದರೆ ಈ ಅಭಿವೃದ್ಧಿ ಎಂದರೆ ನಿಲ್ಲದ–ಬಡವ, ಶ್ರೀಮಂತರಿಬ್ಬರನ್ನೂ ಒಟ್ಟಿಗೇ ಬಾಧಿಸಬಲ್ಲ–ನಿರಂತರ ದಾಹವೇ ಆಗಿದೆ. ಅದೊಂದು ಮನುಷ್ಯನನ್ನು ಮನುಷ್ಯನನ್ನಾಗಿ ವಿಕಾಸಗೊಳಿಸಿರುವ, ಪ್ರಸ್ತುತಗೊಳಿಸಿರುವ ಪಾರಮಾರ್ಥಿಕತೆಯ ಸ್ಪರ್ಶವೇ ಇಲ್ಲದ ಸಂಪೂರ್ಣ ಭೌತಿಕ ವಿದ್ಯಮಾನವಾಗಿದೆ. ಈ ರೋಗಕ್ಕೆ ಒಳಗಾಗಿರುವವರು ನಡೆಸುವ ಧಾರ್ಮಿಕವೆಂದು ಹೇಳಲಾಗುವ ಆಚರಣೆಗಳ ಸ್ವರೂಪವೇ, ಇದು ಧರ್ಮದ ಕಲ್ಪನೆಯನ್ನೂ ಹೇಗೆ ವಿಕ್ಷಿಪ್ತಗೊಳಿಸಿದೆ ಎಂಬುದನ್ನು ಶ್ರುತಪಡಿಸುತ್ತದೆ.

ಉದಾಹರಣೆಗೆ, ನಮ್ಮ ಎರಡು ಹಿಂದುಳಿದ ವರ್ಗಗಳ ಆಯೋಗಗಳ ಅಧ್ಯಕ್ಷರುಗಳಾಗಿ 'ಕ್ರಾಂತಿಕಾರಿ' ವರದಿ ನೀಡಿದ ಹಾವನೂರ್ ಮತ್ತು ವೆಂಕಟಸ್ವಾಮಿಯವರು ನಿರ್ಯೋಜನೆಯಿಂದ ಸಕ್ರಿಯ ರಾಜಕಾರಣಕ್ಕೆ ಇಳಿದಿದ್ದಾದರೂ(ಅದರಲ್ಲಿ ಅವರು ಸಫಲರಾಗದಿದ್ದರೂ) ಎಂತಹ ರಾಜಕಾರಣದ ಮೂಲಕ? ಶ್ರೇಣೀಕೃತ ಜಾತಿ ಪದ್ಧತಿಯನ್ನು ನಮ್ಮ ಪರಂಪರೆಯ ಒಂದು ಭಾಗವಾಗಿ ತಾತ್ವಿಕವಾಗಿ ಒಪ್ಪಿಕೊಂಡಿರುವ ರಾಜಕೀಯ ಪಕ್ಷದ ಮೂಲಕ! ಇಂದು ನಮ್ಮ ವಿಧಾನ ಸಭೆಯಲ್ಲಾಗಲೀ, ಸಂಸತ್ತಿನಲ್ಲಾಗಲೀ ತಳವರ್ಗಗಳ ಅತ್ಯಂತ ಹೆಚ್ಚು ಜನ ಪ್ರತಿನಿಧಿಗಳು ಇರುವುದು ಯಾವ, ಎಂತಹ

ಪಕ್ಷದಲ್ಲಿ? ಅಂಬೇಡ್ಕರ್ ಹೆಸರಲ್ಲಿ ಒಂದಾಗಿದ್ದ ಜನ ಈಗ ಅಂಬೇಡ್ಕರ್-ಜಗಜೀವನ ರಾಂ ಎಂದು ಎರಡಾಗಿರುವುದಾದರೂ ಏಕೆ? ಅಭಿವೃದ್ಧಿಯ ದಾಹ ಹುಟ್ಟಿಸಿದ ಮತ್ತು ತಂತಮ್ಮಲ್ಲೇ ಬಗೆಹರಿಸಿಕೊಳ್ಳಲಾಗದ ಅತೃಪ್ತಿ-ಅಶಾಂತಿಗಳ ಕಾರಣದಿಂದಾಗಿ! ಅಂಬೇಡ್ಕರರ ಯಶಸ್ವಿ ರಾಜಕೀಯ ವಾರಸುದಾರಣಿ, ಕೋಟಿಗಟ್ಟಲೆ ಮೌಲ್ಯದ ನೋಟುಗಳ ಹಾರ ಹಾಕಿಸಿಕೊಂಡು ಸಂಭ್ರಮಿಸುವ ಮಾಯಾವತಿ ಎಂದರೆ, ಮುಂದೆ ಮಾತಾಡುವುದಾದರೂ ಏನು? ಆದರೆ ಜಾತಿ ಪದ್ಧತಿಗೆ ಸಿಗದ ಮತ್ತು ಆಧುನಿಕತೆಗೆ ಒಡ್ಡಿಕೊಳ್ಳದ ನಮ್ಮ ನಿಜ ಆದಿವಾಸಿಗಳು ಮಾತ್ರ ಆಲೋಚನೆಯ ಇಂತಹ ಯಾವುದೇ ವಿರೋಧಾಭಾಸಗಳಿಲ್ಲದೆ, ಈಗ ತಮ್ಮ ಬದುಕಿನ ಹೊಸ್ತಿಲ ಬಳಿಗೇ ಬಂದಿರುವ ಜಾಗತೀಕರಣದ ಭೂತವನ್ನು ತಮ್ಮ ಜೀವನ ಶೈಲಿ ಮತ್ತು ಮೌಲ್ಯಗಳಲ್ಲಿ ಅಚಲ ನಂಬಿಕೆಯನ್ನು ಪ್ರದರ್ಶಿಸುವ ಮೂಲಕವೇ ಒಂದು ದುಸ್ಸಾಹಸದ ರೂಪದಲ್ಲಿ ಮುಖಾಮುಖಿಯಾಗಿಸಿಕೊಳ್ಳುವ ಧೈರ್ಯ ತೋರಿವೆ ಎಂಬುದು ಇಲ್ಲಿ ಗಮನಾರ್ಹ.

ನಮ್ಮ ಹಿಂದುಳಿದ ಜಾತಿಗಳವರು ಮತ್ತು ದಲಿತರು ಆಲೋಚಿಸಬೇಕು. ಮುಖ್ಯವಾಗಿ, ಈ ಪ್ರಾತಿನಿಧಿಕ ಪ್ರಜಾಪ್ರಭುತ್ವದಲ್ಲಿ ತಮ್ಮ ಸಮುದಾಯಗಳ ನಾಯಕತ್ವದ ಪ್ರಾತಿನಿಧ್ಯ ಇದ್ದರೂ, ತಮ್ಮಲ್ಲಿನ ಬಹುಪಾಲು ಜನಕ್ಕೆ ಏಕೆ ನೆಮ್ಮದಿಯ ಬದುಕಿನ ಭರವಸೆ ಸಿಕ್ಕಿಲ್ಲ ಎಂದು. ಇದಕ್ಕೆ, ಎಂದೂ ಎಲ್ಲರಿಗೂ ದಕ್ಕದ ಮತ್ತು ಯಾರನ್ನೂ ಆತ್ಯಂತಿಕವಾಗಿ ತಣಿಸದ ಅಧುನಿಕ ಸುಖ-ಸವಲತ್ತುಗಳ ನಿರೀಕ್ಷೆ ಹುಟ್ಟಿಸುವ ನಮ್ಮ ಅಭಿವೃದ್ಧಿ ರಾಜಕಾರಣದ ಗುರಿ-ಉದ್ದೇಶಗಳು ಕಾರಣವೇ ಎಂಬುದು ಅವರು ಎದುರಿಸಬೇಕಾದ ಮುಖ್ಯ ಪ್ರಶ್ನೆ.

೫. ಹಾಗಾದರೆ ತಳ ವರ್ಗಗಳ ರಾಜಕಾರಣ ಬದಲಾಗಬೇಕಾದ ಬಗೆಗಳಾವುವು? ತಳವರ್ಗಗಳ ಈ ರಾಜಕಾರಣ ಒಟ್ಟಾರೆ ರಾಜಕಾರಣದ ಜೊತೆ ರಚನಾತ್ಮಕ ಅನುಸಂಧಾನ ನಡೆಸಿಯೇ-ಸಾಧ್ಯವಾದರೆ ಅದರ ನಾಯಕತ್ವವನ್ನು ತಾನೇ ವಹಿಸಿ- ತನ್ನನ್ನು ಬದಲಾವಣೆಗೆ ಒಡ್ಡಿಕೊಳ್ಳಬೇಕಿದೆ. ಹಾಗಾಗಿ ಇದನ್ನು ತಳವರ್ಗಗಳ ಉನ್ನತೀಕರಣದ ರಾಜಕಾರಣವೆಂದಷ್ಟೇ ಬಗೆಯದೆ, ಸರ್ವ ಸಮಾನತೆಯ ಸಾರ್ವತ್ರಿಕ ರಾಜಕಾರಣದ ಅವಿಭಾಜ್ಯ ಅಂಗವಾಗಿಯೇ ರೂಪಿಸಬೇಕು. ಇದಕ್ಕೆ ತಳ ವರ್ಗಗಳ ನಾಯಕತ್ವದಲ್ಲಿ ಉನ್ನತಿಯ ಕಲ್ಪನೆ ಬದಲಾಗಬೇಕು ಮತ್ತು ಆ ಮೂಲಕ ಮೇಲ್ಜಾತಿ-ಮೇಲ್ವರ್ಗಗಳ ಮನಸ್ಸಿನ ಹೊಯ್ದಾಟಕ್ಕೆ ಕಾರಣವಾಗಬೇಕು. ತಳವರ್ಗಗಳಿಂದಲೇ ತನ್ನ ಬೆಡಗನ್ನು ಪಡೆದುಕೊಂಡ ನಮ್ಮ ಶರಣರ ಆಂದೋಲನವೂ ಸೇರಿದಂತೆ ಐತಿಹಾಸಿಕವಾದ ಭಕ್ತಿ ಆಂದೋಲನವು ಸಾಮಾಜಿಕ ಭಾವನೆಯ ನೆಲೆಯಲ್ಲಾದರೂ ಇದಕ್ಕೆ ಸ್ಫೂರ್ತಿಯಾಗಬೇಕು. ಶೋಷಣೆಯ ಸಾರಾ ಸಗಟು ಘೋಷಣೆಯ ಆಧಾರದ ಮೇಲೆ ಪರಿಹಾರ ಕೇಳುವ ಬೇಡಿಕೆಗಳ, ಸಿಕ್ಕವರಿಗೆ ಸೀರುಂಡೆ ರಾಜಕಾರಣವನ್ನು ತೊರೆದು ಒಂದು ಪರ್ಯಾಯ ಮತ್ತು ಸಮಗ್ರ ರಾಜಕೀಯದ ಸಂಕಲ್ಪ ತೊಡಬೇಕು.

ಮೊದಲು ತಳವರ್ಗಗಳು ಇಂದು-ಈ ಜಾಗತೀಕರಣದ ಸಂದರ್ಭದಲ್ಲಿ-ತಮ್ಮ ಪಾಲಿಗೆ ಅಪ್ರಸ್ತುತಗೊಂಡಿರುವ ಮತ್ತು ಹೆಚ್ಚೆಂದರೆ ತಮ್ಮೆಡೆಗೆ ದಿನವಹಿ ಆಧಾರದ

ಮೇಲೆ ರೊಟ್ಟಿ ತುಂಡು ಎಸೆಯುವ 'ಸಾಮಾಜಿಕ' ಕಾರ್ಯಕ್ರಮಗಳಿಗಷ್ಟೇ ಈಗ ತೆರೆದುಕೊಂಡಿರುವ; ಸಂವಿಧಾನದಲ್ಲಿ ಅಂತರ್ಗತವಾಗಿರುವ 'ಸಾಮಾಜಿಕ ನ್ಯಾಯ'ದ ಪೂರ್ಣ ಸ್ವರೂಪವನ್ನೂ, ಅರ್ಥವನ್ನೂ, ಶಕ್ತಿಯನ್ನೂ ಅರಿತುಕೊಳ್ಳುವ ಪ್ರಯತ್ನ ಮಾಡಬೇಕು. ಈ ಸಾಮಾಜಿಕ ನ್ಯಾಯದ ಕಲ್ಪನೆ ತಳ ವರ್ಗಗಳಿಗೆ ಮಾತ್ರ ಸಂಬಂಧಿಸಿದ್ದಲ್ಲ;ಅದರಲ್ಲಿ ಇಡೀ ಸಮಾಜದ ಐಕ್ಯತೆ ಮತ್ತು ಸಾಮರಸ್ಯದ ಗುಟ್ಟು ಅಡಗಿದೆ ಎಂಬರ್ಥದಲ್ಲಿ, ಅದು ಇಡೀ ಸಮಾಜಕ್ಕೆ ಸಂಬಂಧಿಸಿದ ವಿಷಯವಾಗಿದೆ ಎಂಬ ಅರಿವನ್ನು ಪಡೆಯಬೇಕು. ಈ ಅರಿವಿನೊಂದಿಗೆ ಅದನ್ನು, ಜಾಗತೀಕರಣದ ಮೂಲಕ ನಮ್ಮ ಸಂವಿಧಾನದ ಉದ್ದೇಶ-ಆಶಯಗಳ ಮೇಲೆ ನಡೆದಿರುವ ದಾಳಿಗೆ ಎದುರಾಗಿ, ಸಾರ್ವತ್ರಿಕ ಉನ್ನತಿಯ ಪರ್ಯಾಯ ಮತ್ತು ಸಮಗ್ರ ಕಾರ್ಯಕ್ರಮವಾಗಿ ಪುನಾರಚಿಸಬೇಕು. ಮುಖ್ಯವಾಗಿ ಈ ಕಾರ್ಯಕ್ರಮ ತಮ್ಮ ಸಾಮೂಹಿಕ ವಲಸೆಗಳಿಗೆ ಕಾರಣವಾಗಿ ಗುರುತಿಲ್ಲದವರಂತೆ ಮಾಡದೆ, ತಮ್ಮ ಸಾಮಾಜಿಕ-ಸಾಂಸ್ಕೃತಿಕ ಬಂಡವಾಳವನ್ನು ಹೂಡಿಕೆಯನ್ನಾಗಿ ಮಾಡಿಕೊಂಡು, ಕ್ರಮೇಣವಾಗಿಯಾದರೂ ಖಚಿತವಾಗಿ ತಮ್ಮನ್ನು ಸಮಾಜದ ಮುಖ್ಯ ವಾಹಿನಿಯಲ್ಲಿ ಲೀನ ಮಾಡುವಂತಹ ತಾತ್ವಿಕತೆಯನ್ನು ಹೊಂದಿರುವಂತೆ ನೋಡಿಕೊಳ್ಳಬೇಕು. ಇದು ತಳ ವರ್ಗಗಳಿಗೆ ಬಹುಶಃ ಪರ್ಯಾಯ ಅಭಿವೃದ್ಧಿ ಮಾದರಿಯ ಪ್ರಶ್ನೆಗಿಂತ ಮುಖ್ಯವಾಗಿ ಮತ್ತು ದೊಡ್ಡದಾಗಿ, ಪರ್ಯಾಯ ನಾಯಕತ್ವದ ಪ್ರಶ್ನೆಯೇ ಆಗಿದೆ. ಈ ಪ್ರಶ್ನೆ ಎಷ್ಟು ಬೇಗ ತನ್ನ ಉತ್ತರವನ್ನು ಕಂಡುಕೊಳ್ಳುವುದೋ ಅಷ್ಟು ಬೇಗ ನಮ್ಮ ಸಂವಿಧಾನದ ಬಗ್ಗೆ ಹೊಸ ನೆಲೆಯ ಚರ್ಚೆಗಳನ್ನು ಹುಟ್ಟು ಹಾಕಬಲ್ಲುದಾಗಿದೆ. ಅಲ್ಲಿಂದ ತಳ ವರ್ಗಗಳ ನಿಜವಾದ ಬಿಡುಗಡೆಯ ದಾರಿ ಆರಂಭವಾದೀತು.

(ಇದು ಬೆಂಗಳೂರಿನ ರಾಷ್ಟ್ರೀಯ ಕಾನೂನು ಶಾಲೆಯ ಸಾಮಾಜಿಕ ಪ್ರತ್ಯೇಕತೆಯ ಅಧ್ಯಯನ ಕೇಂದ್ರವು ೨೦೧೦ರ ಮಾರ್ಚ್‌ನಲ್ಲಿ ಸಂಘಟಿಸಿದ್ದ 'ಭಾರತೀಯ ಸಂವಿಧಾನಕ್ಕೆ ೬೦ ವರ್ಷ-ಕನಾಟಕದಲ್ಲಿ ಸಾಮಾಜಿಕ ನ್ಯಾಯ ನಡೆದು ಬಂದ ದಾರಿ: ನಿನ್ನೆ, ಇಂದು ಮತ್ತು ನಾಳೆ' ಎಂಬ ವಿಷಯದ ಮೇಲಿನ ವಿಚಾರ ಸಂಕಿರಣದಲ್ಲಿ ಮಂಡಿಸಿದ ವಿಚಾರಗಳನ್ನು ಆಧರಿಸಿದ ಲೇಖನ)

■

ಶಿವಮೊಗ್ಗದಲ್ಲಿ ದಲೇಕ ಸಮ್ಮೇಳನ:
ಒಂದು ಟಿಪ್ಪಣಿ ಹಾಗೂ ಒಂದು ಕಾರ್ಯಕ್ರಮ

೨೦೧೦ ಅಕ್ಟೋಬರ್ ೨೯ ಹಾಗೂ ೩೦ರಂದು ಶಿವಮೊಗ್ಗದಲ್ಲಿ ಎರಡನೇ 'ದಲಿತ ಲೇಖಕರ ಹಾಗೂ ಕಲಾವಿದರ ರಾಜ್ಯ ಸಮ್ಮೇಳನ' (ದಲೇಕ) ನಡೆಯಿತು. ೧೯೭೬ರಲ್ಲಿ ದಿ॥ ಬಿ. ಕೃಷ್ಣಪ್ಪನವರ ಸಾರಥ್ಯದಲ್ಲಿ ಭದ್ರಾವತಿಯಲ್ಲಿ ನಡೆದ ಸ್ಥಾಪನಾ ಸಮ್ಮೇಳನದ ೩೬ ವರ್ಷಗಳ ನಂತರದ ಮೊದಲ ಸಮ್ಮೇಳನ ಇದಾದರೂ ಮತ್ತು ಬಹುಶಃ ಆ ಸಮ್ಮೇಳನಕ್ಕಿಂತ ಹೆಚ್ಚು ಜನ ಜಂಗುಳಿ ಇಲ್ಲಿ ಸೇರಿ, ಹೆಚ್ಚು ವೈಭವೋಪೇತವಾಗಿ ನಡೆಯಿತಾದರೂ, ದಲಿತ ಚಳುವಳಿಯಲ್ಲಿನ ಮಹಾ ಒಡಕು ಇಲ್ಲಿ ಎದ್ದು ಕಾಣುವಂತಿತ್ತು. ಹಾಗೆ ನೋಡಿದರೆ, ಈ ಸಮ್ಮೇಳನವನ್ನು ಆಯೋಜಿಸಿದ್ದುದೇ ದಲಿತ ಸಂಘರ್ಷ ಸಮಿತಿಯ ಅಂಬೇಡ್ಕರ್‌ವಾದಿ ಎಂದು ಕರೆದುಕೊಳ್ಳುವ ಒಂದು ಬಣ. ಇನ್ನೊಂದು ಬಣದ ನಾಯಕರಾದ ಲಕ್ಷ್ಮೀನಾರಾಯಣ ನಾಗವಾರರು ಈ ಸಮ್ಮೇಳನದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರಾದರೂ, ಅವರ ಬಣದ ಇತರ ನಾಯಕರು ಮತ್ತು ಕಾರ್ಯಕರ್ತರ ಉಪಸ್ಥಿತಿ ಅಷ್ಟೇನೂ ಎದ್ದು ಕಾಣುವಂತಿರಲಿಲ್ಲ.

ಅದೇನೇ ಇರಲಿ, ದಕ್ಷಿಣ ಕರ್ನಾಟಕದ ಕಾರ್ಯಕರ್ತರು ಮತ್ತು ಕಲಾವಿದರಿಗಿಂತ ಬಹು ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸಿದ್ದ ಉತ್ತರ ಕರ್ನಾಟಕ ಜಿಲ್ಲೆಗಳ ಕಾರ್ಯಕರ್ತರು ಮತ್ತು ಕಲಾವಿದರು ತಮ್ಮ ವೈವಿಧ್ಯಮಯ ಹಾಡು, ತಮ್ಮಟೆ ಮತ್ತು ಕುಣಿತಗಳಿಂದ ಸಮ್ಮೇಳನಕ್ಕೆ ಒಂದು ವಿಶಿಷ್ಟ ಸಂಭ್ರಮ ತಂದಿತ್ತರು. ಹಾಗೇ ಈ ಸಮ್ಮೇಳನದ ಇನ್ನೊಂದು ವಿಶೇಷವೆಂದರೆ, ಸ್ಥಳೀಯ ಸಂಘಟಕರಲ್ಲಿ ಹೆಚ್ಚಿನವರು ದಲಿತೇತರರೇ ಆಗಿದ್ದು, ಅವರೊಂದಿಗೆ ಇತರ ದಲಿತೇತರರು ಗಣನೀಯ ಸಂಖ್ಯೆಯಲ್ಲಿ ಭಾಗವಹಿಸಿ, ದಲಿತ ಚಳುವಳಿಯ ಹಳೆಯ ದಿನಗಳನ್ನು ನೆನಪಿಗೆ ತಂದದ್ದು. ಆದರೆ ಬಹುತೇಕ ಮತ್ತು ಪ್ರಮುಖ ದಲಿತ ಲೇಖಕರ ಗೈರು ಹಾಜರಿ ಎದ್ದು ಕಂಡು, ಸಮ್ಮೇಳನದ ನಿಜವಾದ ಯಶಸ್ಸಿಗೆ ಭಂಗ ಉಂಟಾದದ್ದೂ ನಿಜ. ಇದಕ್ಕೆ ಕಾರಣ, ದಲಿತ ಚಳುವಳಿಯ ಭೌತಿಕ ಒಡಕಿನಷ್ಟೇ ದಲಿತ ಲೇಖಕರ ಮಾನಸಿಕ ಒಡಕೂ ಕಾರಣವಿದ್ದೀತು. ಏಕೆಂದರೆ, ದಲಿತ ಬರವಣಿಗೆ ಎಂಬುದೇ ಇಂದು ತನ್ನ ವಿಶಿಷ್ಟ 'ಶೀಲ'ವನ್ನು ಕಳೆದುಕೊಂಡು, ಕನ್ನಡ ಸಾಹಿತ್ಯದ ಸಾರ್ವತ್ರಿಕ ರಾಜಕಾರಣದ ಮಧ್ಯೆ ಕಾಣೆಯಾಗಿದೆಯಲ್ಲ? ಹಾಗಾಗಿ ಇವರ ಗೈರು ಹಾಜರಿ ಈ ಸಮ್ಮೇಳನದ ಸಂಭ್ರಮವನ್ನೇನೂ ಕಡಿಮೆ ಮಾಡಲಿಲ್ಲವಾದರೂ, ಸಮ್ಮೇಳನದ

ಉದ್ದೇಶ-ಗುರಿಗಳನ್ನು ವಿಚಲಿತಗೊಳಿಸಿ ಅನುಮಾನಾಸ್ಪದವನ್ನಾಗಿ ಮಾಡಿದ್ದಂತೂ ಸತ್ಯ. ಏಕೆಂದರೆ, ದಲಿತ ಏಕತೆ ಸಾಧಿತವಾಗುವ ಮುನ್ನವೇ ಇದ್ದಕ್ಕಿದ್ದಂತೆ ಈ ಸಮ್ಮೇಳನವನ್ನು ಸಂಘಟಿಸಲು ಕಾರಣ ಅಥವಾ ಸ್ಫೂರ್ತಿಯೇನು ಎಂಬುದು ಮಾತ್ರ ಸಮ್ಮೇಳನದುದ್ದಕ್ಕೂ ಕೂತ ನನಗೆ ಗೊತ್ತಾಗಲಿಲ್ಲ. ಇತ್ತೀಚೆಗೆ ಆರಂಭವಾಗಿದೆಯೆಂದು ಹೇಳಲಾಗುವ ದಲಿತ ಚಳುವಳಿಯ ಏಕತೆಯ ಪ್ರಯತ್ನ ಈ ದಲೇಕದ ನೆಲೆಯಲ್ಲಾದರೂ ಫಲ ನೀಡಿದ್ದಲ್ಲಿ, ಅದು ಒಳ್ಳೆಯ ಆರಂಭವಾದರೂ ಆಗಿರುತ್ತಿತ್ತು ಎಂದು ಯಾರಿಗಾದರೂ ಅನ್ನಿಸಿದ್ದಲ್ಲಿ ಆಶ್ಚರ್ಯವೇನಿಲ್ಲ.

ಈ ವಿಷಾದದೊಂದಿಗೇ ನಾನು ಈ ಸಮ್ಮೇಳನದ ವಿಚಾರ ಗೋಷ್ಠಿಯೊಂದರ ಅಧ್ಯಕ್ಷತೆ ವಹಿಸಿ ಮಾತನಾಡಬೇಕಾಯಿತು. ಗೋಷ್ಠಿಯಲ್ಲಿ ಮಾತನಾಡಬೇಕಿದ್ದ ಇಬ್ಬರು ಪ್ರಮುಖರು ಗೈರು ಹಾಜರಾಗಿದ್ದುದು ಒಂದು ರೀತಿಯಲ್ಲಿ ಒಳ್ಳೆಯದೇ ಆಯಿತೆಂದು ಹೇಳಬೇಕು! ಏಕೆಂದರೆ, ನಮ್ಮ ಎಲ್ಲ ಸಮ್ಮೇಳನಗಳಲ್ಲಿ ಆಗುವಂತೆ, ಇದರಲ್ಲೂ ಉದ್ಘಾಟನಾ ಸಮಾರಂಭವಾಗಲೀ, ನಂತರ ನಡೆದ ಮೊದಲ ವಿಚಾರ ಗೋಷ್ಠಿಯಾಗಲೀ ಸಮಯಕ್ಕೆ ಸರಿಯಾಗಿ ಆರಂಭವಾಗದೆ, ಯದ್ವಾ ತದ್ವಾ ಎಳೆದುಕೊಂಡು ಹೋಗಿ ನಮ್ಮ ಗೋಷ್ಠಿ ಆರಂಭವಾಗುವ ಹೊತ್ತಿಗೆ ಸಂಜೆಯ ಸಾಂಸ್ಕೃತಿಕ ಕಾರ್ಯಕ್ರಮಗಳ ವೇಳೆಯ ಒತ್ತಡ ನಮ್ಮ ಮೇಲೆ ಬೀಳತೊಡಗಿತ್ತು. ಹಾಗಾಗಿ ನಾನು ಟಿಪ್ಪಣಿ ಮಾಡಿಕೊಂಡಿದ್ದ ಎಲ್ಲ ಅಂಶಗಳನ್ನೂ ಮಾತನಾಡಲಾಗಲಿಲ್ಲ. ಬದಲಿಗೆ, ಇತ್ತೀಚೆಗೆ ನಾನು ಎಲ್ಲಿ ಮಾತನಾಡಲು ಹೋದರೂ ಸಭೆಯ ಮುಂದಿಡುವ ಐದು ಅಂಶಗಳ ಕಾರ್ಯಕ್ರಮವನ್ನು ಈ ಸಭೆಯ ಮುಂದೆಯೂ ಮಂಡಿಸಿದೆ. ಅದನ್ನೀಗ ನನ್ನ ಅಂದಿನ ಟಿಪ್ಪಣಿಗಳನ್ನು ಆಧರಿಸಿ ಇಲ್ಲಿ ದಾಖಲಿಸುತ್ತಿರುವೆ:

ಸ್ನೇಹಿತರೇ,

ಜಗತ್ತನ್ನು ನೋಡುವ, ಗ್ರಹಿಸುವ ವಿಶಿಷ್ಟ ಕ್ರಮವನ್ನು ನನಗೆ ನೀಡಿದರೆಂದು ನಾನು ನಂಬಿರುವ ಸಮಾಜವಾದಿ ಚಿಂತಕ ಲೋಹಿಯಾ ಅವರು ಜಗತ್ತಿನ ಅಗ್ರಗಣ್ಯ ವಿಜ್ಞಾನಿಯೆನಿಸಿದ ಆಲ್ಬರ್ಟ್ ಐನ್‌ಸ್ಟೀನ್‌ರನ್ನು ತಮ್ಮ ಅಮೆರಿಕಾ ಪ್ರವಾಸ ಸಂದರ್ಭವೊಂದರಲ್ಲಿ ಭೇಟಿ ಮಾಡಿದಾಗ, ೨೦ ನಿಮಿಷಗಳಿಗೆ ನಿಗದಿಯಾಗಿದ್ದ ಆ ಭೇಟಿ ಒಂದು ತಾಸನ್ನೂ ಮೀರಿ ಮುಂದುವರೆಯಿತು. ಮಾತುಕತೆ ನಂತರ ಲೋಹಿಯಾರನ್ನು ಬೀಳ್ಕೊಡಲು ಐನ್‌ಸ್ಟೀನರು ತಮ್ಮ ಕುಟೀರದ ಬಾಗಿಲವರೆಗೂ ಬಂದು ಹಾರ್ದಿಕವಾಗಿ ಕೈಕುಲುಕುತ್ತಾ, 'ಇನ್ನೊಮ್ಮೆ ನೀವು ಬರಬೇಕು. ಏಕೆಂದರೆ ಇತ್ತೀಚೆಗೆ ನನ್ನನ್ನು ಭೇಟಿ ಮಾಡಲು ಬರುವವರಲ್ಲಿ ಮನುಷ್ಯರೇ ಅಪರೂಪವಾಗಿದ್ದಾರೆ...' ಎಂದರಂತೆ! ಇತ್ತೀಚೆಗೆ ನಮ್ಮಲ್ಲಿ ಬಹಳ ಜನಕ್ಕೂ ಹೀಗೇ ಅನ್ನಿಸುತ್ತಿದ್ದಲ್ಲಿ ಆಶ್ಚರ್ಯವಿಲ್ಲ. ಇದಕ್ಕೆ ಅಪವಾದವೆಂಬಂತೆ, ನಮ್ಮ ಭಾವನಾತ್ಮಕ ಒಂಟಿತನದಿಂದ ಬಿಡುಗಡೆ ಎನಿಸುವಂತೆ ನಡೆಯುತ್ತಿದೆ ಈ ಸಮ್ಮೇಳನ. ದಲಿತರ ಸಹವಾಸವೇ- ಅವರೆಲ್ಲ ವಿಚಿತ್ರ ಕಿರಿಕಿರಿಗಳ ನಡುವೆಯೂ- ನಿಜವಾದ ಮನುಷ್ಯರ ಸಹವಾಸ ಎಂದೆನ್ನಿಸುತ್ತದೆ ನನಗೆ! ಇಂದೂ

ಸಹ... ಇಂದು ಇಲ್ಲಿ ನನ್ನ ಬಾಲ್ಯ ನೆನಪಿಗೆ ಬರುತ್ತಿದೆ. ಈ ಮಾತನ್ನು ನಾನು ಯಾರನ್ನೂ ಓಲೈಸಲು ಹೇಳುತ್ತಿಲ್ಲ. ಓಲೈಸಿ ನನಗೇನೂ ಆಗಬೇಕಿಲ್ಲ. ಹಾಗೆ ನೋಡಿದರೆ, ದಲಿತರು ಮತ್ತು ಇತರ ದಮನಿತರ ಬಗ್ಗೆ ನನ್ನದು ಕಠಿಣ ನಿಲುವು ಎಂಬುದು ನನ್ನ ಮೇಲಿರುವ ಜನಪ್ರಿಯ ಆರೋಪ!

ಅದಿರಲಿ. ನಾವು ಮೂಲತಃ ಸಮಾಜವಾದಿಗಳೆನಿಸಿಕೊಂಡವರು–ದಲಿತ, ರೈತ, ವಿಚಾರವಾದ, ಕನ್ನಡ ಚಳುವಳಿ, ಪರ್ಯಾಯ ರಾಜಕಾರಣ ಇತ್ಯಾದಿ ರೂಪಗಳಲ್ಲಿ– ವೇದಿಕೆಗಳ ಮೇಲೆ ಹೀಗೆ ಪದೇ ಪದೇ ಸೇರುವುದೇ ನಾವು ಕಿಂಚಿತ್ತೂ ಬದಲಾಗಿಲ್ಲ ಎಂದು ಖಚಿತಪಡಿಸಿಕೊಳ್ಳಲೆಂದು ಕಾಣುತ್ತದೆ! ಬೆಳಿಗ್ಗೆ ಉದ್ಘಾಟನಾ ಸಮಾರಂಭದಲ್ಲಿ ಬೌದ್ಧ ದೀಕ್ಷೆಯ ಬಗ್ಗೆ ಚಂಪಾ ಮತ್ತು ಕೆ.ಟಿ.ಶಿವಪ್ರಸಾದರ ನಡುವೆ ಕಂಡ ಸದ್ಯಕ್ಕೆ ಮುಗಿಯದಂತೆ ತೋರದ ವಾಗ್ವಾದದ ಕಹಿ ಮತ್ತು ನಂತರದ ಗೋಷ್ಠಿಯಲ್ಲಿ ಸ್ವಲ್ಪ ಅಸಭ್ಯವಾಗಿಯೇ ಮಾತನಾಡಿದ ರಾಜಶೇಖರ ನಾಯ್ಡು ಎಂಬುವವರ ಮೇಲೆ ಸರಿಯಾದ ಕಾರಣದಿಂದಲೇ ಹರಿಹಾಯ್ದ ಲಕ್ಷ್ಮೀನಾರಾಯಣ ನಾಗವಾರರ ಮಾತುಗಳಲ್ಲಿದ್ದ ಕ್ರೋಧ ಇದಕ್ಕೆ ಸಾಕ್ಷಿ. ಇತ್ತೀಚಿನ ವರ್ಷಗಳಲ್ಲಿ ನಮ್ಮ ಎಲ್ಲ ಚಟುವಟಿಕೆಗಳೂ ಮಾತು ಮಾತು ಮಾತು ಮಾತ್ರವಾಗಿ, ಮಾತಿನ ಆಟವಾಗಿಯೇ ಮುಗಿಯುತ್ತಿರುವುದರಿಂದ ಹೀಗೆಲ್ಲ ಆಗುತ್ತಿರಬೇಕು, ತಿಳಿಯದು! ಹಾಗಾಗಿ ನಾನು ಹೆಚ್ಚು ಮಾತನಾಡುವುದಿಲ್ಲ. ಮಾತು ನಿಲ್ಲಿಸಿ ನಮ್ಮ ನಿಜ ಜೀವನದಲ್ಲಿ ಅಳವಡಿಸಿಕೊಳ್ಳಬಹುದಾದ ಒಂದು ಕಾರ್ಯಕ್ರಮವನ್ನಷ್ಟೆ ನಿಮ್ಮ ಅವಗಾಹನೆಗಾಗಿ ಮುಂದಿಡುವೆ. ಇದರ ವಿವರಗಳ ಬಗ್ಗೆ ನಾನು ನಿರ್ದಿಷ್ಟವಾಗಿಲ್ಲ. ನಮ್ಮ ನಮ್ಮಲ್ಲೇ ಚರ್ಚಿಸಿ ಅವನ್ನು ನಿರ್ಧರಿಸಿಕೊಳ್ಳಬಹುದು. ಇದಕ್ಕೆ ಹಿನ್ನೆಲೆಯಾಗಿ ಒಂದೆರಡು ಮಾತುಗಳು:

ಈ ಗೋಷ್ಠಿ ಸಮೂಹ ಮಾಧ್ಯಮ, ಸಂಸ್ಕೃತಿ ಮತ್ತು ಜಾಗತೀಕರಣವನ್ನು ಕುರಿತಾಗಿದ್ದರೂ, ಈ ಮೂರರ ಬಗ್ಗೆ ಯಾವುದೇ ಆಳವಾದ ಮಾತು ಇಲ್ಲಿ ಕೇಳಿಬಂದಂತಿಲ್ಲ. ಸಮೂಹ ಮಾಧ್ಯಮ ಇಲ್ಲಿ ಪ್ರಸ್ತಾಪಕ್ಕೇ ಬರಲಿಲ್ಲ! ಅದು ಸಹಜ ಕೂಡಾ. ಇಂದು ಸಮೂಹ ಮಾಧ್ಯಮಗಳಾದರೂ ಎಲ್ಲಿವೆ? ಮೊದಲು 'ಸಮೂಹ'ವೆಂಬುದಿದ್ದರೆ ತಾನೇ ಸಮೂಹ ಮಾಧ್ಯಮ? ಜಾಗತೀಕರಣ ಸಮೂಹ ಅಥವಾ ಸಮುದಾಯ ಎಂಬ ಕಲ್ಪನೆಯನ್ನೇ ಕೊಂದಿದೆ. ಈ ಕೊಲೆಯ ಫಲಾನುಭವಿಗಳು ನಾವೆಲ್ಲ. ಗೆಳೆಯ ಉಮೇಶಚಂದ್ರ ಪ್ರತಿಪಾದಿಸಿದ 'ಉತ್ತರ ಪ್ರದೇಶ ಮಾದರಿ' ಅಥವಾ 'ಮಾಯಾವತಿ ಮಾದರಿ'ಯ ರಾಜಕಾರಣ ಈ ಫಲಾನುಭವದ ಹಿನ್ನೆಲೆಯಲ್ಲೇ ಹುಟ್ಟಿದಾಗಿದ್ದು ಎಂದಷ್ಟೇ ಹೇಳಿ, ಅದನ್ನು ಒಪ್ಪುವುದು ಅಥವಾ ಬಿಡುವುದನ್ನು ನಿಮ್ಮ ತೀರ್ಮಾನಕ್ಕೇ ಬಿಡಬಯಸುತ್ತೇನೆ.

ಇಂದು ಟಿವಿ ವಾಹಿನಿಗಳ ಬಗ್ಗೆ ಮಾತನಾಡುವಂತೆಯೇ ಇಲ್ಲ. ಅವು ಟಿಆರ್‌ಪಿ ಗುಲಾಮಗಿರಿಗೆ ಬಿದ್ದು ಧರ್ಮ, ಸಂಸ್ಕೃತಿ, ರಾಜಕಾರಣ ಹೀಗೆ ಎಲ್ಲವನ್ನೂ ಮನರಂಜನೆಯ ಸರಕನ್ನಾಗಿ ಮಾಡಿ ಕೂರಿಸಿವೆ. ಇನ್ನು, ಬಹುಶಃ ಇವುಗಳು ಸೃಷ್ಟಿಸಿರುವ ಒತ್ತಡಕ್ಕೆ ಸಿಕ್ಕಿಯೇ ಏನೋ ನಮ್ಮ ಘನತೆವೆತ್ತ ಪತ್ರಿಕೆಗಳು ಮುಖರಹಿತವಾಗತೊಡಗಿವೆ. ವಾರಕ್ಕೊಮ್ಮೆಯೋ ಎರಡು ಬಾರಿಯೋ ಅಷ್ಟೇ ನಮ್ಮ ಪ್ರಮುಖ ಪತ್ರಿಕೆಗಳ ಮೂರ್ನ

ಮುಖ (ಪುಟ) ಕಾಣಸಿಗುವುದು! ತಮ್ಮ ಮುಖ ಚಹರೆಯನ್ನು ಕಾಯ್ದುಕೊಳ್ಳಲಾಗದ, ತನ್ನ ಮಾಧ್ಯಮ ಅಸ್ಮಿತೆಯ ಬಗ್ಗೆಯೇ ಗೌರವ ಉಳಿಸಿಕೊಳ್ಳಲಾಗದ ಯಾವ ಪತ್ರಿಕೆ ಏನು ಹೇಳಿದರೂ ನಾವು ಅನುಮಾನದಿಂದಲೇ ನೋಡಬೇಕಾಗಿದೆ. ಯಾವ ಹುತ್ತದ ಆಳದಲ್ಲಿ ಯಾವ ಹಾವಿದೆಯೋ ಯಾರಿಗೆ ಗೊತ್ತು?

ಹಾಗಾಗಿ ನಮಗೆ ಉಳಿದಿರುವುದು ಒಂದೇ ದಾರಿ. ನಮ್ಮ ಒಳಗಿನ ದನಿಯನ್ನು ಕಾಪಿಟ್ಟುಕೊಂಡು, ಅದರ ಮಾತು ಕೇಳುವಷ್ಟು ಗರಿಷ್ಠ ಎಚ್ಚರ ಮತ್ತು ಕನಿಷ್ಠ ಸಂಯಮಗಳನ್ನು ನಾವು ರೂಢಿಸಿಕೊಳ್ಳುವುದು. ಇಂದಿನ ಹೊರಗಣ ಆಕರ್ಷಣೆಗಳ ಒತ್ತಡಗಳ ನಡುವೆ ಇದು ಕಷ್ಟ. ಆದರೆ ನಾವು ಹೊರಗೆ ಹೇಳುವ ನಮ್ಮ ಗುರಿ ಮತ್ತು ಉದ್ದೇಶಗಳ ಬಗ್ಗೆ ಪ್ರಾಮಾಣಿಕವಾಗಿದ್ದರೆ, ಇದನ್ನು ಬಿಟ್ಟು ಬೇರೆ ದಾರಿಯಿಲ್ಲ. ಹಾಗಾಗಿ ನನ್ನ ಈ ಐದು ಅಂಶಗಳ ಕಾರ್ಯಕ್ರಮ. ಈ ಕಾರ್ಯಕ್ರಮದ ಅನಿವಾರ್ಯತೆ ಮತ್ತು ಪ್ರಸ್ತುತತೆಗಳನ್ನು ಅರಿತುಕೊಳ್ಳಲು ಮೊದಲಾಗಿ ಇತ್ತೀಚೆಗೆ ಸಾರ್ವಜನಿಕ ಚರ್ಚೆಗಳಲ್ಲಿ ಬಹುವಾಗಿ ಪ್ರಸ್ತಾಪಿತವಾಗುವ ಎರಡು ಅಂಶಗಳ ಬಗ್ಗೆ ನಮಗೆ ಸ್ಪಷ್ಟತೆ ಇರಬೇಕು.

ಒಂದು: ಸಾಮಾಜಿಕ ನ್ಯಾಯವೆಂದರೆ ಜಾತಿ ನ್ಯಾಯವಲ್ಲ. ಏಕೆಂದರೆ, ಜಾತಿ ಅನ್ನುವುದು ಕೆಟ್ಟದ್ದು, ಬಿಡಬೇಕಾದದ್ದು. ಹೆಣ ಸುಡಲು ಬಳಸುವ ಕೋಲನ್ನು ಕೊನೆಗೆ ಹೆಣದೊಡನೆಯೇ ಸುಡಬೇಕಾದಂತೆ ಜಾತಿಯನ್ನೂ ಅಂತಿಮವಾಗಿ ಸುಡಬೇಕಾಗಿದೆ. ಈ ಅರಿವಿನೊಂದಿಗೇ ಸಾಮಾಜಿಕ ನ್ಯಾಯದ ಮಾತಾಡಬೇಕು.

ಎರಡು: ಅಭಿವೃದ್ಧಿ ಎಂದರೆ ಹೊರಗಿನ ಅಭಿವೃದ್ಧಿ ಅಲ್ಲ. ಒಳಗಿನ ಅಭಿವೃದ್ಧಿ. ಹೊರಗಿನ ರಸ್ತೆ, ಸೇತುವೆ, ದೂರಸಂಪರ್ಕ, ಉನ್ನತ ಶಿಕ್ಷಣ, ಸಂಶೋಧನೆ, ಕಾರ್ಖಾನೆ, ಕಟ್ಟಡ ಇತ್ಯಾದಿಗಳೆಲ್ಲ ನಮ್ಮ ಒಳಗಿನ ಅಭಿವೃದ್ಧಿ ಅಂದರೆ ಸಾರ್ವತ್ರಿಕ ಮತ್ತು ವೈಯುಕ್ತಿಕ ಶಾಂತಿ, ನೆಮ್ಮದಿ, ಸಮತೋಲನಗಳನ್ನು ಸಾಧಿಸುವಂತಿರಬೇಕು. ಇಲ್ಲದಿದ್ದರೆ ಅದು ಅಭಿವೃದ್ಧಿ ಅಲ್ಲ. ಬರೀ ಅಹಂಕಾರ, ಡೌಲು, ಅಶಾಂತಿ.

ಇದನ್ನು ಅರಿತುಕೊಂಡವರಿಗೆ, ಇದೀಗ ಐದು ಅಂಶಗಳ ಈ ಕಾರ್ಯಕ್ರಮ:

೧. ಸರಾಸರಿ ಐದಾರು ಜನರ ಒಂದು ಸಾಮಾನ್ಯ ಕುಟುಂಬ ತಿಂಗಳಿಗೆ ಮುವ್ವತ್ತು ಸಾವಿರ ರೂಪಾಯಿಗಳನ್ನು ಮೀರಿ ಜೀವನ ನಿರ್ವಹಣೆಗೆ ಖರ್ಚು ಮಾಡುವುದನ್ನು ಸಾಮಾಜಿಕ ಪಾಪವೆಂದು ಪರಿಗಣಿಸುವುದು. (ದೊಡ್ಡ ನಗರಗಳಲ್ಲಿ ಇದರ ಮಿತಿಯನ್ನು ಸೂಕ್ತವಾಗಿ ಪರಿಷ್ಕರಿಸಿಕೊಳ್ಳಬಹುದು.) ಇದನ್ನು ಮೀರಿದ ಆದಾಯವನ್ನು ಸಮಾನ ಮನಸ್ಕರು ಒಟ್ಟಿಗೆ ಸೇರಿ ಒಂದು ಸಾಮಾನ್ಯ ನಿಧಿ ಅಥವಾ ಟ್ರಸ್ಟ್ ಮಾಡಿಕೊಂಡು ಸಾರ್ವಜನಿಕ ಹಿತಕ್ಕೆ ಬಳಸುವ ವ್ಯವಸ್ಥೆ ಮಾಡಿಕೊಳ್ಳಬಹುದು.

೨. ನಮ್ಮ ಕುಟುಂಬಗಳಲ್ಲಿ ಒಂದಾದರೂ ಅಂತರ್‌ಜಾತೀಯ ವಿವಾಹ ನಡೆಯುವಂತಹ ವಾತಾವರಣ ನಿರ್ಮಾಣ ಮಾಡುವುದು. ಇದು ಯಾವುದೇ ಕಾರಣದಿಂದ ಸಾಧ್ಯವೇ ಆಗದಿದ್ದಲ್ಲಿ ಪರಿಶಿಷ್ಟ ಜಾತಿ/ವರ್ಗದ ಮಕ್ಕಳನ್ನು (ಪರಿಶಿಷ್ಟ ಜಾತಿ/ವರ್ಗಗಳ ಅನುಕೂಲಸ್ಥರು ಬಡ ಕುಟುಂಬಗಳ ಮಕ್ಕಳನ್ನು) ಮನೆಯಲ್ಲಿಟ್ಟು

ಕೊಂಡು ಓದಿಸುವುದು ಅಥವಾ ಅವರ ಓದಿಗೆ ಹಣಕಾಸಿನ ಸಹಾಯ ಒದಗಿಸುವುದು.

೩. ನಮ್ಮ ಮಕ್ಕಳು ಮತ್ತು ಮೊಮ್ಮಕ್ಕಳನ್ನು ಕನಿಷ್ಠ ೭ನೇ ತರಗತಿಯವರೆಗಾದರೂ ಕನ್ನಡ ಶಾಲೆಯಲ್ಲಿ ಓದಿಸುವುದು.

೪. ಯಾವುದೇ ಚುನಾವಣೆಯಲ್ಲಿ, ಬೇರೆ ಯಾವುದೇ ಸಾರ್ವಜನಿಕ ಮಹತ್ವದ ಕಾರಣವಿಲ್ಲದಿದ್ದಲ್ಲಿ ಪಕ್ಷಬೇಧವಿಲ್ಲದೆ ಅತಿ ಕಡಿಮೆ ಆಸ್ತಿ ಹೊಂದಿರುವ ಅಭ್ಯರ್ಥಿಗೆ ಮತ ಹಾಕುವುದು. (ಏಕೆಂದರೆ ಇವೊತ್ತಿನ ರಾಜಕಾರಣ ನೋಡಿದರೆ, ಸದ್ಯಕ್ಕಾದರೂ ಬಡ ಜನ ಪ್ರತಿನಿಧಿ ಎಂಬುದೇ ದೊಡ್ಡ ಅರ್ಹತೆಯಾಗಿ ಮತ್ತು ಕಡಿಮೆ ಅಪಾಯಕಾರಿಯಾಗಿ ಕಾಣುತ್ತದೆ.)

೫. ಈ ನಾಲ್ಕು ಅಂಶಗಳ ಬಗ್ಗೆ ನಂಬಿಕೆ ಮತ್ತು ಸಹಾನುಭೂತಿ ಹೊಂದಿದವರನ್ನು ನಮ್ಮ ನಿಜವಾದ ಗೆಳೆಯರೆಂದು ಗುರುತಿಸಿ ಈ ಕಾರ್ಯಕ್ರಮದ ಯಶಸ್ಸಿಗಾಗಿ ದುಡಿಯುವುದು.

ಬರೀ ಮಾತುಗಳನ್ನು, ಜಾಣ ಮಾತುಗಳನ್ನು ಆಡುತ್ತಾ ಹತಾಶರಂತೆ, ದುಃಖಿತರಂತೆ, ಹೋರಾಟಗಾರರಂತೆ ನಟಿಸುತ್ತಾ ಓಡಾಡುವುದನ್ನು ಮತ್ತು ಹಾರಾಡುವುದನ್ನು ನಿಲ್ಲಿಸಿ ಮೌನವಾಗಿ ಇದನ್ನು ಮಾಡಲು ಸಾಧ್ಯವೇ ನೋಡೋಣ. ನಮಸ್ಕಾರ.

(ಇದೇ ಸಂದರ್ಭದಲ್ಲಿ ಈ ಸಮ್ಮೇಳನಕ್ಕೆ ಸಂಬಂಧಿಸಿದಂತೆ ಇನ್ನೊಂದು ಸಂಗತಿಯನ್ನು ಹೇಳಲೇಬೇಕು. ಸಮ್ಮೇಳನದ ಕೊನೆಯಲ್ಲಿ ಕೊಟ್ರಪ್ಪ ಹಿರೇಮಾಗಡಿ ಅವರ ಸಮರ್ಥ ನಿರ್ದೇಶನದಲ್ಲಿ ಪ್ರದರ್ಶಿತವಾದ ಮುಕುಂದ ಜೋಷಿಯವರ 'ಬಾಬಾ ಸಾಹೇಬ್ ಅಂಬೇಡ್ಕರ್' ಎಂಬ ಮರಾಠಿ ನಾಟಕದ ಕನ್ನಡ ಅವತರಣಿಕೆ (ಅನುವಾದ: ಬಿ.ಆರ್.ವೆಂಟಕರಮಣ ಐತಾಳ) ಸಮ್ಮೇಳನಕ್ಕೆ ಹೊಸ ಸಂದೇಶ ನೀಡಿತೆಂದೇ ಹೇಳಬೇಕು. ಗಾಂಧಿ– ಅಂಬೇಡ್ಕರ್ ನಡುವಣ ಸಂಬಂಧಗಳನ್ನು ವಿನಾಕಾರಣ ಜಟಿಲಗೊಳಿಸಿ ವಾತಾವರಣವನ್ನು ಕಲುಷಿತಗೊಳಿಸದೆ, ಅದನ್ನು ಇಂದಿನ ಸಂದರ್ಭಕ್ಕೆ ಹೇಗೆ ವಿಸ್ತರಿಸಿ, ಸಾಮಾಜಿಕ ನ್ಯಾಯದ ಕಲ್ಪನೆಯನ್ನು ಪುನರ್ರೂಪಿಸಬಹುದಾದ ಎಂತಹ ಸಾಧ್ಯತೆಗಳಿವೆ ಎಂಬುದರ ಕಡೆಗೆ ಈ ನಾಟಕ ಹೊಸ ಬೆಳಕು ಚೆಲ್ಲುವಂತಿತ್ತು. ಆದರೆ ಬೆಳಗಾವಿ ಕಡೆಯ ಕೆಲವು ದಲಿತ ಕಾರ್ಯಕರ್ತರು ನಾಟಕದ ನಂತರ ನಿರ್ದೇಶಕರ ಬಳಿ ಈ ವಿಸ್ತರಣೆಯ ಸಾಧ್ಯತೆಗಳನ್ನು ಸೂಚಿಸುವುದೇ ಅಪರಾಧವೆಂಬಂತೆ ಬಿಸಿ ಬಿಸಿ ವಾಗ್ವಾದಕ್ಕೆ ತೊಡಗಿದ್ದುದನ್ನೂ ಕಂಡು, ನಾವು ಸಾಗಬೇಕಾದ ದಾರಿ ಇನ್ನೂ ಸಾಕಷ್ಟು ದೂರವಿದೆ ಎನ್ನಿಸಿದ್ದೂ ನಿಜ.)

(ಜನವರಿ, ೨೦೧೧)

ಜಾತಿ ವ್ಯವಸ್ಥೆ ಎಲ್ಲಿದೆ? ಇಲ್ಲಿದೆ, ಇಲ್ಲಿದೆ!

...ಇದಾವುದರಲ್ಲೂ ಅಂತಾರಾಷ್ಟ್ರೀಯ ಎನ್ನುವುದು ಏನೂ ಇರಲಿಲ್ಲ. ಎಲ್ಲ ನಮ್ಮ ವಿಚಾರ ಸಂಕಿರಣಗಳಂತೆಯೇ ಸಾಮಾನ್ಯ, ಅತಿ ಸಾಮಾನ್ಯ. ಆದರೆ ಈ ವಿಚಾರ ಸಂಕಿರಣದ ಕೊನೆಯಲ್ಲಿ ಬಾಲಗಂಗಾಧರರೊಂದಿಗೆ ಆಕಸ್ಮಿಕವೆಂಬಂತೆ ನಡೆದ ನನ್ನ ಸಂಕ್ಷಿಪ್ತ ಮುಖಾಮುಖಿ ಅವರ ಈ ಇಡೀ ಚಟುವಟಿಕೆಗಳ ಮೇಲೆ ವಿಶೇಷ ಬೆಳಕು ಚೆಲ್ಲುವಂತಿತ್ತು! ಎಷ್ಟರ ಮಟ್ಟಿಗೆ ಎಂದರೆ, ಈ ಹಿಂದೆ ನನ್ನ ಕೆಲವು ಗೆಳೆಯರು ಇವರ ಬಗ್ಗೆ ಹೇಳಿದ್ದಾಗ ಯಾವುದನ್ನು ನಾನು ನಂಬದಾಗಿದ್ದೆನೋ ಅದೇ, ಹಾಗೇ ನಡೆದು ಹೋಯಿತು.

ಭಾರತದ ಜಾತಿ ವ್ಯವಸ್ಥೆ ಕುರಿತಂತೆ ಪ್ರೊ॥ ಎಸ್.ಎನ್. ಬಾಲಗಂಗಾಧರ ರಾವ್ (ಅವರ ಅಭಿಮಾನಿಗಳ ಬಾಯಲ್ಲಿ ಬಾಲು) ಎನ್ನುವವರು ನಡೆಸಿರುವ ಸಂಶೋಧನೆ ಬಹಳ ಜನಕ್ಕೆ ತಿಳಿದಿರಲಾರದು. ಈ ಸಂಶೋಧನೆ ಅಂತಾರಾಷ್ಟ್ರೀಯ ಮಟ್ಟದ ಕೆಲವು ವಲಯಗಳಲ್ಲಿ, ವೇದಿಕೆಗಳಲ್ಲಿ ಮಾತ್ರ ಚರ್ಚೆಯಾಗುತ್ತಿರುವುದೂ ಇದಕ್ಕೆ ಕಾರಣವಾಗಿರುವುದು. ಭಾರತದ 'ಜಾತಿ ವ್ಯವಸ್ಥೆ' ಎಂಬ ಕಲ್ಪನೆಯೇ ಪಾಶ್ಚಿಮಾತ್ಯ ಅಧ್ಯಯನಕಾರರು, ನಿರ್ದಿಷ್ಟವಾಗಿ ಕ್ರಿಶ್ಚಿಯನ್ ಮಿಷನರಿ ದೃಷ್ಟಿಕೋನ ಸೃಷ್ಟಿಸಿದ ಒಂದು ಕಲ್ಪನೆ ಎಂಬುದು ಇವರ ಮುಖ್ಯ ಸಂಶೋಧನೆ. ಹಿಂದೂ ಧರ್ಮವನ್ನು ಏಕ ದೇವ, ಏಕ ಪ್ರವಾದಿ, ಏಕ ಧರ್ಮಗ್ರಂಥ ಆಧಾರದ ಕ್ರಿಶ್ಚಿಯನ್ ಧರ್ಮದ ಮಾದರಿಯಲ್ಲಿ ಏಕರೂಪಿಯಾಗಿ ಗ್ರಹಿಸಿದ್ದರಿಂದಾಗಿ, ಜಾತಿಯನ್ನು ಹಿಂದೂ ಧರ್ಮದ ಒಂದು 'ವ್ಯವಸ್ಥೆ'ಯನ್ನಾಗಿ ಬಿಂಬಿಸಲಾಗಿದೆ ಎಂಬುದು ಇವರ ವಾದ. ಹೀಗಾಗಿ, ಭಾರತದಲ್ಲಿ ಜಾತಿ ಇದೆ ಮತ್ತು ಜಾತಿ ತಾರತಮ್ಯವೂ ಇದೆ; ಆದರೆ ಜಾತಿ ವ್ಯವಸ್ಥೆ ಎಂಬುದಿಲ್ಲ. ಏಕೆಂದರೆ, ಜಾತಿ ವ್ಯವಸ್ಥೆಯನ್ನು ಒಂದು ಅನನ್ಯ ಸಾಮಾಜಿಕ ವ್ಯವಸ್ಥೆಯಾಗಿ ಗುರುತಿಸಲು ಇಡೀ ಭಾರತಕ್ಕೆ ಅನ್ವಯವಾಗುವ ಸಾಮಾನ್ಯ ಚಿಹ್ನೆಯಿಲ್ಲ ಎಂಬುದು ಇವರು ಇದಕ್ಕೆ ನೀಡುವ ವಿವರಣೆ. ಇವರ ಈ ವಿವರಣೆಯಲ್ಲಿ ಅನೇಕ ತೊಂದರೆಗಳಿವೆ ಎಂಬುದು ನಿಜವಾದರೂ, ಇದು ಭಾರತೀಯ ಸಮಾಜದ ಬಗ್ಗೆ ಮರುನೋಟವೊಂದನ್ನು ಬೀರುವ ಪ್ರಯತ್ನ ಎಂಬ ದೃಷ್ಟಿಯಿಂದ ಗಮನಾರ್ಹವೇ.

ಬಾಲಗಂಗಾಧರರು ಮೂಲತಃ ಕರ್ನಾಟಕದವರು, ಕನ್ನಡಿಗರು. ೬೦-೭೦ರ ದಶಕದಲ್ಲಿ ಭಾರತದಲ್ಲಿದ್ದಾಗ ಇವರು ತೀವ್ರವಾದಿ ಕಮ್ಯುನಿಸ್ಟರಾಗಿದ್ದರಂತೆ. ಈಗ ಇವರು ಬೆಲ್ಜಿಯಂನಲ್ಲಿ ನೆಲೆಸಿದ್ದು, ಅಲ್ಲಿನ ಘೆಂಟ್ ವಿಶ್ವವಿದ್ಯಾಲಯದಲ್ಲಿ ತಮ್ಮ ಈ ಸಂಶೋಧನೆ ಕೈಗೊಂಡಿದ್ದಾರೆ ಮತ್ತು ಈ ಸಂಶೋಧನೆಯ ಬಗ್ಗೆ ವ್ಯಾಪಕವಾಗಿ ಚರ್ಚೆಯಾಗಬೇಕೆಂಬ ದೃಷ್ಟಿಯಿಂದ ಅನೇಕ ಅಂತಾರಾಷ್ಟ್ರೀಯ ಯೋಜನೆಗಳನ್ನೂ, ಕಾರ್ಯಕ್ರಮಗಳನ್ನೂ ಇವರು ರೂಪಿಸಿದ್ದಾರೆ. ಇಂತಹ ಒಂದು ಯೋಜನೆಯ ಅಡಿಯಲ್ಲಿ ನಮ್ಮ ಕುವೆಂಪು ವಿಶ್ವವಿದ್ಯಾಲಯದಲ್ಲಿ ಸ್ಥಳೀಯ ಸಂಸ್ಕೃತಿಗಳ ಅಧ್ಯಯನ ಕೇಂದ್ರವೊಂದನ್ನು ಸ್ಥಾಪಿಸಿ, ಅವರೇ ಅದರ ಪ್ರಧಾನ ಪೋಷಕರೂ ಆಗಿದ್ದಾರೆ. ಇದಕ್ಕೆ ಈ ವಿಶ್ವವಿದ್ಯಾಲಯದ ರಾಜಕೀಯ ಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ॥ ಜೆ.ಎಸ್.ಸದಾನಂದ ಸ್ಥಳೀಯ ಪೋಷಕರಾಗಿದ್ದರೆ, ಇತಿಹಾಸ ವಿಭಾಗದ ಪ್ರಾಧ್ಯಾಪಕ ಡಾ॥ ರಾಜಾರಾಮ ಹೆಗಡೆ ನಿರ್ದೇಶಕರಾಗಿದ್ದಾರೆ. ಇವರಿಬ್ಬರೂ ನಾನು ಬಹುವಾಗಿ ಗೌರವಿಸುವ ವಿದ್ವಾಂಸರೂ ಮತ್ತು ನನ್ನ ಆಪ್ತ ಗೆಳೆಯರೂ ಆಗಿರುವುದರಿಂದ, ಬಾಲಗಂಗಾಧರರ ವಿಚಾರಗಳ ಕುರಿತಂತೆ ಕಳೆದ ಎರಡು-ಮೂರು ವರ್ಷಗಳಲ್ಲಿ ನಮ್ಮ ನಡುವೆ ಅನೇಕ ಚರ್ಚೆಗಳಾಗಿವೆ. ಪತ್ರಿಕೆಗಳ ಮೂಲಕವೂ ಸಾಕಷ್ಟು ವಾದ-ವಿವಾದಗಳು ನಡೆದಿವೆ.

ಇತ್ತೀಚಿನ ವರ್ಷಗಳಲ್ಲಿ ನಮ್ಮ ಸಾಮಾಜಿಕ ನ್ಯಾಯ ರಾಜಕಾರಣ ವಕ್ರಗೊಳ್ಳುತ್ತಿರುವ ರೀತಿ-ನೀತಿಗಳ ಹಿನ್ನೆಲೆಯಲ್ಲಿ, ಜಾತಿ ವ್ಯವಸ್ಥೆ ಕುರಿತ ಈವರೆಗಿನ ಸಂಕಥನದ ಬಗ್ಗೆ ನನ್ನಲ್ಲಿ ಕೆಲವು ಸಂದೇಹಗಳು ಹುಟ್ಟಿವೆ, ನಿಜ. ಆದರೆ, ಜಾತಿ ವ್ಯವಸ್ಥೆ ಎಂಬುದೇ ಇಲ್ಲ; ಅದು ಯಾರೋ ನಮ್ಮ ಮೇಲೆ ಹೇರಿದ ಕಲ್ಪನೆ ಎಂಬ ಸಾರಾ ಸಗಟು ತೀರ್ಮಾನ (ಇದನ್ನು ಈ ಗೆಳೆಯರು ತಮ್ಮ ಪ್ರಮೇಯದ ಊಹಾ ಪ್ರತಿಜ್ಞೆ-hypothesis-ಅಷ್ಟೆ ಎಂದು ಹೇಳುವರಾದರೂ, ತಮ್ಮ ಲೇಖನಗಳಲ್ಲಿ ಇದನ್ನು ತೀರ್ಮಾನದ ರೂಪದಲ್ಲೇ 'ಸಾಧಿಸಿ' ತೋರಿಸುತ್ತಾರೆ!) ನನಗೆ ಒಂದು ಜಾಣ ಬೌದ್ಧಿಕ ವಾದದಂತೆ ಮಾತ್ರ ಕಾಣುತ್ತದೆ. ಮುಖ್ಯವಾಗಿ ಕ್ರಿಶ್ಚಿಯನ್ ಅಥವಾ ಯಾವುದೇ ಸೆಮೆಟಿಕ್(ಮರಳುಗಾಡಿನ) ಧರ್ಮ ಏಕರೂಪಿಯಾಗಿದೆಯೆಂದು ಭಾವಿಸುವ; ಮತ್ತು ಹಿಂದೂ ಧರ್ಮವನ್ನು ಏಕರೂಪಿ ಧರ್ಮವನ್ನಾಗಿ ಮಾಡುವ ಪ್ರಯತ್ನಗಳು ನಮ್ಮ ಇತಿಹಾಸದಲ್ಲಿ ನಿರಂತರವಾಗಿ-ಈಗಲೂ-ನಡೆದಿರುವ ಹಿನ್ನೆಲೆಯಲ್ಲಿ, ಇವರ ವಾದಕ್ಕೆ, ಇವರು ಬಹುವಾಗಿ ಎತ್ತಿ ಹಿಡಿಯುವ 'ವೈಜ್ಞಾನಿಕ' ಎನ್ನಬಹುದಾದ ಆಧಾರಗಳೇನೂ ಇದ್ದಂತೆ ತೋರುವುದಿಲ್ಲ. ಇನ್ನೂ ಮುಖ್ಯವಾಗಿ, ಈ ಸಂಶೋಧನೆಯ ಕಾರಣ ಮತ್ತು ಉದ್ದೇಶವಾದರೂ ಏನು? ಎಂಬುದು ಇನ್ನೂ ಸ್ಪಷ್ಟವಾಗಿ ಗೊತ್ತಾಗದಾಗಿದೆ!

ಜಾತಿ ವ್ಯವಸ್ಥೆ ಎಂಬುದು ಒಂದು ಆರೋಪಿತ ಕಲ್ಪನೆಯಾಗಿರುವುದರಿಂದ, ಇದರಿಂದ ಪ್ರಭಾವಿತರಾಗಿರುವ ಭಾರತೀಯರಿಗೆ ತಮ್ಮದೇ ಆದ ನಿಜ ಅನುಭವವೆಂಬುದು ದಕ್ಕದಾಗಿದೆ ಎಂಬ ದೊಡ್ಡ ಮಾತುಗಳನ್ನು ಈ ಗೆಳೆಯರು ಆಡುತ್ತಾರೆ. ಆದರೆ ಇವರ ಸಂಶೋಧನೆಯ ರೀತಿ-ನೀತಿಗಳ ಬಗ್ಗೆಯೇ ಕರ್ನಾಟಕದ ವಿದ್ವದ್ವಲಯಗಳಲ್ಲಿ ಅನೇಕ

ಸಂದೇಹಗಳೂ, ಅಸಮಾಧಾನಗಳೂ ವ್ಯಕ್ತವಾಗಿವೆ. ಇದರಿಂದಾಗಿ ಇವರ ವಾದಗಳಿಗೆ ಸೂಕ್ತ ಉತ್ತರಗಳು ವಿದ್ವದ್ವಲಯದಲ್ಲಿ ವ್ಯವಸ್ಥಿತವಾಗಿ ಮಂಡಿತವಾಗಿಲ್ಲ. ಇವರ ವಾದ ಇವರೇ ಸೃಷ್ಟಿಸಿಕೊಂಡಿರುವ ಗೊಂದಲಗಳಿಂದಾಗಿ ಮೂಡಿರುವುದರಿಂದ, ಉತ್ತರಕ್ಕೆ ಅವು ಅರ್ಹವಲ್ಲ ಎಂಬುದು ಕೆಲವರ ಅಭಿಪ್ರಾಯವಾದರೆ; ಇವರ ಇಡೀ ಗುಂಪೇ ತಲೆ ಪ್ರತಿಷ್ಠೆಯದ್ದೂ, ಇವರ ನಾಯಕ ಬಾಲಗಂಗಾಧರರು ವಿಪರೀತ ದುರಹಂಕಾರಿಯೂ ಆಗಿರುವುದರಿಂದ ಇವರೊಂದಿಗೆ ವಾದ ಸಾಧ್ಯವಿಲ್ಲ ಎಂಬುದು ಇನ್ನು ಕೆಲವರ ಅಭಿಪ್ರಾಯ. ಹಿಂದೆ ನಡೆದ ಇಂತಹ ಚರ್ಚೆಗಳಲ್ಲಿ ಬಾಲಗಂಗಾಧರರು ತಮಗೆ ಅನಾನುಕೂಲವೆನಿಸಿದ ಸಂದರ್ಭ ಸೃಷ್ಟಿಯಾದಾಗಲೆಲ್ಲ ಎದುರಾಳಿಗಳ ಮೇಲೆ ಒರಟೊರಟಾಗಿ ಹರಿ ಹಾಯ್ದು, ಕೊನೆಗೆ 'ಹೊರಗೆ ಹಾಕಿ ಅವರನ್ನು' ಎಂದು ತಮ್ಮ ಶಿಷ್ಯರಿಗೆ ಆದೇಶಿಸಿದ್ದೂ ಉಂಟು ಎಂದು ಡಾ॥ ಯು.ಆರ್.ಅನಂತಮೂರ್ತಿ ಮತ್ತು ಡಾ॥ ರಾಜೇಂದ್ರ ಚೆನ್ನಿಯವರೂ ಸೇರಿದಂತೆ ಹಲವರು ನನ್ನ ಬಳಿ ಹೇಳಿದ್ದರು. ಆದರೆ ಸದಾನಂದ ಮತ್ತು ಹೆಗಡೆಯವರ ಉದಾರವಾದಿ ವರ್ತನೆಗಳ ಹಿನ್ನೆಲೆಯಲ್ಲಿ ನಾನದನ್ನು ಪೂರ್ಣವಾಗಿ ನಂಬದಾಗಿದ್ದೆ.

ಹೀಗಾಗಿ, ಇದೇ ಜನವರಿ ೧೮ ಹಾಗೂ ೧೯ರಂದು ಕುವೆಂಪು ವಿಶ್ವವಿದ್ಯಾಲಯದ ಪಿ.ವೆಂಕಟರಾಮಯ್ಯ ಸಭಾ ಭವನದಲ್ಲಿ ಈ ಸ್ಥಳೀಯ ಸಂಸ್ಕೃತಿಗಳ ಅಧ್ಯಯನ ಕೇಂದ್ರ ಭಾರತದ ರಾಜಕೀಯ ಚಿಂತಕರನ್ನು ಕುರಿತಂತೆ ಏರ್ಪಡಿಸಿದ್ದ ವಿಚಾರ ಸಂಕಿರಣಕ್ಕೆ ಆಹ್ವಾನ ಬಂದಾಗ, ನಾನು ಹೋಗಬೇಕೋ ಬೇಡವೋ ಎಂಬ ಗೊಂದಲಕ್ಕೆ ಬಿದ್ದೆ. ಘೆಂಟ್ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಏರ್ಪಾಡಾಗಿದ್ದ ಈ ಸಮ್ಮೇಳನಕ್ಕೆ ಬಾಲಗಂಗಾಧರರೂ ಬರುವವರಿದ್ದರಿಂದಾಗಿ, ಅವರನ್ನೂ ಮುಖತಃ ನೋಡಿದಂತಾಯಿತು ಮತ್ತು ಅಂತಾರಾಷ್ಟ್ರೀಯ ವಿಚಾರ ಸಂಕಿರಣಗಳು ಹೇಗಿರುತ್ತವೆ ಹಾಗೂ ಯಾವ ಮಟ್ಟದ ಚರ್ಚೆ ನಡೆಯುತ್ತವೆ ಎಂಬುದು ತಿಳಿದಂತೆಯೂ ಆಯಿತು ಎಂದು ನಾನು ಒಂದು ದಿನದ ಮಟ್ಟಿಗೆ–೧೯ರಂದು–ವಿಚಾರ ಸಂಕಿರಣಕ್ಕೆ ಹೋದೆ. ಅಂದು ಗಾಂಧಿ, ತಿಲಕ್, ಲೋಹಿಯಾ, ಗೋಲ್ವಾಲ್ಕರ್ ಮತ್ತು ಧರ್ಮಪಾಲ್‌ರ ಬಗ್ಗೆ ಒಟ್ಟು ಎಂಟು ಜನ ಉಪನ್ಯಾಸಗಳನ್ನು ನೀಡಿದರು. ಒಂದಿಷ್ಟು ಚರ್ಚೆಯೂ ನಡೆಯಿತು. ಬಾಲಗಂಗಾಧರರು ತಮಗೆ ಬಿಜೆಪಿ–ಆರ್.ಎಸ್.ಎಸ್. ಬಗ್ಗೆ ಏನೂ ಗೊತ್ತಿಲ್ಲವೆಂದು ಹೇಳುತ್ತಲೇ, ಗೋಲ್ವಾಲ್ಕರರ ವಿಚಾರಗಳ ಬಗ್ಗೆ ಪ್ರಶ್ನೆ ಎತ್ತಿದ ಇತಿಹಾಸದ ಪ್ರಾಧ್ಯಾಪಕರೊಬ್ಬರ ಮೇಲೆ, ಅವರು ಪ್ರಶ್ನೆ ಎತ್ತಿರುವ ರೀತಿ ಸರಿಯಿಲ್ಲವೆಂದು ಅವಮಾನಕರ ರೀತಿಯಲ್ಲಿ ಹರಿಹಾಯ್ದು ಅವರ ಬಾಯಿ ಮುಚ್ಚಿಸಿದ್ದೂ ನಡೆಯಿತು.

ಇದಾವುದರಲ್ಲೂ ಅಂತಾರಾಷ್ಟ್ರೀಯ ಎನ್ನುವುದು ಏನೂ ಇರಲಿಲ್ಲ. ಎಲ್ಲ ನಮ್ಮ ವಿಚಾರ ಸಂಕಿರಣಗಳಂತೆಯೇ ಸಾಮಾನ್ಯ, ಅತಿ ಸಾಮಾನ್ಯ. ಆದರೆ ಈ ವಿಚಾರ ಸಂಕಿರಣದ ಕೊನೆಯಲ್ಲಿ ಬಾಲಗಂಗಾಧರರೊಂದಿಗೆ ಆಕಸ್ಮಿಕವೆಂಬಂತೆ ನಡೆದ ನನ್ನ ಸಂಕ್ಷಿಪ್ತ ಮುಖಾಮುಖಿ ಅವರ ಈ ಇಡೀ ಚಟುವಟಿಕೆಗಳ ಮೇಲೆ ವಿಶೇಷ ಬೆಳಕು ಚೆಲ್ಲುವಂತಿತ್ತು. ಎಷ್ಟರ ಮಟ್ಟಿಗೆ ಎಂದರೆ, ಈ ಹಿಂದೆ ನನ್ನ ಕೆಲವು ಗೆಳೆಯರು ಇವರ

ಬಗ್ಗೆ ಹೇಳಿದ್ದಾಗ ಯಾವುದನ್ನು ನಾನು ನಂಬದಾಗಿದ್ದೆನೋ ಅದೇ, ಹಾಗೇ ನಡೆದು ಹೋಯಿತು.

೧೯ರಂದು ವಿಚಾರ ಸಂಕಿರಣ ಮುಕ್ತಾಯವಾದ ಮೇಲೆ ಎಲ್ಲರೂ ಸಭಾ ಭವನದ ಹೊರಕ್ಕೆ ಬಂದಾಗ, ಅಕಸ್ಮಾತ್ತಾಗಿ ಅವರು ಬಹು ಹತ್ತಿರದಲ್ಲಿ ನನಗೆ ಎದುರಾದಾಗ ನಾನು ಬಹು ಗೌರವದಿಂದಲೇ ನಮಸ್ಕರಿಸಿ ನನ್ನ ಹೆಸರು ಹೇಳಿದೆ. ಅವರೂ ವಿಶ್ವಾಸದಿಂದ ಕೈ ನೀಡಿ ಪ್ರತಿಸ್ಪಂದಿಸಿದಾಗ, ಜಾತಿ ಪದ್ಧತಿ ಕುರಿತ ಅವರ ಸಂಶೋಧನೆಗಳನ್ನು ಕುರಿತ ನನ್ನ ಸಂದೇಹಗಳನ್ನು ಅವರ ಮುಂದಿಡಬಹುದಲ್ಲವೇ ಎಂಬ ಯೋಚನೆಯೂ ಬಂತು. ಅಂದಿನ ಮಧ್ಯಾಹ್ನದ ಊಟದ ವೇಳೆಯಲ್ಲಿ ತೀರ್ಥಹಳ್ಳಿಯ ಗೆಳೆಯ ಕೆ.ಜಿ. ಶ್ರೀಧರ್ ಅವರು, ನಿಮ್ಮ ಲೇಖನಗಳ ಕೇಂದ್ರ ಪ್ರಶ್ನೆಯನ್ನು ಈಗ ಅವರನ್ನೇ ಕೇಳಿ, ಒಳ್ಳೆಯ ಚರ್ಚೆಯಾಗಬಹುದು ಎಂದು ಒತ್ತಾಯಪೂರ್ವಕವಾಗಿ ನನಗೆ ಸೂಚಿಸಿದ್ದರು. ಆದರೆ ಈ ಸೂಚನೆಯನ್ನು ಆಗ ದೊಡ್ಡ ಮನುಷ್ಯರ ವೈಯುಕ್ತಿಕ ಸಹವಾಸ ಬೇಡವೆಂದು ತಿರಸ್ಕರಿಸಿದ್ದೆನಾದರೂ, ಈಗ ಅವರ ವಿಶ್ವಾಸದ ಪ್ರತಿಸ್ಪಂದನದ ಸಂದರ್ಭದಲ್ಲಿ ಅದನ್ನು ಕೇಳಿಯೇ ಬಿಡುವ ಉಮೇದು ಉಂಟಾಯಿತು.

ಹೀಗಾಗಿ, ನಾನು ಬಾಲಗಂಗಾಧರರಿಗೆ ನನ್ನ ('ಸಂವಾದ' ಮಾಸಿಕದಲ್ಲಿ ಪ್ರಕಟವಾಗಿದ್ದ)ಲೇಖನದಲ್ಲಿದ್ದ ನನ್ನ ಮುಖ್ಯ ಪ್ರಶ್ನೆಯನ್ನು ಯಾರೋ-ಬಹುಶಃ ಕಣ್ಣನ್ ಎಂಬುವವರು-ಅಂತರ್‌ಜಾಲಕ್ಕೆ ಹಾಕಿದುದನ್ನೂ, ಅದಕ್ಕೆ ಅವರು ಪ್ರಶ್ನೆಯೇ ಅರ್ಥವಾಗಿಲ್ಲ ಎಂದು ಉತ್ತರಿಸಿದುದನ್ನೂ ಸಂಕ್ಷಿಪ್ತವಾಗಿ ನೆನಪಿಸಿದೆ. ಅದು ಕೂಡಲೇ ಅವರ ನೆನಪಿಗೂ ಬಂದು, ಸಾಕಷ್ಟು ಉತ್ಸಾಹದಿಂದಲೇ ನನ್ನನ್ನು ಒಂದು ಪಕ್ಕಕ್ಕೆ ಕರೆದು ಕುರ್ಚಿಯೊಂದನ್ನು ಎಳೆದು ಕೂತು, ಈಗ ನಿಮ್ಮ ಪ್ರಶ್ನೆಯನ್ನು ನನಗೆ ವಿವರಿಸಿ ಎಂದರು. ಸರಳ ಕನ್ನಡದಲ್ಲಿದ್ದ ಎರಡು ವಾಕ್ಯಗಳ ನನ್ನ ಪ್ರಶ್ನೆಯನ್ನು ಇಂಗ್ಲಿಷಿಗೆ ಅನುವಾದಿಸಿ ಅವರಿಗೆ ತಲುಪಿಸಲು ಅವರ ಅನುಯಾಯಿಗಳೋ, ಅಭಿಮಾನಿಗಳೋ ಪಟ್ಟಿರುವ ಕಷ್ಟದ ಬಗ್ಗೆ; ಆದರೂ ಅದು ಅವರಿಗೆ ಅರ್ಥವಾಗದಂತಿರುವುದರ ಬಗ್ಗೆ ನನ್ನ ಆಶ್ಚರ್ಯವನ್ನು ವ್ಯಕ್ತಪಡಿಸುತ್ತಾ, ನನ್ನ ಪ್ರಶ್ನೆಯನ್ನು ಮತ್ತೆ ಅವರ ಮುಂದಿಟ್ಟೆ. ಅಲ್ಲಿಂದ ಮುಂದೆ ಕನ್ನಡದಲ್ಲೇ ನಮ್ಮಿಬ್ಬರ ನಡುವೆ ನಡೆದ ಸಂಭಾಷಣೆ ಹೀಗಿದೆ:

ನಾನು: ನನ್ನ ಪ್ರಶ್ನೆ ಇಷ್ಟೆ. ನೀವು ಜಾತಿ ಇದೆ ಎನ್ನುವುದನ್ನು ಒಪ್ಪುತ್ತೀರಿ. ಜಾತಿ ತಾರತಮ್ಯವಿದೆ ಎನ್ನುವುದನ್ನೂ ಒಪ್ಪುತ್ತೀರಿ. ಆದರೆ ಈ ತಾರತಮ್ಯ ಯಾವುದರಿಂದ ಸೃಷ್ಟಿಯಾಗುತ್ತಿದೆ? ಅದಕ್ಕೊಂದು ಕಾರಣ ಮತ್ತು ಆ ಕಾರಣ ಕಾರ್ಯರೂಪಕ್ಕೆ ಬರಲು ಒಂದು mechanism ಇರಲೇ ಬೇಕಲ್ಲವೆ?

ಬಾಲ ಗಂಗಾಧರ: ಹಾಂ! ಅದನ್ನೇ ನಾವು ನಮ್ಮ ಸಂಶೋಧನೆಯ ಮೂಲಕ ಹುಡುಕುತ್ತಿರುವುದು.

ನಾ: ಈಗಾಗಲೇ ಇಲ್ಲ ಎಂದು ನೀವೇ ಹೇಳುತ್ತಿರುವುದನ್ನು ಹುಡುಕುತ್ತಿದ್ದೇವೆ ಎಂದರೆ ಏನರ್ಥ?

ಬಾ: Caste ಅನ್ನುವುದು ಒಂದು System ರೂಪದಲ್ಲಿ ಇಲ್ಲ ಎಂದು ನಾವು ಹೇಳುತ್ತಿರುವುದು.

ನಾ: ನೀವು ಭಾರತದ ಜಾತಿ ಪದ್ಧತಿ ಎಂಬುದನ್ನು Caste System ಎಂದು ಇಂಗ್ಲಿಷ್‌ಗೆ ಅನುವಾದಿಸಿಕೊಂಡು, System ಎಂಬುದಕ್ಕೆ ಇಂಗ್ಲಿಷ್ ಸಂದರ್ಭದಲ್ಲಿ ಇರುವ ಅರ್ಥವನ್ನು ಅದಕ್ಕೆ ಆರೋಪಿಸಿಕೊಂಡಿದ್ದೀರಿ. ಹಾಗಾಗಿ, ಅದೆಲ್ಲ ಜಾತಿಗೆ ಸಂಬಂಧಿಸಿದಂತೆ ಇಲ್ಲ ಎನ್ನುತ್ತಿದ್ದೀರಿ ಎಂದು ಕಾಣುತ್ತದೆ. ಅದರಿಂದ ಏನು ಪ್ರಯೋಜನ? ವಾಸ್ತವವಾಗಿ ಇಲ್ಲಿರುವುದು ಜಾತಿ ಪದ್ಧತಿ ಅಲ್ವಾ? ಅದನ್ನಾದರೂ ಒಪ್ಪಿಕೊಳ್ಳುತ್ತೀರಾ?

ಬಾ: ಓ! ಹಾಗಾದರೆ ಪದ್ಧತಿ ಎಂದರೇನು?

ನಾ: ಪದ್ಧತಿ ಅಂದರೆ, ಪದ–ಹತಿ. ಹೆಜ್ಜೆಗಳನ್ನಿಟ್ಟು ಆದ ದಾರಿ. ನನ್ನ ತಂದೆ ಆಚರಿಸಿದ್ದನ್ನು ನಾನು ಆಚರಿಸುವುದು. ಅದನ್ನು ನನ್ನ ಮಗ ಆಚರಿಸುವುದು. ಹಿಂದಿನ ತಲೆಮಾರು ಆಚರಿಸಿದ್ದನ್ನು ಮುಂದಿನ ತಲೆಮಾರು ಆಚರಿಸುವುದು.

ಬಾ: ಜಾತಿ ಪದ್ಧತಿಗೆ ಇದು ಅನ್ವಯಿಸುವುದಿಲ್ಲವಲ್ಲ? ಜಾತಿ ಪದ್ಧತಿಗೆ ಆಚರಣೆಯ ಸಾಮಾನ್ಯ ನಿಯಮಾವಳಿ ಎಂಬುದೆಲ್ಲಿದೆ ತೋರಿಸಿ.

ನಾ: ನೀವು ಯಾವ ಮಟ್ಟದ ಸಾಮಾನ್ಯ ನಿಯಮಾವಳಿ ಬಗ್ಗೆ ಮಾತಾಡುತ್ತೀದ್ದೀರೋ ತಿಳಿಯದು. System ಎಂಬ ನಿಮ್ಮ ಕಲ್ಪನೆಗನುಸಾರವಾದ ಸಾಮಾನ್ಯ ನಿಯಮಾವಳಿ ಇಲ್ಲದಿರಬಹುದು. ಆದರೆ ಜಾತಿ ಪದ್ಧತಿ, ಇತಿಹಾಸದಲ್ಲಿ ಕಾಲ–ದೇಶ–ರಾಜಕಾರಣಕ್ಕೆ ಅನುಸಾರವಾಗಿ ಹಲವು ರೂಪಗಳನ್ನು ಪಡೆದು ಒಂದೊಂದು ಭಾಗದಲ್ಲಿ ಒಂದೊಂದು ರೀತಿಯಲ್ಲಿ ಕೆಲಸ ಮಾಡುತ್ತಿದೆ. ಭಾರತದಾದ್ಯಂತ ಜಾತಿ ಪದ್ಧತಿಗೆ ಒಂದೇ ನಿಯಮಾವಳಿ ಇದೆ ಎಂದು ಯಾರೂ ಹೇಳುತ್ತಿಲ್ಲ.

ಬಾ: ಹಾಗಾದರೆ ಅದನ್ನು ಪದ್ಧತಿ ಅಂತಲಾದರೂ ಹೇಗೇ ಕರೀತೀರಿ?

ನಾ: ನಿಮ್ಮಲ್ಲಿ ಭಾರತ ಎನ್ನುವುದು ಒಂದು ಸ್ಥಿರ ಕಲ್ಪನೆ ಆದಾಗ ಇಂತಹ ಪ್ರಶ್ನೆಗಳು ಹುಟ್ಟುತ್ತವೆ. ಜಾತಿ ಅನ್ನುವುದು ಒಂದು ನಿರಂತರ ಆಚರಣೆಯಾಗಿ ಇಲ್ಲಿಯವರೆಗೆ ಮುಂದುವರೆದು ಬಂದಿದೆ ಎನ್ನುವ ಅರ್ಥದಲ್ಲಿ ಅದು ಪದ್ಧತಿ. ಅದು ಬೇರೆ ಬೇರೆ ಕಡೆ ಬೇರೆ ಬೇರೆ ರೀತಿಯಲ್ಲಿ ರೂಪಾಂತರವಾಗಿರಬಹುದು.

ಬಾ: ಹಾಗಾದರೆ, ಒಂದೇ ಪ್ರದೇಶದಲ್ಲಿ ಹಲವು ಜಾತಿಗಳು ಒಂದೇ ರೀತಿಯ ಆಚರಣೆಗಳನ್ನು ಮಾಡುತ್ತಾರಲ್ಲ? ಅದನ್ನು ಹೇಗೆ ವಿವರಿಸ್ತೀರಾ? ಉತ್ತರ ಕರ್ನಾಟಕಕ್ಕೆ ಹೋಗಿ. ಅಲ್ಲಿ ಎಲ್ಲ ಜಾತಿಯವರೂ ಗಣಪತಿ ಪೂಜೆ ಮಾಡ್ತಾರೆ! ನಿಮಗಿದು ಗೊತ್ತ?

ನಾ: ಮಾಡಬಹುದೇನೋ. ಅದರೆ ಅದಕ್ಕೂ ಜಾತಿ ಪದ್ಧತಿಯ ಆಚರಣೆಗೂ ಏನು ಸಂಬಂಧ?

ಬಾ: ಹಾಗಾದರೆ ಜಾತಿ ಎಂದರೆ ನಿಮ್ಮ ಪ್ರಕಾರ ಏನು?

ನಾ: ಹುಟ್ಟಿನಿಂದ ಕಸುಬು ಮತ್ತು ಸಾಮಾಜಿಕ ಸ್ಥಾನಮಾನಗಳ ನಿರ್ಧಾರ. ಅಂತಹ ಪದ್ಧತಿಯಿಂದ ಆದ ಸಾಮಾಜಿಕ ಅನಾಹುತಗಳು, ಸಮಾಜದ ಅಸಹಜ, ಅನ್ಯಾಯದ ವಿಭಾಗೀಕರಣ... ಕೆಲವರ ಕೈಯಲ್ಲೇ ಕೆಲವು ಅಧಿಕಾರಗಳು.... ಒಂದು

ರೀತಿಯ heiarchy....

ಬಾ: ಯಾವ hierachyರೀ? ಎಲ್ಲಿದೆ ಅದು ತೋರಿಸಿ ಮೊದಲು...

ನಾ: ಅದೆಲ್ಲ ಇಲ್ಲ ಅಂತ ನೀವು ತೀರ್ಮಾನಿಸಿಕೊಂಡು, ನೋಡೋಕ್ಕೇ ತಯಾರಿಲ್ಲದಿದ್ದರೆ ನಾವು ತೋರಿಸೋದಾದ್ರೂ ಹ್ಯಾಗೆ? ಜಾತಿಪದ್ಧತಿನೇ hierachy... ಓದು–ಬರಹ–ಅಧ್ಯಯನ ಇಂತಹವರಿಗಷ್ಟೇ ಮೀಸಲು... ಮತ್ತೊಂದು ಮತ್ತೊಬ್ಬರಿಗೆ ಮೀಸಲು..... ಬೇರೆಯವರು ಅದನ್ನು ಮಾಡುವಂತಿಲ್ಲ ಅನ್ನೋ ವಿಧಿ–ನಿಷೇಧಗಳು... ಇದರ ಪರಿಣಾಮ ಏನಾಯ್ತು? ಕೆಲವರು ಶ್ರೇಷ್ಠರು ಅನ್ನಿಸಿಕೊಂಡ್ರು... ಇನ್ನು ಕೆಲವರು ಕೀಳು ಅನ್ನಿಸಿಕೊಂಡ್ರು... ಇದರಿಂದ ಅನೇಕ ತಾರತಮ್ಯಗಳು ಶುರುವಾದ್ವು.... ಹಾಗಾಗಿ, ಇದು ನಿಮ್ಮ ಅರ್ಥದಲ್ಲಲ್ಲದಿದ್ರೂ, ಸಾಮಾನ್ಯ ಅರ್ಥದಲ್ಲಿ ಒಂದು ವ್ಯವಸ್ಥೆಯಾಗಿಯೇ ಕೆಲಸ ಮಾಡಿದೆ ಅನ್ಸುತ್ತೆ.

ಬಾ: ಸುಮ್ಮನೆ ಮಾತಾಡಬೇಡಿ.....ಇದಕ್ಕೆಲ್ಲಿದೆ ಸಾಬೀತು? ಏನು ಮಾಹಿತಿ, ಸಂಶೋಧನೆ ಇದೆ ನಿಮ್ಮತ್ರ ಈ ಬಗ್ಗೆ? ಕೇಳಿ ಇಲ್ಲಿ, ಲೆಕ್ಕ ಯಾರಿಗೆ ಬೇಕಿತ್ತು? ವೈಶ್ಯರಿಗಲ್ವ? ಅವರು ವಿದ್ಯೆ ಕಲೀದೆ ಲೆಕ್ಕ ಬಂತಾ ಅವರಿಗೆ?

ನಾ: ನೋಡಿ, ಈ ಲೆಕ್ಕ–ಪಕ್ಕಕ್ಕೆ ಸಂಬಂಧಿಸಿದ ವಿದ್ಯೆ ಬಗ್ಗೆ ಅಲ್ಲ ನಾನು ಮಾತನಾಡ್ತಿರೋದು. ಧಾರ್ಮಿಕ ಅಧ್ಯಯನ, ಧಾರ್ಮಿಕ ಕಾನೂನು, ನಿಯಮಗಳ ರಚನೆಯ ವಿಷಯ ನಾನು ಮಾತನಾಡ್ತಿರೋದು. ಅಲ್ಲೇ ತಾನೇ ಯಜಮಾನಿಕೆ, ಅಧಿಕಾರ, ಶ್ರೇಷ್ಠತೆಗಳ ಪ್ರಶ್ನೆಗಳು ಹುಟ್ಟೋದು?

ಬಾ: ಏನೂ ಅಧ್ಯಯನ ಮಾಡದೆ ಸುಮ್ಮನೆ ಮಾತನಾಡಬೇಡಿ. ಧರ್ಮಪಾಲರ 'ದಿ ಬ್ಯೂಟಿಫುಲ್ ಟ್ರೀ' ಓದಿ. ೧೮–೧೯ನೇ ಶತಮಾನದಲ್ಲಿ ಮದ್ರಾಸ್ ಪ್ರಾಂತ್ಯದಲ್ಲಿದ್ದ ಶಾಲೆಗಳಲ್ಲಿ ಎಷ್ಟು ಜನ ಬ್ರಾಹ್ಮಣರಿದ್ದರು, ಎಷ್ಟು ಜನ ಇತರ ಜಾತಿಯವರಿದ್ದರು ಅನ್ನೋದು ಅದರಲ್ಲಿ ಇದೆ. ಅದನ್ನು ಓದಿಕೊಂಡು ಮಾತಾಡಿ.

ನಾ: ನಾನೂ ಅದನ್ನು ಓದಿದ್ದೇನೆ. ಆದರೆ ನಾನು ಮಾತನಾಡ್ತಿರೋದು ಹೊಸ ಕಾಲದ ಶಾಲೆಗಳಲ್ಲಿನ General education ಬಗ್ಗೆ ಅಲ್ಲ. ಆ ತರದ education ಎಲ್ಲರಿಗೂ ಸಾಧ್ಯವಾಗಿದ್ದಕ್ಕೇ ನಾನು ಇವೊತ್ತು ನಿಮ್ಮತ್ರ ಹೀಗೆ ಮಾತಾಡೋಕೆ ಸಾಧ್ಯವಾಗಿರೋದು...

ಬಾ: ಆಯ್ತು ಸ್ವಾಮೀ, ಎಲ್ಲ ತಿಳ್ಕೊಂಡಿದ್ದೀರಲ್ಲ... ನೀವಿನ್ನು ಎದ್ದು ಹೋಗಬಹುದು ಇಲ್ಲಿಂದ.... ನಾನೇನೂ ನಿಮ್ಮನ್ನ ಕರೀಲಿಲ್ಲ ನನ್ನತ್ರ ಬಂದು ಮಾತಾಡೀ ಅಂತ... ಅಥವಾ ನನ್ನ ವಿಚಾರಗಳನ್ನ ಒಪ್ಪಿಕೊಳ್ಳೀಂತ ನಿಮ್ಮತ್ರ ಬಂದು ಬೇಡಿಕೊಳ್ಳಲಿಲ್ವಲ್ಲ... ಏಳಿ ಸ್ವಾಮಿ... ಏಳಿ ಸಾಕು...

ನಾ: ಅಲ್ಲಾ ಸ್ವಾಮೀ, ಸಮಾಜಕ್ಕೆ ಸಂಬಂಧಿಸಿದಂತೆ ನಾವು ಮಾಡಿರೋ ಹೊಸ ಸಂಶೋಧನೆ ನೋಡಿ ಅಂತ ನೀವು ಎಲ್ಲ ಕಡೆ ಪ್ರಚಾರ ಮಾಡಬಹುದು, ಕೇಂದ್ರಗಳನ್ನ ಸ್ಥಾಪಿಸಬಹುದು, ವಿಚಾರ ಸಂಕಿರಣ–ಸಮ್ಮೇಳನಗಳನ್ನ ಏರ್ಪಡಿಸಬಹುದು... ಸಾರ್ವಜನಿಕರ ಹಣ ಖರ್ಚು ಮಾಡಬಹುದು. ಆದರೆ ಸಮಾಜ ಅದಕ್ಕೆ ಪ್ರತಿಕ್ರಿಯಿಸ

ಬಾರದು, ಪ್ರಶ್ನೆ ಕೇಳಬಾರದು, ಅಲ್ವಾ?

ಬಾ: ರೀ ಪ್ರಶ್ನೆ ಕೇಳೋ ಮೊದಲು ಸಂಶೋಧನೆ ಅಂದ್ರೇನು ತಿಳ್ಕೊಳ್ರೀ... ಅದಕ್ಕೂ ಮೊದಲು ಅದಕ್ಕೊಂದು scientific way ಅಂತಾ ಇದೇಂತ ತಿಳ್ಕೋಳ್ರೀ... Science ಅಂದ್ರೆ ಏನೂಂತ ಗೊತ್ತೇನ್ರಿ ನಿಮಗೆ?

ನಾ: ಸ್ವಾಮಿ ಅದನ್ನೆಲ್ಲ ನನಗೆ ಹೇಳಬೇಡಿ. ನಾನು ವಿಜ್ಞಾನದ ವಿದ್ಯಾರ್ಥಿನೇ... I hold a Masters degree in Mathematics.

ಬಾ: ಏ ಹೋಗ್ರೀ ಬಹಳ ಜನ ನೋಡಿದ್ದೀನಿ ಈ ತರ ಮೂರು ಕಾಸಿನ ಡಿಗ್ರೀಗಳನ್ನು ತಗೊಂಡವರನ್ನ...

ನಾ: ಅಯ್ಯೋ ಹೋಗ್ರೀ ನಾನೂ ನೋಡಿದ್ದೀನೀ ನಿಮ್ಮ ಥರ ತರಕಲಾಂಡಿ ಸಂಶೋಧನೆ ಮಾಡಿರೋ ಬಹಳ ಜನರನ್ನ... ಅದೇನೋ ನಿನ್ನೆ ಅಂಬೇಡ್ಕರ್ ಬಗ್ಗೆ ಮಾತಾಡ್ತಾ, ಮೀಸಲಾತಿ ಅದಕ್ಷತೆಯನ್ನ ಸೃಷ್ಟಿಸಿದೆ ಅನ್ನೋ ನಿಮ್ಮ ಸಂಶೋಧನೆಗೆ ಆಧಾರವಾಗಿ; ಎಲ್ಲ ಒಳ್ಳೆಯ ವಿಚಾರಗಳೂ ಸಮಾಜದಲ್ಲಿ ಒಳ್ಳೆಯ ಪರಿಣಾಮಗಳನ್ನೇನೂ ಉಂಟುಮಾಡೋದಿಲ್ಲ;ಹಾಗೇ ಎಲ್ಲ ಕೆಟ್ಟ ವಿಚಾರಗಳೂ ಕೆಟ್ಟ ಪರಿಣಾಮಗಳನ್ನೇನೂ ಉಂಟು ಮಾಡೋದಿಲ್ಲ ಅನ್ನೋ ಪ್ರಮೇಯವನ್ನ ಮಂಡಿಸಿದಿರಂತಲ್ಲ... ಇಂತಹ ಇನ್ನಷ್ಟು ಅದ್ಭುತ ಸಂಶೋಧನೆಗಳನ್ನು ಮಾಡಿ ಪ್ರಚಾರ ಮಾಡಿಬಿಟ್ಟರೆ ಜಗತ್ತು ಬಹು ಬೇಗ ಉದ್ಧಾರವಾಗಿ ಬಿಡುತ್ತೆ ಬಿಡಿ...

ಬಾ: ಯಾರ್ರೀ ನಿಮ್ಮನ್ನ ಇಲ್ಲಿಗೆ ಕರೆದಿದ್ದು? ನಡೀರಿ ಇಲ್ಲಿಂದ...

ನಾ: ರೀ ಸ್ವಾಮೀ, I have come here on an Invitation from your Centre... Have some manners...

ಬಾ: ಆಯ್ತು, ಮೊದಲು ಆಚೆಗೆ ನಡೀರಿ ಇಲ್ಲಿಂದ...

ನಾ: ಏನು ಮಾತಾಡ್ತಿದ್ದೀರಿ ನೀವು? ಕುವೆಂಪು ಯೂನಿವರ್ಸಿಟಿ ಕ್ಯಾಂಪಸ್ ನಿಮ್ಮ ತಾತನ ಮನೆ ಆಸ್ತಿ ಅಲ್ಲ, ಹೀಗೆಲ್ಲ order ಮಾಡೋಕೆ.... ನಿಮ್ಮನ್ನು ನೋಡಿ ನನಗೆ ಜಾತಿ ಪದ್ಧತಿ ಅಲ್ಲ, ಜಾತಿ ವ್ಯವಸ್ಥೆ ಅನ್ನೋದೇ ಇದೆ; ಅದು ನಾವು ತಿಳಿದುಕೊಂಡಿದ್ದಕ್ಕಿಂತ dirty and dangerous ಆಗಿದೆ ಅನ್ನೋದು confirm ಆಗ್ತಾ ಇದೆ...

ಬಾ (ಹೊರಟ ನನ್ನತ್ತ ಕೈ ತೋರಿಸಿ ಕಿರುಚುತ್ತಾ): Send him out! ಹೊರಗೆ ಹಾಕ್ರೀ ಅವನನ್ನ...

ನಾ (ಎಲ್ಲರೂ ಗಾಬರಿಯಿಂದ ಸುಮ್ಮನೆ ನೋಡುತ್ತಿದ್ದಂತೆ, ಕಾರು ಹತ್ತುತ್ತಾ): ಏ ಹೋಗಯ್ಯಾ .... ಕುವೆಂಪು ಯೂನಿವರ್ಸಿಟೀನ ಪೂರ್ತಿ ಕೊಂಡುಕೊಂಡ ಮೇಲೆ ಹೀಗೆ order ಮಾಡು... ಆಗ ಯಾರಾದರೂ ನಿನ್ನ ಮಾತು ಕೇಳಬಹುದು....

* * *

ಇವರ ಸಂಶೋಧನೆಗಳ ಬಗ್ಗೆ ಸದ್ಯಕ್ಕೆ, ಇನ್ನು ಯಾವ ವ್ಯಾಖ್ಯಾನವೂ ಬೇಡವೆಂದು ಕಾಣುತ್ತದೆ!

(ಕುವೆಂಪು ವಿಶ್ವವಿದ್ಯಾಲಯದಲ್ಲಿ ಇವರ ಸಂಸ್ಕೃತಿ ಅಧ್ಯಯನ ಕೇಂದ್ರವನ್ನು ಈಗ ಮುಚ್ಚಲಾಗಿದೆ– ಲೇ.)

(೬ ಫೆಬ್ರುವರಿ, ೨೦೦೮)

ವಿ.ಪಿ.ಸಿಂಗ್: ಒಂದು ಶ್ರದ್ಧಾಂಜಲಿ

ಕೋಮುವಾದಿಗಳೊಂದಿಗೆ ಮತ್ತು ಯಥಾಸ್ಥಿತಿವಾದಿ ಗಳೊಂದಿಗೆ ರಾಜಿಗೆ ಒಪ್ಪದೆ, ಸಂಸತ್ತಿನಲ್ಲಿ ಅವಿಶ್ವಾಸ ಗೊತ್ತುವಳಿ ಎದುರಿಸಿ ರಾಜೀನಾಮೆ ನೀಡಿದರು. ಆ ಸಂದರ್ಭದಲ್ಲಿ ಸಂಸತ್ತಿನಲ್ಲಿ ನಡೆದ ಚರ್ಚೆಯಲ್ಲಿ ಅವರು ತಮ್ಮ ರಾಜಕೀಯ ವಿರೋಧಿಗಳನ್ನು ಕೇಳಿದ 'ನೀವು ಎಂತಹ ರಾಷ್ಟ್ರ ಕಟ್ಟ ಬಯಸುತ್ತೀರಿ?' ಎಂಬ ಪ್ರಶ್ನೆ ಇಂದೂ ನಮ್ಮ ರಾಜಕೀಯ ವಲಯಗಳಲ್ಲಿ, ಇನ್ನಷ್ಟು ಪ್ರಸ್ತುತತೆಯೊಂದಿಗೆ ಅನುರಣಿಸುತ್ತಿದೆ ಎಂದರೆ, ರಾಷ್ಟ್ರ ರಾಜಕಾರಣಕ್ಕೆ ವಿ.ಪಿ.ಸಿಂಗ್ ಅವರ ಕೊಡುಗೆಯ ಮಹತ್ವವೇನು ಎಂಬುದು ಅರ್ಥವಾದೀತು. ಕೇವಲ ಎರಡು ವರ್ಷ ಕೇಂದ್ರ ಮಂತ್ರಿ ಮತ್ತು ಎರಡು ವರ್ಷಗಳಿಗೂ ಕಡಿಮೆ ಅವಧಿಗೆ ಪ್ರಧಾನಮಂತ್ರಿಯಾಗಿದ್ದ ವಿ.ಪಿ.ಸಿಂಗ್, ರಾಷ್ಟ್ರ ರಾಜಕಾರಣವನ್ನು ನಿಯಂತ್ರಿಸುವ ಶಕ್ತಿಗಳ ಸಾಮಾಜಿಕ ನೆಲೆಗಳನ್ನೇ ಸಂಪೂರ್ಣವಾಗಿ ಬದಲಾಯಿಸಿಬಿಟ್ಟಿದ್ದರು! ಸ್ವಾತಂತ್ರ್ಯೋತ್ತರ ಭಾರತದ ರಾಜಕಾರಣದಲ್ಲಿನ ದೊಡ್ಡ ಕ್ರಾಂತಿಯಿದು.

ಮೊನ್ನೆ ಶಿವಮೊಗ್ಗದಲ್ಲಿ 'ವಿ.ಪಿ.ಸಿಂಗ್ ನಮನ' ಕಾರ್ಯಕ್ರಮದಲ್ಲಿ ಅತಿಥಿಯಾಗಿ ಪಾಲ್ಗೊಂಡಿದ್ದ ನನಗೆ ಈ ಕಾರ್ಯಕ್ರಮವನ್ನು ಏರ್ಪಡಿಸಿದ್ದ 'ಬಹುಮತ' ಸಂಘಟನೆಯ ಸಂಚಾಲಕರಾದ ಗೆಳೆಯ ಎಚ್. ಹಾಲಪ್ಪನವರು (*ಈಗ ದಿವಂಗತರು*) ಸ್ಮರಣಿಕೆಯಾಗಿ ವಿ.ಪಿ.ಸಿಂಗ್ ಅವರ ಭಾವಚಿತ್ರವೊಂದನ್ನು ನೀಡಿದಾಗ, ನಾನು ಸ್ವಲ್ಪ ತಬ್ಬಿಬ್ಬಾದೆ. ನನ್ನ ಮನೆಯಲ್ಲಿ ರಾಷ್ಟ್ರ ಜೀವನದ ಸಾರ್ವತ್ರಿಕ ನಾಯಕರೆನಿಸಿದ ಗಾಂಧಿ, ಲೋಹಿಯಾ, ಅಂಬೇಡ್ಕರರ ಭಾವಚಿತ್ರಗಳಿವೆ. ಅವು ಕೂಡಾ ವಿವಿಧ ಸಾರ್ವಜನಿಕ ಸಮಾರಂಭಗಳಲ್ಲಿ ಸ್ಮರಣಿಕೆಗಳಾಗಿ ನೀಡಲ್ಪಟ್ಟವೇ. ನಮ್ಮ ಮನೆಯ ಷೋ-ಕೇಸಿನಲ್ಲಿ, ಇವುಗಳ ಜೊತೆ ವಿ.ಪಿ. ಸಿಂಗ್ ಅವರ ಚಿತ್ರ ಸಮಾನ ಗೌರವದಿಂದ ನಿಲ್ಲಬಲ್ಲದೇ? ಅವರು ನಿಜವಾಗಿಯೂ ಇವರೆಲ್ಲರ ಜೊತೆ ನಮ್ಮ ಮನೆಗಳಲ್ಲಿ ನೆನೆಯಬೇಕಾದ ವ್ಯಕ್ತಿ ಎನಿಸಿದ್ದಾರೆಯೆ? ಇತ್ಯಾದಿ ಪ್ರಶ್ನೆಗಳು ನನ್ನ ಮನಸ್ಸಿನಲ್ಲಿ ಈ ಸಂದರ್ಭದಲ್ಲಿ ಹಾದು ಹೋದವು. ಚಿತ್ರವನ್ನು ಸದ್ಯಕ್ಕಾದರೂ ಮನೆಯ ಮೂಲೆಯೊಂದರಲ್ಲಿ ಬಿಸಾಡಲು ಒಪ್ಪದ ನನ್ನ ದ್ವಂದ್ವ

ಮನಃಸ್ಥಿತಿಯಲ್ಲಿ, ಈ ವಿಶ್ವನಾಥ ಪ್ರತಾಪ ಸಿಂಗರ ರಾಜಕೀಯ ಜೀವನವನ್ನೊಮ್ಮೆ ನಾನು ಸ್ವಲ್ಪ ವಿಸ್ತಾರವಾಗಿ ಮೆಲುಕು ಹಾಕುವುದು ಅನಿವಾರ್ಯವಾಯಿತು..

ವಿ.ಪಿ. ಸಿಂಗ್ ನಮ್ಮ ಕಾಲದ ದೊಡ್ಡ, ಆದರೆ ದುರದೃಷ್ಟದ ರಾಜಕಾರಣಿ. ಅವರ ರಾಜಕೀಯ ಜೀವನವೇ ಹಲವಾರು ದುರದೃಷ್ಟಕರ ತಿರುವುಗಳಿಂದ ಕೂಡಿದುದಾಗಿತ್ತು. ಅವರ ರಾಜಕೀಯ ಜೀವನ ಕೊನೆಗೊಂಡದ್ದೂ ರಾಷ್ಟ್ರಜೀವನದ ಒಂದು ದುರದೃಷ್ಟಕರ ತಿರುವುನಲ್ಲಿಯೇ. ಈ ದುರದೃಷ್ಟದ ಆಟ ಅವರನ್ನು ಸಾವಿನಲ್ಲೂ ಬೆಂಬತ್ತಿ ಬಂದಿತ್ತು. ರಾಷ್ಟ್ರ ಅವರನ್ನು ನೆನೆಯಬೇಕಾದ ರೀತಿಯಲ್ಲಿ ನೆನೆಯಲಾಗಲಿಲ್ಲ. ಮುಂಬೈ ಮೇಲಿನ ಭಯೋತ್ಪಾದಕರ ದಾಳಿ ಅವರ ಸಾವಿನ ಸುದ್ದಿಯ ಪ್ರಾಮುಖ್ಯತೆಯನ್ನು ಹಿನ್ನೆಲೆಗೆ ಸರಿಸಿತ್ತು. ಇದು ಒಂದು ರೀತಿಯಲ್ಲಿ ತಾರ್ಕಿಕ ನ್ಯಾಯವೇ ಅಗಿತ್ತೇನೋ! ತಾವು ಪ್ರಧಾನ ಮಂತ್ರಿ ಆಗಿದ್ದಾಗ ಅವರು ತಮ್ಮ ಗೃಹ ಮಂತ್ರಿ ಮುಫ್ತಿ ಮಹಮ್ಮದ್ ಸಯ್ಯೀದ್ ಅವರ ಹಿರಿಯ ಮಗಳು ರುಬೈಯಾ ಸಯ್ಯೀದ್‌ಳನ್ನು ಅಪಹರಣದಿಂದ ಪಾರು ಮಾಡಲು, ಅಪಹರಣಕಾರರ ಬೇಡಿಕೆಯನ್ನು ಮನ್ನಿಸಿ ಭಾರತದಲ್ಲಿ ಬಂಧನದಲ್ಲಿದ್ದ ಪಾಕಿಸ್ತಾನಿ ಭಯೋತ್ಪಾದಕರನ್ನು ಬಿಡುಗಡೆ ಮಾಡುವ ನಿರ್ಧಾರ ಕೈಗೊಂಡರು. ಅವರ ಈ ಅಸಹಾಯಕ ಅಥವಾ ದುರ್ಬಲ ಘಳಿಗೆಯ ನಿರ್ಧಾರವೇ ಭಾರತದಲ್ಲಿ ಮುಂದೆ ಇಸ್ಲಾಮೀ ಭಯೋತ್ಪಾದನೆ ವ್ಯಾಪಕವಾಗಿ ಬೆಳೆಯಲು ನಾಂದಿಯಾಯಿತೆಂದು ಆಪಾದಿಸಲಾಗುತ್ತಿದೆ. ಆದರೆ ಹೀಗೆ ಆಪಾದಿಸುವ ರಾಜಕೀಯ ಧೋರಣೆಯನ್ನು ಪ್ರತಿನಿಧಿಸುವ ಸರ್ಕಾರವೇ, ಮುಂದೆ ವಿಮಾನ ಅಪಹರಣದ ಸಂಬಂಧವಾಗಿ ಇನ್ನಷ್ಟು ಅಪಾಯಕಾರಿ ಇಸ್ಲಾಮಿ ಭಯೋತ್ಪಾದಕರನ್ನು ಕಾಬೂಲ್‌ವರೆಗೆ ಸುಕ್ಷೇಮವಾಗಿ ಬಿಟ್ಟು ಬರಲು ತನ್ನ ವಿದೇಶಾಂಗ ಮಂತ್ರಿಯನ್ನೇ ಕಳಿಸಬೇಕಾದ ಪರಿಸ್ಥಿತಿಗೆ ಸಿಕ್ಕಿತು ಎಂಬುದು ಬೇರೆ ಮಾತು.

ಬಹುಶಃ ವಿ.ಪಿ. ಸಿಂಗ್ ಅವರಿಗೆ ಆಗ–ಸುಮಾರು ಎರಡು ದಶಕಗಳ ಹಿಂದೆ– ಇಸ್ಲಾಮಿ ಭಯೋತ್ಪಾದನೆ ಈ ಪ್ರಮಾಣ ಮತ್ತು ತೀವ್ರತೆಯಲ್ಲಿ ಬೆಳೆಯಬಹುದೆಂಬ ಕಲ್ಪನೆ ಇದ್ದಿರಲಾರದು ಮತ್ತು ಅದನ್ನು ಸಮಚಿತ್ತದ ರಾಜತಾಂತ್ರಿಕ ನಡೆಗಳ ಮೂಲಕ ಕ್ರಮೇಣ ನಿಯಂತ್ರಿಸಬಹುದು ಎಂಬ ನಂಬಿಕೆ ಇದ್ದಿರಬಹುದು. ಆ ನಂಬಿಕೆಯನ್ನು ನಿಜಗೊಳಿಸಬಲ್ಲ ರಾಜಕೀಯ ಪ್ರಬುದ್ಧತೆಯೂ ಅವರಲ್ಲಿತ್ತು. ಅವರ ಪ್ರಧಾನ ಮಂತ್ರಿತ್ವದ ಕಾಲಕ್ಕೆ ಸಿಖ್ ಉಗ್ರಗಾಮಿಗಳ ಹಿಂಸಾಚಾರದಿಂದ ಹೊತ್ತಿ ಉರಿಯುತ್ತಿದ್ದ ಪಂಜಾಬನ್ನು ತಣಿಸಲು ಅವರು ಪ್ರಧಾನಿಯಾದ ಕೂಡಲೇ ಅಮೃತಸರದ ಸ್ವರ್ಣಮಂದಿರಕ್ಕೆ ತೆರಳಿ ಪ್ರಾರ್ಥನೆ ಸಲ್ಲಿಸಿದರು. 'ಆಪರೇಷನ್ ಬ್ಲೂಸ್ಟಾರ್' ಸೇನಾ ಕಾರ್ಯಾಚರಣೆಯ ತಪ್ಪಿಗಾಗಿ ಮುಕ್ತ ಮನಸ್ಸಿನಿಂದ ಸಿಖ್ಖರ ಕ್ಷಮೆ ಕೋರುವ ಮೂಲಕ ಆ ರಾಜ್ಯದಲ್ಲಿನ ಸುಮಾರು ಒಂದು ದಶಕದ ಪ್ರತ್ಯೇಕತಾವಾದಿ ಉಗ್ರಗಾಮಿ ಚಟುವಟಿಕೆಗಳನ್ನು ತಹಬಂದಿಗೆ ತಂದರು. ಕೂಡಲೇ ಅಲ್ಲಿ ಚುನಾವಣೆಗಳನ್ನು ಘೋಷಿಸುವ ಧೈರ್ಯ ಮಾಡಿ ಪಂಜಾಬ್ ಮತ್ತೆ ರಾಷ್ಟ್ರಜೀವನದ ಮುಖ್ಯ ಪ್ರವಾಹಕ್ಕೆ ಸೇರುವಂತೆ ಮಾಡಿದರು. ಅಷ್ಟೇ ಅಲ್ಲ, ರಾಜೀವ್

ಗಾಂಧಿ ಅವರ ಅಪ್ರಬುದ್ಧ ರಾಜಕೀಯ ನಿರ್ಧಾರದಿಂದಾಗಿ (ಅದಕ್ಕಾಗಿ ಅವರು ಮಂದೆ ತಮ್ಮ ಪ್ರಾಣವನ್ನೇ ತೆರಬೇಕಾಯಿತೆಂಬುದು ಬೇರೆ ವಿಷಯ.) ಶ್ರೀಲಂಕಾಗೆ ತೆರಳಿ ಅಲ್ಲಿನ ಯುದ್ಧರಂಗದಲ್ಲಿ ಅನಗತ್ಯವಾಗಿ ಸಿಕ್ಕಿ ಹಾಕಿಕೊಂಡಿದ್ದ ಭಾರತೀಯ ಶಾಂತಿಪಾಲನಾ ಪಡೆಯನ್ನು ಹಿಂದಕ್ಕೆ ಕರೆಸಿಕೊಳ್ಳುವ ದಿಟ್ಟ ರಾಜಕೀಯ ನಿರ್ಧಾರ ಕೈಗೊಂಡು, ವಿ.ಪಿ.ಸಿಂಗ್ ತಾವೊಬ್ಬ ಅನುಪಮ ರಾಜಕೀಯ ಮುತ್ಸದ್ದಿಯೆಂದು ಅಧಿಕಾರದ ಆರಂಭ ಕಾಲದಲ್ಲೇ ಸಾಬೀತು ಮಾಡಿದ್ದರು.

ಆದರೆ ಇಂದು ವಿ.ಪಿ.ಸಿಂಗ್ ರಾಷ್ಟ್ರ ಕಂಡ ಅಪರೂಪದ ರಾಜಕೀಯ ಮುತ್ಸದ್ದಿ ಎಂಬುದನ್ನು ರಾಷ್ಟ್ರೀಯ ಅಭಿಪ್ರಾಯ ನಿರೂಪಕರೆನಿಸಿರುವ ನಮ್ಮ ರಾಷ್ಟ್ರೀಯ ಮಾಧ್ಯಮಗಳು ನಿರಾಕರಿಸುತ್ತಿವೆ. ಅವರ ಸಾವನ್ನು ಅವು ನಿರ್ಲಕ್ಷಿಸಿದ ರೀತಿಯೇ ಅವುಗಳ ಪೂರ್ವಾಗ್ರಹಗಳನ್ನು ಸೂಚಿಸುವಂತಿವೆ. ರಾಜೀವ್ ಗಾಂಧಿ ಪ್ರಧಾನಮಂತ್ರಿತ್ವದ ಕಾಲದ ಭ್ರಷ್ಟಾಚಾರದ ಪ್ರಕರಣಗಳ ವಿರುದ್ಧ ದಿಟ್ಟ ಹೋರಾಟ ಆರಂಭಿಸಿದ ವಿ.ಪಿ.ಸಿಂಗ್ ಅವರಿಗೆ ಬೇಷರತ್ ಹಾಗೂ ವ್ಯಾಪಕ ಬೆಂಬಲ ನೀಡಿ ಅವರನ್ನು ಮಹಾತ್ಮ ಗಾಂಧಿ ವೇಷದಲ್ಲೂ ಮೆರೆಸಿ ರಾಷ್ಟ್ರ ನಾಯಕರನ್ನಾಗಿ ಈ ಮಾಧ್ಯಮಗಳು ಬಿಂಬಿಸಿದವು. ಆದರೆ ಅದೇ ಮಾಧ್ಯಮಗಳು ಅವರು ಪ್ರಧಾನ ಮಂತ್ರಿಯಾಗಿ ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಭರವಸೆ ನೀಡಿದ್ದಂತೆ, ಹಿಂದುಳಿದ ವರ್ಗಗಳಿಗೆ ಕೇಂದ್ರ ಸರ್ಕಾರದ ನೌಕರಿಗಳಲ್ಲಿ ಮೀಸಲಾತಿ ಒದಗಿಸುವ ಮಂಡಲ್ ವರದಿಯನ್ನು ಜಾರಿಗೊಳಿಸುವ ನಿರ್ಧಾರ ಕೈಗೊಂಡ ಕೂಡಲೇ ಅವರ ವಿರುದ್ಧ ತಿರುಗಿ ಬಿದ್ದು, ಅವರನ್ನು ದೊಡ್ಡ ಖಳನಾಯಕನಂತೆ ಬಿಂಬಿಸತೊಡಗಿದವು. ಅವರ ಇತರ ಸಾಧನೆಗಳೆಲ್ಲ ಮರೆತೇ ಹೋದವು...

ಹಾಗೆ ನೋಡಿದರೆ, ಮಂಡಲ್ ಆಯೋಗವೇನೂ ವಿ.ಪಿ.ಸಿಂಗ್ ರಚಿಸಿದ್ದಲ್ಲ. ೧೯೭೭ರ ಮೊರಾರ್ಜಿ ದೇಸಾಯಿ ನೇತೃತ್ವದ ಜನತಾ ಸರ್ಕಾರ ನೇಮಿಸಿದ್ದ ಆಯೋಗವದು. ವರದಿ ಸಿದ್ಧವಾಗಿ ವರ್ಷಗಳೇ ಕಳೆದಿದ್ದರೂ. ಯಾವ ಪ್ರಧಾನ ಮಂತ್ರಿಯೂ ಅದನ್ನು ಪರಿಶೀಲಿಸಿ ಜಾರಿ ಮಾಡುವ ಮನಸ್ಸು ಮಾಡಿರಲಿಲ್ಲ. ವಿ.ಪಿ.ಸಿಂಗ್ ಅದನ್ನು ತಮ್ಮ ರಾಜಕೀಯ ಮುತ್ಸದ್ದಿತನದಲ್ಲಿ ಮಾಡಿದರು. ಸರ್ಕಾರ ನಡೆಸುವ ವ್ಯವಸ್ಥೆಯಲ್ಲಿ ಕಣ್ಣಿಗೆ ರಾಚುವಂತೆ ಇದ್ದ ಸಾಮಾಜಿಕ ಅಸಮತೋಲನವನ್ನು ಸರಿ ಪಡಿಸಲು ಯತ್ನಿಸಿ, ವ್ಯವಸ್ಥೆಯ ಇನ್ನಷ್ಟು ಪ್ರಜಾಪ್ರಭುತ್ವೀಕರಣದ ಪ್ರಯತ್ನ ಮಾಡಿದರು. ಆದರೆ ಅದೇ ಅವರಿಗೆ ಮುಳುವಾಯಿತು. ಈ ಪ್ರಯತ್ನವನ್ನು ರಾಜಕೀಯ ಪಟ್ಟಭದ್ರ ಹಿತಾಸಕ್ತಿಗಳು ಮತ್ತು ಅವರ ಏಜೆಂಟರೂ ಆದ ರಾಷ್ಟ್ರೀಯ ಮಾಧ್ಯಮಗಳು–ವಿಶೇಷವಾಗಿ ಇಂಗ್ಲಿಷ್ ದಿನಪತ್ರಿಕೆಗಳು–ವಿಚ್ಛಿದ್ರಕಾರಿ ರಾಜಕಾರಣ ಎಂಬಂತೆ ಬಿಂಬಿಸಿ, ರಾಷ್ಟ್ರಾದ್ಯಂತ ಅಶಾಂತಿ ಹರಡಲು ಕಾರಣರಾದರು. ಆದರೆ ಇಂದು ಅದೇ ಮಂಡಲ್ ವರದಿಯನ್ನು, ಅದರ ಇತ್ತೀಚಿನ ವಿಸ್ತರಣೆಯನ್ನು(ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿಯೂ ಮೀಸಲಾತಿ) ಬೆಂಬಲಿಸಲು ಆಗ ಅಶಾಂತಿ ಹಬ್ಬಿಸಿದ ರಾಜಕೀಯ ಪಕ್ಷವೂ ಸೇರಿದಂತೆ ರಾಷ್ಟ್ರದ

ಪ್ರತಿಯೊಂದು ರಾಜಕೀಯ ಪಕ್ಷವೂ ಮುಗಿ ಬೀಳುತ್ತಿರುವುದನ್ನು ನೋಡಿದರೆ, ವಿ.ಪಿ.ಸಿಂಗ್ ಅವರ ದೂರದೃಷ್ಟಿಯ ರಾಜಕೀಯ ಮುತ್ಸದ್ದಿತನದ ಅರಿವಾದೀತು.

ಆದರೆ ಇಂದು ವಿ.ಪಿ.ಸಿಂಗ್ ಅವರನ್ನು, ಅವರ ಅಭಿಮಾನಿಗಳೆನಿಸಿಕೊಂಡವರು ಕೇವಲ ಮಂಡಲ್ ವರದಿ ಜಾರಿಗೊಳಿಸಿದ ನಿರ್ಧಾರ ಕೈಗೊಂಡದ್ದಕ್ಕಾಗಿ ಮಾತ್ರ ಕ್ರಾಂತಿಕಾರಿ ರಾಜಕಾರಣಿ, ಸಾಮಾಜಿಕ ನ್ಯಾಯದ ಹರಿಕಾರ ಎಂದು ಹಾಡಿ ಹೊಗಳುತ್ತಿದ್ದಾರೆ. ಇದು ವಿ.ಪಿ.ಸಿಂಗ್ ಅವರಿಗೆ ಅವರ ವಿರೋಧಿಗಳು ಮಾಡುತ್ತಿರುವ ಅನ್ಯಾಯಕ್ಕಿಂತ ದೊಡ್ಡ ಅನ್ಯಾಯ. ಇವರು ಸಾಮಾಜಿಕ ನ್ಯಾಯ ಎಂಬ ಆವೃತ ಸಾಮಾಜಿಕ-ರಾಜಕೀಯ ಕಲ್ಪನೆಯನ್ನು, ಹಿಂದುಳಿದಿವೆಯೆಂದು ಹೇಳಲಾದ ಜಾತಿಗಳಿಗೆ ಉದ್ಯೋಗ ಮೀಸಲಾತಿ ಮತ್ತು ಆ ಜಾತಿಗಳ ನಾಯಕರಿಗೆ ರಾಜಕೀಯ ಅಧಿಕಾರ ನೀಡಿಕೆ ಎಂಬ ಬಹು ಸೀಮಿತ ರಾಜಕೀಯ ಕಾರ್ಯಕ್ರಮದ ಮಟ್ಟಕ್ಕೆ ಕುಬ್ಜಗೊಳಿಸುತ್ತಿರುವ ರಾಜಕೀಯ ಸ್ವಾರ್ಥಿಗಳಾಗುತ್ತಿದ್ದಾರೆ. ಸಾಮಾಜಿಕ ನ್ಯಾಯ ಎಂದರೆ ಏನು ಮತ್ತು ಏಕೆ ಎಂಬುದನ್ನೇ ಮರೆತಿರುವ ಇವರು, ತಾವು ಯಾರ ಸ್ಥಾನಗಳನ್ನು ಆಕ್ರಮಿಸಿಕೊಳ್ಳಲು ಹೊರಟಿರುವರೋ ಅವರು ಸೃಷ್ಟಿಸಿರುವ ಭ್ರಷ್ಟ ಮತ್ತು ಅದಕ್ಷ ವ್ಯವಸ್ಥೆಯ 'ಉತ್ಪತ್ತಿ'ಯಲ್ಲಿ ಸಮಪಾಲನ್ನು ಆಗ್ರಹಿಸುತ್ತಿರುವರಷ್ಟೆ! ಸಾಮಾಜಿಕ ನ್ಯಾಯವೆಂದರೆ, ಸಮಾಜದ, ರಾಷ್ಟ್ರದ ಪುನಾರಚನೆ, ತಳ ಮಟ್ಟದ ಪ್ರಜಾಪ್ರಭುತ್ವೀಕರಣ, ಭ್ರಷ್ಟಾಚಾರ ನಿವಾರಣೆ ಮತ್ತು ಆ ಮೂಲಕ ಹೊಸ ಸಮಾಜವೊಂದರ ನಿರ್ಮಾಣ. ಇದರ ಒಂದು ಭಾಗವಾಗಿ ಮತ್ತು ಅವಿಭಾಜ್ಯ ಅಂಗವಾಗಿ ಮಾತ್ರ ಮೀಸಲಾತಿ ಮತ್ತು ರಾಜಕೀಯ ಅಧಿಕಾರದ ಅವಕಾಶಗಳನ್ನು ಕಲ್ಪಿಸಿಕೊಳ್ಳಬೇಕು. ವಿ.ಪಿ.ಸಿಂಗ್ ಸಾಮಾಜಿಕ ನ್ಯಾಯ ಕಲ್ಪನೆಯನ್ನು ತಮ್ಮದೇ ರಾಜಕೀಯ ಜೀವನದ ಉದಾಹರಣೆಯಾಗಿ ಮಂಡಿಸಿದ್ದು ಹೀಗೆ. ಅಲ್ಲದೆ, ಸ್ವತಃ ಅವರೇ, ನಮ್ಮ ದೇವರಾಜ ಅರಸರಂತೆ ಅಥವಾ ಸಾಮಾಜಿಕ ನ್ಯಾಯಕ್ಕೊಂದು ಆಳದ ತಾತ್ವಿಕತೆ ಒದಗಿಸಿದ ಲೋಹಿಯಾರಂತೆ ಹಿಂದುಳಿದ ವರ್ಗಗಳಿಗೇನೂ ಸೇರಿದವರಾಗಿರಲಿಲ್ಲ ಎಂಬುದನ್ನೂ ಇಲ್ಲಿ ನೆನಪಿನಲ್ಲಿಡಬೇಕು.

೧೯೫೦ರ ಹೊತ್ತಿಗೆ ಮಾಂಡಾ ಸಂಸ್ಥಾನದ ಉತ್ತರಾಧಿಕಾರಿಯಾದ ವಿ.ಪಿ.ಸಿಂಗ್ ತಮ್ಮ ಒಡೆತನದ ನೂರಾರು ಎಕರೆ ಜಮೀನನ್ನು ಭೂದಾನ ಚಳುವಳಿಯ ಪ್ರಭಾವದಲ್ಲಿ ಬಡಬಗ್ಗರಿಗೆ ಹಂಚಿದರು. ಅರವತ್ತರ ದಶಕದಲ್ಲಿ ರಾಜಕೀಯ ಪ್ರವೇಶ ಮಾಡಿದ ಅವರು ೧೯೮೦ರ ಹೊತ್ತಿಗೆ ಉತ್ತರ ಪ್ರದೇಶದ ಮುಖ್ಯಮಂತ್ರಿಯಾದಾಗ, ಆ ರಾಜ್ಯದ ಒಂದು ಭಾಗದಲ್ಲಿ ಅತಿಯಾಗಿದ್ದ ಢಕಾಯಿತರ ಹಾವಳಿಯನ್ನು ಒಂದು ನಿರ್ದಿಷ್ಟ ಅವಧಿಯಲ್ಲಿ ನಿವಾರಿಸುವುದಾಗಿ ಜನತೆಗೆ ಮಾತು ಕೊಟ್ಟರು. ಅದು ಸಾಧ್ಯವಾಗದೆ, ಜಿಲ್ಲಾಧಿಕಾರಿಯಾಗಿದ್ದ ಅವರ ಸೋದರನೇ ಈ ಹಾವಳಿಗೆ ಬಲಿಯಾದಾಗ ಜನತೆಗೆ ಕೊಟ್ಟ ಮಾತನ್ನು ನಡೆಸಲಾಗದ್ದಕ್ಕಾಗಿ ಅವರು ಅಧಿಕಾರ ತ್ಯಜಿಸಿದರು. ಕೆಲವು ವರ್ಷಗಳ ನಂತರ ೧೯೮೦ರಲ್ಲಿ ರಾಷ್ಟ್ರ ರಾಜಕಾರಣವನ್ನು ಪ್ರವೇಶಿಸಿದ ವಿಶ್ವನಾಥ ಪ್ರತಾಪರು ವಾಣಿಜ್ಯ ಮಂತ್ರಿಯಾಗಿ, ರಕ್ಷಣಾ ಮಂತ್ರಿಯಾಗಿ ತಮ್ಮ ಪಕ್ಷದ ಬೆಂಬಲಿಗರೇ ಆದ

ತೆರಿಗೆಗಳ್ಳ ಕೈಗಾರಿಕೋದ್ಯಮಿಗಳ ವಿರುದ್ಧ, ಶಸ್ತ್ರಾಸ್ತ್ರ ಖರೀದಿಯ ಹಲವು ಅವ್ಯವಹಾರಗಳ ವಿರುದ್ಧ ದೊಡ್ಡ ಕಾರ್ಯಾಚರಣೆಯನ್ನೇ ನಡೆಸಿ ಜನಮನ ಗೆದ್ದರು. ಇವುಗಳಲ್ಲಿ ಸ್ವತಃ ತಮ್ಮ ಗೆಳೆಯ ಹಾಗೂ ಪ್ರಧಾನಿ ರಾಜೀವ್ ಗಾಂಧಿಯವರ ಪಾತ್ರವಿತ್ತೆಂದು ಹೇಳಲಾದ ಬೋಫರ್ಸ್ ಫಿರಂಗಿ ಖರೀದಿ ಹಗರಣವೂ ಸೇರಿದ್ದ ಕಾರಣದಿಂದಾಗಿ ೧೯೮೮ರ ಹೊತ್ತಿಗೆ ಅವರು ಕೇಂದ್ರ ಸಚಿವ ಸಂಪುಟವನ್ನೂ, ಆವರೆಗೆ ತಾವಿದ್ದ ಕಾಂಗ್ರೆಸ್ ಪಕ್ಷವನ್ನೂ ಬಿಡಬೇಕಾಯಿತು.

ಆನಂತರ ವಿಶ್ವನಾಥ ಪ್ರತಾಪರು ತಮ್ಮೊಡನೆ ಕಾಂಗ್ರೆಸ್ ಬಿಟ್ಟು ಬಂದ ಸಹಮನಸ್ಕರೊಡನೆ ಸೇರಿ ಜನ ಮೋರ್ಚಾ ಎಂಬ ತಮ್ಮದೇ ರಾಜಕೀಯ ವೇದಿಕೆಯೊಂದನ್ನು ರಚಿಸಿಕೊಂಡು ಅನತಿ ಕಾಲದಲ್ಲೇ ಭ್ರಷ್ಟಾಚಾರ ವಿರೋಧಿ ಆಂದೋಲನದ ವಿಶ್ವಾಸಾರ್ಹ ನಾಯಕರಾಗಿ ಬೆಳೆದರು. ೧೯೮೯ರ ಮಹಾ ಚುನಾವಣೆಗಳನ್ನು ಎದುರಿಸಲು ಅವರು ಭಾರತದ ಒಕ್ಕೂಟ ಸ್ವರೂಪಕ್ಕೆ ತಕ್ಕನಾದ 'ರಾಷ್ಟ್ರೀಯ ರಂಗ' ಎಂಬ ಬಿಜೆಪಿ ಮತ್ತು ಕಮ್ಯುನಿಸ್ಟ್ ಪಕ್ಷಗಳೂ ಸೇರಿದಂತೆ ರಾಷ್ಟ್ರದ ಎಲ್ಲ ಕಾಂಗ್ರೆಸ್ಸೇತರ ಪಕ್ಷಗಳ–ವಿಶೇಷವಾಗಿ ಡಿ.ಎಂ.ಕೆ., ತೆಲುಗು ದೇಶಂ, ಅಸ್ಸಾಂ ಗಣ ಪರಿಷತ್ ಮುಂತಾದ ಪ್ರಾದೇಶಿಕ ಪಕ್ಷಗಳ–ರಾಜಕೀಯ ಒಕ್ಕೂಟವನ್ನು ರಚಿಸಿದರು. ಅದರ ಪರಿಣಾಮವಾಗಿ ಪ್ರಧಾನ ಮಂತ್ರಿಯಾಗಿ, ಸ್ವತಂತ್ರ ಭಾರತದಲ್ಲಿ ಮೊದಲ ಬಾರಿಗೆ–ಪ್ರಧಾನಿ ಮಂತ್ರಿ ಸ್ಥಾನಕ್ಕೆ ಇನ್ನೋರ್ವ ಅಭ್ಯರ್ಥಿಯಾಗಿದ್ದ ಚಂದ್ರಶೇಖರರ ಕಡು ಮುನಿಸಿನ ನಡುವೆಯೂ–ಬಹು ವ್ಯಾಪಕವಾದ ರಾಷ್ಟ್ರೀಯ ಸಹಮತದ ರಾಜಕೀಯ ವಾತಾವರಣವೊಂದನ್ನು ನಿರ್ಮಿಸಿದರು.

ಪ್ರಾದೇಶಿಕ ಒಕ್ಕೂಟದ ಈ ಹೊಸ ರಾಜಕೀಯ ಬೆಳವಣಿಗೆಯನ್ನು ಸಹಿಸದ ಕೋಮುವಾದಿಗಳು ಸಾಂಸ್ಕೃತಿಕ ರಾಷ್ಟ್ರೀಯತೆಯ ಹೆಸರಿನಲ್ಲಿ ಶ್ರೀರಾಮ ಜನ್ಮಭೂಮಿ ಆಂದೋಲನ ಆರಂಭಿಸಿ ವಿ.ಪಿ.ಸಿಂಗರನ್ನು ನಿಯಂತ್ರಿಸಲು ಯತ್ನಿಸಿದರು. ಅದು ಸಾಧ್ಯವಾಗದೆ, ಕೊನೆಗೆ ಮಂಡಲ್ ವರದಿಯ ಶಿಫಾರ್ಸುಗಳ ವಿಷಯದಲ್ಲಿ ರಾಷ್ಟ್ರಾದ್ಯಂತ ದೊಡ್ಡ ಗೊಂದಲವೆಬ್ಬಿಸಿದಾಗ ಅವರು ಕೋಮುವಾದಿಗಳೊಂದಿಗೆ ಮತ್ತು ಯಥಾಸ್ಥಿತಿವಾದಿಗಳೊಂದಿಗೆ ರಾಜಿಗೆ ಒಪ್ಪದೆ, ಸಂಸತ್ತಿನಲ್ಲಿ ಅವಿಶ್ವಾಸ ಗೊತ್ತುವಳಿ ಎದುರಿಸಿ ರಾಜೀನಾಮೆ ನೀಡಿದರು. ಆ ಸಂದರ್ಭದಲ್ಲಿ ಸಂಸತ್ತಿನಲ್ಲಿ ನಡೆದ ಚರ್ಚೆಯಲ್ಲಿ ಅವರು ತಮ್ಮ ರಾಜಕೀಯ ವಿರೋಧಿಗಳನ್ನು ಕೇಳಿದ 'ನೀವು ಎಂತಹ ರಾಷ್ಟ್ರ ಕಟ್ಟ ಬಯಸುತ್ತೀರಿ?' ಎಂಬ ಪ್ರಶ್ನೆ ಇಂದೂ ನಮ್ಮ ರಾಜಕೀಯ ವಲಯಗಳಲ್ಲಿ, ಇನ್ನಷ್ಟು ಪ್ರಸ್ತುತತೆಯೊಂದಿಗೆ ಅನುರಣಿಸುತ್ತಿದೆ ಎಂದರೆ, ರಾಷ್ಟ್ರ ರಾಜಕಾರಣಕ್ಕೆ ವಿ.ಪಿ.ಸಿಂಗ್ ಅವರ ಕೊಡುಗೆಯ ಮಹತ್ವವೇನು ಎಂಬುದು ಅರ್ಥವಾದೀತು. ಕೇವಲ ಎರಡು ವರ್ಷ ಕೇಂದ್ರ ಮಂತ್ರಿ ಮತ್ತು ಎರಡು ವರ್ಷಗಳಿಗೂ ಕಡಿಮೆ ಅವಧಿಗೆ ಪ್ರಧಾನಮಂತ್ರಿಯಾಗಿದ್ದ ವಿ.ಪಿ.ಸಿಂಗ್, ರಾಷ್ಟ್ರ ರಾಜಕಾರಣವನ್ನು ನಿಯಂತ್ರಿಸುವ ಶಕ್ತಿಗಳ ಸಾಮಾಜಿಕ ನೆಲೆಗಳನ್ನೇ ಸಂಪೂರ್ಣವಾಗಿ ಬದಲಾಯಿಸಿಬಿಟ್ಟಿದ್ದರು! ಸ್ವಾತಂತ್ರ್ಯೋತ್ತರ

ಭಾರತದ ರಾಜಕಾರಣದಲ್ಲಿನ ದೊಡ್ಡ ಕ್ರಾಂತಿಯಿದು.

ವಿ.ಪಿ.ಸಿಂಗ್, ಮಂಡಲ್ ವರದಿಯನ್ನು ಸಾಕಷ್ಟು ಸಿದ್ಧತೆಯಿಲ್ಲದೆ ತಮ್ಮ ರಾಜಕೀಯ ಉಳಿವಿಗಾಗಷ್ಟೇ ಮಂಡಿಸಿದರು ಎಂದು ಟೀಕಿಸುವವರಿಗೆ ಗೊತ್ತಿಲ್ಲದ ವಿಷಯವೆಂದರೆ, ಅವರು ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಿದ್ದಾಗಲೇ ಮಂಡಲ್ ವರದಿಯನ್ನು ರಾಜ್ಯ ಮಟ್ಟದಲ್ಲಿ ಯಶಸ್ವಿಯಾಗಿ ಜಾರಿಗೆ ತಂದಿದ್ದರೆಂಬುದು. ಇಂತಹ ರಾಜಕಾರಣದ ಮುಂದುವರೆದ ಭಾಗವಾಗಿಯೇ ಅವರು ಮುಂದೆ ಅಪ್ಪಟ ಹಳ್ಳಿಗನೆಂದು ತಾವು ನಂಬಿದ್ದ ದೇವೇಗೌಡರನ್ನು ಪ್ರಧಾನಿ ಮಾಡಲು ಶ್ರಮಿಸಿದರು. ಆನಂತರ ತತ್ವಹೀನ ಮತ್ತು ಸಮಯಸಾಧಕ ರಾಜಕಾರಣದಿಂದ ಬೇಸತ್ತು ಸಂಸದೀಯ ರಾಜಕಾರಣ ತೊರೆದ ಮೇಲೂ, ಅವರು ಬಿಜೆಪಿ ಮತ್ತು ಕಾಂಗ್ರೆಸ್ ನೇತೃತ್ವದ ಸರ್ಕಾರಗಳ ಜನ ವಿರೋಧಿ ಆರ್ಥಿಕ ನೀತಿ ಮತ್ತು ಕಾರ್ಯಕ್ರಮಗಳ ವಿರುದ್ಧ, ಈ ಮಧ್ಯೆ ತಮ್ಮ ದೇಹಕ್ಕೆ ತಗುಲಿದ್ದ ಕ್ಯಾನ್ಸರ್ ವಿರುದ್ಧ ಹೋರಾಡಿದಷ್ಟೇ ತೀವ್ರವಾಗಿ ಹೋರಾಡಿದರು. ತಮ್ಮ ಬದುಕಿನ ಕೊನೆಯ ವರ್ಷಗಳಲ್ಲಿ ಹಾಸಿಗೆ ಹಿಡಿಯುವವರೆಗೆ, ಬಡ ಜನರನ್ನು ಅವರು ವಾಸಿಸುತ್ತಿದ್ದ ಕೊಳಚೆ ಪ್ರದೇಶಗಳಿಂದ ಮತ್ತು ರೈತರನ್ನು ಅವರ ಹೊಲಗದ್ದೆಗಳಿಂದ ಒಕ್ಕಲೆಬ್ಬಿಸುವ ಯೋಜನೆಗಳ ವಿರುದ್ಧ ಸಹಮನಸ್ಕರೊಂದಿಗೆ ಸೇರಿ ಪ್ರತಿಭಟಿಸಿದರು, ಬಂಧನಕ್ಕೂ ಒಳಗಾದರು. ಬಿಡುವಿನ ವೇಳೆಯಲ್ಲಿ ಪುಸ್ತಕಗಳನ್ನು ಓದಿದರು, ಕವಿತೆ ಬರೆದರು, ಚಿತ್ರ ಬಿಡಿಸಿದರು, ಪ್ರಾಣಿಗಳನ್ನು ಸಲುಹಿದರು. ಅವರು ಕೇವಲ ರಾಜಕಾರಣಿಯಂತೆ ಅಲ್ಲ, ಓರ್ವ ಸಂಪೂರ್ಣ ವ್ಯಕ್ತಿಯಾಗಿ ಬಾಳಿದರು.

ಇಷ್ಟು ವ್ಯಾಪಕವಾದದ್ದು, ಆವೃತವಾದದ್ದು, ತತ್ವಬದ್ಧವಾದದ್ದು, ಪ್ರಾಮಾಣಿಕವಾದದ್ದು, ನಿಸ್ವಾರ್ಥಮಯವಾದದ್ದು ವಿ.ಪಿ.ಸಿಂಗ್ ಅವರ ಸಾಮಾಜಿಕ ನ್ಯಾಯದ ರಾಜಕಾರಣ. ಇವರ ಆದರ್ಶದ ಹೆಸರು ಹೇಳಿಕೊಂಡು ಸಾಮಾಜಿಕ ನ್ಯಾಯದ ಕೂಗು ಹಾಕುವವರು ಇಂತಹ ರಾಜಕಾರಣದ ಶೇಕಡಾ ಒಂದರಷ್ಟನ್ನಾದರೂ ಅನುಸರಿಸಿದರೆ, ಅವರ ರಾಜಕಾರಣಕ್ಕೆ ಮತ್ತು ಸಾಮಾಜಿಕ ನ್ಯಾಯ ಕಲ್ಪನೆಗೆ ಒಂದು ಘನತೆ ಒದಗೀತು. ಇಂದು ಸಾಮಾಜಿಕ ನ್ಯಾಯದ ಮಾತುಗಳನ್ನಾಡಿಕೊಂಡು ರಾಜಕಾರಣ ಮಾಡುತ್ತಿರುವ ಬಹುಪಾಲು ಎಲ್ಲರೂ–ಉತ್ತರದ ಇಬ್ಬರು ಯಾದವರು, ದಕ್ಷಿಣದ ಕರುಣಾನಿಧಿ, ನಮ್ಮ ದೇವೇಗೌಡರು, ಬಂಗಾರಪ್ಪ ಇತ್ಯಾದಿ–ಅದನ್ನು ನಿರ್ಲಜ್ಜವಾಗಿ ಕೌಟುಂಬಿಕ ನ್ಯಾಯ ರಾಜಕಾರಣದ ಮಟ್ಟಕ್ಕೆ ಇಳಿಸಿಬಿಟ್ಟಿದ್ದಾರೆ. ಇನ್ನು 'ಅಹಿಂದ'ದ ಸ್ವಯಂಘೋಷಿತ ನಾಯಕ ಸಿದ್ಧರಾಮಯ್ಯನವರಿಗೆ ಸಾಮಾಜಿಕ ನ್ಯಾಯವೆಂದರೆ ದೇವೇಗೌಡರ ರಾಜಕೀಯ ನಾಶ ಮತ್ತು ತಮಗೆ ಮುಖ್ಯಮಂತ್ರಿ ಪಟ್ಟ ಎಂದೇ ಭಾವಿಸಿದಂತಿದೆ! ಇವೆರಡರ ಹೊರತಾಗಿ ಸದ್ಯಕ್ಕೆ ಇನ್ನಾವ ಉದ್ದೇಶಗಳೂ ಇರದಂತೆ ತೋರುವ ಇವರ ರಾಜಕಾರಣ, ಸಹಜವಾಗಿಯೇ ಯಾವುದೇ ಜಾಗತಿಕ, ರಾಷ್ಟ್ರೀಯ, ಪ್ರಾದೇಶಿಕ ರಾಜಕೀಯ ಅಥವಾ ಸಾಮಾಜಿಕ ಅಥವಾ ಆರ್ಥಿಕ ವಿದ್ಯಮಾನಗಳಿಗೆ ಸ್ಪಂದಿಸಲಾರದು. ಹೋರಾಟದ ಮಾತಂತೂ ದೂರವೇ ಉಳಿಯಿತು. ಅಷ್ಟೇ ಅಲ್ಲ, ತಾನೊಂದು ರಾಜಕೀಯ ಪಕ್ಷದ

ಋಣದಲ್ಲಿದ್ದೇನೆ ಎಂಬ ಪ್ರಾಥಮಿಕ ವಿನಯ-ಸೌಜನ್ಯಗಳನ್ನೂ ಹತ್ತಿರಕ್ಕೆ ಬಿಟ್ಟುಕೊಳ್ಳಲಾರದು. ಹೀಗಾಗಿ ರಾಜಕಾರಣ ಬೇಸರವಾದಾಗ ಬದುಕು ನಡೆಸಲು ಬೇರಾವ ಹವ್ಯಾಸಗಳನ್ನೂ ಇವರು ಬೆಳೆಸಿಕೊಳ್ಳಲಾರರು. ಅಧಿಕಾರದ ಹಪಾಹಪಿಯಲ್ಲಿ ಇಂತಹ ರಾಜಕೀಯ ಜಡತ್ವಕ್ಕೆ ಈಡಾಗಬಲ್ಲ ವ್ಯಕ್ತಿ ಮುಖ್ಯಮಂತ್ರಿಯಾಗಿ ಸಾಧಿಸುವುದು ಅಷ್ಟರಲ್ಲೇ ಇದೆಯೆಂದು ಜನರು ಭಾವಿಸಲಾರಂಭಿಸಿದರೆ, ಅದು ಜನರ ತಪ್ಪಾಗಲಾರದು. ಇದನ್ನು ಸಿದ್ಧರಾಮಯ್ಯ ಆದಷ್ಟು ಬೇಗ ಅರಿತರೆ, ಅವರಿಗೆ ಮತ್ತು ರಾಜ್ಯ ರಾಜಕಾರಣಕ್ಕೆ ಒಳ್ಳೆಯಾದೀತು ಹಾಗೂ ವಿ.ಪಿ.ಸಿಂಗ್ ಅವರು ಮಾಡಿದ ಕ್ರಾಂತಿಗೂ ಒಂದು ಅರ್ಥ ಬಂದೀತು.

ಇಷ್ಟೆಲ್ಲ ಯೋಚಿಸಿದ ನಾನು ಕೊನೆಗೆ, ವಿ.ಪಿ.ಸಿಂಗ್ ಅವರ ಭಾವಚಿತ್ರವನ್ನು ನನ್ನ ಗ್ರಂಥ ಭಂಡಾರದ ಕೋಣೆಯಲ್ಲಿರಿಸಲು ನಿರ್ಧರಿಸಿದೆ. ಅದಿನ್ನೂ ಮನೆಯ ಹಜಾರಕ್ಕೆ ಬರಲು ಕಾಲವಿದೆ ಎಂದೆನ್ನಿಸಿದ್ದರಿಂದ!

(೨೩ ಜನವರಿ, ೨೦೦೯)

■

ಆತ್ಮಹತ್ಯೆಯಲ್ಲ, ಆತ್ಮಾವಲೋಕನದ ಕಾಲವಿದು

ಕೃಷಿ ಸಮಾಜವನ್ನು ಇದ್ದಕ್ಕಿದ್ದಂತೆ ಕೈಗಾರಿಕಾ ಸಮಾಜವನ್ನಾಗಿ ಪರಿವರ್ತಿಸುವ ವಿಶೇಷ ಆರ್ಥಿಕ ವಲಯ, ರೈತರ ಭಾಗವಹಿಸುವಿಕೆಯೇ ಇಲ್ಲದ ಜೈವಿಕ ಕೃಷಿ ತಂತ್ರಜ್ಞಾನ ಚಟುವಟಿಕೆಗಳ ವಿಸ್ತರಣೆ, ಬೃಹತ್ ಬೆಂಗಳೂರಿನಂತಹ ರೈತ ಸಂಸ್ಕೃತಿಯ ಬುಡವನ್ನೇ ಅಲ್ಲಾಡಿಸುವಂತಹ ಅತಿ ನಗರೀಕರಣದ ಯೋಜನೆಗಳನ್ನು ಹೊಸ ಬದುಕಿನ ನಾಂದಿ ಕಾರ್ಯಕ್ರಮ ಗಳಂತೆ ಯುದ್ಧೋಪಾದಿಯಲ್ಲಿ ಆರಂಭಿಸಲಾಗಿದೆ. ಈ ಹೊಸ ಬದುಕಿನಲ್ಲಿ ರೈತಮಗನ ಸ್ಥಾನವೇನು ಎಂಬುದು ಗೊತ್ತಾಗದ ರೀತಿಯಲ್ಲಿ ಅವನ್ನು ಜಾರಿಗೊಳಿಸುತ್ತಿರುವ ಸಂದರ್ಭದ ಒತ್ತಡವೂ ಆತನಲ್ಲಿ ತನ್ನ ಅಸ್ತಿತ್ವದ ಆಧ್ಯಾತ್ಮಿಕತೆಯನ್ನು ಸ್ಪರ್ಶಿಸಿದ್ದರೆ ಆಶ್ಚರ್ಯವಿಲ್ಲ. ರೈತನನ್ನು ಹಳೆಯ ಊಳಿಗಮಾನ್ಯ ವ್ಯವಸ್ಥೆಯ ಪ್ರತಿನಿಧಿಯನ್ನಾಗಿ ಮಾತ್ರ ನೋಡುವ ಆಧುನಿಕ ಮನಸ್ಸಿಗೆ ಈ ಸಂಕಟದ ಸಂಕೀರ್ಣತೆ ಅರ್ಥವಾಗದು.

ರೈತರ ಆತ್ಮಹತ್ಯೆ ತಡೆಯಲು ರಾಜ್ಯ ಸರ್ಕಾರ ಅಧ್ಯಯನ ಸಮಿತಿಯೊಂದನ್ನು ರಚಿಸಿದೆ. ಅದು, ಹೋದ ವಾರ ಮುಖ್ಯಮಂತ್ರಿಗಳು ಕರೆದಿದ್ದ ರೈತರೊಡನೆಯ ಸಂವಾದ ಕಾರ್ಯಕ್ರಮದಲ್ಲಿ ವ್ಯಕ್ತವಾದ ಸಲಹೆ–ಸೂಚನೆಗಳ ಆಧಾರದ ಮೇಲೆ ಪರಿಹಾರ ಸಾಧ್ಯತೆಗಳನ್ನು ಪರಿಶೀಲಿಸುವುದಂತೆ. ಆದರೆ, ಈ ಕಾರ್ಯಕ್ರಮದಲ್ಲಿ ವ್ಯಕ್ತವಾದ ಸಲಹೆ–ಸೂಚನೆಗಳು ಎಷ್ಟರ ಮಟ್ಟಿಗೆ ಹೊಸವು ಮತ್ತು ಈವರೆಗೆ ಪರಿಶೀಲನೆಗೆ ಒಳಗಾಗಿಲ್ಲದಂತಹವೇ ಎಂಬ ಪ್ರಶ್ನೆ ಇದ್ದೇ ಇದೆ. ಈ ದೃಷ್ಟಿಯಿಂದ ನೋಡಿದಾಗ ಮತ್ತು ಸಂವಾದ ಕಾರ್ಯಕ್ರಮದ ಕೊನೆಯಲ್ಲಿ ಮುಖ್ಯಮಂತ್ರಿಗಳು ಆಡಿದ ಮಾತುಗಳು ವಿದಾಯ ಭಾಷಣದ ಶೈಲಿಯಲ್ಲಿದ್ದುದನ್ನು ಗಮನಿಸಿದಾಗ, ಇಡೀ ಕಾರ್ಯಕ್ರಮ ಯಾವುದೋ ತತ್ಕಾಲೀನ ರಾಜಕೀಯ ಬಿಕ್ಕಟ್ಟಿನಿಂದ ಬಚಾವಾಗುವ ಪ್ರಯತ್ನ ವೆಂಬಂತೆಯೂ ಕೆಲವರಿಗೆ ಕಂಡಿದ್ದರೆ ಆಶ್ಚರ್ಯವಿಲ್ಲ.

ರಾಷ್ಟ್ರದಲ್ಲಿ ಈವರೆಗೆ ಒಂದೂವರೆ ಲಕ್ಷಕ್ಕೂ ಹೆಚ್ಚು ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ರಾಜ್ಯದಲ್ಲಿ ಆರೇಳು ವರ್ಷಗಳಲ್ಲಿ ಆತ್ಮಹತ್ಯೆ ಮಾಡಿಕೊಂಡವರ

ಸಂಖ್ಯೆ ಮುವ್ವತ್ತು ಸಾವಿರವನ್ನು ಮೀರಿದೆ. ವಿಪರ್ಯಾಸವೆಂದರೆ, ಈವರೆಗೆ ಕೇಂದ್ರ ಹಾಗೂ ವಿವಿಧ ರಾಜ್ಯ ಸರ್ಕಾರಗಳು ಈ ಸಂಬಂಧ ಕೈಗೊಂಡ ಅಧ್ಯಯನಗಳು ಮಾಡಿದ ಶಿಫಾರ್ಸುಗಳ ಆಧಾರದ ಮೇಲೆ ಸಾಲ ಮನ್ನಾ, ಸುಲಭ ಬಡ್ಡಿ ದರದ ಸಾಲ ಸೌಲಭ್ಯ, ಬೀಜ ಪೂರೈಕೆ ಹಾಗೂ ಸಂಗ್ರಹ ಸಾಮರ್ಥ್ಯದ ಸುಧಾರಣೆ, ಕನಿಷ್ಠ ಮತ್ತು ಬೆಂಬಲ ಬೆಲೆ ಘೋಷಣೆ ಮುಂತಾದ ಪರಿಹಾರ ಕ್ರಮಗಳನ್ನು ಪ್ರಕಟಿಸುತ್ತಾ ಹೋದಂತೆ, ರೈತರ ಆತ್ಮಹತ್ಯೆ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವುದನ್ನೂ ಗಮನಿಸಬೇಕಿದೆ. ನಮ್ಮ ಮುಖ್ಯಮಂತ್ರಿಗಳ ಸಂವಾದ ಕಾರ್ಯಕ್ರಮ ನಡೆಯುತ್ತಿದ್ದ ಸಮಯದಲ್ಲೇ ಮತ್ತು ಆನಂತರವೂ ರಾಜ್ಯದ ಹಲವಾರು ಕಡೆಯಿಂದ ಆತ್ಮಹತ್ಯೆ ಪ್ರಕರಣಗಳು ವರದಿಯಾಗಿವೆ. ಇದೆಲ್ಲ ಏನನ್ನು ಸೂಚಿಸುತ್ತದೆ?

ರೈತರ ಸಮಸ್ಯೆ ಸಾಲ, ಬೀಜ ಪೂರೈಕೆ, ಬೆಳೆ ಬೆಲೆ ಮುಂತಾದ ಕಸುಬು ಸಂಬಂಧಿ ಸಮಸ್ಯೆಯಾಗಿ ಮಾತ್ರ ಉಳಿದಿಲ್ಲ. ಸಂವಾದದಲ್ಲಿ ಪಾಲ್ಗೊಂಡಿದ್ದ ರೈತ ಮುಖಂಡರೊಬ್ಬರು ಸೂಕ್ಷ್ಮವಾಗಿ ಹೇಳಿದಂತೆ, ರೈತರ ಆತ್ಮಬಲ ಕುಸಿದು ಹೋಗಿರುವುದೇ ಆತ್ಮಹತ್ಯೆಗೆ ಮೂಲ ಕಾರಣವಾಗಿದೆ. ಆದರೆ, ಈ ಸೂಚನೆ ನೀಡಿದ ಮುಖಂಡರು ಅದನ್ನು ವಿಸ್ತರಿಸಿ ವಿಶ್ಲೇಷಿಸಲು ಹೋಗಲಿಲ್ಲ. ನಮ್ಮ ರೈತ ಚಳುವಳಿಯಿಂದ ನಮ್ಮ ರೈತ ಮುಖಂಡರಿಗೆ ಬಳುವಳಿಯಾಗಿ ಬಂದ ದೌರ್ಬಲ್ಯವಿದು. ರೈತ ಚಳುವಳಿಯನ್ನು ಸ್ಥೂಲವಾಗಿ ಬೆಳೆ ಬೆಲೆ ಕೇಂದ್ರಿತವಾದ ಕಾರ್ಯಕ್ರಮವಾಗಿ ರೂಪಿಸಿದ ಅದರ ನಾಯಕರು, ರೈತನ ಸಮಸ್ಯೆ ಹೇಗೆ ಒಟ್ಟಾರೆ ವ್ಯವಸ್ಥೆಯ ಸಮಸ್ಯೆಯೇ ಆಗಿದೆ ಎಂಬುದನ್ನರಿತು ವಿವರಿಸಿ ಚಳುವಳಿಯನ್ನು ಕಟ್ಟುವ ವ್ಯವಧಾನವನ್ನು ತೋರಲಿಲ್ಲ. ಬದಲಿಗೆ, ಅದನ್ನು ಸರ್ಕಾರ ವಿರೋಧಿ ಕಾರ್ಯಕ್ರಮವನ್ನಾಗಿ ಬೆಳಸುವ ವೀರಾವೇಶದಲ್ಲೇ ತಮ್ಮೆಲ್ಲ ಶಕ್ತಿಯನ್ನು ವ್ಯಯಿಸಿಕೊಂಡರು. ಈ ಚಳುವಳಿ ಶಿಖರ ಸ್ಥಿತಿಯಲ್ಲಿದ್ದಾಗ, ಚಳುವಳಿಯ ಮುಖ್ಯ ನಾಯಕರೊಬ್ಬರು, ರೈತರೇಕೆ ಐ.ಎ.ಎಸ್. ಅಧಿಕಾರಿಗಳ ಜೀವನ ಶೈಲಿಗಾಗಿ ಆಸೆಪಡಬಾರದೆಂದು ಕೇಳಿ ನನ್ನನ್ನು ದಂಗುಬಡಿಸಿದ್ದರು! ತಮ್ಮ ದುಃಸ್ಥಿತಿಗೆ ಕಾರಣವಾದ ವ್ಯವಸ್ಥೆಯ ಬಗೆಗೇ ಸಿಟ್ಟಿಲ್ಲದ ಇವರು, ರೈತರ ಸಮಸ್ಯೆ ಬಗೆಗೆ ಮಾತ್ರ ಸಿಟ್ಟಾಗತೊಡಗಿದ್ದುದು ರೈತ ಚಳುವಳಿಯ ಮೂಲ ದೌರ್ಬಲ್ಯವಾಗಿತ್ತು.

ಹಾಗಾಗಿಯೇ ಇಂದು ಕೂಡಾ ರೈತ ಮುಖಂಡರೆನಿಸಿಕೊಂಡವರು, ಈ ಆತ್ಮಹತ್ಯೆಗಳು ಏಕೆ ಕಳೆದ ಹತ್ತು ವರ್ಷಗಳಿಂದೀಚೆಗೆ, ಅದೂ ನೀರಾವರಿ ಇರುವ ಪ್ರದೇಶಗಳಲ್ಲೇ ಹೆಚ್ಚು ಸಂಭವಿಸುತ್ತಿವೆ ಎಂಬ ಬಗ್ಗೆ ಆಲೋಚನೆಯನ್ನೇ ಮಾಡಿದಂತಿಲ್ಲ. ಅಂದಾಕ್ಷಣ ಹತ್ತು ವರ್ಷಗಳ ಹಿಂದೆ ಹಾಗೂ ನೀರಾವರಿ ಇಲ್ಲದ ಪ್ರದೇಶಗಳ ರೈತರು ಸುಖದಿಂದಿದ್ದರು ಅಥವಾ ಇದ್ದಾರೆ ಎಂದು ಇದರರ್ಥವಲ್ಲ. ಆದರೆ ಈ ಹಿಂದೆ ಕ್ಷಾಮ-ಢಾಮರಗಳ ಭಯಂಕರ ಬವಣೆಗಳನ್ನು ಎದುರಿಸಿದ ನಮ್ಮ ರೈತರು, ಆತ್ಮಹತ್ಯೆ ಅನಿವಾರ್ಯವಾಗುವಂತಹ ಮಹಾ ಸಂಕಟಕ್ಕೆ ಇತ್ತೀಚಿನ ವರ್ಷಗಳಲ್ಲಿ ಮಾತ್ರ ಮತ್ತು ಹೆಚ್ಚಾಗಿ ನೀರಾವರಿ ಬೆಳೆ ಪ್ರದೇಶದಲ್ಲೇ ಏಕೆ ತುತ್ತಾಗುತ್ತಿದ್ದಾರೆ ಎಂಬುದು ಚಿಂತನಾರ್ಹವಾಗಿದೆ

ಎಂದಷ್ಟೇ ಹೇಳುತ್ತಿರುವೆ. ಹಸಿರು ಕ್ರಾಂತಿ ಪರಿಚಯಿಸಿದ ಕೃಷಿ ವ್ಯವಸ್ಥೆ ತನ್ನ ಶಿಖರ ಸ್ಥಿತಿ ಮುಟ್ಟಿ ಸ್ಥಗಿತಗೊಂಡಿರುವುದೇ ಇದಕ್ಕೆ ಮುಖ್ಯ ಕಾರಣವೆನಿಸುತ್ತದೆ. ಅದು ಸೃಷ್ಟಿಸಿದ ಆಧುನಿಕ ನೀರಾವರಿ ಮೂಲ ಸೌಲಭ್ಯಗಳು, ಕೃಷಿ ಪದ್ಧತಿಗಳು, ಹಣಕಾಸು ವ್ಯವಸ್ಥೆ ಹಾಗೂ ಅವುಗಳನ್ನಾಧರಿಸಿದ ರೈತರ ಜೀವನ ದರ್ಶನ ಮತ್ತು ಶೈಲಿ ಇಂದು ಸಂಪೂರ್ಣ ಬಿಕ್ಕಟ್ಟಿನಲ್ಲಿವೆ. ನೀರಿನ ಮೂಲಗಳು ಬತ್ತಿಹೋಗಿ, ಬೃಹತ್ ಜಲಾಶಯಗಳಲ್ಲಿ ಹೂಳು ತುಂಬಿ, ಕಾಲುವೆಗಳು ಶಿಥಿಲಗೊಂಡು, ಭೂಮಿ ವಿಷಯುಕ್ತವಾಗಿ ಬಂಜರುಗೊಂಡು, ಬೆಳೆ ಮತ್ತು ಬೆಲೆಗಳೆರೆಡೂ ಏರುಪೇರಾಗಿ, ಬಂಡವಾಳ ಹೂಡಿಕೆಯ ಚಕ್ರ ಸ್ಥಗಿತಗೊಂಡಿದೆ. ಇದರ ಪರಿಣಾಮವಾಗಿ ಸಾಲ ಮೈಮೇಲೆ ಬಿದ್ದು ಕಂಗಾಲಾಗಿರುವ ಅವನಿಗೆ ಹೊಸ ಆರ್ಥಿಕ ನೀತಿಗಳಿಂದಾಗಿ ಬದಲಾದ ಸಾರ್ವಜನಿಕ ಬದುಕಿನ ದರ್ಶನ ಹಾಗೂ ಶೈಲಿಗಳ ಮಧ್ಯೆ ಹೊರದಾರಿಗಳೇ ಇಲ್ಲದೆ ಉಸಿರುಗಟ್ಟಿದಂತಾಗಿದೆ. ಇದನ್ನರಿತೇ ವಿದರ್ಭದಲ್ಲಿ ಪ್ರಯೋಗಾತ್ಮಕವಾಗಿ ಆರಂಭಿಸಿದ ಮಾನಸಿಕ ಪುನರುಜ್ಜೀವನ ಚಿಕಿತ್ಸಾ ಕಾರ್ಯಕ್ರಮಗಳು ಅಷ್ಟಾಗಿ ಫಲ ನೀಡದೆ, ಆತ್ಮಹತ್ಯೆಗಳು ಮುಂದುವರೆದಿವೆ. ಇಂತಹ ಪರಿಸ್ಥಿತಿಯಲ್ಲಿ ನಮ್ಮ ಮುಖ್ಯಮಂತ್ರಿಯೋ, ರೈತ ಮುಖಂಡರೋ ಕೈಮುಗಿದು 'ದಯವಿಟ್ಟು ಆತ್ಮಹತ್ಯೆ ಮಾಡಿಕೊಳ್ಳಬೇಡಿ' ಎಂದು ಬೇಡಿಕೊಂಡರೆ ಆತ್ಮಹತ್ಯೆ ನಿಂತಾವೆಯೇ?

ಅಲ್ಲದೆ, ಕೃಷಿ ಸಮಾಜವನ್ನು ಇದ್ದಕ್ಕಿದ್ದಂತೆ ಕೈಗಾರಿಕಾ ಸಮಾಜವನ್ನಾಗಿ ಪರಿವರ್ತಿಸುವ ವಿಶೇಷ ಆರ್ಥಿಕ ವಲಯ, ರೈತರ ಭಾಗವಹಿಸುವಿಕೆಯೇ ಇಲ್ಲದ ಜೈವಿಕ ಕೃಷಿ ತಂತ್ರಜ್ಞಾನ ಚಟುವಟಿಕೆಗಳ ವಿಸ್ತರಣೆ, ಬೃಹತ್ ಬೆಂಗಳೂರಿನಂತಹ ರೈತ ಸಂಸ್ಕೃತಿಯ ಬುಡವನ್ನೇ ಅಲ್ಲಾಡಿಸುವಂತಹ ಅತಿ ನಗರೀಕರಣದ ಯೋಜನೆಗಳನ್ನು ಹೊಸ ಬದುಕಿನ ನಾಂದಿ ಕಾರ್ಯಕ್ರಮಗಳಂತೆ ಯುದ್ಧೋಪಾದಿಯಲ್ಲಿ ಆರಂಭಿಸಲಾಗಿದೆ. ಈ ಹೊಸ ಬದುಕಿನಲ್ಲಿ ರೈತಮಗನ ಸ್ಥಾನವೇನು ಎಂಬುದು ಗೊತ್ತಾಗದ ರೀತಿಯಲ್ಲಿ ಅವನ್ನು ಜಾರಿಗೊಳಿಸುತ್ತಿರುವ ಸಂದರ್ಭದ ಒತ್ತಡವೂ ಆತನಲ್ಲಿ ತನ್ನ ಅಸ್ತಿತ್ವದ ಆಧ್ಯಾತ್ಮಿಕತೆಯನ್ನು ಸ್ಪರ್ಶಿಸಿದ್ದರೆ ಆಶ್ಚರ್ಯವಿಲ್ಲ. ರೈತನನ್ನು ಹಳೆಯ ಊಳಿಗಮಾನ್ಯ ವ್ಯವಸ್ಥೆಯ ಪ್ರತಿನಿಧಿಯನ್ನಾಗಿ ಮಾತ್ರ ನೋಡುವ ಆಧುನಿಕ ಮನಸ್ಸಿಗೆ ಈ ಸಂಕಟದ ಸಂಕೀರ್ಣತೆ ಅರ್ಥವಾಗದು. ಹಾಗೇ, ಚಳುವಳಿಯ ಯಶಸ್ಸಿನ ಮೇಲೆ ಮಾತ್ರ ಕಣ್ಣಿಟ್ಟು ರೈತನ ಬದುಕನ್ನು ಆರ್ಥಿಕ ಪ್ರಶ್ನೆಯ ನೆಲೆಗೇ ಇಳಿಸಿ ನೋಡುವಂತಹ ಚಳುವಳಿಕೋರ ರೈತ ನಾಯಕರ ಸಮೀಪ ದೃಷ್ಟಿಗೂ ಇದು ಸಿಗದು. ಲೆಕ್ಕ ಇಟ್ಟವನು ರೈತನಾಗಲಾರ ಎಂಬ ರೈತ ನಾಯಕ ಕಡಿದಾಳು ಶಾಮಣ್ಣ ಅವರ ಮಾತು ಇಂದಿನ ಸಂದರ್ಭದಲ್ಲಿ ಸ್ವಲ್ಪ ಭಾವುಕ ಮಾತೆನ್ನಿಸಿದರೂ, ರೈತ ಬರಿ ಬೆಳೆ ಉತ್ಪಾದಕನಲ್ಲ; ಅವನೊಂದು ಜೀವನ ಕ್ರಮದ ಪ್ರತೀಕ ಎಂಬರ್ಥದಲ್ಲಿ ಅವರ ಮಾತನ್ನು ಅರ್ಥ ಮಾಡಿಕೊಂಡರೆ, ರೈತರ ಆತ್ಮಹತ್ಯೆ ಕುರಿತ ನಮ್ಮ ನೋಟಕ್ರಮ ಮೂಲಭೂತವಾಗಿ ಬದಲಾಗಬಲ್ಲದು. ರೈತರ ಆತ್ಮಹತ್ಯೆ ವಿದ್ಯಮಾನವನ್ನು ಒಟ್ಟಾರೆ, ಜಾಗತೀಕರಣದ ಒತ್ತಡಗಳು ನಿರ್ಮಿಸುತ್ತಿರುವ

ಒಂದು ದೊಡ್ಡ ಸಾಮಾಜಿಕ-ಸಾಂಸ್ಕೃತಿಕ ಬಿಕ್ಕಟ್ಟನ್ನಾಗಿ ಪರಿಗ್ರಹಿಸಿದಾಗ ಮಾತ್ರ ಅದರ ಪರಿಹಾರಗಳೂ ಹೊಳೆದಾವು ಎನ್ನಿಸುತ್ತದೆ. ಹೀಗಾಗಿ ಇಂದಿನ ಮುಖ್ಯ ಪ್ರಶ್ನೆ, ಇಂದು ನಾವು ಕಾಣುತ್ತಿರುವ ದುಡಿಮೆ, ಈ ದುಡಿಮೆಯ ಗುರಿ, ದುಡಿಮೆಯ ಆನಂದ ಹಾಗೂ ಅವುಗಳಿಂದ ಹೊಮ್ಮುವ ಬದುಕಿನ ಸಾರ್ಥಕತೆಯ ಅರ್ಥ ಪಲ್ಲಟಗಳನ್ನು ನಾವು ಎಷ್ಟರ ಮಟ್ಟಿಗೆ ಒಪ್ಪಿಕೊಳ್ಳಬಹುದು ಎಂಬುದೇ ಆಗಿದೆ. ಈ ಪ್ರಶ್ನೆಗೆ ಸಿಗುವ ಉತ್ತರವನ್ನು ಆಧರಿಸಿಯೇ ಈ ಪರಿಹಾರಗಳ ಸ್ವರೂಪವನ್ನು ನಿರ್ಧರಿಸಬೇಕಾಗುತ್ತದೆ. ರೋಗ ಚಿಹ್ನೆಯನ್ನೇ ರೋಗವೆಂದು ಬಗೆವ ತಪ್ಪಾಗಬಾರದು.

ಸಾಲ ಮನ್ನಾ, ಸಾಲ ಸೌಲಭ್ಯ, ಬೀಜ ಸೌಲಭ್ಯ, ಸಕಾಲದಲ್ಲಿ ವಿದ್ಯುತ್ ಸರಬರಾಜು, ನ್ಯಾಯೋಚಿತ ಬೆಂಬಲ ಬೆಲೆ ಇತ್ಯಾದಿ ಪರಿಹಾರ ಕ್ರಮಗಳು ರೈತರನ್ನು ಮುಟ್ಟುವ ವೇಳೆಗೆ; ಅಧಿಕಾರಶಾಹಿಯ ಆಲಸ್ಯ, ಆಡಳಿತಾತ್ಮಕ ಕೊಕ್ಕೆಗಳು ಮತ್ತು ಭ್ರಷ್ಟತೆಯಿಂದಾಗಿ ಅವು ತಮ್ಮ ಗುರಿ ಕಳೆದುಕೊಂಡಿರುತ್ತವೆ. ಇದರಿಂದಾಗಿ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸುವ ಸಾಧ್ಯತೆಗಳು ರೈತ ಪ್ರತಿನಿಧಿಗಳ ಮಾತುಗಳ ಮೂಲಕ ಮಾತ್ರವಲ್ಲ, ಸ್ವತಃ ಮುಖ್ಯಮಂತ್ರಿಗಳ ಮಾತುಗಳ ಮೂಲಕವೇ ಅಂದಿನ ಸಂವಾದ ಸಭೆಯ ಸಂದರ್ಭದಲ್ಲಿ ದುರಂತಮಯವಾಗಿ ಮೂಡಿಬಂತು. ಮುಖ್ಯಮಂತ್ರಿಯೊಬ್ಬರು, ತಮ್ಮ ಸದುದ್ದೇಶದ ಯೋಜನೆಗಳೆಲ್ಲವೂ ಅಧಿಕಾರಶಾಹಿಯ ಮಧ್ಯಪ್ರವೇಶದಿಂದಾಗಿ ಹಾಳಾಗುವ ಸಾಧ್ಯತೆಗಳನ್ನು ಬಹಿರಂಗವಾಗಿ ಹೇಳಿಕೊಳ್ಳುವ ಸ್ಥಿತಿ ಇಂದು ಉಂಟಾಗಿದೆ. ಶಾಸಕಾಂಗ ತನ್ನ ಪರಮ ಭ್ರಷ್ಟತೆ, ಅದಕ್ಷತೆ ಹಾಗೂ ಕರ್ತವ್ಯ ವಿಮುಖತೆಗಳ ಮೂಲಕ ವಿಶ್ವಾಸಾರ್ಹತೆ ಕಳೆದುಕೊಂಡಿದೆ. ಈ ಎಲ್ಲ ವಿಷಯಗಳಲ್ಲಿ ಅದು ಕಾರ್ಯಾಂಗದೊಂದಿಗೆ ಶಾಮೀಲಾಗಿರುವುದೇ, ಕಾರ್ಯಾಂಗವು ಶಾಸಕಾಂಗವನ್ನು ಹೀಗೆ ಯಾಮಾರಿಸುತ್ತಿರುವುದಕ್ಕೆ ಕಾರಣವಾಗಿದೆ. ಅಧಿಕಾರಿಗಳಿಗೆ ಕಟ್ಟುನಿಟ್ಟಾದ ನಿರ್ದೇಶನ ನೀಡಲು ಅಗತ್ಯವಾದಂತಹ ಒಂದು ರಾಜಕೀಯ ತಾತ್ವಿಕತೆಯ ಬೆನ್ನೆಲುಬಾಗಲೀ, ದೀರ್ಘ ರಾಜಕೀಯ ಅನುಭವ ತಂದುಕೊಡುವ ಆಡಳಿತಾತ್ಮಕ ತಿಳುವಳಿಕೆಯಾಗಲೀ, ಕೈ-ಬಾಯಿ ಶುದ್ಧವಾಗಿಟ್ಟುಕೊಂಡ ನೈತಿಕ ಸ್ಥೈರ್ಯವಾಗಲೀ ಸದ್ಯದ ರಾಜಕೀಯ ನಾಯಕತ್ವಕ್ಕೆ ಇಲ್ಲದೇ ಹೋಗಿರುವುದೇ ಶಾಸಕಾಂಗದ ಈ ವೈಫಲ್ಯಕ್ಕೆ ಕಾರಣವಾಗಿದೆ.

ಜಾಗತೀಕರಣ ಒತ್ತಾಯಿಸುವ ಅಭಿವೃದ್ಧಿ ಮಾದರಿ ಹಾಗೂ ಆದ್ಯತೆಗಳು ಸಮಾಜದ ಆಯಕಟ್ಟಿನ ಸ್ಥಾನಗಳಲ್ಲಿರುವ ಜನರ ಪಾಲಿಗೆ, ದುಡಿಮೆ ಇಲ್ಲದೆಯೇ ಸುಲಭ ಹಾಗೂ ಲೆಕ್ಕಕ್ಕೆ ಸಿಗದ ಅಪಾರ ಹಣ ಗಳಿಸುವ ಭ್ರಷ್ಟಾಚಾರದ ದಿಡ್ಡಿ ಬಾಗಿಲುಗಳನ್ನು ತೆರೆದಿಟ್ಟಿರುವ ಈ ಸಂದರ್ಭದಲ್ಲಿ, ಕೋಟ್ಯಾಂತರ ರೂಪಾಯಿಗಳ ವೆಚ್ಚದ ರೆಸಾರ್ಟ್ ರಾಜಕಾರಣದ ಮೂಲಕ ನಾಯಕತ್ವ ವಹಿಸಿಕೊಂಡು ಮತ್ತು ಅದರ ಬಲದ ಮೇಲೇ ನಾಯಕರಾಗಿ ಮುಂದುವರಿಯಬೇಕಾಗಿರುವುದರಿಂದಾಗಿ ಬಂದೊದಗಿರುವ ಅಸಹಾಯಕತೆ-ಅವಮಾನವಿದು! ಇದು ರಾಜ್ಯದ ಜನತೆ ಅನುಭವಿಸಬೇಕಾಗಿರುವ ಅಸಹಾಯಕತೆ-ಅವಮಾನವೂ ಆಗಿದೆ. ಇಂತಹ ಇಕ್ಕಟ್ಟಿನಲ್ಲಿರುವ ನಾಯಕತ್ವದಿಂದ, ರೈತರ ಆತ್ಮಹತ್ಯೆಗೆ

ಕಾರಣವಾಗಿರುವ ವ್ಯವಸ್ಥೆಯ ಬದಲಾವಣೆಯನ್ನು ನಿರೀಕ್ಷಿಸುವುದು ಕಷ್ಟವೇ ಸರಿ. ಏಕೆಂದರೆ, ತಾವೂ ಭಾಗಿಯಾಗಿರುವ ಸಮಕಾಲೀನ ರಾಜಕಾರಣದ ಚಾರಿತ್ರ್ಯಹೀನತೆಯೇ ಈ ಎಲ್ಲ ದುರಂತಗಳಿಗೆ ಕಾರಣ ಎಂಬ ಮೂಲಭೂತ ಅರಿವೇ ಇಲ್ಲದವರು ಎಷ್ಟೇ ಜನಪರತೆಯ ಕಣ್ಣೀರು ಹರಿಸಿದರೂ ರೈತರ ಆತ್ಮಹತ್ಯೆ ಪ್ರತಿನಿಧಿಸುವ ಜನತೆಯ ಕಣ್ಣೀರು ನಿಲ್ಲಲಾರದು.

(ಜೂನ್ ೨೯, ೨೦೦೭)

■

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಒಂದು ನೆನಪು

> ನಿಜ ಅವರ ನೇತೃತ್ವದಲ್ಲಿ ರಾಜ್ಯ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಕಂಡರಿಯದಂತಹ ಲೋಕಶಕ್ತಿಯ ಪ್ರದರ್ಶನ, ಸರ್ಕಾರಕ್ಕೆ ಸವಾಲು, ಪ್ರತಿಭಟನೆ, ಪ್ರತಿ–ಕಾರ್ಯಕ್ರಮಗಳನ್ನು ಕಂಡಿತು. ಕರ್ನಾಟಕದಲ್ಲಿ ಸಮಾಜವಾದಿ ಕ್ರಾಂತಿಯಗುವ ಕಾಲ ದೂರವಿಲ್ಲ ಎನ್ನಿಸಿಯೂ ಬಿಟ್ಟಿತ್ತು. ಹಾಗಾಗಿಯೇ ನಾವು ಕೆಲವು ಗೆಳೆಯರು ದಲಿತ ಚಳುವಳಿ ಮತ್ತು ರೈತ ಚಳುವಳಿಯ ನಾಯಕರನ್ನು ಒಟ್ಟುಗೂಡಿಸಿ ಒಂದು ಐಕ್ಯ ರಾಜಕೀಯ ಶಕ್ತಿಯ ಉದಯದ ಪ್ರಯತ್ನ ಮಾಡಿದೆವು. ಆದರೆ ಎಂಡಿಎನ್ ಆ ಹೊತ್ತಿಗೆ ಯಾರನ್ನೂ ನಂಬದ ಆಕ್ರಾಂತ ಸ್ಥಿತಿ ತಲುಪಿದ್ದರು. ಅವರು ವಿಶ್ವ ರೈತನಾಯಕರಾಗುವ ಹವಣಿಕೆಯಲ್ಲಿದ್ದರು. ಇದರ ಅಂತಿಮ ಪರಿಣಾಮವಾಗಿಯೇ ರೈತ ಸಂಘ ಒಡೆಯಿತು. ಅವರ ಅನುಯಾಯಿಗಳನೇಕರು ಭ್ರಮನಿರಸನ ಹೊಂದಿದ್ದರು ಅಥವಾ ದೂರ ಸರಿದಿದ್ದರು. ನಂಜುಂಡ ಸ್ವಾಮಿ ಒಂಟಿಯಾಗಿದ್ದರು.

ನಂಜುಂಡಸ್ವಾಮಿಯವರನ್ನು ನಾನು ಮೊದಲು ಭೇಟಿಯಾದದ್ದು ೧೯೭೭ರಲ್ಲಿ, ಲಂಕೇಶರ ಮನೆಯಲ್ಲಿ. ಆಗ ನಾನು ದೆಹಲಿಯಲ್ಲಿ ಕೆಲಸ ಮಾಡುತ್ತಿದ್ದು, ತುರ್ತು ಪರಿಸ್ಥಿತಿ ಸಮಯದಲ್ಲಿ ಮೈಸೂರಿನಿಂದ ರಾಜಶೇಖರ ಕೋಟಿಯವರು ಹೊರತರುತ್ತಿದ್ದ 'ಆಂದೋಲನ' ವಾರಪತ್ರಿಕೆಗೆ ಲೇಖನ–ಪತ್ರಗಳನ್ನು ಬರೆಯುತ್ತಿದ್ದೆ. ಅವುಗಳಲ್ಲಿ ಗಾಂಧಿ ಕುರಿತ ಒಂದು ಪತ್ರ ಲಂಕೇಶರಿಗೆ ಇಷ್ಟವಾಗಿ ಅವರು ನನ್ನನ್ನು ಕಾಣಲು ಬಯಸಿದ್ದಾರೆಂದು ಗೆಳೆಯರೊಬ್ಬರು(ಬಹುಶಃ ನೆಲಮನೆ ದೇವೇಗೌಡರು) ತಿಳಿಸಿದ್ದರಿಂದಾಗಿ ನಾನು ಲಂಕೇಶರ ಮನೆಗೆ ಹೋಗಿದ್ದೆ. ಅಲ್ಲಿ ಲಂಕೇಶ್ ಇಬ್ಬರು ವ್ಯಕ್ತಿಗಳ ಜೊತೆ ಕೂತು ಮಾತನಾಡುತ್ತಿದ್ದರು. ಅವರಲ್ಲಿ ಒಬ್ಬರನ್ನು ಲಂಕೇಶ್ ಎಂ.ಡಿ. ನಂಜುಂಡಸ್ವಾಮಿ ಎಂದು ಪರಿಚಯಿಸಿದಾಗ (ಇನ್ನೊಬ್ಬರು ಖ್ಯಾತ ಪೆರಿಯಾರ್‌ವಾದಿ ಪ್ರೊ. ಧರ್ಮಲಿಂಗಂ) ನಾನು ದಂಗಾಗಿ ಹೋದೆ. ನಾನು ದಂಗಾಗಲು ಇದ್ದ ಕಾರಣ ಕೇಳಿ ಲಂಕೇಶರು ತಮ್ಮ ಕಿಕ್ಕೀಕೀ ಶೈಲಿಯಲ್ಲಿ ಬಿದ್ದು ಬಿದ್ದು ನಗಲಾರಂಭಿಸಿದರು.

ಆ ನನ್ನ ಕಾರಣ ಹೀಗಿತ್ತು: ಹಿಂದಿನ ವಾರ ತಾನೇ ನಂಜುಂಡಸ್ವಾಮಿಯವರು

'ಆಂದೋಲನ'ದಲ್ಲಿ ಖಾದಿ ವಸ್ತ್ರ ಧಾರಣೆಯನ್ನು ರಾಷ್ಟ್ರಾದ್ಯಂತ ಕಡ್ಡಾಯ ಮಾಡಬೇಕೆಂದು ಲೇಖನ ಬರೆದಿದ್ದರು. ಇಲ್ಲಿ ನೋಡಿದರೆ ಅವರನ್ನು ಕುರಿತ ನನ್ನ ಕಲ್ಪನೆಯೇ ತಲೆಕೆಳಗಾಗುವಂತೆ ತ್ರೀ ಪೀಸ್ ಸೂಟ್‌ಧಾರಿಯಾಗಿ ಬೋ ಟೈ ಕಟ್ಟಿ ಠಾಕೂಠೀಕಾಗಿ ಕೂತಿದ್ದಾರೆ! ಲಂಕೇಶರ ಅಸ್ಖಲಿತ ನಗುವಿನಿಂದ ಅಪ್ರತಿಭರಾದ ನಂಜುಂಡಸ್ವಾಮಿಯವರು ಅದು ಸರ್ಕಾರಕ್ಕೆ ನನ್ನ ಸಲಹೆ. ಅದನ್ನು ಸರ್ಕಾರ ಮಾನ್ಯ ಮಾಡಿದ ಮರುದಿನವೇ 'ನಾನು ಸಂಪೂರ್ಣ ಖಾದಿಧಾರಿಯಾಗುವೆ. ಸಂದೇಹ ಬೇಡ' ಎಂದು ನನಗೆ ತಮ್ಮ ನಿಲುವನ್ನು ವಿವರಿಸಿದರು. ಅದು ಅವರ-ನನ್ನ ಮೊದಲ ಭೇಟಿಯಾದುದರಿಂದ ಆ ಮಾತು ಅಲ್ಲಿಗೇ ನಿಂತಿತು. ಆದರೆ ಮುಂದೆ ಹಲವು ಏರಿಳಿತಗಳನ್ನು ಕಂಡ ನನ್ನ ಮತ್ತು ನಂಜುಂಡಸ್ವಾಮಿಯವರ ಸ್ನೇಹ ಅಲ್ಲಿ ಆಗ ಸ್ಥಾಪಿತವಾಯಿತು.

ಎಂಡಿಎನ್ ಯುವಜನರನ್ನು ಸೆಳೆಯುವುದರಲ್ಲಿ ನಿಸ್ಸೀಮರಾಗಿದ್ದರು. ಅವರು ಆಗಲೇ ಕರ್ನಾಟಕದ ಯುವಜನರ ಪಾಲಿಗೆ ಸೂಜಿಗಲ್ಲಾಗಿದ್ದರು. ಮೈಸೂರಿನ ಪ್ರತಿಷ್ಠಿತ ವಕೀಲರೂ, ಜಮೀನ್ದಾರರೂ ಮತ್ತು ಮೈಸೂರು ಸಂಸ್ಥಾನದ ಪ್ರಜಾ ಪ್ರತಿನಿಧಿ ಸಭೆಯ ಸದಸ್ಯರೂ ಆಗಿದ್ದ ಮಹಂತದೇವರು ಅವರ ಮಗನಾಗಿದ್ದ ಎಂ..ಡಿ. ನಂಜುಂಡಸ್ವಾಮಿ, ಅರವತ್ತರ ದಶಕದ ಆರಂಭದ ವರ್ಷಗಳಲ್ಲಿ ಜರ್ಮನಿಯಲ್ಲಿ ಉನ್ನತ ಕಾನೂನು ಶಿಕ್ಷಣವನ್ನು ಪೂರ್ತಿಯೋ ಅರ್ಧವೋ ಮುಗಿಸಿ ಅಲ್ಲಿನ ಸಮಾಜವಾದಿ ಚಳುವಳಿಯಿಂದ ಪ್ರಭಾವಿತರಾಗಿ ಮೈಸೂರಿಗೆ ಬಂದು ಯುವ ಸಮಾಜವಾದಿಗಳ ಮಧ್ಯೆ ತಮ್ಮ ಕಾನೂನು ತಿಳುವಳಿಕೆ ಮತ್ತು ಕ್ರಿಯಾಶೀಲತೆಗಳ ಮೂಲಕ ಎಲ್ಲರ ಗಮನ ಸೆಳೆದಿದ್ದರು. ಲಂಕೇಶ್, ತೇಜಸ್ವಿ, ಚಂಪಾ, ಮಹಾದೇವ, ಶ್ರೀಕೃಷ್ಣ ಆಲನಹಳ್ಳಿ, ಬೆಸಗರಹಳ್ಳಿ ರಾಮಣ್ಣ, ಕಾಳೇಗೌಡ ನಾಗವಾರ ಇತ್ಯಾದಿ ಆ ಕಾಲದ ಘಟಾನುಘಟಿ ಲೇಖಕರಲ್ಲದೆ, ಪ. ಮಲ್ಲೇಶ್, ಕೆ. ರಾಮದಾಸ್, ಬಿ.ಎನ್. ಶ್ರೀರಾಂ ಮುಂತಾದ ಚಳುವಳಿಕಾರರೂ ಅವರ ಗರಡಿ ಸೇರಿದ್ದರು. ಅವರು ಅಧಿಕೃತ ಸಮಾಜವಾದಿ ಪಕ್ಷದ ಹಿರಿಯರ ಜಡತೆಯ ವಿರುದ್ಧ ಸಮಾಜವಾದಿ ಯುವಜನ ಸಭಾ ಮೂಲಕ ಬಂಡಾಯ ಸಾರಿದ್ದರು. ಸಮಾಜವಾದಿಗಳಿಗೆ ಸಿದ್ಧಾಂತವೇ ನಾಯಕ; ಯಾವುದೇ ವ್ಯಕ್ತಿಯಲ್ಲ ಎಂದು ಸಾರಿ ಗೋಪಾಲಗೌಡರನ್ನೂ ರೇಗಿಸಿದ್ದರು. ಅವರು ತೇಜಸ್ವಿಯವರೊಡಗೂಡಿ ಸಿದ್ಧಪಡಿಸಿದ್ದ 'ಲೋಹಿಯಾ ಕೆಂಪು ಪುಸ್ತಕ' ಯುವಜನರಲ್ಲಿ ಹೊಸ ವಿಚಾರ ತರಂಗಗಳನ್ನೇ ಎಬ್ಬಿಸಿತ್ತು.

ತಮ್ಮ ಈ ಪಟಾಲಂ ಕಟ್ಟಿಕೊಂಡು ನಂಜುಂಡಸ್ವಾಮಿಯವರು ಮೈಸೂರಿನಲ್ಲಿ ಬ್ರಿಟಿಷ್ ಆಳ್ವಿಕೆಯ ಪಳೆಯುಳಿಕೆಗಳಂತಿದ್ದ ಬ್ರಿಟಿಷ್ ಅಧಿಕಾರಿಗಳ ಪ್ರತಿಮೆಗಳನ್ನು ಉರುಳಿಸುವುದು, ಪ್ರತಿಷ್ಠಿತ ಹೋಟೆಲುಗಳಿಗೆ ಹೋಗಿ ಬೇಕಾದ್ದನ್ನು ತಿಂದು ಸಾಮಾನ್ಯ ಹೋಟೆಲಿನ ಬೆಲೆಯಷ್ಟನ್ನೇ ನೀಡುವ ಹಠ ಮಾಡಿ ಅವುಗಳ ಪ್ರತಿಷ್ಠೆಯನ್ನು ಧಿಕ್ಕರಿಸುವುದು ಬೆಂಗಳೂರಿನಲ್ಲಿ ಮೊದಲ ವೀರಶೈವ ಸಮ್ಮೇಳನ ನಡೆದಾಗ ಅದರ ವಿರುದ್ಧ ಪ್ರತಿಭಟನೆ ನಡೆಸುವುದು(ಈ ಪಟಾಲಂನಲ್ಲಿ ಜಿಎಸ್ಸೆಸ್, ಚಿದಾನಂದಮೂರ್ತಿ ಮುಂತಾದವರೂ

ಸೇರಿದ್ದರು.) ಪ್ರಧಾನಿ ಇಂದಿರಾ ಗಾಂಧಿ ಬೆಂಗಳೂರಿಗೆ ಬಂದಾಗ ಅವರ ಭದ್ರತೆಯನ್ನೂ ಭೇಧಿಸಿ ಅವರ ಆಡಳಿತ ನೀತಿ ವಿರುದ್ಧ ಯುವಜನರಿಂದ ಘೋಷಣೆ ಕೂಗಿಸುವುದು, ಘಟಿಕೋತ್ಸವದಲ್ಲಿ ಪಾಶ್ಚಿಮಾತ್ಯ ದಿರಿಸುಗಳ ವಿರುದ್ಧ ಪ್ರತಿಭಟಿಸುವುದು, ಕ್ಷಾಮ ಪರಿಹಾರ ಕಾರ್ಯಕ್ರಮಗಳು ಸರಿಯಾಗಿ ನಡೆಯುತ್ತಿಲ್ಲವೆಂದು ವಿಧಾನಸಭೆಯಲ್ಲಿ ಕರಪತ್ರ ತೂರುವುದು, ಕ್ಷಾಮ ಪರಿಹಾರ ನಿಧಿ ಕೂಡಿಸಲು ಬೆಂಗಳೂರಿನ ಕೆಂಪೇಗೌಡ ರಸ್ತೆಯಲ್ಲಿ ಬೂಟ್ ಪಾಲಿಷ್ ಮಾಡಿ ಹಣ ಸಂಗ್ರಹಿಸುವುದು, ಕೊನೆಗೆ ನವ ನಿರ್ಮಾಣ ಕ್ರಾಂತಿ ಸಮಿತಿಯ ಮೂಲಕ ತಮ್ಮ ಪಟಾಲಮ್ಮನ್ನು ಜೆಪಿ ಚಳುವಳಿಯಲ್ಲಿ ತೊಡಗಿಸಿದ್ದು ಇತ್ಯಾದಿ ಚಟುವಟಿಕೆಗಳ ಮೂಲಕ ವಿದ್ಯಾರ್ಥಿ ದೆಸೆಯಲ್ಲೇ ನನ್ನ ಕುತೂಹಲಕ್ಕೆ ಕಾರಣರಾಗಿದ್ದರು. ಇದಲ್ಲದೆ ಬೂಸಾ ಚಳುವಳಿ, ಜಾತಿ ವಿನಾಶ ಸಮ್ಮೇಳನ ಮತ್ತು ನವ್ಯ ಸಾಹಿತ್ಯ ಚಳುವಳಿಯು ವೈದಿಕ ರಾಜಕಾರಣದ ಮುಖವಾಣಿ ಎಂದು ವಿಶ್ಲೇಷಿಸಿ ಅದರ ವಿರುದ್ಧ ದೊಡ್ಡ ಬಂಡಾಯವನ್ನೇ ಸಾರಿದ 'ಅಖಿಲ ಕರ್ನಾಟಕ ಲೇಖಕರ ಮತ್ತು ಕಲಾವಿದರ ಒಕ್ಕೂಟ'ದ ಮೊದಲ ಸಮ್ಮೇಳನದ ರೂವಾರಿ ಆಗಿದ್ದರೆಂಬ ಸಂಗತಿ ಮತ್ತು ಸ್ವತಃ ಅವರು ಮೇಲ್ಜಾತಿಗೆ ಸೇರಿದ್ದರೂ, ಹಾವನೂರರ ಮಿತ್ರರಾಗಿ ಅವರ ಆಯೋಗದ ವರದಿಯ ಹಿಂದಿನ ಸ್ಫೂರ್ತಿಯಾಗಿದ್ದುದರ ಮೂಲಕ ಸಾಮಾಜಿಕ ನ್ಯಾಯ ಕುರಿತು ಅವರು ತೋರಿದ್ದ ಕಾಳಜಿ; ಅವರದು ಬರಿ ತಂಟೆಕೋರ ವ್ಯಕ್ತಿತ್ವವಲ್ಲ, ಅವರ ಕಾರ್ಯಕ್ರಮಗಳ ಹಿಂದೆ ಒಂದು ಗಾಢವಾದ ತತ್ವಚಿಂತನೆಯೂ ಇದೆ ಎಂಬ ಅರಿವಾಗಿ ಅವರ ಬಗ್ಗೆ ಗೌರವವೂ ಮೂಡಿತ್ತು.

ನನ್ನ ವಿದ್ಯಾರ್ಥಿ ದೆಸೆಯಲ್ಲಿ ಮನೆಯವರ ದಿಗ್ಬಂಧನಗಳಿಂದಾಗಿ ಈ ಚಟುವಟಿಕೆಗಳ ಮೂಕ ಪ್ರೇಕ್ಷಕ ಮಾತ್ರನಾಗಿದ್ದ ನಾನು ಈಗ ಈ ಎಲ್ಲ ದಿಗ್ಬಂಧನಗಳಿಂದ ಮುಕ್ತನಾಗಿದ್ದುದರಿಂದ ಬಹು ಬೇಗನೆ ಅವರ ಅನುಯಾಯಿಯಾದೆ. ಅಷ್ಟೇಕೆ, ಅವರ ಆಪ್ತ ಬಳಗಕ್ಕೂ ಸೇರಿದವನಾದೆ. ನಾನು ದೆಹಲಿಯಿಂದ ಬೆಂಗಳೂರಿಗೆ ಬಂದಾಗಲೆಲ್ಲ ಅವರು ಊಟ-ತಿಂಡಿ-ಬೀರ್‌ಗಳೊಡನೆ ಆತ್ಮೀಯತೆಯಿಂದ ನನ್ನನ್ನು ಉಪಚರಿಸುತ್ತಿದ್ದರು. ಒಮ್ಮೆ ಹೈದರಾಬಾದ್‌ನಲ್ಲಿ ಪ್ರೊ॥ ಕೇಶವರಾವ್ ಜಾಧವ್ ಅವರು ಆಯೋಜಿಸಿದ್ದ 'ಲೋಹಿಯಾ ವಿಚಾರ ಮಂಚ್'ನ ಸಮಾವೇಶದಲ್ಲಿ ಒಟ್ಟಿಗೆ ಎರಡು ಮೂರು ದಿನ ಇದ್ದಾಗ (ಅಲ್ಲಿಗೆ ಕಿಷನ್ ಪಟ್ನಾಯಕ್, ರವಿವರ್ಮ ಕುಮಾರ್, ಕೆ.ಟಿ.ಶಿವಪ್ರಸಾದ್ ಕೂಡ ಬಂದಿದ್ದರು) ಅವರು ನನ್ನನ್ನು ಲೋಹಿಯಾರ ಪೋಷಕರಲ್ಲೊಬ್ಬರಾಗಿದ್ದ ಬದ್ರಿ ವಿಶಾಲ್ ಪಿಟ್ಟಿ ಅವರ ಅಂಗಡಿಗೆ ಕರೆದುಕೊಂಡು ಹೋಗಿ ಹಳೆಯ 'ಮ್ಯಾನ್‌ಕೈಂಡ್' ಸಂಪುಟಗಳನ್ನು ನನಗೆ ಕೊಡಿಸಿದರು. ಅವು ಮತ್ತು ಅದಕ್ಕಿಂತ ಹೆಚ್ಚಾಗಿ ಅವರು ಮುಂದೊಂದು ದಿನ ತಮ್ಮ ಹಸ್ತಾಕ್ಷರಗಳೊಂದಿಗೆ ನೀಡಿದ 'ಲೋಹಿಯಾ ಅಂಡ್ ಅಮೆರಿಕಾ ಮೀಟ್' ಪುಸ್ತಕ ಅವರ ನೆನಪಿನಲ್ಲಿ ಭದ್ರವಾಗಿ ನನ್ನ ಬಳಿ ಇದೆ.

ಈ ಸಂಬಂಧ ಇದ್ದಕ್ಕಿದ್ದಂತೆ ಕಡಿದುಹೋದದ್ದು ೧೯೭೭ರ ಜೆಪಿಯವರ 'ಜನತಾ ಪಕ್ಷದ ಪ್ರಯೋಗ ವಿಫಲವಾಗಿ ಕಿಷನ್ ಪಟ್ನಾಯಕ್‌ರ ಮುಂದಾಳತ್ವದಲ್ಲಿ ೧೯೮೦ರಲ್ಲಿ

ಹೊಸದೊಂದು ಸಮಾಜವಾದಿ ಪಕ್ಷ ಕಟ್ಟಲು ಬೆಂಗಳೂರಿನಲ್ಲಿ ನಾವೆಲ್ಲ ಸೇರಿ ಸಂಘಟಿಸಿದ್ದ 'ಸಮತಾ ಸಮ್ಮೇಳನ'ದ ಸಂದರ್ಭದಲ್ಲಿ. ಸಮ್ಮೇಳನದ ಕೊನೆಯಲ್ಲಿ ಹೊಸ ಪಕ್ಷದ ಸಂಘಟನೆಗಾಗಿ ರಾಜ್ಯ ಸಂಚಾಲಕರನ್ನು ನೇಮಿಸುವ ವಿಷಯ ಬಂದಾಗ ನಾನು ನನ್ನೆಲ್ಲ ಯುವ ಗೆಳೆಯರೊಂದಿಗೆ ಸಮಾಲೋಚಿಸಿ ರವಿವರ್ಮ ಕುಮಾರ್‌ರ ಹೆಸರನ್ನು ಸೂಚಿಸಿದೆ. ಇದು ನನ್ನ ನಿರೀಕ್ಷೆಗೆ ವಿರುದ್ಧವಾಗಿ ಎಂಡಿಎನ್‌ರನ್ನು ಎಷ್ಟು ಸಿಟ್ಟಿಗೆಬ್ಬಿಸಿತೆಂದರೆ, ಸಮ್ಮೇಳನನ ಮುಕ್ತಾಯ ಕಂಡು ನಾನು ಅಲ್ಲಿಂದ ಹೊರಡುವ ಮುನ್ನ ಅವರಿಗೆ ವಿದಾಯ ಹೇಳಲು ಹೋದರೆ ಅವರು ನನ್ನನ್ನು ದೂರ ತಳ್ಳಿ, 'ನನ್ನ ನಿಮ್ಮ ಸಂಬಂಧ ಇಲ್ಲಿಗೆ ಮುಗಿಯಿತು' ಎಂದು ಘೋಷಿಸಿಬಿಟ್ಟರು. ಆಘಾತಗೊಂಡು ಪೆಚ್ಚಾದ ನಾನು ಮತ್ತೆ ಅವರ ಸುದ್ದಿಗೆ ಹೋಗಲಿಲ್ಲ. ಅವರೂ ನಂತರ ಸಮಾಜವಾದಿ ಚಳುವಳಿಯ ಸುದ್ದಿಯನ್ನು ಬಿಟ್ಟು ರೈತ ಚಳುವಳಿಯ ಕಡೆ ಗಮನ ಹರಿಸಿದರು. ಅದನ್ನೇ ಸಮಾಜವಾದಿ ಚಳುವಳಿಯಾಗಿ ಬೆಳೆಸುವುದಾಗಿ ಹೇಳಿಕೊಂಡು ನನ್ನ ಕೆಲ ಯುವ ಸಮಾಜವಾದಿ ಗೆಳೆಯರನ್ನೂ ಅತ್ತ ಕಡೆ ಸೆಳೆದುಕೊಂಡರು.

ನಂಜುಂಡಸ್ವಾಮಿ ಯುವಜನರನ್ನು ಆಕರ್ಷಿಸಿ ಪ್ರೀತಿಯಿಂದ ಬೆಳೆಸುವರು ಎಂಬ ಪ್ರತೀತಿ ಇದ್ದಂತೆಯೇ, ಅವರು ತಮ್ಮನ್ನು ಪ್ರಶ್ನಿಸುವ, ಮೀರಿ ಬೆಳೆಯುವ ಸೂಚನೆ ತೋರಿದವರನ್ನು ಅಷ್ಟೇ ಕಠೋರವಾಗಿ ಹತ್ತಿಕ್ಕುವರೆಂಬ ಪ್ರತೀತಿಯೂ ಇತ್ತು.. ಆದರೆ ನನ್ನನ್ನು ಹಾಗೆ ಹತ್ತಿಕ್ಕಲು ಅವರಿಗೆ ಅವಕಾಶವೇ ಕೊಡದಂತೆ ನಾನು ಅವರಿಂದ ದೂರ ಸರಿದೆ. ಅವರ ಈ ಪ್ರವೃತ್ತಿಯನ್ನು ನಾನು ಅವರು ನಡೆಸಿದ್ದ ಸಮಾಜವಾದಿ ಅಧ್ಯಯನ ಶಿಬಿರಗಳಲ್ಲೂ ನೋಡಿದ್ದೆ. ಪ್ರಶ್ನೆ ಕೇಳಿದವರಿಗೆ ಅಸಂಬದ್ಧ ಮರುಪ್ರಶ್ನೆ ಹಾಕಿ ಅವರು ಉತ್ತರಿಸಲಾಗದೆ ತಡವರಿಸುವಂತೆ ಮಾಡಿ ಕೂರಿಸುತ್ತಿದ್ದರು. ಹೊಸಬರನೇಕರು ಇವರ ಸಹವಾಸವೇ ಬೇಡವೆಂದು ಚಳುವಳಿಯನ್ನೇ ಬಿಟ್ಟು ಹೋಗುತ್ತಿದ್ದರು. ಇದು ರೈತ ಅಧ್ಯಯನ ಶಿಬಿರಗಳಲ್ಲಿಯೂ ಮುಂದುವರೆಯಿತೆಂದೂ ಕೇಳಿರುವೆ.

ಆದರೆ ಅಲ್ಲಿ ಪ್ರತಿಭಟಿಸುವವರು ಕಡಿಮೆ ಇದ್ದರು. ರೈತರು ತೀರಾ ಸಂಕಷ್ಟದಲ್ಲಿದ್ದುದ ರಿಂದ ಮತ್ತು ಎಂಡಿಎನ್ ತಮ್ಮ ಸಮಾಜವಾದಿ ಸಾಹಸ ಅಪೂರ್ಣವಾದುದರ ಅತೃಪ್ತಿಯಿಂದಲೋ ಏನೋ ಅರ್ಪಣಾ ಮನೋಭಾವದಿಂದ ಸಂಘಟನೆಗಾಗಿ ದುಡಿಯತೊಡಗಿದ್ದರಿಂದ ರೈತರು ಅವರ ವ್ಯಕ್ತಿತ್ವದಲ್ಲಿಯೇ ಅಡಕವಾಗಿದ್ದ ಕಠೋರತೆಯನ್ನು ಸಹಿಸಿದರು. ನಾನೊಮ್ಮೆ ಅವರ ರೈತ ಅಧ್ಯಯನ ಶಿಬಿರಕ್ಕೆ 'ಲಂಕೇಶ್ ಪತ್ರಿಕೆ'ಯ ಪರವಾಗಿ ವರದಿ ಮಾಡಲು ಹೋಗಿ ಅವರ ಕಠೋರತೆ ಇನ್ನೂ ತೀವ್ರವಾಗಿರುವುದನ್ನು ಖಚಿತಪಡಿಸಿಕೊಂಡು ಬಂದಿದ್ದೆ. ಅಂದು ಸುಂದರೇಶರು ಮಧ್ಯೆ ಪ್ರವೇಶಿಸದಿದ್ದಲ್ಲಿ ನಂಜುಂಡಸ್ವಾಮಿಯವರ ಪ್ರಚೋದನೆಯಿಂದ ರೈತರು ನನ್ನ ಮೇಲೆ ದೈಹಿಕ ದಾಳಿಯನ್ನೇ ನಡೆಸುತ್ತಿದ್ದರೇನೋ! ಅವರ ಅರ್ಧ ಕೋಪ ನನ್ನ ಮೇಲಿದ್ದರೆ ಇನ್ನರ್ಧ ಕೋಪ ಲಂಕೇಶರ ಮೇಲೆ ಇತ್ತು! ಪತ್ರಿಕೆ ರೈತ ಚಳುವಳಿಯ ಬಗ್ಗೆ ಸಲ್ಲದ ಅಪಪ್ರಚಾರ

ಮಾಡುತ್ತಿದೆಯೆಂಬುದು ಅವರ ಈ ಕ್ರೋಧಕ್ಕೆ ಕಾರಣವಾಗಿತ್ತು. ಇದಕ್ಕೆ ಪ್ರತಿಯಾಗಿ ರೈತಸಂಘದಿಂದಲೇ 'ನಮ್ಮ ನಾಡು 'ಎಂಬ ಪತ್ರಿಕೆ ಆರಂಭಿಸಿದ ಅವರು ಅದರ ಹಣದ ಲೆಕ್ಕದ ಗೋಜಲಿನಲ್ಲಿ ಸಿಕ್ಕಿಹಾಕಿಕೊಂಡು ಅದನ್ನು ನಿಲ್ಲಿಸಬೇಕಾಯಿತು ಎಂಬುದು ಬೇರೆ ವಿಚಾರ.

ಆದರೆ ಆಶ್ಚರ್ಯವೆಂದರೆ ಇದೆಲ್ಲ ಆದ ನಂತರ ಒಮ್ಮೆ ೧೯೮೧ರಲ್ಲಿ ಅವರು ಸುಂದರೇಶರೊಂದಿಗೆ ಯಾವುದೋ ಮಾತುಕತೆಗೆಂದು ದೆಹಲಿಗೆ ಬಂದಾಗ ನನಗೆ ಕರೆ ಕಳಿಸಿದರು! ನಾನೂ ಲಂಕೇಶರೊಂದಿಗೆ ಬಾಳಲಾರದವನಾಗಿ ದೆಹಲಿ ಆಕಾಶವಾಣಿ ಹುದ್ದೆಗೆ ವಾಪಸಾಗಿದ್ದ ಕಾರಣದಿಂದಲೋ ಏನೋ ನನ್ನ ಮೇಲಿನ ಅವರ ಸಿಟ್ಟು ಇಳಿದಿತ್ತು. ಕರ್ನಾಟಕ ಭವನದಲ್ಲಿ ಅವರ ಸುಖ ವಾಸ. ದಿನವೂ ಕೋಳಿಯ ಊಟ! ಸವಿ ಮಾತುಕತೆ, ಶತ್ರುಗಳ ಮೇಲೆ ಕಟು ವ್ಯಂಗ್ಯ ಬಾಣಗಳ ಪ್ರಯೋಗ! ಮತ್ತೆ ನನಗೆ ಅವರ ಆ ಹಳೆಯ ಉಪಚಾರದ ದಿನಗಳು ನೆನಪಿಗೆ ಬಂದವು. ಆದರೆ ಅದೇ ಒಂದು ದಿನ ದುದ್ದದಲ್ಲಿ ರೈತರ ಪ್ರತಿಭಟನೆಯ ಮೇಲೆ ಗುಂಡೂರಾಯರ ಸರ್ಕಾರ ಗೋಲೀಬಾರ್ ಮಾಡಿ ಇಬ್ಬರೋ ಮೂವ್ವರೋ ರೈತರನ್ನು ಕೊಂದಿತ್ತು. ಆ ಸುದ್ದಿಯನ್ನು ನಾನೇ ಅಂದು ಮಧ್ಯಾಹ್ನದ ವಾರ್ತೆಗಳಲ್ಲಿ ಬಿತ್ತರಿಸಿ ಬಂದು ಇವರಿಗೂ ಹೇಳಿದೆ. ಸುಂದರೇಶ್ ಗೊಳೋ ಎಂದು ಅಳಲು ಶುರು ಮಾಡಿದರೆ ಎಂಡಿಎನ್ ತಲೆ ತಗ್ಗಿಸಿ ಯೋಚನಾಮಗ್ನರಾಗಿದ್ದರು. ಇದ್ದಕ್ಕಿದ್ದಂತೆ ಯಾರೊಂದಿಗೋ ಮಾತನಾಡಿ ಬಟ್ಟಬರೆ ಕಟ್ಟಿಕೊಂಡು ಬೆಂಗಳೂರ ಕಡೆ ಹೊರಟೇಬಿಟ್ಟರು.

ಇದಾದ ನಂತರದಲ್ಲೇ ನಾನು ಕರ್ನಾಟಕಕ್ಕೆ ಬಂದೆ. ಕಾರ್ಯ ನಿರ್ವಾಹಕ ಹುದ್ದೆ ಭದ್ರಾವತಿಯಲ್ಲಿದ್ದುದರಿಂದ ರೈತ ಸಂಘದ ಕ್ರಿಯಾಕೇಂದ್ರ ಶಿವಮೊಗ್ಗಕ್ಕೆ ಹತ್ತಿರವಾಗಿ ಅದನ್ನು ಆಸಕ್ತಿ-ಕುತೂಹಲಗಳಿಂದ ಗಮನಿಸುತ್ತಿದ್ದೆ. ಸಂಘಟನೆ ಬೆಳೆಯುತ್ತಿದ್ದಂತೆ, ಅದು ಸರ್ಕಾರಕ್ಕೆ ಸವಾಲು ಹಾಕುವ ತಾಕತ್ತು ಗಳಿಸಿಕೊಳ್ಳುತ್ತಿದ್ದಂತೆ, ಎಂಡಿಎನ್ ಅವರಲ್ಲಿದ್ದ ಮಾನವತೆಯ ತೇವಾಂಶ ಒಣಗಿ ಹೋಗತೊಡಗಿತ್ತು. ಆಗಲೇ ರೈತ ಸಂಘದಲ್ಲಿ ಒಡಕುಗಳು ಕಾಣತೊಡಗಿ, ಅದು ತೋರಿಕೆಗಾಗಿಯಾದರೂ ಇದ್ದ ತನ್ನ ಸಮಾಜವಾದಿ ದೃಷ್ಟಿ ಕೇಂದ್ರವನ್ನು ಕಳೆದುಕೊಂಡು ನಂಜುಂಡಸ್ವಾಮಿಯವರ ವೈಯುಕ್ತಿಕ ಸಂಘಟನೆಯಾಗತೊಡಗಿತ್ತು. ನಂಜುಂಡಸ್ವಾಮಿಯವರಿಗೆ ರೈತಸಂಘವನ್ನು ಒಂದು ಸಮಾಜವಾದಿ ಸಂಘಟನೆಯಾಗಿ, ಸಮಾನತೆಗೆ ತುಡಿವ ಜಾತ್ಯತೀತ ಕಾರ್ಯಪಡೆಯನ್ನಾಗಿ ರೂಪಿಸುವ ಉದ್ದೇಶವಿದ್ದಿರಬಹುದು. ಆದರೆ ರೈತ ಸಂಘದ ನಾಯಕರಾದ ಮೇಲೆ ಅವರು ತಮ್ಮ ಆಧುನಿಕ ಉಡುಪು ಬದಲಿಸಿ ಹೊರನೋಟಕ್ಕೆ ದೇಸಿಯಾದರಾದರೂ, ಒಳಗೆ ಎಲ್ಲ ದೃಷ್ಟಿಗಳಿಂದಲೂ ಆಧುನಿಕರಾಗಿದ್ದ ಕಾರಣ ಅವರು ರೈತ ಸಮುದಾಯವನ್ನು ಸಹಾನುಭೂತಿಯಿಂದ ಅರ್ಥ ಮಾಡಿಕೊಳ್ಳುವಲ್ಲಿ ಸೋತರೆಂದೇ ಹೇಳಬೇಕು.

ನಿಜ ಅವರ ನೇತೃತ್ವದಲ್ಲಿ ರಾಜ್ಯ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಕಂಡರಿಯದಂತಹ ಲೋಕಶಕ್ತಿಯ ಪ್ರದರ್ಶನ, ಸರ್ಕಾರಕ್ಕೆ ಸವಾಲು, ಪ್ರತಿಭಟನೆ, ಪ್ರತಿ-ಕಾರ್ಯಕ್ರಮಗಳನ್ನು

ಕಂಡಿತು. ಕರ್ನಾಟಕದಲ್ಲಿ ಸಮಾಜವಾದಿ ಕ್ರಾಂತಿಯಗುವ ಕಾಲ ದೂರವಿಲ್ಲ ಎನ್ನಿಸಿಯೂ ಬಿಟ್ಟಿತ್ತು. ಹಾಗಾಗಿಯೇ ನಾವು ಕೆಲವು ಗೆಳೆಯರು ದಲಿತ ಚಳುವಳಿ ಮತ್ತು ರೈತ ಚಳುವಳಿಯ ನಾಯಕರನ್ನು ಒಟ್ಟುಗೂಡಿಸಿ ಒಂದು ಐಕ್ಯ ರಾಜಕೀಯ ಶಕ್ತಿಯ ಉದಯದ ಪ್ರಯತ್ನ ಮಾಡಿದೆವು. ಆದರೆ ಎಂಡಿಎನ್ ಆ ಹೊತ್ತಿಗೆ ಯಾರನ್ನೂ ನಂಬದ ಆಕ್ರಾಂತ ಸ್ಥಿತಿ ತಲುಪಿದ್ದರು. ಅವರು ವಿಶ್ವ ರೈತನಾಯಕರಾಗುವ ಹವಣಿಕೆಯಲ್ಲಿದ್ದರು. ಇದರ ಅಂತಿಮ ಪರಿಣಾಮವಾಗಿಯೇ ರೈತ ಸಂಘ ಒಡೆಯಿತು. ಅವರ ಅನುಯಾಯಿಗಳನೇಕರು ಭ್ರಮನಿರಸನ ಹೊಂದಿದ್ದರು ಅಥವಾ ದೂರ ಸರಿದಿದ್ದರು. ನಂಜುಂಡ ಸ್ವಾಮಿ ಒಂಟಿಯಾಗಿದ್ದರು.

ಆ ನಂತರದ ಸ್ವಲ್ಪ ಕಾಲದಲ್ಲೇ–೧೯೯೮ರಲ್ಲಿ–ನಾನು ಅವರನ್ನು ನಾನಿದ್ದ ಬೆಂಗಳೂರು ಆಕಾಶವಾಣಿಗಾಗಿ ಸಂವಿಧಾನ ಕುರಿತ ಭಾಷಣ ಮಾಲಿಕೆಗಾಗಿ ಆಹ್ವಾನಿಸಿದೆ. ಅವರು ಬಂದರು. ಆದರೆ ಸುಸ್ತಾಗಿದ್ದರು. ಮತ್ತೆ ಅದೇ ಪ್ರೀತಿಯಿಂದ ಮಾತಾಡಿದರು. ಪಕ್ಕದ ಪರಾಗ್ ಹೋಟೆಲ್ಲಿಗೆ ಕರೆದುಕೊಂಡು ಹೋಗಿ ನೆನಪಿಟ್ಟು ನನಗಿಷ್ಟವಾದ ರವೆ ಇಡ್ಲಿ ಕೊಡಿಸಿದರು. ನಮ್ಮ ನಿಲಯ ನಿರ್ದೇಶಕರನ್ನು ಭೇಟಿಯಾಗಿ ನನ್ನ ಬಗ್ಗೆ ನಾಲ್ಕು ಒಳ್ಳೆಯ ಮಾತನಾಡಿದರು. ಲಂಕೇಶರನ್ನು ಶಪಿಸಿದರು. ಪತ್ನಿ ಸಮೇತ ಮನೆಗೆ ಬರುವಂತೆ ಆಹ್ವಾನಿಸಿದರು. ಅದೇ ನನ್ನ ಅವರ ಕೊನೆಯ ಭೇಟಿ.

ನಂತರ ವೆವಗ ಅವರನ್ನು ನೋಡಿದ್ದು ಶವವಾಗಿ, ೨೦೦೪ರಲ್ಲಿ. ಅಂತಿಮ ಯಾತ್ರೆಯ ಭಾಗವಾಗಿ ಅದು ಮೈಸೂರಿಗೆ ಬಂದಾಗ. ನಾನೂ ನನ್ನ ಪತ್ನಿ ರಾಜಶೇಖರ ಕೋಟಿಯವರ ಜೊತೆ ಹೋಗಿ ಚಾಮರಾಜನಗರ ಸಮೀಪದಲ್ಲಿನ ಭವಿಷ್ಯದ ಅಂತಾರಾಷ್ಟ್ರೀಯ ಕೃಷಿ ಕ್ಷೇತ್ರವೆಂದು ಹೇಳಲಾದ 'ಅಮೃತಭೂಮಿ'ಯಲ್ಲಿ ನಡೆದ ಅಂತಿಮ ಸಂಸ್ಕಾರದಲ್ಲಿ ಭಾಗವಹಿಸಿ ಬಂದೆವು.

ಮತ್ತೆ ಮೊನ್ನೆ ತಾನೇ ನಾವು ಕೆಲವು ಗೆಳೆಯರು ನಮ್ಮ ಕುಟುಂಬಗಳೊಂದಿಗೆ ಚಾಮರಾಜನಗರದ ಕಡೆ ಹೋಗಿದ್ದಾಗ ನೆನಪಿಟ್ಟು 'ಅಮೃತಭೂಮಿ'ಗೆ ಹೋಗಿ ಅವರ ಸಮಾಧಿಗೆ ಗೌರವ ಸಲ್ಲಿಸಿ ಬಂದೆವು. ಒಂದು ಕ್ಷಣ ತೀವ್ರ ಬೇಸರವೂ ಅನಿಸಿತು. ಯಾವಾಗಲೂ ಜನಮಧ್ಯವಿದ್ದ ಎಂಡಿಎನ್ ಇಲ್ಲೇಕೆ ಜನಸಂಪರ್ಕವೇ ಇಲ್ಲದ ದೂರದ ಈ ವಿಶಾಲ ಬಿಸಿಲು ಬಯಲಲ್ಲಿ ತಲೆ ಮೇಲೆ ಸೂರಿಲ್ಲದೆ ಒಂಟಿಯಾಗಿ ಅನಾಥರಂತೆ ಮಲಗಿದ್ದಾರೆ ಎಂದು. ವಿಶ್ವ ರೈತ ನಾಯಕರಾಗುವ ಹಂಬಲವೇ ಅವರನ್ನು ದಾರಿ ತಪ್ಪಿಸಿತೇ? ಗೊತ್ತಿದ್ದವರು ಹೇಳಬೇಕು.

(ಮೇ, ೨೦೧೩)

■

ಗಂಡು ಗಂಡಾದ ರೈತ ಸಂಘವೂ, ಹೆಂಗರುಳಿನ ಸುಂದರೇಶರೂ...

ನಾನು ಎನ್.ಡಿ.ಸುಂದರೇಶ್ ಅವರೊಂದಿಗೆ ಹೆಚ್ಚು ಒಡನಾಡಿ ದವನಲ್ಲ. ಹಾಗಾಗಿ ಅವರ ವ್ಯಕ್ತಿತ್ವದ ನೇರ ಚಿತ್ರಣ ಅಥವಾ ವಿವರಗಳು ಇಲ್ಲಿಲ್ಲ. ಶ್ರೀಮತಿ ಶೋಭಾ ಸುಂದರೇಶರ ಕೋರಿಕೆಯ ಮೇರೆಗೆ ಈ ಲೇಖನ ಬರೆದಿದ್ದು, ಈಗಲೂ ನನ್ನ ಕುತೂಹಲದ ವಸ್ತುವಾಗಿರುವ ರೈತ ಸಂಘದ ಚರಿತ್ರೆಯ ಪರಿಪ್ರೇಕ್ಷ್ಯದಲ್ಲಷ್ಟೇ ನಾನು ಕಂಡ ಸುಂದರೇಶರ ವ್ಯಕ್ತಿತ್ವವನ್ನು ಕಟ್ಟಿಕೊಡುವ ಪ್ರಯತ್ನವನ್ನು ಇಲ್ಲಿ ಮಾಡಿದ್ದೇನೆ.

ಸುಂದರೇಶ್ ಅವರನ್ನು ನಾನು ಮೊದಲು ಕಂಡದ್ದು ೧೯೮೦ರಲ್ಲಿ. ಸಮಾಜವಾದಿ ಪಕ್ಷ ಜನತಾ ಪಕ್ಷದಲ್ಲಿ ಲೀನವಾಗಿ, ಆ ಪಕ್ಷವೂ ಕೇಂದ್ರದಲ್ಲಿ ಅಧಿಕಾರ ಕಳೆದುಕೊಂಡ ನಂತರ ನಾವು ಕೆಲವರು ಕಿಷನ್ ಪಟ್ನಾಯಕ್ ನೇತೃತ್ವದಲ್ಲಿ ಪಕ್ಷೇತರ ಸಮಾಜವಾದಿಗಳನ್ನು ಸಂಘಟಿಸಲು ಆಗ ಬೆಂಗಳೂರಿನಲ್ಲಿ 'ಸಮತಾ ಸಮಾವೇಶ'ವೊದನ್ನು ಏರ್ಪಡಿಸಿದ್ದೆವು. ವಿದ್ಯಾರ್ಥಿ ದೆಸೆಯಿಂದಲೂ ಸಮಾಜವಾದಿ ಆಂದೋಲನದೊಂದಿಗೆ ಗುರುತಿಸಿಕೊಂಡಿದ್ದ ಎನ್.ಡಿ. ಸುಂದರೇಶ್, ಈ ಸಮಾವೇಶಕ್ಕೂ ಬಂದಿದ್ದರು. ಪ್ರೊ॥ ಎಂ.ಡಿ. ನಂಜುಂಡಸ್ವಾಮಿಯವರ ಶಿಷ್ಯರಾಗಿದ್ದ ಅವರನ್ನು ಸ್ವತಃ ನಂಜುಂಡಸ್ವಾಮಿಯವರೇ ನನಗೆ ಪರಿಚಯ ಮಾಡಿಕೊಟ್ಟರು. ಆಗ ಅವರ ಜೊತೆ ಪೂರ್ಣಚಂದ್ರ ತೇಜಸ್ವಿ, ರಾಮದಾಸ್ ಮತ್ತು ಲಂಕೇಶ್‌ರಂತಹ ಘಟಾನುಘಟಿಗಳಿದ್ದ ನೆನಪು. ಮೊದಲ ನೋಟಕ್ಕೇ, ಪರಿಚಯಕ್ಕೇ, ಸುಂದರೇಶ್ ಬಗ್ಗೆ ನನಗೆ ಅನಿಸಿದ್ದು, ಇವರೊಬ್ಬ ಹಮ್ಮು-ಬಿಮ್ಮುಗಳಿಲ್ಲದ ಸರಳ ಸಜ್ಜನ ಮನುಷ್ಯ ಎಂದು; ಅವರ ವಿಚಿತ್ರ (ಬುಲ್ಗಾನಿನ್) ಗಡ್ಡ ಮೀಸೆಗಳ ಹೊರತಾಗಿಯೂ! ಆದರೆ, ಈ ಸಮಾವೇಶದ ಸಂದರ್ಭದಲ್ಲಿ ನಾನು ಸಮಾವೇಶದ ಕಾರ್ಯ-ಕಲಾಪಗಳಲ್ಲಿ ತುಂಬ ವ್ಯಸ್ತನಾಗಿದ್ದುದರಿಂದ ಮತ್ತು ಅವರು ಅಂದಿನ ಸಮಾಜವಾದಿ ಘಟಾನುಘಟಿಗಳ ಮಧ್ಯೆಯೇ ಇದ್ದುದರಿಂದ ಆಗ ಅವರೊಡನೆ ಹೆಚ್ಚು ಬೆರೆಯಲಾಗಲಿಲ್ಲ.

ಸಮತಾ ಸಮಾವೇಶ ನಾನು ಕಂಡ ಎಲ್ಲ ಸಮಾಜವಾದಿ ಸಮಾವೇಶಗಳಂತೆ

ತಾತ್ವಿಕ ಭಿನ್ನಾಭಿಪ್ರಾಯಗಳ ಹೆಸರಲ್ಲಿ ಅರಾಜಕತೆಯಲ್ಲಿ ಮುಗಿದು ನಮ್ಮ ಪ್ರಯತ್ನ ವಿಫಲವಾದ ನಂತರ, ಅದರ ಪ್ರಮುಖ ಸಂಘಟಕರಲ್ಲಿ ಒಬ್ಬರಾದ ನಂಜುಂಡಸ್ವಾಮಿ ಯವರು ತಮ್ಮ ಗಮನವನ್ನು ಸುಂದರೇಶ್ ಮತ್ತು ರುದ್ರಪ್ಪನವರು ಕಟ್ಟಿದ್ದ ಶಿವಮೊಗ್ಗದ ಕಬ್ಬು ಬೆಳೆಗಾರರ ಸಂಘದ ಕಡೆ ಹೆಚ್ಚು ಹರಿಸಲಾರಂಭಿಸಿದರು. ಗುಂಡೂರಾಯರ ಆಡಳಿತದಲ್ಲಿ ನರಗುಂದದಲ್ಲಿ ನಡೆದ ರೈತರ ಮೇಲಿನ ಗೋಲೀಬಾರಿನ ನಂತರ ಇದು ರುದ್ರಪ್ಪ–ಸುಂದರೇಶ್ ಅವರ ನೇತೃತ್ವದಲ್ಲಿ ಕರ್ನಾಟಕ ರಾಜ್ಯ ರೈತಸಂಘವಾಗಿ ಮಾರ್ಪಟ್ಟು ಬೆಳೆಯಲಾರಂಭಿಸಿ, ನಂಜುಂಡಸ್ವಾಮಿ ಅದರ ಪೂರ್ಣ ಪ್ರಮಾಣದ ತಾತ್ವಿಕ ಮಾರ್ಗದರ್ಶಿಯಾಗಿ ಸಕ್ರಿಯರಾದರು. (ನಂತರ ಅದನ್ನು ತಮ್ಮ ಸಂಪೂರ್ಣ ಹತೋಟಿಗೆ ತೆಗೆದುಕೊಂಡರು–ಮತ್ತು ಅದು ಅವರಿಗೆ ಹೇಗೆ ಸಾಧ್ಯವಾಯಿತು–ಎಂಬುದು ಬೇರೆಯೇ ವಿಚಾರ!.) ಇದು ಕರ್ನಾಟಕದಲ್ಲಿ 'ಸಮಾಜವಾದಿ ಯುವಜನ ಸಭಾ'ವನ್ನು ಪುನರುಜ್ಜೀವನಗೊಳಿಸಿ, ಸಮಾಜವಾದಿ ಚಳುವಳಿಯನ್ನು ಹೊಸದಾಗಿ ಕಟ್ಟಲು(ಇದಕ್ಕೆ ಪೂರಕವಾಗಿ ೧೯೭೮ರಲ್ಲಿ ಹಾಸನದಲ್ಲಿ ನಾವು ರಾಜ್ಯ ಮಟ್ಟದ 'ತರುಣ ಲೋಹಿಯಾವಾದಿಗಳ ಸಮಾವೇಶ'ವೊಂದನ್ನು ನಡೆಸಿದ್ದೆವು) ನಾವು ಕೆಲವರು ಆರಂಭಿಸಿದ್ದ ಪ್ರಯತ್ನಕ್ಕೆ ಪೆಟ್ಟು ನೀಡುವಂತೆ ನನಗೆ ಕಂಡಿತು. ಆಗ ನಾನು ದೆಹಲಿಯಲ್ಲಿ ಕೆಲಸದಲ್ಲಿದ್ದುದರಿಂದ ಮತ್ತು ಇವರೆಲ್ಲರಿಗೆ ಹೋಲಿಸಿದಂತೆ ಚಳುವಳಿಯ ವಿಷಯದಲ್ಲಿ ಮತ್ತು ವಯಸ್ಸಿನಲ್ಲಿ ಕಿರಿಯನಾಗಿದ್ದುದರಿಂದ ನನ್ನ ಈ ಬೇಸರವನ್ನು ಸದ್ಯಕ್ಕೆ ನಾನೇ ನುಂಗಿಕೊಳ್ಳಬೇಕಾಯಿತು.

ಆದರೆ ಕೆಲವೇ ತಿಂಗಳುಗಳಲ್ಲಿ ಲಂಕೇಶರ ಕರೆಯ ಮೇರೆಗೆ ನಾನು ದೆಹಲಿ ಕೆಲಸ ಬಿಟ್ಟು 'ಲಂಕೇಶ್ ಪತ್ರಿಕೆ'ಯ 'ವಿಶೇಷ ಬಾತ್ಮೀದಾರ'ನಾಗಿ ಬೆಂಗಳೂರಿಗೆ ಕೆಲಸ ಮಾಡಲು ಬಂದೆ. ಆಗ ನನ್ನ ಬೇಸರವನ್ನು ನನಗೆ ಆಪ್ತರಾಗಿದ್ದ ಮತ್ತು 'ಸಮಾಜವಾದಿ ಯುವಜನ ಸಭಾ'ದ ಪುನರುಜ್ಜೀವನದಲ್ಲಿ ಆಸಕ್ತಿ ವಹಿಸಿದ್ದ ಹಾಸನದ ಗೆಳೆಯರಾದ ಆರ್.ಪಿ.ವೆಂಕಟೇಶಮೂರ್ತಿ, ಮಂಜುನಾಥ ದತ್ತ, ವಾಸು, ಅರೇಹಳ್ಳಿ ರಾಜೇಗೌಡ ಮುಂತಾದವರೊಂದಿಗೆ ತೋಡಿಕೊಂಡೆ. ರೈತರೂ ಸೇರಿದಂತೆ ಎಲ್ಲ ವರ್ಗಗಳನ್ನೊಳ ಗೊಂಡ ಸಮಾಜವಾದಿ ಆಂದೋಲನವು ರೈತಸಂಘಕ್ಕಿಂತ ಹೆಚ್ಚು ಜನಾವೃತವೂ, ಪರಿಣಾಮಕಾರಿಯೂ ಆಗಿರುತ್ತದೆಂದು ಮತ್ತು ನಂಜುಂಡಸ್ವಾಮಿಯವರ ಹಠಮಾರಿ ಮತ್ತು ಸರ್ವಾಧಿಕಾರಿ ಮನೋಭಾವದವರ ನಾಯಕತ್ವದಲ್ಲಿ (ಆ ಹೊತ್ತಿಗೆ ಅವರ ಈ ಗುಣದಿಂದ ನಾನು –ಈ ಹಿಂದಿನ ಲೇಖನದಲ್ಲಿ ವಿವರಿಸಿರುವಂತೆ– ಒಂದು ಅನಿರೀಕ್ಷಿತ ಆಘಾತ ಅನುಭವಿಸಿದ್ದೆ.) ಅದು ಒಂದು ಕಾರ್ಮಿಕ ಸಂಘಕ್ಕಿಂತ ಹೆಚ್ಚು ಸಮರ್ಪಕವಾಗಿ ಬೆಳೆಯಲಾರದೆಂದು ನಾನು ವಾದಿಸಿದೆ. ಆದರೆ ಅವರೆಲ್ಲ ಸಮಾಜವಾದಿ ಆಂದೋಲನಕ್ಕಿಂತ ರೈತ ಸಂಘ ಕಟ್ಟುವುದು ಹೆಚ್ಚು ಸುಲಭ ಮತ್ತು ಸಕಾಲಿಕ ಹಾಗೂ ರೈತ ಸಂಘಟನೆಯ ಮೂಲಕವೇ ಸಮಾಜವಾದಿ ಆಂದೋಲನವನ್ನು ಕಟ್ಟಬಹುದೆಂಬ ತೀರ್ಮಾನಕ್ಕೆ ಬಂದಿದ್ದರು. ಎಚ್.ಎಸ್. ರುದ್ರಪ್ಪನವರಂತಹ ರಾಜಕೀಯ ಮುತ್ಸದ್ದಿ

ಮತ್ತು ಸುಂದರೇಶ್‌ರಂತಹ ಸರಳ ಸಜ್ಜನರು ನಂಜುಂಡಸ್ವಾಮಿಯವರ ಎಡ ಬಲಗಳಲ್ಲಿರುವಾಗ ಅಂತಹ ಅನಾಹುತವೇನೂ ಸಂಭವಿಸಲಾರದು ಎಂದು ಅವರು ವಾದಿಸಿದರು. ಅಲ್ಲದೆ ಸುಂದರೇಶ್ ನಂಜುಂಡ ಸ್ವಾಮಿಯವರ ಸಮಾಜವಾದಿ ಯುವಜನ ಸಭಾದ ಗರಡಿಯಲ್ಲೇ ಪಳಗಿರುವುದರಿಂದ ರೈತಸಂಘ ಸಮಾಜವಾದಿ ಆಶಯಗಳನ್ನು ಬಿಟ್ಟುಕೊಡಲಾರದೆಂದೇ ಅವರು ನಂಬಿದ್ದಂತೆ ತೋರಿತು.

ಇದಾದ ಎಷ್ಟೋ ವರ್ಷಗಳ ನಂತರ-ಇತ್ತೀಚೆಗೆ-ಕಡಿದಾಳು ಶಾಮಣ್ಣನವರು ತಾವು, ತೇಜಸ್ವಿ ಮತ್ತು ಸುಂದರೇಶ್ ತಮ್ಮ ತಾರುಣ್ಯದ ದಿನಗಳಲ್ಲಿ ಸಮಾಜವಾದಿ ಕಾರ್ಯಕ್ರಮಗಳಲ್ಲಿ, ವಿಶೇಷವಾಗಿ ಅಂತರ್‌ಜಾತಿ ಮತ್ತು 'ಮಂತ್ರ ಮಾಂಗಲ್ಯ' ಮದುವೆಗಳನ್ನು ಪ್ರೋತ್ಸಾಹಿಸಿ ನೆರವೇರಿಸಲು ಸ್ಕೂಟರ್ ಸವಾರಿಗಳ ಮೂಲಕವೇ ನಡೆಸಿದ ಸಾಹಸ-ದುಸ್ಸಾಹಸಗಳನ್ನು ತಮ್ಮದೇ ಸ್ವಾರಸ್ಯಕರ ರೀತಿಯಲ್ಲಿ ಬಣ್ಣಿಸಿದ್ದುಂಟು! ಒಮ್ಮೆ ತಾವೂ, ಸುಂದರೇಶರೂ ಇಂತಹ ಸಾಹಸವೊಂದರ ಅಂಗವಾಗಿ ಸ್ಕೂಟರಿನಲ್ಲಿ ಕುಪ್ಪಳ್ಳಿ ಮಾರ್ಗವಾಗಿ ಕೊಪ್ಪದ ಬಳಿಯ ಹಳ್ಳಿಯೊಂದರ ಕಡೆ ಸಾಗುತ್ತಿದ್ದಾಗ ಸ್ಕೂಟರ್ ಮುಗ್ಗರಿಸಿ ಬಿದ್ದು, ಹಿಂದೆ ಕಡ್ಲೆ ಮಿಠಾಯಿ ಮೆಲ್ಲುತ್ತಾ ಕೂತಿದ್ದ ಸುಂದರೇಶ್ ನೆಲಕ್ಕೆ ಬಿದ್ದ ಏಟಿಗೆ ಮೂರ್ಛೆ ಹೋದದ್ದೂ, ಇವರ ಗಡ್ಡ ಮೀಸೆಗಳನ್ನು ನೋಡಿ ಇವರು ಮುಸಲ್ಮಾನರೆಂದೇ ತಿಳಿದ ರಸ್ತೆ ಬದಿಯ ಮನೆಯಲ್ಲಿದ್ದ ಬೂವ್ವಮ್ಮಗಳು ಇವರನ್ನು ತಮ್ಮ ಮನೆಯ ಅಂಗಳಕ್ಕೆ ಎತ್ತಿ ತಂದು ವಿಶೇಷವಾಗಿ ಉಪಚರಿಸಿದ್ದನ್ನೂ ಮತ್ತು ತಮಗೆ ಎಚ್ಚರವಾದೊಡನೆ ಸುಂದರೇಶರಿಗೆ ಮೇಲೆ ಆಕಾಶದಲ್ಲಿ ತೊನೆದಾಡುತ್ತಿದ್ದ ಎಳನೀರು ಕಾಯಿಗಳು ಕಣ್ಣಿಗೆ ಬಿದ್ದು 'ಎಳನೀರು ಎಳನೀರು' ಎಂದು ತೊದಲಿದ್ದನ್ನೂ, ತಕ್ಷಣವೇ ಮನೆಯವರು ಎಳನೀರು ಕಿತ್ತು ಕೆತ್ತಿ ಕೊಟ್ಟ ನಂತರವೇ ಇವರು ಎದ್ದು ಕೂತದ್ದನ್ನು ಶಾಮಣ್ಣ ನಾವು ಕುಪ್ಪಳ್ಳಿ ಕಡೆ ಪ್ರಯಾಣ ಮಾಡುವಾಗ ಅವರು ಬಿದ್ದ ಜಾಗ ಬಂದಾಗಲೆಲ್ಲಾ ನೆನಪಿಸುತ್ತಾ ನಮ್ಮನ್ನು ರಂಜಿಸುತ್ತಿರುತ್ತಾರೆ! ಅದೇನೇ ಇರಲಿ, ನನ್ನ ಸಮಾಜವಾದಿ ಗೆಳೆಯರು ನಂಜುಂಡಸ್ವಾಮಿಯವರ ಹಿಂದೆ ರೈತ ಸಂಘ ಕಟ್ಟಲು ಹೊರಟ ನಂತರ ನಾನು ಸಮಾಜವಾದಿ ಸಂಘಟನೆಯ ಆಸೆ ಕೈಬಿಟ್ಟು-ಹಾಸನದಲ್ಲಿ ನಡೆಸಿದ ಒಂದೆರಡು ಸಮಾಜವಾದಿ ಅಧ್ಯಯನ ಶಿಬಿರಗಳ ಹೊರತಾಗಿ-ಸಮಾಜವಾದಿ ಬರವಣಿಗೆಯಲ್ಲಷ್ಟೇ ತೊಡಗಿಸಿಕೊಂಡೆ. ಅದೇ ಹೊತ್ತಿನಲ್ಲಿ, ಸಮಾಜವಾದಿ ಸ್ಫೂರ್ತಿಯಿಂದಲೇ ಆರಂಭವಾಗಿ, ಕೆಲಸ ಮಾಡುತ್ತಿದ್ದಂತೆ ತೋರುವ ಮೂಲಕ ನನ್ನ ಆಸಕ್ತಿ ಕೆರಳಿಸಿದ್ದ ದಲಿತ ಸಂಘರ್ಷ ಸಮಿತಿಯ ಜೊತೆಗೇ, ರೈತ ಸಂಘದ ಬೆಳವಣಿಗೆಯನ್ನೂ ಕುತೂಹಲದಿಂದ ಗಮನಿಸಲಾರಂಭಿಸಿದೆ.

ಆದರೆ ಈ ಹೊತ್ತಿಗೆ ನಾನು ಕೆಲಸ ಮಾಡುತ್ತಿದ್ದ 'ಲಂಕೇಶ್ ಪತ್ರಿಕೆ'ಯ ಸಂಪಾದಕರಾದ ಲಂಕೇಶರಿಗೂ ನಂಜುಂಡಸ್ವಾಮಿಯವರಿಗೂ ಭಿನ್ನಾಭಿಪ್ರಾಯಗಳುಂಟಾಗಿ ಅದು ವೈಯುಕ್ತಿಕ ಹಗೆತನದ ಮಟ್ಟ ತಲುಪಿತ್ತು. ಇದಕ್ಕೆ ಅವರಿಬ್ಬರ ವ್ಯಕ್ತಿತ್ವಗಳ ನಡುವಣ ವ್ಯತ್ಯಾಸಗಳೇ ಮುಖ್ಯ ಕಾರಣವಾಗಿತ್ತೆಂದು ನನ್ನ ಭಾವನೆ.

ನಂಜುಂಡಸ್ವಾಮಿ ತಮ್ಮ ರಾಜಕೀಯ ನಂಬಿಕೆಗಳಿಗೆ ಕಟುವಾಗಿ ಬದ್ಧರಾಗಿದ್ದ 'ಆಕ್ಟಿವಿಸ್ಟ್' ಆಗಿದ್ದರೆ, ಲಂಕೇಶ್ ಎಲ್ಲ ನಂಬಿಕೆಗಳನ್ನೂ ಪ್ರಶ್ನಿಸುತ್ತಿದ್ದ ಮತ್ತು ಅನುಮಾನದಿಂದ ನೋಡುತ್ತಿದ್ದ ನಿರಂತರ ಅನ್ವೇಷಣೆಯ ಪ್ರವೃತ್ತಿಯ ಲೇಖಕರಾಗಿದ್ದರು. (ಕೆಲವೊಮ್ಮೆ ಇದು, ವೈಯುಕ್ತಿಕ ದ್ವೇಷಾಸೂಯೆಗಳ ಕಾರಣದಿಂದ ಅನ್ವೇಷಕ ಪ್ರವೃತ್ತಿಗಿಂತ ಚಾರಿತ್ರ್ಯ ಹನನದ ಉದ್ದೇಶಕ್ಕೂ ಬಳಸಲ್ಪಡುತ್ತಿತ್ತು!) ಅದೇನೇ ಇರಲಿ, ಆಗ ನಂಜುಂಡಸ್ವಾಮಿಯವರ ತಾತ್ವಿಕ ಮಾರ್ಗದರ್ಶನದಲ್ಲಿ ರೈತ ಸಂಘ ರಾಜ್ಯಾದ್ಯಂತ ವ್ಯಾಪಿಸುತ್ತಿದ್ದ ಶರ ವೇಗದಲ್ಲೇ 'ಲಂಕೇಶ್ ಪತ್ರಿಕೆ'ಯ ಜನಪ್ರಿಯತೆಯೂ ವ್ಯಾಪಿಸತೊಡಗಿತ್ತು. ಈ ಸಂದರ್ಭದಲ್ಲಿ 'ಲಂಕೇಶ್ ಪತ್ರಿಕೆ' ರೈತಸಂಘದ ಚಟುವಟಿಕೆಗಳಿಗೆ ಬೆಂಬಲವಾಗಿ, ಪೂರಕವಾಗಿ ಕೆಲಸ ಮಾಡಬೇಕೆಂಬುದು ನಂಜುಂಡಸ್ವಾಮಿಯವರ ನಿರೀಕ್ಷೆಯಾಗಿತ್ತು. ಆದರೆ ಲಂಕೇಶ್ ಅದರ ವಿರುದ್ಧವಲ್ಲದಿದ್ದರೂ, ಅದರ ವಿಮರ್ಶಕರಾಗಿ ಅನೇಕ ಬಾರಿ ಅದರ ಬೆಳವಣಿಗೆಯ ರೀತಿ ನೀತಿಗಳ ಬಗ್ಗೆ ಕಟುವಾಗಿ ಬರೆಯುತ್ತಿದ್ದರು. ಪರಿಸ್ಥಿತಿ ಹೀಗಿದ್ದ ಸಂದರ್ಭದಲ್ಲಿ ಬಹುಶಃ ಸುಂದರೇಶ್ ಅವರ ಕರೆಯ ಮೇರೆಗೆ, ಲಂಕೇಶ್ ರೈತಸಂಘ ಶಿವಮೊಗ್ಗ ಜಿಲ್ಲೆಯ ಹನುಮಂತಾಪುರ ಎಂಬಲ್ಲಿ ಏರ್ಪಡಿಸಿದ್ದ ಅಧ್ಯಯನ ಶಿಬಿರಕ್ಕೆ ಹೋಗಿ ವರದಿ ಮಾಡುವಂತೆ ನನಗೆ ತಿಳಿಸಿದರು. ಈ ವರದಿಯಲ್ಲಿ ರುದ್ರಪ್ಪ, ನಂಜುಂಡಸ್ವಾಮಿ ಮತ್ತು ಸುಂದರೇಶರ ಸಂದರ್ಶನಗಳೂ ಇರಬೇಕೆಂಬುದು ಲಂಕೇಶರ ಇಚ್ಛೆಯಾಗಿತ್ತು.

ಅದರಂತೆ ನಾನು ಹನುಮಂತಾಪುರದ ಅಧ್ಯಯನ ಶಿಬಿರಕ್ಕೆ ಹೋದೆ. ಅಲ್ಲಿ ನೋಡಿದರೆ ಅಧ್ಯಯನ ಶಿಬಿರದ ವಾತಾವರಣಕ್ಕೆ ಬದಲಾಗಿ ಬೃಹತ್ ಸಭೆಯೊಂದರ ಕೋಲಾಹಲಪೂರ್ಣವಾದ ವಾತಾವರಣವಿದ್ದಿತು. ರೈತ ನಾಯಕರಿಂದ ಅಧ್ಯಯನಪೂರ್ಣ ಭಾಷಣಗಳಿಗಿಂತ ಅಲ್ಲಿನ ವಾತಾವರಣಕ್ಕೆ ತಕ್ಕಂತೆ ಅನ್ಯಾಯಗಳ ವಿರುದ್ಧದ ಪ್ರಚೋದನಾತ್ಮಕ ಭಾಷಣ-ಘೋಷಣೆಗಳೇ ಮೊಳಗಿದವು. ನಾನು ಎಲ್ಲ ಟಿಪ್ಪಣಿ ಮಾಡಿಕೊಂಡು, ರೈತ ನಾಯಕರ ಸಂದರ್ಶನಗಳಿಗಾಗಿ ಸುಂದರೇಶರ ಸಹಾಯ ಕೇಳಿದೆ. ಅವರು ಅಂದು ಸಾಧ್ಯವಿಲ್ಲವೆಂದೂ, ಮಾರನೆಯ ಬೆಳಿಗ್ಗೆ ಶಿವಮೊಗ್ಗದ ರುದ್ರಪ್ಪನವರ ಮನೆಗೆ ಬಂದಲ್ಲಿ ಎಲ್ಲ ಸಂದರ್ಶನಗಳನ್ನೂ ಅಲ್ಲೇ ಮಾಡಬಹುದೆಂದೂ ತಿಳಿಸಿದರು. ಅದರಂತೆ ನಾನು ಮಾರನೆಯ ಬೆಳಿಗ್ಗೆ ರುದ್ರಪ್ಪನವರ ಮನೆಗೆ ಹೋದರೆ, ಅಲ್ಲಿ ದೊಡ್ಡ ಜನಜಂಗುಳಿಯೇ ನೆರೆದಿತ್ತು. ಪರಿಸ್ಥಿತಿ ಅರಿತ ಸುಂದರೇಶ್, ಇನ್ನರ್ಧ ತಾಸು ಬಿಟ್ಟುಕೊಂಡು (ಈಗ 'ಮಥುರಾ ಪ್ಯಾರಾಡೈಸ್' ಹೋಟೆಲ್ ಇರುವ ಜಾಗದಲ್ಲಿದ್ದ) ವಾಸವಿ ಹೋಟೆಲ್‌ಗೆ ಬರಲು ಹೇಳಿದರು. ನಾನು ಅವರ ಸೂಚನೆಯಂತೆ ಅಲ್ಲಿಗೆ ಹೋದಾಗ ಸುಂದರೇಶ್ ಅಲ್ಲಿ ಹಾಜರಿದ್ದು ಎಲ್ಲ ಸಜ್ಜನಿಕೆಯೊಂದಿಗೆ ನನಗೆ ಉಪಹಾರ ತರಿಸಿ ಸತ್ಕರಿಸಿದರು. ನನ್ನ ಮತ್ತು ಲಂಕೇಶರ ಯೋಗಕ್ಷೇಮ ವಿಚಾರಿಸಿ, ರೈತಸಂಘದ ಬಗ್ಗೆ ಕಟುವಾಗಿ ಬರೆಯದಂತೆ ನಾನು ಲಂಕೇಶ್‌ಗೆ ಹೇಳಲು ಮನವಿ ಮಾಡಿದರು!

ನಾನಿನ್ನೂ ತಿಂಡಿ ಪೂರ್ತಿ ತಿಂದಿರಲಿಲ್ಲ, ಅಷ್ಟರಲ್ಲಿ ಅಲ್ಲಿಗೆ ನಂಜುಂಡಸ್ವಾಮಿಯವರ ಆಗಮನವಾಯಿತು. ನನ್ನನ್ನು ನೋಡುತ್ತಿದ್ದಂತೆ ಅವರ ಸಿಟ್ಟು ನೆತ್ತಿಗೇರಿತು. ಅವರು

ಒಮ್ಮೆಗೇ, 'ಯಾರ್ರೀ ಒಳಗೆ ಸೇರಿಸಿದ್ದು ಇವರನ್ನ... ಮೊದಲು ಇವರನ್ನು ಹೊರಗೆ ಹಾಕ್ರಿ... ಲಂಕೇಶನ ಏಜೆಂಟರಿಗೆ ಇಲ್ಲಿ ಜಾಗವಿಲ್ಲ...' ಎಂದು ಕೂಗಾಡುತ್ತಾ ಲಂಕೇಶ್ ಮತ್ತು ನನ್ನ ಮೇಲೆ ಬೈಗುಳಗಳ ಸುರಿಮಳೆಗೈದರು. ಅಲ್ಲಿದ್ದ ರೈತಸಂಘದ ಕಾರ್ಯಕರ್ತರೂ ಅವರಿಗೆ ಬೆಂಬಲವಾಗಿ, ನನ್ನನ್ನು ಕೊಠಡಿಯಿಂದ ಹೊರಹೋಗುವಂತೆ ದೂಷಿಸತೊಡಗಿದರು. ಆಶ್ಚರ್ಯವೆಂದರೆ ಅಲ್ಲಿದ್ದ ಹಾಸನದ ನನ್ನ ಹಳೆಯ ಸಮಾಜವಾದಿ ಗೆಳೆಯರೂ ಮೌನವಾಗಿ ಇದನ್ನೆಲ್ಲ ನೋಡುತ್ತಾ ನಿಂತರೇ ಹೊರತು, ಪರಿಸ್ಥಿತಿಯನ್ನು ತಿಳಿಗೊಳಿಸುವ ಯತ್ನವನ್ನೇ ಮಾಡಲಿಲ್ಲ. ಎಲ್ಲ ಅಷ್ಟರ ಮಟ್ಟಿಗೆ ಮತ್ತು ಅಷ್ಟು ಬೇಗ ನಂಜುಂಡಸ್ವಾಮಿಯವರ ಸರ್ವಾಧಿಕಾರಕ್ಕೆ ಶರಣಾಗಿದ್ದರು. (ನಂತರದ ಒಂದೆರಡು ವರ್ಷಗಳಲ್ಲೇ ಇವರೂ ಅವರ ಸರ್ವಾಧಿಕಾರಕ್ಕೆ ಬಲಿಯಾಗಿ, ನಂಜುಂಡಸ್ವಾಮಿಯವರ ಪರಮ ವಿರೋಧಿಗಳಾದರು ಎಂಬುದು ಬೇರೆ ವಿಚಾರ.)

ಆಗ ಮಧ್ಯೆ ಪ್ರವೇಶಿದವರು ಸುಂದರೇಶ್. ನನ್ನನ್ನು ಸುತ್ತುವರೆದಿದ್ದ ಕಾರ್ಯಕರ್ತರನ್ನು ದೂರ ಸರಿಸಿ ಅವರಿಗೆ ನನ್ನನ್ನು ಪರಿಚಯಿಸುತ್ತಾ ನನ್ನ ಬಗ್ಗೆ ಒಂದೆರೆಡು ಒಳ್ಳೆಯ ಮಾತುಗಳನ್ನಾಡಿದ ಸುಂದರೇಶ್, ಲಂಕೇಶ್–ನಂಜುಂಡಸ್ವಾಮಿಯವರ ಜಗಳದಲ್ಲಿ ನನ್ನನ್ನು ಬಲಿ ಮಾಡಬಾರದೆಂದು ಅವರಿಗೆ ಬುದ್ಧಿ ಹೇಳಿದರು. ಇಷ್ಟಾದ ನಂತರವೂ ನಂಜುಂಡಸ್ವಾಮಿಯವರು ನನ್ನನ್ನು ಹೊರ ಹಾಕುವಂತೆ ಕೂಗಾಡತೊಡಗಿದಾಗ, ಸುಂದರೇಶ್ ನನ್ನನ್ನು ಅಲ್ಲಿಂದ ಇನ್ನೊಂದು ಕೊಠಡಿಗೆ ಕರೆದುಕೊಂಡು ಹೋಗಿ ಮತ್ತೆ ಉಪಹಾರಕ್ಕಾಗಿ ಆದೇಶಿಸಿದರಾದರೂ, ನಾನು ಅಲ್ಲಿ ತಿಂಡಿ ತಿನ್ನಲು ನಿರಾಕರಿಸಿದೆ. ಆದರೆ ಈ ಎಲ್ಲ ಗಲಾಟೆಗಾಗಿ ಕ್ಷಮೆ ಕೋರಿದ ಸುಂದರೇಶ್, ತಾವು ವೈಯುಕ್ತಿಕವಾಗಿ ಉಪಹಾರ ತರಿಸುತ್ತಿರುವುದಾಗಿಯೂ, ಅದನ್ನು ತಿಂದು ಹೋದರೆ ಮಾತ್ರ ತಮಗೆ ಸಮಾಧಾನವಾಗುವುದಾಗಿ ಹೇಳಿದಾಗ ನಾನು ಕಷ್ಟಪಟ್ಟುಕೊಂಡೇ ಆ ಉಪಾಹಾರವನ್ನು ಸ್ವೀಕರಿಸಬೇಕಾಯಿತು.

ಈ ಸಂದರ್ಭದಲ್ಲಿ ರೈತಸಂಘದ ಸ್ಥಿತಿ–ಗತಿಗಳ ಕುರಿತಂತೆ ಹಲವು ಆಲೋಚನೆಗಳು ನನ್ನ ತಲೆಯಲ್ಲಿ ಹಾದುಹೋದವು. ಇಡೀ ರೈತಸಂಘ ನಂಜುಂಡಸ್ವಾಮಿಯವರ ವಾಗ್ವೈಖರಿಗೆ ಮರುಳಾಗಿ ತನ್ನ ಎಲ್ಲ ವಿವೇಕ ಕಳೆದುಕೊಳ್ಳುತ್ತಿದೆ ಎನಿಸಿ ಜಿಗುಪ್ಸೆಯಾಯಿತು. ಎಲ್ಲಕ್ಕಿಂತ ಹೆಚ್ಚಾಗಿ ಸುಂದರೇಶ್ ಅವರಂತಹವರು ತಮ್ಮ ಸಜ್ಜನಿಕೆಯನ್ನು ನಂಜುಂಡಸ್ವಾಮಿಯವರ ವ್ಯಕ್ತಿತ್ವದ ಬಳಿ ಒತ್ತೆ ಇಟ್ಟಂತೆ ಕಾಣುತ್ತಿರುವುದೇಕೆ ಎಂಬ ಪ್ರಶ್ನೆ ನನ್ನನ್ನು ಕಾಡತೊಡಗಿತು. ಏಕೆಂದರೆ, ಈ ಗಲಾಟೆಯಲ್ಲಿ ಸುಂದರೇಶ್ ಒಮ್ಮೆಯೂ ನಂಜುಂಡಸ್ವಾಮಿಯವರಿಗೆ, ನೀವು ಮಾಡುತ್ತಿರುವುದು ಸರಿಯಲ್ಲ, ಇದು ನಾಗರಿಕ ವರ್ತನೆಯಲ್ಲ ಎಂದು ಹೇಳುವ ಪ್ರಯತ್ನವನ್ನೇ ಮಾಡಲಿಲ್ಲ. ಸುಂದರೇಶ್ ಅವರ ಸಜ್ಜನಿಕೆಯಲ್ಲಿ ಅಂತರ್ಗತವಾಗಿದ್ದ ಈ ದೌರ್ಬಲ್ಯವೇ ಮುಂದಿನ ದಿನಗಳಲ್ಲಿ ರೈತಸಂಘದ ವಿಚ್ಛೇದ್ರೀಕರಣಕ್ಕೆ ಕಾರಣವಾಯಿತೇನೋ ಎಂದು ಹಲವಾರು ಬಾರಿ ನನಗೆ ಅನ್ನಿಸಿದೆ.

ಇದಾದ ನಂತರ ನಾನು ಸುಂದರೇಶರನ್ನು ಭೇಟಿಯಾದದ್ದು ಕೆಲವು ತಿಂಗಳುಗಳ ನಂತರ ದೆಹಲಿಯಲ್ಲಿ. ಆ ಹೊತ್ತಿಗೆ ನಾನು 'ಲಂಕೇಶ್ ಪತ್ರಿಕೆ'ಯ ಆವರಣದಲ್ಲಿ ಬಾಳುವೆ ಮಾಡಲಾರದೆ, ದೆಹಲಿಗೆ ಹೋಗಿ ಆಕಾಶವಾಣಿಯ ಕೆಲಸಕ್ಕೆ ಮತ್ತೆ ಸೇರಿಕೊಂಡಿದ್ದೆ. ರೈತ ಸಂಘಟನೆಯ ಕೆಲಸದ ಮೇಲೆ'(ಬಹುಶಃ ಕೃಷಿ ಮಂತ್ರಿಯನ್ನು ಭೇಟಿಯಾಗಲು) ಸುಂದರೇಶ್ ಅವರು ನಂಜುಂಡಸ್ವಾಮಿಯವರ ಜೊತೆ ದೆಹಲಿಗೆ ಬಂದರು. ನಾನು 'ಲಂಕೇಶ್ ಪತ್ರಿಕೆ'ಯನ್ನು ಬಿಟ್ಟಿದ್ದುದರ ಕಾರಣದಿಂದಲೋ ಏನೋ ಸಂತುಷ್ಟರಾಗಿದ್ದ ನಂಜುಂಡಸ್ವಾಮಿ ನನಗೆ ದೂರವಾಣಿ ಕರೆ ಮಾಡಿ, ತಾವು ಉಳಿದುಕೊಂಡಿದ್ದ 'ಕರ್ನಾಟಕ ಭವನ'ದಲ್ಲಿ ತಮ್ಮನ್ನು ಭೇಟಿ ಮಾಡಲು ಸಾಧ್ಯವೇ ಎಂದು ಕೇಳಿದರು. ಹೋಗಲೋ ಬೇಡವೋ ಎಂಬ ದ್ವಂದ್ವದಲ್ಲಿದ್ದ ನಾನು ಕೊನೆಗೆ ಸುಂದರೇಶರ ಮನವಿಗೆ ಮಣಿದು ಅಲ್ಲಿಗೆ ಹೋಗಬೇಕಾಯಿತು. ಆಶ್ಚರ್ಯವೆಂದರೆ, ನಂಜುಂಡಸ್ವಾಮಿ ಮತ್ತು ನನ್ನ ಮುಖಾಮುಖಿಯ ಬಗ್ಗೆ ಆತಂಕಿತರಾಗಿದ್ದಂತೆ ಕಂಡ ಸುಂದರೇಶರೇ ಬೆಚ್ಚಿ ಬೀಳುವಂತೆ ನಂಜುಂಡಸ್ವಾಮಿಯವರು ನನ್ನನ್ನು 'ಸಮತಾ ಸಮಾವೇಶ' ಪೂರ್ವದ ಪ್ರೀತಿ–ವಿಶ್ವಾಸಗಳೊಂದಿಗೆ ಸ್ವಾಗತಿಸಿದರು!*

ನಾನು ರೈತಸಂಘದ ಈ ನಾಯಕರು ಆಯೋಜಿಸಿಕೊಂಡು ಬಂದಿದ್ದ ವಿವಿಧ ಭೇಟಿಗಳು ಸುಗಮವಾಗಿ ನಡೆಯುವಂತೆ ನನ್ನ ಮಿತಿಯಲ್ಲಿ ಅವರಿಗೆ ನೆರವಾದೆ. ನಂತರ ಇಬ್ಬರಿಗೂ ದೆಹಲಿ ದರ್ಶನ ಮಾಡಿಸಿ, ದೆಹಲಿಯ ಪೇಟೆಗಳಲ್ಲಿ ತಿರುಗಿಸಿಕೊಂಡು ಬಂದೆ. ನಂಜುಂಡಸ್ವಾಮಿಯವರು ಶ್ರೀಮಂತರ ಪೇಟೆ ಎನ್ನಿಸಿಕೊಂಡಿದ್ದ ಜನಪಥ್‌ನ ಅಂಗಡಿಗಳಲ್ಲಿ ತಮ್ಮ ಶ್ರೀಮತಿಯವರಿಗೆಂದು ಕೆಲವು ಅಪರೂಪದ ಮತ್ತು ಬೆಲೆ ಬಾಳುವ ಕಲಾತ್ಮಕ ವಸ್ತುಗಳನ್ನೂ, (ಕುಸುರಿ ಮಾಡಿದ ಹಿತ್ತಾಳೆಯ) ಲೋಲಾಕುಗಳು, ಸರ, ಬಳೆ ಇತ್ಯಾದಿ ಆಭರಣಗಳನ್ನೂ ಖರೀದಿಸಿದರು. ಸುಂದರೇಶ್ ಇವಾವುಗಳ ಗೋಜಿಗೂ ಹೋಗದೆ ಬೀದಿ ಬದಿಯ ವೈವಿಧ್ಯಮಯವಾದ ಉತ್ತರ ಭಾರತೀಯ ತಿಂಡಿ–ತೀರ್ಥಗಳನ್ನು ಕುತೂಹಲದಿಂದ ನೋಡುತ್ತಾ, ಆಯ್ದ ಕೆಲವನ್ನು ಕೊಂಡು, ನಮಗೂ ಹಂಚಿ ತಿಂದು ಸಂತೋಷಪಟ್ಟರು. ಅಂದು ರಾತ್ರಿ ಅವರಿಗೆ ಖ್ಯಾತ ಛಾಯಾಚಿತ್ರಗ್ರಾಹಕರಾದ ಟಿ.ಎಸ್.ಸತ್ಯನ್ ಕೆಲವೇ ದಿನಗಳ ಹಿಂದೆ ನನಗೆ ಪರಿಚಯಿಸಿದ್ದ ರೆಸ್ಟೋರೆಂಟ್‌ವೊಂದರಲ್ಲಿ ಬಹು ರುಚಿಕರವಾದ 'ಬಟರ್ ಚಿಕನ್' ಊಟದ ಆತಿಥ್ಯ ನೀಡಿದ ನೆನಪು.

ಮಾರನೆಯ ದಿನ ನಮಗೆಲ್ಲ ಕೆಟ್ಟ ಸುದ್ದಿ ಕಾದಿತ್ತು. ದೆಹಲಿ ಆಕಾಶವಾಣಿಯಿಂದ ಕನ್ನಡ ಸುದ್ದಿ ಓದುವ ಕಾಯಕದಲ್ಲಿದ್ದ ನಾನು ಮಧ್ಯಾಹ್ನ ಕೆಲಸಕ್ಕೆ ಹೋದಾಗ, ಹಾಸನದ ದುದ್ದದ ಬಳಿ ರೈತರ ಪ್ರತಿಭಟನಾ ಸಭೆಯ ಮೇಲೆ ಪೋಲೀಸರು ಗೋಲೀಬಾರ್ ಮಾಡಿ ನಾಲ್ವರು ರೈತರು ಸತ್ತ ಸುದ್ದಿ ಬಂದಿತ್ತು. ಅಂದು ಅದನ್ನು ಕರ್ನಾಟಕಕ್ಕೆ

* ಈ ಹಿಂದಿನ ಲೇಖನದಲ್ಲಿ ಇದರ ಹಿನ್ನಲೆಯ ವಿವರಳಿವೆ.

ಬಿತ್ತರಿಸುವ ಹೊಣೆ ನನ್ನದೇ ಆಗಿತ್ತು. ಕೆಲಸ ಮುಗಿಸಿ 'ಪ್ರಸಾರ ಭವನ'ದ ಹೊರಗೆ ಬಂದು, ಮೊದಲೇ ನಿಗದಿಯಾಗಿದ್ದಂತೆ ನನಗಾಗಿ ಕಾಯುತ್ತಿದ್ದ ನಂಜುಂಡಸ್ವಾಮಿ ಮತ್ತು ಸುಂದರೇಶ್ ಅವರಿಗೆ ಈ ಸುದ್ದಿಯನ್ನು ಆತಂಕದಿಂದಲೇ ತಿಳಿಸಿದೆ. ನಂಜುಂಡಸ್ವಾಮಿಯವರು ಒಂದು ಕ್ಷಣ ಸ್ತಬ್ಧರಾಗಿ ನಿಂತರೆ, ಸುಂದರೇಶ್ ತಾವು ನಿಂತಿದ್ದ ಪಾರ್ಲಿಮೆಂಟ್ ಬೀದಿಯ ಗಾಂಭೀರ್ಯವನ್ನೂ ಲೆಕ್ಕಿಸದೆ 'ಓ' ಎಂದು ಜೋರಾಗಿ ಅಳಲಾರಂಭಿಸಿದರು! ನಾನು ಗಾಬರಿಯಾಗಿ, ನಂಜುಂಡಸ್ವಾಮಿಯವರತ್ತ ನೋಡಿದೆ. ನಂತರ ಅವರ ಸೂಚನೆಯ ಮೇರೆಗೆ ಅವರು ತಂದಿದ್ದ ಟ್ಯಾಕ್ಸಿಯಲ್ಲಿಯೇ ಎಲ್ಲರೂ, ಕರ್ನಾಟಕದ ಭವನದತ್ತ ತೆರೆಳಿದೆವು.

ಅರ್ಧ ತಾಸಿನ ಆ ಪ್ರಯಾಣದುದ್ದಕ್ಕೂ ಸುಂದರೇಶ್ ಮಗುವಿನಂತೆ ಬಿಕ್ಕಿ ಬಿಕ್ಕಿ ಅಳುತ್ತಿದ್ದರು. ಮಧ್ಯೆ ಮಧ್ಯೆ ಸಾವರಿಸಿಕೊಂಡು, ಗೋಲೀಬಾರಿಗೆ ಕಾರಣವೇನು, ಸತ್ತವರು ಯಾರು ಎಂದು ಕೇಳುತ್ತಲೇ ಇದ್ದರು. ನನಗೆ ಗೊತ್ತಿದ್ದರೆ ತಾನೇ ಹೇಳುವುದು? ಅಷ್ಟು ವಯಸ್ಸಿನ ಮನುಷ್ಯ ಹೀಗೆ ಮಗುವಿನಂತೆ ಅಳುತ್ತಿರುವುದನ್ನು ನೋಡಿ ನನಗೆ ಆಶ್ಚರ್ಯ. ನನ್ನ ಈ ಆಶ್ಚರ್ಯದ ನೋಟಕ್ಕೆ ಉತ್ತರಿಸುವಂತೆ ನಂಜುಂಡಸ್ವಾಮಿಯವರು, 'ಇವರು ಸ್ವಲ್ಪ ಹಾಗೇ!' ಎಂದರು. ಗೋಲಿಬಾರ್ ನಂಜುಂಡಸ್ವಾಮಿಯವರಲ್ಲಿ ಕ್ರೋಧ ಮತ್ತು ಛಲಗಳನ್ನು ಹುಟ್ಟಿಸಿದಂತೆ ತೋರಿದರೆ, ಸುಂದರೇಶ್ ಅವರಲ್ಲಿ ಅದು ದುಃಖ ಮತ್ತು ಆತಂಕಗಳನ್ನು ಹುಟ್ಟಿಸಿದಂತಿತ್ತು. ಕರ್ನಾಟಕ ಭವನ ತಲುಪುತ್ತಿದ್ದಂತೆ ಅವರು ಬೆಂಗಳೂರು ಮತ್ತು ಹಾಸನದ ತಮ್ಮ ಕಾರ್ಯಕರ್ತರೊಂದಿಗೆ ದೂರವಾಣಿ ಸಂಪರ್ಕ ಸಾಧಿಸಿ ಎಲ್ಲ ವಿವರ ಪಡೆದರು. ಅಷ್ಟು ಹೊತ್ತಿಗೆ ಸುಂದರೇಶ್ ಅವರ ಅಳು ಮತ್ತು ದುಃಖಗಳು ತಹಬಂದಿಗೆ ಬಂದಂತಿತ್ತು. ಅವರು ತಮ್ಮ ದೆಹಲಿ ಕಾರ್ಯಕ್ರಮವನ್ನು ಬಹುಶಃ ಒಂದು ದಿನದ ಮಟ್ಟಿಗೆ ಮೊಟಕುಗೊಳಿಸಿ ಮಾರನೆಯ ಬೆಳಿಗ್ಗೆ ಬೆಂಗಳೂರಿಗೆ ಪ್ರಯಾಣ ಬೆಳೆಸಿದರು.

ಇದಾದ ಕೆಲವೇ ತಿಂಗಳುಗಳಲ್ಲಿ–೧೯೮೨ರ ಆರಂಭಕ್ಕೆ–ನಾನು ನನ್ನ ಕೆಲಸದ ಶ್ರೇಣಿ ಬದಲಾಯಿಸಿಕೊಂಡ ಕಾರಣದಿಂದಾಗಿ, ಭದ್ರಾವತಿ ಆಕಾಶವಾಣಿ ಕೇಂದ್ರಕ್ಕೆ ಕಾರ್ಯಕ್ರಮ ನಿರ್ವಾಹಕನಾಗಿ ಕೆಲಸ ಮಾಡಲು ಬಂದೆ. ಅಲ್ಲಿದ್ದ ಮೂರ್ನಾಲ್ಕು ವರ್ಷಗಳಲ್ಲಿ ಅನೇಕ ಬಾರಿ ರೈತ ನಾಯಕರ ಭಾಷಣಗಳನ್ನು ಕೇಳಿದ್ದೇನೆ. ಇವುಗಳಲ್ಲಿ ಒಂದೆರಡು ಬಾರಿ ಸುಂದರೇಶ್ ಅವರು ರೈತರ ಮೇಲಿನ ಸರ್ಕಾರದ ದೌರ್ಜನ್ಯಗಳ ಬಗ್ಗೆ ಭಾವುಕರಾಗಿ ಮಾತನಾಡುತ್ತಾ, 'ದೆಹಲಿಯಲ್ಲಿ ನಾಗಭೂಷಣ್ ದುದ್ದದ ಗೋಲೀಬಾರ್ ಸುದ್ದಿ ಹೇಳಿದಾಗ ನನಗೆ ದುಃಖ ಉಮ್ಮಳಿಸಿಕೊಂಡು ಬಂತು...' ಎಂದು ಹೇಳುತ್ತಾ ಗದ್ಗದಿತರಾದುದನ್ನು ನೋಡಿದ್ದೇನೆ. ಆಗೆಲ್ಲ, ಸುಂದರೇಶ್ ಓರ್ವ ಮುಗ್ಧ, ನಿರ್ಮಲ ತಾಯಿ ಹೃದಯದ ಮನುಷ್ಯ ಎನ್ನಿಸಿದೆ. ಇವರು ಹೇಗಾದರೂ (ಬಹಿರಂಗಕ್ಕಾದರೂ) ಥಣ್ಣನೆಯ, ಅವಿಚಲಿತ ಮನಸ್ಸಿನ ಮನುಷ್ಯರಂತೆ ಕಾಣುವ ನಂಜುಂಡಸ್ವಾಮಿಯವರೊಂದಿಗೆ ಏಗಿ ರೈತಸಂಘ ಕಟ್ಟಿದರು ಎಂದು ಆಶ್ಚರ್ಯವಾಗುತ್ತದೆ.

ಈಗ ಎಷ್ಟೋ ವರ್ಷಗಳ ನಂತರ, ಗಂಡು ಗಂಡಾದ ರೈತಸಂಘದ ಮಧ್ಯೆ ಈ ಹೆಂಗರುಳಿನ ಸುಂದರೇಶ್ ಬಾಳಲಾಗದ ಒತ್ತಡಕ್ಕೆ ಸಿಕ್ಕಿ ಅಸು ನೀಗಿದರೋ ಎಂಬ ಅನುಮಾನವೂ ಉಂಟಾಗುತ್ತದೆ.

ಆಧುನಿಕ ಕರ್ನಾಟಕ ಕಂಡ ಅತಿ ದೊಡ್ಡ ಮತ್ತು ಬಿರುಸಾದ ಹಾಗೂ ಅತಿ ಹೆಚ್ಚಿನ ಭರವಸೆ ಹುಟ್ಟಿಸಿದ್ದ ಚಳುವಳಿಯ ನೇತೃತ್ವ ವಹಿಸಿದ್ದ ರೈತ ಸಂಘವನ್ನು ಕಟ್ಟಿದ ಇಡೀ ಕೀರ್ತಿಯನ್ನು, ರೈತಸಂಘದ ಸಂಪರ್ಕವೇ ಇಲ್ಲದಿದ್ದ ಮತ್ತು ನಂಜುಂಡಸ್ವಾಮಿಯವರೊಂದಿಗೆ ಒಡನಾಡಿಯೇ ಗೊತ್ತಿಲ್ಲದ ಇತ್ತೀಚಿನ ಕೆಲವು ವಿಶ್ಲೇಷಣಾಕಾರರು ನಂಜುಂಡಸ್ವಾಮಿಯವರ ತಲೆಗೆ ಕಟ್ಟುವುದನ್ನೂ, ಅವರನ್ನೋರ್ವ ಆದರ್ಶ ನಾಯಕನಂತೆ ಚಿತ್ರಿಸುವುದನ್ನೂ ನಾನು ಗಮನಿಸಿದ್ದೇನೆ. ಆದರೆ ರೈತಸಂಘದ ಕಟ್ಟೋಣದ ಹಿಂದೆ ನಂಜುಂಡಸ್ವಾಮಿಯವರ ಪರಿಶ್ರಮದಷ್ಟೇ ಅನೇಕ ಸ್ಥಳೀಯ ನಾಯಕರ ಮತ್ತು ಕಾರ್ಯಕರ್ತರ ತ್ಯಾಗ-ಪರಿಶ್ರಮಗಳಿವೆ. ಕೆಲವರಂತೂ ಇದಕ್ಕಾಗಿ ತಮ್ಮ ಬಾಳನ್ನೇ ಮುಡಿಪಾಗಿಟ್ಟು ಸಂಪೂರ್ಣ ದಿಗಂಬರರಾದವರಿದ್ದಾರೆ. ಇನ್ನು ಕೆಲವರು ಸಕಾಲದಲ್ಲಿ ಎಚ್ಚೆತ್ತು ಬಾಳಿನಲ್ಲಿ ಚೇತರಿಸಿಕೊಂಡವರಿದ್ದಾರೆ. ಇವರೆಲ್ಲರ ಮಧ್ಯೆ ಸುಂದರೇಶ್‌ರ ನಾಯಕತ್ವ ಎದ್ದು ಕಾಣುವಂತಹದ್ದು. ಜನ ಸಂಘಟನೆಯಲ್ಲಿ ಕಾಣುತ್ತಿದ್ದ ಅವರ ಸಹನೆ-ಸಂಯಮ-ಪ್ರೀತಿ ಮತ್ತು ಮಾತೃ ಹೃದಯಗಳಿಲ್ಲದಿದ್ದರೆ ಬರೀ ರುದ್ರಪ್ಪನವರ ಹಿರಿತನದ ಘನತೆಯಾಗಲೀ, ನಂಜುಂಡಸ್ವಾಮಿಯವರ ತಾತ್ವಿಕ ತೀವ್ರತೆಯಾಗಲೀ ರೈತಸಂಘವನ್ನು ಆ ಮಟ್ಟಕ್ಕೆ ಕಟ್ಟಲಾಗುತ್ತಿರಲಿಲ್ಲ ಎಂದೇ ನನ್ನ ಭಾವನೆ.

ರೈತ ಸಂಘ ಮತ್ತು ದಲಿತ ಸಂಘಗಳನ್ನು ಒಗ್ಗೂಡಿಸಿ ಒಂದು ಹೊಸ ರಾಜಕೀಯ ಶಕ್ತಿ ರೂಪಿಸಲು ಎಂಭತ್ತರ ದಶಕದ ಮಧ್ಯ ಭಾಗದಲ್ಲಿ ನಾವು ಕೆಲವು ಸಮಾಜವಾದಿ ಒಲವಿನ ಗೆಳೆಯರು ಒಂದು ದೊಡ್ಡ ಪ್ರಯತ್ನ ಮಾಡಿದೆವು. ಇದರ ಅಂಗವಾಗಿ ನಾನು, ನಮ್ಮ ಉದ್ದೇಶದೊಂದಿಗೆ ಸಹಾನುಭೂತಿ ಹೊಂದಿದ್ದ ರೈತಸಂಘದ ಗೌರವಾನ್ವಿತ ನಾಯಕರಲ್ಲೊಬ್ಬರಾದ ಕಡಿದಾಳು ಶಾಮಣ್ಣನವವರೊಂದಿಗೆ 'ಸುದ್ದಿ ಸಂಗಾತಿ' ಪತ್ರಿಕೆಗಾಗಿ ಸಂದರ್ಶನವೊಂದನ್ನು ನಡೆಸಿದ್ದೆ. ಈ ಸಂದರ್ಶನವೇ ಕಾರಣವಾಗಿ (ಇದು ನನಗೆ ಗೊತ್ತಾದದ್ದು ಇತ್ತೀಚೆಗೆ!) ನಂಜುಂಡಸ್ವಾಮಿಯವರು ಯಾವುದೇ ಚರ್ಚೆಗೆ ಅವಕಾಶ ಕೊಡದೆ, ಛಲಬಿಡದ ತ್ರಿವಿಕ್ರಮನಂತೆ ಕೆಲವೇ ನಿಮಿಷಗಳಲ್ಲಿ ಕಡಿದಾಳು ಶಾಮಣ್ಣನವರನ್ನು ರಾಜ್ಯಸಮಿತಿಯಿಂದ ಮೂರು ವರ್ಷಗಳ ಕಾಲ ಹೊರಹಾಕುವ ಪ್ರಕ್ರಿಯೆ ಮುಗಿಸಿದರು. ಆಗ ಶಾಮಣ್ಣನವರ ನಿಡುಗಾಲದ ಗೆಳೆಯ ಸುಂದರೇಶ್‌ಗೆ ಏನೂ ಅನಿಸಲಿಲ್ಲವೇ, ಅವರ ಪ್ರತಿಕ್ರಿಯೆ ಏನಾಗಿತ್ತು ಎಂದು ನಾನು ಇತ್ತೀಚೆಗೆ ಶಾಮಣ್ಣನವರನ್ನು ಕೇಳಿದೆ. ಅದಕ್ಕವರು, ಸುಂದರೇಶ್‌ಗೆ ಅದು ಇಷ್ಟವಿಲ್ಲದಿದ್ದರೂ, ಅವರು ಅದನ್ನು ಮೌನವಾಗಿ ಸಹಿಸಬೇಕಾಯಿತು ಎಂದರು. ಅಂತಹ ಹಿರಿಯ ನಾಯಕರಿಗೆ ಅಂತಹ ಅನಿವಾರ್ಯತೆ ಏನಿತ್ತು ಎಂದು ಅವರನ್ನು ಮತ್ತೆ ಪ್ರಶ್ನಿಸಿದಾಗ ಅವರು ಸಂದರ್ಭವನ್ನು ವಿವರಿಸಿದ್ದು ಹೀಗೆ: 'ಸಂಘದ ರಾಜ್ಯಸಮಿತಿಯ ಸಭೆಯೊಂದರಲ್ಲಿ ನಂಜುಂಡಸ್ವಾಮಿ ನನ್ನ ಅಮಾನತ್ತಿನ

ವಿಷಯವನ್ನು ಇದ್ದಕ್ಕಿದ್ದಂತೆ ಮಂಡಿಸಿದಾಗ, ಅವಾಕ್ಕಾದ ಇತರ ಸದಸ್ಯರು ಅದನ್ನು ವಿಷದವಾಗಿ ಚರ್ಚಿಸಿ ತೀರ್ಮಾನ ಕೈಗೊಳ್ಳೋಣ ಎಂದು ಎಷ್ಟು ಹೇಳಿದರೂ, ನಂಜುಂಡಸ್ವಾಮಿ ಅವರೆಲ್ಲರ ಬಾಯಿ ಮುಚ್ಚಿಸಿದ್ದು, 'ಹಾಗೋ... ಹಾಗಾದರೆ, ಈ ಸಂಘದಲ್ಲಿ ನಾನಿರಬೇಕು, ಇಲ್ಲಾ ಶಾಮಣ್ಣನಿರಬೇಕು.' ಎಂಬ ಅಂತಿಮ ಎಚ್ಚರಿಕೆಯೊಂದಿಗೆ! ಆಗ ಸುಂದರೇಶ್ ಏನಾದರೂ ನನ್ನ ಪರವಾಗಿ ಬಾಯಿ ಹಾಕಿದ್ದರೆ, ನಂಜುಂಡಸ್ವಾಮಿಯವರಿಂದ ಇನ್ನೊಂದು ಅಂತಿಮ ಎಚ್ಚರಿಕೆ ಉರುಳುತ್ತಿತ್ತು: 'ಹಾಗಾದರೆ ಈ ಸಂಘದಲ್ಲಿ ನಾನಿರಬೇಕು, ಇಲ್ಲಾ ಸುಂದರೇಶ್ ಇರಬೇಕು!'

ನಂಜುಂಡಸ್ವಾಮಿಯರ ಇಂತಹ 'ಅಂತಿಮ ಎಚ್ಚರಿಕೆ'ಗಳನ್ನು ಎದುರಿಸುವ ಅಥವಾ ಜೀರ್ಣಿಸಿಕೊಳ್ಳುವ ಶಕ್ತಿ ಸುಂದರೇಶ್‌ಗೆ ಇರಲಿಲ್ಲ. ಹಾಗೆ ನೋಡಿದರೆ ಆ ಶಕ್ತಿ ಅಧ್ಯಕ್ಷ ರುದ್ರಪ್ಪನವರೂ ಸೇರಿದಂತೆ ಆಗ ಸಂಘದ ಪದಾಧಿಕಾರಿಗಳಲ್ಲಿ ಯಾರಿಗೂ ಇರಲಿಲ್ಲ. ಏಕೆಂದರೆ ಆ ಹೊತ್ತಿಗೆ ರೈತಸಂಘ ಎಷ್ಟರಮಟ್ಟಿಗೆ ಬೃಹದಾಕಾರವಾಗಿ ಬೆಳೆದು ಒಟ್ಟಾರೆ ಸಮತೋಲನ (ಗುರುತ್ವ ಕೇಂದ್ರ) ಕಳೆದುಕೊಂಡಿತ್ತೆಂದರೆ, ಯಾವುದೇ ಒಂದು ಸಣ್ಣ ಭಿನ್ನಮತವೂ ಅದಕ್ಕೆ ತನ್ನನ್ನು ಸುಲಭವಾಗಿ ಉರುಳಿಸಿಬಿಡುವ ಅಪಾಯದಂತೆ ಕಾಣತೊಡಗಿತ್ತು! ಆದರೆ ಕೆಲವೇ ದಿನಗಳಲ್ಲಿ ಆ ಬೃಹದಾಕಾರವೇ ಅದಕ್ಕೆ ಮುಳುವಾಗಿ ಅದು ನಿಧಾನವಾಗಿ ಕುಸಿದು ಬಿತ್ತು. ಆ ದುರಂತವನ್ನು ನೋಡಲು ಆಗ ಸುಂದರೇಶ್ ಇರಲಿಲ್ಲವಷ್ಟೆ. ಅದು ಅವರ ಅದೃಷ್ಟ.

ಅದೇನೆ ಇರಲಿ, ಇಷ್ಟೆಲ್ಲಾ ಆದ ಮೇಲೂ ಶಾಮಣ್ಣ–ಸುಂದರೇಶರ ಬಾಂಧವ್ಯ ಹೇಗಿತ್ತು? ಈ ಕುತೂಹಲದಿಂದ ಶಾಮಣ್ಣನವರನ್ನು ನಾನು ಇತ್ತೀಚೆಗೆ ವಿಚಾರಿಸಿದಾಗ ಅವರು ಕ್ಷಣವೂ ಯೋಚಿಸದೆ, 'ಮೊದಲಿನ ಹಾಗೇ ಆಪ್ತವಾಗಿತ್ತು' ಎಂದು ಉತ್ತರಿಸಿ ನನ್ನನ್ನು ದಂಗು ಬಡಿಸಿದರು! ಅಷ್ಟೇ ಅಲ್ಲ, ಸುಂದರೇಶ್ ತಮ್ಮನ್ನು ಭೇಟಿ ಮಾಡಿದಾಗಲೆಲ್ಲ ಅಮಾನತ್ತಿನ ವಿಷಯ ಬಿಟ್ಟು ಸಂಘಟನೆಯ ವಿಷಯಗಳೂ ಸೇರಿದಂತೆ ಎಲ್ಲವನ್ನೂ ಮುಕ್ತವಾಗಿ ಮಾತನಾಡುತ್ತಿದ್ದರು ಎಂದು ಬೇರೆ ಸೇರಿಸಿದರು... ಇದು ಹೇಗೆ ಸಾಧ್ಯ ಎಂದು ನಾನು ಆಶ್ಚರ್ಯಪಡುತ್ತಿದ್ದಂತೆ, ಇನ್ನೂ ದೊಡ್ಡ ಆಶ್ಚರ್ಯದ ಸಂಗತಿಯನ್ನು ಶಾಮಣ್ಣ ನನ್ನೊಂದಿಗೆ ಹಂಚಿಕೊಂಡರು: ಶಾಮಣ್ಣನವರನ್ನು ಅಮಾನತ್ತಿನಲ್ಲಿಟ್ಟ ಆದೇಶ ಹೊರಡಿಸಿದ ಮೂರು ತಿಂಗಳಲ್ಲೇ ನಂಜುಂಡಸ್ವಾಮಿಯವರು ಅವರನ್ನು ಸರ್ವಸದಸ್ಯರ ಸಭೆಗೆ ಕಾಯಂ ಆಹ್ವಾನಿತರೆಂದು ಘೋಷಿಸಿದರು... ಅಷ್ಟೇ ಅಲ್ಲ, ಅದಾದ ಮತ್ತೆ ಕೆಲವೇ ದಿನಗಳಲ್ಲಿ ಅವರು ಶಾಮಣ್ಣನವರ ಮನೆಗೆ ಬಂದು ಅಡಿಗೆ ಮನೆಯಲ್ಲಿ ಅವರ ಶ್ರೀಮತಿ ಶ್ರೀದೇವಿಯವರೊಂದಿಗೆ, ಶಾಮಣ್ಣನವರನ್ನು ಬರುವ ವಿಧಾನಸಭಾ ಚುನಾವಣೆಗಾಗಿ ತೀರ್ಥಹಳ್ಳಿ ಕ್ಷೇತ್ರದಿಂದ ಅಭ್ಯರ್ಥಿಯಾಗುವಂತೆ ಒಪ್ಪಿಸಲು ಗುಪ್ತ ಸಮಾಲೋಚನೆಗೆ ತೊಡಗಿದರು! ಶಾಮಣ್ಣನವರ ಪ್ರಕಾರ ಇದೆಲ್ಲದರ ಹಿಂದೆ ಇದ್ದುದು ಸುಂದರೇಶರ ಕೈವಾಡ ಅಥವಾ ಪರೋಕ್ಷ ಪ್ರತಿಭೆ! ಇದು ಸುಂದರೇಶರ ಇನ್ನೊಂದು ಮುಖ.

ಶಾಮಣ್ಣನವರು ತಮ್ಮ ಅಮಾನತ್ತಿನ ಈ ಕಥೆಯನ್ನು ಮುಗಿಸುವುದು ಹೀಗೆ: 'ರೈತಸಂಘ ಅನ್ನುವುದು ವಿಚಿತ್ರವಾಗಿ ಜೀವಂತವಾಗಿದ್ದ ಜನರ ಒಂದು ವಿಶಿಷ್ಟ ವಿದ್ಯಮಾನ. ಅಲ್ಲಿ ಅಪಾರ ಜೀವ ವೈವಿಧ್ಯವಿತ್ತು. ಹಾಗಾಗಿ ದೌರ್ಬಲ್ಯಗಳೂ ಇದ್ದವು. ರೈತಸಂಘ ಈಗಲೂ ಸತ್ತಿಲ್ಲ ಮಾರಾಯ್ರೇ... ಮೂರ್ಛೆ ಹೋಗಿದೆ ಅಷ್ಟೆ. ಯಾರಾದರೂ ಮಾಂತ್ರಿಕ ಶಕ್ತಿ ಇರುವವರು ಅದನ್ನು ಒಮ್ಮೆ ಮುಟ್ಟಿದರೆ ಸಾಕು, ಅದು ಮತ್ತೆ ಎದ್ದೇಳುತ್ತದೆ'. ಶಾಮಣ್ಣನವರ ಈ ಆಸೆಯನ್ನು ಹಂಚಿಕೊಂಡು ಸಂಭ್ರಮಿಸಲು ಅವರ ಗೆಳೆಯ ಸುಂದರೇಶ್ ಈಗ ನಮ್ಮೊಂದಿಗಿಲ್ಲ. ಇರಬೇಕಿತ್ತು!

(ಡಾ. ಹಿ.ಶಿ. ರಾಮಚಂದ್ರೇಗೌಡರು ಸಂಪಾದಿಸಿರುವ 'ರೈತ ಸಹ್ಯಾದ್ರಿ ಎನ್.ಡಿ. ಸುಂದರೇಶ್' ಸ್ಮರಣ ಸಂಪುಟಕ್ಕಾಗಿ ಬರೆದ ಲೇಖನ–೨೦೧೩)

■

ಮಾನವತೆಯ ಬೆಳೆಗಾರ ಫುಕುವೋಕಾ

ಹಲವು ಅಪೂರ್ಣಗಳನ್ನು ಜೋಡಿಸಿ ಒಂದು ಪೂರ್ಣವನ್ನು ಸೃಷ್ಟಿಸಲು ಹೆಣಗುತ್ತಿರುವ ಇಂದಿನ ವಿಜ್ಞಾನಕ್ಕೆ, ಈ ವಿಧಾನದ ಮೂಲಕ ಪೂರ್ಣ ಸ್ಥಿತಿಯಲ್ಲಿರುವ ಪ್ರಕೃತಿಯನ್ನು ಅರಿಯಲು ಅಸಾಧ್ಯ. ಈ ಅರಿವು ಮೂಡಿದಾಗಲೇ 'ಏನೂ ಮಾಡದ' ಜೀವನ ದರ್ಶನ ಮತ್ತು ಶೈಲಿಯನ್ನು ರೂಢಿಸಿಕೊಳ್ಳಲು ಸಾಧ್ಯವಾಗುತ್ತದೆ. ಪ್ರಾಣಿಗಳು ಹೀಗೆ 'ಏನೂ ಮಾಡದೆ' ಪ್ರಕೃತಿಯ ಬೆರಗುಗಳಂತೆ ಸುಮ್ಮನೆ ಬದುಕುತ್ತಿದ್ದರೆ, ಮನುಷ್ಯ ಏನೇನನ್ನೋ ಮಾಡುತ್ತಾ ತನ್ನ ಸರಳ ಪ್ರಾಕೃತಿಕ ನೆಮ್ಮದಿಯನ್ನು ಕಳೆದುಕೊಂಡು; ಮತ್ತೆ ಅದನ್ನು ಗಳಿಸಿಕೊಳ್ಳಲು ಸದಾ ಮತ್ತೇನನ್ನೋ ಮಾಡುತ್ತಲೇ ಇರುವ 'ದುಡಿಮೆ'ಯ ವಿಷವ್ಯೂಹಕ್ಕೆ ಸಿಕ್ಕಿಹಾಕಿಕೊಂಡಿದ್ದಾನೆ ಎನ್ನುತ್ತಾರೆ ಫುಕುವೋಕಾ.

ನಮ್ಮ ಬಹು ಪ್ರಾಚೀನ 'ಪ್ರಗತಿಪರ' ರೈತರಾದ ಶಿವಮೊಗ್ಗದ ಪ್ರಫುಲ್ಲಚಂದ್ರ (*ಇವರು ಈಗ ದಿವಂಗತರು*) ಕೊನೆಗೂ ತಮ್ಮ ಗದ್ದೆಯ ಕೂಳೆಯನ್ನು ಕಡಿದು ಹಾಕಿದ ದಿನವೇ, ಕೃಷಿಋಷಿ ಮಸನೊಬು ಫುಕುವೊಕಾ ನಿಧರಾದ ಸುದ್ದಿ ಬಂದಿದೆ. ಪ್ರಫುಲ್ಲಚಂದ್ರ ೨೮ ವರ್ಷಗಳ ಕಾಲ ಕಬ್ಬಿನ ಕೂಳೆ ಕಡಿಯದೆ, ಅದರ ಮೇಲೇ ಕಬ್ಬು ಬೆಳೆಯುತ್ತಾ, ಹೆಚ್ಚಿನ ಇಳುವರಿಯ ಸಾಧನೆಯನ್ನೂ ಮಾಡಿ ನಮ್ಮೆಲ್ಲರ ಗಮನ ಸೆಳೆದಿದ್ದವರು. ಅವರೇ ನಮಗೆ ೯೦ರ ದಶಕದಲ್ಲಿ ಫುಕುವೊಕಾರ ಕೃಷಿ 'ದರ್ಶನ'ವಾಗುವ ಮುನ್ನ ಪ್ರಾಕೃತಿಕ ಬೇಸಾಯದ ಮರ್ಮವನ್ನು ತಮ್ಮ 'ಪ್ರಯೋಗಶೀಲತೆ'ಯ ಮೂಲಕ ಪರಿಚಯ ಮಾಡಿಕೊಟ್ಟಿದ್ದವರು.

ಆದರೆ ಫುಕೊವೊಕಾ ತಮ್ಮ 'ಒಂದು ಹುಲ್ಲಿನ ಕ್ರಾಂತಿ'ಯ ಮೂಲಕ (ಕನ್ನಡ ಅನುವಾದ: *ಸಂತೋಷ ಕೌಲಗಿ ಪ್ರ: ಜನಪದ ಸೇವಾ ಟ್ರಸ್ಟ್, ಮೇಲುಕೋಟೆ*) ನಮಗೆ ಪರಿಚಯವಾದ ಮೇಲೆ, 'ಪ್ರಗತಿಪರತೆ' ಮತ್ತು 'ಪ್ರಯೋಗಶೀಲತೆ' ಎಂಬ ಶಬ್ದಗಳ ಅರ್ಥಗಳೇ ಸಂಪೂರ್ಣ ಪಲ್ಲಟಗೊಂಡಿವೆ. ಹಾಗೆ ನೋಡಿದರೆ, ಫುಕೊವುಕಾರನ್ನು ಕೃಷಿಋಷಿ ಅಥವಾ ಅವರ ವಿಚಾರಗಳನ್ನು ಕೃಷಿ ದರ್ಶನ ಎಂದು ಕರೆಯುವುದು ಫುಕುವೊಕಾರಿಗೆ ಅನ್ಯಾಯ ಮಾಡಿದಂತೆ. ಏಕೆಂದರೆ, ನಾನೇನೂ ರೈತನಲ್ಲ. ಆದರೆ ಅವರ 'ಒಂದು ಹುಲ್ಲಿನ ಕ್ರಾಂತಿ' ಓದಿದ ನಂತರ ಬದುಕನ್ನು ಕುರಿತ ನನ್ನ ನೋಟವೇ ನಿರ್ಣಾಯಕ ರೀತಿಯಲ್ಲಿ ಬದಲಾಯಿತು. ನನ್ನ ಗ್ರಂಥ ಭಂಡಾರದಲ್ಲಿ ನೂರಾರು

ಪುಸ್ತಕಗಳಿವೆ. ಅದರಲ್ಲಿನ ಅತಿ ಶ್ರೇಷ್ಠ ಪುಸ್ತಕ ಯಾವುದು ಎಂದು ಯಾರಾದರೂ ಕೇಳಿದರೆ, ನನ್ನ ಸರಳ ಉತ್ತರ: 'ಒಂದು ಹುಲ್ಲಿನ ಕ್ರಾಂತಿ'. ಭತ್ತದ ಬೆಳೆಯ ಪ್ರಾಕೃತಿಕ ಕೃಷಿಯ ತತ್ವಗಳನ್ನು ಪರಿಚಯಿಸುತ್ತಾ ಹೊರಡುವ ಈ ಪುಟ್ಟ ಪುಸ್ತಕ ಸಹಜ ಕಾವ್ಯದಂತೆ ನಮ್ಮನ್ನು ಸೆಳೆಯುತ್ತಾ, ಬುದ್ಧದರ್ಶನದೊಂದಿಗೆ ಕೊನೆಗೊಳ್ಳುತ್ತದೆ. ಇದನ್ನು ನಾನು ಒಂದಲ್ಲ ಒಂದು ನೆಪದಲ್ಲಿ ವರ್ಷಕ್ಕೆರಡು ಬಾರಿ ಕಡ್ಡಾಯವಾಗಿ ಓದುತ್ತೇನೆ. ದಿನನಿತ್ಯದ ವ್ಯವಹಾರಗಳಲ್ಲಿ ಮನಸ್ಸಿನ ಮೇಲೆ ಬೀಳುವ ಧೂಳು ಮತ್ತು ಕಟ್ಟಿಕೊಳ್ಳುವ ಕಿಟ್ಟವನ್ನು ಸ್ವಚ್ಛಗೊಳಿಸಿಕೊಳ್ಳಲು!

ಈ ಕೃತಿಯನ್ನು ತಮ್ಮ 'ಸಹಜ ಕೃಷಿ' ಎಂಬ ಪುಟ್ಟ ಪುಸ್ತಕದಲ್ಲಿ ಕೆಲವು ಟಿಪ್ಪಣಿಗಳೊಂದಿಗೆ ಪರಿಚಯಿಸಿರುವ ಪೂರ್ಣಚಂದ್ರ ತೇಜಸ್ವಿ, ಸದ್ಯಕ್ಕೆ ಇದರ ತಾತ್ವಿಕ ದರ್ಶನವೆಲ್ಲ ಬೇಡ; ಖರ್ಚುಗಳಿಲ್ಲದ ಅವರ ಕೃಷಿ ತಂತ್ರಗಳ ಪ್ರಯೋಗ ತುರ್ತಾಗಿ ಆಗಬೇಕಾಗಿದೆ ಎನ್ನುತ್ತಾರೆ. ಆದರೆ ಹೀಗೆ ತಮಗೇ ವಿಶಿಷ್ಟವಾದ ಉಡಾಫೆಯಿಂದ ಈ ಮಾತನ್ನು ಹೇಳುವಾಗ ತೇಜಸ್ವಿ, ಫುಕುವೋಕಾರ ಈ ಮಾತನ್ನು ಮರೆತಿದ್ದಾರೆಂದೆನಿಸುತ್ತದೆ: 'ನಿಜ ಹೇಳಬೇಕೆಂದರೆ, ಈ ವ್ಯವಸಾಯ ಪದ್ಧತಿಯಲ್ಲಿ ಹೆಚ್ಚು ಪರಿಣಾಮ ಬೀರುವುದು ರೈತ ಅನುಸರಿಸುವ ತಂತ್ರಗಳಿಗಿಂತ ಹೆಚ್ಚಾಗಿ ಅವನ ಮನೋಭೂಮಿಕೆ'. ಸ್ಥೂಲವಾಗಿ ಹೇಳುವುದಾದರೆ, ಫುಕುವೋಕಾರ ಪ್ರಕಾರ ಈ ಸರಿಯಾದ ಮನೋಭೂಮಿಕೆ ಎಂದರೆ; ಇಂದಿನ ವಿಜ್ಞಾನದ ಹಮ್ಮನ್ನು ಧಿಕ್ಕರಿಸಿ ನಿಲ್ಲಬಲ್ಲ, ಯಾವುದೇ ಆವರಣದ ದಾಕ್ಷಿಣ್ಯಕ್ಕೆ ಸಿಕ್ಕದ ಪ್ರಕೃತಿ ಸಹಜವಾದ ಮನಸ್ಸು. ಇದೇ ಪುಸ್ತಕದಲ್ಲಿ ತೇಜಸ್ವಿ, ತಾವೂ ಹಲವಾರು ವರ್ಷಗಳ ಕಾಲ ಪ್ರಕೃತಿಯ ಮಧ್ಯೆಯೇ ಇದ್ದು ಅದರ ಚಲನಶೀಲತೆಯನ್ನು ಇವರಂತೆಯೇ ಗಮನಿಸುತ್ತಿದ್ದರೂ, ಪ್ರಕೃತಿ ಮನುಷ್ಯನ ಬುದ್ಧಿಯ ಹಸ್ತಕ್ಷೇಪವಿಲ್ಲದೇ ಹೆಚ್ಚು ಫಲವೀಯಬಲ್ಲುದು ಎಂಬುದೇಕೆ ತಮಗೆ ಹೊಳೆಯಲಿಲ್ಲ ಎಂದು ಆಶ್ಚರ್ಯಪಡುತ್ತಾರೆ. ಇದಕ್ಕೆ ಕಾರಣ, ಅವರಿನ್ನೂ ನಮ್ಮ ಕಾಲದ ಬಹು ಜನರಂತೆಯೇ 'ಆಧುನಿಕತೆ'ಯ ಅವಿಭಾಜ್ಯ ಅಂಗವಾದ ವಿಚಾರವಾದದ ಭಾರದಿಂದ ಕಳಚಿಕೊಳ್ಳದೇ ಇದ್ದುದು.

ಫುಕುವೋಕೋ ಮೂಲತಃ ಸೂಕ್ಷ್ಮ ಜೀವಶಾಸ್ತ್ರ ವಿಜ್ಞಾನಿ. ಅದರೆ ತಮ್ಮ ತಾರುಣ್ಯದಲ್ಲೇ ನಿರಂತರ ಪ್ರಯೋಗಶೀಲತೆಯ ಮೂಲಕ ಬಹು ಬೇಗ ವಿಜ್ಞಾನಾನುಭವದ ಅತಿಗಳನ್ನು ಮುಟ್ಟಿದರು. ಹಾಗಿರುವಾಗ ಒಂದು ಮಂಜು ಮುಸುಕಿದ ಬೆಳಿಗ್ಗೆ ಕಡಲ ತೀರದಲ್ಲಿ ಕೊಕ್ಕರೆಗಳು ಸಾಲು ಸಾಲಾಗಿ ಗಗನಕ್ಕೆ ನೆಗೆದುದನ್ನು ನೋಡ ನೋಡುತ್ತಾ ಫುಕುವೋಕಾ–ನಮ್ಮ ಗದಾಧರ ಗದ್ದೆ ಬಯಲಲ್ಲಿ ಹಂಸಗಳು ಹಾರಿ ಹೋಗುತ್ತಿದ್ದುದನ್ನು ನೋಡುತ್ತಾ ಪರಮಹಂಸರಾದಂತೆಯೇ–ಮಾನವ ಅನುಭವದ ಇನ್ನೊಂದು ತುದಿಗೆ ತೆರೆದುಕೊಂಡರು. ಆ ಕ್ಷಣದಲ್ಲಿ ತಮಗೆ ಪಂಚೇಂದ್ರಿಯಗಳ ಲೋಕ ಕೇವಲ ಕ್ಷಣಭಂಗುರವೆನಿಸಿ, 'ಸತ್ಯವಾದ ಪ್ರಕೃತಿ'ಯ ಗಾಢ ಅರಿವುಂಟಾಯಿತೆಂದು ಅವರು ಹೇಳುತ್ತಾರೆ. ಈ ಅರಿವಿನ ಸ್ಫೂರ್ತಿಯಲ್ಲೇ 'ಆಕಾರ, ನಿರಾಕಾರ ಎರಡೂ ಒಂದೇ' ಎಂಬ ಬುದ್ಧನ ಮೂಲ ಸತ್ಯವೊಂದರ ಆಧಾರದ ಮೇಲೆ ತಮ್ಮ ದರ್ಶನವನ್ನು

ಕಟ್ಟಿಕೊಂಡ ಫುಕುವೊಕಾ, ಪ್ರಕೃತಿ ಕೂಡಾ (ನಾವು ಅದನ್ನು ಅರ್ಥಮಾಡಿಕೊಂಡ ರೂಪದಲ್ಲಿ) ಮನಸ್ಸಿನ ಸೃಷ್ಟಿಯೇ ಎಂದು ಇದನ್ನು ಅರ್ಥೈಸುತ್ತಾರೆ. ಹೀಗೆ ಅರ್ಥೈಸಿಕೊಂಡಾಗಲೇ ಪ್ರಕೃತಿಯನ್ನು ಅರಿಯುವ, ಗೆಲ್ಲುವ ಪ್ರಯತ್ನ ವ್ಯರ್ಥವೆಂದು ಗೊತ್ತಾಗುತ್ತದೆ ಮತ್ತು ಹೀಗೆ ಅರಿಯುವ ಯತ್ನದಲ್ಲಿಯೇ ವಿಜ್ಞಾನ ಆಧುನಿಕ ಮನುಷ್ಯನ ಮನಸ್ಸಿನ ಮೇಲೆ ಎಳೆದಿರುವ ಮಾಯೆಯ ಮುಸುಕಿನ ಅರಿವು ಆಗುತ್ತದೆ ಎನ್ನುತ್ತಾರೆ.

ಇದನ್ನು ಅವರು ಆಧುನಿಕ ಕೃಷಿ ಪದ್ಧತಿ ರೂಢಿಸಿರುವ ಹಲವು 'ಭ್ರಮೆ'ಗಳ ನಿದರ್ಶನಗಳೊಂದಿಗೆ ವಿಷದೀಕರಿಸುತ್ತಾರೆ. ಉದಾಹರಣೆಗೆ, ಉಳುಮೆ, ಗೊಬ್ಬರ, ಕಳೆ ಮತ್ತು ಕೀಟನಾಶಕ ರಸಾಯನಿಕಗಳನ್ನು ಕುರಿತ ಆಧುನಿಕ ಬೇಸಾಯದ ಪರಿಕಲ್ಪನೆಗಳು ಹೇಗೆ ಭೂಮಿಯ ಅದಮ್ಯ ಫಲವತ್ತತೆಯನ್ನೇ ಅನುಮಾನಾಸ್ಪದಗೊಳಿಸಿ ರೂಪುಗೊಂಡಿವೆ ಎಂದು ವಿವರಿಸುತ್ತಾರೆ. ಈ ಪರಿಕಲ್ಪನೆಗಳನ್ನು ನಂಬಿಕೊಂಡೇ ವ್ಯವಸಾಯ ಮಾಡುತ್ತಾ ನಾವು ಭೂಮಿಯನ್ನು ಅದರ ಆವರಣದೊಂದಿಗೆ ಹಾಳು ಮಾಡಿ, ನಾವೂ ಹಾಳಾಗುತ್ತಿದ್ದೇವೆ ಎನ್ನುತ್ತಾರೆ. ಅಷ್ಟೇ ಅಲ್ಲ, ಉಳುಮೆ, ಗೊಬ್ಬರ, ಕಳೆ ಅಥವಾ ಕೀನಾಶಕಗಳ ಅಗತ್ಯವೇ ಇಲ್ಲದೆ, ಪ್ರಕೃತಿಯ ಪಿಸುಮಾತಿಗೆ ಸರಿಯಾಗಿ ಕಿವಿಗೊಡುವುದಷ್ಟರಿಂದಲೇ ಹೇಗೆ 'ವೈಜ್ಞಾನಿಕ ಕೃಷಿ'ಯ ಪ್ರಮಾಣದಲ್ಲಿ ಬೆಳೆ ತೆಗೆಯ ಬಹುದು ಎಂಬುದನ್ನು ತಮ್ಮ ಗದ್ದೆ ತೋಟಗಳಲ್ಲಿ ಮಾಡಿ ತೋರಿಸಿದ್ದಾರೆ. ಇದನ್ನು 'ಏನೂ ಮಾಡದ ಕೃಷಿ' ಎಂಬ ಬೆರಗಿನ ಹೆಸರಿನಿಂದ ಕರೆದು ಎಲ್ಲರಲ್ಲಿ ಕುತೂಹಲ ಹುಟ್ಟಿಸಿದ್ದಾರೆ. ಇಂದು ಕರ್ನಾಟಕದಾದ್ಯಂತ ಪ್ರಚಲಿತವಾಗುತ್ತಿರುವ ಪಾಳೇಕರರ ಶೂನ್ಯ ಬಂಡವಾಳದ ನೈಸರ್ಗಿಕ ಕೃಷಿ ಇದರಿಂದಲೇ ಸ್ಫೂರ್ತಿ ಪಡೆದದ್ದಾಗಿದೆ.

ಇಂದಿನ ರೈತನ ದುರಂತವೆಂದರೆ ಅವನು ಆಧುನಿಕತೆ ಹುಟ್ಟಿಸಿರುವ 'ಸಮೃದ್ಧಿ'ಯೆಂಬ ಹುಚ್ಚು ಕುದುರೆಯ ಹಿಂದೆ ಬಿದ್ದಿದ್ದಾನೆ. ಇದರಿಂದಾಗಿ ಅವನು ಹೆಚ್ಚು ಬೆಳೆಯುವ ಹಪಾಹಪಿಗೆ ಅಥವಾ ಬೆಳೆ ಕಡಿಮೆಯಾಗುವ ಆತಂಕಕ್ಕೆ ಸಿಕ್ಕಿ, ಪ್ರಕೃತಿಯ ಪಿಸುಮಾತುಗಳನ್ನು ಆಲಿಸುವ ಸೂಕ್ಷ್ಮತೆಯನ್ನು ಕಳೆದುಕೊಂಡು; ಏನೇನೋ ತಾಂತ್ರಿಕ ಕಸರತ್ತುಗಳನ್ನು ಮಾಡಿ ಸುಸ್ತಾಗುತ್ತಿದ್ದಾನೆ. ಅವನಿಗೆ ಕಾವ್ಯ, ನಾಟಕ, ಸಂಗೀತ ಏನೂ ಬೇಡವಾಗಿ ಬರಡಾಗಿದ್ದಾನೆ ಎನ್ನುವ ಫುಕುವೋಕಾ, ಜಪಾನ್‌ನ ತಮ್ಮ ಹಳ್ಳಿಯಲ್ಲಿ ಇಂತಹ 'ಏನೂ ಮಾಡದ' ಬೇಸಾಯ ಮತ್ತು ಜೀವನ ಕ್ರಮವನ್ನು ರೂಢಿಸಲೆಂದೇ, ಅದನ್ನು ಜನಸಾಮಾನ್ಯರ ಮಧ್ಯೆ ವಿಶ್ವಾಸಾರ್ಹಗೊಳಿಸಲೆಂದೇ, ಅಂತಾರಾಷ್ಟ್ರೀಯ ಕೃಷಿ ಜೀವನ ಶಾಲೆಯೊಂದನ್ನು ಹುಟ್ಟು ಹಾಕಿದ್ದಾರೆ. ಅಲ್ಲಿನ ಅನುಭವದ ಬಗ್ಗೆ ಅವರು ಹೇಳುವುದು: "ಈ ತೋಟದಲ್ಲಿ ನಾವು ಶ್ರಮರಹಿತ ಕೃಷಿ ಮಾಡುತ್ತೇವೆ. ಪರಿಪೂರ್ಣವಾದ, ಸ್ವಾದಯುಕ್ತ ಧಾನ್ಯಗಳನ್ನು, ಹಣ್ಣುಗಳನ್ನು ತಿನ್ನುತ್ತೇವೆ. ನಮ್ಮೆಲ್ಲ ಚಟುವಟಿಕೆಗಳ ಹಿಂದಿರುವ ಜಗ ಹೃದಯಕ್ಕೆ ನಾವು ಹತ್ತಿರವಾದಷ್ಟೂ ಅದಕ್ಕೆ ಅರ್ಥವಿದೆ, ಅದರೊಂದಿಗೆ ಆತ್ಮತೃಪ್ತಿಯಿದೆ. ಇಲ್ಲಿ ಜೀವನ ಒಂದು ಕಾವ್ಯವೇ!" ಹಾಗಾಗಿ, ಫುಕುವೋಕಾ ಕರ್ನಾಟಕದ ನಮ್ಮ ಪ್ರಯೋಗಶೀಲ ರೈತ ನಾರಾಯಣ ರೆಡ್ಡಿಯವರನ್ನು ಭೇಟಿ

ಮಾಡಲು ಬಂದವರು, ಅವರ ತೋಟ ಬಿಟ್ಟು ಪಕ್ಕದಲ್ಲಿ ಹರಿಯುತ್ತಿದ್ದ ತೊರೆ ಮತ್ತು ಅದರ ದಡದಲ್ಲಿ ಸೊಂಪಾಗಿ ಬೆಳೆದಿದ್ದ ಮರ ನೆಳಲಿನಲ್ಲೇ ಹೆಚ್ಚು ಕಾಲ ಕಳೆದದ್ದು ಆಶ್ಚರ್ಯವೇನಲ್ಲ!

ಆಧುನಿಕ ವಿಜ್ಞಾನಿಯ ಎಲ್ಲ ಅನ್ವೇಷಣೆಗಳ ಮೂಲಾಧಾರ 'ಪ್ರಕೃತಿ ಎಂದರೆ ಏನು?' ಎಂಬ ಪ್ರಶ್ನೆಯೇ ಆಗಿದೆ. ಆದರೆ ಇದರ ಸಮಸ್ಯೆ ಎಂದರೆ, ಇದೊಂದು ಅಪೂರ್ಣವಾದ ಪ್ರಶ್ನೆಯಾಗಿರುವುದು. ಈ ಪ್ರಶ್ನೆ ಪೂರ್ಣವಾಗುವುದು, ಅದರಲ್ಲಿ 'ಏನು' ಎಂಬುದು ಬರೀ ಪ್ರಕೃತಿಯನ್ನು ಉದ್ದೇಶಿಸಿದರೆ ಸಾಲದು; ಆ ಪ್ರಶ್ನೆಯ ಮಾಧ್ಯಮವಾಗಿರುವ ಮನುಷ್ಯನನ್ನೂ ಉದ್ದೇಶಿಸಿರಬೇಕು. ಹಾಗೇ, 'ಏನು' ಎಂಬ ಪದವನ್ನೂ ಉದ್ದೇಶಿಸಿರಬೇಕು (ಅಂದರೆ, ಮನುಷ್ಯ ಎಂದರೆ ಏನು ಮತ್ತು ಏನು ಎಂದರೆ ಏನು ಎಂಬ ಪ್ರಶ್ನೆಗಳನ್ನೂ ಅದು ಒಳಗೊಂಡಿರಬೇಕು!) ಎನ್ನುವ ಫುಕುವೋಕಾ, ಆ ಪೂರ್ಣ ಪ್ರಶ್ನೆಯನ್ನು ಎದುರಿಸುವಂತಾದಾಗ ಮಾತ್ರ ವಿಜ್ಞಾನ ಪೂರ್ಣಜ್ಞಾನ ಎನ್ನಿಸಿಕೊಳ್ಳುತ್ತದೆ. ಅಲ್ಲಿಯವರೆಗೆ ಈ ಅಪೂರ್ಣ ಜ್ಞಾನ ತನ್ನ ಪೂರ್ಣಜ್ಞಾನದ ಹಮ್ಮಿನಲ್ಲಿ ನಮ್ಮ ಆಲೋಚನಾ ಕ್ರಮವನ್ನು ದಾರಿ ತಪ್ಪಿಸುತ್ತಿರುತ್ತದೆ ಎಂದು ಎಚ್ಚರಿಸುತ್ತಾರೆ:

> "ಒಂದು ಪುಟ್ಟ ಗಿಡದಲ್ಲಿ ತಲೆ ಎತ್ತುತ್ತಿರುವ ಒಂದು ಚಿಗುರನ್ನು ಚಿವುಟಿ ಹಾಕುವುದು ಕೂಡಾ ಭರಿಸಲಾಗದಷ್ಟು ದೊಡ್ಡ ತಪ್ಪು. ಮನುಷ್ಯನ ಚೇಷ್ಟೆಗೆ ಸಿಗದಿದ್ದ ಗಿಡದಲ್ಲಿ ಹೊರಡುವ ಕೊಂಬೆಗಳು ವ್ಯವಸ್ಥಿತವಾಗಿ ಒಂದರ ನಂತರ ಮತ್ತೊಂದು ಬಂದು, ಎಲ್ಲಾ ಕೊಂಬೆಗಳೂ ಸರಿಯಾದ ಪ್ರಮಾಣದಲ್ಲಿ ಶಾಖವನ್ನು ಪಡೆಯುತ್ತವೆ. ಆದರೆ ಒಮ್ಮೆ ಈ ವ್ಯವಸ್ಥೆಯನ್ನು ತಪ್ಪಿಸಿದರೆ ಆ ಕೊಂಬೆಗಳಲ್ಲೇ ಪೈಪೋಟಿ ಉಂಟಾಗಿ ಅವು ಒಂದರ ಮೇಲೊಂದು ಬೆಳೆದು ಸೂರ್ಯನ ಶಾಖ ಸರಿಯಾಗಿ ಹಂಚಿಕೆಯಾಗದೆ ಸಾಕಷ್ಟು ಪ್ರಮಾಣದಲ್ಲಿ ಶಾಖ ಪಡೆಯದ ಎಲೆಗಳು ಉದುರುತ್ತವೆ;ಕ್ರಿಮಿಗಳು ಹಾವಳಿ ನಡೆಸುತ್ತವೆ;ಮತ್ತೆ ಕೊಂಬೆಗಳನ್ನು ಕತ್ತರಿಸದಿದ್ದರೆ ಮುಂದಿನ ದಿನಗಳಲ್ಲಿ ಕೊಂಬೆಗಳು ಬಾಡಿ ಬೆಂಡಾಗುತ್ತವೆ.
>
> ಮನುಷ್ಯ ತನ್ನ ಕೊಳಕು ಕೈ ಆಡಿಸಿ ಪ್ರಕೃತಿಯ ತಾಳಬದ್ಧವಾದ ಸಂಗೀತವನ್ನು ಹಾಳು ಮಾಡುತ್ತಾನೆ. ಅದನ್ನು ತಿದ್ದಲಾರದೆ ಸುಮ್ಮನಾಗಿ ಬಿಡುತ್ತಾನೆ. ಮುಂದೆ ಎಂದೋ ಒಂದು ದಿನ ಆ ತಪ್ಪು ಅವನ ಬುಡಕ್ಕೇ ಬಂದಾಗ ಅದನ್ನು ಸರಿಪಡಿಸಲು ತನ್ನ ಸರ್ವ ಸಾಮರ್ಥ್ಯವನ್ನು ಉಪಯೋಗಿಸುತ್ತಾನೆ. ಈ ಪ್ರಯತ್ನದಲ್ಲಿ ಅವನು ಸ್ವಲ್ಪ ಜಯಶಾಲಿಯಾದಂತೆ ಕಂಡರೆ ಅವನನ್ನು ಹಿಡಿದು ನಿಲ್ಲಿಸುವುದೇ ಅಸಾಧ್ಯವಾಗುತ್ತದೆ. ಮನುಷ್ಯ ಪದೇ ಪದೇ ಹೀಗೇ ಮಾಡುತ್ತಾನೆ. ಇದು ಬೇಸಿಗೆಯಲ್ಲಿ ತನ್ನ ಮನೆಯ ಹೆಂಚುಗಳನ್ನೆಲ್ಲ ಒಡೆದು ಹಾಕಿ, ಮಳೆಗಾಲದಲ್ಲಿ ಮನೆ ಸೋರಲು ಆರಂಭಿಸಿದಾಗ ಎದ್ದೆನೋ ಬಿದ್ದೆನೋ ಎನ್ನುತ್ತಾ ಹೆಂಚುಗಳನ್ನು ಸರಿಪಡಿಸಿ, ಮನೆ ಸೋರುವುದು

ನಿಂತಾಗ ದೊಡ್ಡ ಸಾಧನೆ ಮಾಡಿದೆನೆಂದು ಬೆನ್ನು ತಟ್ಟಿಕೊಂಡಷ್ಟೇ ಮೂರ್ಖತನ.

ನಮ್ಮ ವಿಜ್ಞಾನಿಗಳ ಕಥೆಯೂ ಹೀಗೇ ಆಗಿದೆ. ಹಗಲಿರುಳೆನ್ನದೆ ತಮ್ಮ ಕಣ್ಣುಗಳು ಹಾಳಾಗುವಷ್ಟು ಪುಸ್ತಕಗಳನ್ನು ಓದಿ ಓದಿ ಅವರು ಸಂಶೋಧಿಸುತ್ತಿರುವುದಾದರೂ ಏನನ್ನು? ತಮ್ಮ ಸಮೀಪ ದೃಷ್ಟಿ ದೋಷ ನಿವಾರಣೆಗಾಗಿ ಹೊಸ ರೀತಿಯ ಗಾಜನ್ನು!"

ಹಲವು ಅಪೂರ್ಣಗಳನ್ನು ಜೋಡಿಸಿ ಒಂದು ಪೂರ್ಣವನ್ನು ಸೃಷ್ಟಿಸಲು ಹೆಣಗುತ್ತಿರುವ ಇಂದಿನ ವಿಜ್ಞಾನಕ್ಕೆ, ಈ ವಿಧಾನದ ಮೂಲಕ ಪೂರ್ಣ ಸ್ಥಿತಿಯಲ್ಲಿರುವ ಪ್ರಕೃತಿಯನ್ನು ಅರಿಯಲು ಅಸಾಧ್ಯ. ಈ ಅರಿವು ಮೂಡಿದಾಗಲೇ 'ಏನೂ ಮಾಡದ' ಜೀವನ ದರ್ಶನ ಮತ್ತು ಶೈಲಿಯನ್ನು ರೂಢಿಸಿಕೊಳ್ಳಲು ಸಾಧ್ಯವಾಗುತ್ತದೆ. ಪ್ರಾಣಿಗಳು ಹೀಗೆ 'ಏನೂ ಮಾಡದೆ' ಪ್ರಕೃತಿಯ ಬೆರಗುಗಳಂತೆ ಸುಮ್ಮನೆ ಬದುಕುತ್ತಿದ್ದರೆ, ಮನುಷ್ಯ ಏನೇನನ್ನೋ ಮಾಡುತ್ತಾ ತನ್ನ ಸರಳ ಪ್ರಾಕೃತಿಕ ನೆಮ್ಮದಿಯನ್ನು ಕಳೆದುಕೊಂಡು; ಮತ್ತೆ ಅದನ್ನು ಗಳಿಸಿಕೊಳ್ಳಲು ಸದಾ ಮತ್ತೇನನ್ನೋ ಮಾಡುತ್ತಲೇ ಇರುವ 'ದುಡಿಮೆ'ಯ ವಿಷವ್ಯೂಹಕ್ಕೆ ಸಿಕ್ಕಿಹಾಕಿಕೊಂಡಿದ್ದಾನೆ ಎನ್ನುತ್ತಾರೆ ಫುಕುವೋಕಾ. 'ಏನೂ ಮಾಡದ' ಜೀವನ ಎಂದರೆ ನಿಷ್ಕ್ರಿಯತೆಯ ಅಥವಾ ಆಲಸ್ಯದ ಜೀವನ ಎಂದಲ್ಲ. ಇರುವ ಪ್ರಕೃತಿಯ ಪೂರ್ಣತೆಯ ಮತ್ತು ಅದರ ರಚನೆಯಲ್ಲಿರುವ ಸಾಮರಸ್ಯದ ತಿಳುವಳಿಕೆಯಲ್ಲಿ ಹುಟ್ಟುವ; ಮಾಡಿದರೂ ಮಾಡದಂತಿರುವ('ಮಾಡಿದರೂ ಮಾಡದಂತಿರಬೇಕು;ಮಾಡಿದ ಮಾಟದಲ್ಲಿ ತಾನಿಲ್ಲದಿರಬೇಕು': ಬಸವಣ್ಣ) ಕೌಶಲ್ಯಪೂರ್ಣ ಕ್ರಿಯಾಶೀಲ ಜೀವನ. ಹಾಗಾಗಿಯೇ ಫುಕುವೋಕಾರನ್ನು ಓದುತ್ತ ಹೋದಂತೆ, 'ಶೂನ್ಯತೆ'ಯ ಬುದ್ಧ ಮತ್ತು 'ನಾನು ಯಾರು?' ಪ್ರಶ್ನೆಯ ರಮಣರ ಜೊತೆಗೇ, ಅಹಿಂಸಾತ್ಮಕ ಸತ್ಯಾಗ್ರಹದ ಗಾಂಧೀಜಿಯೂ ನೆನಪಾಗುತ್ತಾರೆ. ಸ್ವತಃ ಫುಕುವೋಕಾ ತಮ್ಮ ಜೀವನ ದರ್ಶನದ ಭಾಗವಾಗಿ ಗಾಂಧೀಜಿಯ ಅಹಿಂಸಾ ದರ್ಶನದ– 'ಏಕದಶಾ' ವ್ರತಗಳ–ಪ್ರಸ್ತಾಪ ಮಾಡುತ್ತಾರೆ.

ಗಾಂಧೀಜಿ ಭಾರತವನ್ನು ಯಾವ ಅರಿವಿನಿಂದ ಗ್ರಾಮಸ್ವರಾಜ್ಯವನ್ನಾಗಿ ರೂಪಿಸಲು ಬಯಸಿದ್ದರೋ, ಅದೇ ಅರಿವಿನಿಂದ ಫುಕುವೋಕಾ ಜಪಾನ್ ದೇಶವು ರೈತ ಸಮಾಜವಾಗಿಯೇ ಉಳಿಯಬೇಕೆಂದು ಬಯಸಿದ್ದರು. ಯೂರೋಪ್ ಮತ್ತು ಅಮೆರಿಕಾಗಳಂತೆ ಜಪಾನ್‌ನಲ್ಲಿಯೂ ರೈತರ ಸಂಖ್ಯೆಯನ್ನು ಶೇ.೧೦ಕ್ಕೆ ಇಳಿಸುವ ನಗರೀಕರಣ ಮತ್ತು ಕೈಗಾರಿಕೀಕರಣಗಳನ್ನು, "ಹಿಂದೆ ಮನುಷ್ಯನಿಗೆ 'ಅಭಿವೃದ್ಧಿ' ಎಂಬ ಶಬ್ದದ ಪರಿಚಯವೇ ಇರಲಿಲ್ಲ. ಇಂದು 'ಅಭಿವೃದ್ಧಿ' ಶಬ್ದದ ಪರಿಚಯವೂ, ಪರಿಣಾಮಗಳೂ ನಮಗೆ ಗೊತ್ತಾಗಿದೆ. ಅದರ ವಿರುದ್ಧ ಹೋರಾಟಕ್ಕೆ ಅಣಿಯಾಗಬೇಕಾದದ್ದು ಅನಿವಾರ್ಯವಾಗಿದೆ" ಎಂಬ ಧೀರ ಕರೆಯ ಮೂಲಕ ವಿರೋಧಿಸಿದ್ದ ಅವರು, ಜಪಾನ್ ನೂರಕ್ಕೆ ನೂರು ರೈತರ ದೇಶವಾಗಬೇಕೆಂದು ಆಶಿಸಿದ್ದರು. ಹಾಗಾದಾಗ, ಪ್ರತಿ ಸರಾಸರಿ ಜಪಾನಿ ಕುಟುಂಬಕ್ಕೂ ಒಂದೂ ಕಾಲು

ಎಕರೆ ಜಮೀನು ಸಿಗಲಿದ್ದು, ಅದರ ನೈಸರ್ಗಿಕ ಕೃಷಿಯಿಂದ ವರ್ಷದ ಎಲ್ಲ ಕೌಟುಂಬಿಕ ಅಗತ್ಯಗಳನ್ನು ಪೂರೈಸಿಕೊಳ್ಳಬಹುದಲ್ಲದೆ, ಆಧುನಿಕ ನಾಗರೀಕತೆಯಲ್ಲಿ ಅಲಭ್ಯವಾಗತೊಡಗಿರುವ ಸಂತೋಷ ನೆಮ್ಮದಿಗಳನ್ನೂ ಗಳಿಸಿಕೊಳ್ಳಬಹುದು ಎಂದು ಭಾವಿಸಿದ್ದರು. ಇದು ಗಾಂಧೀಜಿಯ 'ಗ್ರಾಮಸ್ವರಾಜ್ಯ'ದ ಕನಸಿನಂತೆಯೇ ಇಂದು ಅವಾಸ್ತವಿಕ ಎನಿಸಬಹುದು. ಆದರೆ ಫುಕುವೋಕಾ ಅವರ ಜೀವನ ದರ್ಶನದ ಪೂರ್ಣತೆಯಲ್ಲಿ ನೋಡಿದಾಗ, ಅಭಿವೃದ್ಧಿಯ ಹೆಸರಲ್ಲಿ ತನ್ನನ್ನು ತಾನೇ ತಿಂದುಕೊಳ್ಳುತ್ತಿರುವ ಜಗತ್ತಿಗೆ ಇದು, ದೂರದಲ್ಲಾದರೂ ಕಾಣುವ ಪರ್ಯಾಯ ಮಾರ್ಗವೆನಿಸದಿರದು.

ಗಾಂಧೀಜಿಯಂತೆಯೇ ಮನುಷ್ಯನ ಅಂತಿಮ ಗುರಿ ತನ್ನಲ್ಲಿರುವ ದೈವಿಕತೆಯನ್ನು ಕಂಡುಕೊಳ್ಳುವುದು ಎಂದು ನಂಬಿದ್ದ ಫುಕುವೋಕಾ, ತಮ್ಮ ೯೫ ವರ್ಷಗಳ 'ತುಂಬು' ಜೀವನದಲ್ಲಿ ಕೃಷಿ ಸಂಸ್ಕೃತಿಯ ಮೂಲಕವೇ ಇದು ಸಾಧ್ಯ ಎಂದು ಮನಗಂಡಿದ್ದರು. ಹಾಗಾಗಿಯೇ ಅವರು ಹೇಳಿದ್ದು: 'ಹರ್ಷ ಮತ್ತು ನೆಮ್ಮದಿಯನ್ನು ಪಡೆಯಲು ಪ್ರಯತ್ನಗಳನ್ನು ನಡೆಸಿಯೇ ಮನುಷ್ಯರು ಅವುಗಳನ್ನು ಕಳೆದುಕೊಳ್ಳುತ್ತಾರೆ ಎಂಬುದರಲ್ಲಿಯೇ ನೈಸರ್ಗಿಕ ಕೃಷಿ ವಿಚಾರದ ತಿರುಳು ಅಡಗಿದೆ. ಕೃಷಿಯ ಅಂತಿಮ ಗುರಿ, ಬರೀ ಹೊಲ ಗದ್ದೆಗಳಲ್ಲಿ ಬೆಳೆ ಬೆಳೆಯುವುದಲ್ಲ, ಮಾನವತೆಯ ಬೆಳೆ ತೆಗೆಯುವುದೇ ಆಗಿದೆ ಮತ್ತು ಅದನ್ನು ಉತ್ತಮಪಡಿಸುತ್ತಾ ಹೋಗುವುದೇ ಆಗಿದೆ"

(೫ ಸೆಪ್ಟಂಬರ್, ೨೦೦೮)

■

ಪಾಳೇಕರರ ಹೊಸ ಕೃಷಿ ಮಾದರಿ*

ಪಾಳೇಕಾರರು ನಮ್ಮ ಪಾರಂಪರಿಕ ಕೃಷಿ ಜ್ಞಾನವನ್ನು, ಆಧುನಿಕ ವಿಜ್ಞಾನ ತತ್ವಗಳಿಂದ ಪಡೆದ ಒಳನೋಟಗಳ ತಿಳುವಳಿಕೆಯೊಂದಿಗೆ ಪರಿಪುಷ್ಟ ಗೊಳಿಸಿದ್ದಾರೆ. ರೈತ ಸಮುದಾಯವು ಕಳೆದ ೫೦ ವರ್ಷಗಳಲ್ಲಿ ಆಧುನಿಕ ಕೃಷಿ ಪದ್ಧತಿಗೆ ಪಕ್ಕಾಗಿ ಕೃಷಿ ಕುರಿತಂತೆ ರೂಪಿಸಿಕೊಂಡಿದ್ದ ದೃಷ್ಟಿಕೋನವನ್ನೇ ಬದಲಿಸುತ್ತಾರೆ. ಕೃಷಿ ವೃತ್ತಿಯಲ್ಲ; ಬದುಕು ಎಂದು ನಿರೂಪಿಸುತ್ತಾರೆ. ಜಡಗೊಂಡಿದ್ದ ನಮ್ಮ ಸಾಂಪ್ರಾದಾಯಿಕ ಕೃಷಿ ಪದ್ಧತಿಗೆ ಹೊಸ ಚೈತನ್ಯ ನೀಡಿದ ಆಧುನಿಕ ಕೃಷಿ ಪದ್ಧತಿ ಈಗ ಸ್ಥಗಿತಗೊಂಡು ತಾಂತ್ರಿಕ ಹಾಗೂ ನೈತಿಕ ಬಿಕ್ಕಟ್ಟಿನಲ್ಲಿರುವುದನ್ನು ಅವರು ಗಮನಿಸಿದ್ದಾರೆ. ಇದರ ಪರಿಣಾಮವಾಗಿ ಅವರು ಈ ಆಧುನಿಕ ಕೃಷಿ ಪದ್ಧತಿಯ ಬುಡಕ್ಕೇ ಕೈ ಹಾಕಲು ಪ್ರೇರೇಪಿತರಾಗಿ ಅದರ ಮೂಲ ತಾತ್ವಿಕತೆಯನ್ನೇ ಪ್ರಶ್ನಿಸುವ ಮೂಲಕ ಕೃಷಿಯ ಮೂಲ ಸತ್ಯಗಳನ್ನು ಪುನರನ್ವೇಷಿಸಿದ್ದಾರೆ. ಇದೇ ಶೂನ್ಯ ಬಂಡವಾಳ ಕೃಷಿ ಪದ್ಧತಿಯೆಂಬ ಹೆಸರಿನಲ್ಲಿ ನಮ್ಮ ರೈತರಿಗೆ ಹೊಸ ಕೃಷಿ ದರ್ಶನ ಮಾಡಿಸಿದೆ.

ರೈತ ನಾಯಕರೇ, ರೈತ ಬಾಂಧವರೇ,

ನಾನು ಮೂಲತಃ ರೈತನಲ್ಲ. ನನ್ನ ತಾತನ ಕಾಲದಲ್ಲೇ ನಮ್ಮ ತಂದೆಯವರು ಬೇಸಾಯದಿಂದ ಏನೂ ಗಿಟ್ಟೊಲ್ಲ, ಇನ್ನು ಕುಲ ವೃತ್ತಿಯಿಂದ ಜೀವನ ಮಾಡೋಕ್ಕಾಗಲ್ಲ ಎಂಬುದನ್ನು ಕಂಡುಕೊಂಡು ಶಿಕ್ಷಣವನ್ನರಸಿಕೊಂಡು ಹೋದವರು. ಬಹು ದೂರವೇನೂ ಹೋಗಲಿಲ್ಲ. ಆಗಿನ ಕಾಲದ ಕನ್ನಡ ಎಲ್.ಎಸ್. ಮಾಡಿಕೊಂಡು ಪ್ರಾಥಮಿಕ ಶಾಲಾ ಮಾಸ್ತರರಾಗಿ ನಮ್ಮನ್ನು ಬೆಳೆಸಿದರು. ಬಾಲ್ಯದಲ್ಲಿ ರೈತ ಮಕ್ಕಳ ಮತ್ತು ಹೊಲಗದ್ದೆಗಳ ನಡುವೆಯೇ ಬೆಳೆದ ನಾವು, ನಮಗೂ ಒಂದಿಷ್ಟು ಭೂಮಿಯಿದ್ದರೆ ಎಷ್ಟು ಚೆಂದಿತ್ತು ಎಂಬ ಹಳಹಳಿಕೆಯೊಂದಿಗೆ ಗ್ರಾಮ ಬದುಕಿನ ಆಕರ್ಷಣೆಗೆ ಆಗಾಗ ಒಳಗಾಗಿದ್ದೂ ಉಂಟು. ಆದರೆ ಈಗ, ಇತ್ತೀಚಿನ ಜಾಗತೀಕರಣದ ದಿನಗಳಲ್ಲಿ ಗ್ರಾಮ ಮತ್ತು ರೈತ

* ಕರ್ನಾಟಕ ರಾಜ್ಯ ನೈಸರ್ಗಿಕ ಕೃಷಿ ಆಂದೋಲನ ವೇದಿಕೆಯು ೨೫–೯–೨೦೦೬ರಂದು ಶಿವಮೊಗ್ಗದಲ್ಲಿ 'ಸಿರಿಗನ್ನಡ ಪುಸ್ತಕ ಮನೆ'ಯ ಸಹಯೋಗದಲ್ಲಿ ಏರ್ಪಡಿಸಿದ್ದ ಕಾರ್ಯಾಗಾರದಲ್ಲಿ ಪ್ರಾಸ್ತಾವಿಕವಾಗಿ ಆಡಿದ ಮಾತುಗಳು

ಎದುರಿಸುತ್ತಿರುವ ಸಂದಿಗ್ಧತೆಗಳ ಹಿನ್ನೆಲೆಯಲ್ಲಿ, ನಮ್ಮ ತಂದೆ ತೆಗೆದುಕೊಂಡ ನಿರ್ಧಾರ ಸರಿಯಾಗಿಯೇ ಇತ್ತು ಎಂದೆನ್ನಿಸತೊಡಗಿದೆ. ಬೆಂಗಳೂರು ಸುತ್ತಮುತ್ತ ನನ್ನ ಸಂಬಂಧಿಕರು ಆ ಕಾಲದಲ್ಲಿ ಮೂರು ಕಾಸು ಆರು ಕಾಸಿಗೆ ಕೊಂಡ ಭೂಮಿ ಇಂದು, ಕೋಟ್ಯಾಂತರ ರೂಪಾಯಿಗಳಿಗೆ ಮಾರಾಟವಾಗುತ್ತಿರುವ ಸಂಗತಿಯೂ ನನ್ನ ಅನಿಸಿಕೆಯನ್ನೇನೂ ಬದಲಿಸಿಲ್ಲ. ಏಕೆಂದರೆ ಈ ಹಿಂದೆ ಕೋಟ್ಯಾಂತರವಿಲ್ಲದಿದ್ದರೂ, ಹೀಗೆ ಲಕ್ಷಾಂತರ ರೂಪಾಯಿ ಗಳಿಸಿದವರು ಯಾವ ದಿಕ್ಕು ಹಿಡಿದು, ಬೆಂಗಳೂರಿನ ಸುಖಗಳೇ ಎಲ್ಲರ ಆಕರ್ಷಣೆಯಾಗಿ, ಅದರ ದುಃಖಗಳೇ ಎಲ್ಲರ ಚಿಂತೆಗೂ ಕಾರಣವಾಗಿ; ಜಾಗತೀಕರಣದ ಕರ್ನಾಟಕದ ಆವೃತ್ತಿಯನ್ನು ಸೃಷ್ಟಿಸಿದೆ ಎಂಬುದೂ ನನಗೆ ಗೊತ್ತಿದೆ. ಈ ಎಲ್ಲದರ ಹಿನ್ನೆಲೆಯಲ್ಲಿ ನಿಮ್ಮೊಂದಿಗೆ ಮಾತನಾಡಲು ನಿಂತಿದ್ದೇನೆ.

ಮುಂದಿನ ವರ್ಷ ಮಾನವ ಇತಿಹಾಸದಲ್ಲಿ ಒಂದು ಮಹತ್ವದ ತಿರುವು ಕಾಣಲಿದೆ. ೨೦೦೭ರಲ್ಲಿ ಜಗತ್ತಿನಲ್ಲಿ ಮೊದಲ ಬಾರಿಗೆ ನಗರವಾಸಿಗಳ ಜನಸಂಖ್ಯೆ ಗ್ರಾಮವಾಸಿಗಳ ಜನಸಂಖ್ಯೆಯನ್ನು ಮೀರಲಿದೆಯಂತೆ. ಇದು ಮಾನವ ನಾಗರೀಕತೆಯಲ್ಲಿ ಉಂಟಾಗುತ್ತಿರುವ ಒಂದು ಗುಣಾತ್ಮಕ ಪಲ್ಲಟದ ಖಚಿತ ಸೂಚನೆ. ೧೫ನೇ ಶತಮಾನದಲ್ಲಿ ಯೂರೋಪ್‌ನಲ್ಲಿ ತೆರಕೊಂಡ 'ಪುನರುಜ್ಜೀವನ' ಯುಗವು ೧೭ನೇ ಶತಮಾನದಿಂದೀಚೆಗೆ ಹುಟ್ಟು ಹಾಕಿದ ಕೈಗಾರಿಕಾ ಕ್ರಾಂತಿಯ ತಾರ್ಕಿಕ ಅಂತ್ಯವೇ, ಈ ನಗರ ಪ್ರಧಾನ ಜಗತ್ತಿನ ವಿಕಾಸ. ಇದು ವಿಕಾಸವೆನ್ನುವಂತೆ ಕಾಣುತ್ತಿದ್ದರೂ, (ಕೈಗಾರಿಕಾ) ಕ್ರಾಂತಿಯೊಂದರ ಪರಿಣಾಮವೆನ್ನುವುದನ್ನು ನಾವು ಮರೆಯಬಾರದು. ತಂತಮ್ಮ ಜೀವನಾಧಾರಿಕ ದೃಷ್ಟಿಗಳು, ನಂಬಿಕೆಗಳು, ಜೀವನೋತ್ಪತ್ತಿ ವಿಧಾನಗಳು ಇವುಗಳನ್ನಾಧರಿಸಿ ವಿಭಿನ್ನ ಸಂಸ್ಕೃತಿ ನಾಗರೀಕತೆಗಳನ್ನು ಕಟ್ಟಿಕೊಂಡಿದ್ದ ಸಮುದಾಯಗಳು ಈಗ ಅಂತಿಮವಾಗಿ ಒಂದು ಸಂಸ್ಕೃತಿ, ಒಂದು ನಾಗರೀಕತೆಯ ಪ್ರಭುತ್ವದೆಡೆಗೆ ಧಾವಿಸುವಂತೆ ಮಾಡಿರುವ ಈ ವಿದ್ಯಮಾನವನ್ನು, ಸದ್ಯಕ್ಕೆ ಜಾಗತೀಕರಣ ಎಂದು ಕರೆಯಲಾಗುತ್ತಿದೆ. ಹಾಗಾಗಿಯೇ ಜಾಗತೀಕರಣವೆಂಬುದು ಇಂದು ದೊಡ್ಡ ಚರ್ಚೆಯ ವಸ್ತುವಾಗಿದೆ.

ಇಲ್ಲಿ ರೈತರು ಮುಖ್ಯವಾಗಿ ಗಮನಿಸಬೇಕಾದದ್ದು, ಜಾಗತೀಕರಣವೆಂದರೆ ಗ್ರಾಮ ಸಂಸ್ಕೃತಿಯ ಅಪ್ರಸ್ತುತೀಕರಣ;ಅಂದರೆ, ಗ್ರಾಮ ಸಂಸ್ಕೃತಿಯು ಕಾಲದ ಹೊಡೆತಗಳಿಗೆ ಸಿಕ್ಕಿ ಸಂಪೂರ್ಣ ಸವೆದುಹೋದ ಸಂಸ್ಕೃತಿಯಾಗಿದೆ ಎಂದು ನಿರೂಪಿಸುವಂತಹುದು ಎಂಬುದನ್ನು. ಇದರರ್ಥ, ಕೃಷಿ ಸಂಸ್ಕೃತಿ ಮತ್ತು ಅದರ ಅಸ್ತಿವಾರದ ಮೇಲೆ ರೂಪುಗೊಂಡ ನಾಗರೀಕತೆ ತನ್ನ ಚೈತನ್ಯವನ್ನೆಲ್ಲಾ ಖಾಲಿಮಾಡಿಕೊಂಡಿದೆ ಎಂದೇ ಆಗುತ್ತದೆ. ಆದರೆ ಇದು ನಿಜವೇ? ಇದು ನಿಜ ಎಂದು ಸಾಬೀತು ಪಡಿಸುವ ಅಕ್ರಮಣಕಾರಿ ಪ್ರಯತ್ನವೇ ಜಾಗತೀಕರಣವಾಗಿದೆ. ಈ ಪ್ರಯತ್ನದ ಪರಿಣಾಮವೇ, ಈವರೆಗೆ ಕಳೆದೊಂದು ದಶಕದಲ್ಲಿ ದೇಶಾದ್ಯಂತ ಒಂದೂಕಾಲು ಲಕ್ಷದಷ್ಟು ಜನ ರೈತರು ಆತ್ಮಹತ್ಯೆ ಮಾಡಿಕೊಂಡಿರುವುದು. ಮತ್ತು ಈ ಪ್ರವೃತ್ತಿ, ಅನೇಕ ಆರ್ಥಿಕ ಸಹಾಯ ಯೋಜನೆಗಳ ಹೊರತಾಗಿಯೂ ನಿಲ್ಲದೆ ಇನ್ನೂ ಮುಂದುವರಿಯುತ್ತಿರುವುದು.

ಆತ್ಮಹತ್ಯೆ ಎಂದರೆ ಬರೀ ಸಾವಲ್ಲ; ಅದು ಬದುಕಿನ ಎಲ್ಲ ಸಾಧ್ಯತೆಗಳೂ ಮುಚ್ಚಿಕೊಂಡಾಗ ಅನಿವಾರ್ಯಗೊಂಡ ಸಾವು. ಅದೂ, ಬದುಕಿನ ಸೋಲು-ಸವಾಲುಗಳನ್ನು ಮೆಲ್ಲುತ್ತಲೇ ಗಟ್ಟಿಗೊಂಡ ದೀರ್ಘ ಪರಂಪರೆಯುಳ್ಳ ನಮ್ಮ ಜನಪದ ಸಂಸ್ಕೃತಿಯ ಮೂಲ ಘಟಕವಾದ ರೈತನ ಸಾವು. ಹಾಗಾಗಿ ಈ ನಿಲ್ಲದ ಆತ್ಮಹತ್ಯೆ ಸರಣಿಯು ಒಂದು ಜೀವನ ವಿಧಾನವೇ, ಬದುಕನ್ನು ಕುರಿತ ಒಂದು ದರ್ಶನವೇ ಅಪಾಯಕ್ಕೀಡಾಗಿರುವುದರ ಸೂಚನೆಯೇ ಆಗಿದೆ. ಇದನ್ನು ನಾವು ಅರ್ಥ ಮಾಡಿಕೊಳ್ಳದೇ ಹೋದರೆ, ಈ ಅಪಾಯಕ್ಕೆ ಸೂಕ್ತ ಪರಿಹಾರ ಕಂಡುಕೊಳ್ಳಲಾರೆವು. ಆದರೆ ನಮ್ಮ ಅರ್ಥಶಾಸ್ತ್ರಜ್ಞರು, ಆಡಳಿತಗಾರರು ರೈತರ ಆತ್ಮಹತ್ಯೆ ವಿದ್ಯಮಾನವನ್ನು ಒಂದು ಆರ್ಥಿಕ ಸಮಸ್ಯೆ ಎಂಬಂತೆ ಒಂದು ಕಡೆ ಸಾಲ ಮನ್ನಾ, ಕಡಿಮೆ ಬಡ್ಡಿಯ ಸಾಲ ಸೌಲಭ್ಯ, ರಿಯಾಯಿತಿ ದರದ ಬೀಜ ವಿತರಣೆ ಮುಂತಾದ ಕೋಟ್ಯಾಂತರ ರೂಪಾಯಿಗಳ ಆರ್ಥಿಕ ಪ್ಯಾಕೇಜ್‌ಗಳನ್ನು ಪ್ರಕಟಿಸುತ್ತಾ; ಇನ್ನೊಂದು ಕಡೆ ಬೃಹತ್ (ಸಾಮೂಹಿಕ ಅಲ್ಲ) ಬೇಸಾಯ ಯೋಜನೆಗಳಿಗಾಗಿ ಅಮೆರಿಕಾದೊಡನೆ ಸಂಶೋಧನೆ ಮತ್ತು ತರಬೇತಿಯ ಜಂಟಿ ಕಾರ್ಯಕ್ರಮವೊಂದನ್ನು, ಯಾರಿಗೂ ಅದರ ವಿವರ ಗೊತ್ತಾಗದಂತೆ ತೆರೆಮರೆಯಲ್ಲಿ ರೂಪಿಸುತ್ತಾ, ವಿಶೇಷ ಆರ್ಥಿಕ ವಲಯಗಳ ಹೆಸರಲ್ಲಿ ರೈತರ ಭೂಮಿಯನ್ನು ವ್ಯಾಪಾರೋದ್ದೇಶಗಳಿಗಾಗಿ ವಶಪಡಿಸಿಕೊಳ್ಳುವ ನೀತಿಗೆ ಚಾಲನೆ ನೀಡಿದೆ. ಭೂಮಿಯನ್ನು ವ್ಯಾಪಾರಿ ಬಂಡವಾಳವಾಗಿ ನೋಡುವ ಈ ನೀತಿ, ಒಂದು ಸಂಸ್ಕೃತಿಯ ಗತಿ ಲಯಗಳನ್ನೇ ಬುಡಮೇಲುಗೊಳಿಸುವಂತಹ ಅತ್ಯಾಚಾರವೇ ಆಗಿದೆ.

ಇದನ್ನು ಬದಲಾವಣೆ ಎನ್ನುವುರು, ಪರಿಹಾರ ಎನ್ನುವರು. ಆದರೆ ಜನರನ್ನು ಹೀಗೆ ಕಂಗಲಾಗಿಸಿ, ಕೊಲ್ಲುತ್ತಾ ಬರುವ ಬದಲಾವಣೆಯ ಉದ್ದೇಶವಾದರೂ ಏನು? ಇದು ಬದಲಾವಣೆಗೆ ತೆರಬೇಕಾದ ಬೆಲೆ ಎಂದು ವಾದಿಸುವ ಈ ಬದಲಾವಣೆಯ ಏಜೆಂಟರು, ತಾವು ಯಾವ ಬೆಲೆ ತೆತ್ತು ಈ ಬದಲಾವಣೆಯನ್ನು ಸ್ವಾಗತಿಸುತ್ತಿದ್ದೇವೆ ಎಂಬುದರ ಅರಿವನ್ನೇ ಕಳೆದುಕೊಂಡಿರುವರಾಗಿದ್ದಾರೆ. ಹಾಗೆ ನೋಡಿದರೆ, ರೈತರೇನೂ ಬದಲಾವಣೆಗೆ ಒಡ್ಡಿಕೊಳ್ಳದವರೇನಲ್ಲ. ೫೦ ವರ್ಷಗಳ ಹಿಂದೆ 'ಹಸಿರು ಕ್ರಾಂತಿ' ಎಂಬ ಕೃಷಿ ಆಧುನೀಕರಣವನ್ನು ಒಪ್ಪಿ ಅಳವಡಿಸಿಕೊಂಡವರು; ಅದರ ಅತ್ಯಂತಿಕ ದುರಂತವನ್ನೀಗ ಎದುರಿಸುತ್ತಿರುವವರು. ರೈತರಿಗೆ ಬದುಕಿನ ಸಹಜ ಮಾರ್ಗವಾಗಿದ್ದ ಕೃಷಿ, ಆಧುನಿಕ ನಾಗರೀಕತೆಯ ಸೆಳೆತಕ್ಕೆ ಸಿಕ್ಕಿ ಇಂದು ಒಂದು ವ್ಯಾಪಾರ, ಜೂಜಾಗಿ ಪರಿವರ್ತಿತವಾಗಿದೆ. ರಸಗೊಬ್ಬರ, ಕೀಟನಾಶಕ, ಕಳೆನಾಶಕ, ಬೃಹತ್ ಅಣೆಕಟ್ಟುಗಳ ನೀರಾವರಿ ವ್ಯವಸ್ಥೆ ಒತ್ತಾಯಿಸುವ ಹೊಸ ತಾಂತ್ರಿಕ ಕೃಷಿ ಪರಿಕರಗಳ ಹಾಗೂ ಇವೆಲ್ಲವೂ ಒಟ್ಟಾಗಿ ಸೇರಿ ಸೃಷ್ಟಿಸಿದ ಸಾಲ ವ್ಯವಸ್ಥೆಯ ಬಲೆಗೆ ಸಿಕ್ಕ ರೈತ, ಇಂದು ಆಧುನಿಕ ಕೈಗಾರಿಕಾ ಸಾಮ್ರಾಜ್ಯದ ಚಕ್ರವ್ಯೂಹದಲ್ಲಿ ಬಂದಿಯಾಗಿದ್ದಾನೆ. ಇಂತಹ ಕೃಷಿ ಪದ್ಧತಿಗೆ ಸಿಕ್ಕ ನೆಲ-ನೀರು-ಗಾಳಿ ವಿಷಯುಕ್ತವಾಗಿ, ಇದನ್ನು ಪರಿಪರಿಸಿಕೊಳ್ಳಲು ಮತ್ತೆ ಹೊಸ ಸಂಶೋಧನೆ, ತಂತ್ರಜ್ಞಾನ ಹಾಗೂ ಹೊಸ ಬೆಳೆ ಕ್ರಮಗಳಲ್ಲಿ ಸಿಕ್ಕಿ ಹಾಕಿಕೊಂಡು, ಅತ್ತ ಈ ಬಂಧನದಲ್ಲಿ

ನರಕಯಾತನೆ ಪಡುತ್ತಿದ್ದಾನೆ. ಈ ಚಕ್ರವ್ಯೂಹದಿಂದ ರೈತ ನಿಜವಾಗಿ ಬಿಡುಗಡೆಯಾಗಬೇಕಾದರೆ ಇಂದು ಅವನನ್ನು ದುರಂತದ ಅಂಚಿಗೆ ತಂದು ನಿಲ್ಲಿಸಿರುವ ಹಸಿರು ಕ್ರಾಂತಿಗೆ ಆಧಾರವಾಗಿದ್ದ ಆಧುನಿಕ ಕೃಷಿ ಪದ್ಧತಿಯಿಂದ ಇಡಿಯಾಗಿ ಬಿಡುಗಡೆಯಾಗಬೇಕೆಂಬುದು ಈಗ ಸ್ಪಷ್ಟವಾಗಿದೆ.

ಈ ಬಿಡುಗಡೆಯ ದಾರಿಯೇ ಸುಭಾಷ್ ಪಾಳೇಕರರ ಶೂನ್ಯ ಬಂಡವಾಳದ ಕೃಷಿಯಾಗಿದೆ. ಪಾಳೇಕರರು ನಮ್ಮ ಪಾರಂಪರಿಕ ಕೃಷಿ ಜ್ಞಾನವನ್ನು, ಆಧುನಿಕ ವಿಜ್ಞಾನ ತತ್ವಗಳಿಂದ ಪಡೆದ ಒಳನೋಟಗಳ ತಿಳುವಳಿಕೆಯೊಂದಿಗೆ ಪರಿಪುಷ್ಟಗೊಳಿಸಿದ್ದಾರೆ. ರೈತ ಸಮುದಾಯವು ಕಳೆದ ೫೦ ವರ್ಷಗಳಲ್ಲಿ ಆಧುನಿಕ ಕೃಷಿ ಪದ್ಧತಿಗೆ ಪಕ್ಕಾಗಿ ಕೃಷಿ ಕುರಿತಂತೆ ರೂಪಿಸಿಕೊಂಡಿದ್ದ ದೃಷ್ಟಿಕೋನವನ್ನೇ ಅವರು ಬದಲಿಸುತ್ತಾರೆ : ಕೃಷಿ ವೃತ್ತಿಯಲ್ಲ; ಬದುಕು ಎಂದು ನಿರೂಪಿಸುತ್ತಾರೆ. ಜಡಗೊಂಡಿದ್ದ ನಮ್ಮ ಸಾಂಪ್ರದಾಯಿಕ ಕೃಷಿ ಪದ್ಧತಿಗೆ ಹೊಸ ಚೈತನ್ಯ ನೀಡಿದ ಆಧುನಿಕ ಕೃಷಿ ಪದ್ಧತಿ ಈಗ ಸ್ಥಗಿತಗೊಂಡು ತಾಂತ್ರಿಕ ಹಾಗೂ ನೈತಿಕ ಬಿಕ್ಕಟ್ಟಿನಲ್ಲಿರುವುದನ್ನು ಅವರು ಗಮನಿಸಿದ್ದಾರೆ. ಇದರ ಪರಿಣಾಮವಾಗಿ ಅವರು ಈ ಆಧುನಿಕ ಕೃಷಿ ಪದ್ಧತಿಯ ಬುಡಕ್ಕೇ ಕೈ ಹಾಕಲು ಪ್ರೇರೇಪಿತರಾಗಿ ಅದರ ಮೂಲ ತಾತ್ವಿಕತೆಯನ್ನೇ ಪ್ರಶ್ನಿಸುವ ಮೂಲಕ ಕೃಷಿಯ ಮೂಲ ಸತ್ಯಗಳನ್ನು ಪುನರನ್ವೇಷಿಸಿದ್ದಾರೆ. ಇದೇ ಶೂನ್ಯ ಬಂಡವಾಳ ಕೃಷಿ ಪದ್ಧತಿಯೆಂಬ ಹೆಸರಿನಲ್ಲಿ ನಮ್ಮ ರೈತರಿಗೆ ಹೊಸ ಕೃಷಿ ದರ್ಶನ ಮಾಡಿಸಿದೆ.

ಪ್ರಕೃತಿಯನ್ನು ಮಣ್ಣು, ನೀರು, ಗಾಳಿ, ಬಿಸಿಲು, ಬಿತ್ತ ಎಂದು ಬಿಡಿ ಬಿಡಿಯಾಗಿ ನೋಡಿ, ಅವುಗಳನ್ನು ಅನೈಸರ್ಗಿಕ ಹೊರ ಸುರಿತಗಳು ಹಾಗೂ ತಾಂತ್ರಿಕತೆಗಳ ಮೂಲಕ ಒಂದುಗೂಡಿಸಿ ಬೆಳೆ ತೆಗೆಯುವುದು ಆಧುನಿಕ ಕೃಷಿ ಪದ್ಧತಿ. ಇದಕ್ಕೆ ಬದಲಾಗಿ, ಆ ಎಲ್ಲವೂ ಪರಸ್ಪರ ಸಾವಯವ ಸಂಬಂಧ ಪಡೆದ ಒಂದು ಪ್ರಾಕೃತಿಕ ಅಖಂಡತೆಯ ಅವಿಭಾಜ್ಯ ಅಂಗಗಳಾಗಿವೆ ಎಂಬ ಸನಾತನ ತಿಳಿವಳಿಕೆಯೊಂದಿಗೆ ಈ ಹೊಸ ನೈಸರ್ಗಿಕ ಕೃಷಿ ಪದ್ಧತಿಯನ್ನು ರೂಪಿಸಲಾಗಿದೆ. ಹಾಗಾಗಿಯೇ ಇದು ಯಾವುದೇ ಆಧುನಿಕ ತಾಂತ್ರಿಕ ಪರಿಣತಿ ಬೇಡುವುದಿಲ್ಲ. ಬದಲಿಗೆ, ಇದಕ್ಕೆ ಆಧುನಿಕ ಕೃಷಿ ಪದ್ಧತಿಯಿಂದಾಗಿ ಜೀವ ಸ್ಪಂದನ ಕಳೆದುಕೊಂಡಿರುವ ಭೂಮಿಯನ್ನು ಪುನರುಜ್ಜೀವವಗೊಳಿಸಲು ಜೀವಾಮೃತ ಮತ್ತು ಬೀಜಾಮೃತವೆಂಬ ಎರಡು ಸ್ಥಳೀಯ ಗೋಮೂಲವಾದ ಉಪಚಾರಗಳಷ್ಟೇ ಅಗತ್ಯವಾಗಿವೆ. ಹಾಗಾಗಿ ಇದು ಶೂನ್ಯ ಬಂಡವಾಳದ ಕೃಷಿ ಎಂದು ಹೆಸರು ಪಡೆದಿದೆ.

ಇದರಲ್ಲಿ ಹೂಡಲಾಗುವ ನಿಜವಾದ ಬಂಡವಾಳವೆಂದರೆ, ನಿಸರ್ಗದ ಉಸಿರಾಟದ ಮೆಲುದನಿಗಳಲ್ಲಿ ವ್ಯಕ್ತವಾಗುವ ಅದರ ಸೃಜನಶಕ್ತಿಗಳ ಪರಸ್ಪರ ಸಂಬಂಧಗಳನ್ನು ಕುರಿತ ಗುಟ್ಟುಗಳಲ್ಲಿನ ನಂಬಿಕೆ ಮಾತ್ರ. ನಿಸರ್ಗವನ್ನು ಅಖಂಡತೆಯಲ್ಲಿ ಬಂಧಿಸಿರುವ ಕೇಂದ್ರಾಪಗಾಮಿ (Centrifugal), ರೋಮನಾಳಾಕರ್ಷಣ (Capillary) ಹಾಗೂ ನಿಯಂತ್ರಕ – ವಿಘಾತ (Controlling) – ಶಕ್ತಿಗಳ ಬಲದಿಂದ ಬೆಳೆ ತೆಗೆಯುವ ಈ

ಪದ್ಧತಿಯಲ್ಲಿ ರೈತ ನೆಪ ಮಾತ್ರ. ಅಂದರೆ, ನಿಸರ್ಗವೆಂದರೆ ತನ್ನ ಹೊರಗಿನ ಒಂದು ವಿದ್ಯಮಾನವೆಂದು ನೋಡಿ, ಅದನ್ನು ಗೆದ್ದು ಮಣಿಸುವ ತಂತ್ರಗಳ ಮೂಲಕ ಬೆಳೆ ತೆಗೆದು ಲಾಭ-ನಷ್ಟಗಳ ಲೆಕ್ಕಾಚಾರದಲ್ಲಿ ತೊಡಗುವ ವ್ಯಾವಹಾರಿಕತೆಗೆ ವಿರುದ್ಧವಾಗಿ, ತಾನೂ ಅದರ ಒಂದು ಭಾಗವೆಂಬ ತಾದಾತ್ಮ್ಯದಿಂದ ನಡೆಸುವ ಅನುಸಂಧಾನದಲ್ಲಿ ದೊರೆಯುವ ಫಲವನ್ನು, ಸಹಜವೆಂಬಂತೆ ಸ್ವೀಕರಿಸುವ ಸಂತೋಷವಿದು. ಅಂದ ಮಾತ್ರಕ್ಕೆ ಇದು ಅದೃಷ್ಟದ ಆಟ ಎಂದು ಯಾರಾದರೂ ಭಾವಿಸಿದರೆ, ಅವರಿಗೆ ನಿಸರ್ಗದಲ್ಲಿ ನಂಬಿಕೆ ಇಲ್ಲ ಎಂದೇ ಅರ್ಥ. ಪಾಳೇಕಾರರು ಈ ನೈಸರ್ಗಿಕ ಕೃಷಿಯನ್ನು ವ್ಯವಸ್ಥಿತವಾಗಿ ಮಂಡಿಸುವ ಮುನ್ನವೇ, ಕರ್ನಾಟಕ ಹಲವಾರು ರೈತರು ನಿಸರ್ಗವನ್ನು ನಂಬಿಯೇ ಹೀಗೆ ಕೃಷಿ ಮಾಡಿ ಬೆಳೆ ತೆಗೆದುಕೊಂಡು ಸಂತೃಪ್ತ ಜೀವನ ನಡೆಸುತ್ತಿದ್ದಾರೆ. ಜೊತೆಗೆ ಈಗ ಪಾಳೇಕಾರರ ಕೃಷಿ ಪದ್ಧತಿಯನ್ನು ಪಾಲಿಸಿ, ಆಧುನಿಕ ಕೃಷಿ ಪದ್ಧತಿಯನ್ನು ಪಾಲಿಸಿ ಪಡೆದ ಬೆಳೆಯಷ್ಟೇ ಅಥವಾ ಅದಕ್ಕೂ ಹೆಚ್ಚು ಗಾತ್ರ ಹಾಗೂ ಗುಣದಲ್ಲಿ ಫಸಲು ಪಡೆದವರೂ ನಮ್ಮ ಮುಂದೆ ಇದ್ದಾರೆ ಎಂಬುದನ್ನು ನಾವು ಗಮನಿಸಬೇಕು. ಹಾಗಾಗಿ ಇದು ಫಲಪ್ರದ ಕೃಷಿ ಕೂಡ.

ಆದರೆ ಈ ಶೂನ್ಯ ಬಂಡವಾಳದ ಕೃಷಿಯ ನಿಜವಾದ ಮೌಲಿಕತೆ ಇರುವುದು, ಅದರ ಈ ಫಲಪ್ರದತೆಯಲ್ಲಿ ಅಲ್ಲ; ರೈತನನ್ನು ಸದ್ಯದ ರೈತತ್ವದ ಅಸಹಜ 'ವೃತ್ತಿಭಾರ'ಗಳಿಂದ ಬಿಡುಗಡೆಗೊಳಿಸಿ, ನಿಸರ್ಗ ಸಹಜ ಸಂತೋಷಕ್ಕೆ ಸಜ್ಜುಗೊಳಿಸುವ ಮೂಲಕ ಅವನನ್ನು ಹೊಸ ಮನುಷ್ಯನನ್ನಾಗಿಯೂ ಮಾಡುವುದರಲ್ಲಿ. ಸಹಜ ಕೃಷಿಯ ಹರಿಕಾರ ಫುಕೊವೊಕಾ ಹೇಳುವಂತೆ, ಕೃಷಿಯ ನಿಜವಾದ ಅರ್ಥಪೂರ್ಣತೆ ಇರುವುದು ಬೆಳೆ ತೆಗೆಯುವುದರಲ್ಲಿ ಅಲ್ಲ; ಬದಲಿಗೆ ಆ ಮೂಲಕ ಮಾನವತೆಯ ಬೆಳೆ ತೆಗೆದು, ಅದನ್ನು ಸುಧಾರಿಸಿಕೊಳ್ಳುವುದರಲ್ಲಿ. ಪಾಳೇಕಾರರ ಕೃಷಿ ಪದ್ಧತಿ ಫುಕೋವೊಕಾನ ಕೃಷಿ ದರ್ಶನದಿಂದಲೇ ಮೂಲ ಸ್ಫೂರ್ತಿಪಡೆದು, ಆಧುನಿಕ ಕೃಷಿ ಪದ್ಧತಿಯ ಅನಾಹುತಗಳ ಹಿನ್ನೆಲೆಯಲ್ಲಿ ಅದನ್ನು ಭಾರತೀಯ ಸಂದರ್ಭಕ್ಕೆ ಅಳವಡಿಸಿರುವುದೇ ಆಗಿದೆ. ಉಳುಮೆ ಮಾಡದ, ಗೊಬ್ಬರ ಹಾಕದ, ಕಳೆ ಕೀಳದ, ಕೀಟನಾಶಕ ಬಳಸದ ಸರಳ ಹಾಗೂ ಸಭ್ಯ ವಿಧಾನಗಳ ಈ ಸಹಜ ಕೃಷಿಯ ಅಂತಿಮ ಗುರಿ, ಸಹಜ ಮನುಷ್ಯನನ್ನು ಮರುಸೃಷ್ಟಿಸುವುದೇ ಆಗಿದೆ.

ಇದು ಇನ್ನೊಂದು ಅರ್ಥದಲ್ಲಿ, ಅವನನ್ನು ಅಸಹಜಗೊಳಿಸಿರುವ ಕೃಷಿ ಕೈಗಾರಿಕಾ ಸಾಮ್ರಾಜ್ಯದ ಆಧಾರಗಳನ್ನೇ – ಗೊಬ್ಬರ, ಕಳೆ-ಕೀಟ-ಕ್ರಿಮಿನಾಶಕ ಹಾಗೂ ತಾಂತ್ರಿಕ ಕೃಷಿ ಉಪಕರಣಗಳ ಬಳಕೆಯನ್ನೇ – ಅಪ್ರಸ್ತುತಗೊಳಿಸುವುದೇ ಆಗಿದೆ. ಇದು ಮಾತ್ರ ಆರಂಭದಲ್ಲಿ ನಾನು ಗ್ರಾಮ ಸಂಸ್ಕೃತಿಯ ಅಪ್ರಸ್ತುತೀಕರಣ ಎಂದು ಯಾವುದನ್ನು ಕರೆದೆನೋ, ಆ ಜಾಗತೀಕರಣವನ್ನು ಮುಖಾಮುಖಿಯಾಗಿ ಎದುರಿಸಲು ಸಾಧ್ಯ. ಇಡೀ ಜೀವ ಜಗತ್ತಿನಲ್ಲಿ ಮನುಷ್ಯನ ಹೊರತಾಗಿ ಮಿಕ್ಕೆಲ್ಲ ಪ್ರಾಣಿಗಳು ಸುಮ್ಮನೆ ಬದುಕುತ್ತಿವೆ; ಮನುಷ್ಯ ಮಾತ್ರ ಬದುಕಲು ದುಡಿಯುತ್ತಾ ಕಷ್ಟಗಳನ್ನು ತಂದುಕೊಂಡಿದ್ದಾನೆ

ಎಂಬ ಘುಕೋವ್ವೋಕಾನ ಮಾತು ಧ್ವನಿಸುವ ಮನುಷ್ಯ ನಾಗರೀಕತೆಯ ದುರಂತ ಜಾಗತೀಕರಣದ ಹಂತದಲ್ಲಿ ತನ್ನ ಪರಾಕಾಷ್ಠತೆಯನ್ನು ಮುಟ್ಟಿದಂತೆ ತೋರುತ್ತದೆ. ಭಾರತೀಯ ಸಂದರ್ಭದಲ್ಲಿ ಈ ಶೂನ್ಯ ಬಂಡವಾಳದ ನೈಸರ್ಗಿಕ ಕೃಷಿ, ನಮ್ಮನ್ನೆಲ್ಲ ಈ ದುರಂತದಿಂದ ಪಾರುಮಾಡುವ ಮೊದಲ ಹೆಜ್ಜೆಯಾಗಬಹುದು. ಹಾಗಾಗಿಯೇ ನಾನು ರೈತನಲ್ಲದಿದ್ದರೂ ನಿಮ್ಮೊಂದಿಗೆ ಮಾತನಾಡಲು ಇಲ್ಲಿ ನಿಂತಿರುವುದು.

ಇಂತಹ ಮಹತ್ವದ ಕೆಲಸವನ್ನು ಗೆಳೆಯ ಸ್ವಾಮಿ ಆನಂದ್ ಈ ಕುರಿತ ಸಕಲ ಮಾಹಿತಿ ಇರುವ ಪುಸ್ತಕ ಬರೆದು, ಇಂತಹ ಅನೇಕ ಕಾರ್ಯಾಗಾರಗಳನ್ನು ಸಂಘಟಿಸಿ, ಧಾರ್ಮಿಕವೆಂದು ಕರೆಯಬಹುದಾದ ಶ್ರದ್ಧೆಯಿಂದ ಮಾಡುತ್ತಿದ್ದಾರೆ. ಅದಕ್ಕಾಗಿ ನಾನು ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಜೊತೆಗೊಂದು ಕಿವಿ ಮಾತು ಕೂಡಾ : ಧಾರ್ಮಿಕ ಶ್ರದ್ಧೆ, ಮತಾಂತರದ ಉತ್ಸಾಹದ ರೂಪದಲ್ಲಿ ಪ್ರಕಟವಾಗಬಾರದು. ಮಾಹಿತಿ ಸ್ಫೋಟದ ಇಂದಿನ ದಿನಗಳಲ್ಲಿ ಜನ ಎಲ್ಲರ ಮಾತನ್ನು ಕೇಳುವ ಹಾಗೂ ತಮಗೆ ಸರಿಯೆನ್ನಿಸಿದ್ದನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶ ಪಡೆದಿದ್ದಾರೆ. ಹೀಗಾಗಿ ಜಾಹೀರಾತು ತರಹದ ಸ್ವಯಂ ವೈಭವೀಕರಣ ಮತ್ತು ಅನ್ಯ ಖಂಡನೆಯ ಮಾತುಗಳು ತದ್ವಿರುದ್ಧ ಪರಿಣಾಮಗಳನ್ನು ಉಂಟುಮಾಡಬಲ್ಲವು. ಆದುದರಿಂದ ನಿಮ್ಮ ಸತ್ಯವನ್ನು ನೀವು ಹೇಳಿ. ಆಯ್ಕೆಯನ್ನು ಜನರ ವಿವೇಕಕ್ಕೆ ಬಿಡಿ ಎಂದು ಸೂಚಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ನಮಸ್ಕಾರ.

■

‘ರಾಮದಾಸ್’ಗೆ ನಮಸ್ಕಾರ’ದ ನೆಪದಲ್ಲಿ...

ಸಮಾಜವಾದಿ ಚಳುವಳಿಯನ್ನು ಭಾರತದಲ್ಲಿ ಕೇವಲ ರಾಷ್ಟ್ರೀಯ ಚೌಕಟ್ಟಿನ ಸಾಮಾಜಿಕ ಚಳುವಳಿಯ ಮಟ್ಟಕ್ಕಷ್ಟೇ ಸೀಮಿತಗೊಳಿಸಿ ಅದರ ಸಾಧ್ಯತೆಗಳೆನ್ನೆಲ್ಲ ಸೂರೆ ಮಾಡಿ ದಿಕ್ಕೆಟ್ಟು ಕೂತಿರುವ ಸಮಾಜವಾದಿಗಳು, ಈಗಲಾದರೂ ಅದರ ಜಾಗತಿಕ ಸ್ವರೂಪದಲ್ಲಿ ಅಡಗಿರುವ ನಿತ್ಯಸತ್ಯದ ಕಡೆ ಗಮನ ಹರಿಸಬೇಕಿದೆ. ಲೋಹಿಯಾ ಪ್ರತಿಪಾದಿಸಿದ ಸಮಾಜವಾದ ಮೂಲಭೂತವಾಗಿ ಹೊಸ ಅಭಿವೃದ್ಧಿ ಮೀಮಾಂಸೆಯನ್ನು ಆಧರಿಸಿದ ಒಂದು ಜಾಗತಿಕ ರಾಜಕೀಯ ಚಳುವಳಿಯೇ ಆಗಿತ್ತು. ಅದನ್ನು ಹಾಗೆ, ಒಂದು ಹೊಸ ಜಾಗತಿಕ ನಾಗರೀಕತೆಯ ಅಸ್ತಿವಾರದಂತೆ ರೂಪಿಸಲೂ ಲೋಹಿಯಾ ಶ್ರಮಿಸಿದ್ದರು. ವೈಜ್ಞಾನಿಕ ಮತ್ತು ತಾಂತ್ರಿಕ ಅನ್ವೇಷಣೆಗಳ ನಿರಂತರ ಅನ್ವಯವನ್ನಾಧರಿಸಿದ ತಂತ್ರಜ್ಞಾನ ಸೃಜಿಸುವ ಸದಾ ಏರುತ್ತಾ ಹೋಗುವ ಜೀವನ ಮಟ್ಟವು ತನ್ನ ಭೌತಿಕ ಹಾಗೂ ಮಾನವ ಸಂಪನ್ಮೂಲಗಳ ಅಗತ್ಯಗಳಿಗಾಗಿ ಜಗತ್ತಿನ ಒಂದು ಭಾಗವನ್ನು ಒಂದಲ್ಲ ಒಂದು ರೂಪದಲ್ಲಿ ವಸಾಹತುವನ್ನಾಗಿ ಮಾಡಿಕೊಳ್ಳುವ ಅನಿವಾರ್ಯತೆಯನ್ನುಂಟು ಮಾಡಿ, ಒಟ್ಟಾರೆ ಮಾನವತೆಯ ಮಹೋನ್ನತಿಗೆ ಭಂಗ ತರುವುದೆಂದು ಅವರು ವಿಶ್ಲೇಷಿದ್ದರು.

ಸ್ನೇಹಿತರೆ,

ಇದು ‘ಚಿಂತನಾಗೋಷ್ಠಿ’. ಆಹ್ವಾನ ಪತ್ರಿಕೆ ಪ್ರಕಾರ ನಾನು ಮಾತನಾಡಬೇಕಾಗಿರುವುದು ‘ಸಮಾಜವಾದಿ ಹೋರಾಟ’ದ ಬಗ್ಗೆ. ಆದರೆ ಇದು ರಾಮದಾಸರ ನೆನಪಿನ ಕಾರ್ಯಕ್ರಮವೂ ಆಗಿರುವುದರಿಂದ ನಾನು ಮಾತನಾಡಬೇಕಾಗಿರುವುದು ಸಮಾಜವಾದಿ ಹೋರಾಟದ ಬಗೆಗೋ, ಸಮಾಜವಾದಿ ಹೋರಾಟದಲ್ಲಿ ರಾಮದಾಸರ ಪಾತ್ರದ ಬಗೆಗೋ ತಿಳಿಯದಾಗಿದೆ. ಈ ಕಾರ್ಯಕ್ರಮದ ಸಂಘಟಕರು ಇದೀಗ ತಾನೇ, ಎರಡೂ ವಿಷಯ ಸೇರಿಸಿ ಮಾತನಾಡಬಹುದು ಎಂದು ಸೂಚಿಸಿದ್ದಾರೆ! ಹಾಗೆ ನೋಡಿದರೆ, ಆಹ್ವಾನ ಪತ್ರಿಕೆಯನ್ನು ಕಣ್ಣಾರೆ

ನೋಡುವವರೆಗೂ ನಾನು ಈ ಕಾರ್ಯಕ್ರಮದಲ್ಲಿ ಭಾಗವಹಿಸಬೇಕಾಗುತ್ತದೆನ್ನುವುದು ನನಗೆ ಗೊತ್ತಿರಲಿಲ್ಲ... ಇದನ್ನು ನಾನು ಸಂಘಟಕರ ಲೋಪವನ್ನು ಸೂಚಿಸಲು ಹೇಳುತ್ತಿಲ್ಲ. ಬದಲಿಗೆ, ಲೋಹಿಯಾ, ಗೋಪಾಲಗೌಡರಂತಹ ಹಿರಿಯ ನಾಯಕರಿಂದ ಹಿಡಿದು ರಾಮದಾಸರವರೆಗೆ ನಮ್ಮ ಬಹುಪಾಲು ಸಮಾಜವಾದಿಗಳು ಅನಿರೀಕ್ಷಿತ ಅನಾರೋಗ್ಯ ಹಾಗೂ ಅಕಾಲಿಕ ಮರಣಕ್ಕೆ ತುತ್ತಾಗುತ್ತಿರುವುದಕ್ಕೆ, ಹತ್ತಾರು ವರ್ಷಗಳಿಂದ ಸಾರ್ವತ್ರಿಕವಾಗಿ ನಮ್ಮ ಬಹುಪಾಲು ಎಲ್ಲ ಪ್ರಗತಿಪರ ಚಟುವಟಿಕೆಗಳು ಮತ್ತು ನಿರ್ದಿಷ್ಟವಾಗಿ ಸಮಾಜವಾದಿ ಚಟುವಟಿಕೆಗಳು ಹೀಗೆ ಅವ್ಯವಸ್ಥಿತವಾಗಿ, ಯಾವುದೇ ನಿರಂತರತೆ ಇಲ್ಲದೆ–ಒಂದು ಸಮಗ್ರ ಗುರಿಯಿಲ್ಲದೆ–ದಿನವಹಿ ಆಧಾರದ ಮೇಲೆ ನಡೆದುಕೊಂಡು ಬರುತ್ತಿರುವದೂ ಒಂದು ಕಾರಣವಿರಬಹುದಲ್ಲವೇ ಎಂದು ಸೂಚಿಸಲು ಮಾತ್ರ. ದಯವಿಟ್ಟು ಯೋಚಿಸಿ.

ರಾಮದಾಸ್ ಸ್ವತಃ ಹೀಗಿರಲಿಲ್ಲ. ತಮ್ಮ ವೈಯುಕ್ತಿಕ ಬದುಕಿನಲ್ಲಿ ಸ್ವಲ್ಪ ಅಶಿಸ್ತಿನ ಮನುಷ್ಯರಾಗಿದ್ದಂತೆ ತೋರಿದರೂ, ತಾನೇ ಕಾರ್ಯಕ್ರಮವೊಂದನ್ನು ಸಂಘಟಿಸುವ ಜವಾಬ್ದಾರಿಯನ್ನು ಹೊತ್ತುಕೊಂಡಾಗ ಸಕಲ ವಿವರಗಳ ಕಡೆಗೂ ಗಮನ ನೀಡಿ ಕಾರ್ಯಕ್ರಮಕ್ಕೊಂದು ಗುರಿ ಒದಗಿಸುತ್ತಿದ್ದರಲ್ಲದೆ, ಅದು ಆ ಗುರಿ ಮುಟ್ಟುವಂತೆ ಸರ್ವ ಪ್ರಯತ್ನಗಳನ್ನೂ ಮಾಡುತ್ತಿದ್ದರು. ಆ ಸಂದರ್ಭದಲ್ಲಿನ ಅವರ ಪೇಚಾಟವನ್ನು ನೋಡಿ ನಮಗೇ ಕನಿಕರ ಮೂಡುತ್ತಿತ್ತು! ಅವರ ಸಮಾಜವಾದಿ ಬದ್ಧತೆಯೂ ಅಷ್ಟೆ. ಸಮಾಜವಾದಿ ಚಟುವಟಿಕೆಗೆ ಸಂಬಂಧಿಸಿದಂತೆ ಯಾರೇ ಎಲ್ಲಿಗೇ ಕರೆಯಲಿ, ಯಾವುದೇ ನೆಪ ಹೇಳದೆ–ಹಲವು ಬಾರಿ ತೀವ್ರ ಅನಾರೋಗ್ಯದ ನಡುವೆಯೂ–ಸಕಾಲದಲ್ಲಿ ಹಾಜರಾಗಿ ತಮಗನ್ನಿಸಿದ್ದನ್ನು ನಿಷ್ಠುರವಾಗಿ ಹೇಳಿ ಬರುತ್ತಿದ್ದರು ಮತ್ತು ಇಂತಹ ಕಾರ್ಯಕ್ರಮಗಳಲ್ಲಿ ತೆಗೆದುಕೊಳ್ಳುತ್ತಿದ್ದ ನಿರ್ಣಯಗಳಿಗಳಿಗೆ ಬದ್ಧರಾಗಿರುತ್ತಿದ್ದರು. ಅಷ್ಟೇ ಅಲ್ಲ, ಲೋಹಿಯಾ ಕಾಲದ ಸಮಾಜವಾದಿಯಾದ ಅವರು ಸಮಾಜವಾದಿ ತತ್ವದ ಬಗ್ಗೆ ಎಷ್ಟು ಆಳವಾದ ತಿಳುವಳಿಕೆ ಮತ್ತು ಸ್ಪಷ್ಟತೆ ಹೊಂದಿದ್ದರೆಂದರೆ, ಸಮಾಜವಾದಿ ತತ್ವ ಇತ್ತೀಚಿನ ಜನಪ್ರಿಯ ರಾಜಕಾರಣಕ್ಕೆ ಸಿಕ್ಕಿ ದಿಕ್ಕಾಪಾಲಾಗಿ ಹೋಗಲಾರಂಭಿಸಿದ ಸಂದರ್ಭದಲ್ಲಿ, ಯಾವ ಗೊಂದಲಕ್ಕೂ ಸಿಗದೆ ತಮಗನ್ನಿಸಿದ್ದನ್ನು ನೇರವಾಗಿ ಹೇಳುವ ದಿಟ್ಟತನವನ್ನು ಉಳಿಸಿಕೊಂಡಿದ್ದರು.

ಉದಾಹರಣೆಗೆ, ಇತ್ತೀಚಿನ ವರ್ಷಗಳಲ್ಲಿ ಜಾತಿ ವಿನಾಶದ ಸಮಾಜವಾದಿ ತತ್ವವು ಸಾಮಾಜಿಕ ನ್ಯಾಯ ಚಳುವಳಿಯೆಂಬ ಮೀಸಲಾತಿ ವಿಸ್ತರಣೆಯ ಚಳುವಳಿಯಾಗಿ ಕುಬ್ಜಗೊಂಡು ಜಾತಿ ಸಮಾನತೆಯನ್ನು ಪ್ರತಿಪಾದಿಸತೊಡಗಿದಾಗ, ರಾಮದಾಸ್ ಅದನ್ನು ಕಟುವಾಗಿ ಖಂಡಿಸಿದರು. ಈ ಸಂಬಂಧ ಅವರು ಕರ್ನಾಟಕದಲ್ಲಿ ಇಂತಹ ಸಾಮಾಜಿಕ ನ್ಯಾಯ ಚಳುವಳಿಗೆ ಚಾಲನೆ ನೀಡಿದ ಹಾವನೂರ್ ವರದಿಯ ಉದ್ದೇಶದ ಬಗೆಗೇ ತಮ್ಮ ಭಿನ್ನಾಭಿಪ್ರಾಯವನ್ನು (ಶಿವಮೊಗ್ಗದ 'ಬಹುಮತ ಸಂಘಟನೆ'ಗೆ ನೀಡಿದ ಧ್ವನಿಮುದ್ರಿತ ಸಂದರ್ಶನವೊಂದರಲ್ಲಿ) ದಾಖಲಿಸಲು ಅವರು ಹಿಂಜರಿಯಲಿಲ್ಲ. ಹಾವನೂರ್ ವರದಿಯ ಶಿಫಾರ್ಸುಗಳನ್ನು ಅವರು ಸ್ವಾಗತಿಸಿದರಾದರೂ, ವರದಿ

ಜಾತಿ ವಿನಾಶಕ್ಕೆ ಬದಲು ಜಾತಿ ಸಮಾನತೆಯ ಗುರಿಯಿಟ್ಟುಕೊಂಡಿದ್ದುದರ ಬಗೆಗೆ ಅವರ ತೀವ್ರ ಅಸಮಧಾನವಿತ್ತು. ಹಾಗೇ ಪ್ರೊ॥ ರವಿವರ್ಮ ಕುಮಾರ್‌ರಂತಹ ಹಾವನೂರ್‌ವಾದಿಗಳು ಜನಸಂಖ್ಯಾಧಾರಿತ ಮೀಸಲಾತಿಯ ಪ್ರಸ್ತಾಪ ಮಾಡಿದಾಗ, ಅದು ಸಾಮಾಜಿಕ ಸ್ಥಗಿತತೆಗೆ ಕಾರಣವಾಗುತ್ತದೆಯೆಂದು ಅದರ ವಿರುದ್ಧ (೨೦೦೨ರಲ್ಲಿ ಚಿತ್ರದುರ್ಗದಲ್ಲಿ ನಡೆದ ದಿ॥ ಬಿ. ಕೃಷ್ಣಪ್ಪ ನೆನಪಿನ ಕಾರ್ಯಕ್ರಮವೊಂದರಲ್ಲಿ) ಎಚ್ಚರಿಕೆ ನೀಡಿದರು. ಇತ್ತೀಚೆಗೆ ಸಾಮಾಜಿಕ ನ್ಯಾಯದ ಹೆಸರಿನಲ್ಲಿ ಒಂದನೇ ತರಗತಿಯಿಂದಲೇ ಇಂಗ್ಲಿಷ್ ಕಲಿಸಬೇಕೆಂದು ಒತ್ತಾಯಿಸುವ ಆಂದೋಲನ ಆರಂಭವಾದಾಗಲೂ, ರಾಮದಾಸ್ ತಮ್ಮ ಹಲವು ಸಮಾಜವಾದಿ ಗೆಳೆಯರ ಪಕ್ಷಾಂತರದಿಂದ ವಿಚಲಿತರಾಗದೆ, ಅದನ್ನು ವಿರೋಧಿಸಿದರು. ಜಾಗತೀಕರಣದ ದುಷ್ಪರಿಣಾಮಗಳ ವಿರುದ್ಧ ಹೋರಾಡಲು ಮಾತೃಭಾಷೆಗಳನ್ನು ಬಲಪಡಿಸಬೇಕಾದುದೂ ಮುಖ್ಯವೆಂದು ಭಾವಿಸಿದ್ದ ಅವರು; ೨೦೦೩ರಲ್ಲಿ ಈ ಸಂಬಂಧ ನಾನು ಬರೆದಿದ್ದ ಕಿರು ಪುಸ್ತಕದ ಬಿಡುಗಡೆ ಸಮಾರಂಭದ ಅಧ್ಯಕ್ಷತೆ ವಹಿಸಿ, ಶಿಕ್ಷಣದಲ್ಲಿ ಮಾತೃಭಾಷೆಯ ಪ್ರಾಥಮಿಕತೆ ಕುರಿತ ಸಮಾಜವಾದಿ ತತ್ವದ ಬಗೆಗಿನ ತಮ್ಮ ಬದ್ಧತೆಯನ್ನು ಪುನರುಚ್ಚರಿಸಿದ್ದರು.

ಹೀಗೆ ಸಮಾಜವಾದಿ ಚಳುವಳಿ ಕೇವಲ ಹಿಂದುಳಿದ ವರ್ಗಗಳ ಜಾತಿ ರಾಜಕಾರಣವಾಗಿ ಅವನತಿಗೊಳ್ಳುತ್ತಿದ್ದಾಗ, ರಾಮದಾಸ್ ಸಮಾಜವಾದಿ ಚಳುವಳಿ ಅದಕ್ಕಿಂತ ದೊಡ್ಡದು ಎಂಬ ಎಚ್ಚರದೊಂದಿಗೆ ತತ್ಕಾಲೀನ ಬೆಳವಣಿಗೆಗಳಿಗೆ ಪ್ರತಿ ಸ್ಪಂದಿಸುತ್ತಿದ್ದರು. ಇತ್ತೀಚೆಗೆ ಅವರು ಪದೇ ಪದೇ ಹೇಳುತ್ತಿದ್ದ ಮಾತೆಂದರೆ, 'ಅಭಿವೃದ್ಧಿ ಎಂಬುದು ಒಂದು ಭ್ರಮೆ' ಎಂಬುದು.(ವಿವರಗಳಿಗಾಗಿ ಎನ್.ಕೆ.ಹನುಮಂತಯ್ಯ ಅವರೊಡನೆಯ ಮಾತುಕತೆಯನ್ನು ನೋಡಿ:'ಊರುಕೇರಿ' ಪತ್ರಿಕೆ) 'ಚಾರ್ವಾಕ'ರೆನಿಸಿ ಬದುಕಿನ ಭೌತವಾದಿ ಸ್ವರೂಪದಲ್ಲೇ ನಂಬಿಕೆಯಿರಿಸಿದ್ದ ರಾಮದಾಸ್, ಮನುಷ್ಯನ ಸಾಮಾನ್ಯ ಸುಖ-ಸಂತೋಷಗಳ ಬಗ್ಗೆ ವೈರಾಗ್ಯ ಭಾವವನ್ನೇನೂ ತಾಳಿರಲಿಲ್ಲವಾದರೂ; ಜಾಗತೀಕರಣ ಪ್ರತಿಪಾದಿಸಿ ಜಾರಿಗೆ ತರಲಾರಂಭಿಸಿರುವ 'ಅಭಿವೃದ್ಧಿ' ಕುರಿತು ತೀವ್ರ ಭಿನ್ನಾಭಿಪ್ರಾಯ ಹೊಂದಿದ್ದರು. ತಮ್ಮ ಕೊನೆಯ ದಿನಗಳಲ್ಲಿ ಪರಿಸರ ಚಳುವಳಿ ಕುರಿತು ವಿಶೇಷ ಆಸಕ್ತಿ ತಾಳಿದ್ದ ಅವರು, ನೆಲ-ನೀರು-ಗಾಳಿ-ಆಕಾಶ-ಪಶು-ಪಕ್ಷಿ-ಗಿಡ-ಮರಗಳನ್ನು ನಾಶ ಮಾಡುತ್ತಾ ಬರುತ್ತಿರುವ 'ಅಭಿವೃದ್ಧಿ' ಬೇಡವೇ ಬೇಡ ಎನ್ನುತ್ತಿದ್ದರು. ಆ ಮೂಲಕ ಅವರು ಈಗ ಸಮಾಜವಾದಿಗಳಿಗೆ ಮರೆತೇ ಹೋಗಿರುವಂತಿರುವ ಸಮಾಜವಾದದ ಜಾಗತಿಕ ಆಯಾಮದ ಕಡೆ ಪರೋಕ್ಷವಾಗಿಯಾದರೂ ಗಮನ ಸೆಳೆಯುವ ಪ್ರಯತ್ನ ಮಾಡಿದ್ದರು. ಕಳೆದ ಮಾರ್ಚ್‌ನಲ್ಲಿ ಚಿತ್ರದುರ್ಗದಲ್ಲಿ 'ಅಭಿರುಚಿ' ವೇದಿಕೆಯಡಿ ಏರ್ಪಡಿಸಲಾಗಿದ್ದ 'ಲೋಹಿಯಾ ನೆನಪು' ಕಾರ್ಯಕ್ರಮದಲ್ಲಿ ರಾಮದಾಸ್ ಮಾತನಾಡಿದ್ದು, ಲೋಹಿಯಾ ಬಗೆಗೂ ಅಲ್ಲ, ಸಮಾಜವಾದದ ಬಗೆಗೂ ಅಲ್ಲ; ಅಭಿವೃದ್ಧಿಯ ಹೆಸರಲ್ಲಿ ನಾಶವಾಗುತ್ತಿರುವ ಪರಿಸರದ ಬಗ್ಗೆ ಮತ್ತು ಈ ಕುರಿತ ಯುವಜನರ ಅನಾಸಕ್ತಿಯ ಬಗೆಗೆ.

ಹಾಗೆ ನೋಡಿದರೆ, ಇಂದು ಸಮಾಜವಾದಿ ಚಳುವಳಿ ಪುನಃಶ್ಚೇತನಗೊಳ್ಳುವ ಸಾಧ್ಯತೆ ಇದ್ದರೆ, ಅದು ಪರಿಸರದ ಪ್ರಶ್ನೆಯನ್ನು ಕೇಂದ್ರವನ್ನಾಗಿಟ್ಟುಕೊಂಡು ತನ್ನ ಸಂಕಥನವನ್ನು ಪುನಾರಚಿಸಿಕೊಳ್ಳುವ ಮೂಲಕ ಮಾತ್ರ. ಇತ್ತೀಚೆಗೆ ಬ್ಯಾಕಾಂಕ್‌ನಲ್ಲಿ ನಡೆದ ಜಾಗತಿಕ ಪರಿಸರ ಸಮ್ಮೇಳನದಲ್ಲಿ ಕ್ಯೂಟೋ ಸಮ್ಮೇಳನದ ಘೋಷಣೆಯನ್ನೇ ಪುನಃರುಚ್ಚರಿಸುತ್ತಾ, ಭೂಮಿಯನ್ನು ಉಳಿಸಲು ಇನ್ನು ಏಳು ವರ್ಷಗಳು ಮಾತ್ರ ಬಾಕಿಯಿವೆ ಎಂದು ಸ್ವತಃ ವಿಜ್ಞಾನಿಗಳೇ ಕಟು ಎಚ್ಚರಿಕೆ ನೀಡಿದ್ದಾರೆ. ಆದರೂ, ಧರೆಯ ಆತಂಕಕಾರಿ ಬಿಸಿಯೇರಿಕೆಗೆ ಭಾರತ ಮತ್ತು ಚೀನಾದಂತಹ ಅಭಿವೃದ್ಧಿಶೀಲ ದೇಶಗಳ ಹಿಂದುಳಿದ ತಂತ್ರಜ್ಞಾನವೇ ಕಾರಣ ಎಂದು ವಾದಿಸುತ್ತಾ, ತಮ್ಮ ದೇಶದ ಜನರ ಅತಿ ಗ್ರಾಹಕವಾದಿ ಜೀವನ ಕ್ರಮವನ್ನು ಬದಲಾಯಿಸಿಕೊಳ್ಳಲಿಚ್ಛಿಸದ ಅಮೆರಿಕಾದಂತಹ ಅಭಿವೃದ್ಧಿಗೊಂಡ ಹಠಮಾರಿ ದೇಶಗಳು ಒಂದು ಕಡೆ. ಈ ಬಗೆಗಿನ ವರದಿಗಳೆಲ್ಲ ಉತ್ಪ್ರೇಕ್ಷಿತವೆಂದು ಭಾವಿಸುತ್ತಾ, ಈಗ ತಾನೇ ಅತ್ಯಾಧುನಿಕ ಸುಖ-ಸವಲತ್ತುಗಳ ಪ್ರಪಂಚಕ್ಕೆ ತೆರೆದುಕೊಂಡು ಅವನ್ನು ಸುಲಭವಾಗಿ ಬಿಡಲಾಗದ ಸಂಕಟದಲ್ಲಿರುವ ಭಾರತದಂತಹ ಅಭಿವೃದ್ಧಿಶೀಲ ದೇಶಗಳ ಜನಸ್ತೋಮದ ಹಪಾಹಪಿ ಇನ್ನೊಂದು ಕಡೆ. ಹೀಗೆ ಜಗತ್ತು ಜಾಗತೀಕರಣದ ಅತ್ಯುತ್ಸಾಹದಲ್ಲಿ ಅದರ ಲೌಕಿಕ ಬೆರಗಿಗೆ ಸಿಕ್ಕಿ ಅವಿವೇಕಿಯಂತೆ ವರ್ತಿಸುತ್ತ ಭೂಮಿಯನ್ನೇ ನಾಶ ಮಾಡಹೊರಟಿರುವಾಗ, ಸಮಾಜವಾದ ತನ್ನ ಹಿರಿತನಕ್ಕೆ ತಕ್ಕ ವಿವೇಕದೊಂದಿಗೆ ಜಗದ್ರಕ್ಷಕ ತತ್ವವಾಗಿ ಹೊಸದಾಗಿ ಹೊರಹೊಮ್ಮಬೇಕಿದೆ. ಇದು ಸಮಾಜವಾದದ ಪುನರನ್ವೇಷಣೆ ಕೂಡ.

ಸಮಾಜವಾದಿ ಚಳುವಳಿಯನ್ನು ಭಾರತದಲ್ಲಿ ಕೇವಲ ರಾಷ್ಟ್ರೀಯ ಚೌಕಟ್ಟಿನ ಸಾಮಾಜಿಕ ಚಳುವಳಿಯ ಮಟ್ಟಕ್ಕಷ್ಟೇ ಸೀಮಿತಗೊಳಿಸಿ ಅದರ ಸಾಧ್ಯತೆಗಳೆನ್ನೆಲ್ಲ ಸೂರೆ ಮಾಡಿ ದಿಕ್ಕೆಟ್ಟು ಕೂತಿರುವ ಸಮಾಜವಾದಿಗಳು, ಈಗಲಾದರೂ ಅದರ ಜಾಗತಿಕ ಸ್ವರೂಪದಲ್ಲಿ ಅಡಗಿರುವ ನಿತ್ಯಸತ್ಯದ ಕಡೆ ಗಮನ ಹರಿಸಬೇಕಿದೆ. ಲೋಹಿಯಾ ಪ್ರತಿಪಾದಿಸಿದ ಸಮಾಜವಾದ ಮೂಲಭೂತವಾಗಿ ಹೊಸ ಅಭಿವೃದ್ಧಿ ಮೀಮಾಂಸೆಯನ್ನು ಆಧರಿಸಿದ ಒಂದು ಜಾಗತಿಕ ರಾಜಕೀಯ ಚಳುವಳಿಯೇ ಆಗಿತ್ತು. ಅದನ್ನು ಹಾಗೆ, ಒಂದು ಹೊಸ ಜಾಗತಿಕ ನಾಗರೀಕತೆಯ ಅಸ್ತಿವಾರದಂತೆ ರೂಪಿಸಲೂ ಲೋಹಿಯಾ ಶ್ರಮಿಸಿದ್ದರು. ವೈಜ್ಞಾನಿಕ ಮತ್ತು ತಾಂತ್ರಿಕ ಅನ್ವೇಷಣೆಗಳ ನಿರಂತರ ಅನ್ವಯವನ್ನಾಧರಿಸಿದ ತಂತ್ರಜ್ಞಾನ ಸೃಜಿಸುವ ಸದಾ ಏರುತ್ತಾ ಹೋಗುವ ಜೀವನ ಮಟ್ಟವು ತನ್ನ ಭೌತಿಕ ಹಾಗೂ ಮಾನವ ಸಂಪನ್ಮೂಲಗಳ ಅಗತ್ಯಗಳಿಗಾಗಿ ಜಗತ್ತಿನ ಒಂದು ಭಾಗವನ್ನು ಒಂದಲ್ಲ ಒಂದು ರೂಪದಲ್ಲಿ ವಸಾಹತುವನ್ನಾಗಿ ಮಾಡಿಕೊಳ್ಳುವ ಅನಿವಾರ್ಯತೆಯನ್ನುಂಟು ಮಾಡಿ, ಒಟ್ಟಾರೆ ಮಾನವತೆಯ ಮಹೋನ್ನತಿಗೆ ಭಂಗ ತರುವುದೆಂದು ಅವರು ವಿಶ್ಲೇಷಿದ್ದರು. ಈ ಹಿನ್ನೆಲೆಯಲ್ಲಿ ಇಡೀ ಜಗತ್ತು ಅನುಸರಿಸಬಹುದಾದ ಸಣ್ಣ ಪ್ರಮಾಣದ ತಂತ್ರಜ್ಞಾನದ ಮೂಲಕ ಸಾಧಿಸಬಹುದಾದ ಮಿತಿಗಳುಳ್ಳ ಒಂದು ಸಭ್ಯ-ಸರಳ ಜೀವನ ಮಟ್ಟವನ್ನು ಅವರು ಪ್ರತಿಪಾದಿಸಿದ್ದರು. ಆ

ಮೂಲಕ ಅವರ ಈ ಜಾಗತಿಕ ದೃಷ್ಟಿಯ ಸಮಾಜವಾದ, ಮನುಷ್ಯನ ಮೂಲಭೂತ ಹಕ್ಕುಗಳು ಹಾಗೂ ಸ್ವಾತಂತ್ರ್ಯಗಳನ್ನು ಕುರಿತಂತೆ ಬಂಡವಾಳವಾದ ಹಾಗೂ ಕಮ್ಯುನಿಸಂಗಳೆರಡೂ ಒಡ್ಡಬಹುದಾದ ಅಪಾಯಗಳ ವಿರುದ್ಧ ರಕ್ಷಣೆ ಒದಗಿಸಬಲ್ಲ ಹೊಸ ಜೀವನ ಕ್ರಮದ ಹೊಳಹನ್ನೂ ನೀಡಿತ್ತು.

ಆದರೆ ಚರಿತ್ರೆಯ ಅನಿವಾರ್ಯ ಒತ್ತಡಗಳಿಗೆ ಹಾಗೂ ಪಿತೂರಿಗೆ ಸಿಕ್ಕ ಸಮಾಜವಾದ, ಕಮ್ಯುನಿಸಂ ಜೊತೆಗೇ ಅಪ್ರಸ್ತುತೀಕರಣಕ್ಕೆ ಒಳಗಾದದ್ದು ಮಾತ್ರ ವಿಷಾದಕರ. ಇದಕ್ಕೆ ಭಾರತವೂ ಸೇರಿದಂತೆ ಜಗತ್ತಿನಾದ್ಯಂತದ ಸಮಾಜವಾದಿಗಳು ಬಂಡವಾಳವಾದ ಹಾಗೂ ಕಮ್ಯುನಿಸಂಗಳ ವಿರುದ್ಧ ಹೋರಾಡಿದಷ್ಟು ಬಲವಾಗಿ ಸ್ವಂತ ತಮ್ಮ ತತ್ವವನ್ನು ಕಾರ್ಯಕ್ರಮಗಳ ರೂಪದಲ್ಲಿ ಪ್ರತಿಪಾದಿಸುವಲ್ಲಿ ಸೋತು ಹೋದುದೂ ಕಾರಣವಾಗಿದೆ. ಆದರೆ ಇಂದು ಕಮ್ಯುನಿಸಂ ತನ್ನ ನೆನಪುಗಳ ಮೂಲಕ ಜಗತ್ತನ್ನು ದುಃಸ್ವಪ್ನದಂತೆ ಕಾಡುವಂತಾಗಿ, ಬಂಡವಾಳವಾದವೀಗ ಜಾಗತೀಕರಣದ ರೂಪದಲ್ಲಿ ಭೂಮಿಯನ್ನೇ ತಿಂದು ತೇಗುವ ಅಪಾಯವನ್ನೊಡ್ಡಿರುವಾಗ; ಮಧ್ಯಮ ಮಾರ್ಗವೆನಿಸಿರುವ ಸಮಾಜವಾದ ಒಂದು ಜಾಗತಿಕ ನೈತಿಕ ಶಕ್ತಿಯಾಗಿ ಹೊರಹೊಮ್ಮುವುದಾದರೆ, ಜನ ಅದನ್ನು ನಿಸ್ಸಂದೇಹವಾಗಿ ಸ್ವಾಗತಿಸಿಯಾರು.

ಭಾರತದಲ್ಲಿನ ರೈತರ ಆತ್ಮಹತ್ಯೆಯ ಜ್ವಲಂತ ಸಮಸ್ಯೆಗೆ ಇಂದು ಇಂತಹ ಒಂದು ನೈತಿಕ ಸಾಂತ್ವನದ ಅಗತ್ಯವಿದೆ. ಕೇಂದ್ರ ಹಾಗೂ ರಾಜ್ಯಗಳು ಎಷ್ಟೇ ದೊಡ್ಡ ದೊಡ್ಡ ಆರ್ಥಿಕ ಪ್ಯಾಕೇಜುಗಳನ್ನು ಪ್ರಕಟಿಸಿದರೂ, ರೈತರ ಆತ್ಮಹತ್ಯೆ ನಿಲ್ಲದಿರುವುದರ ಹಿಂದೆ ಜಾಗತೀಕರಣದ ಅನೈತಿಕತೆಯ ಒಂದು ದೊಡ್ಡ ಮಹಾಭಾರತವೇ ಇದೆಯೆಂಬುದನ್ನು ನಾವು ಮರೆಯಬಾರದು. ಹಾಗಾಗಿಯೇ ನಾನು ಶೂನ್ಯ ಬಂಡವಾಳದ ಕೃಷಿ ಇತ್ಯಾದಿ ಪರ್ಯಾಯ ಕೃಷಿ ಪದ್ಧತಿಗಳನ್ನು ಪ್ರಚುರ ಪಡಿಸುತ್ತಿರುವ ಸ್ವಾಮಿ ಆನಂದರಂತಹ ಗೆಳೆಯರಿಗೆ, ಅದನ್ನು ರೈತನ ಸಮಗ್ರ ಎಚ್ಚರದ ಭಾಗವಾಗಿ ಒಂದು ರಾಜಕೀಯ ಚಳುವಳಿಯಂತೆಯೇ ನಡೆಸಿಕೊಂಡು ಹೋಗಿ ಎಂದು ಹೇಳುತ್ತಿರುವುದು. ಜಾಗತೀಕರಣ ಇಡೀ ಜಗತ್ತನ್ನು ನಗರೀಕರಣಕ್ಕೊಳಪಡಿಸಿ, ಕೃಷಿ ಸಂಸ್ಕೃತಿ ಆಧಾರಿತ ಗ್ರಾಮ ಬದುಕಿನ ನೆಲೆಗಳನ್ನು ನಾಶಪಡಿಸ ಹೊರಟಿದೆ. ಈ ನಾಶದ ಒಂದು ಭಾಗವಾಗಿ ರೈತರ ಆತ್ಮಹತ್ಯೆ ನಡೆಯುತ್ತಿದೆ ಎಂಬುದನ್ನು ಅರ್ಥ ಮಾಡಿಕೊಳ್ಳದೇ ಹೋದಲ್ಲಿ, ರೈತರ ಆತ್ಮಹತ್ಯೆಯನ್ನೂ ತಡೆಯಲಾಗದು; ಅದರ ಮುಂದಿನ ಪರಿಣಾಮವಾಗಿ ಕೃಷಿ ಸಂಸ್ಕೃತಿ ಆಧಾರಿತ ದೇಶಗಳ 'ಆತ್ಮ'ಹತ್ಯೆಯನ್ನೂ–ಬಹುಶಃ ಚೀನಾ ಆಡಳಿತ ಮಾದರಿಯ ಹೊರತಾಗಿ ಇನ್ನಾವ ಆಡಳಿತ ಮಾದರಿಯ ಮೂಲಕವೂ–ತಡೆಯಲಾಗದು.

ಆದುದರಿಂದ 'ಅಭಿವೃದ್ಧಿ' ಕುರಿತಂತೆ ನಾವಿಂದು ಆಮೂಲಾಗ್ರವಾಗಿ ಪುನರಾಲೋಚಿಸುವ ಅಗತ್ಯವಿದೆ. ಅತಿಗೆ ಹೋಗಿ ಹೇಳುವುದಾದರೆ, 'ಅಭಿವೃದ್ಧಿ ಇನ್ನು ಸಾಕು' ಎಂಬ ದಿಟ್ಟ ಪ್ರಣಾಳಿಕೆಯ ಆಧಾರದ ಮೇಲೇ ಸಮಾಜವಾದವಿಂದು ತನ್ನ ಹೋರಾಟವನ್ನು ಆರಂಭಿಸಬೇಕಿದೆ. ಈವರೆಗಿನ 'ಊರ್ಧ್ವ' ಅಭಿವೃದ್ಧಿಯು 'ಅಗಲ'ವಾಗಿ

ಹರಡಿಕೊಳ್ಳುವ ವಿವೇಕ ಕಂಡುಕೊಳ್ಳುವವರೆಗೆ, 'ಊರಿನ ಮರ ಕಡಿದು ಮನೆಗೆ ಹವಾ ನಿಯಂತ್ರಕವನ್ನು ಹಾಕಿಸಿಕೊಳ್ಳುವ' ವಿಕ್ಷಿಪ್ತ ಅಭಿವೃದ್ಧಿಗೆ ಸಾಕು ಎಂದು ಹೇಳುವ ಧೈರ್ಯವನ್ನು ಸಮಾಜವಾದ ಸಂಘಟಿಸಿಕೊಳ್ಳಬೇಕಿದೆ. ಲೋಹಿಯಾ ಪ್ರತಿಪಾದಿಸಿದ ಸರಳ-ಸಭ್ಯ ಜೀವನ ಮಟ್ಟದ ಕಾರ್ಯಶೀಲ 'ಮಾದರಿ'ಗಳನ್ನು ಸಮಕಾಲೀನ ಜೀವನದ ಮಟ್ಟಿಗೆ ಅಸಂಗತವೂ, ಅವ್ಯವಹಾರಿಕವೂ ಅನ್ನಿಸದ ರೀತಿಯಲ್ಲಿ ನಿರೂಪಿಸಿ ಪ್ರಚಾರ ಮಾಡುವುದೇ, ಸಮಾಜವಾದಿ ಚಳುವಳಿಯ ಸದ್ಯದ ಧರ್ಮವಾಗಬೇಕಿದೆ.

ಹಿರಿಯ ಗೆಳೆಯ ರಾಮದಾಸರ ನೆನಪಿನಲ್ಲಿ ಮತ್ತು ನೆಪದಲ್ಲಿ ಇಷ್ಟು ಮಾತುಗಳನ್ನಾಡಲು ಅವಕಾಶ ಮಾಡಿಕೊಟ್ಟ ನಿಮಗೆಲ್ಲ ವಂದಿಸಿ ನನ್ನ ಈ ಮಾತುಗಳನ್ನು ಮುಗಿಸುತ್ತೇನೆ. ನಮಸ್ಕಾರ.

(ಮೈಸೂರಿನ 'ಪ್ರಗತಿಪರ ಸಂಘಟನೆಗಳ ಒಕ್ಕೂಟ'ವು ಜುಲೈ ೧, ೨೦೦೫ರಂದು ಏರ್ಪಡಿಸಿದ್ದ 'ಪ್ರೊ॥ ಕೆ.ರಾಮದಾಸ್: ಒಂದು ನೆನಪು' ಕಾರ್ಯಕ್ರಮದಲ್ಲಿನ 'ಚಿಂತನ ಗೋಷ್ಠಿ'ಯಲ್ಲಿ ಆಡಿದ ಮಾತುಗಳು)

■

ಭೂಮಿಯನ್ನು ಹಂಚಿಕೊಳ್ಳುವ ಬಗೆಗಳು...

ಪಟ್ಟಭದ್ರರ ಕುಟಿಲ ರಾಜಕಾರಣವನ್ನು ಸೂಚ್ಯವಾಗಿ ತಿಳಿಸಲು ಗೋಪಾಲ ಗೌಡರು ಆಡಿದರೆಂದು ಹೇಳಲಾದ ಮಾತು: 'ಭೂಮಿಯನ್ನು ಹಂಚಿಕೊಳ್ಳುವ ಮುನ್ನ ಆಕಾಶ ಹಂಚಿಕೊಂಡು ಮುಗಿಸೋಣ'! ಈ ಮೂಲಕ ನನಗೆ ಅನಂತಮೂರ್ತಿಯುವರು ಸ್ಪಷ್ಟವಾಗಿ ನೀಡಿದ ಸೂಚನೆಯೆಂದರೆ, ತತ್ವಾದರ್ಶಗಳ ಪ್ರಜ್ಞೆಗಿಂತ ಮುಖ್ಯವಾದುದು ವಾಸ್ತವ ಪ್ರಜ್ಞೆ.. ಆದರೆ ಆದರ್ಶ ಹಾಗೂ ವಾಸ್ತವಗಳ ನಡುವಣ ಸಂಬಂಧ ಕುರಿತಂತೆ ನನ್ನ ಹಾಗೂ ಅನಂತಮೂರ್ತಿಯವರ ಅರಿವು ಬೇರೆ ಬೇರೆ ನೆಲೆಗಳಿಗೆ ಸೇರಿದವೆಂದು ಕಾಣುತ್ತದೆ. ಹಾಗಾಗಿ, ಅವರ ಭಾಷಣ ಮುಗಿದ ನಂತರ ನನಗೆ ಪ್ರತಿಕ್ರಿಯಿಸು ವುದು ಅಗತ್ಯವೆನಿಸಿ, ನಾನು ಈ ಮಾತುಗಳನ್ನು ಹೇಳಲೇಬೇಕಾಯಿತು : ವಾಸ್ತವ ಪ್ರಜ್ಞೆ ಎನ್ನುವುದು ಸಮಯ ಪ್ರಜ್ಞೆ ಹಾಗೂ ಸಮಯ ಸಾಧಕತನಗಳ ನಡುವಣ ಗೆರೆ ಅಳಿಸಿಹೋಗುವಷ್ಟು ಅಸ್ಪಷ್ಟವಾದಾಗ, ಸನ್ನಿವೇಶವನ್ನು ಸ್ಪಷ್ಟಪಡಿಸುವುದು ತತ್ವಾದರ್ಶಗಳೇ. ಹಾಗೆ ನೋಡಿದರೆ, ಅವನ್ನು ಮರೆತ ವಾಸ್ತವ ಪ್ರಜ್ಞೆ ಎಂಬುದೇ ಇರಲಾರದು.

ಕಳೆದ ಭಾನುವಾರ ಶಿವಮೊಗ್ಗದಲ್ಲಿ ಯು.ಆರ್.ಅನಂತಮೂರ್ತಿ ಅವರು ನನ್ನ 'ಮರಳಿ ಬರಲಿದೆ ಸಮಾಜವಾದ!' ಪುಸ್ತಕವನ್ನು ಬಿಡುಗಡೆ ಮಾಡುತ್ತಾ, ಇಂದಿನ ಸಂದರ್ಭಕ್ಕೆ ಮುಖ್ಯವೆನಿಸುವ ಅನೇಕ ಮಾತುಗಳನ್ನಾಡಿದರು. ಸಮಾಜವಾದ ಕುರಿತಂತೆ ಹೊಸದೆನ್ನುವಂತಹ ಒಳನೋಟಗಳನ್ನು ನೀಡಿದರು. ಇಂದಿನ ರಾಷ್ಟ್ರ ಮತ್ತು ರಾಜ್ಯ ರಾಜಕಾರಣ ಕುರಿತಂತೆ ತಮ್ಮದೇ ವೈಯಕ್ತಿಕ ಅಭಿಪ್ರಾಯಗಳನ್ನು ದಾಖಲಿಸಿದರು. ಬೆಂಗಳೂರಿನಲ್ಲಿ ಕೌಟುಂಬಿಕವಾದ ತುರ್ತು ಕೆಲಸವಿರುವುದರಿಂದ ಆದಷ್ಟು ಬೇಗ ಸಮಾರಂಭದಿಂದ ತಮ್ಮನ್ನು ಕಳಿಸಿಕೊಡಬೇಕೆಂದು ಹೇಳಿದ್ದ ಅವರು; ಸಮಾರಂಭಕ್ಕೆ ಬಂದಿದ್ದ ಜನಸಮೂಹವನ್ನು ನೋಡಿ, ಈ ಜನ ಸಮೂಹದ ಮಧ್ಯೆ ಬೆರೆತಿದ್ದ ತಮ್ಮ ಊರಿಗೆಯ ಅನೇಕ ಸಮಾಜವಾದಿ ಮಿತ್ರರ ಎದುರಿನಲ್ಲಿ ವಿನೀತರಾದಂತೆ, ಕಾಲ ಮರೆತು ಸಮಾರಂಭ ಮುಗಿಯುವವರೆಗೂ ಕೂತರು. ತಮ್ಮ ಭಾಷಣದ ನಂತರವೂ

ಎದ್ದು ಬಂದು ಇತರರ ಮಾತುಗಳಿಗೆ ಪ್ರತಿಕ್ರಿಯಿಸುವ ಸಡಗರ ತೋರಿದರು. ಒಂದೆರಡು ತಿಂಗಳುಗಳ ಹಿಂದೆ 'ಆವರಣ' ಹಗರಣದ ಸಂದರ್ಭದಲ್ಲಿ ತಮ್ಮ ಮೇಲೆ ನಡೆದಿದ್ದ 'ಆಕ್ರಮಣ'ದ ಬಗ್ಗೆ ನನ್ನೊಡನೆ ಮಾತಾಡುತ್ತಾ, 'ನನಗೆ ೭೫ ವರ್ಷ ಎಂಬುದು ನೆನಪಿರಲಿ ನಾಗಭೂಷಣ; ಇದನ್ನೆಲ್ಲ ಸಹಿಸುವುದು ಕಷ್ಟ...' ಎಂದು ಖಿನ್ನರಾಗಿ ಹೇಳಿದ್ದ ಅನಂತಮೂರ್ತಿ ಇವರೇನಾ ಎಂದು ಆಶ್ಚರ್ಯ ಪಡುವಷ್ಟು ಉತ್ಸಾಹ-ಆಸಕ್ತಿಗಳಿಂದ ಅವರು ಸಮಾರಂಭದಲ್ಲಿ ಭಾಗವಹಿಸಿದ್ದರು-ಅದೂ ಹಿಂದಿನ ಸಂಜೆಯವರೆಗೆ ಹೆಗ್ಗೋಡಿನಲ್ಲಿ ಒಂದು ವಾರದ 'ನೀನಾಸಂ' ಸಾಂಸ್ಕೃತಿಕ ಶಿಬಿರದ ನಿರ್ದೇಶಕತ್ವ ವಹಿಸಿದ ಬಳಲಿಕೆಯ ನಂತರವೂ!

ಅವರ ಮಾತುಗಳನ್ನು ಕೇಳಲು ಬಂದಿದ್ದ ಜನಸಮೂಹ ಕೂಡ ಕಥೆ-ಉಪಕಥೆ-ದೃಷ್ಟಾಂತ-ನೆನಪು-ಉಲ್ಲೇಖಗಳನ್ನು ಹದವಾಗಿ ಬೆರೆಸಿ ಅವರು ಮಾಡಿದ ಭಾಷಣದ ಮೋಡಿಗೊಳಗಾದಂತೆ ಅಲುಗಾಡದೆ ಕೂತಿತ್ತು. ರಾಜೇಂದ್ರ ಚೆನ್ನಿಯವರು ತಮ್ಮ ನಂತರದ ಪ್ರತಿಕ್ರಿಯೆಯಲ್ಲಿ ಇದನ್ನು ಉಪನಿಷತ್(ಗುರುವಿನ ಹತ್ತಿರವೇ ಕೂತು ಕೇಳುವ) ಶೈಲಿಯ ವಿಚಾರ ಮಂಡನೆ ಎಂದದ್ದು ಸ್ವಲ್ಪ ಅತಿಯಾಯಿತೆನಿಸಿತು, ನಿಜ. ಆದರೆ ಅನಂತಮೂರ್ತಿಯವರು ಆಂದಿನ ಆ ಲೋಹಿಯಾ-ನೆಹರೂ ಕಾಲದ ರಾಜಕಾರಣ ಹಾಗೂ ಇಂದಿನ ಈ ದೇವೇಗೌಡ-ಯಡಿಯೂರಪ್ಪ ರಾಜಕಾರಣದ ಮಧ್ಯೆ ಕಳೆದು ಹೋಗಿರುವ ಮೌಲ್ಯ ಪ್ರಜ್ಞೆ ಹಾಗೂ ರಾಜಕೀಯ ಕೌಶಲ್ಯಗಳ ವಿವೇಚನೆ ಮಾಡುತ್ತಾ, ಸಮಕಾಲೀನ ರಾಜಕಾರಣದ ಭಿತ್ತಿಯಲ್ಲಿ ಹೊಸ ಸಮಾಜವಾದದ ಚಿತ್ರ ಬಿಡಿಸಿದ ರೀತಿ ತಲೆ ತೂಗುವಂತಿತ್ತು. ಮುಖ್ಯವಾಗಿ ಸಮಯ ಪ್ರಜ್ಞೆಯ ರಾಜಕೀಯ ಹಾಗೂ ಸಮಯ ಸಾಧಕ ರಾಜಕೀಯಗಳ ನಡುವಣ ವ್ಯತ್ಯಾಸಗಳನ್ನು ಸೋದಾಹರಣವಾಗಿ ವಿಷದೀಕರಿಸುವ ಮೂಲಕ ಇಂದಿನ ರಾಜಕೀಯವನ್ನು ಗ್ರಹಿಸುವ, ಮೌಲ್ಯಮಾಪನ ಮಾಡುವ ಬಗೆಯನ್ನು ಅವರು ತಮ್ಮದೇ ಸೃಜನಶೀಲ ವಿಚಾರ ಮಂಡನೆಯ ಶೈಲಿಯಲ್ಲಿ ವಿವರಿಸಿದರು. ಲೋಹಿಯಾರ ಆಗಿನ ನೆಹರೂ ವಿರೋಧ ಹಾಗೂ ಕಾಂಗ್ರೆಸ್ಸೇತರವಾದ ಸಮಯ ಪ್ರಜ್ಞೆಯ ಉದಾಹರಣೆಗಳಾದರೆ, ದೇವೇಗೌಡರ ಈಗಿನ ಜಾತ್ಯತೀತೆಯ ಹುಯಿಲು ಸಮಯ ಸಾಧಕ ರಾಜಕಾರಣದ ಉದಾಹರಣೆಗಳೆಂದರು. ತಮ್ಮ ಗೆಳೆಯ ಜಾರ್ಜ್ ಫರ್ನಾಂಡೀಸ್ ಇಂತಹುದೇ ಸಮಯ ಸಾಧಕ ರಾಜಕಾರಣ ಮಾಡಿ ಸಮಾಜವಾದದ ವಿಶ್ವಾಸಾರ್ಹತೆಯನ್ನು ಹಾಳುಗೆಡಹಿದ್ದನ್ನು ಹೇಳಲು ಅವರು ಮರೆಯಲಿಲ್ಲ.

ನನ್ನನ್ನು ಕಷಾಯ ಗುಣವುಳ್ಳ ಬರವಣಿಗೆಯ ರಾಜಕೀಯ ವಿಶ್ಲೇಷಕ ಎಂದು ಎಂದಿನ ತಮ್ಮ ಸಹಜ ಶೈಲಿಯಲ್ಲಿ ಬೆನ್ನು ತಟ್ಟಿದಂತೆ ತೋರಿದ ಅನಂತಮೂರ್ತಿಯವರು, ನನ್ನ ಬರವಣಿಗೆಯ ಕ್ರಮದಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳಬೇಕೆಂದು ಒಂದೆರಡು ಸಲಹೆಗಳನ್ನೂ ನೀಡಿದರು. ಒಂದು ಘಟನೆಯ ವಿಶ್ಲೇಷಣೆ ಮಾಡುವಾಗ ಸ್ವತಃ ನಾನು ಆ ಘಟನೆಯ ಮಧ್ಯೆ ಇದ್ದರೆ ಹೇಗೆ ವರ್ತಿಸುತ್ತಿದ್ದೆ ಎಂದು ಯೋಚಿಸಿ ಬರೆಯಬೇಕೆಂದು

ಅವರು ಸೂಚಿಸಿದರು. ಬಹುಶಃ ಈ ಹಿಂದೆ ಒಂದೆರಡು ಬಾರಿ ನನ್ನ ಬರಹಗಳಲ್ಲಿ/ ಪ್ರತಿಕ್ರಿಯೆಗಳಲ್ಲಿ ಅವರ ಕೆಲವು ವಿರೋಧಾಭಾಸದ ವರ್ತನೆಗಳನ್ನು/ಹೇಳಿಕೆಗಳನ್ನು ಟೀಕಿಸಿದ್ದುದು ಅವರ ಮನಸ್ಸಿನಲ್ಲಿ ಇದ್ದಿತೆಂದು ಕಾಣುತ್ತದೆ. ಹಾಗೇ ಅವರು ಸಮಯ ಪ್ರಜ್ಞೆ-ಸಮಯ ಸಾಧಕತೆಯ ವ್ಯತ್ಯಾಸಗಳ ಬಗ್ಗೆ ಆಡಿದ ಮಾತೂ, ಬದಲಾಗಬೇಕಾದ ನನ್ನ ಬರವಣಿಗೆಯ ಕ್ರಮದ ಸಂಬಂಧ ನೀಡಿದ ಸಲಹೆಯ ವಿಷದೀಕರಣವೇ ಆಗಿತ್ತೆಂದು ಕಾಣುತ್ತದೆ. ಏಕೆಂದರೆ, ಅವರು ಅದರ ಪ್ರಸ್ತಾಪ ಮಾಡಿದ್ದೇ, ಎರಡು ವರ್ಷಗಳ ಹಿಂದೆ 'ಅಹಿಂದ' ಏರ್ಪಡಿಸಿದ್ದ ವಿಚಾರ ಸಂಕಿರಣದಲ್ಲಿ ನಾನು ಅಹಿಂದದ ರಾಜಕಾರಣ ಹೇಗೆ ತತ್ವ ಕೇಂದ್ರಿತವಾಗದೆ, ವ್ಯಕ್ತಿ ಕೇಂದ್ರಿತವಾಗುತ್ತಿದೆ ಎಂದು ವಿವರಿಸಿ ಭಾಷಣ ಮಾಡಿದ ನಂತರ (ಇದೇ ಪುಸ್ತಕದಲ್ಲಿರುವ 'ಅಹಿಂದದ ಅಧಿಕಾರ ರಾಜಕಾರಣ' ಲೇಖನ ನೋಡಿ) ಅಲ್ಲಿ ನನ್ನೊಡನೆ ಆಡಿದ್ದ ಒಂದು ಮಾತನ್ನು ಇಲ್ಲಿ ಈಗ ಪುನರುಚ್ಚರಿಸುವ ಮೂಲಕ!

ಅದು ಪಟ್ಟಭದ್ರರ ಕುಟಿಲ ರಾಜಕಾರಣವನ್ನು ಸೂಚ್ಯವಾಗಿ ತಿಳಿಸಲು ಗೋಪಾಲ ಗೌಡರು ಆಡಿದರೆಂದು ಹೇಳಲಾದ ಮಾತು: 'ಭೂಮಿಯನ್ನು ಹಂಚಿಕೊಳ್ಳುವ ಮುನ್ನ ಆಕಾಶ ಹಂಚಿಕೊಂಡು ಮುಗಿಸೋಣ'! ಈ ಮೂಲಕ ನನಗೆ ಅನಂತಮೂರ್ತಿಯವರು ಸ್ಪಷ್ಟವಾಗಿ ನೀಡಿದ ಸೂಚನೆಯೆಂದರೆ, ತತ್ವಾದರ್ಶಗಳ ಪ್ರಜ್ಞೆಗಿಂತ ಮುಖ್ಯವಾದುದು ವಾಸ್ತವ ಪ್ರಜ್ಞೆ. ಇದು ನನಗೆ ತಿಳಿಯದ ಸತ್ಯವೇನಲ್ಲ. ಹಾಗೆಂದು ಹೇಳುತ್ತಲೇ ಅವರು ನನಗೆ ಈ ಸಲಹೆ ನೀಡಿದರು. ಆದರೆ ಆದರ್ಶ ಹಾಗೂ ವಾಸ್ತವಗಳ ನಡುವಣ ಸಂಬಂಧ ಕುರಿತಂತೆ ನನ್ನ ಹಾಗೂ ಅನಂತಮೂರ್ತಿಯವರ ಅರಿವು ಬೇರೆ ಬೇರೆ ನೆಲೆಗಳಿಗೆ ಸೇರಿದವೆಂದು ಕಾಣುತ್ತದೆ. ಹಾಗಾಗಿ, ಅವರ ಭಾಷಣ ಮುಗಿದ ನಂತರ ನನಗೆ ಪ್ರತಿಕ್ರಿಯಿಸುವುದು ಅಗತ್ಯವೆನಿಸಿ, ನಾನು ಈ ಮಾತುಗಳನ್ನು ಹೇಳಲೇಬೇಕಾಯಿತು : ವಾಸ್ತವ ಪ್ರಜ್ಞೆ ಎನ್ನುವುದು ಸಮಯ ಪ್ರಜ್ಞೆ ಹಾಗೂ ಸಮಯ ಸಾಧಕತನಗಳ ನಡುವಣ ಗೆರೆ ಅಳಿಸಿಹೋಗುವಷ್ಟು ಅಸ್ಪಷ್ಟವಾದಾಗ, ಸನ್ನಿವೇಶವನ್ನು ಸ್ಪಷ್ಟಪಡಿಸುವುದು ತತ್ವಾದರ್ಶಗಳೇ. ಹಾಗೆ ನೋಡಿದರೆ, ಅವನ್ನು ಮರೆತ ವಾಸ್ತವ ಪ್ರಜ್ಞೆ ಎಂಬುದೇ ಇರಲಾರದು. ವಿಶೇಷವಾಗಿ, ಹಲವು ಆಕರ್ಷಣೆಗಳ ಈ ಆಧುನಿಕ ಕಾಲದಲ್ಲಿ. ಹೀಗಾಗಿ ಇಂದು ಆಕಾಶ ಪ್ರಜ್ಞೆ ಇಲ್ಲದ ಮನುಷ್ಯ ಮೃಗ ಮಾತ್ರ ಆಗುತ್ತಾನೆ. ಭೂಮಿ ಗ್ರಹಿಕೆಗೆ ಸಿಗುವುದೂ ಆಕಾಶದ ಸಾಪೇಕ್ಷದಲ್ಲೇ. ಹಾಗೇ, ವಾಸ್ತವವೆಂಬುದು ಗ್ರಹಿಕೆಗೆ ಸಿಗುವುದೂ ಕೆಲವು ನಂಬಿಕೆಗಳ-ತತ್ವಾದರ್ಶಗಳ-ಆಧಾರದಲ್ಲೇ.

ಆದರೂ ಅನಂತಮೂರ್ತಿಯವರು ನನಗೆ ಹೀಗೆ ಸಲಹೆ ನೀಡಿದ್ದು ನನ್ನಲ್ಲೇನೂ ಆಶ್ಚರ್ಯವನ್ನುಂಟು ಮಾಡಲಿಲ್ಲ. ಏಕೆಂದರೆ, ಅವರು ಪಕ್ಕಾ ವಾಸ್ತವವಾದಿ ಎಂಬುದು ನನಗೆ ಹೊಸ ವಿಷಯವೇನಾಗಿರಲಿಲ್ಲ. ಸ್ವತಃ ಅವರಿಗೆ ಅದನ್ನು ಈಗ್ಗೆ ಒಂದೆರಡು ತಿಂಗಳುಗಳ ಹಿಂದೆ ಪರೋಕ್ಷವಾಗಿ ಹೇಳಿಯೂ ಇದ್ದೆ. ಅವರ ಪುಸ್ತಕವೊಂದನ್ನು

ನಾನು ಮಾಸ ಪತ್ರಿಕೆಯೊಂದಕ್ಕಾಗಿ ವಿಮರ್ಶಿಸಿದ ಪರಿ ಅವರಿಗೆ ಇಷ್ಟವಾಗದಿದ್ದುದನ್ನು ಯಾವುದೋ ಮಾತಿನ ಮಧ್ಯೆ ಅವರು ಪ್ರಸ್ತಾಪಿಸಿದಾಗ ನಾನು ಹೇಳಿದ್ದು ಇದು: 'ನೀವು ಹೇಳಬೇಕಾದ ಮಾತನ್ನು ಹೇಳಬೇಕಾದವರಿಗೆ ಹೇಳಬೇಕಾದಾಗ ಹೇಳದಿರುವುದೇ, ನಿಮ್ಮ ದೊಡ್ಡ ದೌರ್ಬಲ್ಯ. ನಿಮ್ಮ ದಾಕ್ಷಿಣ್ಯ ನಿಮ್ಮ ಪ್ರತಿಭೆಗೆ ಕುಂದು ತಂದಿದೆ.' ಅದಕ್ಕವರು ತಮ್ಮ ದಾಕ್ಷಿಣ್ಯವೇನಿದ್ದರೂ, ವ್ಯಕ್ತಿಗಳಿಗೆ ಸಂಬಂಧಿಸಿದಂತೆಯೇ ಹೊರತು ವಿಚಾರಗಳಿಗೆ ಸಂಬಂಧಿಸಿದಂತೆ ಅಲ್ಲ ಎಂದೇನೋ ಹೇಳಿದರು. ಆದರೆ ವಿಚಾರಗಳು ಹೊಮ್ಮುವುದೂ ವ್ಯಕ್ತಿಗಳ ಮೂಲಕವೇ ಅಲ್ಲವೇ ಎಂದು ಹೇಳಬೇಕೆನಿಸದರೂ, ನನ್ನ ಮಾತು ವೃಥಾ ವಾದವಾಗಿ ಬೆಳೆಯಬಾರದೆಂದು ಸುಮ್ಮನಾದೆ.

ವಿಚಾರವೇನೇ ಇರಲಿ, ಮನುಷ್ಯ ಮುಖ್ಯ ಎಂಬ ಅನಂತಮೂರ್ತಿಯವರ ಮಾತನ್ನು ಒಪ್ಪಬೇಕಾದದ್ದೇ. ಆದರೆ, ಮನುಷ್ಯನ ಬಗ್ಗೆ ಗೌರವವಿಟ್ಟುಕೊಂಡೇ, ಆತನ ವಿಚಾರಗಳು, ಕೃತ್ಯಗಳು ಕೆಟ್ಟವು ಎಂದು ಅನ್ನಿಸಿದಾಗ ಆ ಬಗ್ಗೆ ಮಾತಾಡಲು ಇರುವ ತೊಂದರೆಯಾದರೂ ಏನು-ಅದೂ ಸಾರ್ವಜನಿಕ ಬುದ್ಧಿಜೀವಿ ಎಂದು ಕರೆಸಿಕೊಳ್ಳುವಾತನಿಗೆ? ನನ್ನನ್ನು ಸಮಾಜವಾದಿ ಚಿಂತನೆಯ ಒಳಗಿನ ಟೀಕಾಕಾರ (Critical insider) ಎಂದು ಕರೆದ ಅನಂತಮೂರ್ತಿಯವರು, ಆಳುವವರು ನಮ್ಮವರೇ ಆಗಿದ್ದಾಗ ಅವರಿಗೆ ಇಂತಹ ಟೀಕಾಕಾರರು ಹೇಳಬೇಕಾದುದನ್ನು ಕಿವಿಯಲ್ಲಾದರೂ ಹೇಳಬೇಕು ಎಂದು ಸೂಚಿಸಿದರು. ತಮ್ಮ ಪ್ರಿಯ ಮಿತ್ರ ಜೆ.ಎಚ್ ಪಟೇಲರು ಮುಖ್ಯಮಂತ್ರಿಯಾಗಿದ್ದಾಗ ತಾವು ಅನೇಕ ಬಾರಿ ಇಂತಹ ಕಿವಿ ಮಾತುಗಳನ್ನು ಹೇಳಿದ್ದಾಗಿಯೂ; ಅವರು ಅದನ್ನು ಕೇಳಿದ್ದಾಗಿಯೂ ಅನಂತಮೂರ್ತಿ ಹೇಳಿದರು. ಆದರೂ, ನಮ್ಮ ಇತ್ತೀಚಿನ ರಾಜಕಾರಣಿಗಳ ಪೈಕಿ ಅತ್ಯಂತ ಪ್ರತಿಭಾಶಾಲಿಯಾಗಿದ್ದ ಪಟೇಲರು ಆಡಳಿತಗಾರನಾಗಿ ಮಾತ್ರ ಸಾರ್ವಜನಿಕರ ಕಣ್ಣಲ್ಲಿ ವಿದೂಷಕನಿಗಿಂತ ಕಡೆಯಾದದ್ದು ಏಕೋ ಎಂಬುದನ್ನು ಅನಂತಮೂರ್ತಿಯವರೇ ವಿವರಿಸಬೇಕು.

ಹಾಗೆ ನೋಡಿದರೆ ಅನಂತಮೂರ್ತಿಯವರು 'ಪ್ರಭುತ್ವ'ದೊಂದಿಗೆ ಮುಖಾಮುಖಿಯಾದದ್ದು ಕಡಿಮೆ ಎಂದೇ ಹೇಳಬೇಕು. ಅವರು ಯಾವಾಗಲೂ ಪ್ರಭುತ್ವದೊಂದಿಗೆ ಮೃದುವಾಗಿರುವವರೇ. ಉದಾಹರಣೆಗೆ, ಈಗ ಕೋಮುವಾದಿಗಳ ವಿರುದ್ಧ ಅವರು ಮಾತನಾಡುತ್ತಿರುವ ವರಸೆಯನ್ನು ಇದೇ ಕೋಮುವಾದಿಗಳು ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗ ಆಡುತ್ತಿದ್ದ ಮಾತಿನ ವರಸೆಗೆ ಹೋಲಿಸಿ ನೋಡಿ. ಅಥವಾ ಅವರೇ ನೋಡಿಕೊಳ್ಳಲಿ. ಅಕ್ಷರಶಃ ನರಹತ್ಯೆಗಿಳಿದಿದ್ದ ನರೇಂದ್ರ ಮೋದಿ ಬಗ್ಗೆ ಆ ದಿನಗಳಲ್ಲಿ ಕೇಳಿದ ಪ್ರಶ್ನೆಗೆ ಅನಂತಮೂರ್ತಿಯವರು ಕೊಟ್ಟ ಜಾಣ ಉತ್ತರ: 'ನರೇಂದ್ರ ಮೋದಿ ಹಾಗೂ ಲಾಲೂ ಪ್ರಸಾದ್ ಯಾದವರ ರಾಜಕಾರಣ ಖಂಡನೀಯ'. ತತ್ವದ ಜೊತೆಯಲ್ಲೇ ಹೆಜ್ಜೆ ಹಾಕುವ ವಾಸ್ತವ ಪ್ರಜ್ಞೆ ಅಂದರೆ ಇದೇ ಇರಬೇಕು! ಅದೇನೇ ಇರಲಿ, ಮೊನ್ನಿನ ಸಮಾರಂಭದಲ್ಲಿ ಅವರ ವಾಸ್ತವ ಪ್ರಜ್ಞೆಯ ಇನ್ನೊಂದು ದುಃಖಕರ ಮುಖದ ಪರಿಚಯವೂ ಆಯಿತು. ಅವರು ಜೆ.ಡಿ(ಎಸ್)ನ ಕೆಟ್ಟತನಗಳ

ಬಗ್ಗೆ ಜಿಗುಪ್ಸೆಯಿಂದ ಮಾತನಾಡಿದ ಉಸಿರಿನಲ್ಲೇ, ಅದು ಕಾಂಗ್ರೆಸ್ಸಿನೊಂದಿಗೆ ಚುನಾವಣಾ ಮೈತ್ರಿ ಮಾಡಿಕೊಂಡು ಬಿಜೆಪಿಯನ್ನು ಸೋಲಿಸಬೇಕೆಂದು ಸೂಚಿಸಿದರು. ಸದ್ಯದ ರಾಜಕೀಯ ಪರಿಸ್ಥಿತಿಗೆ ಇದೊಂದೇ ಪರ್ಯಾಯವೇ? ಅದು ಹಾಗಿದ್ದರೂ, ಅದನ್ನು ಈಗಲೇ ಅನಂತಮೂರ್ತಿಯವರು ಸೂಚಿಸುವುದರ ತುರ್ತುದಾದರೂ ಏನು? ಅವರಿಗೆ ಈ ಮೂರೂ ಪಕ್ಷಗಳು ಪ್ರತಿನಿಧಿಸುವ ರಾಜಕೀಯ ಸಂಸ್ಕೃತಿಯಿಂದ ಇನ್ನೂ ಆಯಾಸವೇ ಆಗಿಲ್ಲವೇ? ಅವರ ಮನಸ್ಸು ಈ ರೂಕ್ಷ ರಾಜಕೀಯ ವಾಸ್ತವದಾಚೆಗೆ ಚಲಿಸಲೇಕೆ ನಿರಾಕರಿಸುತ್ತಿದೆ? ಹೊಸ ರಾಜಕೀಯ ಸಂಸ್ಕೃತಿಯನ್ನು ಕಟ್ಟಬೇಕಾದ ಅಗತ್ಯದ ಪ್ರಸ್ತಾಪವೂ ಅವರಿಂದ ಬರಲಿಲ್ಲವೆಂದರೆ? ವಾಸ್ತವ ಪ್ರಜ್ಞೆ ಎಂಬುದು ಇಷ್ಟೊಂದು 'ವಾಸ್ತವವಾದಿ'ಯಾಗರಬಾರದು...

ಅಂದಿನ ಸಮಾರಂಭದಲ್ಲಿ ನನ್ನ ಪುಸ್ತಕದ ಮೇಲೇ 'ಎಲ್ಲ ಜಗಳ ಮೀರಿ' ಎಂದು ಪ್ರೀತಿಯಿಂದ ಬರೆದು ಸಹಿ ಹಾಕಿ ಕೊಟ್ಟಿರುವ ಅನಂತಮೂರ್ತಿಯವರು, ನನ್ನೆಲ್ಲ ಈ ಮಾತುಗಳನ್ನು ಈ ತಕ್ಷಣಕ್ಕಲ್ಲದಿದ್ದರೂ, ಕ್ರಮೇಣ ಸಹಾನುಭೂತಿಯಿಂದ ಅರ್ಥ ಮಾಡಿಕೊಳ್ಳುತ್ತಾರೆಂದು ನಂಬಿದ್ದೇನೆ. ಏಕೆಂದರೆ, ಅವರದು ಮೂಲತಃ ಉದಾರವಾದ, ವಿಸ್ತಾರವಾದ, ಸ್ಪಂದನಶೀಲ ಮನಸ್ಸು. ಸದ್ಯಕ್ಕೆ ಅವರೇ ಕನ್ನಡದ ಅತ್ಯಂತ ಎತ್ತರದ ವಿಚಾರಶೀಲ ಮನಸ್ಸು ಕೂಡಾ. (ಇಷ್ಟೇ ಎತ್ತರದ ಇನ್ನೊಂದು ಮನಸ್ಸು, ಬಹುಕಾಲದಿಂದ ಮೈಸೂರಿನಲ್ಲಿ ಆ ಎತ್ತರದಲ್ಲೇ ಸುಸ್ತಾಗಿ ಮಲಗಿಬಿಟ್ಟಿದೆ!) ಇದೇ ಸಮಾರಂಭದಲ್ಲಿ ತೆರೆದುಕೊಂಡ; ಹಿಂದೂ ಕೋಮುವಾದಿಗಳ ಕೋಮುವಾದ ಸೆಕ್ಯುಲರ್ ಉದ್ದೇಶಗಳಿಂದ (ಅಂದರೆ ಲೌಕಿಕ ಪ್ರಗತಿಗಾಗಿ) ಪ್ರೇರಿತವಾಗಿದ್ದರೆ, ಇದಕ್ಕೆ ತದ್ವಿರುದ್ಧವಾಗಿ ಮುಸ್ಲಿಂ ಕೋಮುವಾದ ತನ್ನ ಮೂರ್ಖತನದಲ್ಲಿ ಪ್ರಗತಿಗೆ ವಿರುದ್ಧವಾಗಿ ನಿಂತಿದೆಯೆನ್ನುವ ಅವರ ಒಳನೋಟ, ಅನಂತಮೂರ್ತಿಯವರ ಪ್ರತಿಭೆಗೆ ಮಾತ್ರ ದಕ್ಕುವಂತಹದ್ದು. ಇದು ಒಂದು ದೊಡ್ಡ ಚರ್ಚೆಯನ್ನೇ ಉಂಟು ಮಾಡುವಷ್ಟು ಸಂಕೀರ್ಣವಾದ ಒಳನೋಟ. ಅವರು ಪ್ರಸ್ತಾಪಿಸಿದ ಸಾವರ್ಕರ್‌ರಿಂದ ಹಿಡಿದು ಅರುಣ್ ಜೈಟ್ಲಿಯರವರಗಿನ ಹಿಂದೂವಾದಿಗಳ ಕೋಮುವಾದ ಪ್ರೇರಿತವಾಗಿರುವುದೇ ಮುಸ್ಲಿಮರ ಮತಸಂಪ್ರದಾಯಿಕತೆಯ ಖಂಡನೆಯಾಗಿಯೇ? ಮುಸ್ಲಿಂ ಸಂಸ್ಕೃತಿಯು ವಿರೋಧವಿರುವುದು ನಿಜವಾಗಿಯೂ ಪ್ರಗತಿಗೋ ಅಥವಾ ತಮ್ಮ ಸಂಸ್ಕೃತಿಗೆ ಒಗ್ಗದ ಪ್ರಗತಿಗೆ ಮಾತ್ರವೋ? ಮುಂತಾದ ಪ್ರಶ್ನೆಗಳಿಗೆ ಅವಕಾಶವಿರುವ ಈ ಚರ್ಚೆ, ಇಂದಿನ ಪ್ರಗತಿ ರಾಜಕಾರಣ ಕುರಿತಂತೇ ಒಂದು ಜಿಜ್ಞಾಸೆಯನ್ನು ಹುಟ್ಟು ಹಾಕಬಲ್ಲುದು. ಏಕೆಂದರೆ, ಸ್ವತಃ ಅನಂತಮೂರ್ತಿಯವರೇ ಈ ಸಮಾರಂಭದಲ್ಲಿ 'ಇನ್ನು ಪ್ರಗತಿ ಬೇಡ' ಎಂಬುದು ನಮ್ಮ ಸದ್ಯದ ಘೋಷಣೆಯಾಗಬೇಕು ಎಂದರಲ್ಲ?

ವಾಸ್ತವವಾಗಿ ಇದು ನನ್ನ ಘೋಷಣೆಯೂ ಹೌದು! ಕೆ. ರಾಮದಾಸ್‌ರ ಶ್ರದ್ಧಾಂಜಲಿ ಸಭೆಯಲ್ಲಿ ನಾನು ಮಾತನಾಡುತ್ತಾ, '... 'ಅಭಿವೃದ್ಧಿ' ಕುರಿತಂತೆ ನಾವಿಂದು ಆಮೂಲಾಗ್ರವಾಗಿ ಪುನರಾಲೋಚಿಸುವ ಅಗತ್ಯವಿದೆ. ಅತಿಗೆ ಹೋಗಿ ಹೇಳುವುದಾದರೆ,

'ಅಭಿವೃದ್ಧಿ ಇನ್ನು ಸಾಕು' ಎಂಬ ಪ್ರಣಾಳಿಕೆಯ ಆಧಾರದ ಮೇಲೇ ಸಮಾಜವಾದವಿಂದು ತನ್ನ ಹೋರಾಟವನ್ನು ಆರಂಭಿಸಬೇಕಿದೆ.' ಎಂದು ಹೇಳಿದ್ದೆ. (ನೋಡಿ, ಇದೇ ಸಂಗ್ರಹದಲ್ಲಿರುವ 'ರಾಮದಾಸ್‌ಗೊಂದು ನಮಸ್ಕಾರದ ನೆಪದಲ್ಲಿ...' ಲೇಖನ). ವಿವರಗಳಲ್ಲಿನ ವ್ಯತ್ಯಾಸಗಳೇನೇ ಇರಲಿ, ಅನಂತಮೂರ್ತಿಯವರಂತಹ ಹಿರಿಯ ಸಮಾಜವಾದಿ ಹಾಗೂ ನನ್ನಂತಹ ಕಿರಿಯ ಸಮಾಜವಾದಿ ಇಬ್ಬರೂ ಹೀಗೆ ಒಂದೇ ಹೊತ್ತಿಗೆ ಒಂದೇ ತಾತ್ವಿಕ ತೀರ್ಮಾನಕ್ಕೆ ಬಂದಿರುವುದು, ಸಮಾಜವಾದ ಇಷ್ಟೆಲ್ಲ ಪ್ರತಿಕೂಲ ಪರಿಸ್ಥಿತಿಗಳ ನಡುವೆಯೂ ತನ್ನ ಕೇಂದ್ರ ಕಳೆದುಕೊಂಡಿಲ್ಲ ಹಾಗೂ ಅದು ಮರಳಿ ಬರಲೇ ಬೇಕು ಎಂಬುದನ್ನು ಸೂಚಿಸುತ್ತದೆ ಎಂದು ನಾನು ನಂಬಿದ್ದೇನೆ. ಇದೇ ಸಮಾರಂಭದಲ್ಲಿ ಸಂಕ್ಷಿಪ್ತವಾಗಿಯಾದರೂ, ಅದ್ಭುತವಾಗಿ ಮಾತನಾಡಿದ ಡಾ॥ ರಾಜೇಂದ್ರ ಚೆನ್ನಿಯವರು ಹೇಳಿದ ಹಾಗೆ, ಸಮಾಜವಾದದ ಶಕ್ತಿ ಇರುವುದೇ ಅದರ ಕನಸುಗಾರಿಕೆ (utopia)ಯಲ್ಲಿ. ಇಂದಿನ 'ಪ್ರಗತಿ'ಶೀಲ ಮಾರುಕಟ್ಟೆ ಕೇಂದ್ರಿತ ಜಗತ್ತಿನ ಮಧ್ಯೆ ಕಳೆದು ಹೋಗಿರುವ ಈ ಕನಸುಗಾರಿಕೆಯನ್ನು ಮರಳಿ ತರುವ ಆಶಯವೇ, 'ಮರಳಿ ಬರಲಿದೆ ಸಮಾಜವಾದ!' ಎಂಬ ಭರವಸೆಯ ಹಿಂದಿನ ಶಕ್ತಿಯೂ ಆಗಿದೆ!

(ಅಕ್ಟೋಬರ್ ೨೬, ೨೦೦೭)

■

'ಹಿಂದ್ ಸ್ವರಾಜ್' ಮತ್ತು ಇಂದಿನ ರಾಜಕಾರಣ

ಗಾಂಧಿ, ಮನುಷ್ಯ ತನ್ನ ಹತೋಟಿಯಲ್ಲೇ ಇರುವ ತನ್ನ ಪುಟ್ಟ ಪ್ರಪಂಚದಲ್ಲೇ ತನ್ನ ಈ ಸ್ವರಾಜ್ಯ ಧರ್ಮವನ್ನು ಪಾಲಿಸಬಲ್ಲ ಎಂದು ಭಾವಿಸಿದ್ದರು. ಏಕೆಂದರೆ, ಭೌತ ಜಗತ್ತಿಗೆ ಒಂದು ಮಿತಿ ಮತ್ತು ಸಮತೋಲನವಿರುವುದರಿಂದ ಅವನ ಬದುಕು ಕೂಡಾ ಭೌತಿಕ ನೆಲೆಯಲ್ಲಿ ಒಂದು ಮಿತಿ ಮತ್ತು ಸಮತೋಲನದಲ್ಲಿ ಇರಬೇಕೆಂದು ಗಾಂಧಿ ನಂಬಿದ್ದರು. ಈ ಮಿತಿ ಮತ್ತು ಸಮತೋಲನವನ್ನು ಭಾರತ ತನ್ನ ಗ್ರಾಮ ಕಲ್ಪನೆಯಲ್ಲಿ ಕಂಡುಕೊಂಡಿತ್ತು. ಈ ಮಿತಿ ಮತ್ತು ಸಮತೋಲನವನ್ನು ಕಾಪಾಡಲೆಂದೇ ಅವರು ದೇಸಿ ಕಸಬುಗಳ ಆರ್ಥಿಕತೆಯನ್ನು ಪ್ರತಿಪಾದಿಸಿ ತಮ್ಮ ಸ್ವದೇಶಿ ಕಲ್ಪನೆಯನ್ನು ಮುಂದಿಟ್ಟರು. ಇಲ್ಲೂ ಅವರ independent but interdependent ತತ್ವವನ್ನು ಅನ್ವಯಿಸಿ, ಗ್ರಾಮಗಳು ಸ್ವತಂತ್ರವೂ, ಹಾಗೆ ಸ್ವತಂತ್ರವಾಗಿರಲು ಅಂತರ್ಅವಲಂಬಿಯೂ ಆಗಿದ್ದುಕೊಂಡು ರಾಷ್ಟ್ರವನ್ನು ಸ್ವರಾಜ್ಯವನ್ನಾಗಿ ರೂಪಿಸಬಹುದೆಂದು ಅವರು ಭಾವಿಸಿದ್ದರು. ಹೀಗೆ ಗಾಂಧಿಯ 'ಹಿಂದ್ ಸ್ವರಾಜ್' ಎಂದರೆ 'ಗ್ರಾಮ ಸ್ವರಾಜ್ಯ'ವೂ ಹೌದು. ನಗರವೆಂದರೆ, ಗಾಂಧೀಜಿ ಪ್ರಕಾರ ಈ ಮಿತಿ ಮತ್ತು ಸಮತೋಲನಗಳ ಉಲ್ಲಂಘನೆ.

'ಹಿಂದ್ ಸ್ವರಾಜ್'ನ್ನು ಗಾಂಧೀಜಿ ಬರೆದದ್ದು ಒಂದು ಸಾಂದರ್ಭಿಕ ಕೃತಿಯಾಗಿಯಾದರೂ ಅದರ ಸಾರ್ವತ್ರಿಕತೆ ಹಿಂದೆದೆಗಿಂತ ಇಂದು– ಈ ಜಾಗತೀಕರಣದ ಸಂದರ್ಭದಲ್ಲಿ ಮನದಟ್ಟಾಗುತ್ತಿದೆ ಎಂದು ನಿಮಗೆಲ್ಲ ತಿಳಿದೇ ಇದೆ. ಇದು ಗಾಂಧೀಜಿಯ ಮೊದಲ ಕೃತಿಯೂ ಹೌದು ಎಂಬುದನ್ನೂ ನಾವು ಗಮನಿಸಬೇಕು. ಹಾಗಾಗಿ ಇದನ್ನು ಅವರ ಮುಂದಿನ ಕೃತಿ ಮತ್ತು ಕಾರ್ಯಕ್ರಮಗಳ ಹಿನ್ನೆಲೆಯಲ್ಲೇ ಅರ್ಥೈಸಿಕೊಳ್ಳಬೇಕು ಎಂಬುದೂ ನಮ್ಮ ಗಮನದಲ್ಲಿರಬೇಕು. ಮುಖ್ಯವಾಗಿ ಅವರ ಆತ್ಮಕತೆ, ರಚನಾತ್ಮಕ ಕಾರ್ಯಕ್ರಮ ಸೂಚಿ ಹಾಗೂ ಸ್ವಾತಂತ್ರ್ಯ ಘೋಷಣಾ ಪತ್ರ. ಆಗಿನ ಕಾಂಗ್ರೆಸ್‌ನ 'ಸಂವಿಧಾನಾತ್ಮಕ' ಮಾರ್ಗಗಳಿಂದ ಬೇಸತ್ತು, ಅದಕ್ಕೆ ಪ್ರತಿಯಾಗಿ ಹಿಂಸೆಯೂ ಸೇರಿದಂತೆ ತೀವ್ರವಾದಿ ಕಾರ್ಯಾಚರಣೆಗಳ ಮೂಲಕ ಸ್ವಾತಂತ್ರ್ಯ ಪಡೆಯಬೇಕೆಂಬ ಸಂಕಲ್ಪದಿಂದ ಲಂಡನ್‌ನಲ್ಲಿ ಒಟ್ಟುಗೂಡಿದ್ದ 'ಕ್ರಾಂತಿಕಾರಿ'ಗಳ ಗುಂಪೊಂದಕ್ಕೆ, ಅವರ ಈ ಮಾರ್ಗ

ಏಕೆ ಮತ್ತು ಹೇಗೆ ನಿಷ್ಪ್ರಯೋಜಕ ಎಂಬುದನ್ನು ವಿವರಿಸಲು ಗಾಂಧಿ ೧೯೦೮ರಲ್ಲಿ ಬರೆದ ಪುಸ್ತಕವಿದು. ಆದರೆ ಅದು ಆನುಷಂಗಿಕವಾಗಿ ಪಶ್ಚಿಮದ ಆಧುನಿಕ ನಾಗರೀಕತೆಯನ್ನು ಕುರಿತ ಒಂದು ವ್ಯಾಪಕ ಹಾಗೂ ಆಳವಾದ ವಿಶ್ಲೇಷಣೆಯೂ ಆಗಿದೆ. ಇಂದು ಈ ಕೃತಿಯನ್ನು ನಮಗೆ ಪ್ರಸ್ತುತಗೊಳಿಸುತ್ತಿರುವುದೇ ಅದರ ಈ ಆನುಷಂಗಿಕತೆಯೇ ಆಗಿದೆ ಎಂಬುದು ಒಂದು ವಿಶೇಷ.

ಈ ಕೃತಿಯ ಇಂದಿನ ಪ್ರಸ್ತುತತೆ ಎಂದೆ. ಒಮ್ಮೆಗೇ ನೋಡಿದರೆ, ಯಂತ್ರ, ರೈಲು, ವಕೀಲಿಕೆ, ಆಸ್ಪತ್ರೆ ಇತ್ಯಾದಿಗಳನ್ನು ವಿರೋಧಿಸುವ ಈ ಕೃತಿಗೂ, ದೇಶವನ್ನು ಸುಭಿಕ್ಷವಾಗಿಡಲು ಪರಮಾಣು ರಿಯಾಕ್ಟರ್‌ಗಳ ವ್ಯಾಪಾರ ಒಪ್ಪಂದ ಅನಿವಾರ್ಯ ಎನ್ನುತ್ತಿರುವ ಇಂದಿನ ರಾಜಕಾರಣಕ್ಕೂ ಎಲ್ಲಿಗೆಲ್ಲಿಯ ಸಂಬಂಧ ಎಂದು ನಿಮಗೆ ಆಶ್ಚರ್ಯವಾಗಬಹುದು. ಆದರೆ ಕಳೆದ ಹತ್ತು ಹದಿನೈದು ವರ್ಷಗಳಿಂದೀಚೆಗೆ ಜಗತ್ತಿನಾದ್ಯಂತ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಮತ್ತೆ ಮತ್ತೆ 'ಹಿಂದ್ ಸ್ವರಾಜ್' ಚರ್ಚೆ, ಅಧ್ಯಯನಗಳಿಗೆ ಒಳಗಾಗತೊಡಗಿರುವುದರ ಕಾರಣವಾದರೂ ಇದೇ– ಜಗತ್ತಿನಾದ್ಯಂತ ಅನಿವಾರ್ಯವೆಂಬಂತೆ ಬೆಳೆಯುತ್ತಿರುವ ಇಂತಹ ಅಭಿವೃದ್ಧಿ ರಾಜಕಾರಣದ ವಿವಿಧ ರೂಪಗಳೇ; ಪರಮಾಣು ರಿಯಾಕ್ಟರುಗಳ ಇಂಧನ ಮತ್ತು ವ್ಯಾಪಾರಗಳನ್ನು ಅಗತ್ಯ ಮಾಡಿರುವಂತಹ ಜಾಗತಿಕ ಅಭಿವೃದ್ಧಿಯ ರಾಜಕಾರಣ ನಮ್ಮನ್ನು–ಮಾನವ ಜನಾಂಗವನ್ನು– ಎತ್ತ ಕೊಂಡೊಯ್ಯುತ್ತಿದೆ ಎಂಬ ಬಗ್ಗೆ ಎದ್ದಿರುವ ಆತಂಕ, ಅನುಮಾನಗಳೇ.

ನಾನು ಇಲ್ಲಿ ನಮ್ಮ ರಾಜಕಾರಣದ ಸ್ವರೂಪವನ್ನು ನಿರೂಪಿಸಲು ಪರಮಾಣು ಒಪ್ಪಂದವನ್ನೇ ಏಕೆ ಉದಾಹರಣೆಯನ್ನಾಗಿ ತೆಗೆದುಕೊಂಡಿರುವೆ ಎಂದರೆ, ಇದು ಇತ್ತೀಚಿನ ರಾಷ್ಟ್ರೀಯ ಮತ್ತು ಜಾಗತಿಕ ರಾಜಕಾರಣದ ಮತ್ತು ಅವುಗಳ ನಡುವಣ ಸಂಬಂಧದ ಸಂಕೀರ್ಣ ಉದಾಹರಣೆ ಎಂಬುದಷ್ಟೇ ಅಲ್ಲ. ಇದು, ಈ 'ಹಿಂದ್ ಸ್ವರಾಜ್'ನ್ನು ಅಸಂಬದ್ಧ ಮತ್ತು ಅವ್ಯವಾಹಾರಿಕ ಕೃತಿ ಎಂದು ಈ ದೇಶದ ಮೊದಲ ಪ್ರಧಾನಿ ನೆಹರೂ ಅವರಿಂದ ತಿರಸ್ಕೃತವಾದ ನಂತರದ ಅರವತ್ತು ವರ್ಷಗಳ ಈ ಸ್ವತಂತ್ರ ಭಾರತದ ರಾಜಕಾರಣದ ಶಿಖರಪ್ರಾಯ ಉದಾಹರಣೆಯಾಗಿದೆ. ಹಾಗೇ ಅದರ ಎಲ್ಲ ಆಶಯ ಮತ್ತು ಕಾರ್ಯಕ್ರಮಗಳನ್ನೂ ವಿಷದೀಕರಿಸುವಂತಿದೆ. ಇದೆಲ್ಲದಕ್ಕಿಂತ ಮುಖ್ಯವಾಗಿ ಇದರಲ್ಲಿ ಆಧುನಿಕ ನಾಗರೀಕತೆಯ ಪರಮ ಸಾಧನೆಯೆನಿಸಿರುವ ಪರಮಾಣು ಶಕ್ತಿಯೊಂದಿಗೆ ಸಾವಯವ ಸಂಬಂಧ ಹೊಂದಿರುವ ರಾಜಕಾರಣವೂ ಅಡಗಿದೆ ಎಂಬ ಕಾರಣಕ್ಕಾಗಿಯೂ.

ಈ ಒಪ್ಪಂದವನ್ನು ಒಮ್ಮೆ ಸುಮ್ಮನೆ ನೋಡಿ. ಈ ಒಪ್ಪಂದ ನಮ್ಮ ವಿದ್ಯುತ್ ಉತ್ಪಾದನೆಯನ್ನು ಇನ್ನು ಹತ್ತು–ಹನ್ನೆರಡು ವರ್ಷಗಳಲ್ಲಿ ಶೇಕಡಾ ಎರಡೂವರೆ ಅಥವಾ ಮೂರರಷ್ಟು ಹೆಚ್ಚಿಸುವುದೆಂದು ಹೇಳಲಾಗುತ್ತಿದೆ. ಆದರೆ ಇದರ ತಾಂತ್ರಿಕ ವಿವರಗಳನ್ನು ಗಮನಿಸಿದರೆ, ಇದು ನಿಜವಾಗಿಯೂ ಇಂಧನ ಒಪ್ಪಂದ ಮಾತ್ರವೋ ಅಥವಾ ತಾನು ಇಂದು ಮುಟ್ಟುತ್ತಿರುವ ಆರ್ಥಿಕ ದುಃಸ್ಥಿತಿಯಿಂದಾಗಿ ಜಾಗತಿಕ ರಾಜಕೀಯ ಮಹತ್ವ

ಕಳೆದುಕೊಳ್ಳುವ ಭಯದಲ್ಲಿರುವ ಅಮೆರಿಕಾದ ಪುನರುತ್ಥಾನ ಕಾರ್ಯಾಚರಣೆಗಾಗಿ ಸಿದ್ಧಪಡಿಸಲಾಗಿರುವ ರಾಜಕೀಯ ಒಪ್ಪಂದವೋ ಎಂದು ಅನುಮಾನವಾಗುತ್ತದೆ. ಈ ಒಪ್ಪಂದದ ಪ್ರಕಾರ ತಕ್ಷಣಕ್ಕೆ ಅಮೆರಿಕಾದ ಕಂಪನಿಗಳು ೩೦ ದಶಲಕ್ಷ ಡಾಲರ್‌ಗಳಷ್ಟು ಬೆಲೆಯ ಪರಮಾಣು ರಿಯಾಕ್ಟರುಗಳನ್ನು ಭಾರತಕ್ಕೆ ಮಾರಲಿವೆಯಂತೆ. ನಂತರ ಫ್ರಾನ್ಸ್‌ನಿಂದಲೂ ಮತ್ತಷ್ಟು ಅಂತಹ ರಿಯಾಕ್ಟರುಗಳು ಖರೀದಿಯಾಗಿ ಬರಲಿವೆಯಂತೆ! ತದನಂತರ ನಾವೂ ಈ ಒಪ್ಪಂದದ ಪ್ರಕಾರ ಈ ರಿಯಾಕ್ಟರುಗಳ ತಂತ್ರಜ್ಞಾನ ಪಡೆದು ಶತ ಶತ ಕೋಟಿ ಡಾಲರ್‌ಗಳ ರಿಯಾಕ್ಟರ್ ಮಾರುಕಟ್ಟೆಯನ್ನು ಪ್ರವೇಶಿಸಿ ಸಾಕಷ್ಟು ಹಣ ಸಂಪಾದಿಸಬಹುದಂತೆ!!

ಹಾಗಾಗಿ ಇದು ಮೂಲತಃ ಪರಮಾಣು ರಿಯಾಕ್ಟರುಗಳ ಜಾಗತಿಕ ಮಾರುಕಟ್ಟೆಯ ವಿಸ್ತರಣೆಗಾಗಿ workout ಮಾಡಲಾದ ಅಂತಾರಾಷ್ಟ್ರೀಯ ವ್ಯಾಪಾರ ಒಪ್ಪಂದವೇ ಆಗಿದ್ದರೆ ಆಶ್ಚರ್ಯವಿಲ್ಲ. ಹಾಗಿದ್ದಲ್ಲಿ ಇದು, ಹೊಸ ಒಡೆತನ (Patent)ದ ಕಾನೂನುಗಳು ಮತ್ತು ಹೊಸ ಆಮದು-ರಫ್ತು ಕಾನೂಗಳ ಮೂಲಕ ಜೀವ ಜಗತ್ತನ್ನು ವೈವಿಧ್ಯಮಯ ಸರಕಿನ ಒಂದು ಮಾರುಕಟ್ಟೆಯನ್ನಾಗಿ ಪರಿವರ್ತಿಸಿರುವ ಜಾಗತೀಕರಣ ಎಂಬ ಅರೆ-ಉದಾರವಾದಿ ಹೆಸರಿನಿಂದ ಕರೆಯಲ್ಪಡುವ ಅಂತಾರಾಷ್ಟ್ರೀಯ ರಾಜಕಾರಣದ ಇನ್ನೊಂದು ಹೆಜ್ಜೆಯಷ್ಟೆ. ೩೫ ವರ್ಷಗಳ ಹಿಂದೆ ನಾವು ಅಣುಸ್ಫೋಟ ಮಾಡಿದಾಗ ಅಮೆರಿಕಾ ನಮ್ಮ ಮೇಲೆ ಜಾಗತಿಕ ಬಹಿಷ್ಕಾರ ಹಾಕಲು ರೂಪಿಸಿದ ಕಾನೂನು ಮತ್ತು ಸಂಸ್ಥೆಗಳನ್ನೇ ಇಂದು ಈ ಒಪ್ಪಂದದ ಮೂಲಕ; ಆ ಬಹಿಷ್ಕಾರವನ್ನು ತೆಗೆಯಲು ಬಳಸುತ್ತಿರುವುದರ ಮರ್ಮವಾದರೂ ಏನು? ನಾವು ಒಪ್ಪಂದಕ್ಕೆ ಸಹಿ ಹಾಕುವ ಮುನ್ನ ಈ ಪ್ರಶ್ನೆಯ ಬಗ್ಗೆ ಯೋಚಿಸದಂತೆ ನಮ್ಮನ್ನು ವಿವಶಗೊಳಿಸಿರುವ ಶಕ್ತಿಯಾದರೂ ಯಾವುದು?

ಈ ಒಪ್ಪಂದ ನಮ್ಮ ಶಾಂತಿಯುತ ಪರಮಾಣು ಕಾರ್ಯಕ್ರಮಕ್ಕೆ, ಬಡತನ ನಿರ್ಮೂಲನ ಮಾಡುವ ಅಭಿವೃದ್ಧಿ ಚಟುವಟಿಕೆಗಳಿಗೆ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ನಾವು ಜಾಗತಿಕ ಶಕ್ತಿಯಾಗಿ ಮೂಡಲು ಸಹಾಯ ಮಾಡುವುದೆಂದು ನಮ್ಮ ಪ್ರಧಾನಿ ಹೇಳುತ್ತಿದ್ದಾರೆ. ಆದರೆ ಈ ಒಪ್ಪಂದಕ್ಕೆ ಅಮೆರಿಕಾದ ಸೆನೆಟ್ ಅಂತಿಮ ಅನುಮೋದನೆ ನೀಡುವವರೆಗೆ ಹಂತಾನುಹಂತವಾಗಿ ಹೊರಬೀಳಲಾರಂಭಿಸಿರುವ ಒಪ್ಪಂದದ ಒಳವಿವರಗಳು ನಮ್ಮ ಪ್ರಧಾನಿ ಈ ಒಪ್ಪಂದದ ಬಗ್ಗೆ ಸಂಸತ್ತಿನಲ್ಲಿ ಮತ್ತು ಹೊರಗೆ ದೇಶಕ್ಕೆ ನೀಡಿದ ಮಾಹಿತಿ ಮತ್ತು ಆಶ್ವಾಸನೆಗಳನ್ನು ಒಂದೊಂದಾಗಿ ಹುಸಿಗೊಳಿಸಿವೆ. ಒಪ್ಪಂದವಿರಲಿ, ಈ ಒಪ್ಪಂದಕ್ಕೆ ಸಹಿ ಹಾಕುವ ಇಡೀ ಪ್ರಕ್ರಿಯೆಯೇ ನಮ್ಮ ಸಂಸದೀಯ ಪ್ರಜಾಪ್ರಭುತ್ವದ ವಿಶ್ವಾಸಾರ್ಹತೆಯನ್ನು ಹಾಳುಗೆಡಹಿದೆ. ಗಾಂಧಿ 'ಹಿಂದ್ ಸ್ವರಾಜ್'ನಲ್ಲಿ ನಾವೀಗ ಅನುಸರಿಸುತ್ತಿರುವ ಬ್ರಿಟಿಷ್ ಸಂಸದೀಯ ಪದ್ಧತಿಯನ್ನು, ಅದು ಸತ್ಯಕ್ಕೆ ಬದಲಾಗಿ ಆಮಿಷಗಳಿಂದ ಬದಲಾಗಬಲ್ಲ ಜನ ಪ್ರತಿನಿಧಿಗಳ ಮತವನ್ನು ನಂಬಿ ನಡೆಯುವ ಆಡಳಿತವೆಂದು, ಸೂಳೆಗಾರಿಕೆಗೆ ಹೋಲಿಸಿದ್ದರು. ಗಾಂಧಿ ನಂತರದ ದಿನಗಳಲ್ಲಿ ಈ ಕೃತಿಯಲ್ಲಿ ತಾವು ಏನನ್ನಾದರೂ ಬದಲಿಸುವುದಿದ್ದರೆ, ಈ ಅಸಭ್ಯವೆನಿಸುವ

ಶಬ್ದವನ್ನು ಮಾತ್ರ ಬದಲಿಸುವುದಾಗಿ ಹೇಳಿದ್ದರು. ಆದರೆ ಮೊನ್ನೆ ಪರಮಾಣು ಒಪ್ಪಂದದ ವಿಷಯವಾಗಿ ಸಂಸತ್ತಿನಲ್ಲಿ ನಡೆದ ಮತದಾನದ ಸಂದರ್ಭದಲ್ಲಿ ಪ್ರಕಟವಾದ 'ಮತಕ್ಕಾಗಿ ನಗದು' ಹಗರಣ, ಗಾಂಧಿಯವರ ಈ ವರ್ಣನೆಯನ್ನು ಸಮರ್ಥಿಸುವಂತೆಯೇ ಇದ್ದು, ಈ ಕೃತಿಯ ಮಹತ್ವವನ್ನು ಹೆಚ್ಚಿಸಿದೆಯೆಂದೇ ಹೇಳಬೇಕು.

ಅಮೆರಿಕಾ ತನ್ನ NATO ಸೇನಾ ಮೈತ್ರಿಕೂಟವನ್ನು ರಷ್ಯಾ ಮತ್ತು ಚೀನಾ ಗಡಿಗಳಲ್ಲಿ ಖಂಡಾಂತರ ಕ್ಷಿಪಣಿಗಳನ್ನು ಸ್ಥಾಪಿಸುವ ಮೂಲಕ 'ಜಾಗತಿಕ ಜನತಾ ವಿಮೋಚನೆ' ಕಾರ್ಯಕ್ರಮವನ್ನಾಗಿ (ಇರಾಕ್ ವಿಮೋಚನೆಯಂತೆ!) ಪರಿವರ್ತಿಸುತ್ತಿದೆ ಎಂದು ಹೇಳಲಾಗುತ್ತಿದೆ. ಇಂತಹ ಸಂದರ್ಭದಲ್ಲಿ, ಈ ಒಪ್ಪಂದದ ಮೂಲಕ ನಾವು ಇಂಧನ ಸ್ವಾವಲಂಬನೆ ಸಾಧಿಸಿಕೊಳ್ಳಲು ಹೋಗಿ ರಾಜಕೀಯ ಸ್ವಾಯತ್ತತೆಯನ್ನು ಕಳೆದುಕೊಳ್ಳುವ ಹಾದಿಯಲ್ಲಿದ್ದೇವೆಯೇ ಎಂಬ ಆತಂಕ ಕೆಲವರಲ್ಲಿ ಉಂಟಾಗಿದೆ. ಇಲ್ಲಿ ನಾನು ಭಾರತದ ಅಥವಾ ಅಮೆರಿಕಾದ ಯಾವುದೇ ನಿರ್ದಿಷ್ಟ ರಾಜಕೀಯ ಪಕ್ಷದ ರಾಜಕಾರಣದ ಬಗ್ಗೆ ಮಾತನಾಡುತ್ತಿಲ್ಲ. ಈ ಎಲ್ಲ ಪಕ್ಷಗಳಲ್ಲಿ ಪರಸ್ಪರ ಭಿನ್ನಾಭಿಪ್ರಾಯವಿರುವುದು ಒಪ್ಪಂದದ ಮೂಲ ಉದ್ದೇಶದ ಬಗೆಗಲ್ಲ, ಅದರ ಕೆಲವು ವಿವರಗಳ ಬಗ್ಗೆ ಅಷ್ಟೆ. ಅಲ್ಲದೆ, ಅಮೆರಿಕಾವೂ ಸೇರಿದಂತೆ ಬಹುಪಾಲು ಎಲ್ಲ ಮುಂದುವರಿದ ದೇಶಗಳು ಪರಮಾಣು ವಿದ್ಯುತ್ ಸ್ಥಾವರಗಳ ಅಂತರ್ಗತ ಅಪಾಯಗಳ ಅನುಭವದ ಹಿನ್ನೆಲೆಯಲ್ಲಿ ಅವುಗಳ ಸ್ಥಾಪನೆಯನ್ನು ನಿಲ್ಲಿಸುತ್ತಾ, ಇರುವ ಸ್ಥಾವರಗಳನ್ನು ಮುಚ್ಚುತ್ತಾ ಇವೆ. ಇಂತಹ ಪರಿಸ್ಥಿತಿಯಲ್ಲಿ ಭಾರತದಂತಹ ಅಭಿವೃದ್ಧಿಶೀಲ ದೇಶಗಳಿಗೆ ಸ್ವಚ್ಛ ಇಂಧನದ ಹೆಸರಿನಲ್ಲಿ ಪರಮಾಣು ವಿದ್ಯುತ್‌ನ್ನು ಏಕೆ ಶಿಫಾರ್ಸು ಮಾಡಲಾಗುತ್ತಿದೆ ಎಂಬುದನ್ನೂ ಯೋಚಿಸಲಾಗದಷ್ಟು ನಮಗೆ ಮಂಕು ಕವಿಸಿರುವ ಅಂಶವಾದರೂ ಯಾವುದು? ಅದು ಅಭಿವೃದ್ಧಿಯ ಹಪಾಹಪಿಯಲ್ಲದೆ ಮತ್ತೇನೂ ಅಲ್ಲ.

ಮೊದಲೇ ಹೇಳಿದ ಹಾಗೆ ಈ ಒಪ್ಪಂದದ ಮೂಲ ಉದ್ದೇಶ: ಕಳೆದ ಹತ್ತು ಹನ್ನೆರಡು ವರ್ಷಗಳಲ್ಲಿ ದೇಶ ಸಾಧಿಸಿರುವ ಎರಡಂಕಿ ದರದ ಪ್ರಗತಿಯನ್ನು ಉಳಿಸಿಕೊಂಡು ಹೋಗುವುದು. ಆದರೆ ಈ ದಿಢೀರ್ ಎರಡಂಕಿ ಪ್ರಗತಿಯ ಹಿಂದಿನ ರಾಜಕೀಯ-ಆರ್ಥಿಕ ತಾತ್ವಿಕತೆ, ಅದರ ಪ್ರತಿಪಾದಕ ದೇಶವಾದ ಅಮೆರಿಕಾದಲ್ಲೇ ತನ್ನ ವಿಶ್ವಾಸಾರ್ಹತೆಯನ್ನಿಂದು ಕಳೆದುಕೊಳ್ಳುತ್ತಿದೆ. ಅಲ್ಲಿನ ಮುಕ್ತ ಮಾರುಕಟ್ಟೆ ಮತ್ತು ಕಾರ್ಪೋರೇಟ್ ಬಂಡವಾಳಶಾಹಿ ಆಧಾರಿತ ಆರ್ಥಿಕತೆ ನಿರ್ಮಿಸಿದ್ದ ದೊಡ್ಡ ದೊಡ್ಡ ಖಾಸಗಿ ಹಣಕಾಸು ಸಂಸ್ಥೆಗಳು, ಬ್ಯಾಂಕುಗಳು ಮುಳುಗಿ ಹೋಗುತ್ತಿವೆ. ಅವುಗಳ ರಕ್ಷಣೆಗಾಗಿ ಭಾರಿ ಪ್ರಮಾಣದಲ್ಲಿ ಜನರ ಅಂದರೆ ಸರ್ಕಾರದ ಹಣವನ್ನು ಹೂಡಬೇಕಾದ ಪರಿಸ್ಥಿತಿ ಅಲ್ಲಿ ಉಂಟಾಗಿದೆ. ಅಲ್ಲಿನ ಆರ್ಥಿಕ ಆಡಳಿತಗಾರರು ಈಗ ಕಾರ್ಪೋರೇಟ್ ಆಸ್ತಿಗಳ ರಾಷ್ಟ್ರೀಕರಣದ ಅಗತ್ಯವನ್ನು ಒತ್ತಿ ಹೇಳತೊಡಗಿದ್ದಾರೆ. ಇತ್ತೀಚಿನ ನೊಬೆಲ್ ಪ್ರಶಸ್ತಿ ಪುರಸ್ಕೃತ ಅರ್ಥಶಾಸ್ತ್ರಜ್ಞ ಜೋಸೆಫ್ ಸ್ಟಿಗ್ಲಿಟ್ಜ್ ಅಮೆರಿಕಾ ಎಡಪಂಥೀಯ ರಾಜಕಾರಣದಿಂದ ಒಂದೆರಡು ಪಾಠಗಳನ್ನು ಕಲಿಯುವ ಕಾಲವೀಗ ಬಂದಿದೆ

ಎನ್ನತೊಡಗಿದ್ದಾರೆ! ಅಂದರೆ ಸರಕು ಅರ್ಥಶಾಸ್ತ್ರ ತನ್ನ ಮತ್ತೊಂದು dead endಗೆ ಬಂದಿದೆ. ಸರಕು ಉತ್ಪಾದನೆ ಮತ್ತು ಲಾಭ ಮಾತ್ರವಲ್ಲ, ಮಾನವ ಕಲ್ಯಾಣವನ್ನೂ ತನ್ನ ಯಶಸ್ಸಿನ ಸಂಕೇತಮಾಡಿಕೊಳ್ಳುವ ಮಾನವ ಅರ್ಥಶಾಸ್ತ್ರ ಇಂದು ಆರಂಭವಾಗಬೇಕಿದೆ.

ಆದರೆ ಭಾರತದಲ್ಲಿ ಏನಾಗುತ್ತಿದೆ? ಎಡಪಂಥೀಯ ರಾಜಕಾರಣದ ಧೀಮಂತರೆನಿಸಿದ ಬಂಗಾಳದ ಕಮ್ಯುನಿಸ್ಟರೇ ವಿದೇಶಿ ಮತ್ತು ಖಾಸಗಿ ಬಂಡವಾಳವಿಲ್ಲದೆ ಅಭಿವೃದ್ಧಿ ಸಾಧ್ಯವಿಲ್ಲ ಎನ್ನುತ್ತಿದ್ದಾರೆ! ಇಂತಹ ಬಂಡವಾಳದ ಕ್ರೋಢೀಕರಣದ ಮೂಲಕವೇ ಪ್ರಕಾಶಮಾನ ಭಾರತವನ್ನು ಪ್ರಸ್ತುತಪಡಿಸಲು ಹೋಗಿ ಮುಗ್ಗರಿಸಿದ ನಂತರ 'ಆಂ ಆದ್ಮಿ'ಯನ್ನು ಗಮನದಲ್ಲಿಟ್ಟುಕೊಂಡ 'ಆವೃತ' ಅಭಿವೃದ್ಧಿಯ ಮಾತನಾಡುತ್ತ ಅಧಿಕಾರಕ್ಕೆ ಬಂದ ಮನಮೋಹನ ಸಿಂಗ್ ನೇತೃತ್ವದ ಪರಿವಾರ ಮಾಡುತ್ತಿರುವುದಾದರೂ ಏನು? ಇವರು SEZ ಎಂಬ gated industrial colonyಗಳ ಮೂಲಕ ದೇಶದೊಳಗೇ 'ವಿದೇಶಿ' ವಸಾಹತುಗಳನ್ನು ಸೃಷ್ಟಿಸಹೊರಟಿದ್ದಾರೆ. ಇದು ಇನ್ನು ಐವತ್ತು ವರ್ಷಗಳಲ್ಲಿ ಭಾರತವನ್ನು ಜಾಗತಿಕ ಶಕ್ತಿಯನ್ನಾಗಿ ಮಾಡಬಲ್ಲ ಈಗಿನ ಎರಡಂಕಿ ಪ್ರಗತಿ ದರವನ್ನು ಮುಂದುವರೆಸಿಕೊಂಡು ಹೋಗಲು ಅನಿವಾರ್ಯವಾಗಿರುವ ಮಾರ್ಗವಂತೆ. ಮತ್ತು ಈವರೆಗಿನ ಪ್ರಗತಿಯ ಸಹಜ ಮುಂದುವರಿಕೆಯಂತೆ! ನಮಗೆ ಪರಮಾಣು ಇಂಧನದ ತುರ್ತು ಅಗತ್ಯ ಬಿದ್ದಿರುವುದು ಇಂತಹ ಅಭಿವೃದ್ಧಿಗಾಗಿ!

ಹೋಗಲಿ, ಈ ಅಭಿವೃದ್ಧಿಯ ಫಲಗಳಾದರೂ ಏನು? ನಮ್ಮ ಸರ್ಕಾರದ ಮತ್ತು ಜಾಗತಿಕ ಸಮೀಕ್ಷಾ ಸಂಸ್ಥೆಗಳ ಅಧಿಕೃತ ಅಂಕಿ ಅಂಶಗಳೇ ಹೇಳುತ್ತಿವೆ, ದೇಶದಲ್ಲಿ ಈ ಪ್ರಗತಿ ದರ ಏರುತ್ತಿದ್ದಂತೆ ಬಡವರ ಮತ್ತು ಶ್ರೀಮಂತರ ನಡುವಣ ಅಂತರ, ಘರ್ಷಣಾತ್ಮಕ ಪ್ರಮಾಣದಲ್ಲಿ ಹೆಚ್ಚುತ್ತಿದೆ ಎಂದು. ಇದರ ಜೊತೆಗೆ ಬಡವರ ಮತ್ತು ಹಸಿದವರ ಸಂಖ್ಯೆಯೂ ಹೆಚ್ಚಿದೆ. ಜಗತ್ತಿನ ಅರ್ಧದಷ್ಟು ಹಸಿದವರು ಭಾರತದಲ್ಲಿಯೇ ಇದ್ದಾರೆ. ಇದರಿಂದಾಗಿ ಕೋಮು ಹಿಂಸೆ, ರಾಜಕೀಯ ಹಿಂಸೆಯೂ ಸೇರಿದಂತೆ ವೈಯುಕ್ತಿಕ ಮತ್ತು ಸಾಮಾಜಿಕ ಹಿಂಸೆ, ತನ್ನ ಪ್ರಮಾಣ ಮತ್ತು ವೈವಿಧ್ಯದಲ್ಲಿ ಹೆಚ್ಚುತ್ತಿದೆ. ಈ ಹೊಸ ಆರ್ಥಿಕತೆಯ ಅವಧಿಯಲ್ಲಿ ಭ್ರಷ್ಟಾಚಾರದ ತಃಖ್ತೆಯಲ್ಲಿ ನಮ್ಮ ದೇಶದ ಸ್ಥಾನಮಾನ ಏರುಗತಿಯಲ್ಲಿದ್ದರೆ, ಜಾಗತಿಕ ಮಾನವ ಸಂಪನ್ಮೂಲ ಅಭಿವೃದ್ಧಿ ತಃಖ್ತೆಯಲ್ಲಿ ಇಳಿಗತಿಯಲ್ಲಿದೆ! ನಿಜ, ಒಂದು ದಕ್ಷತೆಯ ಮತ್ತು ಒಂದು ವರ್ಗದ ಜನರ ಹಣಕಾಸಿನ ಭದ್ರತೆ ಸಾಕಷ್ಟು ಹೆಚ್ಚಿದೆ. ಅವರಿಂದಾಗಿ ಮಾರುಕಟ್ಟೆಯೂ ಮೈತುಂಬಿಕೊಂಡಿದೆ. ಆದರೆ ಇದರ ಜೊತೆಗೇ, ಇವರೂ ಸೇರಿದಂತೆ ಎಲ್ಲ ಜನಸಮುದಾಯಗಳ ಮಾನಸಿಕ, ಸಾಮಾಜಿಕ ಅಭದ್ರತೆ ಹೆಚ್ಚಿದೆ. Security gaurdಗಳಿಗೆ ಈಗ ಎಲ್ಲಿಲ್ಲದ ಬೇಡಿಕೆ ಬಂದಿದೆ! ಇದರ ಜೊತೆಗೇ ಸುಲಭ ಅಧ್ಯಾತ್ಮದ ಮತ್ತು ವಿಕ್ಷಿಪ್ತ ಮನರಂಜನಾ ಮಾದರಿಗಳೂ ಚಾಲ್ತಿಗೆ ಬಂದಿವೆ.. ಇದೆಲ್ಲದಕ್ಕೆ ಮುಳ್ಳಿನ ಕಿರೀಟವಿಟ್ಟಂತೆ ರೈತರ ಆತ್ಮಹತ್ಯೆ ಮುಂದುವರಿದೇ ಇದೆ. ಕಳೆದ ಹತ್ತು ವರ್ಷಗಳಲ್ಲಿ ಒಂದೂವರೆ ಲಕ್ಷಕ್ಕೂ ಹೆಚ್ಚು ಜನ ರೈತರು ಸಾವಿಗೆ ಶರಣಾಗಿದ್ದಾರೆ. ಅದಕ್ಕಿಂತ ಮುಖ್ಯ ವಿಷಯ ಎಂದರೆ, ಇವರಿಗೆ ಪರಿಹಾರ ಪ್ಯಾಕೇಜುಗಳನ್ನು

ಘೋಷಿಸಿದಷ್ಟೂ, ಇವರ ಆತ್ಮಹತ್ಯೆ ದರ ಹೆಚ್ಚುತ್ತಾ ಹೋಗುತ್ತಿದೆ.

ಇದೀಗ ಮುಖ್ಯ ಪ್ರಶ್ನೆ: ಏಕೆ ಹೀಗೆ? ಇದಕ್ಕೆ ಉತ್ತರ ಹುಡುಕುತ್ತಾ ಹೊರಟಂತೆ ನಮಗೆ ಕತ್ತಲೆಯ ಸುರಂಗದ ಕೊನೆಯಲ್ಲಿ ಕಾಣುವುದು 'ಹಿಂದ್ ಸ್ವರಾಜ್'. 'ಹಿಂದ್ ಸ್ವರಾಜ್' ಈ ಎಲ್ಲ ಸಮಸ್ಯೆಗಳಿಗೆ ಉತ್ತರ ಕೊಡುತ್ತದೆ ಎಂಬರ್ಥದಲ್ಲಿ ಈ ಮಾತನ್ನು ನಾನು ಹೇಳುತ್ತಿಲ್ಲ. ಅದು ಆಧುನಿಕ ನಾಗರೀಕತೆಯ ತನ್ನ ವಿಶ್ಲೇಷಣೆಯಲ್ಲಿ ಈ ಸಮಸ್ಯೆಗಳನ್ನು ಮುನ್ನೋಡಿತ್ತು ಎಂಬರ್ಥದಲ್ಲಿ ಈ ಮಾತು ಹೇಳುತ್ತಿರುವೆ. 'ಹಿಂದೂಸ್ತಾನ ತಿಣುಕುತ್ತಿರುವುದು ಬ್ರಿಟಿಷರ ಭಾರದಿಂದಲ್ಲ; ಆಧುನಿಕ ನಾಗರೀಕತೆಯ ರಾಕ್ಷಸ ಭಾರದಿಂದ.': ಇದು 'ಹಿಂದ್ ಸ್ವರಾಜ್'ನ ಬೀಜವಾಕ್ಯ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದುದು ಗಾಂಧಿ ಆಧುನಿಕತೆಯನ್ನು ಟೀಕಿಸುತ್ತಿಲ್ಲ. ಏಕೆಂದರೆ ಆಧುನಿಕ ರಾಜಕೀಯ ಸಂದರ್ಭದ ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತೆಯ ಕಲ್ಪನೆಗಳನ್ನು ಸ್ವೀಕರಿಸಿ ಅವನ್ನು ವಿಕಾಸಗೊಳಿಸುವಾಗ ಅವರು ಆಧುನಿಕರಲ್ಲಿ ಆಧುನಿಕರು. ಆದರೆ ಅವರ ವಿರೋಧವಿರುವುದು ಆಧುನಿಕ ನಾಗರೀಕತೆಗೆ. ಅಂದರೆ ಆಧುನಿಕತೆಯ ಲೌಕಿಕ ರೂಪಗಳ ಬಗೆಗೆ.

ಇದಕ್ಕೆ ಕಾರಣ ಆಧುನಿಕ ನಾಗರೀಕತೆ ತನ್ನನ್ನು ಕಟ್ಟಿಕೊಳ್ಳಲು ಸೃಷ್ಟಿಸಿಕೊಂಡ ತನ್ನ ಒಡಕಿನಲ್ಲಿಯೇ ಇದೆ. ಈ ಒಡಕಿನ ಮೂಲ ಇರುವುದು ಆಧುನಿಕ–ಅಂದರೆ ಐರೋಪ್ಯ ಪುನರುಜ್ಜೀವನ ಯುಗ ನಿರೂಪಿಸಿದ–ಹೊಸ ಕ್ರಿಶ್ಚಿಯನ್ ಮತ, ಜಗತ್ತನ್ನು ನೋಡುವ ಬಗೆಯಲ್ಲಿ. ಈ ಬಂಡಾಯವಾದಿ (Protestant) ಮತ, ಜಗತ್ತನ್ನು ಮನುಷ್ಯನ ಸುಖಕ್ಕಾಗಿ ದೇವರು ಕೊಟ್ಟಿರುವ 'ಕೊಡುಗೆ' ಎಂದು ಸಾರಿತು. ಅಂದರೆ ಜಗತ್ತು ದೇವರ ಹೊರಗಿದೆ ಮತ್ತು ಜಡರೂಪಿಯಾಗಿದೆ. ಹಾಗಾಗಿ ಅದನ್ನು ಮನುಷ್ಯ ತನಗೆ ಬೇಕಾದ ಸುಖ ಫಲಗಳನ್ನು ಪಡೆದುಕೊಳ್ಳಲು ಹೇಗಾದರೂ ಬಳಸಿಕೊಳ್ಳಬಹುದು ಎಂದು ಭಾವಿಸುತ್ತದೆ. ಅಂದರೆ ಸ್ಥೂಲವಾಗಿ ಜಗತ್ತು ಎಂದರೆ ಒಂದು ಗ್ರಾಹಕ ವಸ್ತುವೇ ಆಗಿದೆ. ಈ ನಂಬಿಕೆಯೇ ಹೊಸ ವಿಜ್ಞಾನವನ್ನು, Mechanicsನ್ನು ಸೃಷ್ಟಿಸಿದ್ದು. ಆಧುನಿಕ ನಾಗರೀಕತೆ ಬೆಳೆದದ್ದೇ ಈ ಸುಖಫಲಗಳ– Mechanicsನ–ಆಕರ್ಷಣೆಗಳೊಂದಿಗೇ. ಈ ಅರ್ಥದಲ್ಲಿ ಆಧುನಿಕ ನಾಗರೀಕತೆ ಎಂದರೇ ಕ್ರಿಶ್ಚಿಯನ್ ಲೋಕದೃಷ್ಟಿಯೇ ಆಗಿದೆ. (ಇದರ ಸೂಕ್ಷ್ಮ ಮತ್ತು ಸೃಜನಶೀಲ ಪರಿಶೀಲನೆಯನ್ನು ನಾವು ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ನೋಡಬಹುದಾಗಿದೆ.)

ಈ ಲೋಕದೃಷ್ಟಿಯ ಒಂದು ವಿಶೇಷವೆಂದರೆ, ದೇವರನ್ನು ಹೊರಗಿಟ್ಟ ಕಾರಣದಿಂದಾಗಿ ದೇವರನ್ನೂ ಮೀರಿ ಬೆಳೆದ ಈ ವಿಜ್ಞಾನ ಮತ್ತು ಆ ದೇವರನ್ನು ನಂಬುವ ಕ್ರಿಶ್ಚಿಯನ್ ಧರ್ಮದ ನಡುವೆ ಲೋಕ ಜೀವನದಲ್ಲಿ ಘರ್ಷಣೆ ಉಂಟಾಗದಂತೆ ತಡೆಯಲು ಈರೋಪಿನ ಆಡಳಿತಗಾರರು 'ಸೆಕ್ಯುಲರಿಸಂ' ಎಂಬ ರಾಜಕೀಯ ಪರಿಕಲ್ಪನೆಯೊಂದನ್ನು ರೂಪಿಸಿಕೊಳ್ಳಬೇಕಾಯಿತು. ಇದು ದೇವರು–ಧರ್ಮಗಳ ಅಧಿಕಾರಗಳನ್ನೂ ಮತ್ತು ಲೌಕಿಕ ಆಡಳಿತದ ಅಧಿಕಾರಗಳನ್ನೂ ಪ್ರತ್ಯೇಕಿಸುವ ಒಪ್ಪಂದ. ಹೀಗಾಗಿ ಐರೋಪ್ಯ ರಾಜಕಾರಣ ಯಾವ ಪಾಪ ಪ್ರಜ್ಞೆಯೂ ಇಲ್ಲದೆ ವಿಜ್ಞಾನವನ್ನು

ತಂತ್ರಜ್ಞಾನವನ್ನಾಗಿ ಪರಿವರ್ತಿಸಿಕೊಂಡು ತನ್ನ ರಾಜಕಾರಣಕ್ಕೆ ಬಳಸಿಕೊಳ್ಳುತ್ತಾ ಹೋಯಿತು. ಇದೇ ವಸಾಹತುಶಾಹಿಗೆ ಕಾರಣವಾದದ್ದು.

ಗಾಂಧಿ ಇದನ್ನು ಅಧರ್ಮ ಎಂದರು. ರೋಗವೆಂದು ಕರೆದರು. ಇದಕ್ಕೆ ಮುನ್ನ, ಪ್ರವಾದಿ ಮಹಮ್ಮದ್ ಧರ್ಮದಿಂದ ಇದನ್ನು–ಧರ್ಮದಿಂದ ವಿಮುಖವಾದ ಭೌತವಾದಿ ನಾಗರೀಕತೆಯನ್ನು–ಸೈತಾನಿ ನಾಗರೀಕತೆ ಎಂದು ಕರೆದಿದ್ದರು. ಅದೇನೇ ಇರಲಿ, ಬಹುಶಃ ಇಂದಿನ ಮತೀಯ ವೈರ ಮತ್ತು ಹಿಂಸಾಚಾರಗಳ ಬೀಜವನ್ನು ಆಧುನಿಕ ನಾಗರೀಕತೆಯು ದೇವರು, ಧರ್ಮ ಮತ್ತು ಲೋಕಾಡಳಿತಗಳ ನಡುವೆ ಈ ಗೆರೆ ಎಳೆದ ರೀತಿಯಲ್ಲಿ ಗುರುತಿಸಬಹುದೇನೋ! ಆಧುನಿಕ ನಾಗರೀಕತೆಯ ಇಂದಿನ ರೂಪವಾದ ಜಾಗತೀಕರಣವನ್ನು ಇತ್ತೀಚಿನ ಚರಿತ್ರೆಕಾರನೊಬ್ಬ (ಹಟ್ಟಿಂಗ್‌ಟನ್ ಇರಬೇಕು) ನಾಗರೀಕತೆಗಳ ಸಂಘರ್ಷ ಎಂದು ಕರೆದಿದ್ದುದು ಬಹುಶಃ ಈ ಅರ್ಥದಲ್ಲೇ. ಹಾಗಾಗಿ, ಮುಸ್ಲಿಂ ಭಯೋತ್ಪಾದನೆ ಆಧುನಿಕ ನಾಗರೀಕತೆಯ ಒಂದು ಮುಖವಾಗಿದ್ದ ನಾಸ್ತಿಕ ಕಮ್ಯುನಿಸ್ಟ್ ರಷ್ಯಾದ ವಿರುದ್ಧ ಯುದ್ಧ ರೂಪದಲ್ಲಿ ಆರಂಭವಾಗಿ, ಅಂತಿಮವಾಗಿ ಈ ನಾಗರೀಕತೆಯ ಇನ್ನೊಂದು ಮುಖ ಮತ್ತು ಈಗ ಅಧಿಕೃತ ಮುಖದಂತಿರುವ ಅಮೆರಿಕಾದ ವಿರುದ್ಧವೇ ಗುರಿಯಾಗಿರುವುದನ್ನು ನೋಡಿದರೆ, ಇಂದಿನ ಮತೀಯ ಭಯೋತ್ಪಾದನೆಯೂ ಆಧುನಿಕ ನಾಗರೀಕತೆಯ ವೈರುಧ್ಯಗಳ ಫಲವೇ ಆಗಿದೆ ಎಂಬುದು ನಮಗೆ ಮನವರಿಕೆಯಾದೀತು.

ಹಾಗೇ, ಭಾರತೀಯ ಮುಸ್ಲಿಮರನ್ನೂ ಹೊರಗಿನವರೆಂದು ಕರೆದ ಹಿಂದೂವಾದದ ಮೂಲಕರ್ತ ಸಾವರ್ಕರ್ ಈ ಕ್ರಿಶ್ಚಿಯನ್ ಲೋಕದೃಷ್ಟಿಯನ್ನು ಒಪ್ಪಿಕೊಂಡ ಆಧುನಿಕ ಹಿಂದುವೇ ಆಗಿದ್ದರು ಎಂಬುದನ್ನು ನಾವು ಇಲ್ಲಿ ಗಮನಿಸಬೇಕು. ಇಂದಿನ ಹಿಂದೂವಾದಿಗಳು ಮುಸ್ಲಿಮರನ್ನು ದೂರೀಕರಿಸಲು ನೀಡುವ ಪ್ರಮುಖ ಮತ್ತು ಜನಪ್ರಿಯ ಕಾರಣ ಅವರು ಅನಾಗರೀಕರೆಂಬುದು! ಅಂದರೆ ತಮ್ಮ ಕಲ್ಪನೆಯ ನಾಗರೀಕತೆಗೆ ಬದ್ಧರಾದವರಲ್ಲ ಎಂದಷ್ಟೇ ಇದರ ಅರ್ಥ. ಮುಸ್ಲಿಂ ಭಯೋತ್ಪಾದನೆ ಈಗ ಭಾರತದ ವಿರುದ್ಧ ತಿರುಗಿರುವುದು ಮೂಲತಃ ಈ ಕಾರಣಕ್ಕೇ, ಭಾರತದ ರಾಜಕಾರಣ ಈಗ ಆಧುನಿಕ ನಾಗರೀಕತೆಯ ಅಂದರೆ ಅಮೆರಿಕಾದ ರಾಜಕಾರಣದ ತರ್ಕವನ್ನನುಸರಿಸಿ ನಡೆಯುತ್ತಿದೆ ಎಂಬ ಕಾರಣಕ್ಕೆ.

ನಮಗೆ ಗಾಂಧಿ ಮತ್ತು ಅವರ 'ಹಿಂದ್ ಸ್ವರಾಜ್' ಮುಖ್ಯವಾಗುವುದು ಇಲ್ಲಿ. ಅದರ common senseನಿಂದಾಗಿ. ಅವರು ಈ common senseನ್ನು ಒಂದು ಧರ್ಮವನ್ನಾಗಿ ಪ್ರಸ್ತುತಪಡಿಸುವ ರೀತಿ 'ಹಿಂದ್ ಸ್ವರಾಜ್'ಗೆ ಒಂದು ಬೆಡಗಿನ ಸೌಂದರ್ಯವನ್ನು ಪ್ರದಾನ ಮಾಡಿದೆ. ಈಗ ಆಧುನಿಕವೆಂದು ಕರೆಯಲಾಗುತ್ತಿರುವ ಪಶ್ಚಿಮದ ಈ ಭೌತವಾದಿ ನಾಗರೀಕತೆಯನ್ನು ಅವರು ಮಹಮ್ಮದರಂತೆ 'ಸೈತಾನಿ' ಎಂದು ಮತೀಯ absolute ಭಾಷೆಯಲ್ಲಿ ವರ್ಣಿಸಲಿಲ್ಲ. ಹಾಗಾಗಿ ಅದರ ವಿರುದ್ಧ ವ್ಯಗ್ರ ಹೋರಾಟಕ್ಕೂ ಕರೆಕೊಡಲಿಲ್ಲ. ಆ ತರಹದ ವ್ಯಗ್ರತೆ ಆ ನಾಗರೀಕತೆಯನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳುವಲ್ಲಿ ಅಡ್ಡಿಯುಂಟು ಮಾಡುತ್ತದೆ ಎಂದು

ಅವರು ಭಾವಿಸಿದರು. ಬದಲಿಗೆ ಆಧುನಿಕ ನಾಗರೀಕತೆಯನ್ನು ಜಗತ್ತಿನಲ್ಲಿ ಲೋಕಾಡಳಿತ evolve ಆಗುವ ಪ್ರಕ್ರಿಯೆಯಲ್ಲಿನ ಒಂದು ಅನಪೇಕ್ಷಣಿಯ ತಿರುವು ಎಂದು ಪರಿಗಣಿಸಿ, ಅದರ ಅನುಸರಣೆಯನ್ನು ರೋಗವೆಂದು ಕರೆದರು. ಅಂದರೆ ಅದು ಲಕ್ಷಣಾತ್ಮಕ ದೋಷವಾಗಿದ್ದು, ಅದು ವಾಸಿ ಮಾಡಬಹುದಾದದ್ದು.

ಇದಕ್ಕಾಗಿ ಅವರು ದೇವರ ಮತ್ತು ಧರ್ಮಗಳ ಕಲ್ಪನೆಯನ್ನು ಪುನರ್‌ನಿರೂಪಿಸಿದರು. ಈ ಪುನರ್‌ನಿರೂಪಣೆಗಾಗಿ ಅವರು ತಮ್ಮನ್ನು ಸನಾತನಿ ಎಂದು ಕರೆದುಕೊಂಡರು. ಸನಾತನಿ ಎಂದರೆ ನಮ್ಮ ವಿಚಾರವಾದಿಗಳ ಅರ್ಥದಲ್ಲಲ್ಲ; ಆದಿ ಅಂತ್ಯಗಳಿಲ್ಲದ ನಿತ್ಯನೂತನ ಧರ್ಮ ಎಂದು. ಅದರ ಪ್ರಕಾರ ಈ ಹಿಂದೂ, ಬೌದ್ಧ, ಕ್ರಿಶ್ಚಿಯನ್, ಇಸ್ಲಾಂ ಇತ್ಯಾದಿಗಳೆಲ್ಲವೂ ಈ ಸನಾತನ ಧರ್ಮದ ಕಾಲ-ದೇಶ ರೂಪಗಳಷ್ಟೆ. ಈ ಅರ್ಥದಲ್ಲಿ ಗಾಂಧಿ ಮೂಲ ಅದ್ವೈತಿ. ಈ ಜಗತ್ತನ್ನು ಧಾರಣೆ ಮಾಡಿರುವ ಸತ್ವವನ್ನು; ಅಂದರೆ ಆ ಸತ್ಯವನ್ನು ಅವರು ದೇವರು ಎಂದು ಗುರುತಿಸಿದರು. ಅವರು 'ದೇವರು ಸತ್ಯ' ಎನ್ನುವ ಮತೀಯವಾದಿಗಳ ವಸ್ತುನಿಷ್ಠ ನಂಬಿಕೆಯನ್ನು ತಿರುಗು ಮುರುಗಾಗಿಸಿ, 'ಸತ್ಯವೇ ದೇವರು' ಎಂದು ವ್ಯಕ್ತಿನಿಷ್ಠ ಮಾಡಿ ಅನ್ವೇಷಣಾತ್ಮಕಗೊಳಿಸಿದರು. ಇದೇ, ಪಶ್ಚಿಮದ ಆಧುನಿಕ ನಾಗರೀಕತೆಯನ್ನು ಮತ್ತು ಅದರ ಬಲೆಗೆ ಬಿದ್ದಿದ್ದ ಎಲ್ಲ ಸಂಸ್ಕೃತಿಗಳನ್ನು ಕುರಿತ ಗಾಂಧೀಜಿಯ ಮೂಲ ಮತ್ತು ಮುಖ್ಯ ಟೀಕೆ ಎಂದು ನಾನು ಭಾವಿಸಿದ್ದೇನೆ.

ಅವರ ಪ್ರಕಾರ ದೇವರು ಒಂದು ಅಖಂಡ ಹಾಗೂ ಸಾವಯವ ಅನುಭವ. ಹಾಗಾಗಿ ಈ ಜಗತ್ತು ದೇವರ ಕೊಡುಗೆ ಎಂದರೂ, ಆ ಕೊಡುಗೆಯೂ ದೈವ ಸ್ವರೂಪಿಯೇ. ಅಂದರೆ, ಈ ಜಗತ್ತೆಲ್ಲವೂ ಚೇತನಮಯವಾಗಿದ್ದು ದೇವರೇ ಆಗಿದೆ. ಆದ್ದರಿಂದ ಈ ಜಗತ್ತಿನ ಎಲ್ಲ ವಿದ್ಯಮಾನಗಳೂ-ರಾಜಕಾರಣವೂ ಸೇರಿದಂತೆ- ದೈವೀ ಚಟುವಟಿಕೆಯೇ. ಈ ನಂಬಿಕೆಯೊಂದಿಗೇ ಅವರು ತಮ್ಮ 'ಸತ್ಯಾನ್ವೇಷಣೆ' ಎಂಬ ಆತ್ಮಕಥೆಯಲ್ಲಿ ಹೀಗೆ ಹೇಳಿರುವುದು: 'ಸತ್ಯದೊಡನೆ ಮುಖಾಮುಖಿ ಎಂದರೆ, ಸೃಷ್ಟಿಯ ಅತಿ ಕ್ಷುದ್ರವನ್ನೂ ಅದು ನಾನೇ ಎಂಬಂತೆ ಅದರೊಡನೆ ಗುರುತಿಸಿಕೊಂಡು ಪ್ರೀತಿಸುವುದು. ಆದ್ದರಿಂದಲೇ ನಾನು ಬದುಕಿನ ಯಾವ ಕ್ಷೇತ್ರದಿಂದಲೂ ಹೊರಗೆ ಇರಲಾರೆ. ಇಂತಹ ಸತ್ಯನಿಷ್ಠೆಯೇ ನನ್ನನ್ನು ರಾಜಕಾರಣಕ್ಕೆ ಎಳೆದಿರುವುದು. ಹಾಗಾಗಿಯೇ ರಾಜಕಾರಣಕ್ಕೂ ಧರ್ಮಕ್ಕೂ ಸಂಬಂಧವಿಲ್ಲ ಎನ್ನುವವರಿಗೆ ಧರ್ಮವೆಂದರೇನೆಂದು ಗೊತ್ತಿಲ್ಲ ಎಂದು ಹೇಳಲು ನನಗೆ ಸಂಕೋಚವಿಲ್ಲ.'

ಹೀಗೆ ರಾಜಕಾರಣ ಮತ್ತು ಧರ್ಮದ ಪ್ರತ್ಯೇಕೀಕರಣಗಳನ್ನು ಒಪ್ಪದ ಗಾಂಧಿ ಸಹಜವಾಗಿಯೇ ಪಶ್ಚಿಮದ Secularismನ್ನು ಒಪ್ಪುವುದಿಲ್ಲ. ಹಾಗೇ secularismನ ಮರೆಯಲ್ಲಿ ಮಲೆತು ಬೆಳೆದ ವಿಜ್ಞಾನದ ಅನ್ವಯ ಜ್ಞಾನವೆನಿಸಿದ ತಂತ್ರಜ್ಞಾನವನ್ನೂ. ಅದಕ್ಕೂ ಮುಖ್ಯವಾಗಿ, ಅದನ್ನು ಆಧರಿಸಿ ಬೆಳೆದ ಶೋಷಕ ವಸಾಹತುಶಾಹಿ ರಾಜಕಾರಣವನ್ನು. ಹಾಗಾಗಿಯೇ ಅವರು ಇನ್ನೊಂದು ನೆಲೆಯಲ್ಲಿ, ಅದ್ವೈತವನ್ನು ಹೇಳುತ್ತಲೇ ಜಗತ್ತನ್ನು ಪಾರಮಾರ್ಥಿಕ ಮತ್ತು ವ್ಯಾವಹಾರಿಕ ಎಂದು ವಿಭಾಗಿಸಿ ಶೋಷಕ ಜಾತಿ ರಾಜಕಾರಣಕ್ಕೆ ಆಸ್ಪದ ಮಾಡಿದ ಶಂಕರಾಚಾರ್ಯರ ಶಾಸ್ತ್ರ ಮತ್ತು

ಸ್ಮೃತಿ ಆಧಾರಿತ ವೈದಿಕ ನಾಗರೀಕತೆಯನ್ನೂ ಒಪ್ಪಲಿಲ್ಲ. ಏಕೆಂದರೆ, ಅದರ ಈ ವಿಭಾಗೀಕರಣ ಕೆಳ ಮತ್ತು ಅಸ್ಪೃಶ್ಯ ಜಾತಿಗಳ ಕೇರಿಗಳೆಂಬ ವಸಾಹತುಗಳನ್ನು ಸೃಷ್ಟಿಸಿ ಶೋಷಣೆಗೆ ಕಾರಣವಾಗಿತ್ತು. ಹಾಗಾಗಿ ಗಾಂಧಿ ಎಂದೂ ಶಾಸ್ತ್ರ–ಸ್ಮೃತಿಗಳನ್ನು ಆಧರಿಸಿ ಯಾವುದು ಧರ್ಮ ಮತ್ತು ಯಾವುದು ಅಧರ್ಮ ಎಂದು ನಿರ್ಧರಿಸುತ್ತಿರಲಿಲ್ಲ. ಅವರಿಗೆ ದಿವ್ಯವಾಣಿಗಿಂತ ಎದೆಯ ದನಿ ನಿರ್ಣಾಯಕವಾಗಿತ್ತು. ಹಾಗಾಗಿ ಅವರಿಗೆ ಈ secularismನ ಅಗತ್ಯವೂ ಕಾಣಲಿಲ್ಲ. ಅವರಿಗೆ ಧರ್ಮವೆಂದರೆ ಸೃಷ್ಟಿಯ ಅಖಂಡತೆಯ ಅನುಭವ. ಹಾಗಾಗಿಯೇ ಅವರು ತಮ್ಮ ಇಂತಹ ಅಧ್ಯಾತ್ಮಿಕ ರಾಜಕಾರಣದ ಲೌಕಿಕ ರೂಪವಾಗಿ ಸಿದ್ಧಪಡಿಸಿದ್ದ ರಚನಾತ್ಮಕ ಕಾರ್ಯಕ್ರಮದಲ್ಲಿ ಇಂತಹ ಅಖಂಡ ಅನುಭವವನ್ನು ಭಂಗಗೊಳಿಸುವ ಎಲ್ಲ ಆಚರಣೆಗಳನ್ನೂ, ಭಾವನೆಗಳನ್ನೂ ನಿರ್ಮೂಲನಗೊಳಿಸುವ ಸಂಕಲ್ಪ ತೋರಿದ್ದರು. ಸ್ವದೇಶಿಯ ಜೊತೆಗೇ, ಅಸ್ಪೃಶ್ಯತಾ ನಿವಾರಣೆ (ಹಾಗೂ ಜಾತಿ ನಿರ್ಮೂಲನೆ) ಮತ್ತು ಹಿಂದು–ಮುಸ್ಲಿಂ ಐಕ್ಯತೆಗಳು ಅದರ ಅವಿಭಾಜ್ಯ ಅಂಗಗಳಾಗಿದ್ದುದು ಈ ಕಾರಣದಿಂದಲೇ.

ಹೀಗೆ ಗಾಂಧಿ ಸನಾತನ ಧರ್ಮದಿಂದ ಸ್ಫೂರ್ತಿಗೊಂಡು ಹಿಂದೂ ಧರ್ಮವನ್ನು ಶಾಸ್ತ್ರ–ಸ್ಮೃತಿಗಳಿಂದ ಬಿಡುಗಡೆಗೊಳಿಸಿ ತಮ್ಮ ರಚನಾತ್ಮಕ ಕಾರ್ಯಕ್ರಮದ ಮೂಲಕ ಸಮಕಾಲೀನಗೊಳಿಸಿದರು. ಅವರು ತಮ್ಮನ್ನು ಹಿಂದೂ ಎಂದು ಕರೆದುಕೊಂಡದ್ದು ಈ ಅರ್ಥದಲ್ಲಿ. ಹಾಗೆ ನೋಡಿದರೆ ಗಾಂಧಿಯನ್ನು ಓರ್ವ ಬೌದ್ಧ ಎಂದೂ ಕರೆಯಬಹುದು. ಏಕೆಂದರೆ ಬುದ್ಧನಂತೆಯೇ ಅವರು ಸಮಾಜದ ತಳದಲ್ಲಿ ದುಃಖವನ್ನು ಗುರುತಿಸಿದರು. ಅದರ ನಿವಾರಣೆಯೇ ಧರ್ಮವೆಂದು ಭಾವಿಸಿದರು. ಹಾಗಾಗಿಯೇ, ತಂತ್ರಜ್ಞಾನದ ಸುಖಫಲಗಳ ಪರಿಭಾಷೆಯಲ್ಲಿ ಮಾತನಾಡುತ್ತಾ ಎಲ್ಲರನ್ನೂ ನಿರಂತರ ದಾಹಿಗಳನ್ನಾಗಿಯೂ, ಶಾಶ್ವತ ಅತೃಪ್ತರನ್ನಾಗಿಯೂ ಮಾಡತೊಡಗಿದ್ದ ಆಧುನಿಕ ನಾಗರೀಕತೆಯನ್ನು ಅವರು ತಿರಸ್ಕರಿಸಿದ್ದು, ಅಪಾಯಕಾರಿ ಎಂದು ಎಚ್ಚರಿಸಿದ್ದು. ಬುದ್ಧನಂತೆಯೇ ಅವರು ಸುಖದ ಭಾಷೆಯಲ್ಲಿ ಮಾತನಾಡಲಿಲ್ಲ. ಬುದ್ಧನ ಪ್ರಕಾರ ದುಃಖ ನಿವಾರಣೆಯೇ ಸುಖ! ಅದನ್ನು ಮಹಾಯಾನಿಗಳು 'ಮಹಾಸುಖ'ವೆಂದು ಕರೆದರು. ಗಾಂಧಿ ಇದನ್ನು ಜನಪ್ರಿಯ ಹಿಂದೂ ಪರಿಭಾಷೆಯಲ್ಲಿ ದೈವಿಕತೆಯ ಸಾಕ್ಷಾತ್ಕಾರ ಎಂದು ಕರೆದರು. ಎಲ್ಲ ಮನುಷ್ಯರ ಪರಮಗುರಿ ಇದೇ–ಅಂದರೆ, ಪ್ರತಿ ಮನುಷ್ಯನೂ ತನ್ನಲ್ಲಿನ ದೈವಿಕತೆಯನ್ನು ಕಂಡುಕೊಳ್ಳುವುದು–ಎಂದು ಅವರು ನಂಬಿದ್ದರು.

ಈ ನಂಬಿಕೆಯ ಬದುಕಿನಲ್ಲಿ ಗಾಂಧಿಯ ಅನುಭವಕ್ಕೆ ಬಂದದ್ದು, ಮನುಷ್ಯ ಹುಟ್ಟಿನಿಂದ ಸ್ವತಂತ್ರನು ಹೇಗೋ, ಅಂತರ್ಅವಲಂಬಿಯೂ ಹೌದು. He is independent but interdependent also ಎಂಬ ಸತ್ಯ. ಎರಡು ಸ್ಥಿತಿಗಳೂ ಒಂದರೊಳಗೊಂದು ಹಾಸುಹೊಕ್ಕಾಗಿರುವಂತಹದು. ಮನುಷ್ಯ ದೇಹಿಯಾಗಿ ಪ್ರತ್ಯೇಕತೆಯ ಸಾತಂತ್ರ್ಯವನ್ನು ಅನುಭವಿಸುವ ತುಡಿತ ಹೊಂದಿದ್ದಾನೆ, ನಿಜ. ಆದರೆ ಆತ ಒಂಟಿಯಾಗಿ ಹುಟ್ಟಿಲ್ಲವಾದ್ದರಿಂದ ಅವನು ನೈಸರ್ಗಿಕವಾಗಿ ಸಂಘಜೀವಿಯೂ ಆಗಿದ್ದಾನೆ. ಹಾಗಾಗಿ

ಮೊದಲು ಅವನು ತನ್ನ ಈ independenceನ್ನು ಅನುಭವಿಸಲು ಸಂಘಜೀವಿತ್ವದ ಅಂದರೆ interdependence ಒತ್ತಾಯಿಸುವ ಕರ್ತವ್ಯಗಳನ್ನು ಪಾಲಿಸಬೇಕಾಗಿದೆ. ಇದು ಮಾತ್ರ ಮತ್ತು ಇದೇ ನಮ್ಮನ್ನು ನಾವು ಆಳಿಕೊಳ್ಳುವ ನೈಸರ್ಗಿಕ ರೀತಿ ಮತು ನೀತಿ ಮತ್ತು ಬದುಕಿನ ಧರ್ಮ ಎಂದು ಗಾಂಧಿ ಭಾವಿಸಿದ್ದರು.

ಹಾಗಾಗಿ ಈ ಸ್ವಾತಂತ್ರ್ಯ ಮತ್ತು ಅಂತರ್ವಲಂಬಿತನಗಳ ಸಂಬಂಧವನ್ನು ಭಂಗಗೊಳಿಸುವ ಯಾವುದೇ ವಿದ್ಯಮಾನವನ್ನು ಅವರು ಸಹಜವಾಗಿಯೇ ಅಧರ್ಮವೆಂದು ಕರೆದರು. ಈ ಧರ್ಮಪಾಲನೆಯ ಮಾಧ್ಯಮವಾಗಿರುವ ದೇಹವನ್ನು ನಿರ್ಲಕ್ಷದಿಂದ ನೋಡುವುದನ್ನೂ ಅವರು ಅಧರ್ಮವೆಂದು ಕರೆದರು. ದೇಹ ಮತ್ತು ಅದರ ಒಡೆಯನಾದ ಆತ್ಮ ಅಥವಾ ಒಳದನಿಯನ್ನು ಸ್ವಚ್ಛ ಮತ್ತು ಸುಸ್ಥಿತಿಯಲ್ಲಿಟ್ಟುಕೊಂಡು ಪ್ರಜೆಗಳು ಸಂಪೂರ್ಣ ನೆಮ್ಮದಿಯಲ್ಲಿರುವ ರೀತಿಯಲ್ಲಿ ಕುಶಲಗೊಂಡ ರಾಷ್ಟ್ರವೇ ನಿಜವಾದ ಸ್ವರಾಜ್ಯ. ಯಂತ್ರ, ರೈಲು, ವಕೀಲಿಕೆ, ಆಸ್ಪತ್ರೆ ಇತ್ಯಾದಿ ಆಧುನಿಕ ನಾಗರೀಕತೆಯ ಫಲಗಳನ್ನು ಅವರು ವಿರೋಧಿಸಿದ್ದು ಈ ನೆಲೆಯಲ್ಲಿಯೇ. ಗಾಂಧಿಗೆ ರೈಲು ಮನುಷ್ಯನ ನೆಮ್ಮದಿಯನ್ನು ಕೆಡಿಸುವ ಅನೇಕ ಜಟಿಲತೆಗಳಿಗೆ ಕಾರಣವಾಗಬಲ್ಲ ಅನಗತ್ಯ ವೇಗಕ್ಕೆ, ವಕೀಲಿಕೆ ಮನುಷ್ಯನ ಆತ್ಮಸಾಕ್ಷಿಯ ನಾಶಕ್ಕೆ ಮತ್ತು ಆಧುನಿಕ ಆಸ್ಪತ್ರೆ ದೇಹ ಕುರಿತ ಉಡಾಫೆಗೆ ದಾರಿ ಮಾಡಿಕೊಡುವುದೆಂದು ಅವರು ಭಾವಿಸಿದ್ದರು.

ಗಾಂಧಿ, ಮನುಷ್ಯ ತನ್ನ ಹತೋಟಿಯಲ್ಲೇ ಇರುವ ತನ್ನ ಪುಟ್ಟ ಪ್ರಪಂಚದಲ್ಲೇ ತನ್ನ ಈ ಸ್ವರಾಜ್ಯ ಧರ್ಮವನ್ನು ಪಾಲಿಸಬಲ್ಲ ಎಂದು ಭಾವಿಸಿದ್ದರು. ಏಕೆಂದರೆ, ಭೌತ ಜಗತ್ತಿಗೆ ಒಂದು ಮಿತಿ ಮತ್ತು ಸಮತೋಲನವಿರುವುದರಿಂದ ಅವನ ಬದುಕು ಕೂಡಾ ಭೌತಿಕ ನೆಲೆಯಲ್ಲಿ ಒಂದು ಮಿತಿ ಮತ್ತು ಸಮತೋಲನದಲ್ಲಿ ಇರಬೇಕೆಂದು ಗಾಂಧಿ ನಂಬಿದ್ದರು. ಈ ಮಿತಿ ಮತ್ತು ಸಮತೋಲನವನ್ನು ಭಾರತ ತನ್ನ ಗ್ರಾಮ ಕಲ್ಪನೆಯಲ್ಲಿ ಕಂಡುಕೊಂಡಿತ್ತು. ಈ ಮಿತಿ ಮತ್ತು ಸಮತೋಲನವನ್ನು ಕಾಪಾಡಲೆಂದೇ ಅವರು ದೇಸಿ ಕಸಬುಗಳ ಆರ್ಥಿಕತೆಯನ್ನು ಪ್ರತಿಪಾದಿಸಿ ತಮ್ಮ ಸ್ವದೇಶಿ ಕಲ್ಪನೆಯನ್ನು ಮುಂದಿಟ್ಟರು. ಇಲ್ಲೂ ಅವರ independent but interdependent ತತ್ವವನ್ನು ಅನ್ವಯಿಸಿ, ಗ್ರಾಮಗಳು ಸ್ವತಂತ್ರವೂ, ಹಾಗೆ ಸ್ವತಂತ್ರವಾಗಿರಲು ಅಂತರ್ವಲಂಬಿಯೂ ಆಗಿದ್ದುಕೊಂಡು ರಾಷ್ಟ್ರವನ್ನು ಸ್ವರಾಜ್ಯವನ್ನಾಗಿ ರೂಪಿಸಬಹುದೆಂದು ಅವರು ಭಾವಿಸಿದ್ದರು. ಹೀಗೆ ಗಾಂಧಿಯ 'ಹಿಂದ್ ಸ್ವರಾಜ್' ಎಂದರೆ 'ಗ್ರಾಮ ಸ್ವರಾಜ್ಯ'ವೂ ಹೌದು. ನಗರವೆಂದರೆ, ಗಾಂಧೀಜಿ ಪ್ರಕಾರ ಈ ಮಿತಿ ಮತ್ತು ಸಮತೋಲನಗಳ ಉಲ್ಲಂಘನೆ. ಅವರ ಯಂತ್ರ, ರೈಲು, ವಕೀಲ, ಆಸ್ಪತ್ರೆಗಳ ವಿರೋಧವನ್ನೂ ನಾವು ಈ ನೆಲೆಯಲ್ಲೇ ಅರ್ಥ ಮಾಡಿಕೊಳ್ಳಬೇಕು. ಇವೆಲ್ಲ ಕೂಡಿಕೊಂಡ ನಗರಗಳು ಹಾವಿನ ಹುತ್ತಗಳಂತೆ ಎಂದಿದ್ದರು ಗಾಂಧಿ. ಇಂದಿನ ನಗರಗಳನ್ನು ನೋಡಿದರೆ ನಮಗಾದರೂ ಏನನ್ನಿಸುತ್ತದೆ?

ಮುಖ್ಯವಾಗಿ ಈ ನೆಲೆಯಲ್ಲಿ ನಾವು 'ಹಿಂದ್ ಸ್ವರಾಜ್' ಮತ್ತು ಇಂದಿನ ರಾಜಕಾರಣದ ನೇರ ಮುಖಾಮುಖಿಯನ್ನು ಕಾಣಬಹುದು. ಏಕೆಂದರೆ, ಇವೊತ್ತಿನ

ರಾಜಕಾರಣದ ಸಂಚಲನಾ ಶಕ್ತಿ ನಗರೀಕರಣವೇ ಆಗಿದೆ. ಹೋದ ವರ್ಷ ತಾನೇ ಜಗತ್ತಿನ ನಗರಗಳ ಜನಸಂಖ್ಯೆ ಜಗತ್ತಿನ ಜನಸಂಖ್ಯೆಯ ಅರ್ಧದಷ್ಟನ್ನು ದಾಟಿದೆ. ಭಾರತದ ಮಟ್ಟಿಗೂ ಇದನ್ನು ಆದಷ್ಟು ಬೇಗ ಸಾಧಿಸಲು ಪ್ರಯತ್ನಗಳು ನಡೆದಿವೆ. ಇದೇ ಇಂದಿನ ಅಭಿವೃದ್ಧಿಯ ಗುರಿಯೂ ಕೂಡ ಆಗಿದೆ ಮತ್ತು ಈ ಗುರಿ ಸಾಧನೆಗೇ ಪರಮಾಣು ಇಂಧನದ ತುರ್ತು ಅಗತ್ಯ ಉಂಟಾಗಿರುವುದು ಎಂದು ಹೇಳಲಾಗುತ್ತಿರುವುದು.

ನೆಹರೂ ಅವರಿಂದ ಮಿಶ್ರ ಅರ್ಥವ್ಯವಸ್ಥೆಯ ಹೆಸರಿನಲ್ಲಿ ಹಲವರ ಸಂದಿಗ್ಧತೆಗಳೊಂದಿಗೇ (ಇದರಲ್ಲಿ 'ಪೂರ್ವಕ್ಕೆ ಮುಖ ಪಶ್ಚಿಮಕ್ಕೆ ಪಯಣ'ದ ಜೆ.ಹೆಚ್. ಪಟೇಲ್ ಕಥಿತ ಸಂದಿಗ್ಧತೆಯೂ ಸೇರಿದೆ!) ಆರಂಭವಾದ ಈ ನಗರೀಕರಣ ಪ್ರಕ್ರಿಯೆ, ಇಂದು ನಮ್ಮ ಆರ್ಥಿಕ ನೀತಿಯ ಅಸಂದಿಗ್ಧ; ಹಾಗಾಗಿ ಅಂತಿಮ ಗುರಿಯೇ ಆಗಿಬಿಟ್ಟಿದೆ. ಈ ಗುರಿ ಮುಟ್ಟಲೆಂದೇ ಮನಮೋಹನ ಸಿಂಗ್ ಅವರು ಅಮೆರಿಕಾದೊಡನೆಯ ನಾಗರಿಕ ಪರಮಾಣು ಒಪ್ಪಂದಕ್ಕೆ ಸಹಿ ಹಾಕಿರುವುದು. ಈ ಒಪ್ಪಂದ ಒದಗಿಸುವ ಪರಮಾಣು ಇಂಧನವನ್ನು ಅನಿವಾರ್ಯವಾಗಿಸಿರುವ ಈ ನಗರೀಕರಣ ಕಾರ್ಯಕ್ರಮದ ಭಾಗವಾಗಿ, ೨೦೧೫ರ ವೇಳೆಗೆ ಸುಮಾರು ೪೦ ಕೋಟಿ ಭಾರತೀಯರು ಕೃಷಿ ನಿರಾಶ್ರಿತರಾಗಿ ನಗರಗಳೆಡೆಗೆ ಧಾವಿಸಲಿದ್ದಾರೆಂದು ಈ ಕಾರ್ಯಕ್ರಮದ ಕರಡನ್ನು ರೂಪಿಸಿರುವ ವಿಶ್ವಬ್ಯಾಂಕ್ ಅಂದಾಜು ಮಾಡಿದೆ. ಅಂದರೆ ಈ ಕೋಟ್ಯಾಂತರ ಕೃಷಿ ನಿರಾಶ್ರಿತರನ್ನು ನಗರಗಳಲ್ಲಿ ನೆಲೆಗೊಳಿಸಿ ಉದ್ಯೋಗ ಒದಗಿಸಲು ಈ ಪರಮಾಣು ವಿದ್ಯುತ್ ಬೇಕಾಗಿದೆ! ಈ ಒಪ್ಪಂದದ ತಾಂತ್ರಿಕ ಅಂದರೆ ಪರಮಾಣು ವಿದ್ಯುತ್ ನಿರ್ಮಾಣದ ತಾಂತ್ರಿ ಕ ಅನಾಹುತಗಳ ಬಗ್ಗೆ ಈಗಾಗಲೇ ಅನೇಕ ಪರಿಣತರು (ಕನ್ನಡ ಪತ್ರಿಕೆಗಳಲ್ಲಿ ಮುಖ್ಯವಾಗಿ ನಾಗೇಶ್ ಹೆಗಡೆಯವರು) ವ್ಯಾಪಕವಾಗಿ ಬರೆದಿದ್ದಾರೆ.

ಅದೇನೇ ಇರಲಿ, ಈ ಬೃಹತ್ ಉದ್ಯೋಗ ನಿರ್ಮಾಣ ಮತ್ತು ಪುನರ್‌ವಸತಿ ಯೋಜನೆಯೊಂದನ್ನು ವಿಶ್ವ ಬ್ಯಾಂಕ್ ಸಿದ್ಧಪಡಿಸಿದೆಯಂತೆ. ಇದರ ಅಂಗವಾಗಿಯೇ, ಅಂದರೆ ಅವರನ್ನು ನಗರ ಜೀವನಕ್ಕೆ ಮತ್ತು ನಗರ ಉದ್ಯೋಗಗಳಿಗೆ ಹೊಂದಿಸಲು ಈಗ ಎಲ್ಲರಿಗೂ–ಅದೂ ಒಂದನೇ ತರಗತಿಯಿಂದಲೇ–ಇಂಗ್ಲಿಷ್ ಕಲಿಸುವುದು ಅನಿವಾರ್ಯವಾಗಿದೆಯಂತೆ! ಬಹುಶಃ ಈಗ ರಾಷ್ಟ್ರವಿಭಜನೆಯ ಸಂದರ್ಭದಲ್ಲಿ ಕಂಡ ವಲಸೆಗಿಂತ ಅತ್ಯಂತ ಬರ್ಬರವಾದ ವಲಸೆಗೆ ನಾವು ತಯಾರಾಗಬೇಕೆಂದು ತೋರುತ್ತಿದೆ. ಅದು ಧರ್ಮಾಂಧತೆಯ ರಾಜಕಾರಣದ ಪರಿಣಾಮವಾದ ವಲಸೆಯಾಗಿದ್ದರೆ, ಇದು ಅಂಧ ಅಭಿವೃದ್ಧಿ ರಾಜಕಾರಣದ ಪರಿಣಾವಾದ ವಲಸೆಯಾಗಿದೆ. ಆ ವಲಸೆಯ ಪರಿಣಾಮಗಳು ಇಂದೂ ನಮ್ಮನ್ನು ಹಲವು ರೂಪಗಳಲ್ಲಿ ಕಾಡುತ್ತಿದೆ. ಇನ್ನು ಈ ವಲಸೆಯ ಪರಿಣಾಮಗಳು? ರೈತರ ಸರಣಿ ಆತ್ಮಹತ್ಯೆ ಈ ಪರಿಣಾಮಗಳ ಆರಂಭ ಮಾತ್ರವೆಂದು ನಾನು ಭಾವಿಸಿದ್ದೇನೆ.

ಎಲ್ಲ ವಲಸೆಗಳೂ ನಿರಾಶ್ರಿತರನ್ನು ಸೃಷ್ಟಿಸುತ್ತದೆ. ರಾಷ್ಟ್ರ ವಿಭಜನೆಯ ಸಂದರ್ಭದಲ್ಲೂ ಇದನ್ನು ಕಂಡೆವು. ನಂತರ ಮಿಶ್ರ ಅರ್ಥವ್ಯವಸ್ಥೆಯ ಅಭಿವೃದ್ಧಿ ಕಾರ್ಯಕ್ರಮಗಳ

ಅಂಗವಾಗಿ ಸೃಷ್ಟಿಯಾದ ಹಲವು ರೀತಿಯ ನಿರಾಶ್ರಿತರನ್ನೂ ನಾನು ಕಾಣುತ್ತಿದ್ದೇವೆ. ಉದಾಹರಣೆಗೆ ಅಣೆಕಟ್ಟು ನಿರಾಶ್ರಿತರು. ಕೇವಲ ಸಾವಿರಾರು ಸಂಖ್ಯೆಯಲ್ಲಿರುವ ಈ ನಿರಾಶ್ರಿತರಿಗೆ ನೀಡಿದ ಮರುವಸತಿಯ ಆಶ್ವಾಸನೆ ಎಷ್ಟರ ಮಟ್ಟಿಗೆ ಈಡೇರಿದೆ; ಈ ವಿಷಯದಲ್ಲಿ ಸರ್ಕಾರ ಎಷ್ಟು ಪ್ರಾಮಾಣಿಕವಾಗಿ ಮತ್ತು ದಕ್ಷವಾಗಿ ವರ್ತಿಸಿದೆ, ಯಾವ ತರಹದ ಸುಳ್ಳು, ಮೋಸ, ತಟವಟಗಳನ್ನು ಎಗ್ಗಿಲ್ಲದೆ ಪ್ರದರ್ಶಿಸುತ್ತಿದೆ ಎಂಬುದನ್ನು ನಾವೀಗಾಗಲೇ ನೋಡಿದ್ದೇವೆ. ಮೇಧಾ ಪಾಟ್ಕರರ 'ನರ್ಮದಾ ಬಚಾವೋ' ಆಂದೋಲನಕ್ಕೆ ಕೊನೆಯೇ ಇಲ್ಲದೆ, ಅದು ಹಲವು ನೆಲೆಗಳಿಗೆ ವಿಸ್ತರಿಸುತ್ತಲೇ ಇರುವಂತಾಗಿದೆ. ಪರಿಸ್ಥಿತಿ ಹೀಗಿರುವಾಗ ಕೋಟ್ಯಾಂತರ ಜನ ನಿರಾಶ್ರಿತರ ಪುರ್ನವಸತಿ ಇನ್ನು ಹೇಗೆ ನಡೆಯಬಹುದೆಂದು ನೀವೇ ಯೋಚಿಸಿ. ಇವರಿಗೆಲ್ಲ ನೀರು, ನೆಲೆ, ವಿದ್ಯುತ್, ವಿದ್ಯೆ, ಉದ್ಯೋಗ, ರಸ್ತೆ ಇತ್ಯಾದಿಗಳನ್ನು ನಮ್ಮ ನಗರಗಳಲ್ಲಿ ಅಥವಾ ಅವುಗಳಿಗೆ ಹೊಂದಿಕೊಂಡಂತೆ ನಿರ್ಮಿಸಲು ಸಾಧ್ಯವೇ? ಇದು ಹೇಗೋ, ಎಂದೋ ಒಂದು ದಿನ ಸಾಧ್ಯ ಎಂದೇ ಇಟ್ಟುಕೊಂಡರೂ, ಆ ಪ್ರಕ್ರಿಯೆಯಲ್ಲಿ ಮತ್ತು ಆ ಹೊತ್ತಿಗೆ ಆಗಿರುವ ವಿವಿಧ ರೂಪದ ಮಾನವೀಯ ದುರಂತಗಳ ಕಲ್ಪನೆಯಾದರೂ ಇವರಿಗಿದೆಯೇ? ಅಭಿವೃದ್ಧಿಯ ಅಂಧತೆ ಎಂದೆನಲ್ಲ, ಅದು ಇದೇ. ಎಂದೋ ಒಂದು ಅನಿರ್ದಿಷ್ಟ ದಿನದಂದು ಯಾರಿಗಾಗಿಯೋ ಸೃಷ್ಟಿಯಾಗಲಿರುವ ಸ್ವರ್ಗಕ್ಕಾಗಿ ಇಂದು ಇನ್ನಾರ ಪಾಲಿಗೋ ನರಕಗಳನ್ನು ಸೃಷ್ಟಿಸುತ್ತಾ ಹೋಗುವುದು! ಇದು ಆಧುನಿಕ ನಾಗರೀಕತೆಯಯಲ್ಲಿ ಅಂತರ್ಗತವಾಗಿರುವ ಹಿಂಸೆ. ಇದು ನಮ್ಮ ಅನುಭವಕ್ಕೇಕೆ ತೀವ್ರವಾಗಿ ಬರುತ್ತಿಲ್ಲವೆಂದರೆ ನಾವು ಈ ಆಧುನಿಕ ನಾಗರೀಕತೆಯ ತತ್ಕಾಲೀನ ಫಲಾನುಭವಿಗಳು. ನಾವು ಇನ್ನೊಂದು ದಡದಲ್ಲಿ ನಿಂತಷ್ಟೇ ಆ ನರಕಗಳನ್ನು ನೋಡುತ್ತಿದ್ದೇವೆ. ಹೆಚ್ಚೆಂದರೆ ನಮ್ಮ ಪಾಲಿಗೆ ಅದು ಮಾನಸಿಕ ಹಿಂಸೆಯಷ್ಟೆ! ಆಧುನಿಕ ನಾಗರೀಕತೆ, ಜನತೆಯನ್ನು ಹೀಗೆ ಭಾವನಾತ್ಮಕವಾಗಿ ಒಡೆದಿಟ್ಟೇ ತನ್ನ ರಾಜಕಾರಣವನ್ನು ಮುಂದುವರೆಸಿಕೊಂಡು ಹೋಗುವುದು.

ಇದನ್ನು trickle down ಸಿದ್ಧಾಂತದ ಮೇಲೆ ಸಮರ್ಥಿಸಿಕೊಳ್ಳಲಾಗುತ್ತಿದೆ. ಅಂದರೆ, ಶ್ರೀಮಂತರ ಭೋಗದ ಮೇಲೆ ಖರ್ಚು ಮಾಡುವ ಹಣ ಒಂದಲ್ಲ ಒಂದು ದಿನ ಹನಿ ಹನಿಯಾಗಿ ಕೆಳಕ್ಕೆ ಇಳಿಯುತ್ತಾ ಬಡವರ ಯೋಗಕ್ಕೆ ಕಾರಣವಾಗುವುದಂತೆ! ಇದು ಈ ಅಭಿವೃದ್ಧಿ ಮಾದರಿಯ ಅತ್ಯುತ್ತಮ ಉದಾಹರಣೆಯೆಂದು ಹೇಳಲಾಗುತ್ತಿದ್ದ ಅಮೆರಿಕಾದಲ್ಲೇ ಅಂತಿಮವಾಗಿ ವಿಫಲವಾಗಿದೆ ಎಂಬುದನ್ನು ಅಲ್ಲಿನ ಆರ್ಥಿಕ ತಜ್ಞರೇ ಈಗ ಹೇಳತೊಡಗಿದ್ದಾರೆ. ಇದು ಗೊತ್ತಿದ್ದರೂ ಇದನ್ನು ಒಂದು ಮೋಸ, ಆರ್ಥಿಕ ಅಶ್ಲೀಲತೆ ಎಂದು ಕರೆಯುವ ದೃಷ್ಟಿ ಸ್ಪಷ್ಟತೆ ಮತ್ತು ನೈತಿಕ ಧೈರ್ಯವನ್ನೇ ನಾವು ಕಳೆದು ಕೊಂಡಿದ್ದೇವೆ. ಇದನ್ನೇ ಗಾಂಧಿ ರೋಗ ಎಂದು ಕರೆದದ್ದು. ಗುರಿ ಮತ್ತು ಮಾರ್ಗಗಳನ್ನು ಒಡೆದು ದೃಷ್ಟಿ ದೋಷಕ್ಕೆ ಕಾರಣವಾಗುವ ಆಧುನಿಕ ನಾಗರೀಕತೆಯ ರೋಗವಿದು.

ಈ ರೋಗವನ್ನು ನೆಹರೂ ಕಾಲದಿಂದಲೇ ಗುರುತಿಸಿ, ಅದನ್ನು ನಿವಾರಿಸುವ

ರಾಜಕಾರಣಕ್ಕೆ ಬದ್ಧವಾದ ಗುಂಪೊಂದು ಗಾಂಧಿ ಸನಿಹದಲ್ಲೇ ಬೆಳೆದಿತ್ತು. ಅದು ಭಾರತೀಯ ಸಮಾಜವಾದಿ ಚಳುವಳಿ. ನಿರ್ದಿಷ್ಟವಾಗಿ ಲೋಹಿಯಾ ಪ್ರಣೀತ ಸಮಾಜವಾದಿ ಚಳುವಳಿ. ಗಾಂಧಿ ಹೇಗೂ ತಮ್ಮ ರಾಜಕೀಯ ದರ್ಶನವನ್ನು ಅಹಿಂಸಾತ್ಮಕ ಸಮಾಜವಾದವೆಂದು ಕರೆದುಕೊಂಡಿದ್ದರಲ್ಲ? ಹಾಗಾಗಿ ನೆಹರೂ ದಾರಿ ತಪ್ಪುತ್ತಿದ್ದಾರೆ ಎಂದು ಗಾಂಧಿಗೆ ಅನಿಸತೊಡಗಿದೆ ಎಂದು ಸಮಾಜವಾದಿಗಳಿಗೆ ಗೊತ್ತಾದೊಡನೆ, ಅವರು ತಮ್ಮ ನೇತೃತ್ವವನ್ನು ಗಾಂಧಿ ವಹಿಸಿಕೊಳ್ಳುವಂತೆ ಕೋರಿದ್ದೂ ಉಂಟು. ಆಗ ಗಾಂಧಿ ಹೇಳಿದ್ದು:'ನಾನು ಹುಟ್ಟಾ ಸಮಾಜವಾದಿ. ನೀವು ದೇವರು, ಧರ್ಮವನ್ನು ನಂಬಿ ಗ್ರಾಮಗಳಿಗೆ ಬಂದು ದಲಿತರ ಮತ್ತು ಮಹಿಳೆಯರ ನಡುವೆ ಕೆಲಸ ಮಾಡುವುದಾದರೆ, ನಾನು ನಿಮ್ಮ ಪಕ್ಷದ ಅಧ್ಯಕ್ಷನಾಗಲೂ ಸಿದ್ಧ!'

ಆದರೆ ಈ ಸಂದರ್ಭದಲ್ಲಿ ಸಮಾಜವಾದಿ ಪಕ್ಷ, ಗಾಂಧಿ ಕುರಿತು ಅಪಾರ ವೈಯುಕ್ತಿಕ ಗೌರವವಿದ್ದರೂ ತಾತ್ವಿಕವಾಗಿ ಇನ್ನೂ ಮಾರ್ಕ್ಸ್‌ವಾದಿಯಾಗಿದ್ದ ಜಯಪ್ರಕಾಶ್ ನಾರಾಯಣ್ ಮತ್ತು ಅವರಂತೆಯೇ ಚಿಂತಿಸುವ ಭೌತವಾದಿಗಳ ಪ್ರಭಾವದಲ್ಲಿದ್ದ ಕಾರಣದಿಂದಾಗಿ, ಅದು ಗಾಂಧಿಯವರ ದೇವರು ಮತ್ತು ಧರ್ಮಗಳ ನಂಬಿಕೆಗಳನ್ನು ಸಹಾನುಭೂತಿಯಿಂದ ಅರ್ಥಮಾಡಿಕೊಳ್ಳುವಲ್ಲಿ ವಿಫಲವಾಯಿತು. ಹೀಗಾಗಿ ಮುಂದೆ ಗಾಂಧಿ ನಂತರವೂ ಸಮಾಜವಾದಿ ಚಳುವಳಿಯು ವೈಚಾರಿಕವಾಗಿ ಗಾಂಧಿ ಭಾವನೆಗೇ ಬದ್ಧವಾಗಿದ್ದರೂ, ತನ್ನ ರಾಜಕೀಯ ಕಾರ್ಯಶೀಲತೆಯಲ್ಲಿ ಒಂದು ನೆಲೆಯ ವೈರ ಮತ್ತು ಕ್ರೋಧಗಳನ್ನು ಅಳವಡಿಸಿಕೊಂಡಿದ್ದರಿಂದ ಹತಾಶೆಗೆ ಸಿಕ್ಕಿ ಚಿಂದಿ ಚಿಂದಿಯಾಯಿತು. ಆದರೆ ಸಮಾಜವಾದಿ ಚಳುವಳಿಯ ತಾತ್ವಿಕತೆ, ಹುರುಪು ಮತ್ತು ಬದ್ಧತೆಗಳು ಈಗಲೂ ರಾಷ್ಟ್ರಾದ್ಯಂತ ಹಲವು ಗುಂಪುಗಳ ಹಲವು ರೀತಿಯ ಚಟುವಟಿಕೆಗಳಲ್ಲಿ ವ್ಯಕ್ತವಾಗುತ್ತಲೇ ಇದೆ. ಹೆಗ್ಗೋಡಿನಲ್ಲಿಯೇ ಅಂತಹ ಚಟುವಟಿಕೆಗಳ ಎರಡು ಕೇಂದ್ರಗಳಿವೆ. ಒಂದು ನೀನಾಸಂ. ಇನ್ನೊಂದು ಚರಕ. ಹೀಗಾಗಿ, ನಮ್ಮ ಜನರಲ್ಲಿ 'ಹಿಂದ್ ಸ್ವರಾಜ್'ನ ಭಾವನೆ ಬೀಜ ರೂಪದಲ್ಲಿ ಇನ್ನೂ ಸಂರಕ್ಷಿತವಾಗಿದೆ ಎಂಬ ಬಗ್ಗೆ ಯಾರಿಗೂ ಅನುಮಾನ ಬೇಡ. ಮೊನ್ನೆ ಮಹಾರಾಷ್ಟ್ರದ ರಾಯ್‌ಗಡದ ರೈತರು. ಅಲ್ಲಿ ಇಂದಿನ ರಾಜಕಾರಣದ ಹೆಗ್ಗುರುತೆನಿಸಿರುವ ವಿಶೇಷ ಆರ್ಥಿಕ ವಲಯ ಯೋಜನೆಯ ಬಗ್ಗೆ ಜನಮತ ಗಣನೆಯಲ್ಲಿ ಅದನ್ನು ಶೇಕಡಾ ೯೧ರ ಮತದೊಂದಿಗೆ ತಿರಸ್ಕರಿಸಿರುವುದೇ ಇದಕ್ಕೆ ದೊಡ್ಡ ಸಾಕ್ಷಿಯಾಗಿದೆ. ಹಾಗಾಗಿ ಇದು ನಮ್ಮ ಇಂದಿನ ರಾಜಕಾರಣ ಎಷ್ಟು ಜನದೂರವಾಗಿ ಜನವಿರೋಧಿಯಾಗಿದೆ ಎಂಬುದನ್ನು ಸೂಚಿಸುತ್ತದೆ. ಅಲ್ಲದೆ, ಸಮಾಜವಾದಿ ಚಳುವಳಿಯ ವೈಫಲ್ಯದ ಕಾರಣಗಳ ಹಿನ್ನೆಲೆಯಲ್ಲಿ ಮುಂದಿನ ರಾಜಕಾರಣ ಹೇಗಿರಬೇಕೆಂಬುದನ್ನೂ ಬೊಟ್ಟುಮಾಡುತ್ತದೆ ಎಂದು ನಾನು ಭಾವಿಸಿದ್ದೇನೆ.

(ಹೆಗ್ಗೋಡಿನಲ್ಲಿ ಇದೇ ಅಕ್ಟೋಬರ್ ೫ರಿಂದ ೧೧ರವರೆಗೆ ನಡೆದ 'ಮನೋಭೂಮಿಕೆಯಲ್ಲಿ ಸ್ವರಾಜ್ಯ' ವಿಷಯವಾಗಿ ನಡೆದ ಸಂಸ್ಕೃತಿ ಶಿಬಿರದಲ್ಲಿ ಮಂಡಿಸಿದ ವಿಚಾರಗಳ ವಿಸ್ತೃತ ರೂಪ.)

■

ಜಾನಪದ ಮತ್ತು ಆಧುನಿಕ ಶಿಕ್ಷಣ

ಇವೊತ್ತು ನಾವು ಜಾನಪದಕ್ಕೆ ವಾಪಸ್ ಹೋಗಬೇಕೂಂದ್ರೆ ಗ್ರಾಮ ಸ್ವರಾಜ್ಯ ಕಲ್ಪನೆಗೆ ಹೊಸ ಜೀವ ನೀಡಬೇಕಾಗುತ್ತೆ. ಅಂದರೆ ಗ್ರಾಮಕ್ಕೇ ವಾಪಸ್ ಹೋಗಬೇಕೂಂತಲ್ಲ. ಅದು ಅಸಾಧ್ಯ ಕೂಡ. ಬದಲಿಗೆ, ಗ್ರಾಮ ಬದುಕಿನ ಆಶಯಗಳನ್ನು ನಮ್ಮ ಬದುಕಿನಲ್ಲಿ ಪುನರ್‍ರೂಪಿಸಕೊಳ್ಳಬೇಕಿದೆ. ಹೆಚ್ಚು ಹೆಚ್ಚು ಮನುಷ್ಯ ಪ್ರೀತಿಯನ್ನ, ಸಾಮೂಹಿಕತೆಯನ್ನ ನಾವು ರೂಢಿಸಿಕೊಳ್ಳಬೇಕಿದೆ. ಜಾನಪದಕ್ಕೆ ವಾಪಸ್ ಹೋಗುವ ಮಾರ್ಗ ಇದೇ ಹೊರತು, ಮತ್ತೆ ಡೊಳ್ಳಿನ ಪದಗಳಿಗೆ, ಹಂತಿ ಪದಗಳಿಗೆ, ಬೀಸೋ ಕಲ್ಲಿಗೆ ಅಥವಾ ಅವನ್ನು ಪುನರುಜ್ಜಿವನಗೊಳಿಸೋದಕ್ಕೆ ಹೋಗೋದಲ್ಲ ... ನಾವು ಜಾನಪದದಿಂದ ತೆಗೆದುಕೊಳ್ಳಬೇಕಾದದ್ದು ಅಂದ್ರೆ ಅದರ ಆಶಯಗಳನ್ನು ಮಾತ್ರ . ಸಾಮೂಹಿಕತೆ, ಹಂಚಿಕೊಂಡು ತಿನ್ನೋದು, ಕೂಡಿ ಬಾಳೋದು ಮತ್ತು ಸ್ವಲ್ಪ ವಿರಾಮ. ಎಲ್ಲಕ್ಕಿಂತ ಮುಖ್ಯವಾಗಿ, ಆಧುನಿಕ ಶಿಕ್ಷಣ ನಮ್ಮಿಂದ ಕಸಿದುಕೊಂಡಿರುವ ಆಧ್ಯಾತ್ಮಿಕ ಪ್ರಶ್ನೆಗಳಿಗೆ ವಾಪಸ್ ಹೋಗೋದು: ನಾನು ಯಾರು, ಎಲ್ಲಿಂದ ಬಂದೆ, ಯಾಕೆ ಬಂದೆ, ಎಲ್ಲಿಗೆ ಹೋಗ್ತೀನಿ ಇತ್ಯಾದಿ ಪ್ರಶ್ನೆಗಳಿಗೆ.

ಈ ಗೋಷ್ಠಿಯ ಶೀರ್ಷಿಕೆ ನೋಡಿ, ಜಾನಪದವನ್ನು ಶಿಕ್ಷಣ ಕ್ಷೇತ್ರದಲ್ಲಿ ಹೇಗೆ ಬಳಸಿಕೊಳ್ಳಬಹುದು ಎಂಬ ಬಗ್ಗೆ ಇಲ್ಲಿ ಚರ್ಚೆಯಾಗಬಹುದೆಂದು ಭಾವಿಸಿದ್ದೆ. ಆದರೆ ಇಲ್ಲಿ ಮಾತನಾಡಿದವರೆಲ್ಲರೂ, ಜಾನಪದವನ್ನು ಒಂದು ಶಾಸ್ತ್ರವಾಗಿ ತರಗತಿಗಳಲ್ಲಿ ಹೇಗೆ ಬೋಧಿಸಬಹುದು, ಅದನ್ನು ಹೇಗೆ ಶಿಕ್ಷಣದ ಶಿಸ್ತಿಗೆ ಅಳವಡಿಸಬಹುದು, ಆಕರ್ಷಕ ಮಾಡಬಹುದು ಎಂಬುದರ ಬಗ್ಗೆ ಮಾತನಾಡಿದರು. ಆದರೆ ಈ ವಿಷಯದಲ್ಲಿ ಪರಿಣಿತಿಯಿಂದ ಮಾತನಾಡುವ ಅರ್ಹತೆ ನನಗಿಲ್ಲ. ಅದಕ್ಕಾಗಿ ಕ್ಷಮೆ ಇರಲಿ. ಮೊದಲಾಗಿ ನನ್ನನ್ನು ಈ ಗೋಷ್ಠಿಯ ಅಧ್ಯಕ್ಷತೆಗೆ ಏಕೆ ಆಯ್ಕೆ ಮಾಡಿದರೋ ತಿಳಿಯದು. ನಾನು ಮೂಲತಃ ವಿಜ್ಞಾನದ ವಿದ್ಯಾರ್ಥಿ. ಕೆಲಸ ಮಾಡಿದ್ದು, ಸಮೂಹ ಮಾಧ್ಯಮ ಕ್ಷೇತ್ರದಲ್ಲಿ, ಆಕಾಶವಾಣಿಯಲ್ಲಿ. ಆದರೆ ಈ ಗೋಷ್ಠಿಯಲ್ಲಿ ಭಾಗವಹಿಸಲು ನನಗೆ ಎರಡು ಮೂಲ ಅರ್ಹತೆಗಳಿವೆಯೆಂದು ಭಾವಿಸಿ ನಾನು ಸಂಘಟಕರ ಆಹ್ವಾನವನ್ನು ಒಪ್ಪಿ ಇಲ್ಲಿ

ಮಾತನಾಡುತ್ತಿದ್ದೇನೆ ಎಂಬುದನ್ನೂ ಇಲ್ಲಿ ಹೇಳಿಬಿಡಬೇಕು.

ಒಂದು ಅರ್ಹತೆ, ನಾನು ಒಂದು ಸಣ್ಣ ಹಳ್ಳಿಯಲ್ಲಿ ಹುಟ್ಟಿದವನು, ಸಣ್ಣ ಊರಿನಲ್ಲಿ ಬೆಳೆದವನು ಮತ್ತು ಜನಪದರ ಮಧ್ಯೆ ಬಾಲ್ಯವನ್ನು ಕಳೆದವನು. ಇನ್ನೊಂದು ಕಾರಣ, ಜನಪದ ಕಸುಬಿನ ಕೌಟುಂಬಿಕ ಹಿನ್ನೆಲೆಯಿಂದ ಬಂದವನು. ಹಾಗಾಗಿ ಜನಪದ ಮಾತೃಕೋಶ ಅಂತ ಯಾವುದನ್ನು ನಾವು ಕರೀತೇವೆ ಅದು ನನ್ನಲ್ಲಿ ಜೀವಂತವಾಗಿದೆ. ಆದ್ದರಿಂದಲೇ ನಾನು ಈ ಜನಪದ ಬದುಕನ್ನು, ಜನಪದ ಸಂಸ್ಕೃತಿಯನ್ನು ಬಿಟ್ಟು ಮುವ್ವತ್ತು ನಲವತ್ತು ವರ್ಷಗಳ ಕಾಲ ಹೊರಕ್ಕೆ ಹೋದರೂ, ಜನಪದ ಸಂಸ್ಕೃತಿಗೆ ತದ್ವಿರುದ್ಧವಾದ ನಗರ ಸಂಸ್ಕೃತಿಗೆ ನಾನು ಹೋದೆ. ಅದೂ, ರಾಜ್ಯದ ರಾಜಧಾನಿ ಬೆಂಗಳೂರಿಗೆ ಹೋದೆ; ನಂತರ ರಾಷ್ಟ್ರದ ರಾಜಧಾನಿ ದೆಹಲಿಗೆ ಹೋದೆ;ಆದರೂ ಕೂಡಾ ಮತ್ತೆ ಮತ್ತೆ ಏಕೆ ಹಳ್ಳಿ ನನ್ನನ್ನು ಸೆಳೆಯುತ್ತೆ, ಮತ್ತೆ ಮತ್ತೆ ನಾನು ಬರೆಯುವುದಾದರೂ ಕೂಡ ಏಕೆ ಹಳ್ಳಿಯ ಸಮಸ್ಯೆಗಳ ಬಗ್ಗೆನೇ ಬರೀತೀನಿ, ಜಾಗತೀಕರಣದ ಬಗ್ಗೆ ಬರೆಯುವಾಗ ನಗರೀಕರಣದ ಸಮಸ್ಯೆಗಳನ್ನು ಎತ್ತಿಕೊಂಡು ಬರೀತೀನಿ ಅಂದರೆ ಇದೇ, ನನ್ನಲ್ಲಿ ಇನ್ನೂ ಜೀವಂತವಿರೋ ಈ ಜಾನಪದ ಮಾತೃಕೋಶವೇ ಕಾರಣ.

ನಾನು ಹಳ್ಳಿಯನ್ನು ಬಿಟ್ಟಾಗ ನಮ್ಮ ತಂದೆ ಹೇಳ್ತಿದ್ದಂತೆ ಈ ಹಳ್ಳಿಯ ಸಹವಾಸ ಬೇಡ, ಹಳ್ಳಿಯಲ್ಲೇ ಇದ್ದರೆ ಹಿಂದುಳಿದು ಹೋಗ್ತೀವಿ, ಬಡತನದ ಬೇಗೆಯಿಂದ ನಮಗೆ ಮುಕ್ತಿ ಸಿಗೋದಿಲ್ಲ ಅಂತ ಒಂದು ಬಿಡುಗಡೆಯ ಮಾರ್ಗವಾಗಿ ನಾವು ನಗರಕ್ಕೆ ವಲಸೆ ಬಂದವರು. ಆ ಬಿಡುಗಡೆಯ ಮಾರ್ಗದಲ್ಲಿ ನಾವು ನಗರೀಕರಣಕ್ಕೆ ಒಳಪಟ್ಟು, ಆಧುನಿಕ ಶಿಕ್ಷಣಕ್ಕೆ ಒಳಪಟ್ಟು, ಆಧುನಿಕ ಶಿಕ್ಷಣ ಏನು ಕೊಟ್ಟಿದೆ, ಅದನ್ನೆಲ್ಲ ಪಡಕೊಂಡೆವು. ಎಲ್ಲವನ್ನೂ ಅಲ್ಲದಿದ್ದರೂ ಸಾಕಷ್ಟು ಪಡಕೊಂಡು, ಅದರಿಂದ ಸಿಗುವ ಸುಖ ಸವಲತ್ತುಗಳನ್ನ, ಸ್ವಾತಂತ್ರ್ಯವನ್ನು ಪಡಕೊಂಡೆವು. ಇಷ್ಟೆಲ್ಲ ಪಡಕೊಂಡೂ, ನಲವತ್ತು ವರ್ಷಗಳ ನಂತರ ಹಿಂತಿರುಗಿ ನೋಡಿದಾಗ, ಒಂದು ಕ್ಷಣ ಗಾಬರಿಯಾಗುತ್ತೆ. ನಾನು ಪಡಕೊಂಡದ್ದಕ್ಕಿಂತ ಕಳೆದುಕೊಂಡದ್ದೇ ಹೆಚ್ಚೇನೋ ಅನಿಸುತ್ತೆ ನನಗೆ. ಏಕೇಂದ್ರೆ, ಬದುಕಿನ ಅನೇಕ ಸಂಕಟಗಳಿಗೆ ಉತ್ತರಗಳು ಕಾಣ್ತಾ ಇಲ್ಲ. ಅನೇಕ ಸಮಸ್ಯೆಗಳಿಗೆ ಉತ್ತರವಿಲ್ಲ. ಒಟ್ಟಿನಲ್ಲಿ ನೆಮ್ಮದಿ ಇಲ್ಲ. ಇಂದಿನ ಜಾಗತೀಕರಣದ ಬದುಕಿನ ಮುಖ್ಯ ದೌರ್ಬಲ್ಯ ಇದು. ಯಾವುದರ ಹಿಂದೆ ಬಿದ್ದರೂ ನೆಮ್ಮದಿ ಇಲ್ಲ. ಶಾಂತಿ ಇಲ್ಲ. ಹಾಗಾಗೇ ಇವೊತ್ತು ಆಸ್ಪತ್ರೆಗಳ, ಗುರುಗಳ, ಬಾಬಾಗಳ, ದೇವಸ್ಥಾನಗಳ ಸಂಖ್ಯೆ ವಿಪರೀತ ಹೆಚ್ತಾ ಹೋಗ್ತಿದೆ.

ಈ ಹಿನ್ನೆಲೆಯಲ್ಲಿ ಇವೊತ್ತಿನ ಗೋಷ್ಠಿಯಲ್ಲಿ ಮಾತನಾಡಿದ ಬಹಳ ಜನ ಹೇಳಿದಂತೆ ಜಾನಪದ ಈಗ ನಮಗೆ ಯಾಕೆ ಬೇಕು, ಅದರ ಕಡೆಗೆ ತುಡಿತ ನಮ್ಮಂತವರಲ್ಲಿ ಯಾಕೆ ಹೆಚ್ತಾ ಇದೆ ಅಂತ ಯೋಚನೆ ಮಾಡಿದ್ರೆ, ಜನಪದ ಬದುಕಿನಲ್ಲಿ ವಿರಾಮ, ವ್ಯವಧಾನ, ನೆಮ್ಮದಿ ಮತ್ತು ಸಾಮೂಹಿಕತೆ ಇತ್ತು ಅನ್ನೋದು ಎದ್ದು ಕಾಣುತ್ತೆ.

ಇವೊತ್ತಿನ ಬದುಕಿನಲ್ಲಿ ಅವೆಲ್ಲಾ ಕಾಣೆಯಾಗಿವೆ. ಇದರಿಂದ ಅನೇಕ ಸಮಸ್ಯೆಗಳು ಶುರುವಾಗಿ ನಾವು ಹೆಚ್ಚೆಚ್ಚು ಅಶಾಂತರಾಗಿ ಸಮಾಜ ಹೆಚ್ಚೆಚ್ಚು ಹಿಂಸಾತ್ಮಕವಾಗ್ತಾ, ಹೆಚ್ಚೆಚ್ಚು ಆತ್ಮಹತ್ಯೆ ಕಡೆ ತುಡೀತಾ ಇದೆ. ಏಕೇಂದ್ರೆ, ಇವೊತ್ತಿನ ಸ್ಪರ್ಧಾತ್ಮಕ ಬದುಕಿನಲ್ಲಿ ವಿರಾಮ, ವ್ಯವಧಾನ ಅನ್ನೋದು ನಿಷೇಧ ಪದಗಳಾಗಿಬಿಟ್ಟಿವೆ. ಹಾಗಾಗಿ ಶಾಂತಿ ಇಲ್ಲದಾಗಿದೆ. ಇದರಿಂದಾಗಿ, ಬದುಕಿನಲ್ಲಿ ಎದುರಾಗುವಂತಹ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ಆತ್ಮವಿಶ್ವಾಸವನ್ನು ಮನುಷ್ಯ ಕಳೆದುಕೊಂಡಿದ್ದಾನೆ. ಇದು ನಮ್ಮೆಲ್ಲ ಸಮಸ್ಯೆಗಳ ಪರಿಹಾರ ಮಾರ್ಗ ಅಂತ ಯಾವುದರ ಬೆನ್ನು ಬಿದ್ದಿದ್ದೆವೋ ಆ ಆಧುನಿಕ ಶಿಕ್ಷಣದ ಪರಿಣಾಮ ಅಂತ ಈಗ ಗೊತ್ತಾಗ್ತಾ ಇದೆ. ಹಾಗಾದರೆ ನಾವು ಮತ್ತೆ ಜನಪದ ಬದುಕಿಗೆ, ಜಾನಪದ ಸಂಸ್ಕತಿಗೆ ವಾಪಸ್ ಹೋದರೆ ಈ ಎಲ್ಲ ಸಮಸ್ಯೆಗಳೂ ಪರಿಹಾರವಾಗ್ತಾವೆಯೇ? ಆದರೆ, ನಮಗೆ ಗೊತ್ತಿರಬೇಕು, ಜಾನಪದ ಅಂದ್ರೆ ಬರೀ ಹಾಡು-ಹಸೆ, ಕಲೆ, ಪ್ರದರ್ಶನ, ವೃತ್ತಿ ಅಲ್ಲ. ಅದೊಂದು ಅವಿಭಾಜ್ಯ ಜಗತ್ತು. ಹಾಗಾಗಿ ಅದೇ ಜಾನಪದ ಆಚರಣೆಗಳಿಗೆ, ನಂಬಿಕೆಗಳಿಗೆ, ಜಾತಿಪದ್ಧತಿಗೆ, ಶೋಷಣೆಗೆ ಹೋಗಬೇಕಾಗುತ್ತಾ ಅನ್ನೋ ಪ್ರಶ್ನೆ ಉದ್ಭವಿಸುತ್ತೆ.

ಆದರೆ ಈ ಎಲ್ಲ ಗೊಂದಲ, ಪ್ರಶ್ನೆಗಳಿಗೆ ಕಾರಣ, ಜಾನಪದ ಅಂದರೆ ಅದೊಂದು ಭೂತ ಕಾಲದ ಜಗತ್ತು, ಪರಂಪರೆ ಮಾತ್ರವಾಗಿಬಿಟ್ಟಿರುವ ಸ್ಮೃತಿ ಕೇಂದ್ರ ಎಂಬ ತಪ್ಪು ತಿಳುವಳಿಕೆ. ವಾಸ್ತವ ಅಂದ್ರೆ, ಇವೊತ್ತು ಜಾನಪದ ಅನ್ನೋದು ಬರೀ ಆ ಜಾನಪದವಾಗಿ ಉಳಿದಿಲ್ಲ. ಬೇರೇನೆ ಆಗಿಬಿಟ್ಟಿದೆ. ಜಾನಪದ ನಮ್ಮ ಕಲ್ಪನೆಯನ್ನು ಮೀರಿ ಬೆಳೆದಿದೆ. ಬಹುಶಃ ನಿಮಗೆಲ್ಲ ತಿಳಿದ ಹಾಗೆ, ಜಾನಪದ ಅನ್ನೋದು ಸಂಗ್ರಹ ಶಿಸ್ತಾಗಿ ಉಳಿದಿಲ್ಲ. ಅದು ಬಹು ಹಿಂದೆಯೇ, ವ್ಯಾಖ್ಯಾನ-ವಿಶ್ಲೇಷಣೆಗಳ ರೂಪ ತಾಳಿ, ನಂತರ ವಿಸ್ತರಣೆ ಹೊಂದಿ ಈಗ ವಿಲೀನದ ಹಂತಕ್ಕೆ ಬಂದಿದೆ. ವಿಲೀನ ಅಂದ್ರೆ ಜನಪದ ಕಳೆದ ೫೦ ವರ್ಷಗಳಲ್ಲಿ ಕೇವಲ ಸಂಗ್ರಹ ಕಾರ್ಯದ ರೂಪದಲ್ಲಿದ್ದದ್ದು-ಗೊರೂರು ರಾಮಸ್ವಾಮಿ ಅಯ್ಯಂಗಾರ್ ಮಾಡಿದ್ದು, ನಾಗೇಗೌಡರು ಮಾಡಿದ್ದು, ಆರ್.ಸಿ.ಹಿರೇಮಠರು, ಗದ್ದಿಗೆಮಠ ಅವರು ಮಾಡಿದ್ದು, ಹಲಸಂಗಿ ಗೆಳೆಯರು ಮಾಡಿದ್ದು, ಆನಂದಕಂದರು ಮಾಡಿದ್ದು, ಇವರೆಲ್ಲ ನಾವು ಏನೆಲ್ಲ ಕಳಕೊಳ್ತಿದ್ದೀವಿ ಅನ್ನೊ ಹಳಹಳಿಕೆಯಲ್ಲಿ ಸಂಗ್ರಹವನ್ನು ಮಾಡಿದರು-ಅದನ್ನು ಮೀರಿ ವ್ಯಾಖ್ಯಾನಕ್ಕೆ ಸಿಕ್ಕಿದೆ, ವಿಶ್ಲೇಷಣೆಗೆ ಸಿಕ್ಕಿದೆ, ವಿಸ್ತರಣೆ ಹೊಂದಿದೆ. ಆ ಮೂಲಕ ಬೇರೆ ಬೇರೆ ಜ್ಞಾನ ಶಾಖೆಗಳ ಜೊತೆ ಕೂಡಿಕೊಂಡು ಅದು ಇತಿಹಾಸ ಶಾಸ್ತ್ರ ಇರಬಹುದು, ಸಾಹಿತ್ಯ ಶಾಸ್ತ್ರ ಇರಬಹುದು, ಮನಃಶಾಸ್ತ್ರ ಇರಬಹುದು, ಸಮಾಜಶಾಸ್ತ್ರ ಇರಬಹುದು-ನಾನೆಲ್ಲೋ ಓದಿದ್ದೆ, ಅರ್ಥಶಾಸ್ತ್ರವೂ ಅದರೊಂದಿಗೆ ಈಗ ಸಂಬಂಧ ಹೊಂದಿದೆ ಅಂತ-ಇವೆಲ್ಲ ಒಟ್ಟಾಗಿ ಅದು ಮಾನವಶಾಸ್ತ್ರದಲ್ಲಿ, anthropologyಯಲ್ಲಿ ಲೀನವಾಗ್ತಿದೆ. ಅಷ್ಟೇ ಅಲ್ಲ, ಅದೊಂದು ದೊಡ್ಡ ರಾಜಕೀಯ ತತ್ವವಾಗಿ ಕೂಡಾ ಒಡಮೂಡ್ತಾ ಇದೆ.

ಇವೊತ್ತು folklore ಅನ್ನೋದು folklife ಆಗಿ folkloristics ಅನ್ನುವ

ಶಾಸ್ತ್ರವೊಂದು ರೂಪುಗೊಂಡಿದೆ. ಇವೊತ್ತು ಅದೊಂದು ಸಂಕೀರ್ಣ ಶಾಸ್ತ್ರವಾಗಿದೆ. ಹಾಗಾಗಿ ಅದು ಇವೊತ್ತು ನಾವೇನು ಸುಲಭವಾಗಿ ಜಾನಪದ ಅಂದು ಬಿಡ್ತೀವೆ, ಅದಾಗಿ ಉಳಿದಿಲ್ಲ. ಅದೀಗ ನಂಬಿಕೆಗಳ ವಿಶ್ಲೇಷಣೆಯಾಗಿ, ಭವಿಷ್ಯಶಾಸ್ತ್ರ (Futuristics)ವಾಗಿದೆ. ನಾವು ಜಾನಪದ ಅಂದ್ರೆ ಏನು ಪುರಾತನತೆಯ ಶಾಸ್ತ್ರ, fossilistics studies ಅಂದುಕೊಂಡುಬಿಟ್ಟಿದ್ದೀವಿ, ಇವೊತ್ತು ಅದನ್ನು lively fossilistic system ಅಂತ ಜಗತ್ತಿನಾದ್ಯಂತ ಅಭ್ಯಾಸ ಮಾಡ್ತಿದ್ದಾರೆ. ಅಂದರೆ ಇವೊತ್ತು ಅದು ಜೀವಂತ ಪಳೆಯುಳಿಕೆಗಳ ಶಾಸ್ತ್ರ ಅನ್ನಿಸಿಕೊಂಡಿದೆ. ಹೀಗೆ ಜಾನಪದ ಅನ್ನೋದು ವರ್ತಮಾನವಾಗಿದೆ, ಅದೊಂದು ಸಮಕಾಲೀನ ಶಾಸ್ತ್ರವಾಗಿದೆ. ಹಾಗೇ ಅದು ಆಗಲೇ ಹೇಳಿದಂತೆ ಭವಿಷ್ಯಶಾಸ್ತ್ರ ಕೂಡಾ ಅಗಿದೆ. ಯಾಕೇಂದ್ರೆ ಜನಪದ ಅಧ್ಯಯನದಲ್ಲಿ ನಾವು ತೊಡಗಿಕೊಂಡಾಗ ಎದುರಾಗುವಂತಹ ಕಥೆಗಳು, ತ್ರಿಪದಿಗಳು, ಹಾಡುಗಳು, ಕಲಾ ರೂಪಗಳು, ಕಲಾಭಿವ್ಯಕ್ತಿಗಳು ಪುರಾಣಗಳು ಇವುಗಳಲ್ಲಿದ್ದಂತಹ ಐತಿಹ್ಯಗಳನ್ನ, ಪ್ರತೀಕಗಳ ಅಭ್ಯಸಿಸಿ ಮುಂದಿನ ಸಂಸ್ಕೃತಿ ಹೇಗಿರಬಹುದು, ಮನುಷ್ಯ ಹೇಗೆ ವರ್ತಿಸಬಹುದು ಅನ್ನೋದನ್ನು ಹೇಳುವ ವರ್ತನಾಶಾಸ್ತ್ರವಾಗಿ ಮಾರ್ಪಾಡಾಗಿದೆ ಜನಪದ ಅನ್ನೋದು.

ಈ ಹಿನ್ನೆಲೇನಲ್ಲಿ ಆಧುನಿಕ ಶಿಕ್ಷಣ ನಮಗೆ ಏನು ಮಾಡಿದೆ, ಎಂತಹ ಆಘಾತ ಮಾಡಿದೆ ಅಂತ ನೋಡಿದರೆ ಜಾನಪದ ಇವೊತ್ತು ಹೇಗೆ ನರವಿಗೆ ಬರಬಹುದು ಅನ್ನುವುದರ ಒಂದು ಹೊಳಹು ಸಿಗುತ್ತೆ. ಆಧುನಿಕ ಶಿಕ್ಷಣಕ್ಕೆ ನಾವು ಏಕೆ ಹೋದೆವು? ಅದು ಒಂದು ಬಿಡುಗಡೆಯ ಮಾರ್ಗವೆಂದು ನಂಬಿ ಹೋದೆವು. ಏಕೇಂದ್ರೆ ನಮಗೆ ಹಳೆಯ ಅನೇಕ ಸಮಸ್ಯೆಗಳಿಂದ, ಜಾತಿ ಪದ್ಧತಿಯಿಂದ, ಬಡತನದಿಂದ ಬಿಡುಗಡೆ ಬೇಕಿತ್ತು, ನಾವು ಹಿಂದಕ್ಕೆ ಹೋಗ್ತಿದ್ದೀವಿ ಅನ್ನೋ ನಂಬಿಕೆಯಿಂದ ಬಿಡುಗಡೆ ಬೇಕಿತ್ತು. ಆದರೆ ಇವೊತ್ತು ನಾವು ನಿಜವಾಗಿ ಮುಂದಕ್ಕೆ ಹೋಗ್ತಿದ್ದೀವಾ ಅಂತಾ ಯೋಚನೆ ಮಾಡಿದ್ರೆ, ಮಂಗಳ ಗ್ರಹಕ್ಕೆ ನೌಕೆ ಕಳಿಸುತ್ತಿರುವ ಇವೊತ್ತಿನ ಸಂದರ್ಭದಲ್ಲೂ ಮುಂದಕ್ಕೂ ಹೋಗ್ತಿಲ್ಲ, ಹಿಂದಕ್ಕೂ ಹೋಗ್ತಿಲ್ಲ; ಸ್ಥಗಿತಗೊಂಡುಬಿಟ್ಟಿದ್ದೇವೆ, ಜಡವಾಗಿಬಿಟ್ಟಿದ್ದೇವೆ ಅನ್ನಿಸೋಕ್ಕೆ ಆರಂಭವಾಗಿದೆ. ಆದ್ದರಿಂದ ನಾವು ಬಿಡುಗಡೆಗಾಗಿ ಮತ್ತೆ ಜಾನಪದಕ್ಕೆ ಹೋಗಬೇಕೂಂದ್ರೆ ಹಳೆ ಜಾನಪದದ ಕಡೆ ನೋಡದೆ, ಅದರ ಇಂದಿನ ರೂಪ ಏನಿದೆ ಅದರ ಕಡೆ ನೋಡಬೇಕು. ಇವೊತ್ತು ಹೊಸ ಜನಪದದ ಆಶಯಗಳೇನಿವೆ, ಅದು ವರ್ತನಾ ಶಾಸ್ತ್ರವಾಗಿ ಯಾವ ರೀತಿ ಪ್ರಸ್ತುತಗೊಂಡಿದೆ, ಅಂದ್ರೆ ಮನುಷ್ಯನಿಗೆ ಇಂದು ವಿರಾಮ, ವ್ಯವಧಾನ ಬೇಕು, ಅವನ ಬದುಕಿನ ಗತಿ ಜಾಸ್ತಿ ಆಗಿದೆ, ಸಂಸ್ಕೃತಿಯ ವೇಗ ಜಾಸ್ತಿ ಆಗ್ತಿದೆ, ನಮ್ಮ ಸಂಶೋಧನೆಗಳು ಕೂಡಾ ಸಾಮೂಹಿಕತೆಯ ನೆಲೆಯಲ್ಲಿ ನಡೆಯಬೇಕು ಅಂತ ಏನು ಇವೊತ್ತು ವರ್ತನಾ ಶಾಸ್ತ್ರ, ಮನಃಶಾಸ್ತ್ರ, ಸಮಾಜಶಾಸ್ತ್ರ, ಮಾನವ ಶಾಸ್ತ್ರಗಳ ಸಂಶೋಧನೆಗಳ ಬೆಳಕಿನಲ್ಲ ಹೇಳ್ತಾ ಇವೆ, ಆ ಆಶಯಗಳನ್ನು ನಾವು ಒಪ್ಪಿಕೊಂಡು ಜಾನಪದಕ್ಕೆ ಹೋದರೆ ಮಾತ್ರ ಅದು ಪ್ರಸ್ತುತವಾಗ್ತದೆ. ಇಲ್ಲದಿದ್ದರೆ ಆಗೊಲ್ಲ.

ಇದನ್ನೆಲ್ಲ ನಾವು ಇವೊತ್ತು ಯೋಚನೆ ಮಾಡ್ತಿದ್ದೇವೆ, ಆಧುನಿಕ ಶಿಕ್ಷಣದ

ಪರಿಣಾಮವಾಗಿ ಇಷ್ಟೆಲ್ಲ ಕಷ್ಟಗಳನ್ನು ಅನುಭವಿಸಿದ ಮೇಲೆ. ಆದರೆ ಆಧುನಿಕ ಶಿಕ್ಷಣವನ್ನು ಜಾನಪದಕ್ಕೆ ಹೋಲಿಕೆ ಮಾಡಿ ನೋಡಿದರೆ ಗೊತ್ತಾಗುತ್ತೆ, ಜಾನಪದದಲ್ಲಿ ಶಿಕ್ಷಣವೆಂಬ ಕಲ್ಪನೆಯೇ ಇರಲಿಲ್ಲ ಅಂತ. ಈ ಶಿಕ್ಷಣದ ಕಲ್ಪನೆ ಬಂದದ್ದು ಆಧುನಿಕತೆಯಿಂದಾಗಿ. ಜನಪದದಲ್ಲಿ ಶಿಕ್ಷಣ ಅಂದ್ರೆ ವೃತ್ತಿನೇ ಆಗಿತ್ತು. ನಾವೆಲ್ಲ, ಅವರು ಓದಿರಲಿಲ್ಲ ಬರೆದಿಲ್ಲ, ಅವರಿಗೆ ಅಕ್ಷರ ಜ್ಞಾನ ಇರಲಿಲ್ಲ ಅಂತ ಹೇಳ್ತೀವಿ. ಆದರೆ ಅವರಿಗೆ ಅಕ್ಷರ ಬೇಕಾಗಿರಲಿಲ್ಲ. ಅಕ್ಷರ ಅಂದರೆ ವಿದ್ಯೆ, ಅವರಿಗೆ ಅವರ ವೃತ್ತಿಯೇ ಆಗಿತ್ತು. ಅವನ ಕಸುಬೇ ಅವನ ವಿದ್ಯೆ ಕೂಡಾ ಆಗಿತ್ತು. ಅವನು ಏನು ಕಸುಬು ಮಾಡ್ತಿದ್ದನೋ ಅದೇ ಅವನ ವಿದ್ಯೆ, ಬುದ್ಧಿಯಾಗಿತ್ತು, ಜೀವನೋಪಾಯ, ಬಿಡುಗಡೆಯ ಮಾರ್ಗ ಕೂಡಾ ಅಗಿತ್ತು. ಮುಕ್ತಿಯ ಮಾರ್ಗವಾಗಿತ್ತು. ನಮ್ಮ ಎಲ್ಲ ಸಾಧು ಸಂತರು ತಮ್ಮ ಕಾಯಕಗಳ ಮೂಲಕವೇ ಮುಕ್ತಿ ಕಂಡುಕೊಂಡರು. ಅವರೇನೂ ಅಕ್ಷರ ಕಲೀಲಿಲ್ಲ, ವೇದೋಪನಿಷತ್ತುಗಳನ್ನು ಓದಲಿಲ್ಲ, ಯಾವುದೇ ಪಠ್ಯಪುಸ್ತಕಗಳನ್ನ ಓದಲಿಲ್ಲ. ಅವರ ಕಸುಬೇ, ಕಸುಬಿನ ದಕ್ಷತೆ–ಕೌಶಲ್ಯ ಅಭಿವೃದ್ಧಿ–ಅನ್ವೇಷಣೆಗಳೇ ಅವರು ಬಿಡುಗಡೆ ಕಂಡುಕೊಳ್ಳುವ ಮಾರ್ಗಗಳೂ ಆದವು.

ಆದರೆ ಆಧುನಿಕ ಶಿಕ್ಷಣ, ಬಿಡುಗಡೆಯ ಹೆಸರಿನಲ್ಲಿ ನಮ್ಮನ್ನ ಬಿಡುಗಡೆಗೊಳಿಸದೆ ಪ್ರತ್ಯೇಕೀಕರಣಕ್ಕೆ ಒಳಪಡಿಸಿತು, ಸಮಾಜದಿಂದ ಪ್ರತ್ಯೇಕ ಮಾಡಿತು, ಸಾಮೂಹಿಕತೆಯನ್ನ ನಾಶ ಮಾಡಿತು. ಆಧುನಿಕ ಶಿಕ್ಷಣ ಪ್ರಾಥಮಿಕವಾಗಿ ಓದು ಬರಹಳನ್ನಷ್ಟೇ ನಂಬಿ, ಕೇವಲ ಸೈದ್ಧಂತಿಕ ಶಿಕ್ಷಣವಾಯಿತು. ಜನಪದ ಶಿಕ್ಷಣ ಹೇಗಿತ್ತೆಂದರೆ, ಅಲ್ಲಿ ಶಿಕ್ಷಣವೆಂದರೆ ವೃತ್ತಿ ಕಲಿಕೆಯೇ, ಕಾಯಕವೇ ಶಿಕ್ಷಣ. ಗುರು–ಶಿಷ್ಯ ಎನ್ನುವ ದೂರ, ಪ್ರತ್ಯೇಕಿಕರಣ ಅಥವಾ ಅಂತರ ಅಲ್ಲಿರಲ್ಲ. ಆದರೆ ಆಧುನಿಕ ಶಿಕ್ಷಣ, ಅಂದರೆ ತರಗತಿ ಕೊಠಡಿ ಶಿಕ್ಷಣದಲ್ಲಿ ಗುರು–ಶಿಷ್ಯರ ನಡುವೆ ದೊಡ್ಡ ಅಂತರ ಸೃಷ್ಟಿಯಾಗಿ, ಶಿಕ್ಷಣ ಹೆಚ್ಚು ಪಾಠಕವಾಗ್ತಾ, ಸಿದ್ಧಾಂತ ಮಾತ್ರವಾಗ್ತಾ, ಶಾಸ್ತ್ರವಾಗ್ತಾ ಹೋಯಿತು. ಯಾರೋ ಪುಸ್ತಕ ಬರೆದಿರ್ತಾರೆ, ಅವರ ಊರು, ಭಾಷೆ ಯಾವುದೋ ಗೊತ್ತಿಲ್ಲ. ಹಾಗೇ ಯಾರೋ ಎಲ್ಲಿಂದಲೋ ಬಂದು ಅದನ್ನು ಪಾಠ ಮಾಡ್ತಿರ್ತಾರೆ, ಯಾರೋ ಎಲ್ಲಿಂದಲೋ ಬಂದು ಕೇಳ್ತಿರ್ತಾರೆ. ಹಾಗಾಗಿ ಯಾವ ಹಂತದಲ್ಲೂ ಸ್ಥಳಿಯತೆ ಅನ್ನೋದೇ ಇಲ್ಲದೇ ಹೋಗಿ, ಒಂದು ಆತ್ಮೀಯತೆಯ ಮತ್ತು ಸಂದರ್ಭ ಪ್ರಸ್ತುತತೆಯ ವಾತಾವರಣವಿಲ್ಲದೇ ಹೋಗಿ ಎಲ್ಲ ಹಂತಗಳಲ್ಲೂ ಪ್ರತ್ಯೇಕೀಕರಣ ಸೃಷ್ಟಿಯಾಯಿತು.

ಹಾಗಾಗಿ, ಜಾನಪದ ಶಿಕ್ಷಣ ಸ್ಥಳೀಯವಾದದ್ದು, ಸಾಮೂಹಿಕವಾದದ್ದು, ಸಾವಯವಾದದ್ದು, ಅನುಭವಿಕವಾದದ್ದು–ಅನುಭವವನ್ನು ಆಧರಿಸಿದ್ದು. ಆಧುನಿಕ ಶಿಕ್ಷಣ, ಮುಖರಹಿತವಾದದ್ದು, ವ್ಯಕ್ತಿ ಪ್ರತ್ಯೇಕಿತವಾದದ್ದು, ಅಜೈವಿಕವಾದದ್ದು ಮತ್ತು ತಾತ್ವಿಕವಾದದ್ದು. ಯಾಕೇಂದ್ರೆ ಆಧುನಿಕ ಶಿಕ್ಷಣ ಬಂದದ್ದೇ ವಸಾಹತುಶಾಹಿಯ ಭಾಗವಾಗಿ. ವಸಾಹತುಶಾಹಿ ಮಾಡಿದ ಒಂದು ದೊಡ್ಡ ಆಘಾತ ಅಂದ್ರೆ, ಬೆಳಿಗ್ಗೆ ಬಸವರಾಜ ಮಲಶೆಟ್ಟಿಯವರು ಹೇಳ್ತಿದ್ದರು, ಜಾಗತೀಕರಣಕ್ಕೆ ನಾವು ನಿಜವಾಗಿ ಏಕೆ ಹೆದರಬೇಕೂಂತ...

ಜಾಗತೀಕರಣ ನಿನ್ನೆ ಮೊನ್ನೆಯ ವಿದ್ಯಮಾನವಲ್ಲ ಯಾವೊತ್ತು ರೈಲ್ವೇ ಇಂಜಿನ್ ಇಲ್ಲಿಗೆ ಬಂತೋ, ಯಾವೊತ್ತು ಸಿಡಿಮದ್ದು ಇಲ್ಲಿ ಸಿಡೀತೋ, ಯಾವೊತ್ತು ಹೊಸ ಹೊಸ ಔಷಧಿಗಳು ಇಲ್ಲಿಗೆ ಬಂತೋ ಅವೊತ್ತೇ ಆಧುನೀಕರಣ ಆರಂಭವಾಯಿತು. ಆವೊತ್ತೇ ಜಾಗತೀಕರಣದ ತರ್ಕ ಕೂಡಾ ಆರಂಭವಾಯಿತು. ಅದಕ್ಕೇ ಗಾಂಧೀಜಿ ಹಿಂದ್ ಸ್ವರಾಜ್‌ನಲ್ಲಿ ಹೇಳಿದ್ದುದು ನಮಗೆ ರೈಲು ಬೇಕಾಗಿಲ್ಲ, ರಸಾಯನಿಕ ಔಷಧಿಗಳು ಬೇಕಾಗಿಲ್ಲ, ಅದರ ಜೊತೆ ಬರುವ ಆಧುನಿಕ ಆಸ್ಪತ್ರೆಗಳು ಬೇಕಾಗಿಲ್ಲ, ವಕೀಲರು ಬೇಕಾಗಿಲ್ಲ, ಅದರ ಜೊತೆ ಬರುವ ಕೋರ್ಟುಗಳು ಬೇಕಾಗಿಲ್ಲ, ಇತಿಹಾಸ ಶಾಸ್ತ್ರ ಬೇಕಾಗಿಲ್ಲ, ಅದು ಸೃಷ್ಟಿಸೋ ಹೊಸ ಹೊಸ ಸಾಮಾಜಿಕ ಸಮಸ್ಯೆಗಳು ಬೇಕಾಗಿಲ್ಲ ಅಂತ. ಅಂದ್ರೆ ಇವೆಲ್ಲ ಆಧುನಿಕ ಶಿಕ್ಷಣ ಪದ್ಧತಿಯ ಪರಿಣಾಮಗಳು. ಅದಕ್ಕೆಲ್ಲ ಅವರು ಪರಿಹಾರವನ್ನು ಗ್ರಾಮ ಸ್ವರಾಜ್ಯದಲ್ಲಿ ಗುರುತಿಸಿದ್ರು.

ಹಾಗಾಗಿ, ಇವೊತ್ತು ನಾವು ಜಾನಪದಕ್ಕೆ ವಾಪಸ್ ಹೋಗಬೇಕೂಂದ್ರೆ ಗ್ರಾಮ ಸ್ವರಾಜ್ಯ ಕಲ್ಪನೆಗೆ ಹೊಸ ಜೀವ ನೀಡಬೇಕಾಗುತ್ತೆ. ಅಂದರೆ ಗ್ರಾಮಕ್ಕೇ ವಾಪಸ್ ಹೋಗಬೇಕೂಂತಲ್ಲ. ಅದು ಅಸಾಧ್ಯ ಕೂಡ. ಬದಲಿಗೆ, ಗ್ರಾಮ ಬದುಕಿನ ಆಶಯಗಳನ್ನು ನಮ್ಮ ಬದುಕಿನಲ್ಲಿ ಪುನರ್ರೂಪಿಸಕೊಳ್ಳಬೇಕಿದೆ. ಹೆಚ್ಚು ಹೆಚ್ಚು ಮನುಷ್ಯ ಪ್ರೀತಿಯನ್ನ, ಸಾಮೂಹಿಕತೆಯನ್ನ ನಾವು ರೂಢಿಸಿಕೊಳ್ಳಬೇಕಿದೆ. ಜಾನಪದಕ್ಕೆ ವಾಪಸ್ ಹೋಗುವ ಮಾರ್ಗ ಇದೇ ಹೊರತು, ಮತ್ತೆ ಡೊಳ್ಳಿನ ಪದಗಳಿಗೆ, ಹಂತಿ ಪದಗಳಿಗೆ, ಬೀಸೋ ಕಲ್ಲಿಗೆ ಅಥವಾ ಅವನ್ನು ಪುನರುಜ್ಜಿವನಗೊಳಿಸೋದಕ್ಕೆ ಹೋಗೋದಲ್ಲ. ಯಾಕೇಂದ್ರೆ, ಮಲಶೆಟ್ಟಿಯವರು ಹೇಳ್ತಿದ್ದ ಹಾಗೆ ಇವೊತ್ತು ಹಳ್ಳಿಗಳಲ್ಲಿ ಒಂದು ದೊಡ್ಡಾಟದ ತಂಡ ಮಾಡ್ರಪ್ಪ ಅಂದ್ರೆ ಜನ 'ಹೋಗೀ ಸರ್ ನಮಗೆ ಬೇರೆ ಕೆಲಸಗಳಿವೆ' ಅಂತ ಹೇಳೋ ಜಂಜಾಟದ ದಿನಗಳಿವು. ಹಾಗಾಗಿ, ಇವೊತ್ತು ಜಾನಪದವನ್ನು ಉಳಿಸಿಕೊಳ್ಳೋದು ಅಂದರೆ ಅವನ್ನು ಪರಿಷ್ಕಾರ ಮಾಡಿ ಮಾದರಿಗಳಾಗಿ ನಮ್ಮಲ್ಲಿ ಇಟ್ಟುಕೊಳ್ಳೋದು, ಇದೆಲ್ಲ ನಮ್ಮಲ್ಲಿ ಇತ್ತಪ್ಪಾ ಅನ್ನೋ ನೆನಪಿಗೋಸ್ಕರ. ಅದು, ನೆನಪು ಅನ್ನೋದು ಬಹಳ ಮುಖ್ಯ ಮನುಷ್ಯ ಬದುಕಿಗೆ, ಅವನ ಸಂಸ್ಕೃತಿಗೆ. ಆದರೆ ನಾವು ಜಾನಪದದಿಂದ ತೆಗೆದುಕೊಳ್ಳಬೇಕಾದ್ದು ಅಂದ್ರೆ ಅದರ ಆಶಯಗಳನ್ನು ಮಾತ್ರ, ಸಾಮೂಹಿಕತೆ, ಹಂಚಿಕೊಂಡು ತಿನ್ನೋದು, ಕೂಡಿ ಬಾಳೋದು ಮತ್ತು ಸ್ವಲ್ಪ ವಿರಾಮ. ಎಲ್ಲಕ್ಕಿಂತ ಮುಖ್ಯವಾಗಿ, ಆಧುನಿಕ ಶಿಕ್ಷಣ ನಮ್ಮಿಂದ ಕಸಿದುಕೊಂಡಿರುವ ಆಧ್ಯಾತ್ಮಿಕ ಪ್ರಶ್ನೆಗಳಿಗೆ ವಾಪಸ್ ಹೋಗೋದು: ನಾನು ಯಾರು, ಎಲ್ಲಿಂದ ಬಂದೆ, ಯಾಕೆ ಬಂದೆ, ಎಲ್ಲಿಗೆ ಹೋಗ್ತೀನಿ ಇತ್ಯಾದಿ ಪ್ರಶ್ನೆಗಳಿಗೆ.

ನಿಮಗೆ ಗೊತ್ತಿಲ್ಲ, ವಿಜ್ಞಾನ ಬಂದು ಎಲ್ಲ ಹಾಳಾಗಿ ಹೋಯ್ತು ಅಂತ ಹೇಳೋದು ಅರ್ಧ ಸತ್ಯ ಮಾತ್ರ. ಈ ಅರ್ಧ ಸತ್ಯ ಅನ್ನೋದು ಕೆಲವೊಮ್ಮೆ ಸುಳ್ಳಿಗಿಂತ ಹೆಚ್ಚು ಅಪಾಯಕಾರಿ. ಯಾಕೇಂದ್ರೆ, ಇವೊತ್ತು ಉನ್ನತ ಭೌತವಿಜ್ಞಾನ ಕ್ವಾಂಟಂ ಸಿದ್ಧಾಂತದ ರೂಪದಲ್ಲಿ principle of uncertainity ಎನ್ನೋ ತತ್ವದಿಂದಾಗಿ ಅಧ್ಯಾತ್ಮ ಶಾಸ್ತ್ರವಾಗಿ

ಪರಿವರ್ತಿತವಾಗಿ ಹೋಗಿದೆ. ಘಟನೆ ಅಥವಾ ಘಟಿಸುವುದು ಅಂದರೆ ಏನು, ಇದು ಆಗುತ್ತೋ ಇಲ್ಲವೋ, ಇದರ ಕರ್ತೃ ಯಾರು, ನಿಜವಾಗಿ ವಸ್ತು ಅನ್ನೋದು ಇದೆಯೋ ಇಲ್ಲವೋ, ಇದರ ನಿರ್ಮಾತೃ ಇದಾನೋ ಇಲ್ಲವೋ, ಈ ತರದ ಪ್ರಶ್ನೆಗಳ ಮೂಲಕ ಉನ್ನತ ವಿಜ್ಞಾನ ಅನ್ನೋದು ಉನ್ನತ ಧರ್ಮ ಜಿಜ್ಞಾಸೆಯ ಸ್ವರೂಪ ತಾಳಿಬಿಟ್ಟಿದೆ. ನಿಮಗೆ ಗೊತ್ತಿರಬೇಕು, ಅಣು ಬಾಂಬ್ ರೂಪಗೊಳ್ಳೊದಕ್ಕೆ ಕಾರಣಕರ್ತರಾದ ಎಲ್ಲ ವಿಜ್ಞಾನಿಗಳು–ಐನ್‌ಸ್ಟೈನ್ ಸೇರಿದಂತೆ– ಕೊನೇನಲ್ಲಿ ದೊಡ್ಡ ತತ್ವಜ್ಞಾನಿಗಳಾಗಿ, ಯುಗ ದ್ರಷ್ಟಾರರ ತರ ಆಗಿ ಹೋದ್ರು, ನಮ್ಮ ಋಷಿಗಳ ಹಾಗೆ. ಅಷ್ಟು ದಟ್ಟ ವಿಷಾದ ಅವರನ್ನು ಕಾಡ್ತು. ಅವರನ್ನ ಹೊಸ ಮನುಷ್ಯರನ್ನಾಗಿ ಮಾಡ್ತು. ಹಾಗಾಗಿ ಆಧುನಿಕ ಶಿಕ್ಷಣದ ಅತ್ಯುನ್ನತ ರೂಪ ಯಾವುದೂಂದ್ರೆ, ಮತ್ತೆ ನಾವು ಅಧ್ಯಾತ್ಮಿಕರಾಗೋದು. ಅಧ್ಯಾತ್ಮ ಅಂದ್ರೆ ಪೂಜೆ ಪುನಸ್ಕಾರಗಳು ಅಂತ ಅಲ್ಲ. ಸಾಮೂಹಿಕತೆಗೆ, ಕರುಣೆಗೆ, ನನ್ನ ಪಕ್ಕದಲ್ಲಿರೋನು ನನ್ನ ತರಾನೇ ಮನುಷ್ಯ, ಅವನ ಕಷ್ಟಸುಖಗಳೂ ನನ್ನ ಕಷ್ಟ ಸುಖಗಳೇ ಅನ್ನುವ ಗ್ರಾಮ ಜೀವನದ ಏನು ಅನುಬಂಧ ಇತ್ತಲ್ಲ, ಅದಕ್ಕೆ ಮತ್ತೆ ವಾಪಸಾಗೋದೇನೇ ನಿಜವಾದ ಜಾನಪದಕ್ಕೆ ವಾಪಸ್ಸಾಗೋದು ನಾವು.

ಆದ್ದರಿಂದ ಜಾನಪದಕ್ಕೆ ವಾಪಸ್ಸಾಗೋದು ಅಂದ್ರೆ ಗಾಂಧೀಜಿಯ ಗ್ರಾಮ ಸ್ವರಾಜ್ಯ ಪರಿಕಲ್ಪನೆಯನ್ನು ಪುನರನ್ವೇಷಿಸುವುದು. ಅದನ್ನೇ ಅಲ್ಲ, ಯಾಕೇಂದ್ರೆ ನೆಹರೂ ಅರವತ್ತು ವರ್ಷಗಳ ಹಿಂದೇನೇ ಈ ಗ್ರಾಮ ಸ್ವರಾಜ್ಯ ಕಲ್ಪನೆಯನ್ನು ಒಂದು ತರಹ ಗೇಲಿ ಮಾಡಿದ್ರು, ಗ್ರಾಮ ಅನ್ನೋದು ಹಿಂದುಳಿದಿರುವಿಕೆಯ ಪ್ರತೀಕವಾಗಿ ಒಂದು ಹಾಳು ಕೊಂಪೆಯಾಗಿದೆ, ಅಲ್ಲಿಗೆ ವಾಪಸ್ ಹೋಗೋದಕ್ಕೆ ಆಗೋದಿಲ್ಲ ಅಂತ. ಆದರೆ ಅದಕ್ಕೆ ಗಾಂಧಿ ಉತ್ತರ ಕೊಟ್ಟಿದ್ದರು. ನಾನು ಹೇಳುತ್ತಿರುವುದು ಹಾಳು ಕೊಂಪೆಗಳಂತಿರುವ ಹಳ್ಳಿಗಳ ಸ್ವರಾಜ್ಯವನ್ನಲ್ಲ. ಅವನ್ನು ಪುನಾರಚಿಸಬೇಕಿದೆ ನಾವು. ಅವನ್ನು ಆಧುನೀಕರಿಸಬೇಕಿದೆ, ಜಾತಿ ಪದ್ಧತಿಯಿಂದ ಮುಕ್ತಗೊಳಿಸಬೇಕಿದೆ, ಬಡತನದಿಂದ ಮುಕ್ತಗೊಳಿಸಬೇಕಿದೆ. ಅದು ಗ್ರಾಮ ಸ್ವರಾಜ್ಯ ಕಟ್ಟುವ ಕೆಲಸ, ಪ್ರಕ್ರಿಯೆ ಅಂತ. ಆಧುನಿಕ ಶಿಕ್ಷಣ ಅನ್ನೋದು ಏನು ಮಾಡಿದೆ ಅಂದ್ರೆ, ಸುಖ ಸವಲತ್ತುಗಳ ಅನ್ವೇಷಣೆಯಲ್ಲಿ ನಾವು ಮಿತಿಯಿಲ್ಲದ ಸುಖ ಸವಲತ್ತುಗಳ ದಾಸರಾಗಿಬಿಟ್ಟಿದ್ದೇವೆ. ನಮ್ಮ ಗ್ರಾಮ ಅಥವಾ ಜನಪದ ಸಂಸ್ಕೃತಿ ಕೆಲವು ಸಂಯಮಗಳನ್ನು ಕಲಿಸಿತ್ತು, ಇಷ್ಟು ಬೇಕು, ಇಷ್ಟು ಸಾಕು ಅನ್ನೂ ವಿವೇಕವನ್ನು ಕಲಿಸಿತ್ತು. ಇದರಾಚೆ ಹೋದ್ರೆ ನಾವು ಕೆಡ್ತೀವಿ, ಗ್ರಾಮ ಕೆಡುತ್ತೆ ಅನ್ನುವ ಮಿತಿ ಇತ್ತು. ಗ್ರಾಮವೇ ಒಂದು ಮಿತಿ ಆವೊತ್ತು.

ಗ್ರಾಮ ಸ್ವರಾಜ್ಯದ ಬಗ್ಗೆ ಗಾಂಧಿ ಹೇಳಿದ ದೊಡ್ಡ ಮಾತು ಅಂದ್ರೆ, ಗ್ರಾಮದಲ್ಲಿ ನಾನು ಇರುವವರೆಗೆ ನಾನು ಗ್ರಾಮವನ್ನು ಅರ್ಥ ಮಾಡಿಕೊಳ್ಳಬಲ್ಲೆ, ಗ್ರಾಮದ ಎಲ್ಲ ವಿದ್ಯಮಾನಗಳಿಗೆ ನಾನೂ ಜವಾಬ್ದಾರ ಅನ್ನುವ ಅರಿವು ಅವನಲ್ಲಿರುವವರೆಗೆ ಅವನು ಸಹಜವಾಗಿರ್ತಾನೆ. ಆದರೆ ಗ್ರಾಮವನ್ನು ಒಮ್ಮೆ ದಾಟತಿದ್ದ ಹಾಗೆ, ಅವನ ಜಗತ್ತು ದೊಡ್ಡದಾಗ್ತಿದ್ದ ಹಾಗೆ; ಈ ಜಗತ್ತು ನನಗೆ ಅರ್ಥ ಅಗ್ತಿಲ್ಲ, ಇಲ್ಲಿ ನನ್ನ ಗ್ರಹಿಕೆಗೆ ಸಿಗದ

ಏನೋನೋ ನಡೀತಾ ಇದೆ, ಇದಕ್ಕೂ ನನಗೂ ಸಂಬಂಧವಿಲ್ಲ ಅಂತ ಅನ್ನಿಸಲಾರಂಭಿಸುತ್ತಿದ್ದ ಹಾಗೆ; ಒಟ್ಟಿನಲ್ಲಿ ತನ್ನೊಳಗಿನೆಲ್ಲದಕ್ಕೂ ಹೊರಗಿನವನಾಗ್ತಿದ್ದ ಹಾಗೆ, ಅವನು ಅಸಹಜ ಅಥವಾ ವಕ್ರನಾಗತೊಡಗ್ತಾನೆ. ಈಗ ರಾಜ್ಯದ ಅಥವಾ ರಾಷ್ಟ್ರದ ಮತ್ತು ಇತ್ತೀಚಿನ ಜಾಗತೀಕರಣದ ಯುಗದಲ್ಲಿ ಜಗತ್ತಿನ ಅತಿ ಸಂಕೀರ್ಣ ರಾಜಕಾರಣ, ಅದರ ಬೆಳವಣಿಗೆಗಳು ನಮ್ಮ ಬದುಕನ್ನು ಪ್ರಭಾವಿಸುತ್ತಿರುವಾಗ; ಆದರೆ ಅದರ ಕಾರ್ಯ-ಕಾರಣಗಳು ನಮ್ಮ ಎಟಕಿಗೆ ಸಿಗದೇ ಹೋಗುತ್ತಿರುವಾಗ, ಅದರ ಮೇಲೆ ಯಾವುದೇ ನಿಯಂತ್ರಣ ನಮಗೆ ಇಲ್ಲದೇ ಹೋದಾಗ, ನಾವು ಅಸಹಾಯಕರಾಗಿ, ಎರಡನೇ ದರ್ಜೆ ಪ್ರಜೆಗಳಾಗಿ, ಒಂದಲ್ಲ ಒಂದು ರೀತಿಯಲ್ಲಿ ವ್ಯಗ್ರರಾಗ್ತಿರೋದು ಸಹಜವಾಗಿದೆ.

ಆದ್ದರಿಂದ ಎಲ್ಲಿಯುವರೆಗೆ ನಾವು ಗ್ರಾಮೀಣ ಜೀವಿಗಳಾಗಿರ್ತೀವೋ, ಸ್ಥಳೀಯರಾಗಿರ್ತೀವೋ, ಜಾನಪದರಾಗಿರ್ತೀವೋ ಅಲ್ಲಿಯವರೆಗೆ ನಮ್ಮ ಸಮಸ್ಯೆಗಳು ಕಡಿಮೆ. ಹಾಗಾಗಿ, ಮತ್ತೆ ನಾವು ಜಾನಪದಕ್ಕೆ ವಾಪಸ್ ಹೋಗೋದು ಅದ್ರೆ ಗ್ರಾಮ ಸ್ವರಾಜ್ಯ ಪರಿಕಲ್ಪನೆಗೆ ಪುನಃಶ್ಚೇತನ ನೀಡುವುದು ಮತ್ತು ಅದಕ್ಕೆ ಬೇಕಾದ ರಾಜಕಾರಣ ಮಾಡುವುದು ಅಂತ ಅರ್ಥ. ಆದರೆ ನಾವು ಮಲಶೆಟ್ಟಿವರು ಹೇಳಿದ ಹಾಗೆ ಬರೀ ಭಾಷಣ ಮಾಡ್ತೇವೆ, ಹೆಚ್ಚೆಂದರೆ ಓದ್ತೇವಿ, ಬರೀತೇವೆ, ಆದರೆ ರಾಜಕಾರಣ ಮಾಡೋಲ್ಲ. ನಾನು ರಾಜಕಾರಣ ಮಾಡೋದು ಅಂದ್ರೆ ಎಂ.ಎಲ್.ಎ., ಎಂ.ಪಿ. ಮಾಡೋ ರಾಜಕಾರಣದ ಬಗ್ಗೆ ಹೇಳ್ತಿಲ್ಲ. ನಾನು ಹೇಳ್ತಿರೋದು, ನಮ್ಮ ಜೀವನ ಕ್ರಮವನ್ನು ನಿಜವಾಗಿ ಬದಲಾವಣೆ ಮಾಡಿಕೊಳ್ಳಬೇಕಾದ ರೀತಿಯ ರಾಜಕಾರಣ. ನಮಗೆ ಯಾವುದು ಒಳ್ಳೆಯದು, ಯಾವುದು ಕೆಟ್ಟದು, ಯಾವುದು ಬೇಕು ಎಷ್ಟು ಬೇಕು, ಯಾವುದು ಬೇಡ, ಯಾಕೆ ಬೇಡ ಬೇಡ ಅಂತ ತೀರ್ಮಾನ ಮಾಡುವ ವ್ಯವಧಾನ ವಿರಾಮ ಇರುವಂತಹ ಬದುಕು ಬೇಕಾಗಿದೆ ನಮಗೆ. ಅಂತಹ ಬದುಕನ್ನು ಕಟ್ಟಿಕೊಳ್ಳಲು ಅನುವು ಮಾಡಿಕೊಡುವಂತಹ ಸಾಮೂಹಿಕತೆಯ ರಾಜಕಾರಣದ ಬಗ್ಗೆ ಇಲ್ಲಿ ನಾನು ಹೇಳ್ತಿರೋದು.

ನಾವು ೨೪ ಗಂಟೆ ದುಡೀತೀವಿ, ಹೆಂಡತಿ ಮಕ್ಕಳೂ ಸೇರಿ ದುಡೀತೀವಿ. ಆದರೆ ಯಾಕೇಂತ ಗೊತ್ತಿಲ್ಲದೆ! ಒಂದು, ಎರಡು ಮನೆ, ಒಮ್ಮೊಮ್ಮೆ ಮೂರು ಮನೆ, ಒಂದು, ಎರಡು ಮೂರು ಕಾರುಗಳು, ಕೆಲವರಿಗೆ ಒಬ್ಬರಲ್ಲ, ಇಬ್ಬರು ಮೂವ್ವರು ಹೆಂಡ್ತೀರು... ಒಂದಕ್ಕೆ ತೃಪ್ತಿನೇ ಇಲ್ಲ. ಒಂದು ಅನ್ನೋದು ಮಿತಿನೇ ಅಲ್ಲವಾಗಿದೆ ಇವೊತ್ತು. ಒಂದಕ್ಕಿಂತ ಹೆಚ್ಚಿದ್ದರೇ ಸುಖ ಸಂಪತ್ತು, ಪ್ರತಿಷ್ಠೆ ಜಾಸ್ತಿ ಅಂದುಕೊಂಡುಬಿಟ್ಟಿದ್ದೀವಿ. ಆದರೆ ಕಡಿಮೆ ಇದ್ದಷ್ಟೂ ನಿನ್ನ ಘನತೆ ಜಾಸ್ತಿ, ನಿನ್ನ ಸಿರಿ ಸಂಪತ್ತು ಜಾಸ್ತಿ, ನೆಮ್ಮದಿ ಜಾಸ್ತಿ, ವಿರಾಮ, ವ್ಯವಧಾನ, ಶಾಂತಿ, ಸುಖ ಜಾಸ್ತಿ ಅನ್ನುವ ಅರಿವೇ ಇಲ್ಲದಾಗಿದೆ. ಇಂತಹ ಅರಿವನ್ನು ಮೂಡಿಸೋ ಪರಿಕಲ್ಪನೆಯೇ ಜಾನಪದ ಪರಿಕಲ್ಪನೆ ಅನ್ನೋದನ್ನ ನಾವು ಮನಗಾಣಬೇಕಿದೆ. ಇವೊತ್ತು. ಜಾನಪದ ಅಂದರೆ ಗಾದೆ, ಒಗಟು, ತ್ರಿಪದಿ ಹೇಳೋದು, ಡೊಳ್ಳು ಕುಣಿಯೋದು ಅಥವಾ ಮಡಕೆಯಲ್ಲಿ ಅಡುಗೆ ಮಾಡಿ ಉಣ್ಣೋದು ಅಥವಾ ಜನಪದ ಸಾಹಿತ್ಯವನ್ನು ಪ್ರಕಟ ಮಾಡಿಕೊಂಡು ಪ್ರಚಾರ ಮಾಡಿಕೊಂಡು

ತಿರಗೋದು ಅಲ್ಲ. ಹಾಗಾಗಿ, ಜಾನಪದಕ್ಕೆ ವಾಪಸಾಗೋದು ಅಂದ್ರೆ, ಅದು ಹಳೆಯ ಉಪದೇಶದ ಹಾಗೆ ಕ್ಲೀಷೆಯ ಮಾತಾದ್ರೂ, ನಿಜವಾದ ಅರ್ಥದಲ್ಲಿ ಅದು ಒಂದು ಸರಳ ಸಂತೃಪ್ತ, ಸಭ್ಯ ಜೀವನದ ಅರಿವು. ಸಮಾಜವಾದಿ ಚಿಂತಕ ಲೋಹಿಯಾ ಅವರ ಮಾತುಗಳಲ್ಲಿ ಹೇಳುವುದಾದರೆ, ಅದೊಂದು ಮಿತಿಗಳುಳ್ಳ ಬದುಕಿನ ಮಾದರಿ. ಈ ಮಿತಿಗಳನ್ನು ದಾಟಿದರೆ, ನನ್ನ ನೆಮ್ಮದಿ ಹೋಗುತ್ತೆ ಎನ್ನುವ ವಿವೇಕದ ಬದುಕಿನ ರೀತೀನೇ ಜನಪದ ರೀತಿ.

ಆದ್ದರಿಂದ ನಮ್ಮ ಜನಪದ ಗೋಷ್ಠಿಗಳು, ಅಧ್ಯಯನಗಳು ಜಾನಪದದ ಮೂಲ ತತ್ವವಾದ ನಮಗೆ ಇಷ್ಟು ಸಾಕು, ಇಷ್ಟು ಬೇಕು ಅನ್ನೋದನ್ನು ಕಲಿಸದ ಹೊರತು ಇನ್ನಾವ ರೀತಿಯಲ್ಲೂ ಅವು ನಮಗೆ ನೆರವಾಗೋದಿಲ್ಲ, ಇದನ್ನರಿಯದೇ, ಬರೀ ಹಳಹಳಿಕೆ ಮಾಡಕೊಂಡು, ಎಲ್ಲ ನಮ್ಮ ಸಂಪತ್ತು ಹೋರಟು ಹೋಯ್ತಲ್ಲ ಅಂದುಕೊಂಡು ಕೊರಗಬಹುದೇ ಹೊರತು, ಕೊರಗಿ ಸಾಯಬಹುದೇ ಹೊರತು, ಅದರಿಂದ ಯಾವ ಪ್ರಯೋಜನವೂ ಇಲ್ಲ. ನಾವು ಜಾನಪದವನ್ನು ಈ ನೆಲೆಯಲ್ಲಿ, ಅಂದರೆ ಸಾಮೂಹಿಕತೆಯ ಅರಿವಿನಲ್ಲಿ ನಮ್ಮದೇ ಆದ ಒಂದು ಮಿತಿಯ ಬದುಕನ್ನು ಕಂಡುಕೊಳ್ಳದೇ ಇದ್ರೆ ನಮಗೆ ನೆಮ್ಮದಿ ಇಲ್ಲ, ಬಿಡುಗಡೆ ಇಲ್ಲ ಅನ್ನೋದನ್ನು ಹೇಳುತ್ತೆ ಅನ್ನುವ ನೆಲೆಯಲ್ಲಿ ಅರ್ಥ ಮಾಡಿಕೊಂಡು ನಮ್ಮ ಅಧ್ಯಯನ ಸಂಶೋಧನೆಗಳನ್ನು ನಡೆಸಬೇಕಾಗಿದೆ ಅಂತ ಹೇಳಿ. ಗಾಂಧೀಜಿಯ ಒಂದು ಮಾತನ್ನು–ಅದು ಜಾನಪದಕ್ಕೆ ಸಂಬಂಧಿಸಿದ್ದೋ ಅಲ್ಲವೋ ಅನ್ನೋದನ್ನು ನಿಮ್ಮ ತೀರ್ಮಾನಕ್ಕೇ ಬಿಟ್ಟು–ನಿಮ್ಮ ಮುಂದಿಟ್ಟು ನನ್ನ ಮಾತುಗಳನ್ನು ಮುಗಿಸ್ತೀನಿ. ಅದು ಗಾಂಧಿ ತತ್ವದ ಮತ್ತು ವ್ಯಕ್ತಿತ್ವದ ಬೀಜವಾಕ್ಯ: 'ಮನುಷ್ಯ ದೇವರಾಗುವ ತನಕ ಅವನಿಗೆ ನೆಮ್ಮದಿ ಇಲ್ಲ.' ಅವನು ದೇವರಾಗಬೇಕು ಅಂದ್ರೆ ದೈವಿಕವಾಗೋದು. ಅಂದ್ರೆ ಇಡೀ ಸೃಷ್ಟಿಯೊಂದಿಗೆ ತನ್ನನ್ನು ಗುರುತಿಸಿಕೊಂಡು, ಆ ಹದದಲ್ಲಿ ಬದುಕೋದು.

ಈ ಪ್ರಯತ್ನವನ್ನ ನಮ್ಮ ಜನಪದ ತನ್ನ ಶಿವನ ಕಲ್ಪನೆಯ ಮೂಲಕ, ಶಿವನ ವರ್ಣನೆಯ ಮೂಲಕ, ಶಿವನ ಬದುಕನ್ನು ಚಿತ್ರಿಸುವ ಮೂಲಕ ನಮಗೆ ಕೊಟ್ಟಿದೆ. ಜನಪದದ ಕೇಂದ್ರವೇ ಶಿವ. ಅಂದರೆ ಮನುಷ್ಯ ಶಿವನಾಗದ ಹೊರತು, ಶುಭವಾಗದು ಅಂತ ಜನಪದ ಹೇಳ್ತಿದೆ ಅನ್ನುವ ಸಂಗತಿಯನ್ನು ನಿಮ್ಮ ಗಮನಕ್ಕೆ ತಂದು ನನ್ನ ಮಾತುಗಳನ್ನು ಮುಗಿಸ್ತೇನೆ. ನಮಸ್ಕಾರ.

(ಇದು ಇಳಕಲ್‌ನ ಎಸ.ವಿ.ಎಂ. ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ೨೦೦೯ರ ಆಗಸ್ಟ್ ೧೨ ಹಾಗೂ ೧೩ರಂದು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದ ನೆರವಿನೊಂದಿಗೆ ಆಯೋಜಿಸಿದ್ದ 'ರಾಷ್ಟ್ರೀಯ ಜನಪದ ಸಾಹಿತ್ಯ ಸಮ್ಮೇಳನ'ದ ಗೋಷ್ಠಿಯೊಂದರ ಅಧ್ಯಕ್ಷತೆ ವಹಿಸಿ ಆಡಿದ ಮಾತುಗಳ ಬರಹ ರೂಪ)

■

ಯಂತ್ರಗಳನ್ನು ಕಳಚುವುದು ಇಷ್ಟು ಸುಲಭವಲ್ಲ!

ಒಟ್ಟಿನಲ್ಲಿ ಪ್ರಸನ್ನ ಅವರಿಗೆ ಅನ್ನಿಸಿರುವುದು: 'ಯಂತ್ರ ನಾಗರೀಕತೆಯ ಒಳನಿಂತು ಯಂತ್ರಗಳನ್ನು ತಿರಸ್ಕರಿಸುವುದು ಕಷ್ಟದ ಕೆಲಸವಲ್ಲ. ಯಂತ್ರಗಳ ತಿಪ್ಪೆಯು ನಮ್ಮ ಮುಂದಿದೆ. ತಿಪ್ಪೆಯ ದುರ್ನಾತವು ಮೂಗಿಗೆ ಬಡಿಯುತ್ತಿದೆ. ಯಂತ್ರಗಳ ಕರ್ಕಶ ಕೂಗು ಕಿವಿಗೆ ಬಡಿಯುತ್ತಿದೆ. ಹಾಗಾಗಿ ತಿರಸ್ಕರಿಸಲಿಕ್ಕೆ ಯಾವುದೇ ಸೂಕ್ಷ್ಮಮತಿಯ ಅಗತ್ಯವಿಲ್ಲ. ಗಟ್ಟಿ ಮನಸ್ಸಿನ ನಿರ್ಧಾರದ ಅವಶ್ಯಕತೆಯಿದೆ ಅಷ್ಟೆ'. ಆದರೆ ಪ್ರಶ್ನೆ: ಸೂಕ್ಷ್ಮಮತಿಯ ಅಗತ್ಯವೂ ಇಲ್ಲದ ಈ ನಿರ್ಧಾರವನ್ನು ತೆಗೆದುಕೊಳ್ಳುವ ಗಟ್ಟಿ ಮನಸ್ಸು ಜಗತ್ತಿಗೇಕೆ, ನಿರ್ದಿಷ್ಟವಾಗಿ ಭಾರತಕ್ಕೇಕೆ ಸಾಧ್ಯವಾಗಿಲ್ಲ? ಇದಕ್ಕೆ ಉತ್ತರ, ಯಂತ್ರಗಳನ್ನು ಕಟ್ಟಿದ ರಾಜಕಾರಣದಲ್ಲಿದೆ. ಅದನ್ನು ಪ್ರಸನ್ನ ಬಹು ಸರಳೀಕರಿಸಿ ಮತ್ತು ತಮ್ಮ ಹಳೆಯ ಮಾರ್ಕ್ಸ್‌ವಾದಿ ಕಣ್ಪಟ್ಟಿಯನ್ನು ಬಿಚ್ಚಿಕೊಳ್ಳದೆ ವಿವರಿಸಿಕೊಳ್ಳಲು ಹೋಗಿ ದಾರಿ ತಪ್ಪಿದ್ದಾರೆ.

'ದೇಸಿ ಜೀವನ ಪದ್ಧತಿ' ಎಂಬ ಸರಳ ಹಾಗೂ ಆಸಕ್ತಿದಾಯಕ ಪುಸ್ತಕವನ್ನು ನೀಡಿದ ಪ್ರಸನ್ನ ಈಗ 'ಯಂತ್ರಗಳನ್ನು ಕಳಚೋಣ ಬನ್ನಿ' ಎಂಬ ಕುತೂಹಲದಾಯಕ ಶೀರ್ಷಿಕೆಯ ಪುಸ್ತಕವನ್ನು ಪ್ರಕಟಿಸಿದ್ದಾರೆ. ಈ ಶೀರ್ಷಿಕೆ ಒಂದು ಸಾರ್ವಜನಿಕ ಕರೆಯಂತೆಯೂ ಇದ್ದು, ಅಂತಹ ಕರೆ ನೀಡಲು ಪ್ರಸನ್ನ ಎಲ್ಲ ರೀತಿಯಿಂದಲೂ ಅರ್ಹರೇ ಆಗಿದ್ದಾರೆ. ಅವರು ಭೀಮನಕೋಣೆಯಲ್ಲಿ ಈ ಯಂತ್ರಗಳನ್ನು ಕಳಚುವ ಕೆಲಸವನ್ನೇ ಮಾಡಿ, ಕೈಮಗ್ಗ ಮತ್ತು ಹೊಲಿಗೆ ಮುಂತಾದ ಕೈಕಸಬುಗಳ ಕೇಂದ್ರವೆನಿಸಿದ 'ಚರಕ'ವನ್ನು ಸ್ಥಾಪಿಸಿ ತೋರಿಸಿದ್ದಾರೆ. ಈ ಪ್ರಯೋಗದ ಯಶಸ್ಸಿನ ಹುಮ್ಮಸ್ಸಿನಿಂದಲೋ ಏನೋ, ಯಂತ್ರ ಕಳಚುವ ಚಳುವಳಿಯೊಂದನ್ನು ಆರಂಭಿಸುವ ಅಗತ್ಯವನ್ನು ಈ ಮಸ್ತಕದ ಮೂಲಕ ಪ್ರತಿಪಾದಿಸಲು ಯತ್ನಿಸಿದ್ದಾರೆ. ಅತ್ಯಾಧುನಿಕ ಯಂತ್ರ ಆವಿಷ್ಕಾರಗಳ ಮತ್ತು ಅವುಗಳ ವೈವಿಧ್ಯಮಯ ಮತ್ತು ಮೋಹಕ ಉತ್ಪನ್ನಗಳೇ ಮಾರುಕಟ್ಟೆಯನ್ನು ತುಂಬಿಕೊಂಡಿರುವ ಈ ದಿನಗಳಲ್ಲಿ ಯಂತ್ರಗಳ ವಿರುದ್ಧ ಮಾತಾಡಲು, ಅಪಹಾಸ್ಯಕ್ಕೀಡಾಗುವ ಆತಂಕದ ಮಧ್ಯೆ ಸ್ವಲ್ಪ ಧೈರ್ಯವೂ-ಇದನ್ನು ಭಂಡ

ಧೈರ್ಯವೆಂದೂ ಕರೆಯಬಹುದೇನೋ-ಬೇಕು. ಇಂತಹ ಧೈರ್ಯವನ್ನು ಪ್ರಸನ್ನ ಇಲ್ಲಿ ಪ್ರದರ್ಶಿಸಿದ್ದಾರೆ. ಅದಕ್ಕಾಗಿ ಅವರನ್ನು ಅಭಿನಂದಿಸಬೇಕಾಗಿದೆ.

ಹಾಗೆ ನೋಡಿದರೆ, ಯಂತ್ರ ವಿರೋಧಿ ಆಲೋಚನೆಗಳು, ಮಾತುಗಳು, ಚಳುವಳಿಗಳು ಹೊಸದೇನಲ್ಲ. ಯಂತ್ರಗಳ ಆವಿಷ್ಕಾರದ ಆರಂಭ ಕಾಲದಲ್ಲೇ ಪೂರ್ವ-ಪಶ್ಚಿಮಗಳೆರಡೂ ಕಡೆಯಿಂದ ಅದಕ್ಕೆ ವಿರೋಧ ವ್ಯಕ್ತವಾಯಿತು. ಈ ವಿರೋಧಕ್ಕೆ ಒಂದು ತಾತ್ವಿಕತೆಯ, ಕಾರ್ಯಕ್ರಮದ ರೂಪ ನೀಡಿದವರು ಮಹಾತ್ಮ ಗಾಂಧಿ. ಅವರ ಮೊದಲ ಕೃತಿ 'ಹಿಂದ್ ಸ್ವರಾಜ್' ಮೂಲತಃ ಈ ಯಂತ್ರ ಸಂಸ್ಕೃತಿಯ ಅನಾಹುತಗಳನ್ನು ಕುರಿತ ಎಚ್ಚರಿಕೆಯೇ ಆಗಿದೆ. ಪ್ರಸನ್ನ ಈ ಪುಸ್ತಕದಲ್ಲಿ ಅದನ್ನು ಪ್ರಸ್ತಾಪಿಸುತ್ತಾರೆ. ಅಷ್ಟೇ ಅಲ್ಲ, ಗಾಂಧೀಜಿಯ ವಿರೋಧವಿದ್ದುದು, ಆತಂಕವಿದ್ದುದು, ಯಂತ್ರದ ಪರಿಕಲ್ಪನೆ ಬಗೆಗಲ್ಲ; ಅದು ಒಂದು ನಾಗರೀಕತೆಯ ಸಾಧನವಾಗಿ ಬೆಳೆಯುವ ಬಗೆಗೆ ಎಂಬುದನ್ನೂ ಸೂಚಿಸುತ್ತಾರೆ. ಆದರೂ ಯಂತ್ರಗಳು, ಹೊಸ ಹೊಸ ಯಂತ್ರಗಳು ನಮ್ಮ ಬದುಕನ್ನು ಆಳುತ್ತಿವೆ;ನಮ್ಮ ರಾಜಕಾರಣವನ್ನು ನಿರೂಪಿಸುತ್ತಲೇ ಇವೆ. ಏಕೆ? ಈ ಪ್ರಶ್ನೆಯನ್ನು ಮುಖಾಮುಖಿ ಮಾಡಿಕೊಳ್ಳದ ಯಾವುದೇ ಯಂತ್ರ ವಿರೋಧಿ ವಾದವೂ ಜನರ ಮನಸ್ಸನ್ನು ತಟ್ಟಲಾರದು. ಈ ಪುಸ್ತಕದಲ್ಲಿ ಪ್ರಸನ್ನ ಈ ಯಂತ್ರ ನಾಗರೀಕತೆ ನಮ್ಮನ್ನು ಆವರಿಸುವ ಮುನ್ನ ಭಾರತ ಹೇಗೆ ಕೈಗಾರಿಕೆಯ ವಿಷಯದಲ್ಲಿ ಜಗತ್ತಿನ ಮುಂಚೂಣಿಯಲ್ಲಿತ್ತು ಎಂಬುದನ್ನು ವಿವರಿಸುವುದಲ್ಲದೆ, ಇದರ ಆಗಮನದಿಂದಾಚೆಗೆ ಭಾರತದ ಬದುಕು ಹೇಗೆ ಎಲ್ಲ ವಲಯಗಳಲ್ಲಿ ಹಸೆಗೆಟ್ಟು ಹೋಗಿದೆ ಎಂಬುದನ್ನೂ ಉದಾಹರಣೆಗಳ ಸಹಿತ ವಿಷದೀಕರಿಸುತ್ತಾರೆ. ಕೊನೆಗೆ, ಯಂತ್ರ ನಾಗರೀಕತೆ ಎಂಬುದು ಹೇಗೆ ದೇವರಿಲ್ಲದ ಬದುಕನ್ನು ಸೃಷ್ಟಿಸಿದೆ ಎಂಬುದನ್ನು ನಿರೂಪಿಸುತ್ತಾ, ರಾಮಾಯಣದ ರಾಮನನ್ನು ಕಳೆದುಕೊಂಡುದೇ ಅಥವಾ ವಿರೂಪಗೊಳಿಸಿಕೊಂಡುದುದೇ ನಾವು ಯಂತ್ರ ನಾಗರೀಕತೆಗೆ ಸಿಕ್ಕಿ ಹಾಕಿಕೊಳ್ಳಲು ಕಾರಣವೆಂದು ಹೀಗೆ ಪರೋಕ್ಷವಾಗಿ ಸೂಚಿಸುವವರೆಗೂ ಹೋಗುತ್ತಾರೆ: 'ರಾಮನ ಆದರ್ಶವನ್ನು ಮೆಚ್ಚುವವರು ಯಂತ್ರ ನಾಗರೀಕತೆಯನ್ನು ಒಪ್ಪಿಕೊಳ್ಳುವುದು ಸಾಧ್ಯವಿಲ್ಲ'. (ಪು:೧೬೦). ಈ ಸಂಬಂಧವಾಗಿ ಅವರು ರಾಮಾಯಣವನ್ನು ಅದರ 'ಉತ್ತರ ರಾಮ ಚರಿತೆ'ಯ ಆವೃತ್ತಿಯನ್ನು ನೆಪವಾಗಿರಿಸಿಕೊಂಡು ಚರ್ಚಿಸುತ್ತಾ, ವಿವಾಹ, ಕುಟುಂಬ ಇತ್ಯಾದಿ ಪರಿಕಲ್ಪನೆಗಳ ಬಗ್ಗೆ ತಮ್ಮದೇ ಆದ-ಕೆಲವೊಮ್ಮೆ ಅಸಂಬದ್ಧವೆನಿಸುವ-ವ್ಯಾಖ್ಯಾನಗಳನ್ನೂ ಮತ್ತೆ ಕೆಲವೊಮ್ಮೆ ತಮಾಷೆ ಎನಿಸುವ ಅಭಿಪ್ರಾಯಗಳನ್ನೂ ನೀಡುತ್ತಾ ತಮ್ಮದೇ ಅತಿ ವ್ಯಾಖ್ಯಾನಗಳ ಜಾಲದಲ್ಲಿ ಕಳೆದುಹೋಗಿದ್ದಾರೆ. ಉದಾ: 'ಪರಪುರುಷನ ಬಂಧನದಲ್ಲಿದ್ದ ಮಡದಿಯನ್ನು ಸ್ವೀಕರಿಸಲಿಕ್ಕೆ ಚಕ್ರವರ್ತಿ ರಾಮ ನಿರಾಕರಿಸುತ್ತಾನೆ...... ಒಂದು ಹೆಣ್ಣನ್ನು, ಒಂದೇ ಹೆಣ್ಣನ್ನು ಪ್ರೀತಿಸಿದ ಗಂಡು ನಡೆದುಕೊಳ್ಳುವ ರೀತಿಯದು. ಒಪ್ಪಲಾರದ ನಡವಳಿಕೆ. ಆದರೆ ಸಹಜ ನಡವಳಿಕೆ.' (ಪು:೧೭೩); 'ವೈಯುಕ್ತಿಕ ಉದಾಹರಣೆಯ ಮೂಲಕ ಸಮಾಜವನ್ನು ಬದಲು ಮಾಡಹೊರಟವನು ರಾಮ. ಅವನು ಬದಲಾಗಿದ್ದಾನೆ.

ಆದರೆ ಸಮಾಜ ಬದಲಾಗಿಲ್ಲ. ಮಿಕ್ಕವರೇಕೆ, ರಾಮನ ತಂದೆಯೇ ಬದಲಾಗಿಲ್ಲ. ಹಲವು ಪತ್ನಿಯರನ್ನು ಹೊಂದಿದವನು ತಾನೇ ದಶರಥ!' (ಪು:೧೭೪); 'ರಾಮನ ಪಡೆಯಲ್ಲಿ ರಾಮ ಹಾಗೂ ಅವನ ತಮ್ಮ ಲಕ್ಷ್ಮಣನನ್ನು ಬಿಟ್ಟರೆ, ಮಿಕ್ಕವರಾರೂ ಮಾನವರಲ್ಲ, ಸಸ್ಯಾಹಾರಿ ಕಾಡುಪ್ರಾಣಿಗಳು! ಅಹಿಂಸೆಯ ಆತ್ಯಂತಿಕ ಪ್ರತೀಕವಿದು. ರಾಮನ ಕಡೆಯಿರುವ ಏಕ ಮಾತ್ರ ಮಾಂಸಾಹಾರಿ ಪ್ರಾಣಿ ಜಟಾಯು ಸಹಿತ ಮುದಿಯಾಗಿರುವುದರಿಂದ, ಬೇಟೆಯಾಡದ ಹದ್ದು, ಹಾಗಾಗಿ ಮಾಂಸಾಹಾರಿಯಲ್ಲ.'(ಪು:೧೯೩): 'ರಾಮ ಕ್ಷತ್ರಿಯ. ರಾವಣನನ್ನು ಸೋಲಿಸಲು ಅವನು ಸೈನಿಕರನ್ನು ಸಂಘಟಿಸಬಹುದಿತ್ತು;ಭರತನ ನೆರವು ಯಾಚಿಸಬಹುದಿತ್ತು. ಆದರೆ ಅವನು ಹಾಗೆ ಮಾಡಲಿಲ್ಲ.' (ಪು:೧೭೭) ಇತ್ಯಾದಿ

ರಾಮಾಯಣ ಕುರಿತ ಇಂತಹ ಚರ್ಚೆಯ ಮೂಲಕ ಇಂದಿನ ಕೋಮು ರಾಜಕಾರಣದವರೆಗೂ ತಮ್ಮ ಯಂತ್ರ ವಿರೋಧಿ ಸಂಕಥನವನ್ನು ಹಬ್ಬಿಸಲು ಯತ್ನಿಸಿರುವ ಲೇಖಕರು, ಇದಕ್ಕೆ ಪೂರಕವಾಗಿ ಐರೋಪ್ಯ ಪುನರುಜ್ಜೀವನ ಯುಗದಿಂದಾಚೆಗೆ ನಡೆದ ಎಲ್ಲ ಸಾಮಾಜಿಕ-ಸಾಂಸ್ಕೃತಿಕ-ರಾಜಕೀಯ ಬೆಳವಣಿಗೆಗಳ ಸಮೀಕ್ಷೆ ಮಾಡುವ ಭರದಲ್ಲಿ ಅಲ್ಲಲ್ಲಿ ಗಾಬರಿ ಹುಟ್ಟಿಸುವಂತಹ, ಪರಸ್ಪರ ಸಂಬಂಧವಿಲ್ಲದ ದಪ್ಪ ದಪ್ಪನಾದ ಹೇಳಿಕೆಗಳನ್ನೂ, ತೀರ್ಮಾನಗಳನ್ನೂ ದಾಖಲಿಸುತ್ತಾ ಹೋಗುತ್ತಾರೆ. ಉದಾ: 'ಅಲ್ ಖೈದ, ಭಜರಂಗ ದಳ. ಕೂಕ್ಲುಕ್ಸ್‌ಕ್ಲ್ಯಾನ್... ಇತ್ಯಾದಿ ಅನೇಕ ಸಂಘಟನೆಗಳು ಯಂತ್ರ ನಾಗರೀಕತೆಗೆ ಪ್ರತಿಕ್ರಿಯೆಯಾಗಿ ಬಂದವುಗಳು.' (ಪು:೪೨), 'ಬಡವರು ನಗರಗಳಿಗೆ ಗುಳೇ ಹೋಗುವುದು ಬಡತನದ ಕಾರಣಕ್ಕಾಗಿ ಮಾತ್ರವೇ ಅಲ್ಲ, ಹಳ್ಳಿಗಳೆಂಬ ದುಸ್ಸಹ ಸಾಮಾಜಿಕ ಸಂದರ್ಭವನ್ನು ಮೀರಲಿಕ್ಕಾಗಿಯೂ ಹೌದು. ದಲಿತರು ಮಾತೃಭಾಷೆಗಳ ಜೊತೆಗೆ ಇಂಗ್ಲಿಷ್ ಭಾಷೆಯನ್ನೂ ಕಲಿಯಬಯಸುತ್ತಿದ್ದಾರೆ ಎಂಬ ಅರಿವಾಗಿದೆ ನಮಗೆ' (ಪು: ೩೪), 'ಆರಂಭದ ಒಂದು ಶತಮಾನ ಅತ್ಯಂತ ಸ್ನೇಹಿಯೂ ಸಹಿಷ್ಣುವೂ ಆಗಿದ್ದ ಇಸ್ಲಾಂ ಧರ್ಮವು ಸಹಜವಾಗಿಯೇ ಕೆಳವರ್ಗದ ಜನರನ್ನು ಆಕರ್ಷಿಸಿತು. ಆದರೆ ನಿಧಾನವಾಗಿ ಅದು ಅಸಹಿಷ್ಣುವೂ, ಬಲವಂತ ಹೇರುವ ಧರ್ಮವೂ ಆಗಿ ಪರಿವರ್ತಿತವಾಯಿತು ಎನ್ನುವುದೂ ಸತ್ಯವೇ. ಮುಸಲ್ಮಾನ ದೊರೆಗಳು ನಮ್ಮಲ್ಲಿ ರಾಜ್ಯವಾಳಿದ್ದು ನಂತರದಲ್ಲಿ.' (ಪು:೧೪೧), '.....ಅಪ್ಪಟ ಸೈತಾನನ್ನು ಸೃಷ್ಟಿಸುವುದು ಭಾರತೀಯರಿಗೆ ಒಪ್ಪಿಗೆಯಿಲ್ಲ. ರಾವಣ, ದುರ್ಯೋಧನ, ಭರತ... ಯಾರೂ ಸೈತಾನರಲ್ಲ...'(ಪು:೧೯೩) ಇತ್ಯಾದಿ!

ಈ ಎಲ್ಲ ಗೋಜಲುಗಳ ಮಧ್ಯೆ, ಒಟ್ಟಿನಲ್ಲಿ ಅವರಿಗೆ ಅನ್ನಿಸಿರುವುದು: 'ಯಂತ್ರ ನಾಗರೀಕತೆಯ ಒಳನಿಂತು ಯಂತ್ರಗಳನ್ನು ತಿರಸ್ಕರಿಸುವುದು ಕಷ್ಟದ ಕೆಲಸವಲ್ಲ. ಯಂತ್ರಗಳ ತಿಪ್ಪೆಯು ನಮ್ಮ ಮುಂದಿದೆ. ತಿಪ್ಪೆಯ ದುರ್ನಾತವು ಮೂಗಿಗೆ ಬಡಿಯುತ್ತಿದೆ. ಯಂತ್ರಗಳ ಕರ್ಕಶ ಕೂಗು ಕಿವಿಗೆ ಬಡಿಯುತ್ತಿದೆ. ಹಾಗಾಗಿ ತಿರಸ್ಕರಿಸಲಿಕ್ಕೆ ಯಾವುದೇ ಸೂಕ್ಷ್ಮಮತಿಯ ಅಗತ್ಯವಿಲ್ಲ. ಗಟ್ಟಿ ಮನಸ್ಸಿನ ನಿರ್ಧಾರದ ಅವಶ್ಯಕತೆಯಿದೆ ಅಷ್ಟೆ' (ಪು:೧೬೫). ಆದರೆ

ಪ್ರಶ್ನೆ: ಸೂಕ್ಷ್ಮಮತಿಯ ಅಗತ್ಯವೂ ಇಲ್ಲದ ಈ ನಿರ್ಧಾರವನ್ನು ತೆಗೆದುಕೊಳ್ಳುವ ಗಟ್ಟಿ ಮನಸ್ಸು ಜಗತ್ತಿಗೇಕೆ, ನಿರ್ದಿಷ್ಟವಾಗಿ ಭಾರತಕ್ಕೇಕೆ ಸಾಧ್ಯವಾಗಿಲ್ಲ? ಇದಕ್ಕೆ ಉತ್ತರ, ಯಂತ್ರಗಳನ್ನು ಕಟ್ಟಿದ ರಾಜಕಾರಣದಲ್ಲಿದೆ. ಅದನ್ನು ಪ್ರಸನ್ನ ಬಹು ಸರಳೀಕರಿಸಿ ಮತ್ತು ತಮ್ಮ ಹಳೆಯ ಮಾರ್ಕ್ಸ್‌ವಾದಿ ಕಣ್ಪಟ್ಟಿಯನ್ನು ಬಿಚ್ಚಿಕೊಳ್ಳದೆ ವಿವರಿಸಿಕೊಳ್ಳಲು ಹೋಗಿ ದಾರಿ ತಪ್ಪಿದ್ದಾರೆ. ಹಾಗಾಗಿಯೇ ಅವರು ಯಂತ್ರ ನಾಗರೀಕತೆಯ ವೈರುಧ್ಯಗಳನ್ನು ವಿವರಿಸಲು, ಚಿತ್ರಗಳೂ, ಸಾಹಿತ್ಯ ಕೃತಿಗಳೂ ಸೇರಿದಂತೆ ಬಹುವಾಗಿ ಐರೋಪ್ಯ ಉದಾಹರಣೆಗಳನ್ನೇ ಅವಲಂಬಿಸಿದ್ದಾರೆ. ಇಂತಹ ವಿವರಣೆಯ ಪರಿಣಾಮವಾಗಿ, ಯಂತ್ರ ನಾಗರೀಕತೆ ಸೃಷ್ಟಿಸಿದ ಸಮಾನತೆಯ ಆಶಯ ಹಾಳಾಗಲು ಕಾರ್ಮಿಕ ಪ್ರಭುಗಳು (ಅಂದರೆ ಕಮ್ಯೂನಿಸ್ಟ್ ಪ್ರಭುತ್ವಗಳು) ಐಶಾರಾಮಿ ಜೀವನದಿಂದ ಆಕರ್ಷಿತರಾಗಿ ಪ್ರಭುತ್ವ ನಿರ್ವಹಣೆಯಲ್ಲಿ ಸೋತಿದ್ದೇ ಕಾರಣವೆಂಬ ಸುಲಭ ಉತ್ತರವನ್ನು ಕಂಡುಕೊಂಡಿದ್ದಾರೆ (ಪು:೩೮–೩೯).

ಇದು ಸುಲಭ ಉತ್ತರ ಏಕೆಂದರೆ, ಈ ಸಮಾನತೆಯ ಆಶಯವನ್ನು ವೈಜ್ಞಾನಿಕವಾಗಿ ನಿರೂಪಿಸಿ ಎತ್ತಿ ಹಿಡಿದ ಸಿದ್ಧಾಂತಗಳೇಕೆ ಈ ಅಪಾಯವನ್ನು ಮುನ್ನೋಡಲಾಗಲಿಲ್ಲ ಎಂಬ ಪ್ರಶ್ನೆಯನ್ನು ಇದು ಎದುರಿಸಿಲ್ಲವಾದ್ದರಿಂದ. ಯಂತ್ರಗಳನ್ನು ವಶ ಪಡಿಸಿಕೊಂಡ ಹೊಸ ವರ್ಗ, ಯಾವ ಯಂತ್ರಗಳು ಇವರ ಶೋಷಣೆಗೆ ಕಾರಣವಾಗಿದ್ದವೋ ಆ ಶೋಷಣೆ ಮುಂದುವರೆಯದಂತೆ ಆ ಯಂತ್ರಗಳ ತತ್ವವನ್ನು ಬದಲಾಯಿಸದಿದ್ದುದೇ; ಆ ವರ್ಗದ ಪ್ರಭುತ್ವದ (ಅಂದರೆ ಕಮ್ಯೂನಿಸ್ಟ್ ಆಳ್ವಿಕೆಗಳ) ಅವನತಿಗೆ–ಸಮಾನತೆಯ ಆಶಯದ ಸಾಧನೆಯ ವೈಫಲ್ಯಕ್ಕೆ–ಕಾರಣವಾಯಿತೆಂಬುದನ್ನು ಲೇಖಕರು ಗುರುತಿಸಲು ನಿರಾಕರಿಸಿದ್ದಾರೆ. ಹಾಗಾಗಿಯೇ ಅವರು ತಮ್ಮ ಮುನ್ನುಡಿಯಲ್ಲಿ, 'ಒಟ್ಟಾರೆಯಾಗಿ ಗ್ರಾಮ ಜೀವನದ ಬಗ್ಗೆಯೇ ಬಡವರಿಗೆ ಅನುಮಾನಗಳಿವೆ. ಯಂತ್ರ ನಾಗರೀಕತೆ ಹಾಗೂ ನಗರ ಸಂಸ್ಕೃತಿಯು ನಮ್ಮೆಲ್ಲ ಪರಂಪರೆಗಳಿಗಿಂತಲೂ ಹೆಚ್ಚು ಪ್ರಜಾಸತ್ತಾತ್ಮಕವಾದುದೆಂದು ಬಡವರು ನಂಬುತ್ತಾರೆ.... ಯಂತ್ರ ನಾಗರೀಕತೆಯು ಒಳತಂದ ವೈಚಾರಿಕ ಕ್ರಾಂತಿಯನ್ನು ತಿರಸ್ಕರಿಸದೆ, ತಂತ್ರಜ್ಞಾನದ ಕಸ ಹಾಗೂ ಅನೈತಿಕತೆಗಳನ್ನು ತಿರಸ್ಕರಿಸಬಯಸುತ್ತದೆ ಇಲ್ಲಿನ ವಿಚಾರಗಳು' ಎಂದು ತಮ್ಮ ಪುಸ್ತಕವನ್ನು, ಬಡವರು ಮತ್ತು ಯಂತ್ರ ನಾಗರೀಕತೆ ಕುರಿತು ಅರ್ಧ ಸತ್ಯಗಳನ್ನಷ್ಟೇ ಹೇಳುತ್ತಾ ಸಮರ್ಥಿಸಿಕೊಳ್ಳಲು ಯತ್ನಿಸಿದ್ದಾರೆ.

ಪ್ರಸನ್ನ ಯೂರೋಪಿನ ಸಮಾಜವಾದಿಗಳ ಬಗ್ಗೆ ಮಾತನಾಡುತ್ತಾರೆ. ಆದರೆ ಷೂಮೇಕರ್‌ರಿಂದ ಆರಂಭವಾದ 'ಸಣ್ಣದು ಸುಂದರ' ('Small is Beautiful') ಪರಿಕಲ್ಪನೆ ಮತ್ತು ಚಳುವಳಿಯ ಪ್ರಸ್ತಾಪವನ್ನೂ ಮಾಡದೆ, ಅವರೆಲ್ಲ ಯಂತ್ರಗಳ ವಕ್ತಾರರೇ ಆಗಿದ್ದರೆಂದು ಆರಾಮವಾಗಿ ಘೋಷಿಸುತ್ತಾರೆ! ದಾಖಲೆಯ ದೃಷ್ಟಿಯಿಂದ ಇದು ಸಣ್ಣ ಅಪರಾಧವೇನೂ ಅಲ್ಲ. ಇನ್ನು ಯಂತ್ರಗಳನ್ನು ಕುರಿತಂತೆ ಭಾರತದ ಸಮಾಜವಾದಿಗಳ ನಿಲುವೇನಾಗಿತ್ತು ಎಂಬುದರ ಬಗ್ಗೆ ಸಣ್ಣ ಮಾಹಿತಿಯನ್ನೂ ನೀಡದೆ,

ಅವರು ತಮ್ಮ ಯಂತ್ರ ವಿರೋಧಿ ಪ್ರಚಾರದ ಗಾಡಿಯನ್ನು ಹೊಡಕೊಂಡು ಹೋಗಿದ್ದಾರೆ. ಇದು ಉದ್ದೇಶಪೂರ್ವಕವೋ, ಮಾಹಿತಿಯ ಕೊರತೆಯೋ ತಿಳಿಯದು. ಮಾಹಿತಿಯ ಕೊರತೆಯೇ ಆಗಿದ್ದರೆ, ಅದು ಅಕ್ಷಮ್ಯವೇ ಸರಿ. ಏಕೆಂದರೆ, ಯಂತ್ರ ನಾಗರೀಕತೆ ಕುರಿತು ಇಷ್ಟು ದೊಡ್ಡ ಮತ್ತು ಮಹತ್ವಾಕಾಂಕ್ಷೆಯ ಪುಸ್ತಕ ಬರಯಹೊರಡುವವರು, ತಾವು ಬರೆಯ ಹೊರಟಿರುವ ವಿಷಯದ ಬಗ್ಗೆ ಸಮಗ್ರ-ಅದೂ ಎಡಪಂಥೀಯ ಚಳುವಳಿಯೊಂದಿಗೆ ದೀರ್ಘಕಾಲ ಗುರುತಿಸಿಕೊಂಡಿದ್ದವರು ಗಮನಿಸಲೇ ಬೇಕಾಗಿದ್ದಂತಹ-ಮಾಹಿತಿಯನ್ನು ಸಂಗ್ರಹಿಸಿಕೊಳ್ಳಬೇಕಾದ ಜವಾಬ್ದಾರಿಯನ್ನೂ ಹೊಂದಿರಬೇಕಾಗುತ್ತದೆ. ನಾನು ಈ ಮಾತನ್ನು ಇಷ್ಟು ಚೂಪಾಗಿ ಹೇಳುವ ಅಗತ್ಯವೇನೆಂದರೆ, ಯಂತ್ರ ನಾಗರೀಕತೆ ಕುರಿತಂತೆ ಗಾಂಧೀಜಿ ನಂತರ ಅತ್ಯಂತ ಮುಖ್ಯ ವ್ಯಾಖ್ಯಾನಗಳನ್ನು ಮಾಡಿದ್ದು, ರಾಜಕೀಯ ಕಾರ್ಯಕ್ರಮಗಳನ್ನು ರೂಪಿಸಿದ್ದು ಭಾರತೀಯ ಸಮಾಜವಾದಿ ಚಳುವಳಿಯೇ. ವಿಶೇಷವಾಗಿ ಲೋಹಿಯಾ ವಿಚಾರ ಧಾರೆ. ಪ್ರಸನ್ನ ಅವರ ಈ ಪುಸ್ತಕದ ಓದಿನ ಸಂದರ್ಭದಲ್ಲಿ ಅದನ್ನು ವಿಸ್ತಾರವಾಗಿ ಪರಿಚಯಿಸುವುದು ಅನುಚಿತವಾದರೂ, ಅದರ ಮುಖ್ಯ ಆಶಯವನ್ನು ಹೇಳುವುದು ಅನಿವಾರ್ಯವಾಗಿದೆ.

ಭಾರತೀಯ ಸಮಾಜವಾದ ಗಾಂಧೀಜಿಯಂತೆ ಯಂತ್ರವನ್ನು 'ಶತ್ರು'ವಿನಂತೆ ನೋಡದೆ (ಗಾಂಧಿ ಯಂತ್ರಾಧಾರಿತ ಆಧುನಿಕ ನಾಗರೀಕತೆಯನ್ನು 'ರೋಗ' ಎಂದು ಕರೆದಿದ್ದರು), ಅದನ್ನು 'ಮಿತ್ರ'ನನ್ನಾಗಿ ಮಾಡಿಕೊಳ್ಳುವ ಉಪಾಯಗಳನ್ನು ಯೋಚಿಸಿತು. ಏಕೆಂದರೆ, ಯಂತ್ರ ಹೊಸ ಕಾಲದ ಮನುಷ್ಯನ ಅನೇಕ ಸಹಜ ಆಸೆ-ಆಕಾಂಕ್ಷೆಗಳ ಪ್ರತೀಕವೂ ಆಗಿತ್ತು. ಸಮಾಜವಾದದ ಮೂಲ ಆಶಯವಾದ ಸಮಾನತೆಯ ಸಾಮಾಜಿಕ ಸಾಕ್ಷಾತ್ಕಾರಕ್ಕಾಗಿ ಯಂತ್ರವೂ ಉತ್ಪಾದನೆಯ ವೇಗ ಮತ್ತು ಹೆಚ್ಚಳಗಳ ಒಂದು ಸಾಧನವಾಗಬಲ್ಲುದು ಎಂದು ಅವರು ಭಾವಿಸಿದ್ದರು. ಆದರೆ ಯಂತ್ರದ ಆವಿಷ್ಕಾರ ವಸಾಹತುಶಾಹಿಗೂ ಕಾರಣವಾಗಿ, ಜಗತ್ತನ್ನು ಅತಿ ಸಮೃದ್ಧಿ ಮತ್ತು ಅತಿ ದಾರಿದ್ರ್ಯಗಳ ಎರಡು ಖಂಡಗಳನ್ನಾಗಿ ಒಡೆದಿದ್ದುದನ್ನೂ ಅವರು ಗಮನಿಸಿದ್ದರು. ಹಾಗಾಗಿ ಈ ಎರಡು ಖಂಡಗಳ ನಡುವಣ ಕಂದಕವನ್ನು ಮುಚ್ಚಬಲ್ಲ ಸಮಾನೀಕರಣದ ಯಂತ್ರ ತತ್ವಕ್ಕಾಗಿ ಅವರು ಹುಡುಕಾಡಿದರು. ಲೋಹಿಯಾ ಪ್ರತಿಪಾದಿಸಿದ ಸ್ಥಳೀಯ ಅಗತ್ಯ, ಸ್ಥಳೀಯ ಬಂಡವಾಳ ಮತ್ತು ಸ್ಥಳೀಯ ನಿರ್ವಹಣೆಗಳನ್ನಾಧರಿಸಿದ ತೈಲ ಅಥವಾ ವಿದ್ಯುತ್ ಚಾಲಿತ ಯಂತ್ರಗಳ ಕಲ್ಪನೆ ಈ ಹುಡುಕಾಟದ ಒಂದು ಫಲ. ಇದನ್ನು ಲೋಹಿಯಾ ಸಣ್ಣ ಘಟಕಗಳ ಯಂತ್ರ (Small unit machine) ಎಂದು ಕರೆದರು. ಇದಕ್ಕಾಗಿ ಭಾರತದಲ್ಲಿ ಬೃಹತ್ ತಂತ್ರಜ್ಞಾನಕ್ಕೆ ಬದಲಾಗಿ ಮಧ್ಯಸ್ಥ ತಂತ್ರಜ್ಞಾನ (Intermediate Technology)ದ ಕ್ಷೇತ್ರದಲ್ಲಿ ಸಂಶೋಧನೆಯ ಕೆಲಸಗಳಾಗಬೇಕು; ಭಾರತಕ್ಕೆ ಅದೇ ಬಿಡುಗಡೆಯ ದಾರಿ ಎಂದು ಸೂಚಿಸಿದರು. ಇದರ ವಿಕಸಿತ ರೂಪವೇ ಇಂದು ಐರೋಪ್ಯ ದೇಶಗಳಲ್ಲಿ ಸುಸಂಗತ ತಂತ್ರಜ್ಞಾನ (Appropriate techonolgy)ದ

ಹೆಸರಿನಲ್ಲಿ ಪರಿಸರಸ್ನೇಹಿ ಯಂತ್ರಗಳ ತಯಾರಿಕೆಗೆ ಸ್ಫೂರ್ತಿಯಾಗಿರುವುದು.

ಅದೇನೇ ಇರಲಿ, ಇದು ಗಾಂಧಿಯ ಖಾದಿ–ಗ್ರಾಮೋದ್ಯೋಗ ಕೈಗಾರಿಕೆಗಳ ಕಲ್ಪನೆಯನ್ನು ಆಧುನೀಕರಿಸುವ ದೇಸೀ ಪ್ರಯತ್ನವೇ ಆಗಿತ್ತು. ಹಾಗಾಗಿಯೇ ಲೋಹಿಯಾ ಗಾಂಧೀಜಿಯ ಆದರ್ಶವಾದಿ 'ಗ್ರಾಮ ಸ್ವರಾಜ್ಯ'ದ ಬದಲಿಗೆ ಅದರ ವಾಸ್ತವವಾದಿ ಪರಿಷ್ಕರಣೆಯಂತಿದ್ದ ಚತುಸ್ತಂಭ(ನಾಲ್ಕು ಹಂತಗಳಲ್ಲಿ ಅಧಿಕಾರ ವಿಕೇಂದ್ರೀಕರಣಗೊಂಡ) ರಾಷ್ಟ್ರದ ಕಲ್ಪನೆ ಮಂಡಿಸಿದರು.(ಇದರ ವಿಸ್ತರಣೆಯಾಗಿಯೇ ಅವರು ವಿಶ್ವ ಸರ್ಕಾರದ ಕಲ್ಪನೆಯನ್ನೂ ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಮಂಡಿಸಿದ್ದು) ಇವುಗಳ ಜೊತೆಗೆ ಜಾತಿ ವಿನಾಶ ಹಾಗೂ ಇಂಗ್ಲಿಷ್ ತೊಲಗಿಸಿ ಅಥವಾ ಭಾರತೀಯ ಭಾಷಾ ಆಂದೋಲನಗಳನ್ನು ಬೆಸೆದರು. ಇಂತಹ ಬಹುಮುಖಿ ರಾಜಕಾರಣ ಮಾತ್ರ ಯಂತ್ರವೇ ಒಂದು ಒಂದು ನಾಗರೀಕತೆಯನ್ನು ರೂಪಿಸಿ ಉಂಟುಮಾಡಬಹುದಾದ ಅನಾಹುತಗಳನ್ನು ತಡೆಯಬಹುದೆಂದು ಅವರು ಭಾವಿಸಿದರು. ಇದೊಂದು ರೀತಿಯ ಪರಸ್ಪರ ಆಂತರಿಕ ನಿಯಂತ್ರಣಗಳುಳ್ಳ (ರಾಜಕೀಯ)ವ್ಯವಸ್ಥೆ. ಇದಕ್ಕೆ ಇನ್ನೊಂದು ಹೆಸರಷ್ಟೇ ಭಾರತೀಯ ಸಮಾಜವಾದ ಎಂಬುದು.

ಈ ವ್ಯವಸ್ಥೆ, ಲೋಹಿಯಾ ಚಳುವಳಿಯಂತೆಯೇ, ಕಳೆದ ಶತಮಾನದ ಎಪ್ಪತ್ತರ ದಶಕದ ಜನತಾ ಸರ್ಕಾರದ ಕಾಲದಲ್ಲಿ ಕರ್ಪೂರಿ ಠಾಕೂರ್ ಬಿಹಾರದ ಮುಖ್ಯಮಂತ್ರಿಯಾಗಿ ಆರಂಭಿಸಿದ ಕೃಷಿ ಕೈಗಾರಿಕಾ ಅಭಿವೃದ್ಧಿ ಕಾರ್ಯಕ್ರಮ ಮತ್ತು ಜಾರ್ಜ್ ಫರ್ನಾಂಡೀಸ್ ಕೇಂದ್ರದ ಕೈಗಾರಿಕಾ ಮಂತ್ರಿಯಾಗಿ ಆರಂಭಿಸಿದ ಜಿಲ್ಲಾ ಕೈಗಾರಿಕಾ ಕೇಂದ್ರಗಳ ರೂಪದಲ್ಲಿ ನಡೆದ ಕೆಲವು ಪ್ರಯತ್ನಗಳ ಹೊರತಾಗಿ, ಪ್ರಾಯೋಗಿಕ ಯಶಸ್ಸನ್ನು ಕಾಣಲಿಲ್ಲ. ಹಾಗೆ ನೋಡಿದರೆ, ಗಾಂಧಿಜಿಯ ಯಂತ್ರ ವಿರೋಧಿ ಚಳುವಳಿಯಾಗಲೀ, ಅದರ ಆಧಾರವೆನಿಸಿದ ಗ್ರಾಮ ಸ್ವರಾಜ್ಯ ಚಳುವಳಿಯಗಲೀ ಎಲ್ಲಿ, ಎಷ್ಟು ಯಶಸ್ಸು ಕಂಡಿದೆ? ಹಾಗಾಗಿ ನಾವು ಯಂತ್ರಗಳನ್ನು ಕಳಚಬೇಕೆಂದು ಹೊರಟಾಗ ಭಾರತೀಯ ಸಮಾಜವಾದದ ಈ ತಾತ್ವಿಕ ಕೊಡುಗೆಯನ್ನೂ, ಸಂಬಂಧಿತ ರಾಜಕೀಯ ಕಾರ್ಯಕ್ರಮಗಳನ್ನೂ ನಿರ್ಲಕ್ಷಿಸಿ ಮುಂದೆ ಹೋಗುವಂತೆಯೇ ಇಲ್ಲ. ಏಕೆಂದರೆ, ಈ ಚಳುವಳಿ ಪ್ರಸನ್ನರ ಯಂತ್ರಗಳನ್ನು ಕಳಚುವ ಅಸಾಧ್ಯವೆನ್ನಿಸುವ ಗುರಿಗೆ ಹೋಲಿಸಿದರೆ, ಅವನ್ನು ಮನರ್ರೂಪಿಸುವ, ಪಳಗಿಸುವ ಕಷ್ಟ ಸಾಧ್ಯ ಮತ್ತು ಸೃಜನಶೀಲ ಸಾಹಸದ ಮಾರ್ಗವನ್ನು ಪ್ರತಿಪಾದಿಸುತ್ತದೆ.

ಆದರೆ ಪ್ರಸನ್ನ ತಮ್ಮ ಈ ಪುಸ್ತಕದಲ್ಲಿ ಏನೆಲ್ಲ ಚರ್ಚಿಸಿ, ಯಂತ್ರ ನಾಗರೀಕತೆಯ ವಿರುದ್ಧದ ಆಂದೋಲನದಲ್ಲಿನ ಈ ಒಂದು ಸೃಜನಶೀಲ ಅಧ್ಯಾಯವನ್ನೇ ಕೈಬಿಟ್ಟು, ತಮ್ಮ ನೆರವಿಗಾಗಿ ದೇವರು, ಧರ್ಮ, ಜಾತಿಗಳನ್ನೆಲ್ಲ ಎಳೆದು ತಂದು ಎಲ್ಲರನ್ನೂ ಓಲೈಸುವ ಅನಗತ್ಯ ಕಸರತ್ತಿಗೆ ಕೈ ಹಾಕಿದ್ದಾರೆ. ಹಾಗಾಗಿಯೇ ಅವರು ಪುಸ್ತಕದ ಆರಂಭದಲ್ಲಿ ಮಿಶ್ರ ಆರ್ಥಿಕ ನೀತಿಯ ಪ್ರಯೋಜನಗಳನ್ನು 'ಸಹಬಾಳ್ವೆ'ಯ ಹೆಸರಲ್ಲಿ ಗುರುತಿಸಿದವರು, ಪುಸ್ತಕದ ಮಧ್ಯಭಾಗಕ್ಕೆ ಬರುವ ಹೊತ್ತಿಗೆ ಅದನ್ನು ಆರ್ಥಿಕ

ದೊಂಬರಾಟ ಎಂದು ಕರೆಯುವ ತರ್ಕದಲ್ಲಿ ಸಿಕ್ಕಿ ಹಾಕಿಕೊಳ್ಳುತ್ತಾರೆ (ಪು:೧೨೭). ಹಾಗೇ, ಪಟ್ಟಣಿಗರು ತಾವು ಕೊಳ್ಳಲೇ ಬೇಕಾದ್ದನ್ನೆಲ್ಲ ಗ್ರಾಮ ಕೈಗಾರಿಕೆಗಳಿಂದಲೇ ಕೊಳ್ಳಬಹುದಲ್ಲವೇ ಎಂದು ಕೇಳುವ ಹುಂಬತನವನ್ನು ಪ್ರದರ್ಶಿಸುತ್ತಾರೆ(ಪು:೧೫೧). ಪಟ್ಟಣಿಗರು ತಮಗೆ ಬೇಕಾದ್ದನ್ನೆಲ್ಲ ಹಳ್ಳಿಯವರಿಂದಲೇ ಪಡೆಯುವಂತಾದರೆ, ಪಟ್ಟಣಿಗರ ಆರ್ಥಿಕ ಚಟುವಟಿಕೆ ಅಂದರೆ ಉತ್ಪಾದನೆ ಯಾರಿಗಾಗಿ ನಡೆಯಬೇಕು? ಪ್ರಸನ್ನರೇನಾದರೂ ಪಟ್ಟಣಿಗರು ಎಂದರೆ ನೋಟು ಮತ್ತು ನಾಣ್ಯಗಳ ತಯಾರಕರಷ್ಟೇ ಎಂದು ಭಾವಿಸಿದ್ದಾರೋ?

ಹೀಗೆ ಇವರ ಚಿಂತನೆ, ಉತ್ಪಾದನೆಯ ಈ ನೆಲೆಯ(ಹಳ್ಳಿ-ಪಟ್ಟಣಗಳ) ಒಡಕನ್ನು ನಿವಾರಿಸಿಕೊಳ್ಳುವ ಮಾರ್ಗಗಳ ಗೋಜಿಗೇ ಹೋಗದಿರುವುದರಿಂದ ಇವರು ಯಂತ್ರಗಳನ್ನು ಕಳಚುವುದು ಸುಲಭ, ಅದಕ್ಕೆ ಗಟ್ಟಿ ಮನಸ್ಸು ಬೇಕಷ್ಟೆ ಎಂಬ ಸರಳ ತೀರ್ಮಾನಕ್ಕೆ ಬರುತ್ತಾರೆ. ಹಾಗೆ ನೋಡಿದರೆ ಪ್ರಸನ್ನರ 'ಚರಕ' ನಿಂತಿರುವುದೇ ಈ ಒಡಕಿನ ಪ್ರಯೋಜನ ಪಡೆದೇ; ಯಂತ್ರ ಸಂಸ್ಕೃತಿಯ ಬದುಕಿನಲ್ಲಿ ಹುಟ್ಟುವ ಪಟ್ಟಣಿಗರ ಹೆಚ್ಚುವರಿ ಕೊಳ್ಳುವ ಶಕ್ತಿಯ ಮೇಲೇ. ಹಾಗಾಗಿ, ಯಂತ್ರಗಳನ್ನು ಕಳಚೋಣ ಆಂದೋಲನದ ಮೂಲಕ ಪಟ್ಟಣಿಗರಿಗೇಕೆ ಹೆಚ್ಚುವರಿ ಕೊಳ್ಳುವ ಶಕ್ತಿ ಎಂದು ಕೇಳಿದೊಡನೆ, 'ಚರಕ' ತಿರುಗುವುದು ನಿಂತು ಹೋದೀತು ಎಂಬ ಅರಿವು ಪ್ರಸನ್ನರಿಗಿದೆ ಎಂದು ನಾನು ಭಾವಿಸಿದ್ದೇನೆ.

ಪ್ರಸನ್ನರ 'ದೇಸಿ ಜೀವನ ಪದ್ಧತಿ' ಸಹಜ ಸರಳ ನಡಿಗೆಯಂತಿದ್ದರೆ, ಈ ಪುಸ್ತಕ ಮಾತ್ರ ಯಾವುದೋ ಅವಸರದ ತಾರಾಟದಂತಿದೆ.

ಪುಸ್ತಕ : **ಯಂತ್ರಗಳನ್ನು ಕಳಚೋಣ ಬನ್ನಿ**

ಲೇ : **ಪ್ರಸನ್ನ ಪು: ೨೩೫ ಬೆಲೆ: ರೂ. ೧೪೦/-**

ಪ್ರ : **ಒಂಟಿದನಿ ಪ್ರಕಾಶನ, ಕವಿಕಾವ್ಯ ಟ್ರಸ್ಟ್,**
ಹೆಗ್ಗೋಡು- ೫೭೭೪೧೭ (ಸಾಗರ ತಾ॥)

(ಅಕ್ಟೋಬರ್, ೨೦೦೯)

ಕನ್ನಡ ಚಿಂತನೆಯೂ, ಗಾಂಧೀಜಿಯ 'ಹಿಂದ್ ಸ್ವರಾಜ್ಯ'ವೂ...

ಅರುಹು ಕುರುಹು ತ್ರೈಮಾಸಿಕದ ಜುಲೈ-ಸೆಪ್ಟಂಬರ್, ೨೦೦೮ರ ಸಂಚಿಕೆಯಲ್ಲಿ ಡಾ॥ ಕೆ.ವಿ.ನಾರಾಯಣರ 'ಕನ್ನಡದ ಕೆಸರು ಗದ್ದೆಯಲ್ಲಿ ಇಂಗ್ಲಿಷಿನ ವೈಹಾಳಿ' ಮತ್ತು ಪ್ರೊ॥ ರಾಜೇಂದ್ರ ಚೆನ್ನಿಯವರ 'ಕನ್ನಡವು ಪರಿಭಾವಿಸುವ ಒಂದು ಕ್ರಿಯೆ' ಎಂಬ ಲೇಖನಗಳು ಗಮನ ಸೆಳೆದವು. ಈ ಗಮನ ನನ್ನನ್ನು ಮತ್ತೆಲ್ಲೆಲ್ಲಿಗೋ ಸೆಳೆದುಕೊಂಡು ಹೋಗಿ ಈ ದೀರ್ಘ ಪ್ರತಿಕ್ರಿಯೆಯನ್ನು ಬರೆಸಿದೆ. ಮುಖ್ಯವಾಗಿ ಕನ್ನಡ ನವೋದಯ ಮೀಮಾಂಸೆಯನ್ನು ಅದರೆಲ್ಲ ಆಳ-ಅರ್ಥಗಳಲ್ಲಿ ಗ್ರಹಿಸದೇ ಹೋದ ಮತ್ತು ಈಗಲೂ ಗ್ರಹಿಸಲು ನಿರಾಕರಿಸುತ್ತಿರುವ ನಮ್ಮ ಹುಸಿ ಅಥವಾ ಮೇಲ್ಮೈ ಆಧುನಿಕತೆ ಮತ್ತು ಆಧುನಿಕೋತ್ತರತೆಗಳೇ ಕೆವಿಎನ್ ಮತ್ತು ಚೆನ್ನಿಯವರ ಇಲ್ಲಿನ ಲೇಖನಗಳಲ್ಲಿ ಕಾಣುವ ಕೆಲವು 'ಖಾಲಿ' ಸ್ಥಳಗಳಿಗೆ ಮತ್ತು ವೈರುಧ್ಯಗಳಿಗೆ ಕಾರಣವೆಂಬುದು ನನ್ನ ಅನ್ನಿಸಿಕೆಯಾಗಿದೆ.

ಇದನ್ನು ಆದಷ್ಟೂ ಪೂರ್ಣವಾಗಿ ವಿವರಿಸಲು (ಏಕೆಂದರೆ, ಹಲವಾರು ಕಡೆ ಇಂತಹ ವಿವರಣೆ ಸಾಧ್ಯವಾಗದೆ, ನನ್ನದು ಕೇವಲ ಕನ್ನಡ ದುರಭಿಮಾನವನ್ನಾಧರಿಸಿದ 'ವಾದ'ವಾಗಿದೆ ಎಂಬ ಅಪವಾದಕ್ಕೂ ನಾನು-ಅನಗತ್ಯ ಮುಜುಗರಗಳ ನಡುವೆ- ಗುರಿಯಾಗಿರುವುದುಂಟು.) ಪ್ರಯತ್ನಿಸಿರುವುದರಿಂದಾಗಿ, ಕೆಲವರಿಗೆ ಅನಗತ್ಯವಾಗಿ ಕಾಣಬಹುದಾದ ಉಲ್ಲೇಖಗಳೂ, ಪ್ರಸಂಗಗಳೂ ಮತ್ತು ಪುನರಾವರ್ತನಗಳಂತೆ ಕಾಣುವ-ಒಂದು ಸಂಗತಿಯನ್ನು ಇನ್ನೊಂದು ಸಂಗತಿ ಕೂಡಿಕೊಂಡು ಸ್ಪಷ್ಟೀಕರಿಸುತ್ತಾ ಹೋಗುವ-ಸರ್ವೋತೋಮುಖ ವಿಷದೀಕರಣ ಪ್ರಯತ್ನಗಳು ಇಲ್ಲಿ ಸೇರಿಕೊಂಡುಬಿಟ್ಟಿವೆ. ಅದಕ್ಕಾಗಿ ಕ್ಷಮೆ ಇರಲಿ.

ನಾನು ಈ ಪ್ರತಿಕ್ರಿಯೆಯನ್ನು-ಅಥವಾ ನಾರಾಯಣರ ಲೇಖನವನ್ನು ನೆಪವಾಗಿರಿಸಿಕೊಂಡು ಆರಂಭಿಸಿ, ಬಹುಶಃ ಅದರ ವಿಸ್ತರಣೆ ಮಾತ್ರವಾಗಿ ಕೊನೆಗೊಂಡಿರುವ ಈ ಲೇಖನವನ್ನು-ಬರೆಯುತ್ತಿರುವಾಗ ಹಲವು ಬಾರಿ, ಇದನ್ನು ಯಾರಿಗಾಗಿ, ಯಾಕಾಗಿ ಬರೆಯುತ್ತಿದ್ದೇನೆ ಎಂದು ಪ್ರಶ್ನಿಸಿಕೊಂಡು ಸುಸ್ತಾಗಿದ್ದೇನೆ. ಆದರೂ, ನಾನು ಹೇಳುತ್ತಿರುವುದರಲ್ಲಿ ನನಗೆ ನಂಬಿಕೆಯಿರುವುದರಿಂದ ಬರೆಯುವುದು ನನ್ನ ಕರ್ತವ್ಯವೆಂದು ಭಾವಿಸಿ ಬರಹವನ್ನು ಆ ಸುಸ್ತಿನಲ್ಲೇ ಪೂರ್ಣಗೊಳಿಸಿದ್ದೇನೆ!

-೧-

ಒಂದೆರಡು ವರ್ಷಗಳ ಹಿಂದೆ, ನಮ್ಮ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸುವ ಸರ್ಕಾರದ ಉಪಕ್ರಮ ಹಾಗೂ ಅದಕ್ಕೆ 'ಪ್ರಗತಿಪರ'ರೆಂದು ಹೇಳಲಾದ ಕೆಲವು ಗುಂಪುಗಳು ನೀಡಿದ ಕುಮ್ಮಕ್ಕು ಇವೆರಡೂ ಸೇರಿ ರಾಜ್ಯದ ಭಾಷಾ ನೀತಿಯಲ್ಲೇ ಪಲ್ಲಟವನ್ನು ಉಂಟು ಮಾಡಿದವು. ಇದು, ವಿಶಾಲಾರ್ಥದಲ್ಲಿ ಒಂದು ರಾಜಕೀಯ ಚಳುವಳಿ ಎಂದೇ ಕರೆಯಬಹುದಾದ 'ಕನ್ನಡ ಚಳುವಳಿ'ಯಲ್ಲಿನ ಒಂದು ನಿರ್ಣಾಯಕ ಘಟ್ಟವೆಂದೇ ನಾನು ಭಾವಿಸಿದ್ದೇನೆ. ಈ ಪಲ್ಲಟವೇ ಇಂದು ರಾಜ್ಯ ಸರ್ಕಾರವು ಅಪರೂಪದ ಬದ್ಧತೆಯೊಂದಿಗೆ ಕನ್ನಡದ ಎಲ್ಲ ಮಕ್ಕಳಿಗೂ ಅಡಿಪಾಯ ಶಿಕ್ಷಣವನ್ನು ಕನ್ನಡದಲ್ಲೇ ಒದಗಿಸುವ-ಒಂದು ರೀತಿಯಲ್ಲಿ ನಾವೆಲ್ಲ ಬಯಸುವ ಏಕರೂಪದ ಶಿಕ್ಷಣದ ಆರಂಭದಂತೆ-ತನ್ನ ಶಿಕ್ಷಣ ನೀತಿಯನ್ನು ರೂಪಿಸಲು ಮತ್ತು ಜಾರಿಗೊಳಿಸಲು ಹಲವು ನೆಲೆಗಳಲ್ಲಿ ತೊಂದರೆಯನ್ನುಂಟು ಮಾಡಿರುವುದು ಎಂದೂ ಇಲ್ಲಿ ಹೇಳಬಹುದು. (ಕನ್ನಡ ಮಾಧ್ಯಮವನ್ನು ಉಳಿಸಲೆಂದೇ ನಾವು ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸಬೇಕೆನ್ನುವುದು ಎಂದ ಯಾವ ಚಳುವಳಿಕಾರನೂ, ಸರ್ಕಾರದ ಸದ್ಯದ ಭಾಷಾ ನೀತಿಯ ಬೆಂಬಲಕ್ಕೆ ಬಂದಿಲ್ಲ.) ಹಾಗೆ ನೋಡಿದರೆ, ಇಲ್ಲಿಂದಾಚೆಗೇ ಕನ್ನಡ ಚಳುವಳಿ ತನ್ನ ಮೂಲ ಸಾಂಸ್ಕೃತಿಕ ಆಶಯವನ್ನು ಕಳೆದುಕೊಂಡು ಪೂರ್ಣವಾಗಿ ಬೀದಿ ಬಸವರ ಕೈಗೆ ಜಾರಿ ಹೋದದ್ದು. ಇಂತಹ ಪಲ್ಲಟದ, ನಿರ್ಣಾಯಕ ಘಟ್ಟದಲ್ಲಿ ಕನ್ನಡದ ಈ ಇಬ್ಬರು ಮುಖ್ಯ ಚಿಂತಕರು-ನಾರಾಯಣ ಮತ್ತು ಚೆನ್ನಿ-ತಳೆದ ನಿಲುವುಗಳ ಹಿನ್ನೆಲೆಯಲ್ಲಿಯೇ ಇವರ ಈ ಎರಡು ಲೇಖನಗಳು ನನಗೆ ಗಮನಾರ್ಹವೆನಿಸಿದ್ದು.

ಕೆ.ವಿ.ನಾರಾಯಣರಿಗೆ, ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸುವುದಕ್ಕೆ, ಅವರ 'ಕನ್ನಡ ಜಗತ್ತು: ಅರ್ಧ ಶತಮಾನ' ಪುಸ್ತಕದಲ್ಲಿನ ವಾದದಲ್ಲಿ ಹಲವಾರು ಕಡೆ ಸೂಚಿತವಾಗಿರುವಂತೆ ವಿರೋಧವೇನೂ ಇದ್ದಂತೆ ತೋರುವುದಿಲ್ಲ. ಹಾಗೆಂದು, ಅವರು ಬಹಿರಂಗವಾಗಿ(ಅಥವಾ ವಾಚ್ಯವಾಗಿ) ತಮ್ಮ ವಿರೋಧವಿಲ್ಲವೆಂದೂ ಹೇಳಲಿಲ್ಲ. ಬದಲಿಗೆ ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸಬೇಕೆಂಬ ಜನರ ಬೇಡಿಕೆಯನ್ನು ಸಹಾನುಭೂತಿಯಿಂದ ಪರಿಶೀಲಿಸ ಬೇಕೆಂಬುದು ಅವರ ಬಹಿರಂಗ ವಾದವಾಗಿತ್ತು. ಅಂದರೆ ಅಂದಿನ ಸಂದರ್ಭದ ಒತ್ತಡಗಳ ಹಿನ್ನೆಲೆಯಲ್ಲಿ ಗ್ರಹಿಸಿದಾಗ ಅವರ ಈ ವಾದ ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸುವುದರ ಪರವಾಗಿಯೇ ಇತ್ತು ಎಂದು ಹೇಳಬಹುದು. ಏಕೆಂದರೆ, ಅವರು ಕೇವಲ ಒಬ್ಬ ಭಾಷಾ ವಿಜ್ಞಾನಿಯಾಗಿ ಮಾತ್ರವಲ್ಲ, ಸಂಸ್ಕೃತಿ ಚಿಂತಕರಾಗಿಯೂ ಮಾನ್ಯತೆ ಪಡೆದಿದ್ದವರಾಗಿ, ಜನರ ಆ ಬೇಡಿಕೆಯನ್ನು ತಾವೇ ಸಹಾನುಭೂತಿಯಿಂದ ಪರಿಶೀಲಿಸಿ ಒಂದು ವೈಯುಕ್ತಿಕ ನಿಲುವು ತೆಗೆದುಕೊಂಡು ಅಂದಿನ ಚರ್ಚೆಯನ್ನು ಅರ್ಥಪೂರ್ಣಗೊಳಿಸಬಹುದಿತ್ತು. ಆದರೆ ಅವರು ಹಾಗೆ ಮಾಡಲಿಲ್ಲ. ಅದು ಅವರ ಜಾಣತನವೋ, ಅವರ ವಿದ್ವದ್ವಿಶಿಷ್ಟವಾದ

ನಿರ್ಲಿಪ್ತಿಯೋ ಅಥವಾ ಅವರೇ ನನ್ನಲ್ಲಿ ಒಮ್ಮೆ ಹೇಳಿಕೊಂಡಂತೆ ಅವರ ಹುಟ್ಟು ಗುಣವೋ ತಿಳಿಯದು! ಆದರೆ ಒಂದು ಮಾತಂತೂ ನಿಜ: ನಮ್ಮ 'ಸಾಮಾಜಿಕ ನ್ಯಾಯ' ಕುರಿತ ಸಂಕಥನ ದಿನೇ ದಿನೇ ಜಟಿಲವಾಗುತ್ತಾ, ಅದರ ಮೂಲ ಆಶಯದಿಂದ ದೂರ ಸರಿಯುತ್ತಾ; ನಮ್ಮ ಚಿಂತಕರನ್ನೂ, ಬುದ್ಧಿಜೀವಿಗಳನ್ನೂ ಸುಲಭದಲ್ಲಿ ಬಿಡಿಸಿಕೊಳ್ಳಲಾರದ ದ್ವಂದ್ವಕ್ಕೆ ಸಿಲುಕಿಸಿದೆ.

ಇಂತಹ ಸಂದರ್ಭದಲ್ಲಿ ನಾರಾಯಣರ ಪ್ರಸ್ತುತ ಲೇಖನ ಈ ದ್ವಂದ್ವದ ಸಿಕ್ಕುಗಳನ್ನೆಲ್ಲ ಯಾವುದೇ ವಿವರಣೆಯ ಗೋಜಿಲ್ಲದೆ, ಒಮ್ಮೆಗೇ ಮನಸ್ಸಿನಿಂದ ಕಿತ್ತೆಸೆದು, ನಿರಾಳವಾಗಿ ತಮ್ಮ ಚಿಂತನೆಯನ್ನು ಹೊಸ ದಿಕ್ಕಿನೆಡೆಗೆ (ಅಥವಾ ಹಳೆಯ ದಿಕ್ಕಿನೆಡೆಗೆ ಹೊಸ ನಡಿಗೆ?) ಒಯ್ಯುವ ಪ್ರಯತ್ನದಂತೆ ತೋರುತ್ತದೆ. ಇನ್ನು ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸುವುದನ್ನು 'ಸಾಮಾಜಿಕ ನ್ಯಾಯ'ದ ಕಾರಣ ಮುಂದೊಡ್ಡಿ ಬಲವಾಗಿ ಪ್ರತಿಪಾದಿಸಿದವರಲ್ಲಿ ಒಬ್ಬರಾದ ಚೆನ್ನಿಯವರ ಲೇಖನ, ದೇಶದ ಎರಡಂಕಿ ಪ್ರಗತಿ ದರದ ಸೊಕ್ಕಿನಲ್ಲಿ ಉಕ್ಕಿದ ಇಂಗ್ಲಿಷ್ ಕಾಮಾಂಧತೆಯನ್ನು ಪಾಪ, ಪ್ರೇಮಾಂಧತೆಯೆಂದು ಅರ್ಥೈಸಿಕೊಂಡು ತಾವು ತೆಗೆದುಕೊಂಡ ಸಹಾನುಭೂತಿಯ ನಿಲುವಿಗೆ; ಇಂದಿನ ಜಾಗತಿಕ ಆರ್ಥಿಕ ಹಿಂಜರಿತದ ಸಂದರ್ಭದಲ್ಲಿ, ಒಂದು ರೀತಿಯ ಸಮಝಾಯಿಷಿ ನೀಡುವ ರೀತಿಯಲ್ಲಿದೆ. ಅದು, ಆಧುನಿಕ ಕನ್ನಡ ಚಳುವಳಿಯ (ಏಕೆಂದರೆ, ಆಂಡಯ್ಯನಿಂದ ಆರಂಭವಾದ ಪುರಾತನ ಕನ್ನಡ ಚಳುವಳಿಯೂ ಇದೆ!) ಹುಟ್ಟಿಗೆ ಕಾರಣವಾದ ಕನ್ನಡ ನವೋದಯವು ಕನ್ನಡವೆಂದರೇನು ಎಂದು ಹೇಳಿದ್ದನ್ನೇ ಈಗಾಗಲೇ ಕ್ಲೀಷೆಯಾಗಿ ಹೋಗಿರುವ ಎಡಪಂಥೀಯ ಪರಿಭಾಷೆಯಲ್ಲಿ ಹೇಳಲು ಯತ್ನಿಸುತ್ತಾ ತನ್ನ ಮುಜುಗರವನ್ನು ಮರೆ ಮಾಡಿಕೊಳ್ಳಲು ಯತ್ನಿಸಿದೆ. ಹಾಗೆ ನೋಡಿದರೆ, ಕೆ.ವಿ.ಎನ್. ಅವರ ಈ 'ಹೊಸ' ನೋಟವೂ ಸದ್ಯದ ಆರ್ಥಿಕ ಹಿಂಜರಿತ ಉಂಟು ಮಾಡಿರುವ ಸಾಂಸ್ಕೃತಿಕ ಪರಿಣಾಮವಾಗಿದ್ದರೂ ಆಶ್ಚರ್ಯವಿಲ್ಲ. ಏಕೆಂದರೆ ಈ ಇಬ್ಬರೂ ಸ್ಥೂಲವಾಗಿಯಾದರೂ ಮಾರ್ಕ್ಸ್‌ವಾದಿ ಲೋಕದೃಷ್ಟಿಯನ್ನು ನಂಬಿದವರು ಅರ್ಥಾತ್ ಮೂಲತಃ ಆರ್ಥಿಕವಾದಿ ಆಧುನಿಕತೆಯನ್ನು ಒಪ್ಪಿದವರು ಅಥವಾ ಅದರಿಂದ ವೈಚಾರಿಕ ಸ್ಫೂರ್ತಿ ಪಡೆದವರು.(ನನ್ನ ತಿಳುವಳಿಕೆ ತಪ್ಪಿದ್ದರೆ ತಿದ್ದಬಹುದು.)

–೨–

ಕೆ.ವಿ.ನಾರಾಯಣರು ಈ ಲೇಖನದ ಮೂಲಕ ತಾವು ಪುನರ್‌ಭೇಟಿ ನೀಡಲು ಬಯಸಿರುವ ವಿಷಯದ ಬಗ್ಗೆ ಇರಬಹುದಾದುವೆಂದು ಅವರೇ ಸೂಚಿಸಿರುವ ಎರಡು ಪ್ರತಿಕ್ರಿಯೆಗಳಲ್ಲಿ ನಾನು ಮೊದಲನೆಯ ಬಗೆಗೆ ಸೇರಿದವನು. ಆದರೆ, ಅವರು ಬಹುಶಃ ತಮ್ಮ ಪುನರ್‌ಭೇಟಿಯ ಬಗೆಗೆ ತಮಗೇ ಇರುವ ಸಂಕೋಚದಿಂದಲೋ ಏನೋ ಸಂಶಯಿಸಿರುವಂತೆ, ನಾನು ಈ ಬಗ್ಗೆ ಕೇಕೆ ಹಾಕಿ ಏನೂ ನಗುವುದಿಲ್ಲ. ಹಾಗೇ, ನಿಮಗೆ ಈಗ ಬುದ್ಧಿ ಬಂತೇ ಎಂದೂ ಕೇಳುವುದಿಲ್ಲ. ಮತ್ತು ಅವರ ಮೇಲೆ ಪಶ್ಚಿಮ

ಬುದ್ಧಿಯ ಆರೋಪವನ್ನೂ ಹೊರಿಸುವುದಿಲ್ಲ. ಏಕೆಂದರೆ ಈ ಆರೋಪಕ್ಕೆ ನಮ್ಮಲ್ಲಿ ಮುಕ್ಕಾಲು ಮೂರು ವೀಸಾ ಪಾಲು ಜನ ಬಾಧ್ಯರೇ ಆಗಿದ್ದೇವಲ್ಲ? ಆದರೆ ನನ್ನಂಥವರು ಅಥವಾ ನಾನು ಪ್ರತಿನಿಧಿಸುವ ಚಿಂತನಾ ಕ್ರಮದವರು ನಾರಾಯಣರು ಭಾವಿಸುವ ಹಾಗೆ, 'ಮರುಖನನದಿಂದ ಅದೋ ನಮ್ಮ ವಿಗ್ರಹ ಕೈಗೆ ದೊರಕುತ್ತದೆ' ಎಂದೂ ಹೇಳುವುದಿಲ್ಲ. ಇದೆಲ್ಲ ನಾರಾಯಣರು ತಾವು ೧೯೮೮ರಲ್ಲಿ 'ಇನ್ನು ಕನ್ನಡಿಗಳು ಸಾಕು' ಲೇಖನದ ಮೂಲಕ ಕಂಡುಕೊಂಡಿದ್ದ ದಾರಿಯಿಂದ ವಿಮುಖವಾದದ್ದರ (ಅಥವಾ ನನ್ನಂಥ ಕೆಲವರು ಹಾಗೆಂದು ಅಂದುಕೊಂಡಿರಬಹುದೆಂದು ಭಾವಿಸಿದ್ದರ) ಬಗ್ಗೆ ಇರಬಹುದಾದ ಅಳುಕನ್ನು ಮುಚ್ಚಿಕೊಳ್ಳಲು ಮುಂದೊಡ್ಡಿರುವ ಊಹೆ ಮಾತ್ರ ಎಂದು ನಾನು ಭಾವಿಸುತ್ತೇನೆ. ಏಕೆಂದರೆ ನನ್ನಂಥವರಿಗೆ, ನಾರಾಯಣರು ಈಗ ಹೊಸದಾಗಿ ಕಂಡುಕೊಂಡಿರುವಂತೆ ತೋರುವ, 'ಹೊರದಾರಿಯ ಸೂಚನೆಗಳು ನಮ್ಮ ಹಿರೀಕರಲ್ಲೇ ಇವೆ' ಎಂಬುದು ಬರೀ ನಂಬಿಕೆ ಮಾತ್ರವಲ್ಲ, ಮನವರಿಕೆಯೂ ಆಗಿದೆ. ಹಾಗಾಗಿ ನಾನು ಈ ಲೇಖನಕ್ಕಾಗಿ ಅವರನ್ನು ಮೊದಲು ಅಭಿನಂದಿಸಬಯಸುತ್ತೇನೆ.

ನಾರಾಯಣರ 'ಇನ್ನು ಕನ್ನಡಿಗಳು ಸಾಕು' ಬರಹಕ್ಕೆ ಆಗ, ಈಗ ಅವರೇ ನೆನಪಿಸಿರುವಂತಹ ಎರಡು ರೀತಿಯ ಪ್ರತಿಕ್ರಿಯೆಗಳು ಸಹಜವೇ ಆಗಿತ್ತು. ಈಗಲೂ ಕೂಡಾ ಬಹಳ ಜನರ ಪ್ರತಿಕ್ರಿಯೆ ಹಾಗೇ ಇರುತ್ತದೆ ಎಂಬುದರ ಬಗ್ಗೆ ಸಂದೇಹ ಬೇಡ. ಆಗ ಆಧುನಿಕತಾವಾದದ ಅಮಲಿನಲ್ಲಿ ಹುಟ್ಟಿಕೊಂಡ ಸಕಾರಣ ವಿವರವಾದ ಪ್ರತಿಕ್ರಿಯೆಗಳೂ, ಈಗ ಆಧುನಿಕೋತ್ತರವಾದದ ಅಮಲಿನಲ್ಲಿ ಹುಟ್ಟಲಾರವು. ಬದಲಿಗೆ ನಾರಾಯಣರು ಸೂಚಿಸಿದ ಹಾಗೆ, 'ಇತರ' ಎನ್ನುವುದೇ ಇಲ್ಲ;ಅದು ಭ್ರಮೆ ಎಂದು ಒಂದೇ ಮಾತಿನಲ್ಲಿ ಅದನ್ನು ಅವರು ತಳ್ಳಿಹಾಕಿಯಾರು. ಈ ಇತರ ಎಂಬುದಿಲ್ಲ ಎಂಬುದು 'ಗುಹೇಶ್ವರನೆಂಬುದು ಮೀರಿದ ಘನವು' ಎನ್ನುತ್ತಾರಲ್ಲ, ಆ ಅರ್ಥದಲ್ಲಿ ಬಹು ಘನವಾದ ಮಾತು. ಆದರೆ ಅದನ್ನು, ಗುಹೇಶ್ವರನ ಹೆಸರು ಹೇಳಲೂ ಯೋಗ್ಯರಲ್ಲದವರೆಲ್ಲ ಆಡತೊಡಗಿ ಅದು ಭೋಳೆಯಾಗಿ, ಎಕ್ಕುಟ್ಟಿಹೋಗಿದೆ. ಅವರೆಲ್ಲ ಹಿಪ್ಪಿಗಳಂತಾಡುವ ಅಣಕು ಹಿಪ್ಪಿಗಳು; ಕಳ್ಳ ಗೃಹಸ್ಥರು. ಅಲ್ಲಮನ ಮಾತಿನಲ್ಲೇ ಹೇಳುವುದಾದರೆ, ಉಭಯಭ್ರಷ್ಟರು. ಆದುದರಿಂದ ಅಂತಹವರ ಪ್ರತಿಕ್ರಿಯೆ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳುವ ಅಗತ್ಯವಿಲ್ಲ.

ಆದರೆ, ಕೆ.ವಿ.ಎನ್.ಗೆ ಇಂಗ್ಲಿಷ್ ಮೂಲಕ ನಮ್ಮನ್ನು ನಾವು ಅರಿಯುವ, ಕಟ್ಟಿಕೊಳ್ಳುವ ವಿಪರ್ಯಾಸ ಕುರಿತು ಈಗ ಏನನ್ನಿಸಿದೆಯೋ, ಯಾವ ಪ್ರಶ್ನೆಗಳು, ಆತಂಕಗಳು ಹಾಗೂ ಅನುಮಾನಗಳು ಅವರ ಈ ಲೇಖನದಲ್ಲಿ ವ್ಯಕ್ತವಾಗಿವೆಯೋ, ಬಹುಶಃ ಅವೆಲ್ಲವೂ ಕನ್ನಡ-ಕರ್ನಾಟಕ ಕುರಿತ ನಮ್ಮ ನವೋದಯ ಮೀಮಾಂಸೆಯಲ್ಲಿ ಅಂತರ್ಗತವಾಗಿದ್ದವು ಎಂದು ನಾನು ಭಾವಿಸಿದ್ದೇನೆ. ವಿಶೇಷವಾಗಿ ಕುವೆಂಪು ಅವರ ಕನ್ನಡ-ಕರ್ನಾಟಕ ಮೀಮಾಂಸೆಯಲ್ಲಿ. ಆಲೂರರದು ಬಹುಶಃ 'ಮರುಖನನದಿಂದ, ಅಗೋ ನಮ್ಮ ಬಂಗಾರದ ವಿಗ್ರಹ' ಎಂದು ತೋರಿಸುವವರೆಂದು ನಾರಾಯಣರು

ಸೂಚಿಸುವ ಮಾದರಿಯಾದರೆ, ಬಿಎಂಶ್ರೀಯವರದು ಈಗ ನಾರಾಯಣರು ಎತ್ತಿರುವ ಪ್ರಶ್ನೆ, ಅನುಮಾನ, ಆತಂಕಗಳಿಗೆ ಕಾರಣವಾಗಿರುವ ಮಾದರಿಯದು. ಕನ್ನಡ ಸಂಸ್ಕೃತಿಯ ನವೋದಯ ಮೀಮಾಂಸೆಯನ್ನು ಕಟ್ಟಿದವರು ಮುಖ್ಯವಾಗಿ ಈ ಮೂವರು ಎಂಬ– ಅಷ್ಟೇನೂ ವಿದ್ವತ್ತಿನಿಂದ ಕೂಡಿರದ–ನನ್ನ ತಿಳುವಳಿಕೆಯ ಆಧಾರದ ಮೇಲೆ ಈ ಮಾತುಗಳನ್ನಾಡುತ್ತಿರುವೆ.

ಕುವೆಂಪು ಅವರ ಕನ್ನಡ ಮೀಮಾಂಸೆ ಯಾವ ಆತಂಕಗಳನ್ನು ಮನಗಂಡು, ಯಾವ ಮುನ್ನೋಟವನ್ನು ಸಾಧಿಸಿತ್ತೋ, ಅದು ನಾರಾಯಣರಿಗೆ ಈಗ ಅರಿವಿಗೆ ಬಂದಿದೆ. ಅದೂ ಬಿಎಂಶ್ರೀ ಅವರ ಕನ್ನಡ ಮೀಮಾಂಸೆಯನ್ನು ಒಪ್ಪಿ ಸಾಗಿದ ಮಾರ್ಗದಲ್ಲಿ ಹುಟ್ಟಿದ ಅನುಮಾನ–ಪ್ರಶ್ನೆಗಳ ಹಿನ್ನೆಲೆಯಲ್ಲಿ. ಜೊತೆಗೆ, ತಾವು ಬಹುಶಃ ಹೀಗೆ ದಾರಿ ತಪ್ಪಿದ್ದು ಆಲೂರರ ಕನ್ನಡ ಮೀಮಾಂಸೆಯ ಭಯದಿಂದ ಎಂದೂ ಅವರು ಇಲ್ಲಿ ಸೂಚಿಸುತ್ತಿರುವಂತಿದೆ. ಹಾಗೇ ಚೆನ್ನಿಯವರು ಕೂಡಾ. ಯಾವುದೇ ವಿಶ್ವಾಸಾರ್ಹತೆಯಿಲ್ಲದೆ ಈಗ ಅಂಚಿನಲ್ಲೇ ಕ್ರಿಯಾಶೀಲವಾಗಿರುವ ಕನ್ನಡ ಬೀದಿ ಚಳುವಳಿಯನ್ನು ದೊಡ್ಡ ಶತ್ರುವೆಂಬಂತೆ ಕಲ್ಪಿಸಿಕೊಂಡು ಗಂಭೀರವಾಗಿ ವಾದ ಮಾಡುತ್ತಾ, ಅವರು ಯಾವುದೇ ಭಾಷಾ ಚಳುವಳಿ ಆ ಭಾಷೆಯನ್ನಾಡುವ ಜನರ ಕಲ್ಯಾಣವನ್ನೂ ಗಮನದಲ್ಲಿಟ್ಟುಕೊಂಡಿರಬೇಕು ಎಂಬ ಅನಗತ್ಯ ಕರೆ ಕೊಟ್ಟಿದ್ದಾರೆನಿಸುತ್ತದೆ. ಅದೂ, ಭಾಷೆ ಎಂಬುದು ಪರಿಭಾವಿಸುವ ಒಂದು ಕ್ರಿಯೆ ಎಂಬ ಅಷ್ಟೇನೂ ಹೊಸದಲ್ಲದ ಪರಿಕಲ್ಪನೆಯನ್ನು ಮುಂದೊಡ್ಡುವ ಮೂಲಕ. ಆದರೆ ಒಂದು ತಿದ್ದುಪಡಿ: ಭಾಷೆ ಪರಿಭಾವಿಸುವ ಒಂದು ಕ್ರಿಯೆ ಮಾತ್ರವಲ್ಲ, ಒಂದು ಕ್ರಮ ಕೂಡಾ!

ಚೆನ್ನಿವರ ಲೇಖನ(ಭಾಷಣ)ದ ಮುಖ್ಯ ಸಮಸ್ಯೆ ಎಂದರೆ, ಅವರು ಕನ್ನಡ ರಾಜಕಾರಣವನ್ನು ಒಂದು ವಿಶಾಲ ರಾಷ್ಟ್ರ ಜೀವನದ ಭಿತ್ತಿಯ ಹಿನ್ನೆಲೆಯಲ್ಲಿಟ್ಟು ನೋಡುತ್ತಿರುವಾಗ, ಭಾರತದಲ್ಲಿ ರಾಷ್ಟ್ರೀಯತೆ ಎಂಬುದು ಅದರ ಆಧುನಿಕ ಅರ್ಥದಲ್ಲಿ ಸಂಘಟಿತವಾಗತೊಡಗಿದ ಸಂದರ್ಭ ಮತ್ತು ಆಶಯಗಳನ್ನು ಗಮನಿಸದಿರುವುದು. ಹಾಗಾಗಿ ಆ ಕನ್ನಡ ರಾಜಕಾರಣದ ಹಿಂದಿರುವ ಚಲನಶೀಲತೆಯನ್ನು ಅ(ಪಾ)ರ್ಥ ಮಾಡಿಕೊಳ್ಳಹೊರಟಿರುವುದು. ನಮ್ಮ ರಾಷ್ಟ್ರೀಯತೆಯು ಜನ ಮಧ್ಯದ ಬೇರುಗಳನ್ನು ಕಂಡುಕೊಂಡಿದ್ದೇ, ಬ್ರಿಟಿಷರು ದುರುದ್ದೇಶಪೂರ್ವಕವಾಗಿ ಕೈಗೊಂಡ ಬಂಗಾಳ ವಿಭಜನೆಯ ವಿರುದ್ಧ ಎದ್ದ ಬಂಗಾಳಿ ಭಾಷಿಕರ ಆಂದೋಲನದ ಮೂಲಕ; ಹಾಗೂ ನಂತರ ಇದರಿಂದ ದೇಶದ ವಿವಿಧ ಭಾಷಾ ಸಮುದಾಯಗಳಲ್ಲಿ ಉಂಟಾದ ಸಾಂಸ್ಕೃತಿಕ ಅಸ್ಮಿತೆಯ ಜಾಗೃತಿಯ ರಾಜಕೀಯ ರೂಪಗಳಲ್ಲಿ ಎಂಬುದನ್ನು ನಾವು ಗಮನಿಸಬೇಕು. ಹಾಗೆ ಗಮನಿಸಿದಾಗ ಕರ್ನಾಟಕದ ಏಕೀಕರಣದ ಹಿಂದೆ ಕನ್ನಡ ಒಂದು ಭಾಷೆಯಾಗಿ ಮಾತ್ರವಲ್ಲ, ಒಂದು ಸಂಸ್ಕೃತಿಯಾಗಿ ಹಾಗೂ ಒಂದು ರಾಜಕಾರಣವಾಗಿ ಕೂಡಾ ಕ್ರಿಯಾಶೀಲವಾಗಿತ್ತು ಎಂಬುದು ನಮ್ಮ ಅರಿವಿಗೆ ಬರುತ್ತದೆ. ಹಾಗೇ, ಏಕೀಕರಣ ಚಳುವಳಿಯ ಹಿಂದೆ ಭಾರತದ ಯಾವ ಭಾಷಾ ಸಂಸ್ಕೃತಿಯೂ ಆಧುನಿಕ ಇತಿಹಾಸದಲ್ಲಿ

ಒಳಗಾಗದಂತಹ ಅದರ ರಾಜಕೀಯ ಮತ್ತು ಭೌಗೋಳಿಕ ವಿಚ್ಛಿದ್ರೀಕರಣದ ಕಹಿ ನೆನಪುಗಳು ಕೆಲಸ ಮಾಡಿದ್ದೂ ಸಹ. (ಬಹುಶಃ ಈ ಕಾರಣದಿಂದಲೇ ಕರ್ನಾಟಕ ಇಡೀ ಭಾರತದಲ್ಲಿ, ತನ್ನ ರಾಜ್ಯಭಾಷೆಯನ್ನಾಡುವ ಅತಿ ಕಡಿಮೆ ಶೇಕಡಾವಾರು-ಸುಮಾರು ಶೇ.೬೫ರಷ್ಟು-ಜನಸಂಖ್ಯೆಯನ್ನುಳ್ಳ ರಾಜ್ಯವಾಗಿದೆ) ಇದರ ಪರಿಣಾಮವಷ್ಟೇ, ನಮ್ಮ ಜನಪ್ರಿಯ ಕನ್ನಡ ಚಳುವಳಿಗಳಲ್ಲಿ ಅನ್ಯಭಾಷಾ ಆಕ್ರಮಣಗಳನ್ನು ಕುರಿತ ಆತಂಕದ ವಿವಿಧ ರೂಪಗಳಲ್ಲಿ ಕಾಣಬರುತ್ತಿರುವುದು ಎಂಬುದೂ ಗೊತ್ತಾಗುತ್ತದೆ. ಇಂತಹ ಆತಂಕ ಈಗ ಹಲವು ಪ್ರಸಂಗಗಳಲ್ಲಿ ಆಗುತ್ತಿರುವಂತೆ (ಇತ್ತೀಚಿನ ಉದಾ: ಬೆಂಗಳೂರಿನಲ್ಲಿ ತಿರುವಳ್ಳುವರ್ ಪ್ರತಿಮೆ ಸ್ಥಾಪನೆಗೆ ವಿರೋಧ), ವಿಕೃತ ರೂಪಗಳನ್ನು ತಾಳದಂತೆ ನೋಡಿಕೊಳ್ಳುವ ಆರೋಗ್ಯಕರ ದಾರಿ ಎಂದರೆ, ರಾಷ್ಟ್ರ ರಾಜಕಾರಣದ ಒತ್ತಡಗಳ ಎದುರು ಕನ್ನಡದ ರಾಜಕಾರಣವನ್ನು ಬಲಪಡಿಸುವುದೇ ಆಗಿದೆ.

ಹಾಗೆ ನೋಡಿದರೆ, ಕರ್ನಾಟಕ ಏಕೀಕರಣ ಚಳುವಳಿಯೊಂದಿಗೆ ಆರಂಭವಾದ ಆಧುನಿಕ ಕನ್ನಡ ರಾಜಕಾರಣವು ಅದರ ವಿಸ್ತಾರ ರೂಪದಂತಿದ್ದ ಸ್ವಾತಂತ್ರ್ಯ ಹೋರಾಟದ ಉದಾರವಾದಿ ಆಶಯಗಳೊಂದಿಗೆ ಪ್ರಜಾಪ್ರಭುತ್ವವಾದಿಯಾಗಿಯೇ ಬೆಳೆದಿದೆ, ಉಳಿದಿದೆ. ಹೀಗಾಗಿ ಕನ್ನಡ ಸಂಸ್ಕೃತಿಯು ಇತರ ಸಂಸ್ಕೃತಿಗಳ ನಡುವೆ ಬಾಳುತ್ತಿರುವ ಅರಿವು ಹೊಂದಿರಬೇಕು ಎಂದು ಸೂಚಿಸುವ ಚೆನ್ನಿಯವರ ಮಾತು ಇತ್ತೀಚಿಗೆ ಎಡಪಂಥೀಯರಲ್ಲಿ ಒಂದು ಚಟವಾಗಿ ಹೋಗಿಬಿಟ್ಟಿರುವಂತೆ ಕಾಣುವ ಬಹುತ್ವ ಕುರಿತ ಅಕಾಡೆಮಿಕ್ ರೊಮಾಂಟಿಸಿಂನಿಂದ ಮಾತ್ರ ಹುಟ್ಟಿದ ಮಾತಾಗಿ ಕೇಳಿಸುತ್ತದೆ. ಚೆಲುವ ಕನ್ನಡ ನಾಡಿನ ಉದಯ ಒಂದು ನಿರಂತರ ಪ್ರಕಿಯೆ ಎಂದು ಕನ್ನಡ ನವೋದಯ ನಂಬಿತ್ತು ಎಂದು ಸರಿಯಾಗಿಯೇ ಚೆನ್ನಿ ಗುರುತಿಸಿದ್ದಾರೆ. ಆದರೆ, ಕನ್ನಡ ನವೋದಯದ ಈ ನಂಬಿಕೆ ಚೆಲುವ ಭಾರತದ ಉದಯ ಕೂಡ ಒಂದು ನಿರಂತರ ಪ್ರಕ್ರಿಯೆಯೇ ಆಗಿದೆ ಎಂಬ ನಂಬಿಕೆಯ ಅವಿಭಾಜ್ಯ ಅಂಗವೇ ಅಗಿತ್ತು ಎಂಬುದನ್ನು ಅವರು ಮರೆತಂತೆ ತೋರುತ್ತದೆ. ಹಾಗಾಗಿಯೇ, ನಮ್ಮ ಬಹಳಷ್ಟು ಬುದ್ಧಿಜೀವಿಗಳು ಕನ್ನಡದ ಸಾಮಾನ್ಯ ಜನರಿಗೆ ಹೋಲಿಸಿದಂತೆ, ಕನ್ನಡ ನವೋದಯ ಎಂಬ ವಿದ್ಯಮಾನದ ವ್ಯುತ್ಪತ್ತಿಯನ್ನೇ ಪೂರ್ಣವಾಗಿ ಪರಿಗ್ರಹಿಸಿದಂತಿಲ್ಲ ಎಂದು ಹೇಳಬೇಕಾಗಿದೆ. ಹಿಂದೊಮ್ಮೆ ಶಂಕರ ಮೊಕಾಶಿ ಪುಣೇಕರರು ಕನ್ನಡ ನವೋದಯವೇ ಇನ್ನೂ ಪೂರ್ಣಗೊಂಡಿಲ್ಲ ಎಂದಿದ್ದುದು ಬಹುಶಃ ಈ ಅರ್ಥದಲ್ಲಿಯೇ ಇರಬಹುದು!

ಪುಣೇಕರರು, ದೊರೆಯ ಮೈಮೇಲೆ ಬಟ್ಟೆಯಿಲ್ಲ ಎಂದು ಹೇಳಬಲ್ಲ ಮಗುವಿನ ಮುಗ್ಧತೆಯನ್ನು ಉಳಿಸಿಕೊಂಡಿದ್ದ ವಿದ್ವಾಂಸ. (ಈ ಕಾರಣದಿಂದಾಗಿಯೇ ಆಗಿನ ಕೆಲವು ಬುದ್ಧಿಜೀವಿ ಘಟವಾಗಳು ಅವರನ್ನು ಸ್ವಲ್ಪ ತಿಕ್ಕಲು ಎನ್ನುತ್ತಾ ಅಣಕಿಸುತ್ತಿದ್ದುದು.) ಆದರೆ ಇಂದು ಕನ್ನಡ ವಿದ್ವತ್ತೆಂಬುದು ಆ ಮುಗ್ಧತೆಯನ್ನು ಕಳೆದುಕೊಂಡು, ಕಲಿತ ಸಿದ್ಧಾಂತಗಳನ್ನು ಚಪ್ಪರಿಸುತ್ತಾ ಸುಮ್ಮನೆ ಮೆರೆದಾಡುತ್ತಿದೆ. ಹಾಗಾಗಿಯೇ ಇಂಗ್ಲಿಷ್ ಅನುವಾದ ಅಥವಾ ನಿರೂಪಣೆಗಳ ಮೂಲಕ ಕನ್ನಡ ಸಂಕಥನಗಳನ್ನು ಹೊಸ

ಹೊಳಹುಗಳೊಂದಿಗೆ ಅರ್ಥ ಮಾಡಿಕೊಳ್ಳಬಹುದೆಂಬ–ನಾರಾಯಣರು ಬಹು ಚೆನ್ನಾಗಿ ನುಡಿಗಟ್ಟಿಸಿರುವ–'ಕನ್ನಡ ಅರಿವನ್ನು ಇಂಗ್ಲಿಷ್ ನುಡಿಯ ಮೂಲಕ ಅರಿಯುವ ಹೊಸ ದಾರಿ'ಯ ಹುಸಿತನವೇ ಈ ಯಾರ ಅರಿವಿಗೂ ಬರಲಿಲ್ಲ. ಇದನ್ನು ಹುಸಿತನವೆಂದು ಕರೆಯುವುದೂ ತಪ್ಪೇನೋ. ಬಹುಶಃ ಅದನ್ನು ಅಪ್ಪಟ ಮೂರ್ಖತನ; ಹಾಸ್ಯಾಸ್ಪದ ಮೂರ್ಖತನ ಎಂದೇ ಕರೆಯುವುದು ಉಚಿತ. ಹೆಚ್ಚೆಂದರೆ ಅದು, ಮೂಲದಲ್ಲಿ ಇಲ್ಲದೇ ಇದ್ದುದನ್ನು ಹೊರಗಿನ 'ಪರಿಕರ'ಗಳ ಮೂಲಕ ಸೃಷ್ಟಿಸಿ ತೋರಿಸುವ ಜಾದೂಗಾರಿಕೆಯಷ್ಟೆ. ಅದೇ ಇಂಗ್ಲಿಷ್ ಜಾದೂ.(ಸಂಸ್ಕೃತವೂ ಒಂದು ನುಡಿಯಾಗಿ ಮಾಡಿದ್ದೂ ಸ್ವಲ್ಪ ಇದೇ ತೆರೆನ ಜಾದೂವನ್ನೇ ಇರಬೇಕು.) ಈ ಜಾದೂಗೆ (ಕುವೆಂಪು ಪ್ರಕಾರ ಇದು ಪೂತನಿಯ ಹಾಲು!) ಒಳಗಾದ ಬುದ್ಧಿಜೀವಿ ವರ್ಗ ಎಂತಹ ಮೂಲ ಚಿಂತಕರನ್ನು ಅಥವಾ ಸಂಶೋಧಕರನ್ನು ಸೃಷ್ಟಿಸೀತು? ಇಂತಹ ಜನ ಎಲಿಯಟ್ಟನ ನೂರನೇ ಹುಟ್ಟು ಹಬ್ಬವನ್ನು ಮರೆಯದೇ ಆಚರಿಸಿದ ಜಗತ್ತಿನ ಮೊದಲಿಗರಾಗಿದ್ದಲ್ಲಿ ಆಶ್ಚರ್ಯವೇನು? ಲೋಹಿಯಾ ಭಾರತದ ಬುದ್ಧಿಜೀವಿಗಳ ದುರಂತದ ಬಗ್ಗೆ ಮಾತನಾಡಿದ್ದು ಈ ಸ್ತರದಲ್ಲೇ, ಇಂಗ್ಲಿಷ್ ಜಾದೂಗೆ ಒಳಗಾದ ಅವರ ಈ ಬುದ್ಧಿಗೇಡಿತನದ ಬಗ್ಗೆಯೇ.

–೩–

ಈ ಜಾದೂವಿನ ಹಿಂದೆ ನಾರಾಯಣರೇ ಸೂಚಿಸಿರುವಂತೆ ೧೭ನೇ ಶತಮಾನದ ಡೆಕಾರ್ಟನ *Cogito ergo sum* (ನಾನು ಯೋಚಿಸುತ್ತೇನೆ;ಹಾಗಾಗಿ ನಾನು ಇದ್ದೇನೆ) ಎಂಬ ತಾತ್ವಿಕತೆ ಇದೆ. ಇದೇ, ಉದ್ದ–ಅಗಲ ಇತ್ಯಾದಿ ಭೌತ ಅಳತೆಗಳಿಗೆ ಸಿಗುವ ಜಗತ್ತೇ ನಿಜವಾದ ಜಗತ್ತು ಎಂದು ನಂಬಿಸುವ ಕಾರ್ಟೇಸಿಯನ್ ತರ್ಕವನ್ನು ವಿಕಾಸಗೊಳಿಸಿದ್ದು. ಈ ವಿಕಾಸದ ಹಿಂದೆ, ಯಾವುದನ್ನು ನಾವೀಗ ಆಧುನಿಕ ನಾಗರೀಕತೆಯ ಪಿತಾಮಹ ಎಂದು ಗುರುತಿಸುತ್ತೀವೆಯೋ ಮತ್ತು ಯಾವುದನ್ನು 'ಜ್ಞಾನಯುಗ' ಎಂದು ಒಪ್ಪಿಕೊಂಡುಬಿಟ್ಟಿದ್ದೇವೆಯೋ, ಆ ಐರೋಪ್ಯ ಪುನರುಜ್ಜೀವನ (Renaisance) ಯುಗದ ಚಿಂತನಾಕ್ರಮದ ಸ್ಫೂರ್ತಿ ಇದೆ. ಹಾಗಾಗಿ ಇಂದು ನಾವು ಜ್ಞಾನವೆಂದು ಸ್ವೀಕರಿಸಿರುವ ವಿಶ್ಲೇಷಣಾತ್ಮಕ ಅಧ್ಯಯನಗಳೆಲ್ಲವೂ ಈ ವಿಭಿನ್ನ ಅಳತೆ–ತೂಕಗಳ ನಡುವಣ ವೈವಿಧ್ಯಮಯ ಸಂಬಂಧಗಳ ತರ್ಕದ ಮೇಲೆ ನಿಂತಿವೆ. ಈ ತರ್ಕ ಯಾವುದು ಎಲ್ಲಿ ಬೇಕಾದರೂ ಸಲ್ಲುವಂತಹ ಸಾರ್ವತ್ರಿಕ ಗುಣ ಹೊಂದಿರುವ ವಸ್ತುನಿಷ್ಠ ಜ್ಞಾನ ಪ್ರಪಂಚವೊಂದನ್ನು, ಅದರೊಳಕ್ಕೆ ನಮ್ಮನ್ನೂ ಸೇರಿಸಿ, ಕಟ್ಟಿ ಕೊಟ್ಟಿತು. ಅದರಲ್ಲಿ ಬಂಧಿಯಾಗಿರುವ ನಾವು ಯಾವುದನ್ನು ಯಾವುದಕ್ಕೆ ಬೇಕಾದರೂ ಮೂಲಕ್ಕೆ ಏನೂ ಊನವಾಗದಂತೆ ವರ್ಗಾಯಿಸಿಕೊಳ್ಳಬಹುದು, 'ಅನುವಾದಿಸಿ'ಕೊಳ್ಳಬಹುದು ಎಂಬ '(ಅ)ಜ್ಞಾನ'ವನ್ನೂ ಅದು ಪ್ರದಾನ ಮಾಡಿತು. ಇಂತಹ ವರ್ಗಾವಣೆ ಮತ್ತು ಅನುವಾದಗಳಿಗೆ ಸಂಬಂಧಿಸಿದ ಉದ್ಯಮವೇ ಇಂದು ಭಾರತದಲ್ಲಿ ಅಧ್ಯಯನ ಮತ್ತು ಸಂಶೋಧನೆಗಳ ಹೆಸರಲ್ಲಿ ಕೋಟ್ಯಾಂತರ ರೂಪಾಯಿಗಳ ವ್ಯವಹಾರವಾಗಿ ಬೆಳೆದಿರುವುದು.

ಇದರಿಂದಾಗಿ, ಜ್ಞಾನವೆಂದರೆ, ಸದಾ ಸಂಕೀರ್ಣವಾಗುತ್ತಾ, ವಿಸ್ತಾರವಾಗುತ್ತಾ ಹೋಗುವ ಮಾಹಿತಿಯಾಧಾರಿತ ವಿದ್ಯಮಾನ; ಮತ್ತು ಜ್ಞಾನದಾಹ ಎಂದರೆ ಹಿಂಗಲೊಲ್ಲದ ನಿರಂತರ ದಾಹ ಎಂಬಂತಾಗಿಬಿಟ್ಟಿದೆ. ಹಾಗೇ, ಈ ಹಿಂಗಲೊಲ್ಲದ ನಿರಂತರ ದಾಹವೇ ಜಗತ್ತನ್ನು ಪ್ರಗತಿಯೆಡೆಗೆ ಕೊಂಡೊಯ್ಯುತ್ತಿರುವ ಶಕ್ತಿಯಾಗಿದೆ ಎಂಬ ನಂಬಿಕೆ ಸೃಷ್ಟಿಯಾಗಿಬಿಟ್ಟಿದೆ. ಇದನ್ನು ನಾವು ಆಧುನಿಕ ನಾಗರೀಕತೆ ಎಂದು ಕರೆಯುತ್ತಿದ್ದೇವೆ. ಆದರೆ ಈ ಆಧುನಿಕ ನಾಗರೀಕತೆಯಲ್ಲಿ ಅಂತರ್ಗತವಾಗಿರುವ ಈ ನಿರಂತರ ದಾಹದ ಪರಿಣಾಮಗಳನ್ನೇ ನಾವಿಂದು 'ಅಭಿವೃದ್ಧಿ' ಪರಿಕಲ್ಪನೆ ಎದುರಿಸುತ್ತಿರುವ ಹಲವು ನೆಲೆಯ–ಉದಾ: ರಾಜ–ನೈತಿಕ ಮತ್ತು ಪರಿಸರಾತ್ಮಕ–ಸಂದಿಗ್ಧದಲ್ಲಿ ಕಾಣುತ್ತಿದ್ದೇವೆ ಎಂಬುದೂ ನಿಜ. ಈ ಅಭಿವೃದ್ಧಿ, ಕೇವಲ ಭೌತಿಕ (ಹೊರ) ಆಸ್ತಿ ಅಭಿವೃದ್ಧಿಗೆ ಸಂಬಂಧಿಸಿದ್ದಲ್ಲ; ಅದರಲ್ಲಿ ಮಾನವ (ಒಳ) ಸಂಪನ್ಮೂಲ ಅಭಿವೃದ್ಧಿಯ ಪ್ರಶ್ನೆಗಳೂ ಸೇರಿರುವುದೇ ಇದಕ್ಕೆ ಕಾರಣವಾಗಿದೆ. ಬಹುಶಃ ನಾರಾಯಣರ ಪ್ರಸ್ತುತ ಲೇಖನಕ್ಕೆ, ಇಂತಹ ಮಾನವ ಸಂಪನ್ಮೂಲ ಅಭಿವೃದ್ಧಿಯ ಸಂಬಂಧವಾಗಿ ಅವರಲ್ಲಿ ಉಂಟಾದ ಸಂದಿಗ್ಧಗಳೇ, ಎದುರಾದ ಸವಾಲುಗಳೇ ಕಾರಣವಿರಬಹುದು. ಉದಾ: ಅವರ 'ಇದು ಸರಿಯೇ ತಪ್ಪೇ ಎಂದಾಗಲೀ, ಇದರಿಂದ ಏನು ಪರಿಣಾಮವಾಗಿದೆ ಎಂದಾಗಲೀ ಯೋಚಿಸುವ ಬಿಡುವು ನಮಗೆ ಇಲ್ಲವಾಗಿದೆ', 'ನೋಡುವ ನೆಲೆಗಳು ಇದರಲ್ಲಿ ಸೇರಿಕೊಂಡಿರಬಹುದೆಂಬ ಸಂದೇಹ ನಮ್ಮನ್ನು ಕಾಡಿರುವುದು ಕಡಿಮೆ' ಮುಂತಾದ ಅವರ ಮಾತುಗಳು.

ಅದೇನೇ ಇರಲಿ, ಇಂತಹ ಸಂದಿಗ್ಧಗಳ ಮತ್ತು ಸವಾಲುಗಳ ಸೃಷ್ಟಿಗೆ ಕಾರಣವಾಗಿರುವ ಈ ಅಭಿವೃದ್ಧಿಯಲ್ಲಿನ ವೈರುಧ್ಯವಾದರೂ ಯಾವುದು? ಹಿಂಗಲೊಲ್ಲದ ನಿರಂತರ ದಾಹವೇ ಆಧುನಿಕ ನಾಗರೀಕತೆಯ ಹೆಗ್ಗುರುತು ಎಂದು ಹಿಂದೆಯಾಗಲೇ ಹೇಳಿಯಾಗಿದೆ. ಇದು ಸೃಷ್ಟಿಸಿದ ವಿಜ್ಞಾನ–ತಂತ್ರಜ್ಞಾನವೆಂಬ ವಿಶ್ಲೇಷಣಾತ್ಮಕ ಅಧ್ಯಯನ ಜೋಡಿಯು ಸಹಜವಾಗಿಯೇ ಕಾರ್ಯಶೀಲವಾಗಲು, ತನ್ನ ಅನ್ವಯಕ್ಕಾಗಿ ಹಿಂಗಲೊಲ್ಲದ ನಿರಂತರ ದಾಹದಿಂದ ತಹತಹಿಸುತ್ತದೆ. ಇಂತಹ ತಹತಹಿಕೆಯ ಕಾರ್ಯಶೀಲತೆ ಅಥವಾ ನಿರಂತರ ಅನ್ವಯದ ಫಲಗಳು ವೈವಿಧ್ಯಮಯ ಗ್ರಾಹಕ ವಸ್ತುಗಳ ಹೆಸರಲ್ಲಿ, ತನ್ನ ಬಳಕೆದಾರಿಕೆಯ ಕ್ಷೇತ್ರಗಳನ್ನು ಹುಡುಕಿಕೊಂಡು ಹೊರಟದ್ದೇ ವಸಾಹತುಶಾಹಿಗೆ ಮೂಲ ಕಾರಣವಾಯಿತು. ಅದು ಹೀಗೆ ವಸಾಹತುಗಳನ್ನು ಕಂಡುಕೊಂಡದ್ದು, ಜ್ಞಾನದ ಬಗ್ಗೆ ಬೇರೆಯೇ ತಿಳುವಳಿಕೆ ಹೊಂದಿದ್ದ ಏಷ್ಯಾ ಮತ್ತು ಆಫ್ರಿಕಾದ ದೇಶಗಳಲ್ಲಿ ಎಂಬುದು ಇಲ್ಲಿ ಮುಖ್ಯ. ತಿಳುವಳಿಕೆಯ ಈ ವ್ಯತ್ಯಾಸವೇ ಹಿಂದೆ ಮತ್ತು ಇಂದೂ–ವಸಾಹತುಗಳು ವಿಸರ್ಜನೆಯಾದ ಮೇಲೂ–ನಮ್ಮ ಅಭಿವೃದ್ಧಿಗೆ ಸಂಬಂಧಿಸಿದಂತೆ ನಮ್ಮನ್ನು ಕಾಡುತ್ತಿರುವ ಸಂದಿಗ್ಧಗಳನ್ನು ಸೃಷ್ಟಿಸುತ್ತಿರುವ ವೈರುಧ್ಯವಾಗಿರುವುದು.

ಸದ್ಯಕ್ಕೆ ನಾವು ಭಾರತದ ಬಗ್ಗೆಯಷ್ಟೇ ಚರ್ಚಿಸೋಣ. ಭಾರತ 'ಜ್ಞಾನ'ವನ್ನು ತೂಕ ಮತ್ತು ಅಳತೆಗೆ ಸಿಗದ ಮತ್ತು ಕಾಲ ಹಾಗೂ ದೇಶಗಳ ಸಂದರ್ಭದಲ್ಲಿ ಕಡಿಮೆ

ಅಥವಾ ಜಾಸ್ತಿಯಾಗದಂತಹ ಒಂದು ಅ-ಭೌತ ವಿದ್ಯಮಾನವಾಗಿ ಪರಿಗ್ರಹಿಸಿತ್ತು. ಆ ಮೂಲಕ ಅದನ್ನು ಲೋಕ-ಮಾಹಿತಿಯಿಂದ, ಅದರ ಅನ್ವಯದಿಂದ ಬೇರ್ಪಡಿಸಿ ಪವಿತ್ರೀಕರಿಸಿಟ್ಟಿತ್ತು. ಅದರ ಉಪಾಸನೆಯೇ ಮನುಷ್ಯನ ಪರಮ ಗುರಿ ಎಂದು ಅದು ತನ್ನ ಅನೇಕ ಪ್ರಯೋಗಗಳ ಮೂಲಕ ಕಂಡುಕೊಂಡಿತ್ತು. ಅಂದ ಮಾತ್ರಕ್ಕೆ ಅದು ಮಾಹಿತಿ ರೂಪದ ತಿಳುವಳಿಕೆಯನ್ನು ನಿರಾಕರಿಸಿತ್ತೆಂದಲ್ಲ. ಭಾರತ ತನ್ನದೇ ಆದ ಲೌಕಿಕ ಪರಂಪರೆಯನ್ನು ಹೊಂದಿತ್ತು. ಹಾಗಾಗಿಯೇ ಅದು ಒಂದು ಸಂಸ್ಕೃತಿ ಮಾತ್ರವಲ್ಲ, ಇತರರನ್ನು ಸೆಳೆಯಬಲ್ಲ-ಹಾಗೆ ಸೆಳೆದು ಕೊನೆಗೆ ತನ್ನನ್ನೇ ಗುಲಾಮಗಿರಿಗೆ ಒಪ್ಪಿಸಿಕೊಂಡಂತಹ-ಒಂದು ಸಮೃದ್ಧ ನಾಗರೀಕತೆಯನ್ನೂ ಹೊಂದಿತ್ತು. ಈ ನಾಗರೀಕತೆಯೆಂಬ ತಿರುಳಿಗೆ ಈ ಮುನ್ನ ವಿವರಿಸಿದ ಹಾಗೆ, 'ಅನುಭಾವಿಕ'ವಾದುದೆಂದು ಕರೆಯಬಹುದಾದ ಜ್ಞಾನವು ಬೀಜವಾಗಿತ್ತು. ಆದರೆ ವಸಾಹತುಶಾಹಿಯು ತನ್ನ ನಿರಂತರ ದಾಹ ಸೃಷ್ಟಿಯ ಭಾಗವಾಗಿ-ತನ್ನ ಹೊಸ ಹೊಸ ಗ್ರಾಹಕ ವಸ್ತುಗಳಿಗೆ ಮಾರುಕಟ್ಟೆಯನ್ನು ಸೃಷ್ಟಿಸಿಕೊಳ್ಳುವ ಭರದಲ್ಲಿ-ಈ ತಿರುಳಿನ 'ಮಿತಿ'ಗಳನ್ನು ಎತ್ತಿ ತೋರಿಸಲು ತೊಡಗಿದ ಶೈಲಿ ಮತ್ತು ಆವೇಗಗಳು, ಅಂದರೆ ಅದರ ರಾಜಕಾರಣ ನುರಿತ ವ್ಯಾಪಾರಿಯೊಬ್ಬನ ಸಹಜ ಜಾಣತನದಿಂದ ಕೂಡಿತ್ತು. ಅದು, ಇವು ಮಿತಿಗಳಲ್ಲ, ಈ ಮಣ್ಣಿನ ಬೀಜದ ಸಹಜ ಗುಣವಷ್ಟೇ-ಅದೇ ಅದರ ಶಕ್ತಿ ಕೂಡಾ -ಎಂಬ ಅರಿವನ್ನೇ ಇದರ ನಾಗರಿಕ ಪ್ರಜ್ಞೆಯಲ್ಲಿ ಮಸುಕು ಮಾಡಿತು. ಅದು ಒಂದು ರೀತಿಯಲ್ಲಿ ಕಾಲ ಮಹಿಮೆಯೂ ಆಗಿತ್ತೇನೋ! ಅದೇನೇ ಇರಲಿ, ಇದು ಒಂದು ಜೀವನ ಕ್ರಮವನ್ನೇ, ಜೀವನ ದೃಷ್ಟಿಯನ್ನೇ ತಲೆಕೆಳಗು ಮಾಡಿದ, ನಮ್ಮ ಜ್ಞಾನ ಮಾದರಿಯ 'ಪಾವಿತ್ರ್ಯ'ವನ್ನೇ ಅಲ್ಲಗಳೆದು ಭಗ್ನಗೊಳಿಸಿದ 'ಕ್ರಾಂತಿ'ಯಾಗಿತ್ತು. ಈ ದುಷ್ಕ್ರಾಂತಿಯನ್ನು ನಾವು ಸತ್ಕ್ರಾಂತಿಯೆಂದೇ ಭಾವಿಸಿ, ಅದನ್ನು ಆಧುನಿಕತೆಯೆಂದು ಆರಾಧಿಸುತ್ತಿದ್ದೇವೆ. ಈ ಆಧುನಿಕತೆಯ ಆರಾಧನೆಯ ಭಾಷೆ ಇಂಗ್ಲಿಷ್ ಆಗಿದೆ. ಇಲ್ಲಿ ಭಾಷೆ ಎಂದರೆ, ಕೇವಲ ಗುರುತಿನ ಶಬ್ದಗಳಲ್ಲ. ಬದಲಿಗೆ ಕೆ.ವಿ.ನಾರಾಯಣರಿಗೆ ಈಗ, 'ನೋಡುವ ನೆಲೆಗಳು ಇದರಲ್ಲಿ ಸೇರಿಕೊಂಡಿರಬಹುದೆಂಬ ಸಂದೇಹ ನಮ್ಮನ್ನು ಹೆಚ್ಚಾಗಿ ಕಾಡಿರುವುದು ಕಡಿಮೆ' ಎಂದೆನ್ನಿಸಲು ಕಾರಣವಾಗಿರುವಂತಹ 'ಹೇಗೆ ನೋಡಬೇಕೆಂದು ನಮಗೆ ಹೇಳಿಕೊಡಲಾಗುತ್ತಿದೆಯೋ ಅದರಂತೆ ನಾವು ಕಾಣುವ'ಂತೆ ಮಾಡಬಲ್ಲ ಮಾನಸಿಕ ರಚನೆ ಕೂಡಾ ಆಗಿದೆ. ಹಾಗೆ ನೋಡಿದರೆ ಈಗ ನಾವು 'ಮಾಧ್ಯಮವೇ ಸಂದೇಶ ಕೂಡಾ' (Medium is the message) ಎಂಬ ಆಧುನಿಕ ಸಂವಹನ ತತ್ವವನ್ನು ಒಪ್ಪಿಕೊಂಡಿದ್ದೇವೆ ಅಲ್ಲವೆ?

-೫-

ಇದನ್ನು ಇನ್ನಷ್ಟು ಸ್ಪಷ್ಟವಾಗಿ ಮತ್ತು ಸಮಗ್ರವಾಗಿ-ಬೇರು ಮಟ್ಟದಲ್ಲಿ-ಅರ್ಥ ಮಾಡಿಕೊಳ್ಳಲು ನಾವು ಗಾಂಧಿಯವರ 'ಹಿಂದ್ ಸ್ವರಾಜ್' ಕಡೆ ಸ್ವಲ್ಪ ನಮ್ಮ ಗಮನ ಹರಿಸಬೇಕಾಗುತ್ತದೆ. ಅವರು ಭಾರತದ 'ಬಿಡುಗಡೆ'ಯನ್ನು ಬ್ರಿಟಿಷ್ ಪ್ರಭುತ್ವದಿಂದ

ಬಿಡುಗಡೆ ಎಂದು ಪರಿಭಾವಿಸಲೇ ಇಲ್ಲ. ಅವರ ಪ್ರಕಾರ ಭಾರತ ಈಡಾಗಿದ್ದ ಎಲ್ಲ ಕೇಡುಗಳಿಗೆ ಆಧುನಿಕ ನಾಗರೀಕತೆಯೇ ಕಾರಣವಾಗಿತ್ತು. ಗಾಂಧೀಜಿಯ ಮಾತುಗಳಲ್ಲೇ ಹೇಳುವುದಾದರೆ, 'ಹಿಂದೂಸ್ತಾನ ತಿಣುಕುತ್ತಿರುವುದು ಬ್ರಿಟಿಷರ ಭಾರದಿಂದಲ್ಲ; ಆಧುನಿಕ ನಾಗರೀಕತೆಯ ರಾಕ್ಷಸ ಭಾರದಿಂದ'. ಅದರ ಒಂದು ಪರಿಣಾಮವಾಗಿಯಷ್ಟೇ ಭಾರತ ಒಂದು ವಸಾಹತುವಾಗಿದ್ದುದು. ಆದರೆ ಭಾರತ ೧೯೪೭ರಲ್ಲಿ ವಸಾಹತುತನದಿಂದ ಬಿಡುಗಡೆಯಾಯಿತಾದರೂ, ಆಧುನಿಕ ನಾಗರೀಕತೆಯ ಸಂಕೋಲೆಗಳಿಂದ ಬಿಡುಗಡೆಯಾಗಲಿಲ್ಲ. ಅಂದರೆ, ಭಾರತ ತಾನು ಕಳೆದುಕೊಂಡಿದ್ದ ಜ್ಞಾನ ಮಾದರಿಯನ್ನು ಹಿಂತಿರುಗಿ ಪಡೆದುಕೊಳ್ಳಲೇ ಇಲ್ಲ.

ಭಾರತದ ಜ್ಞಾನ ಮಾದರಿ ಹೊರ ರೂಪದಲ್ಲಿ, ಗಾಂಧೀಜಿ ಪ್ರಕಾರ ಹಳ್ಳಿಯ ರೂಪದಲ್ಲಿತ್ತು. ಆಧುನಿಕ ನಾಗರೀಕತೆ ಈ ನಮ್ಮ ಹಳ್ಳಿಗಳನ್ನು, ಅದರ ಸತ್ವವನ್ನು ನಾಶ ಮಾಡಿತು. ಆ ಮೂಲಕ ಭಾರತವನ್ನು ಗುಲಾಮಗಿರಿಗೆ ತಳ್ಳಿತು. ಮತ್ತೆ ನಮ್ಮ ಹಳ್ಳಿಗಳನ್ನು ಪುನಾರಚಿಸಿ ಅವಕ್ಕೆ ಜೀವ ಕೊಡದ ಹೊರತು, ಅಂದರೆ 'ಗ್ರಾಮ ಸ್ವರಾಜ್ಯ' ಸ್ಥಾಪನೆಯಾಗದ ಹೊರತು ಭಾರತಕ್ಕೆ ಮುಕ್ತಿಯಿಲ್ಲ; ನೆಮ್ಮದಿ ಇಲ್ಲ. ನೆಮ್ಮದಿಯಿಲ್ಲ ಎಂಬುದು ಈಗ ನಮಗೆ ಗೊತ್ತಾಗಿದೆ. ಆದರೆ ಅದಕ್ಕೆ ಕಾರಣಗಳನ್ನು ಬೇರೆಲ್ಲೆಲ್ಲೋ ಹುಡುಕುತ್ತಿದ್ದೇವೆ. ಏಕೆಂದರೆ, ಹುಡುಕಲು ಅಥವಾ ಹುಡುಕುತ್ತಾ ಅದರ ಮಧ್ಯೆಯೇ ಕಳೆದು ಹೋಗಲು, ಮಿತಿಯಿಲ್ಲದ ಮಾಹಿತಿ ಕ್ಷೇತ್ರವನ್ನು ಆಧುನಿಕ ನಾಗರೀಕತೆ ತನ್ನ ನಿರಂತರ ದಾಹದಲ್ಲಿ ನಮಗೆ ಸೃಷ್ಟಿಸಿಕೊಟ್ಟಿದೆ. ಹೀಗೆ ಹುಡುಕಲು ಹೊರಟವನೇ ಕಳೆದುಹೋಗುವಂತಹ ಈ ನಿರಂತರ ಹುಡುಕಾಟದ ದಾಹಕ್ಕೆ, ಇಂಗ್ಲಿಷ್ ಒಂದು ನುಡಿಗಟ್ಟಾಗಿ, ಚಿಂತನಾ ಕ್ರಮವಾಗಿ ಮಾಧ್ಯಮವಾಗಿದೆ. ಹಾಗಾಗಿ 'ಇಂಗ್ಲಿಷ್ ಜ್ಞಾನ'ಕ್ಕೆ ಸಿಕ್ಕ ನಾವು ಹುಡುಕುತ್ತಲೇ ಇದ್ದೇವೆ... ಇದಕ್ಕೆ ನಾರಾಯಣರ, 'ನಾವು ಮಾತು ಬರಹಗಳಲ್ಲಿ ಯಾವುದು ಅಧಿಕೃತ ಎಂಬ ಬಗ್ಗೆ ಅಲ್ಲಿಯವರೆಗೆ ಇದ್ದ ನಮ್ಮ ನಂಬಿಕೆಗಳನ್ನು ಬಿಟ್ಟುಕೊಟ್ಟು ಹೊಸ ಹಾದಿಯಲ್ಲಿ ಸಾಗತೊಡಗಿದೆವು. ಈ ಚೌಕಟ್ಟಿಗೆ ಸಿಲುಗಿದ ನಾವು ಮಾತಿನಲ್ಲಿದ್ದ ಎಲ್ಲವನ್ನೂ ಬರಹಕ್ಕೆ ತರುವ ಮತ್ತು ಬರಹದಲ್ಲಿರುವ ನಿಜಪಾಠವನ್ನು ಹುಡುಕುವ ಉದ್ಯಮದಲ್ಲಿ ತೊಡಗಿದ್ದೇವೆ' ಎಂಬ ಮಾತು ಸೂಚಿಸುವ ಜ್ಞಾನ ಮಾದರಿ ಕುರಿತ ನಮ್ಮ ಇಂದಿನ ದ್ವಂದ್ವವನ್ನು ಅರ್ಥ ಮಾಡಿಕೊಳ್ಳುವುದಾರೆ, ನನ್ನ ಈ ಮೇಲಿನ ಮಾತುಗಳು ಇನ್ನಷ್ಟು ಸ್ಪಷ್ಟವಾದಾವು.

ಗಾಂಧಿ, ಭಾರತದ ಜ್ಞಾನ ಪರಂಪರೆ ಹಳ್ಳಿಗಳ ಒಕ್ಕೂಟದ ರೂಪದಲ್ಲಿ ತನ್ನ ಕಾರ್ಯಶೀಲತೆಯನ್ನು ಕಂಡುಕೊಂಡಿದೆ ಎಂದು ಗುರುತಿಸಿದ್ದರು. ಹಾಗೇ ಮನುಷ್ಯ ದೇಹವನ್ನು ಈ ಜ್ಞಾನದ ಲೌಕಿಕ ಆವರಣ ಎಂದು ನಂಬಿದ್ದರು. ಇದರ ಆಧಾರದ ಮೇಲೆ, ಮನುಷ್ಯ; ತನ್ನ ಅಸ್ತಿತ್ವವನ್ನು ನಿರ್ವಚಿಸುವ ಈ ಜ್ಞಾನಕ್ಕೆ ಅಪಚಾರವೆಸಗದಂತೆ ಏನೇನು ಮಾಡಬಹುದೆಂಬುದನ್ನು ಅವನ ದೇಹದ ಇತಿ ಮಿತಿಗಳೇ ನಿರ್ಧರಿಸಿವೆ ಎಂದು ಅವರು ತೀರ್ಮಾನಿಸಿದ್ದರು. ಅದೇ ಅವನ ನೈತಿಕತೆಯ ಮೂಲಾಧಾರವೂ ಆಗಿತ್ತು. ಹಾಗಾಗಿಯೇ ಅವರ ಪ್ರಕಾರ, ಅವನ ಕಾಲುಗಳು ನಡೆಯಬಹುದಾದಷ್ಟು

ದೂರದವರೆಗೆ ಮಾತ್ರ ಅವನ ಭೌತಿಕ (ಬದುಕಿನ) ಆವರಣವಿರಬೇಕು. ಅವನ ಕೈಗಳು ಮಾಡಬಹುದಾದಷ್ಟು ಕೆಲಸಗಳನ್ನು ಮಾತ್ರ ಅವನು ಅದರಲ್ಲಿ ಮಾಡಬೇಕು. ಈ ಮಿತಿಗಳ ಪ್ರತೀಕವೇ ಭಾರತದ ಗ್ರಾಮ ಮತ್ತದರ ಸಂಸ್ಕೃತಿಯಾಗಿತ್ತು. ಹೀಗೆ ಬದುಕಲು ಬೇಕಾದ ಮೂಲಭೂತ ಅಗತ್ಯಗಳ ಕೊರತೆ ಉಂಟಾದಾಗ ಮಾತ್ರ ಒಂದು ಹಳ್ಳಿ ನೆರೆಯ ಹಳ್ಳಿಯನ್ನು ಸಂಪರ್ಕಿಸಬಹುದು.

ಹೀಗೆ ಭಾರತದ ಜ್ಞಾನ ಪರಂಪರೆ ತನ್ನ ಗುರಿ ಅಥವಾ ಸಾರ್ಥಕ್ಯದಿಂದ ವಿಚಲಿತಗೊಳ್ಳದಂತೆ ತನ್ನ ಸಂಯಮವನ್ನು ತಾನೇ ಕಂಡುಕೊಂಡಿದ್ದರ ಮೂರ್ತ ರೂಪವಾಗಿತ್ತು ಹಳ್ಳಿ. ಈ ಅರ್ಥದಲ್ಲಿ, ಇಲ್ಲಿ ಹಳ್ಳಿ ಎಂಬುದು ಭೌತಿಕ ಅಳತೆಗಿಂತ ಮುಖ್ಯವಾಗಿ ಸಾಂಸ್ಕೃತಿಕ ಅಳತೆಯಿಂದ ನಿರ್ವಚಿಸಲ್ಪಡುವಂತಹುದೇ ಆಗಿತ್ತು. ಇನ್ನೂ ಮುಂದು ಹೋಗಿ ಹೇಳುವುದಾರೆ, ಹಳ್ಳಿಯೇ ಭಾರತದ ಧಾರ್ಮಿಕ ಬೀಜ ಘಟಕವೂ ಆಗಿತ್ತು. ಇಂತಹ ಹಳ್ಳಿಯನ್ನು ಮತ್ತೆ ಪಡೆಯುವುದೇ–ನಮ್ಮ ಹಳ್ಳಿಗಳನ್ನು, ಅವು ನಾಶವಾಗಲು ಕಾರಣವೇನು ಎಂಬುದರ ಅನ್ವೇಷಣೆಯಲ್ಲಿ ಪುನಾರಚಿಸುವುದೇ–ನಿಜವಾದ ಸ್ವಾತಂತ್ರ್ಯ; ಅದೇ ಸ್ವರಾಜ್ಯ ಎಂದು ಗಾಂಧಿ ನಂಬಿದ್ದರು. ಅವರು ತಮ್ಮ ಈ ಜ್ಞಾನ ಮೀಮಾಂಸೆಯ ನೆಲೆಯಲ್ಲಿ ಆಡಿದ ಈ ದೇಶಕ್ಕೆ ಯಂತ್ರ ವ್ಯವಸ್ಥೆ ಬೇಡ, ರೈಲು ಬೇಡ, ಮುದ್ರಣಾಲಯ ಬೇಡ, ನ್ಯಾಯಾಲಯಗಳು ಮತ್ತು ವಕೀಲಿಕೆ ಬೇಡ, ಆಧುನಿಕ ವೈದ್ಯ ಪದ್ಧತಿ ಬೇಡ, ಇತಿಹಾಸ ರಚನೆಯ ಶಾಸ್ತ್ರ ಬೇಡ ಎಂಬ ಮಾತುಗಳ ಹಿಂದೆ ಸಾರಾಂಶ ರೂಪವಾಗಿ ಇಂಗ್ಲಿಷ್ ಶಿಕ್ಷಣ ಬೇಡ ಎಂಬ ಮಾತೂ ಇತ್ತು ಎಂಬುದನ್ನು ನಾವು ಮರೆಯಲಾಗದು. ಏಕೆಂದರೆ ನಮ್ಮ ಹಳ್ಳಿಗಳನ್ನೂ, ಆ ಮೂಲಕ ನಮ್ಮ ಜ್ಞಾನ ಮಾದರಿಯನ್ನೂ ನಾಶ ಮಾಡಿದ ಇಂಗ್ಲಿಷ್, ನಮ್ಮ ಜ್ಞಾನ ಮಾದರಿಯ ಮತ್ತು ನಮ್ಮ ಹಳ್ಳಿಗಳ ಪುನಾರಚನೆಯ ಮಾಧ್ಯಮವಾಗಲಾರದು. ಇದು ಸಾಮಾನ್ಯ ಪರಿಜ್ಞಾನದ ವಿಷಯ. ಇದನ್ನು ವಿವರಿಸಿ ಹೇಳುವುದಾರೆ, ಆ ಭಾಷೆಯ ಆತ್ಮವಿರಲಿ, ದೇಹ ಕೂಡಾ (ಅದರ ಲೌಕಿಕ ಆವರಣ–ರಾಚನಿಕತೆ) ಸ್ಥಳೀಯತೆಯನ್ನು ಧಿಕ್ಕರಿಸುತ್ತಾ, ಅದರ ಎಲ್ಲ ನೈತಿಕ ಮಿತಿಗಳನ್ನು ಉಲ್ಲಂಘಿಸಬಲ್ಲ 'ಪುಂಡಾಟಿಕೆ'ಗೆ ತಕ್ಕ ಹಾಗೆ ನಮ್ಮೆದುರಾಗಿ ವಿನ್ಯಾಸಗೊಂಡಿದೆ. ಅದು ಅದರ ಹುಟ್ಟುಗುಣ ಕೂಡಾ ಹೌದು. ನಿಜ, ಇಂಗ್ಲಿಷ್ ಶಿಕ್ಷಣ ನಮಗೆ ಅನೇಕ ಪಾಠಗಳನ್ನು ಕಲಿಸಿದೆ. ಆದರೆ ಈ ಎಲ್ಲ ಪಾಠಗಳ ಪಾಠದಂತಿರುವ ಇಂಗ್ಲಿಷ್ ನಮಗೆ ಯಾವ ರೀತಿಯ ಮುಕ್ತಿಯನ್ನೂ ದೊರಕಿಸಿಕೊಡಲಾರದು ಎಂಬುದನ್ನೇ ನಾವು ಮರೆತಿದ್ದೇವೆ. ಮಾನವ ಮನಸ್ಸಿನ ಮಾಯೆಯನ್ನು ಸೂಚಿಸುವ ಝೆನ್ ಕತೆಯೊಂದರಲ್ಲಿದ್ದಂತೆ, ಪ್ರವಾಹ ದಾಟಿದ ಮೇಲೂ ದೋಣಿಯನ್ನು ತಲೆಯ ಮೇಲೆ ಹೊತ್ತುಕೊಂಡು ನಡೆದಿದ್ದೇವೆ!

ಇಂತಹ ಮರೆವು ನಮ್ಮಂತಹ ಪಾಮರರಿಗಿರಲಿ, ಪಂಡಿತ ನೆಹರೂಗೂ ಒಡಿದಿತ್ತೆಂದರೆ? ಆಧುನಿಕತಾವಾದಿಯಾದ ನೆಹರೂ, ಗಾಂಧೀಜಿಯ ಈ ಚಿಂತನೆಯನ್ನು ನಾಗರೀಕತೆಯ ಹಿಂಪಯಣ ಎಂದು ಬಣ್ಣಿಸಿ, ಸ್ವಾತಂತ್ರ್ಯ ಘೋಷಣೆಯ ಹೊಸ್ತಿಲಲ್ಲೇ

ಅದನ್ನು ತಿರಸ್ಕರಿಸಿದರು. ಅಂಬೇಡ್ಕರ್ ನಿರೂಪಿಸಿದ ಹಾಗೆ ಶೋಷಣೆ ಹಾಗೂ ಮೌಢ್ಯಗಳ ಹಾಳು ಕೊಂಪೆಗಳಂತಿದ್ದ ಹಳ್ಳಿಗಳ ಬದುಕಿನಿಂದ ಬೇಸತ್ತಿದ್ದ ನಾವೆಲ್ಲ-ಅವು ಇರುವುದೂ, ಇರಬೇಕಾದದ್ದೂ ಹಾಗೆಯೋ ಅಥವಾ ಅವನ್ನು ಹಾಗೆ ಅವನತಿಗೊಳಿಸಲಾಗಿದೆಯೋ ಎಂಬುದನ್ನು ಯೋಚಿಸುವ ವ್ಯವಧಾನವಿಲ್ಲದೆ-ಅದನ್ನು ನಂಬಿದೆವು, ಬೆಂಬಲಿಸಿದೆವು. ನಮ್ಮನ್ನು ಬೆಳೆಸಿಕೊಳ್ಳಲು, ಬಲಶಾಲಿಗಳನ್ನಾಗಿ ಮಾಡಿಕೊಳ್ಳಲು ಬೃಹತ್ ಕಾರ್ಖಾನೆ ಮತ್ತು ಅಣೆಕಟ್ಟುಗಳನ್ನೂ; ವಿಸ್ತಾರವೂ, ವೈವಿಧ್ಯಮಯವೂ ಆದ ಜನಕೋಟಿಯಾದ ನಮ್ಮನ್ನು ನಾವು ಸರಿಯಾಗಿ ಮತ್ತು ಸುಭದ್ರವಾಗಿ ಆಳಿಕೊಳ್ಳಲು ಒಂದು ಸಂಕೀರ್ಣ ಸಂವಿಧಾನವನ್ನೂ, ಕಾನೂನುಗಳ ಜಾಲವೊಂದನ್ನೂ ರೂಪಿಸತೊಡಗಿದೆವು. ಇದನ್ನು ಅಭಿವೃದ್ಧಿ ಎಂದು ಕರೆದೆವು. ಆದರೆ, ಈ ಬೃಹತ್, ವಿಸ್ತಾರ ಮತ್ತು ಸಂಕೀರ್ಣತೆಗಳ ಅಭಿವೃದ್ಧಿಯನ್ನು ನಮ್ಮ ಭಾಷೆಗಳು ನಿರ್ವಹಿಸಲಾರವೆಂದೂ ಕಂಡುಕೊಂಡೆವು. ಹಾಗಾಗಿ, ನಮ್ಮ ಎಲ್ಲ ಸಂಕಷ್ಟಗಳಿಗೆ ಇಂಗ್ಲಿಷರೇ ಕಾರಣವೆಂದು ಪ್ರತಿಪಾದಿಸಿ ಅವರನ್ನು ಹೇಗೋ ಇಲ್ಲಿಂದ ಜಾಗ ಖಾಲಿ ಮಾಡಿಸಿದೆವು. ಆದರೆ ಆ ಎಲ್ಲ ಸಂಕಷ್ಟಗಳ ಪರಿಹಾರದ ಮಂತ್ರವೆಂದು ಆರಂಭಿಸಿದ ಇಂತಹ ಅಭಿವೃದ್ಧಿಯ ಭಾಷೆಯಾಗಿ ಸಹಜವಾಗಿಯೇ ಅವರ ಭಾಷೆಯನ್ನೇ ಉಳಿಸಿಕೊಂಡೆವು. ಆದರೆ, ಇದೊಂದು ಅಭಿವೃದ್ಧಿ ಪರಿಕಲ್ಪನೆಯ ವ್ಯುತ್ಪತ್ತಿ ಸಂಬಂಧಿಯಾದ-ಅಂದರೆ ಅಡಿಪಾಯದ ಮಟ್ಟದ-ಒಡಕು ಎಂಬುದು ನಮ್ಮ ಆಡಳಿತಗಾರರಲ್ಲಿ ಯಾರಿಗೂ ತೋಚಲೇ ಇಲ್ಲ. ಅಂದರೆ, ನಮ್ಮ ಭಾಷೆ ನಿರ್ವಹಿಸಲಾರದ ಅಭಿವೃದ್ಧಿ ಎಂಬ ವಿದ್ಯಮಾನವು ನಾವು ಒಂದು ರಾಷ್ಟ್ರವಾಗಿ ನಿರ್ವಹಿಸಲಾಗದ, ನಮಗೆ ನಿಜವಾಗಿಯೂ ಬೇಡವಾಗಿರುವ ವಿದ್ಯಮಾನ ಕೂಡಾ ಆಗಿರಲಾರದೇ ಎಂಬ ಪ್ರಶ್ನೆ ನಮ್ಮ (ಆಳುವ ವರ್ಗದ) ಬುದ್ಧಿಜೀವಿಗಳನ್ನು ಕಾಡಲಿಲ್ಲ, ಕಾಡುತ್ತಿಲ್ಲ ಎಂದರೆ ಏನು ಹೇಳುವುದು? ನೆಹರೂ ಇಂತಹ ಬುದ್ಧಿಜೀವಿಗಳ 'ರಾಜ' ಎನ್ನಿಸಿಕೊಂಡಿದ್ದುದು ಮತ್ತು ಈಗಲೂ ಅನ್ನಿಸಿಕೊಂಡಿರುವುದು ಸಹಜವೇ ಆಗಿದೆ.

-೬-

ನಾವಿಂದು ಸಂಸ್ಕೃತಿಗೆ ಸಂಬಂಧಿಸಿದಂತೆ 'ವಿಸ್ಮೃತಿ'ಯ ಮಾತನಾಡುತ್ತೇವೆ. ಆದರೆ ಹಾಗೆ ಮಾತನಾಡುವಾಗ ಸಂಸ್ಕೃತಿಯನ್ನು ನಾವು, ಅದನ್ನು ಕುರಿತ ಆಧುನಿಕ ಗ್ರಹಿಕೆಗಳ ನೆಲೆಗಳಲ್ಲೇ ಪರಿಕಲ್ಪಿಸಿಕೊಂಡು ಮಾತನಾಡುತ್ತಿದ್ದೇವೆ. ಹಾಗಾಗಿ ಈ 'ವಿಸ್ಮೃತಿ'ಯ ಪರಿಕಲ್ಪನೆಯೂ ದೊಡ್ಡ ವಿಸ್ಮೃತಿಗೆ ಒಳಗಾಗಿದೆ ಎಂದರೆ ತಪ್ಪಾಗಲಾರದು. ಯಾವುದೀ ದೊಡ್ಡ ವಿಸ್ಮೃತಿ? ಈ ಪ್ರಶ್ನೆ ನಮ್ಮನ್ನು 'ಹಿಂದ್ ಸ್ವರಾಜ್'ನಲ್ಲಿ ಗಾಂಧೀಜಿ, ಇಂಗ್ಲಿಷರನ್ನು ಹಿಂಸಿಸಿ ಓಡಿಸುವ ಮೂಲಕ ಸ್ವಾತಂತ್ರ್ಯವನ್ನು ಸಾಧಿಸಬಹುದೆಂದು ನಂಬಿದ್ದ ತೀವ್ರಗಾಮಿಗಳಿಗೆ ಹೇಳಿದ 'ನಿಮ್ಮ ಸಮಸ್ಯೆ ಹುಲಿಯಾಗಿದೆಯೇ ಹೊರತು ಹುಲಿಗುಣವಲ್ಲ' ಎಂಬ ಮಾತಿಗೆ ಕೊಂಡೊಯ್ಯುತ್ತದೆ. ಈ ಮಾತಿನ ಆಳದ-ಬಹು ಆಯಾಮದ-ಅರ್ಥವನ್ನು ನಿರ್ಲಕ್ಷಿಸಿದ್ದೇ ನಮ್ಮ ನಿಜವಾದ ವಿಸ್ಮೃತಿಯಾಗಿದೆ. ಹಾಗಾಗಿ ಮಿಕ್ಕ

'ವಿಸ್ಮೃತಿ'ಯ ಪರಿಕಲ್ಪನೆಗಳೆಲ್ಲ–ಅವೆಷ್ಟೇ ವಸಾಹತೋತ್ತರವಾದದ ಹೆಸರಲ್ಲಿ ವಸಾಹತುಶಾಹಿ ವಿರುದ್ಧ ತನ್ನ ಸಂಕಥನಗಳನ್ನು ಮಂಡಿಸಿದರೂ–ಮೂಲತಃ ವಸಾಹತುಶಾಹಿ ಮನಸ್ಸಿನ ಪರಿಕಲ್ಪನೆಗಳೇ ಆಗಿವೆ. ಹಾಗಾಗಿಯೇ ಅವು ಹೆಚ್ಚೆಂದರೆ ಬೌದ್ಧಿಕ ಆಟದ ಪರಿಕರಗಳಾಗಿ ನಮ್ಮ ವಿಶ್ವ ವಿದ್ಯಾಲಯಗಳ, ಶಾಸ್ತ್ರಾಧ್ಯಯನ ಸಂಸ್ಥೆಗಳ ಅಧ್ಯಾಪಕರುಗಳ ಮತ್ತು ಸಂಶೋಧಕರ ಸ್ಕೀಮುಗಳ, ಪ್ರಾಜೆಕ್ಟುಗಳ, ಸೆಮಿನಾರುಗಳ ಉದ್ಯಮವನ್ನು ಬೆಳೆಸುತ್ತಿವೆಯೇ ಹೊರತು, ಎಲ್ಲ ಮೂಲ ಚಿಂತನೆಗಳ ಗಮ್ಯವಾಗಿರಬೇಕಾದ ರಾಷ್ಟ್ರ ನಿರ್ಮಾಣಕ್ಕೆ ಅಥವಾ ಸಾಮಾಜಿಕ ಪುನಾರಚನೆಗೆ ಸಂಬಂಧಿಸಿದ ಯಾವುದೇ ಬೌದ್ಧಿಕ ಸಂಚಲನೆಗೂ ಕಾರಣವಾಗಿಲ್ಲ.

ನಾರಾಯಣರು ತಮ್ಮ ಲೇಖನದಲ್ಲಿ ಈ ಸಮಸ್ಯೆಯ ಹತ್ತಿರಕ್ಕೆ ಬಂದಿರುವರಾದರೂ, ಅವರು ಹುಲಿಗುಣವನ್ನು ಶಾಸ್ತ್ರೀಯವಾಗಿ ಮಾತ್ರ ಅಭ್ಯಸಿಸಿರುವಂತೆ ತೋರುತ್ತಾ, ಆ ಶಾಸ್ತ್ರ ಪುಸ್ತಕಗಳನ್ನಷ್ಟೇ ಹಿಡಿದುಕೊಂಡು ಹುಲಿಯ ಹಿಂದೆ ಬಿದ್ದಿರುವ ಅಪಾಯವನ್ನು ಎದುರಿಸುತ್ತಿದ್ದಾರೆ. ಹಾಗೇ ಚೆನ್ನಿಯವರು, ಮೇಲ್ಜಾತಿಗಳವರು ಹುಲಿಗಳಾಗಿರುವಾಗ ದಲಿತರೂ ಸ್ವಲ್ಪ ಹುಲಿಗಳಾಗಲು ಅವಕಾಶ ನಿರಾಕರಿಸುವುದು ಅನ್ಯಾಯವೇ ಸರಿ ಎಂದು ತಾವು ಭಾವಿಸಿದ್ದಾಗಿ ಹೇಳಿಕೊಂಡಿದ್ದಾರೆ. ಆದರೆ, ಮೊದಲಾಗಿ ಇಂಗ್ಲಿಷ್ ಶಿಕ್ಷಣದಿಂದ ಯಾರಾದರೂ ಲಾಭ ಗಳಿಸಿದ್ದರೆ ಅದು ಮೇಲ್ಜಾತಿಯವರು ಎಂಬುದೇ ಒಂದು ಸಾರಾ ಸಗಟಾದ, ಹಾಗೇ ಸರಳೀಕೃತವಾದ ಮತ್ತು ಒಂದು ರೀತಿಯಲ್ಲಿ ವಿಕ್ಷಿಪ್ತವೂ ಆದ ತೀರ್ಮಾನವಾಗಿದೆ. ಇದು ಇಂಗ್ಲಿಷ್ ಶಿಕ್ಷಣ ನಮಗೆ ಕಲಿಸಿದ 'ನ್ಯಾಯಾನ್ಯಾಯ'ಗಳ ವಸಾಹತುಶಾಹಿಪರ ಪರಿಕಲ್ಪನೆಯ ಪರಿಣಾಮವೇ ಆಗಿದೆ. ಅಥವಾ ಮುಂಪಯಣದ–ಆಧುನಿಕ ನಾಗರೀಕತೆಯ–ಮಂಪರಿನಲ್ಲಿ, ನಾವು ಆಧುನಿಕ ಅ–ನಾಗರಿಕತೆಯ ಹಿಂಪಯಣ ಮಾಡುತ್ತಿರುವ ಉದಾಹರಣೆಯೇ ಆಗಿದೆ. ಇಲ್ಲದಿದ್ದರೆ ಈಗ ಜಗತ್ತಿನಾದ್ಯಂತ ಇದ್ದಕ್ಕಿದ್ದಂತೆ ಮತ್ತು ಸದ್ಯದ ತುರ್ತು ಅಗತ್ಯವೆಂಬಂತೆ 'ನಾಗರಿಕ ಸಮಾಜ' (Civil Soceity) ಸ್ಥಾಪನೆಯ ಆಂದೋಲನಗಳೇಕೆ ಹಬ್ಬುತ್ತಿದ್ದವು?

ಹಾಗೆ ನೋಡಿದರೆ ಈ ಹಿಂಪಯಣ–ಮುಂಪಯಣ ಎಂಬ ಪರಿಕಲ್ಪನೆಗಳೇ ಆಧುನಿಕ ವಿದ್ಯೆಯ ಫಲಗಳು. ಏಕೆಂದರೆ, ಜ್ಞಾನಕ್ಕೇ ತಲೆ ತಿರುಗಿರುವಾಗ ಈ ಹಿಂದೆ ಮುಂದೆ ಎನ್ನುವುದಕ್ಕೆ ಏನಾದರೂ ಅರ್ಥವುಂಟೆ? ಆದರೆ, ಆಧುನಿಕ ವಿದ್ಯೆಗಳಾದ ವಿಕಾಸವಾದ, ಇತಿಹಾಸಶಾಸ್ತ್ರ, ವಿಜ್ಞಾನಶಾಸ್ತ್ರಗಳೆಲ್ಲವೂ ನಮಗೆ ಮುಂದೆ ಎಂದರೆ ಒಳಿತು, ಹಿಂದೆ ಎಂದರೆ ಕೆಡುಕು ಎಂದೇ–ಅಂದರೆ ಅವೆರಡೂ ಪರ್ಯಾಯ ಪದಗಳೆಂಬಂತೆ–ನಂಬಿಸಿಬಿಟ್ಟಿವೆಯಲ್ಲಾ? ಅವು ಹೇಳುವುದು: ಮುಂದೆ ಇದೆ, ಇನ್ನೂ ಮುಂದೆ ಇದೆ, ಇನ್ನೂ ಮುಂದೆ ಮುಂದೆ.... ಇದೆ, ಆಧುನಿಕ ನಾಗರಿಕತೆಯ ಉತ್ತುಂಗ ಶಿಖರ! ಇಲ್ಲಿ ನಾನು ಜ್ಞಾನಕ್ಕೆ ತಲೆ ತಿರುಗಿದ ಮಾತನ್ನಾಡಿದೆ. ಈ ಮಾತಿನ ಮೂಲಕ ನಾನು ಪ್ರಸ್ತಾಪಿಸ ಬಯಸಿದ್ದು, ಈಗ ಜಗತ್ತನ್ನು ಮುಂದೆ ಮುಂದಕ್ಕೆ ಒಯ್ಯುತ್ತಿರುವ ಶಕ್ತಿ ಎಂದು ಹೇಳಲಾಗುವ ಯೂರೋಪಿನ 'ಜ್ಞಾನಯುಗ'ವನ್ನು ರೂಪಿಸಿದ ತಾತ್ವಿಕತೆಯನ್ನು.

ಇದು, ತನ್ನ ಮೂಲ ಜ್ಞಾನ ಮಾದರಿಯಾದ ಕ್ರಿಶ್ಚಿಯನ್ (ಕ್ಯಾಥೋಲಿಕ್) ಧರ್ಮವನ್ನು ಪರಿಷ್ಕರಿಸಿದ (ಪ್ರಾಟೆಸ್ಟೆಂಟ್)ರೀತಿ ಅದರ ಸ್ವರೂಪವನ್ನು ನಿರ್ಣಯಿಸಿತೆಂದು ಹೇಳಬೇಕು. ಅದು ಈ ಜಗತ್ತನ್ನು ಮನುಷ್ಯನ ಸುಖ ಸಂತೋಷಗಳಿಗಾಗಿ ದೇವರು ನೀಡಿರುವ ಕೊಡುಗೆ ಎಂದು ವ್ಯಾಖ್ಯಾನಿಸಿತು. ಆ ಮೂಲಕ ದೇವರು ಮತ್ತು ಜಗತ್ತಿನ ನಡುವಣ ಸಾವಯವ ಸಂಬಂಧವನ್ನು ಘಾಸಿಗೊಳಿಸಿದ್ದಲ್ಲದೆ, ಜಗತ್ತನ್ನು ಸುಖೋತ್ಪಾದನೆಗಳಿಗಾಗಿರುವ ಒಂದು ರೀತಿಯ ಕಚ್ಚಾ ಗ್ರಾಹಕ ವಸ್ತುವನ್ನಾಗಿ ಪ್ರಸ್ತುತಪಡಿಸಿತು. ಅದನ್ನು ಹೀಗೆ ಪರಿಗ್ರಹಿಸುವ-ಸುಖ ಸಂತೋಷಗಳಿಗಾಗಿ ಅನ್ವೇಷಿಸುವ, ಬಳಸುವ-ಮನುಷ್ಯನ ರೀತಿಯೇ (ಆಧುನಿಕ) ವಿಜ್ಞಾನ ವಿದ್ಯೆಯನ್ನೂ, ಅದರ ಅನ್ವಯ ಕೌಶಲ್ಯವಾದ ತಂತ್ರಜ್ಞಾನವನ್ನೂ ರೂಪಿಸಿತು. ಜಗತ್ತನ್ನು ಜಡವಾಗಿ, ತೂಕ-ಅಳತೆಗಳಿಗೆ ಸಿಗಬಲ್ಲ ಬರೀ ಭೌತವಾಗಿ ಗ್ರಹಿಸಿದ ಈ ಜ್ಞಾನಗಳು ಮನುಷ್ಯನನ್ನೂ ಜಡಗೊಳಿಸಿದ್ದರಲ್ಲಿ, ಅದರ ಆಧಾರದ ಮೇಲೆ ಆಧುನಿಕ ನಾಗರೀಕತೆಯೆಂಬ 'ಜಡಾತ್ಮಕ' ನಾಗರಿಕತೆಯನ್ನೂ ಕಟ್ಟಿದ್ದರಲ್ಲಿ ಆಶ್ಚರ್ಯವೇನು? ಜ್ಞಾನಕ್ಕೇ ತಲೆ ತಿರುಗಿದ ಪ್ರಸಂಗವೆಂದರೆ ಇದೇ! ಹಾಗೆಂದೇ ಇದರ ಬಗ್ಗೆ ಗಾಂಧೀಜಿ, ಇದು ನಾಗರಿಕತೆಯಲ್ಲ, ಅಧರ್ಮ, ಒಂದು ಮಹಾರೋಗ ಎಂದದ್ದು.

ಜ್ಞಾನಕ್ಕೆ ತಲೆ ತಿರುಗಿದ ಈ ಪ್ರಸಂಗವೇ ಇಂದೂ ನಮ್ಮನ್ನು ಆಳುತ್ತಿರುವುದು. ಈ ಪ್ರಸಂಗಾನುಸಂಧಾನವೇ ವಸಾಹತುಶಾಹಿಯಾಗಿ ಭಾರತದ ಮೂಲ ಸ್ವರೂಪವನ್ನೇ ಬದಲಾಯಿಸಿದ್ದು; ಅದರ ಅಂತಃಶಕ್ತಿಯನ್ನೇ ನಂದಿಸಿ, ಸೃಜನಶೀಲತೆಯನ್ನು ಬತ್ತಿಸಿದ್ದು. ಅದು ಇದನ್ನೆಲ್ಲ ಮಾಡಿದ್ದು, ಹಳ್ಳಿಗಳನ್ನು ಹಾಳು ಕೊಂಪೆಗಳನ್ನಾಗಿಸಿ, ನಗರೀಕರಣವೆಂಬ, ಭಾರತೀಯ ಬದುಕಿನ ಅಂತರ್ಗತ 'ಮಿತಿ'ಗಳನ್ನು ಉಲ್ಲಂಘಿಸುವ; ಹೀಗೆ ಉಲ್ಲಂಘಿಸುವುದು ಅನಿವಾರ್ಯವಷ್ಟೇ ಅಲ್ಲ, ಒಳ್ಳೆಯದು ಕೂಡಾ ಎಂಬ ನಂಬಿಕೆಯನ್ನು ಸೃಷ್ಟಿಸುವ ಮೂಲಕ. ಈ ನಂಬಿಕೆಯ ಮೂಲಕವೇ ಇಂಗ್ಲಿಷ್ ಭಾರತೀಯ ಭಾಷೆಗಳನ್ನು ಪಕ್ಕಕ್ಕೆ ತಳ್ಳುತ್ತಾ, ನಮ್ಮ ಬದುಕಿನ ಹೊಸ 'ಭವಿಷ್ಯ'ದ ಭಾಷೆಯಾಗಿ ತನ್ನನ್ನು ತಾನು ಪ್ರಸ್ತುತಪಡಿಸಿಕೊಂಡದ್ದು. ಈ ನಂಬಿಕೆಯಲ್ಲೇ ನಾವು ಕನ್ನಡ ಅಥವಾ ಇನ್ನಾವುದೇ ಭಾರತೀಯ ಭಾಷೆ ಆಧುನಿಕ ವಿಜ್ಞಾನ ಅಥವಾ ಇನ್ನಾವುದೇ ಆಧುನಿಕ ಶಾಸ್ತ್ರಗಳನ್ನು ನಿರ್ವಹಿಸಲಾರದು ಎಂಬ ಗಿಣಿ ಪಾಠ ಒಪ್ಪಿಸುತ್ತಿರುತ್ತೇವೆ. ಆದರೆ ಆ ಪಾಠ ಮರೆ ಮಾಡಿರುವ ಸತ್ಯವೆಂದರೆ, ಈ ನಮ್ಮ ಭಾಷೆಗಳು ಆ ಮಿತಿಗಳನ್ನು ಮೈಗೂಡಿಸಿಕೊಂಡೇ ಬೆಳೆದವುಗಳು ಮತ್ತು ಅದಕ್ಕಿಂತ ಹೆಚ್ಚಾಗಿ ಆ ಮಿತಿಗಳು ಭಾರತೀಯ ಬದುಕು ತನ್ನ ತಳ ಹರಿಯದಂತೆ ದರ್ಶನಾತ್ಮಕವಾಗಿ ತನಗೆ ತಾನು ರೂಪಿಸಿಕೊಂಡವೇ ಆಗಿದ್ದವು ಎಂಬುದು. ಅಂದರೆ, ನಮ್ಮ ಭಾಷೆಗಳು ನಮ್ಮ ಸಂಸ್ಕೃತಿಯ ಆತ್ಮ (ಅಥವಾ ಅನಾತ್ಮ) ದರ್ಶನ ಕಟ್ಟಿಕೊಟ್ಟ ಅನಂತತೆಯ ಆಯಾಮಗಳ ಹಾಗೇ, ಆ ಅನಂತತೆಯ ದರ್ಶನದ ಅರಿವು ಮರೆವಾಗದಂತೆ ರೂಪಿಸಿಕೊಂಡಿದ್ದ ಕೆಲವು ಲೌಕಿಕ ಮಿತಿಗಳನ್ನೂ ಮೈಗೂಡಿಸಿಕೊಂಡಿದ್ದವು. ಹಾಗಾಗಿ, ಕನ್ನಡ ಉನ್ನತ ವಿಜ್ಞಾನ-ತಂತ್ರಜ್ಞಾನಗಳನ್ನೂ ಮತ್ತು ಇತರೆ ಆಧುನಿಕ ಶಾಸ್ತ್ರಗಳನ್ನೂ ನಿರ್ವಹಿಸಲಾರವು ಎನ್ನುವುದು ಅಸಂಬದ್ಧ

ಮಾತ್ರವಲ್ಲ; ಭಾಷೆ ಒಂದು ಸಂಸ್ಕೃತಿಯಾಗಿ, ಆ ಮೂಲಕ ಆ ಭಾಷೆಯ ಜನರಿಗೆ ನೀವು ನಿಮ್ಮ ಮಿತಿ ಮೀರುತ್ತಿದ್ದೀರಾ, ನಿಮ್ಮನ್ನು ನೀವು ಕಳೆದುಕೊಳ್ಳುತ್ತಿದ್ದೀರಾ, ಇದು ಒಳ್ಳೆಯದಕ್ಕಿರಲಾರದು ಎಂದು ನೀಡುತ್ತಿರುವ ಎಚ್ಚರಿಕೆಯನ್ನು ಅರ್ಥ ಮಾಡಿಕೊಳ್ಳದ ಸೊಕ್ಕು ಕೂಡಾ ಆಗಿದೆ ಎನಿಸುತ್ತದೆ.

ಹೀಗೆ ನಮ್ಮ ಭಾಷೆಗಳು ಮೂಲತಃ ಗ್ರಾಮ ಸಂಸ್ಕೃತಿಯ ಭಾಷೆಗಳು. ಹಾಗೇ ಒಂದು ಗ್ರಾಮ ಕಾಲ-ದೇಶಗಳಲ್ಲಿ ತನ್ನ ಲಯ ಕಳೆದುಕೊಳ್ಳದೆ ತನ್ನ ಸತ್ವದ ವಿಸ್ತರಣೆಯಾಗಿ ಎಷ್ಟೆಲ್ಲ ಬೆಳೆಯಬಹುದೋ ಅಷ್ಟನ್ನು ಧಾರಣ ಮಾಡಿಕೊಂಡು ಸೃಜನಶೀಲವಾಗಿ ಬೆಳೆದು ಉಳಿದಿರುವುವು ಕೂಡ. ಹಾಗಾಗಿಯೇ ಅವು, ಗಾಂಧೀಜಿ ಮೂಲಕ ತನ್ನದೇ ಸತ್ವದ ಪುನರುಜ್ಜೀವನವಾಗಿ ಅಭಿವ್ಯಕ್ತಗೊಂಡ ಆಧುನಿಕತೆಯ ಆಯಾಮಗಳನ್ನು-ಸಮಾನತೆ, ಸೋದರತೆ ಮತ್ತು ಪ್ರಜಾಪ್ರಭುತ್ವ ತತ್ವಗಳನ್ನು-ಸ್ವಾಗತಿಸಿ, ಅದಕ್ಕೆ ಬೇಕಾದ ಹೊಸ ವ್ಯಾಕರಣ, ವಾಕ್ಯರಚನೆ ಮತ್ತು ಪರಿಭಾಷೆಯನ್ನು ಸಹಜವೆಂಬಂತೆ ರೂಪಿಸಿಕೊಂಡವು. ಅದೇ ಸಮಯದಲ್ಲಿ, ಈ ತತ್ವಗಳು ತಮ್ಮ ಲೌಕಿಕ ರೂಪಗಳಲ್ಲಿ ತಮ್ಮ ಮೂಲ ಜಾಯಮಾನದ ಮಿತಿಗಳನ್ನು ಉಲ್ಲಂಘಿಸತೊಡಗಿದೊಡನೆ, ಆ ಉಲ್ಲಂಘನೆಯ ಪ್ರಯತ್ನಗಳನ್ನು-ಅದನ್ನು ಆಧುನಿಕತಾವಾದವು ಸಾಹಸ, ಸಂಶೋಧನೆ, ಪ್ರಗತಿ ಇತ್ಯಾದಿ ಆಸೆ ಹುಟ್ಟಿಸುವ ಆಕರ್ಷಕ ನಾಮಧೇಯಗಳಿಂದ ಕರೆಯುವವಾದರೂ-ತಮ್ಮ ರಾಚನಿಕತೆಯಲ್ಲಿ ಒಪ್ಪಿಕೊಳ್ಳದೆ ಪ್ರತಿರೋಧಿಸಿದವು ಕೂಡ. ಆದರೆ ನಾವು ಸಾಹಸ-ಸಂಶೋಧನೆ-ಪ್ರಗತಿಗಳನ್ನು ಕುರಿತ ಮಿತಿ ಮೀರಿದ ವ್ಯಸನದಲ್ಲಿ ಇಂತಹ ಪ್ರತಿರೋಧಗಳನ್ನೆಲ್ಲ ಲೆಕ್ಕಿಸದೇ ಮುನ್ನುಗ್ಗಿ ಹೋಗಿದ್ದೇವೆ. ಹೀಗೆ ಮುನ್ನುಗ್ಗಿ ಹೋದ ಎಷ್ಟೋ ಸಮಯದ ನಂತರ ಎಲ್ಲೋ ಒಳಗೆ ಏಟಾಗಿದೆ ಎನ್ನಿಸಿದಾಗ, ನಾರಾಯಣರ ಲೇಖನದಲ್ಲಿ ಕಂಡು ಬರುವ 'ಕನ್ನಡಿಯೊಳಗೆ ಕಂಡವರು ನಾವೇ ಆಗಿದ್ದೆವೋ ಇಲ್ಲವೇ ನಾವು ಹೇಗಿರಬೇಕೆಂದು ಬಯಸಿದ್ದೆವೋ ಅದು ಅಲ್ಲಿ ಕಂಡಿತೋ? ಇದು ನಮ್ಮನ್ನು ಕಾಡಲಿಲ್ಲ', 'ಕನ್ನಡ ಚಿಂತನೆ ಎಂಬುದು ಹೀಗೆಯೇ 'ಇತರ'ಕ್ಕೆ ಜೋತುಬಿದ್ದು ಬದುಕಬೇಕೆ?' ಇತ್ಯಾದಿ ಹಿನ್ನೋಟದ, ಅನುಮಾನದ, ಆತಂಕದ, ಪರಿತಾಪದ ಮಾತುಗಳು, ಪ್ರಶ್ನೆಗಳು ಕೇಳಿಬರುತ್ತಿವೆ.

-೭-

ಎಲ್ಲೋ ಒಳಗೆ ಏಟು ಎಂದೆ. ಆದರೆ ಈ ಏಟು ಈಗ ಹೊರಗೂ ಕಾಣಿಸಲಾರಂಭಿಸಿದೆ. ಕೆಲವು ಸೂಕ್ಷ್ಮ ದೇಹಿಗಳಲ್ಲಿ ನೋವೂ ಅನುಭವಕ್ಕೆ ಬರತೊಡಗಿದೆ. ಈ ಏಟು ಹಲವು ನೆಲೆಗಳಲ್ಲಿ, ಹಲವು ಸ್ಥೂಲ ರೂಪಗಳಲ್ಲಿ-ಸತತವಾಗಿ ಹೆಚ್ಚುತ್ತಿರುವ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಹಿಂಸೆ (ಇದರಲ್ಲಿ ಅಭಿವೃದ್ಧಿ ಹಿಂಸೆಯೂ ಸೇರಿದೆ)-ನಮ್ಮನ್ನು ಕಾಡತೊಡಗಿದೆ. ಆದರೆ ಅದೆಲ್ಲದರ ಕಿರೀಟಪ್ರಾಯ ಪರಿಣಾಮ, 'ಪರಿಸರ ಬದಲಾವಣೆ' ಕುರಿತ ಜಾಗತಿಕ ಮಾತುಕತೆಗಳ ಸತತ ವೈಫಲ್ಯಗಳ-ರಾಜಕೀಯ

ಚೌಕಾಸಿಗಳ–ಹಿಂದೆ ಕಾಣುವ ಜೀವ ಜಗತ್ತಿನ ಏಕತೆ ಮತ್ತು ಸಮಗ್ರತೆಯನ್ನು ಕುರಿತ ನಮ್ಮ ಮರೆವಿನಲ್ಲಿ ಎದ್ದು ಕಾಣತೊಡಗಿದೆ. ಇದು ಜಗತ್ತನ್ನು ಒಟ್ಟಿಗೆ ಬಂಧಿಸಿಟ್ಟಿರುವ ಅನುಭಾವದ ಸಂಪೂರ್ಣ ನಾಶದ ಸೂಚನೆಯಲ್ಲದೆ ಮತ್ತೇನಲ್ಲ. ಇನ್ನು ಕೆಲವೇ ವರ್ಷಗಳಲ್ಲಿ ಜಗತ್ತು ಉಸಿರಾಡುವುದೇ ಕಷ್ಟವಾಗುವುದೆಂದು ಸೂಚಿಸುವ ಈ 'ಪರಿಣಾಮ'ದ ಮುಂಗಾಣ್ಕೆಯೇ, ಗಾಂಧಿಯವರ 'ಹಿಂದ್ ಸ್ವರಾಜ್' ಚಿಂತನೆಯ ಮೂಲಭಿತ್ತಿಯೂ ಆಗಿದೆ ಎಂಬುದನ್ನು ನಾವಿಲ್ಲಿ ಗಮನಿಸಬೇಕು: 'ಈ ಭೂಮಿ ಎಲ್ಲರ ಆಸೆಗಳನ್ನು ಪೂರೈಸಬಲ್ಲದೇ ಹೊರತು ದುರಾಸೆಗಳನ್ನಲ್ಲ'.

ನಮ್ಮ ಆಸೆಗಳು ನಮಗೇ ಗೊತ್ತಾಗದಂತೆ ದುರಾಸೆಗಳಾಗಿ ಮಾರ್ಪಾಡಾಗಿದ್ದು, ನಮ್ಮ ಹಳ್ಳಿಗಳು ನಾಶವಾಗತೊಡಗಿದಾಗ; ನಗರೀಕರಣದ ಭೂತ ನಮ್ಮನ್ನು ಹೊಗಲಾರಂಭಿಸಿದಾಗ. ಮನುಷ್ಯ ನೈಸರ್ಗಿಕವಾಗಿ ಹಳ್ಳಿಯುವನಾಗಿಯೇ–ಸ್ಥಳೀಯನಾಗಿಯೇ–ಉಳಿಯುವಂತೆ ಅವನ ದೇಹ ಮತ್ತು ಪ್ರಜ್ಞೆ ವಿಕಾಸಗೊಂಡಿವೆ; ಹಾಗಾಗಿ ಗ್ರಾಮ ಸಂಸ್ಕೃತಿಯೇ ಅವನ ಧರ್ಮ ಎಂದ ಗಾಂಧೀಜಿ ಪ್ರಕಾರ, ಮನುಷ್ಯನ ಮಾಹಿತಿ–ವ್ಯಾವಹಾರಿಕ–ಪ್ರಪಂಚ (ಭೌತಿಕ ಘಟಕ) ದೊಡ್ಡದಾಗುತ್ತಿದ್ದಂತೆ, ಅವನ (ಪ್ರಜ್ಞಾ) ಕೇಂದ್ರವೇ ವಿಚಲಿತವಾಗತೊಡಗಿ; ತನ್ನ ಪ್ರಪಂಚ ತನ್ನ ಗ್ರಹಿಕೆಯನ್ನು ಮೀರಿದ್ದು, ಅದು ತನ್ನ ಹತೋಟಿಗೆ ಸಿಗದಂತಹುದು ಎಂಬ ಭಾವನೆಗೆ ಈಡಾಗತೊಡಗುತ್ತಾನೆ. ಇದರಿಂದಾಗಿ ಅವನು ನಿಧಾನವಾಗಿ ಬದುಕಿನಲ್ಲಿ ನಿಜವಾದ ಆಸಕ್ತಿ ಕಳೆದುಕೊಳ್ಳುತ್ತಾನೆ, ಜಗತ್ತಿಗೆ ಬೇಜವಾಬ್ದಾರನಾಗತೊಡಗುತ್ತಾನೆ; ಅದರೊಂದಿಗೆ ಅವನ ಪಾಲಿನ ಸ್ವರಾಜ್ಯವೂ ಮಣ್ಣುಗೂಡುತ್ತದೆ. ಹೀಗೆ ಸ್ವರಾಜ್ಯವನ್ನು–ಸಾಮಾನ್ಯ ಮನುಷ್ಯನ ಆತ್ಮ ಸಾಮ್ರಾಜ್ಯವನ್ನು–ನಿಧಾನವಾಗಿ ಮಣ್ಣುಗೂಡಿಸುವ ಭಾಷೆ ಇಂಗ್ಲಿಷ್. ಹೇಗೆಂದರೆ, ಅದೇ ಅವನನ್ನು ಅವನ ಸಹಜ–ನೈಸರ್ಗಿಕ–ನೈತಿಕ ಮಿತಿಗಳಿಂದ ಹೊರಸೆಳೆದು, ಅವನ ಲೌಕಿಕ ಪ್ರಪಂಚವನ್ನು ದೊಡ್ಡದೂ ಮತ್ತು ಜಟಿಲವನ್ನಾಗಿಯೂ ಮಾಡುತ್ತಾ ಅವನ ಕೇಂದ್ರವನ್ನೇ ದುರ್ಬಲಗೊಳಿಸಿರುವ ಭಾಷೆ. ಹಾಗೆಂದೇ ನಮ್ಮ ಬಹಳಷ್ಟು ನಗರ–ಪಟ್ಟಣಗಳು, ಬದುಕಿನ ಪರಿಣಾಮದ ಭಾಷೆಯಲ್ಲಿ ನೋಡಿದಾಗ ನಮ್ಮ ಹಾಳಾದ ಹಳ್ಳಿಗಳ ಇಂಗ್ಲಿಷ್ ಅನುವಾದಗಳಿಂತಿರುವುದು! ಈ ದೃಷ್ಟಿಯಿಂದ, ನಾರಾಯಣರು ಸದ್ಯದ ಲೇಖನದ ಮೂಲಕ ಪ್ರತಿನಿಧಿಸುತ್ತಿರುವ ಇದೇ ನೆಲೆಯ ಈವರೆಗಿನ ಎಲ್ಲ ಕನ್ನಡ ಭಾಷಾ ಚಿಂತನೆಗಳನ್ನು 'ಕನ್ನಡದ ಹಿಂದ್ ಸ್ವರಾಜ್' ಎಂದು ಕರೆಯಬಹುದೇನೋ!

ಈ ಹಿಂದೆ ನಾನು ಮತ್ತು ನನ್ನ ಕೆಲವು ಮಿತ್ರರು ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸುವ ಸರ್ಕಾರದ ನಿರ್ಧಾರವನ್ನು ಸಾರಾ ಸಗಟಾಗಿ ವಿರೋಧಿಸಿದ್ದೂ ಇಂತಹ ಚಿಂತನೆಯ ಸ್ಫೂರ್ತಿಯಿಂದಲೇ. ಆದರೆ ಅದು ನಮಗೆ ದೊರಕಿದ್ದು ನೇರವಾಗಿ 'ಹಿಂದ್ ಸ್ವರಾಜ್'ನಿಂದಲ್ಲ. ಕನ್ನಡ ನವೋದಯದ ಮೀಮಾಂಸೆಯಿಂದ. ಅದು ಹೇಗೆಂದರೆ, ಕನ್ನಡ ನವೋದಯವು ಒಂದು ಸಾಂಸ್ಕೃತಿಕ ಮೀಮಾಂಸೆಯಾಗಿ ಗಾಂಧಿಯುಗದ ಮೌಲ್ಯಗಳನ್ನು ಕನ್ನಡ ಪ್ರಜ್ಞೆಯೊಳಕ್ಕೆ ವಿವಿಧ ರೂಪಗಳಲ್ಲಿ ತನ್ನದೇ

ವಿಶಿಷ್ಟತೆಯೊಂದಿಗೆ ಅಳವಡಿಸಿಟ್ಟಿತ್ತು. ಹಾಗಾಗಿ ಅದು ಕನ್ನಡದ ಬಗ್ಗೆ ಆಡಿದ ಮಾತೆಲ್ಲ ಕನ್ನಡದ ಬದುಕಿನ ಬಗ್ಗೆ ಆಡಿದ ಮಾತೂ ಆಗಿರುತ್ತಿತ್ತು. ಈ ಸಂಬಂಧ, ಆಗಲೇ ವೈಯುಕ್ತಿಕ ಸಾಹಸವಾಗಿ ಕಾರಂತರು ಕನ್ನಡದ್ದೇ ವಿಶ್ವಕೋಶ ರಚಿಸಿದ್ದನ್ನು, ಬೇಂದ್ರೆಯವರ ಕನ್ನಡವು ಕನ್ನಡವ ಕನ್ನಡಿಸುವಂತಿರಬೇಕು ಎಂಬ ವಾಣಿಯನ್ನು, ಮಾಸ್ತಿಯವರ 'ಮೊದಲು ನಾನು ಕನ್ನಡಿಗನು; ಹಾಗಾಗಿ ಭಾರತದವನು; ಕರ್ನಾಟಕವಿಲ್ಲದೆ ಭಾರತವೆಲ್ಲಿದೆ?' ಎಂಬ ಪ್ರಶ್ನೆಯನ್ನು; ಮತ್ತು ಇವೆಲ್ಲವುಗಳ ಹಿಂದಿದ್ದ ಆತಂಕ ಮತ್ತು ಆತ್ಮ ವಿಶ್ವಾಸಗಳೆರಡನ್ನೂ ಆಗಲೇ ವ್ಯಾಪಕವಾಗಿ ಪಸರಿಸುತ್ತಿದ್ದ ಇಂಗ್ಲಿಷ್ ಹುಚ್ಚಿನ ಹಿನ್ನೆಲೆಯಲ್ಲಿ ವಿವರಿಸಿ ಸ್ಪಷ್ಟಪಡಿಸುವಂತಿದ್ದ ಕುವೆಂಪು ಅವರ 'ಮನುಜಮತ:ವಿಶ್ವಪಥ' ಕೃತಿಯಲ್ಲಿ 'ನಮಗೆಷ್ಟು ಇಂಗ್ಲಿಷ್ ಬೇಕು? ಎಂಬುದನ್ನು ಚರ್ಚಿಸುವ ಕನ್ನಡ ಮೀಮಾಂಸಾ ಲೇಖನಗಳನ್ನೂ ಗಮನಿಸಬೇಕು. ಆದರೆ ಹೀಗೆ ಆಂತರಿಕವಾಗಿ ಕ್ರಾಂತಿಕಾರಿಯೇ ಆಗಿದ್ದ ಈ ಕನ್ನಡ ನವೋದಯ ಪೂರ್ಣವಾಗಿ ಪ್ರಬುದ್ಧಗೊಳ್ಳುವ ಮುನ್ನವೇ ನವ್ಯವು ತನ್ನ ರಭಸದಲ್ಲಿ ಅದನ್ನು ಹೊರಗಿನಿಂದ ಹೊಡೆದುಕೊಂಡು ಹೋಯಿತು. ಈ ನವ್ಯವು ಮೂಲತಃ ಇಂಗ್ಲಿಷ್ ಮೇಷ್ಟ್ರುಗಳ ಬೌದ್ಧಿಕ ಕೊಡುಗೆಯಾಗಿತ್ತು ಎಂಬುದು ಇಲ್ಲಿ ಕಡಿಮೆ ಮಹತ್ವದ ಸಂಗತಿಯೇನಲ್ಲ. (ಈ ಮೂಲಕ ನಾನು ಇಲ್ಲಿ ನವ್ಯ ಆಂದೋಲನದ ಬಗ್ಗೆ ವಿಮರ್ಶೆಯನ್ನೇನೂ ಮಾಡುತ್ತಿಲ್ಲ ಎಂದೂ ಹೇಳಬಯಸುವೆ)

–೮–

ನಾನು ಬರೆದ ಇಷ್ಟೆಲ್ಲ ಓದಿದ ಯಾರಿಗಾದರೂ, ಇಡಿಯಾಗಿ ಇದು ಗಾಂಧಿ ಚಿಂತನೆಯನ್ನೂ, ನವೋದಯ ಮೀಮಾಂಸೆಯನ್ನೂ ಪ್ರಶ್ನೆ ಮಾಡದೆ ಒಪ್ಪಿಕೊಂಡ ಭೋಳೆ ಬರಹ ಎಂದು ಅನ್ನಿಸಿದ್ದರೆ ಆಶ್ಚರ್ಯವಿಲ್ಲ. ಏಕೆಂದರೆ, ಜಗತ್ತೇ ಇಂತಹ ಎಲ್ಲ ಚಿಂತನೆಗಳನ್ನು ಧಿಕ್ಕರಿಸಿ ಇನ್ನೊಂದು ದಿಕ್ಕಿನಲ್ಲಿ ಓಡುತ್ತಿರುವಾಗ, ಅದರ ವಿರುದ್ಧ ದಿಕ್ಕಿನಲ್ಲಿ ಹೋಗಬಯಸುವ ಇವನಿಗೆಲ್ಲೋ ಭ್ರಾಂತು ಎಂದು ಇವರು ಅಂದುಕೊಳ್ಳುವುದು ಸಹಜವೇ ಆಗಿದೆ. ಆದರೆ ಹೀಗೆ ವ್ಯಾವಹಾರಿಕ ನೆಲೆಯಲ್ಲಿ ಪ್ರಶ್ನೆ ಮಾಡಬಯಸುವವರು, ಒಂದು ನಿಜದ ನೆಲೆಯ ಪ್ರಶ್ನೆಯನ್ನೂ ಎದುರಿಸಬೇಕು: ನಿಜವಾಗಿಯೂ ನಾವು ಓಡುತ್ತಿರುವುದು ಸರಿಯಾದ ದಿಕ್ಕಿನಲ್ಲಿಯೇ? ಎದೆ ಮುಟ್ಟಿಕೊಂಡು ನೋಡಿ ಹಾಗೆ ಹೇಳಬಲ್ಲಿರಾ? ನಿಮಗೆ ಒಳಗೆಲ್ಲೂ ಈ ಸಂಬಂಧವಾಗಿ ಪ್ರಶ್ನೆಗಳೇ, ತಲ್ಲಣಗಳೇ ಇಲ್ಲವೇ? ಅಲ್ಲದೆ, ಸರಿ–ತಪ್ಪುಗಳ ಕಲ್ಪನೆಯನ್ನೇ ಆಧುನಿಕ ಜ್ಞಾನಸಂಪತ್ತು ವಿಕ್ಷಿಪ್ತಗೊಳಿಸಿರುವಾಗ, ಎಲ್ಲವನ್ನೂ ಪ್ರಶ್ನೆ ಮಾಡಿಯೇ ತೀರಬೇಕೆಂಬುದು ಒಂದು ಆಧುನಿಕ ಚಟ ಮಾತ್ರವಾಗುವ ಸಂಭವವೂ ಉಂಟಲ್ಲವೇ? ಹಾಗೆ ನೋಡಿದರೆ, ಗಾಂಧಿ ಆಧುನಿಕ ನಾಗರೀಕತೆಯನ್ನು ಪ್ರಶ್ನೆ ಮಾಡಿದ್ದರಿಂದಲೇ 'ಹಿಂದ್ ಸ್ವರಾಜ್' ಹುಟ್ಟಿದ್ದಲ್ಲವೆ? ಹಾಗಾಗಿ, ನಾವೀಗ ಅದನ್ನು ಪ್ರಶ್ನೆ ಮಾಡೋಣ; ಆದರೆ ಅದನ್ನು ತಿರಸ್ಕರಿಸಿ, ಧಿಕ್ಕರಿಸಿ ನಾವು ಹಿಡಿದ ದಾರಿಯಲ್ಲಿ ಎಲ್ಲ ಸರಿಯಾಗಿದೆಯೇ ಎಂಬ ಪ್ರಶ್ನೆಯ ಜೊತೆಗೆ. ಇಲ್ಲ, ನಾವೀಗ ಹಿಡಿದಿರುವ ದಾರಿ

ಸರಿಯಿಲ್ಲ, ಮೂಲದಲ್ಲೇ ಎಲ್ಲೋ ಏನೋ ತೊಂದರೆ ಇದ್ದಂತಿದೆ ಎಂದು ಎನಿಸಲಾರಂಭಿಸಿರುವವರಾದರೂ, 'ಹಿಂದ್ ಸ್ವರಾಜ್'ನ್ನು ಪ್ರಶ್ನೆ ಮಾಡಿಯೂ ಅದನ್ನು ಸಹಾನುಭೂತಿಯಿಂದ ಪುನರಾವಲೋಕಿಸಬೇಕಿದೆ.

ಈ ದಾರಿಯ ಆರಂಭದಲ್ಲೇ, ಅದ್ಭುತ ಮುನ್ನೋಟದೊಂದಿಗೆ ಹೀಗೆ ಅವಲೋಕಿಸಿದ ಒಂದು ಪ್ರಯತ್ನವೇ ಭಾರತೀಯ ಸಮಾಜವಾದಿ ಚಳುವಳಿ. ವಿಶೇಷವಾಗಿ ಡಾ॥ ರಾಮಮನೋಹರ ಲೋಹಿಯಾ ಅವರ ಸಮಾಜವಾದಿ ಚಿಂತನೆಗಳು. ಲೋಹಿಯಾ ಆಧುನಿಕ ನಾಗರೀಕತೆ ಪೂರ್ಣವಾಗಿ ಜಡಾತ್ಮಕ ಎಂದು ಭಾವಿಸಲಿಲ್ಲ. ಆದರೆ ಅದು ತಾನು ಹುಟ್ಟು ಹಾಕಿದ ರಾಜಕಾರಣಕ್ಕೆ ಸಿಕ್ಕಿ, ಹಾಗಾಗುವ ಅಪಾಯವನ್ನು ಅವರು ಮುನ್ನೋಡಬಲ್ಲವರಾಗಿದ್ದರು. ಹಾಗಾಗಿಯೇ ಅವರು ಅಂತಹ ರಾಜಕಾರಣಗಳೆನಿಸಿದ ಮಾರ್ಕ್ಸ್‌ವಾದಿ ಮತ್ತು ಬಂಡವಾಳಶಾಹಿ ರಾಜಕಾರಣಗಳೆರಡನ್ನೂ ಒಂದೇ ನಾಗರಿಕತೆಯ ಎರಡು ಟಿಸಿಲುಗಳು ಎಂದು ಗುರುತಿಸಿದ್ದರಲ್ಲದೆ, ಕಮ್ಯೂನಿಸಮ್ಮನ್ನು ಆಧುನಿಕ ಕ್ರಿಶ್ಚಿಯನ್ ಧರ್ಮದ ನಂತರ ಯೂರೋಪ್ ಏಷ್ಯಾದ ಮೇಲೆ ಪ್ರಯೋಗಿಸುತ್ತಿರುವ ಇತ್ತೀಚಿನ ಅಸ್ತ್ರ ಎಂದು ಬಣ್ಣಿಸಿದ್ದರು. ಅವರು ಗಾಂಧೀಜಿಯ ಹಾಗೆ ಆಧುನಿಕ ವಿಚಾರಗಳ ಪರವಾಗಿದ್ದು, ಒಂದು ರೀತಿಯಲ್ಲಿ (ಬಂಡಾಯ) ಗಾಂಧಿವಾದಿ ಎನಿಸಿಕೊಂಡರೂ; ಆಧುನಿಕ ನಾಗರಿಕತೆ ಎಂದರೆ ಬರೀ ಲೌಕಿಕತೆ ಎಂಬ ಗಾಂಧಿ ನಂಬಿಕೆಯನ್ನು ಅಷ್ಟಾಗಿ ಒಪ್ಪಲಿಲ್ಲ. ಹಾಗಾಗಿಯೇ ಗಾಂಧಿ–ಲೋಹಿಯಾ ನಡುವಣ ಮೊದಲ ಪತ್ರ ವ್ಯವಹಾರವೇ ಇಬ್ಬರ ಪಾಲಿಗೂ ಕಹಿಯಿಂದ ಕೂಡಿತ್ತು. ಲೋಹಿಯಾ, ಗಾಂಧೀಜಿಯ ಖಾದಿ–ಗ್ರಾಮೋದ್ಯೋಗಳನ್ನು ಭಾರತ ಸ್ವರಾಜ್ಯವನ್ನು ಸಂಪಾದಿಸಬಲ್ಲ ಕಾರ್ಯ ಸಾಧನಗಳು ಎಂಬುದನ್ನು ಸ್ವಲ್ಪ ಕಟು ಭಾಷೆಯಲ್ಲಿ ಅಲ್ಲಗೆಳೆದಿದ್ದರು. ಭಾರತ ಕಾಲದ ಕಂದಕದಲ್ಲಿ ಸಿಕ್ಕಿಹಾಕಿಕೊಳ್ಳಬಾರದೆಂದು ಅವರು ಸೂಚಿಸಿದ್ದರು.

ಲೋಹಿಯಾರ ಬರಹದ ಭಾವ–ಭಂಗಿಗಳಿಂದ ಗಾಂಧಿ ಅಸಮಾಧಾನಗೊಂಡರು. ಲೋಹಿಯಾ ತಮ್ಮ ಭಾಷಾ ಶೈಲಿಯ ವಿಷಯದಲ್ಲಿ ಕ್ಷಮೆ ಕೋರಿದೊಡನೆ ಗಾಂಧಿ–ಲೋಹಿಯಾ ನಡುವೆ 'ವಿಮರ್ಶಾತ್ಮಕ'ವೆಂದು ಕರೆಯಬಹುದಾದ ದೀರ್ಘಕಾಲೀನ ಗುರು–ಶಿಷ್ಯ ಸಂಬಂಧ ಅರಳಿತು. ನೌಖಾಲಿ ಯಾತ್ರೆಯಿಂದ ಆರಂಭವಾದ ಗಾಂಧೀಜಿಯ ಕೊನೆಯ ದಿನಗಳಲ್ಲಿ–ಅವರ ಕೊಲೆಯಾಗುವ ಹಿಂದಿನ ದಿನದವರೆಗೂ–ಅವರ ವೈಯುಕ್ತಿಕ ಪರಿವಾರದ ಹೊರತಾಗಿ, ಅವರೊಂದಿಗೆ ಅವರ ಕೋರಿಕೆಯ ಮೇರೆಗೇ ಇದ್ದವರೆಂದರೆ ಲೋಹಿಯಾರೇ. ಆ ಹೊತ್ತಿಗೆ ಗಾಂಧೀಜಿ 'ಹಿಂದ್ ಸ್ವರಾಜ್'ನ್ನು ಅದರ ಭಾವನೆಯ ಮಟ್ಟದಲ್ಲೂ ನಿರಾಕರಿಸಿದ್ದ ನೆಹರೂ ಮತ್ತವರ ಸಹೋದ್ಯೋಗಿಗಳ 'ರಾಜ್ಯಭಾರ'ದ ರೀತಿ ನೀತಿಗಳಿಂದ ಭ್ರಮನಿರಸನರಾಗಿದ್ದರು. ಇದರ ಪರಿಹಾರವಾಗಿ ಲೋಹಿಯಾ ಮತ್ತವರ ಸ್ನೇಹಿತರ ಕಡೆ ನೋಡತೊಡಗಿದ್ದರು. ಆದರೆ ಲೋಹಿಯಾ ಮತ್ತವರ ಸ್ನೇಹಿತರು ಗಾಂಧೀಜಿಯ ನಿರೀಕ್ಷೆಗಳನ್ನು ಪೂರ್ಣವಾಗಿ ಅರ್ಥ ಮಾಡಿಕೊಳ್ಳುವ, ಹಾಗಾಗಿ ನಿಜಗೊಳಿಸುವ ಸ್ಥಿತಿಯಲ್ಲಿರಲಿಲ್ಲ. ಅಥವಾ ಈ ಸಂಬಂಧ ಹಾಗೆ ಪ್ರಬುದ್ಧಗೊಳ್ಳಲು

ಇತಿಹಾಸ ಅವಕಾಶ ಕೊಡಲಿಲ್ಲ ಎಂದೂ ಹೇಳಬಹುದು. ಗಾಂಧಿ-ಲೋಹಿಯಾ ಮಾತುಕತೆಗಳು ಗಾಂಧೀಜಿಯ ಆಹ್ವಾನದ ಮೇರೆಗೇ - ನಿಜವಾಗಿ ಆರಂಭವಾಗುವ ಮೊದಲೇ ಗಾಂಧಿ ಮತಮೂರ್ಖನೊಬ್ಬನ ಗುಂಡಿಗೆ ಬಲಿಯಾಗಬೇಕಾಯಿತು.

ಇದನ್ನೆಲ್ಲ ಇಷ್ಟು ವಿವರವಾಗಿ ಇಲ್ಲಿ ಏಕೆ ಹೇಳುತ್ತಿದ್ದೇನೆಂದರೆ, 'ಹಿಂದ್ ಸ್ವರಾಜ್' ಕುರಿತ ಪರ ಮತ್ತು ವಿರೋಧಗಳೆಂಬ ಎರಡು ಅತಿಗಳ ನಡುವೆ ಮಧ್ಯಮ ಮಾರ್ಗವೊಂದು ಭಾರತದ ರಾಜಕೀಯ ಇತಿಹಾಸದಲ್ಲಿ ಆರಂಭವಾಗಿತ್ತು ಎಂದು ಸೂಚಿಸಲು. ಲೋಹಿಯಾಗೆ ಪ್ರತಿ ಮನುಷ್ಯನೂ ಸಂತನಾಗಬಲ್ಲ ಎಂಬ ಗಾಂಧಿ ನಂಬಿಕೆಯಲ್ಲಿ ಅಷ್ಟಾಗಿ ವಿಶ್ವಾಸವಿರಲಿಲ್ಲ. ಅವರ ಪ್ರಕಾರ ಸಂತನಾಗಬೇಕೆಂಬುದು ಒಂದು ಉನ್ನತ ಆದರ್ಶ ಅಷ್ಟೆ. ಆದರೆ ಆದರ್ಶಗಳೇ ಎಲ್ಲರ ನಿಜ ಜೀವನವನ್ನು ಆಳಲಾರವು. ಹಾಗಾಗಿ ಸಾಮಾನ್ಯ ಮನುಷ್ಯನ ಚಿತ್ತವೃತ್ತಿಯ ಏರಿಳಿತಗಳನ್ನು ಕಾಲ-ದೇಶಗಳ ವ್ಯಾಪ್ತಿಯಲ್ಲಿ ಗಮನಿಸಿ, ಅದಕ್ಕೆ ತಕ್ಕನಾದ ರಾಜಕೀಯ ಕಾರ್ಯಕ್ರಮಗಳನ್ನು ಆವಿಷ್ಕರಿಸಬೇಕೆಂಬುದು ಅವರ ಅಭಿಪ್ರಾಯವಾಗಿತ್ತು. ಅದಕ್ಕೆ ತಕ್ಕುನಾಗಿಯೇ, ಮನುಷ್ಯನ ದೀರ್ಘಕಾಲಿಕ(ಅಧ್ಯಾತ್ಮಿಕ) ಆಶಯಗಳ ಮತ್ತು ಅಲ್ಪಕಾಲಿಕ(ಲೌಕಿಕ) ಆಸೆಗಳ ನಡುವೆ ವೈರುಧ್ಯ ಸೃಷ್ಟಿಯಾಗದಂತಹ ಮತ್ತು ಆಧುನಿಕ ನಾಗರಿಕತೆ ಎಂಬುದು ಕೊನೆಯಿರದ ಸುಖದ ವ್ಯಸನದಲ್ಲಿ ಮನುಷ್ಯನನ್ನು ಆಂತರಿಕವಾಗಿ ನಾಶ ಮಾಡುವ ಸಾಧನವಾಗದಂತೆ ಅದನ್ನು ಪಳಗಿಸುವ ಮಧ್ಯಮ ರಾಜಕೀಯ ಮಾರ್ಗವೊಂದನ್ನು ಅವರು ಮಂಡಿಸಿದರು. ಅದರ ಭಾಗವಾಗಿ ಜಗತ್ತೇಕೆ, ನಿರ್ದಿಷ್ಟವಾಗಿ ಭಾರತವೇಕೆ ಹೀಗೆ ಆಧುನಿಕ ನಾಗರಿಕತೆಯ ವ್ಯಾಮೋಹಕ್ಕೆ ಸಿಕ್ಕಿದೆ ಎಂಬುದನ್ನರಿತು, ಅದಕ್ಕೆ ಪರಿಹಾರವಾಗಿ ತನ್ನ ರಾಜಕೀಯ ಕಾರ್ಯಕ್ರಮಗಳನ್ನು ನಿರೂಪಿಸಿದರು.

ಆಧುನಿಕ ನಾಗರೀಕತೆ ಎಲ್ಲ ಹಳೆಯ ಸಾಮಾಜಿಕ-ಆರ್ಥಿಕ-ರಾಜಕೀಯ ಸಂರಚನೆಗಳನ್ನೂ ಧ್ವಂಸಗೊಳಿಸಿ ಹೊಸ ಯುಗದ ಕಾಣ್ಕೆಯ ರೂಪದಲ್ಲಿ ಮಂಡಿಸಿದ್ದ ಸಾರ್ವತ್ರಿಕ ಸಮಾನತೆಗಾಗಿ ಭಾರತ ಹಂಬಲಿಸುತ್ತಿದೆ ಎಂದು ಲೋಹಿಯಾ ಗುರುತಿಸಿದರು. ಈ ಸಮಾನತೆಯ ಹಂಬಲ ನಿರಂತರ ಸುಖ ಸಂಪಾದನೆಯ ವ್ಯಭಿಚಾರವಾಗಿ ಅವನತಿಗೊಳ್ಳದಂತೆ ಅವರು ಅದನ್ನು ಹೊಸ ಜಗತ್ತಿನ ಹಂಬಲವಾಗಿ ಹೀಗೆ ಪ್ರಸ್ತುತಪಡಿಸಿದರು: 'ಸಮಾನತೆಯ ಪರಿಕಲ್ಪನೆಯನ್ನು ಅದರ ನಾಲ್ಕು ಆಯಾಮಗಳಲ್ಲಿ ಗ್ರಹಿಸಬೇಕಾಗಿದೆ. ಲೌಕಿಕ ಸಮಾನತೆ ಎಂದರೆ, ರಾಷ್ಟ್ರಗಳ ನಡುವಣ (ಬಾಹ್ಯಾಂತರ)ಸಮೀಪೀಕರಣವಲ್ಲದೆ, ರಾಷ್ಟ್ರದೊಳಗಿನ (ಆಂತರಿಕ) ಸಮೀಪೀಕರಣ ವೆಂದೂ; ಆಧ್ಯಾತ್ಮಿಕ ಸಮಾನತೆಯೆಂದರೆ, ಬಾಹ್ಯ ಬಂಧುತ್ವವಲ್ಲದೆ ಆಂತರಿಕ ಪ್ರಶಾಂತಿಯೆಂದೂ ಅರ್ಥವಾಗಬೇಕು. ಈ ಪ್ರಶಾಂತಿ, ಬಂಧುತ್ವ ಹಾಗೂ ರಾಷ್ಟ್ರದೊಳಗೆ ಮತ್ತು ರಾಷ್ಟ್ರಗಳ ನಡುವಣ ಲೌಕಿಕ ಸಮಾನತೆ-ಈ ನಾಲ್ಕೂ ಆಯಾಮಗಳನ್ನೊಳ ಗೊಂಡ ಒಂದು ಸಮಗ್ರ ಕಲ್ಪನೆ ಮಾತ್ರ ಬದುಕಿನ ಪರಮ ಗುರಿ ಹಾಗೂ ಉದ್ದೇಶವಾಗಲು ಅರ್ಹತೆ ಪಡೆಯುತ್ತದೆ.'

ಇಂತಹ ಸಮಾನತೆಯ ಅನುಷ್ಠಾನಕ್ಕಾಗಿ ಭಾರತದ ಮಟ್ಟಿಗೆ ಲೋಹಿಯಾ, ಗಾಂಧೀಜಿಯ ಗ್ರಾಮ ಸ್ವರಾಜ್ಯದ ಬದಲಾಗಿ, (ರಾಜಕೀಯ ಅಧಿಕಾರ ನಾಲ್ಕು ಹಂತಗಳಲ್ಲಿ ವಿಕೇಂದ್ರಿತವಾಗಿರುವ)ಚತುಸ್ಥಂಭ ರಾಷ್ಟ್ರ ಪರಿಕಲ್ಪನೆ (ಮತ್ತು ಇದರ ಜಾಗತಿಕ ವಿಸ್ತರಣೆಯಾಗಿ ವಿಶ್ವ ಸರ್ಕಾರ), ಇದರ ಸಾಕಾರಕ್ಕಾಗಿ ಚರಕದ ಬದಲಾಗಿ ಸಣ್ಣ ಘಟಕಗಳ ಯಂತ್ರ ವ್ಯವಸ್ಥೆ ಮತ್ತು ಅಸ್ಪೃಶ್ಯತಾ ನಿವಾರಣೆಯ ವಿಸ್ತರಣೆಯಾಗಿ ಜಾತಿ ವಿನಾಶ ಕಾರ್ಯಕ್ರಮಗಳನ್ನು ಪ್ರತಿಪಾದಿಸಿ, ಇದೆಲ್ಲದರ ಯಶಸ್ಸಿಗಾಗಿ 'ಇಂಗ್ಲಿಷ್ ತೊಲಗಿಸಿ' ಚಳುವಳಿಗಾಗಿ ಕರೆಕೊಟ್ಟರು. ಈ ಚಳುವಳಿಯನ್ನು ಅವರು 'ಭಾರತೀಯ ಭಾಷಾ ಆಂದೋಲನ'ವೆಂದೂ ಕರೆದರೆಂಬುದು ಇಲ್ಲಿ ಮುಖ್ಯ. ಇದು ನಮ್ಮ ರಾಜಕಾರಣ ಆಧುನಿಕಗೊಳ್ಳುವುದರೊಂದಿಗೇ ನಮ್ಮ ಭಾಷೆಗಳೂ ಆಧುನಿಕಗೊಳ್ಳಲು ಅನುವು ಮಾಡಿಕೊಟ್ಟ, ಆಧುನಿಕ ನಾಗರಿಕತೆಯೊಂದಿಗೆ ಭಾರತ ನಡೆಸಬಹುದಾದ ಅತ್ಯುತ್ತಮ ಅನುಸಂಧಾನಕ್ಕೆ ಉದಾಹರಣೆಯಂತಿದೆ. ಇದರ ಹಿಂದೆ (ಸ್ವ)ದೇಶಿ ಎನ್ನುವುದು ಬರೀ ಪುರಾತನವಾಗದೆ, ಜಾಗತಿಕ ಬದಲಾವಣೆಯೊಂದಿಗೆ ತನ್ನನ್ನು ತಾನು ಒಮ್ಮೆ ನೋಡಿಕೊಂಡು ಹೊಸ ಕಾಲದ ನಿರೀಕ್ಷೆ ಮತ್ತು ಸವಾಲುಗಳಿಗೆ ತಾನು ಸ್ಥಳೀಯ ಚೌಕಟ್ಟಿನಲ್ಲಿಯೇ ಸೃಜನಶೀಲವಾಗಿ ಸಜ್ಜುಗೊಳ್ಳುತ್ತಾ, ಭಾರತೀಯ ಭಾಷೆಗಳ ರಾಚನಿಕ ಸಮಗ್ರತೆಯನ್ನು ಉಲ್ಲಂಘಿಸದೆ ಅವುಗಳ ಸಾಮರ್ಥ್ಯ ವಿಸ್ತರಣೆಗೂ ಅನುವು ಮಾಡಿಕೊಡುವಂತಿರಬೇಕು ಎಂಬ ಲೋಹಿಯಾರ ಅಪೂರ್ವ ಒಳನೋಟ ಕಾಣುತ್ತದೆ. ಒಂದು ಜೀವನ ಕ್ರಮ ಹಾಗೂ ಅದರ ಭಾಷೆಗಿರುವ ಸಾವಯವ ಸಂಬಂಧವನ್ನು ಗ್ರಹಿಸಿ, ಅವೆರಡನ್ನೂ ಅವುಗಳ ಮೂಲ ಬೇರುಗಳಿಗೆ ಧಕ್ಕೆಯಾಗದಂತೆ ಒಟ್ಟಿಗೇ ವಿಕಾಸಕ್ಕೆ ತೆರೆದಿಡುವ ಹೊಸ ಶೈಲಿಯ ಪ್ರಗತಿಪರ ಚಿಂತನೆಯಿದು. ಈ ನೆಲೆಯಲ್ಲಿಯೇ ಅವರು, ಭಾರತೀಯ ಸಂಶೋಧಕರು 'ಸಣ್ಣ ಘಟಕ'ಗಳ ಪರಿಭಾಷೆಯಲ್ಲಿ ಯೋಚಿಸದ ಹೊರತು ಅವರಿಂದ ಯಾವುದೇ ಮೂಲಭೂತ ಸಂಶೋಧನೆ ಸಾಧ್ಯವಾಗಲಾರದು ಎಂದಿದ್ದುದು. ಈ ಮಾತು ಇಂದಿಗೂ ನಿಜವಾಗಿದೆಯಲ್ಲವೆ?

ಈ ಪ್ರಯೋಗ ಆಧುನಿಕ ನಾಗರೀಕತೆಯ ಯೌವ್ವನದ ಶಕ್ತಿ-ಸಂಭ್ರಮಗಳ ಎದುರು ಸಾಕಷ್ಟು ಕಾಲ ಹೋರಾಡಿತು; ಬಳಲಿ ಬೆಂಡಾಯಿತು. ಆದರೆ ಸತ್ಯಕ್ಕೆ ಸಾವಿಲ್ಲವೆಂಬಂತೆ, ಆಧುನಿಕ ನಾಗರಿಕತೆ ಈಗ ಜಾಗತೀಕರಣದ ರೂಪ ತಾಳಿ ಎದುರಿಸುತ್ತಿರುವ ತಾತ್ವಿಕ, ವ್ಯಾವಹಾರಿಕ ಮತ್ತು ನೈತಿಕ ಬಿಕ್ಕಟ್ಟುಗಳ ಸಂದರ್ಭದಲ್ಲಿ ಇದು ಮತ್ತೆ ತನ್ನ ಪ್ರಸುತ್ತತೆಯನ್ನು ಮಂಡಿಸುವ ಅವಕಾಶವನ್ನು ಪಡೆದಿದೆ. ಅದಕ್ಕಾಗಿ ಅದು ತನ್ನ ದೀರ್ಘ ಹೋರಾಟದಿಂದ ಪಡೆದ ಅನುಭವ ಮತ್ತು ವಿವೇಕಗಳನ್ನು ಸೃಜನಶೀಲವಾಗಿ ಜೋಡಿಸಿಕೊಂಡು ಸಜ್ಜಾಗಬೇಕಿದೆ. ಸದ್ಯದ ಜಾಗತಿಕ ಆರ್ಥಿಕ ಹಿಂಜರಿತದ ಹಿನ್ನೆಲೆಯಲ್ಲಿ ಇಂತಹ ಸಾಧ್ಯತೆಗಳು ಅನಿವಾರ್ಯವೆಂಬಂತೆ, ಈಗಾಗಲೇ ಜಗತ್ತಿನಾದ್ಯಂತ ಗೋಚರವಾಗತೊಡಗಿವೆ. ಸಮಾಜವಾದದ ವಿರುದ್ಧ ಜಾಗತಿಕ ಸಮರ ಸಾರಿದ್ದ ಅಮೆರಿಕಾವೇ .ಇಂದು ಸಮಾಜವಾದಿಯಾಗತೊಡಗಿದೆ ಎಂದು ಅಲ್ಲಿನ

ಬಲಪಂಥೀಯರು ಬೊಬ್ಬೆ ಹೊಡೆಯತೊಡಗಿದ್ದಾರೆ! ಇಂತಹ ಅವಕಾಶ ಮತ್ತು ಸಾಧ್ಯತೆಗಳ ಜೊತೆಗೆ ಮಾತ್ರ ಕೆ.ವಿ.ನಾರಾಯಣರ ಕನ್ನಡ ಚಿಂತನೆ ಪ್ರಸ್ತುತತೆ ಮತ್ತು ಸಾಧುತ್ವಗಳನ್ನು ಗಳಿಸಿಕೊಳ್ಳಬಹುದು. ಅವರು ತಮ್ಮ ಈ ಭಾಷಾ ಚಿಂತನೆಯನ್ನು ಅದರ ರಾಜಕೀಯ ಆಯಾಮಗಳೊಂದಿಗೆ- ತಮ್ಮ ಈ ಲೇಖನದಲ್ಲಿ ದ.ಏಷ್ಯಾದ ಪರಿಕಲ್ಪನೆಯ ಹುಟ್ಟಿನ ಹಿಂದಿನ ರಾಜಕಾರಣದ ಸೂಚನೆಯೊಂದಿಗೆ ವಿಷದೀಕರಿಸಿದಂತೆ- ನಿಸ್ಸಂದಿಗ್ಧವಾಗಿ ಮತ್ತು ಕ್ರಿಯಾತ್ಮಕವಾಗಿ (ಅಂದರೆ ಸಮಕಾಲೀನ ಭಾಷಾ ಹೋರಾಟಗಳ ವಕ್ತಾರರಾಗಿ)ಪ್ರಸ್ತುತಪಡಿಸಿದರೆ ಮಾತ್ರ ಅದಕ್ಕೊಂದು ವ್ಯಾವಹಾರಿಕ ಆವೇಗವೂ ಸಿಗುತ್ತದೆ. ಇಲ್ಲದಿದ್ದರೆ ಅದು ಒಣ ಪಾಂಡಿತ್ಯ ಮಾತ್ರವೆನಿಸಿಕೊಳ್ಳುತ್ತದೆ. ಅದು ಹಾಗಾಗದಿರಲೆಂದು ಹಾರೈಸಿಯೇ ಅವರ ಚಿಂತನೆಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿ, ಇದರ ಬಗ್ಗೆ ಚರ್ಚೆ ಮುಂದುವರಿಯುವುದು ಎಂದು ಆಶಿಸುವೆ.

(ಜನವರಿ,. ೨೦೧೦)

■

ಕನ್ನಡ ವಿರೋಧಿಯಾಗುತ್ತಿರುವ ಕನ್ನಡ ಚಳುವಳಿ

ಅನಕೃ, ತರಾಸು, ಮ. ರಾಮಮೂರ್ತಿ ದೇಜಗೌ ಅವರ ಕಾಲಕ್ಕೆ ಕನ್ನಡಿಗರ ಉದ್ಯೋಗ, ವ್ಯಾಪಾರ, ಸಿನಿಮಾ ಇತ್ಯಾದಿ ಕ್ಷೇತ್ರಗಳಿಗೂ ವ್ಯಾಪಿಸಿಕೊಂಡ ಕನ್ನಡ ಚಳವಳಿ; ವಾಟಾಳ್, ನಾರಾಯಣಕುಮಾರ್‌ರಂತಹವರ ಕಾಲದ ಹೊತ್ತಿಗೆ ಬೆಂಗಳೂರು ಕೇಂದ್ರಿತವಾಗಿ ಅನ್ಯಭಾಷಾ–ವಿಶೇಷವಾಗಿ ತಮಿಳು–ವಿರೋಧಿ ವಾರೆಗಣ್ಣಿನಲ್ಲೇ ನಡೆಯತೊಡಗಿ, ವಸೂಲಿ–ದುಂಡಾವರ್ತಿ ರಾಜಕಾರಣವಾಗಿ ಮಾರ್ಪಾಡಾಯಿತು. ಇದಕ್ಕೆ ಮತ್ತು ಚಳವಳಿಯ ನೇತೃತ್ವ ಅಂತಿಮವಾಗಿ ಇಂತಹವರ ಕೈಗೆ ಸಿಗುವಂತಾಗಲು, ಕರ್ನಾಟಕದ ಎಲ್ಲ ವರ್ಗಗಳ ಜನ ಇದರಲ್ಲಿ ಭಾವನಾತ್ಮಕವಾಗಿಯಾದರೂ ಭಾಗವಹಿಸುವಂತೆ ಅದನ್ನು ವಿಸ್ತರಿಸಲಾಗದ ಅದರ ದೌರ್ಬಲ್ಯವೇ ಕಾರಣವಿರಬಹುದು. ನಮ್ಮ ಬದುಕಿನ ಮೂಲಭೂತ ಸಂಗತಿಗಳಾದ ಹುಟ್ಟು, ನಾಮಕರಣ, ಮದುವೆ, ಶ್ರಾದ್ಧಾದಿ ಕರ್ಮಗಳಲ್ಲದೆ ನಮ್ಮ ಪೂಜೆ–ಪುನಸ್ಕಾರ–ಪ್ರಾರ್ಥನೆ ಇತ್ಯಾದಿಗಳನ್ನು ಅನ್ಯಭಾಷೆಯಲ್ಲೇ ಉಳಿಸಿಕೊಳ್ಳುವಂತಹ ವಿಧಿ–ನಿಷೇಧಗಳಿಗೆ ಮನಸ್ಸನ್ನು ಒಪ್ಪಿಸಿಬಿಟ್ಟ ಸಂಸ್ಕೃತಿಯೊಂದು ಇವಕ್ಕೆಲ್ಲ ಅನರ್ಹವಾಗಿ ಕಂಡಿರುವ ಕನ್ನಡವನ್ನು ಬದುಕಿನ ಯಾವ ಎಲ್ಲೆಯವರೆಗೆ, ಎಷ್ಟು ದಿನ ತಾನೆ ಬಿಟ್ಟುಕೊಂಡೀತು?

ಚಳವಳಿ ಎಂದರೆ ಮೂಲತಃ ತಳಮಳ. ಇದೀಗ ಅದು ಬಹಿರಂಗ ಆಂದೋಲನ ಎಂಬರ್ಥದಲ್ಲೂ ಚಾಲ್ತಿಯಲ್ಲಿರುವದರಿಂದ, ಕನ್ನಡ ಚಳವಳಿ ಎಂದಾಕ್ಷಣ ನಾವು ಸಾರ್ವಜನಿಕವಾಗಿ ಕನ್ನಡಕ್ಕಾಗುತ್ತಿರುವ ಅನ್ಯಾಯಗಳೆಂದು ಹೇಳಲಾದ ವಿಷಯಗಳ ಬಗ್ಗೆ ಬೀದಿಯಲ್ಲಿ ನಡೆಯುವ ಪ್ರತಿಭಟನೆ – ಧರಣಿ – ಪ್ರದರ್ಶನಗಳೆಂದೇ ಭಾವಿಸತೊಡಗಿದ್ದೇವೆ. ಕಳೆದ ಹತ್ತಾರು ವರ್ಷಗಳಿಂದ ಕನ್ನಡದ ಹೆಸರಲ್ಲಿ ನಡೆಯುತ್ತಿರುವ ಚಳವಳಿಗಳು ಇದೇ ರೂಪದಲ್ಲಿ ವ್ಯಕ್ತವಾಗುತ್ತಿರುವುದರಿಂದ, ಜನ ಹಾಗೆ ಭಾವಿಸಿರುವುದೂ ಸಹಜವೇ ಆಗಿದೆ. ಆದರೆ ಈ ರೂಪದ ಚಳವಳಿಗಳು ಇಷ್ಟು ವರ್ಷ ಬೀದಿ ಬೀದಿ ಸುತ್ತಿದರೂ, ಕನ್ನಡಿಗರೆಲ್ಲರಿಗೂ ಕನ್ನಡದಲ್ಲೇ ಮೂಲಶಿಕ್ಷಣ ದೊರಕಿಸುವ ಮೂಲಕ ಕನ್ನಡಕ್ಕಾಗುವ ಎಲ್ಲ ರೀತಿಯ ಅಪಾಯಗಳನ್ನು ತಡೆಯಬಹುದೆಂಬ ಮೂಲ ಅರಿವನ್ನೇ

ಕಳೆದುಕೊಂಡುಬಿಟ್ಟಿವೆ.. ಇದರ ಫಲವಾಗಿಯೇ ಕನ್ನಡ ಚಳುವಳಿ ಎಂಬುದು ಕನ್ನಡ ಶಾಲೆಗಳಲ್ಲಿ ಒಂದನೇ ತರಗತಿಯಿಂದಲೇ ಇಂಗ್ಲಿಷ್ ಕಲಿಸುವ ಸರ್ಕಾರಿ ಆಜ್ಞೆಗೆ ದಾರಿ ಮಾಡಿಕೊಟ್ಟು; ಈಗ ಬೀದಿ ಬದಿಯ ಫಲಕಗಳಿಗೆ ಹಾಗೂ ಅನ್ಯ ಭಾಷಿಕರ ನಾಯಕರ ಮುಖಗಳಿಗೆ ಮಸಿಯನ್ನೋ, ಮೊಟ್ಟೆಸಾರವನ್ನೋ ಬಳಿಯುವ ಕಾರ್ಯಕ್ರಮಗಳ ಮೂಲಕ ತನ್ನ ಹತಾಶೆಯನ್ನು ವ್ಯಕ್ತಪಡಿಸುವಂತಹ ಅಧೋಗತಿಗೆ ತಲುಪಿದೆ. ದುರಂತವೆಂದರೆ, ಈ ಹತಾಶೆಯನ್ನೇ ವೀರಾವೇಶವೆಂದು ಈ ಚಳವಳಿಯ ಸದ್ಯದ ನಾಯಕರು ಬಗೆದಿರುವುದು ಮತ್ತು ಅದಕ್ಕೆ ಚಳವಳಿಯ ಹಿರಿಯರೆನಿಸಿಕೊಂಡವರು ಮಾನ್ಯತೆ ನೀಡುತ್ತಿರುವುದು!

ಈ ಬೆಳವಣಿಗೆ ಕನ್ನಡ ಚಳವಳಿಗೆ ಏನಾಗಿದೆ ಎಂಬುದರ ಎಲ್ಲ ಕಥೆಯನ್ನೂ ಹೇಳುತ್ತದೆ : ಯಾವ ಮಹದಾಶಯದೊಡನೆ ಈ ಚಳವಳಿ ಹುಟ್ಟಿಕೊಂಡಿತೋ ಅದನ್ನೇ ಮರೆತು ಇಂದು ಚಿಲ್ಲರೆ ಭಾಷಾ ವೈಷಮ್ಯದ ರಾಜಕಾರಣಕ್ಕೆ ತನ್ನನ್ನು ಸೀಮಿತಗೊಳಿಸಿಕೊಂಡು, ಕಾಲ ಧರ್ಮಕ್ಕನುಸಾರವಾಗಿ ಒಂದು ದಂಧೆಯಾಗಿ ಮಾರ್ಪಟ್ಟಿದೆ. ಈ ಚಳವಳಿಯ ಸದ್ಯದ ನಾಯಕರು ಹಾಗೂ ಅವರಿಗೆ ಬೆಂಬಲವಾಗಿ ನಿಂತಿರುವ ಹಿರಿಯ ನಾಯಕರ ವೈವಿಧ್ಯಮಯ ದಂಧೆಗಳನ್ನು ಸುಮ್ಮನೆ ನೋಡಿದರೆ ಸಾಕು, ಇದು ಸ್ಪಷ್ಟವಾಗುತ್ತದೆ. ಇದು ಹೀಗೇಕಾಯಿತು? ಕನ್ನಡ ಚಳವಳಿ ರೂಪುಗೊಂಡ ರೀತಿನೀತಿಗಳಲ್ಲೇ ಏನಾದರೂ ದೋಷವಿದ್ದವೇ? ಅದನ್ನು ಮುನ್ನಡೆಸಿದ ನಾಯಕರೇ ಏನಾದರೂ ತಪ್ಪು ಮಾಡಿದರೆ? ಜಾಗತೀಕರಣದ ಭರಾಟೆಯ ಇಂದಿನ ದಿನಗಳಲ್ಲಿ ಕನ್ನಡ ಚಳವಳಿ ಎಂಬುದೇ ಬೆಲೆ ಕಳೆದುಕೊಂಡು ಅಪ್ರಸ್ತುತವೆನ್ನಿಸಿದೆಯೇ? ದಂಧೆಯೇ ಕಾಲಧರ್ಮ ಪ್ರತೀಕವಾಗತೊಡಗಿರುವಾಗ, ಚಳವಳಿಗಳೂ ದಂಧೆಗಳಾಗಿ ಮಾರ್ಪಾಟಾಗುವುದು ಅನಿವಾರ್ಯವೆ? ಈ ಎಲ್ಲ ಪ್ರಶ್ನೆಗಳನ್ನು ಪರಿಶೀಲಿಸಲು ಕನ್ನಡ ಚಳವಳಿ ಎಂಬುದು ಹುಟ್ಟಿದ ಹಾಗೂ ವಿಕಾಸಗೊಳ್ಳುತ್ತಾ ಬಂದ ರಾಜಕೀಯ ಸಂದರ್ಭಗಳನ್ನು ವಿಶ್ಲೇಷಿಸಬೇಕಾಗುತ್ತದೆ. ಏಕೆಂದರೆ, ಭಾಷೆ ಎಂಬುದು ಕೇವಲ ಸಂಪರ್ಕ ಸಾಧನವಾಗಿರದೆ, ಒಂದು ಸಂಸ್ಕೃತಿ ಮಾಧ್ಯಮವೂ ಆಗಿದ್ದು; ರಾಜಕಾರಣವೆಂಬುದು ತನ್ನ ಚೇತನವನ್ನು ಪಡೆದುಕೊಳ್ಳುವುದು ಸಾಂಸ್ಕೃತಿಕ ಬಲಸಂವರ್ಧನೆಯ ರೂಪದಲ್ಲೇ (ಇಂದಿನ ಜಾಗತೀಕರಣ ತನ್ನ ಬೆಂಬಲಿಗರನ್ನು ಸೃಷ್ಟಿಸಿಕೊಳ್ಳುತ್ತಿರುವ ರೀತಿ ನೀತಿಗಳನ್ನೇ ನೋಡಿ) ಎಂಬುದನ್ನು ನಾವು ಮರೆಯುವಂತಿಲ್ಲ.

ಸಂಸ್ಕೃತ ಪರಂಪರೆಯೊಂದಿಗಿನ ಸೆಣೆಸಾಟದಲ್ಲೇ ರೂಪುಗೊಂಡ ಕನ್ನಡ ಸಂಸ್ಕೃತಿಯ ಚರಿತ್ರೆಯಲ್ಲಿ ಸಹಜವಾಗಿಯೇ, ಕನ್ನಡದ ಮೊದಲ ಶಾಸನಕ್ಕೆ – ಅದು ಹಲ್ಮಿಡಿಯೇ ಆಗಿರಲಿ, ಮತ್ತೊಂದೇ ಆಗಿರಲಿ – ಕಾರಣನಾದವನೇ ಮೊದಲ ಕನ್ನಡ ಚಳವಳಿಗಾರ ಎನ್ನಬಹುದು. ಹೀಗೆ ಕನ್ನಡ ಚಳವಳಿಗೆ ಕನಿಷ್ಠ ೧೫೦೦ ವರ್ಷಗಳ ಇತಿಹಾಸವಿದೆ ಎಂದು ಹೇಳಬಹುದು. ನೃಪತುಂಗ, ಪಂಪರಾದಿಯಾಗಿ ಕುವೆಂಪು–ತೇಜಸ್ವಿಯವರೆಗೆ ಈ ಕನ್ನಡ ಚಳವಳಿ ಕನ್ನಡ ಜನರ ಬದುಕಿನ ಹಲವು ನೆಲೆಗಳಲ್ಲಿ ರೂಪುಗೊಳ್ಳುತ್ತಾ ಬಂದಿದೆ. ಇಲ್ಲಿ ನಾನು ಕುವೆಂಪು–ತೇಜಸ್ವಿಯವರೆಗೆ ಎಂದು ನಿರ್ದಿಷ್ಟವಾಗಿ ಹೇಳಲು

ಕಾರಣವಿದೆ. ಅದೆಂದರೆ, ಕುವೆಂಪು ಕನ್ನಡ ಚಳವಳಿ ಈ ಮೇಲೆ ಸೂಚಿಸಿದಂತಹ ಹತಾಶ ರೂಪ ತಳೆಯುವ ಮುನ್ನ ಹೊಂದಿದ್ದ ತಾತ್ತ್ವಿಕ ಘನತೆಯ ಪ್ರತೀಕವಾಗಿದ್ದರೆ, ತೇಜಸ್ವಿ ಈ ತಾತ್ತ್ವಿಕ ಘನತೆಗೆ ಒಂದು ರಾಜಕೀಯ ಅರ್ಥಕೊಟ್ಟು, ಮೊದಲ ಬಾರಿಗೆ ಆಧುನಿಕ ಕನ್ನಡ ಚಳವಳಿಯ ಅಂತರಿಕ ದೌರ್ಬಲ್ಯಗಳ ಬಗ್ಗೆ ಒಳನೋಟವುಳ್ಳ ಒಂದು ವ್ಯಾಖ್ಯಾನ ಮಂಡಿಸಿದವರು : "ಕರ್ನಾಟಕದ ಈಚಿನ ಕನ್ನಡ ಚಳವಳಿಗಳೂ ಕೂಡಾ ವ್ಯಾಪಕ ಹಾಗೂ ವಿಸ್ತೃತ ರೂಪ ತಾಳದೆ, ರಾಜಕೀಯ, ಸಾಮಾಜಿಕ ಹಾಗೂ ಧಾರ್ಮಿಕ ಆಂದೋಲನಗಳ ಸ್ವರೂಪಕ್ಕೆ ತಿರುಗದೆ ಹೋದುದಕ್ಕೆ ಕಾರಣವೇನು? ಇದಕ್ಕೆ ನನಗೆ ಹೊಳೆಯುವ ಮುಖ್ಯ ಕಾರಣ – ಬಿ.ಎಂ.ಶ್ರೀ., ಅ.ನ.ಕೃ., ರಾಮಮೂರ್ತಿ ಮುಂತಾದ ಬ್ರಾಹ್ಮಣರು ಇದರ ನೇತೃತ್ವ ವಹಿಸಿದ್ದು. ಏಕೆಂದರೆ ಬ್ರಾಹ್ಮಣನಿಂದ ಸ್ಫೂರ್ತಿಗೊಳ್ಳುವ ದೇಶಭಾಷಾ ಚಳವಳಿಗಳು ಕೇವಲ ಅವನ ಆಲೋಚನೆಗೆ ಅಭಿವ್ಯಕ್ತಿ ಸಿದ್ಧಿಯನ್ನು ಒದಗಿಸುವ ಸಾಹಿತ್ಯ ಕ್ರಾಂತಿಗೆ ಮಾತ್ರ ಸೀಮಿತವಾಗಿರುತ್ತದೆ. ಇದಕ್ಕೆ ಸಾಹಿತ್ಯದಲ್ಲಿ ಕ್ರಾಂತಿಕಾರಿಯಾಗಬೇಕೆಂದು ಹಾತ್ತೊರೆದ ಅಡಿಗರು ಸಾಮಾಜಿಕವಾಗಿ ಸಂಪ್ರದಾಯ ನಿಷ್ಠರಾಗಿ, ವರ್ಣಾಶ್ರಮ ಧರ್ಮ ಪ್ರತಿಪಾದಿಸಿದ್ದು; ಆಡುಭಾಷೆಯಲ್ಲೇ ಕಾವ್ಯಬರೆಯ ಬೇಕೆಂದ ಅವರು ದೇಶಭಾಷಾ ಮಾಧ್ಯಮದಲ್ಲಿ ಪಾಠ ಹೇಳುವುದನ್ನು ವಿರೋಧಿಸಿದ್ದು ಇತ್ಯಾದಿಗಳನ್ನು ಉದಾಹರಿಸಬಹುದು. ಕನ್ನಡ ಚಳವಳಿ, ತಮಿಳು ಚಳವಳಿಯಂತೆ ಶೂದ್ರ ಆಂದೋಲನದ ಸ್ವರೂಪ ತಳೆಯದೆ ಹೋಯಿತು...." (*'ಕರ್ನಾಟಕ ಸಂಸ್ಕೃತಿ ವಿಶ್ಲೇಷಣೆ' : ಕರ್ನಾಟಕ ಕಲಾವಿದರ ಹಾಗೂ ಬರಹಗಾರರ ಒಕ್ಕೂಟದ ಭಾಷಣ : ಸಂಕ್ರಮಣ–೬೦*).

ಮೇಲ್ನೋಟಕ್ಕೆ ಇದು ಕನ್ನಡ ಚಳವಳಿ ಕುರಿತಂತೆ ಒಂದು ಬಿಡುಬೀಸಾದ, ಒರಟೊರಟಾಗಿ ಬ್ರಾಹ್ಮಣ ವಿರೋಧಿಯಾದ ಹಾಗೂ ಅನೇಕ ರೀತಿಯಲ್ಲಿ ಶೂದ್ರರು ಕನ್ನಡ ಚಳವಳಿಯ 'ಕ್ರಿಯಾಶೀಲ' ನಾಯಕರಾಗಿರುವ ಇಂದಿನ ಸಂದರ್ಭದಲ್ಲಿ ಅಸಂಗತವಾದ ಹೇಳಿಕೆಯಂತೆ ಕಂಡೀತು. ಆದರೆ ಇದು ಕನ್ನಡ ಚಳವಳಿಯ 'ಚರಿತ್ರೆ' ಕುರಿತಂತೆ ಒಂದು ಆಳವಾದ ತಾತ್ತ್ವಿಕ ಒಳನೋಟ ನೀಡುವುದಂತೂ ನಿಜ. ಬಹುಶಃ ಈ ಮೂಲಕ ತೇಜಸ್ವಿ, ತನ್ನ ವಿಶಾಲ ಅರ್ಥದಲ್ಲಿ ಸಂಸ್ಕೃತ ಪರಂಪರೆಯ ವಿರುದ್ಧದ ಸಾಂಸ್ಕೃತಿಕ ಚಳವಳಿಯಾಗಿ ಆರಂಭವಾದ ಕನ್ನಡ ಚಳವಳಿ ಎದುರಿಸುತ್ತಿರುವ ಸಮಕಾಲೀನ ಅಪಾಯವನ್ನು ಸೂಚಿಸುತ್ತಿದ್ದಾರೆನಿಸುತ್ತದೆ. ಆ ಅಪಾಯವೆಂದರೆ, ಇತ್ತೀಚಿನ ಚರಿತ್ರೆಯಲ್ಲಿ ಕನ್ನಡ ತನ್ನ ಅಸ್ಮಿತೆಯನ್ನು ಸಾಧಿಸಿಕೊಳ್ಳುವ ಅನಿವಾರ್ಯತೆಯಲ್ಲಿ ಮರಾಠಿ, ತೆಲುಗು, ಉರ್ದು, ತಮಿಳು ಮುಂತಾದ ಅನ್ಯಭಾಷಿಕ ಸೋದರ ಸಮುದಾಯಗಳ ಸಾಮಾಜಿಕ ಒತ್ತಡಗಳನ್ನು ಹಾಗೂ ಹಿಂದಿ – ಇಂಗ್ಲಿಷ್‌ಗಳ ಪ್ರಭುತ್ವವಾದಿ ರಾಜಕೀಯ ಒತ್ತಡಗಳನ್ನು ನಿವಾರಿಸಿಕೊಳ್ಳುವ ಹೋರಾಟದಲ್ಲಿ ಮತ್ತೆ ಸಂಸ್ಕೃತ ಪರಂಪರೆಯ ಸಾಮಾಜಿಕ–ಸಾಂಸ್ಕೃತಿಕ ಆಶಯಗಳನ್ನೇ ಒಪ್ಪಿಕೊಳ್ಳತೊಡಗಿರುವಂತಾಗಿರುವ ವಿಪರ್ಯಾಸವೇ ಆಗಿದೆ.

ಈ ವಿಪರ್ಯಾಸವೇನೇ ಇರಲಿ, ತೇಜಸ್ವಿಯವರ ಈ ಮೇಲಿನ ಮಾತುಗಳಲ್ಲಿ

ಭಾಷೆಯೆಂಬುದು ಜನರ, ಸಮಾಜದ ಸಂಪನ್ಮೂಲವೂ ಆಗಿರುವುದರಿಂದ, ಅದು ಕೇವಲ ಆತ್ಮಾಭಿಮಾನದ ಅಮೂರ್ತ ಸಂಕೇತವಾಗದೆ, ಸಾಮಾಜಿಕ ಪುನಾರಚನೆಯನ್ನು ಪ್ರಚೋದಿಸುಂತಹ ಆಲೋಚನೆಗಳ ಮೂರ್ತ ರಾಜಕೀಯ ಸಾಧನವೂ ಆಗಬೇಕೆಂಬ ಆಗ್ರಹ ಕಾಣುತ್ತದೆ. ಆದರೆ ಕನ್ನಡ ಸಾಹಿತ್ಯ ಮತ್ತು ಆ ಮೂಲಕ ಸಂಸ್ಕೃತಿ ಚರಿತ್ರೆಯೆಂಬುದು ತಮಿಳು ಸಾಹಿತ್ಯ-ಸಂಸ್ಕೃತಿ ಚರಿತ್ರೆಯಂತೆ ಸಂಸ್ಕೃತ ಪರಂಪರೆಯ ವಿರುದ್ಧದ ಪ್ರತಿರೋಧಗಳ ಚರಿತ್ರೆಯಾಗಿ ಕಟ್ಟಲ್ಪಟ್ಟಿತೋ ಅಥವಾ ಅದರೊಡನೆ ಅನುಸಂಧಾನಗೈಯುತ್ತಲೇ ತನ್ನ ಚರಿತ್ರೆಯನ್ನು ಕಟ್ಟಿಕೊಂಡಿತೋ ಎಂಬುದು ಇನ್ನೂ ಆಳವಾದ ಸಂಶೋಧನೆಗೆ ಒಳಪಡಬೇಕಾದ ವಿಷಯವಾಗಿದೆ. ಇದೇ ಕುವೆಂಪು ತಾತ್ತ್ವಿಕತೆ ಮತ್ತು ತೇಜಸ್ವಿ ತಾತ್ತ್ವಿಕತೆ ನಡುವೆ ಕಾಣುವ 'ಜಗಿತ'ಕ್ಕೂ ಕಾರಣವಾಗಿದ್ದಂತೆ ತೋರುತ್ತದೆ. ಆದರೆ ಈ ಜಗಿತವೇ 'ಮಕಾಲೀನ ಕನ್ನಡ ಚಳವಳಿಯನ್ನು ಅವಲೋಕಿಸಲು ಒಂದು ಸಮರ್ಥ ತಾತ್ತ್ವಿಕ ಪರಿಕರವಾಗಿ ಉಳಿದುಕೊಂಡಿರುವುದಂತೂ ನಿಜ.

ಅದೇನೇ ಇರಲಿ, ಆಧುನಿಕ ಕನ್ನಡ ಚಳವಳಿಯ ಬೀಜ ಬಿತ್ತಿದ ಡೆಪ್ಯೂಟಿ ಚೆನ್ನಬಸಪ್ಪ ಅವರು ೧೮೫೦ರಷ್ಟು ಹಿಂದೆಯೇ ಮರಾಠಿ ಪ್ರಭುತ್ವದ ನಡುವೆ ಕನ್ನಡದ ಮಕ್ಕಳಿಗೆ ಕನ್ನಡದಲ್ಲಿ ಶಿಕ್ಷಣಕ್ಕಾಗಿ ಆರಂಭಿಸಿದ ಹೋರಾಟ ಸರಿಯಾಗಿ ಒಂದು ಶತಮಾನದ ನಂತರ ಕನ್ನಡ ರಾಜ್ಯೋದಯದಲ್ಲಿ ಮೂರ್ತಗೊಂಡಿದ್ದರ ಹಿಂದೆ; ಒಂದು ಭಾಷೆಯನ್ನಾಡುವ ಜನ ಒಟ್ಟಿಗೆ ಬದುಕುವ ಸಾಂಸ್ಕೃತಿಕ ಆಶಯ ಮಾತ್ರವಿರಲಿಲ್ಲ. ಅದರ ಜೊತೆಗೇರೀ ಜನಸಮೂಹವು ಒಂದು ಪ್ರತ್ಯೇಕ ಆಡಳಿತ ಘಟಕವಾಗಿ ಅಭಿವೃದ್ಧಿ ಸಾಧಿಸುವ ರಾಜಕೀಯ ಆಶಯವೂ ಕೆಲಸ ಮಾಡಿತ್ತು ಎಂಬುದನ್ನು ನಾವು ಮರೆಯಬಾರದು. ಒಂದು ಭಾಷೆಯನ್ನಾಡುವ ಜನರನ್ನು ಎರಡು ಆಡಳಿತ ಘಟಕಗಳನ್ನಾಗಿ ಒಡೆದ ಬ್ರಿಟಿಷರ ಬಂಗಾಳ ವಿಭಜನೆಯ ರಾಜಕೀಯ ಹಸ್ತಕ್ಷೇಪವೇ ಒಂದು ನೆಪವಾಗಿ ಭಾರತದ ಸ್ವಾತಂತ್ರ್ಯ ಹೋರಾಟ ಸ್ಫೋಟಗೊಂಡಿತು. ಇದು ವಾಸ್ತವವಾಗಿ ಒಂದು (ಬಂಗಾಳಿ) ಭಾಷಾ ರಾಷ್ಟ್ರೀಯತೆಯನ್ನು ಭಂಗಗೊಳಿಸಿದ್ದರ ವಿರುದ್ಧ ಎದ್ದ ದಂಗೆಯ ವಿಸ್ತರಣೆಯೇ ಆಗಿತ್ತು. ಆದರೆ ನಂತರದ ದಿನಗಳಲ್ಲಿ ಈ ಹೋರಾಟ ಸಂಘಟನೆಗೊಂಡ ರೀತಿ ನೀತಿಗಳಿಂದಾಗಿ, ಭಾರತದಲ್ಲಿನ ಭಾಷಾ ರಾಷ್ಟ್ರೀಯತೆಗಳು ಭಾಷಾ ಪ್ರಾದೇಶಿಕತೆಗಳೆಂಬ ಹೊಸ ಅಭಿದಾನದಲ್ಲಿ ಕುಗ್ಗಿಹೋದವು. ಆತ್ಯಂತಿಕವಾಗಿ, ಸ್ವಾತಂತ್ರ್ಯ ಸಿದ್ಧಿಯ ಹೊತ್ತಿಗೆ ಅವು ಭಾರತವೆಂಬ ರಾಜಕೀಯ ಪ್ರಭುತ್ವದ (ನೇಷನ್ ಸ್ಟೇಟ್) ಹೊಸ ರಾಷ್ಟ್ರೀಯತೆಯ ಪರಿಕಲ್ಪನೆಗೆ ವಿಧೇಯತೆಯನ್ನು ಸಾರುವಂತಹ ಸ್ಥಿತಿ ಉಂಟಾಯಿತು. ಇದರ ಪರಿಣಾಮವಾಗಿ ಅಖಿಲ ಭಾರತೀಯತೆಯ ಮಾರುವೇಷದಲ್ಲಿ ಸಂಸ್ಕೃತ ಪರಂಪರೆಯೇ ಮತ್ತೆ ಆಧುನಿಕ ಭಾರತದ ಆಳುವ ಸಂಸ್ಕೃತಿಯಾಗಿ ಮೇಲುಗೈ ಪಡೆಯುವಂತಹ ಪರಿಸ್ಥಿತಿ ಉಂಟಾಯಿತು. ಆದರೆ ಒಂದೂವರೆ ಶತಮಾನದಷ್ಟು ಹಿಂದೆಯೇ ಟಿಪ್ಪುಸುಲ್ತಾನನ ಅಂತಿಮ ಸೋಲಿನೊಂದಿಗೆ ತನ್ನ ಅಳಿದುಳಿದಿದ್ದ ಭೌಗೋಳಿಕ ಹಾಗೂ ರಾಜಕೀಯ ಐಕ್ಯತೆಗಳನ್ನು ಕಳೆದುಕೊಂಡು ಸಾಂಸ್ಕೃತಿಕ ವಿಘಟನೆಗೆ ಈಡಾಗಿದ್ದ ಕನ್ನಡಕ್ಕೆ, ಈ

ಕಾರಣದಿಂದಾಗಿಯೇ ತಮಿಳು ತೆಲುಗುಗಳಂತೆ ಇದನ್ನು ಧಿಕ್ಕರಿಸುವ ಶಕ್ತಿಯಾಗಲಿ, ತನ್ನ ಮೂಲ ಅಸ್ಮಿತೆಯನ್ನು ಮತ್ತೆ ಕ್ರೋಢೀಕರಿಸಿಕೊಳ್ಳುವ ಛಾತಿಯಾಗಲಿ ಇಲ್ಲದೆ ಹೋಯಿತು.

ಹೀಗಾಗಿ ಸ್ವಾತಂತ್ರ್ಯ ಸಾಧನೆಯ ಹೊತ್ತಿಗೆ; ಅದರ ಜೊತೆಜೊತೆಗೇ ಮೂಡಲಾರಂಭಿಸಿದ್ದ ಕನ್ನಡ ರಾಜ್ಯೋದಯದ ಕನಸಿಗೆ ತಾತ್ತ್ವಿಕತೆ ಒದಗಿ ಬಂದದ್ದು, ಕನ್ನಡ ಕುಲಪುರೋಹಿತರೆಂದು ಪ್ರಸಿದ್ಧರಾದ ಆಲೂರು ವೆಂಕಟರಾಯರೆಂಬ ಅಪ್ಪಟ ಸಂಸ್ಕೃತ ಪರಂಪರೆಯ ವೈದಿಕ ನಾಯಕರಿಂದ. ಜಾತಿ ಹಾಗೂ ಅಸ್ಪೃಶ್ಯತಾ ನಿವಾರಣೆಯ ಗಾಂಧೀಜಿಯ ಕಾರ್ಯಕ್ರಮಗಳನ್ನು ತಾತ್ತ್ವಿಕ ಹಾಗೂ ವ್ಯಾವಹಾರಿಕ – ಈ ಎರಡೂ ನೆಲೆಗಳಲ್ಲಿ ವಿರೋಧಿಸಿ ಸ್ವಾತಂತ್ರ್ಯಾಂದೋಲನದಿಂದ ದೂರ ಸರಿದಿದ್ದ ಇವರು, 'ಕರ್ನಾಟಕದ ಗತ ವೈಭವ'ದ ಆಧಾರದ ಮೇಲೆ ಹೊಸ ಕರ್ನಾಟಕತ್ವದ ಒಂದು ಭವ್ಯ ಲೌಕಿಕ ರೂಪವನ್ನು ಮಂಡಿಸಿದರು. ಆದರೆ ಅದನ್ನು 'ಭರತ ಭೂಮಿಯೆಂಬ ಧರ್ಮಕ್ಷೇತ್ರ'ದಲ್ಲಿ ತಮ್ಮ ಆರಾಧ್ಯದೈವ ವೀರ ಸಾವರ್ಕರರ 'ಹಿಂದುತ್ವ'ದ ಮಾದರಿಯ ಸ್ಫೂರ್ತಿಯಲ್ಲಿ ಅನುಷ್ಠಾನಗೊಳಿಸುವ ಆಶಯವನ್ನು ವ್ಯಕ್ತಪಡಿಸಿದ್ದರು ಅವರು! ಅಲ್ಲದೆ ಇದರ ಜೊತೆಗೇ ದಕ್ಷಿಣದಲ್ಲಿ ಕನ್ನಡ ಚಳವಳಿಯನ್ನು ಮುನ್ನಡೆಸುತ್ತಿದ್ದ; ಜೀವನದೃಷ್ಟಿಯಲ್ಲಿ ಆಧುನಿಕರೂ, ಉದಾರವಾದಿಗಳೂ ಆಗಿದ್ದ ಬಿ.ಎಂ.ಶ್ರೀ ಮತ್ತವರ ಸ್ನೇಹಿತರು ಕನ್ನಡದ 'ಜನಸಾಮಾನ್ಯರನ್ನು ಕೂಡಾ ಸಂಸ್ಕಾರವಂತರನ್ನಾಗಿ ಮಾಡುವ' ರೀತಿಯಲ್ಲಿ 'ಕನ್ನಡದ ಭಾಷೆ ತಲೆ ಎತ್ತುವ ಬಗೆ'ಯನ್ನು ಕಂಡುಹಿಡಿದಿದ್ದರು. ಅದನ್ನು ಪ್ರಚಾರ ಮಾಡಲು ಅವರಿಗೆ ಒದಗಿಬಂದ ಮಾದರಿಯೆಂದರೆ, ಆಧುನಿಕ ಇಂಗ್ಲಿಷ್ ಸಾಹಿತ್ಯ ಸಂಸ್ಕೃತಿಯ ಮಾದರಿ. 'ಆಧುನಿಕ ಕನ್ನಡ ಕಾವ್ಯಮಾಲೆ'ಯೊಂದನ್ನು ಸೃಷ್ಟಿಸಿದರೆ ಸಾಕು, ಕನ್ನಡ ಪುನರುಜ್ಜೀವನಗೊಳ್ಳುವುದು ಎಂಬುದು ಅವರ ಮುಗ್ಧ ನಂಬಿಕೆಯಾಗಿತ್ತು! ಅದಕ್ಕಾಗಿ ಅವರು ವ್ಯಾಪಕವಾದ ಕೆಲಸ ಮಾಡಿದರು ಮತ್ತು ಅದರುಂದ ಕನ್ನಡ ಒಂದಿಷ್ಟು ಪುಷ್ಟವಾಯಿತು ಎಂಬುದನ್ನೂ ನಾವು ಮರೆಯುವಂತಿಲ್ಲ.

ಹೀಗೆ ಕನ್ನಡ ರಾಜ್ಯೋದಯದ ಕನಸಿನೊಂದಿಗೇ ಮೂಡಿದ ಕನ್ನಡ ಚಳುವಳಿಯ ಎರಡು ಧಾರೆಗಳೂ ತಮ್ಮ ಮೂಲ ಜಾಯಮಾನದ ಹೊರಗಿನ ತಾತ್ತ್ವಿಕ ಚೌಕಟ್ಟುಗಳಿಂದಲೇ ಪಡೆದುಕೊಂಡಿದ್ದವು. ಹಾಗೂ ಕನ್ನಡ ಸಂಸ್ಕೃತಿಯ ಸ್ವಾಯತ್ತತೆಯ ಪ್ರಶ್ನೆಯನ್ನೇ ತಮ್ಮ ವ್ಯಾಪ್ತಿಯಿಂದ ಹೊರದೂಡಿದ್ದವು. ಹೀಗಾಗಿ ಡೆಪ್ಯೂಟಿ ಚೆನ್ನಬಸಪ್ಪನವರ ಕನ್ನಡ ಶಿಕ್ಷಣದ ಕಾರ್ಯಕ್ರಮದ ಹಿಂದಿದ್ದ ಕನ್ನಡ ಸಾಮಾಜಿಕತೆಯ ಆಶಯವೇ ಕನ್ನಡ ರಾಜ್ಯೋದಯದ ಹೊತ್ತಿಗೆ ಕಾಣೆಯಾಗಿದ್ದುದರ ವಿಪರ್ಯಾಸವನ್ನಷ್ಟೇ ತೇಜಸ್ವಿ ತಮ್ಮ ಸಂಸ್ಕೃತಿ ಮೀಮಾಂಸೆಯ ಭಾಗವಾಗಿ ಹೇಳುತ್ತಿದ್ದಾರೆನಿಸುತ್ತದೆ ಇದರ ಹೊರತು, ಈ ಮೇಲೆ ಪ್ರಸ್ತಾಪಿಸಿದ ಹಿರಿಯರೂ ಸೇರಿದಂತೆ ನಂತರದ ದಿನಗಳಲ್ಲಿ ಕನ್ನಡ ಚಳವಳಿಯನ್ನು ತಮ್ಮದೇ ರೀತಿನೀತಿಗಳಲ್ಲಿ ಮುನ್ನಡೆಸಿದ ಮಾಸ್ತಿ, ಬೇಂದ್ರೆ, ಕಾರಂತ, ಆನಂದಕಂದ, ಅನಕೃ, ತರಾಸು, ಬೀಚಿ, ಮ.ರಾಮಮೂರ್ತಿ ಮುಂತಾದವರ

ಕೊಡುಗೆಗಳನ್ನು ನಿರಾಕರಿಸುತ್ತಿಲ್ಲ ಎಂಬುದನ್ನು ನಾವು ಗಮನಿಸಬೇಕು. ಆದರೆ ಇವರೆಲ್ಲರೂ ಕನ್ನಡ ಚಳವಳಿಯನ್ನು ತಮಿಳು ಚಳವಳಿಯಂತೆ ಒಂದು ಸಾಮಾಜಿಕ ಕ್ರಾಂತಿಯ ಚಳವಳಿಯನ್ನಾಗಿ ವಿಸ್ತರಿಸದೇ ಹೋದದ್ದರ ಬಗ್ಗೆ ತೇಜಸ್ವಿಗೆ ಸಿಟ್ಟಿದೆ.

ಕನ್ನಡ ಚಳವಳಿ ಮುಟ್ಟಿರುವ ಇಂದಿನ ಸ್ಥಿತಿ ನೋಡಿದರೆ ಅವರ ಸಿಟ್ಟು ಸಮರ್ಥನೀಯವೇ ಅನ್ನಿಸದಿರಲಾರದು. ಏಕೆಂದರೆ ಅನಕೃ, ತರಾಸು, ಮ. ರಾಮಮೂರ್ತಿ ದೇಜಗೌ ಅವರ ಕಾಲಕ್ಕೆ ಕನ್ನಡಿಗರ ಉದ್ಯೋಗ, ವ್ಯಾಪಾರ, ಸಿನಿಮಾ ಇತ್ಯಾದಿ ಕ್ಷೇತ್ರಗಳಿಗೂ ವ್ಯಾಪಿಸಿಕೊಂಡ ಕನ್ನಡ ಚಳವಳಿ; ವಾಟಾಳ್, ನಾರಾಯಣಕುಮಾರ್ ರಂತಹವರ ಕಾಲದ ಹೊತ್ತಿಗೆ ಬೆಂಗಳೂರು ಕೇಂದ್ರಿತವಾಗಿ ಅನ್ಯಭಾಷಾ-ವಿಶೇಷವಾಗಿ ತಮಿಳು-ವಿರೋಧಿ ವಾರೆಗಣ್ಣಿನಲ್ಲೇ ನಡೆಯತೊಡಗಿ, ವಸೂಲಿ-ದುಂಡಾವರ್ತಿ ರಾಜಕಾರಣವಾಗಿ ಮಾರ್ಪಾಡಾಯಿತು. ಇದಕ್ಕೆ ಮತ್ತು ಚಳವಳಿಯ ನೇತೃತ್ವ ಅಂತಿಮವಾಗಿ ಇಂತಹವರ ಕೈಗೆ ಸಿಗುವಂತಾಗಲು, ಕರ್ನಾಟಕದ ಎಲ್ಲ ವರ್ಗಗಳ ಜನ ಇದರಲ್ಲಿ ಭಾವನಾತ್ಮಕವಾಗಿಯಾದರೂ ಭಾಗವಹಿಸುವಂತೆ ಅದನ್ನು ವಿಸ್ತರಿಸಲಾಗದ ಅದರ ದೌರ್ಬಲ್ಯವೇ ಕಾರಣವಿರಬಹುದು. ನಮ್ಮ ಬದುಕಿನ ಮೂಲಭೂತ ಸಂಗತಿಗಳಾದ ಹುಟ್ಟು, ನಾಮಕರಣ, ಮದುವೆ, ಶ್ರಾದ್ಧಾದಿ ಕರ್ಮಗಳಲ್ಲದೆ ನಮ್ಮ ಪೂಜೆ-ಪುನಸ್ಕಾರ-ಪ್ರಾರ್ಥನೆ ಇತ್ಯಾದಿಗಳನ್ನು ಅನ್ಯಭಾಷೆಯಲ್ಲೇ ಉಳಿಸಿಕೊಳ್ಳುವಂತಹ ವಿಧಿ-ನಿಷೇಧಗಳಿಗೆ ಮನಸ್ಸನ್ನು ಒಪ್ಪಿಸಿಬಿಟ್ಟ ಸಂಸ್ಕೃತಿಯೊಂದು ಇವಕ್ಕೆಲ್ಲ ಅನರ್ಹವಾಗಿ ಕಂಡಿರುವ ಕನ್ನಡವನ್ನು ಬದುಕಿನ ಯಾವ ಎಲ್ಲೆಯವರೆಗೆ, ಎಷ್ಟು ದಿನ ತಾನೆ ಬಿಟ್ಟುಕೊಂಡೀತು?

ಚಳವಳಿಯ ಈ ಅಂತರಿಕ ದೌರ್ಬಲ್ಯವೇ ಗೋಕಾಕ್ ವರದಿ ಮತ್ತು ಅದರ ಅನುಷ್ಠಾನಕ್ಕಾಗಿ ನಡೆದ ಚಳವಳಿಗಳಿಗೆ ಕಾರಣವಾಯಿತು. ರಾಜ್ಯದಲ್ಲಿ ಕನ್ನಡಿಗರೂ ಕನ್ನಡ ಕಲಿಯದೆಯೇ ತಮ್ಮ ಪ್ರೌಢಶಿಕ್ಷಣವನ್ನು ಮುಗಿಸಬಲ್ಲಂತಹ ಪರಿಸ್ಥಿತಿ ನಿರ್ಮಾಣವಾಗಿತ್ತೆಂದರೆ, ಅವರೆಗಿನ ಕನ್ನಡ ಚಳುವಳಿ ಕನ್ನಡಕ್ಕೆ ನಿಜವಾಗಿ ಏನು ಮಾಡುತ್ತಾ ಬಂದಿತ್ತು, ಯಾವ ರೀತಿಯ ಬೆಂಬಲ-ರಕ್ಷಣೆಯನ್ನು ಒದಗಿಸುತ್ತಾ ಬಂದಿತ್ತು ಮತ್ತು ಅದರ ಕಟ್ಟಡ ಹೇಗೆ ಮರಳೇ ತುಂಬಿಕೊಂಡ ಅಡಿಪಾಯದ ಮೇಲೆ ಕಟ್ಟಲ್ಪಡುತ್ತಿತ್ತು ಎಂಬುದು ವೇದ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಗೋಕಾಕ್ ಚಳವಳಿ, ಸಾಮಾನ್ಯ ಕನ್ನಡಿಗನ ತಪ್ಪಿತಸ್ಥ ಮನೋಭಾವನೆಯ ಅಸ್ಫೋಟನೆಯೆಂಬಂತೆ ರಾಜ್ಯಾದ್ಯಂತ ಬೆಂಕಿಯಂತೆ ಹರಡಿ (ಬಹುಶಃ ರಾಜ್‌ಕುಮಾರ್‌ರ ಪ್ರವೇಶದಿಂದಾಗಿ?) ರಾಜ್ಯ ಶಾಲಾ ಶಿಕ್ಷಣಕ್ರಮದಲ್ಲಿ ಕರ್ನಾಟಕದ ಪ್ರತಿಯೊಬ್ಬರೂ ಒಂದಲ್ಲ ಒಂದು ಹಂತದಲ್ಲಿ ಕನ್ನಡವನ್ನು ಕಡ್ಡಾಯವಾಗಿ ಕಲಿಯುವಂತಹ ಪರಿಸ್ಥಿತಿ ಉಂಟಾಯಿತಾಯಿತು, ನಿಜ. ಆದರೆ, ಕರ್ನಾಟಕದಲ್ಲಿ ಕನ್ನಡವನ್ನು ತನ್ನೆಲ್ಲ ಕ್ರಿಯಾಶೀಲತೆಯೊಂದಿಗೆ ಜೀವಂತವಾಗಿಡಬಲ್ಲ ಕನ್ನಡ ಮಾಧ್ಯಮವನ್ನು ಕಡ್ಡಾಯ ಮಾಡುವಂತಹ ವಾತಾವರಣ ಸೃಷ್ಟಿಯಾಗಲೇ ಇಲ್ಲ. ಇಂದು ಎಲ್ಲರಿಗೂ ಇಂಗ್ಲಿಷನ್ನು ಒಂದನೇ ತರಗತಿಯಿಂದ ಕಡ್ಡಾಯವಾಗಿ ಕಲಿಸುವಂತೆ ಮಾಡಿರುವ ಶಕ್ತಿಗಳೇ, ಅಂದು ಕನ್ನಡ ಮಾಧ್ಯಮ ಕಡ್ಡಾಯದ ಮೂಲಕ

ರಾಜ್ಯಾದ್ಯಂತವಾದರೂ ಏಕರೂಪದ ಶಿಕ್ಷಣ ಜಾರಿಗೆ ತರಲು ಅಡ್ಡಿಯಾಗಿದ್ದ ಶಕ್ತಿಗಳಾಗಿದ್ದವು ಎಂದರೆ ತಪ್ಪಾಗಲಾರದು. ಏಕೆಂದರೆ ಕನ್ನಡ ಮಾಧ್ಯಮ ಕಡ್ಡಾಯವಾಗದೆ ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಕೆಯನ್ನು ಜಾರಿಗೆ ತರುವ ಕ್ರಮದಿಂದಾಗಿ ಕನ್ನಡ ಶಿಕ್ಷಣ ಮಾಧ್ಯಮದ ಹಿಂದಿನ ತಾತ್ತ್ವಿಕತೆಯೇ ಘಾಸಿಗೊಳ್ಳುತ್ತದೆ. ಅಲ್ಲದೇ ಕನ್ನಡ ಶಿಕ್ಷಣ ಮಾದ್ಯಮದ ಅಗತ್ಯ; ಹಾಗಾಗಿ ಅದಕ್ಕಾಗಿ ಕೆಲವು ನಿಷ್ಠಾವಂತ ಕನ್ನಡ ಗುಂಪುಗಳ ಆಗ್ರಹದ ಮೇರೆಗೆ ರಾಜ್ಯ ಸರ್ಕಾರ ಇಷ್ಟು ವರ್ಷಗಳಿಂದ ನಡೆಸಿಕೊಂಡು ಬಂದ ಹೋರಾಟಕ್ಕೆ ಸರ್ವೋಚ್ಚ ನ್ಯಾಯಾಲಯದಲ್ಲಿ ಸಿಕ್ಕ (ತಾತ್ಕಾಲಿಕ) ಜಯ; ಆದರೆ ಕೆಲವು ಶಿಕ್ಷಣ ದಂಧೆಕೋರರು ಇದಕ್ಕೆ ಹಾಕಿರುವ ಅಡ್ಡಗಾಲನ್ನು ನಿವಾರಿಸಲು ನಡೆಸಿರುವ ಪ್ರಯತ್ನಗಳು–ಎಲ್ಲವುಗಳ ಪ್ರಸ್ತುತತೆಯೇ ಅನುಮಾನಾಸ್ಪದವೆನ್ನಿಸಿಕೊಳ್ಳುತ್ತವೆ. ಆದರೆ ಈ ಪರಿವೆಯೇ ಇಲ್ಲದೆ ಈ ಶಕ್ತಿಗಳು ಸಮಕಾಲೀನ ಅಗತ್ಯ ಹಾಗೂ ಸಾಮಾಜಿಕ ನ್ಯಾಯವೆಂಬ ಅಸ್ತ್ರಗಳನ್ನು ಬಳಸಿ, ಕನ್ನಡ ಮಾಧ್ಯಮ ವಿರೋಧಿ ಶಕ್ತಿಗಳೊಂದಿಗೆ ಕೈಜೋಡಿಸಿ ಅವಕ್ಕೆ ಈವರೆಗೆ ಇಲ್ಲದಿದ್ದ ತಾತ್ತ್ವಿಕ ಸಮಾಧಾನ ದೊರಕಿಸಿಕೊಟ್ಟಿವೆ.

೧೯೫೩ರ ಜೆ.ಬಿ. ಮಲ್ಲಾರಾಧ್ಯ ವರದಿಯಿಂದ ಹಿಡಿದು ಇತ್ತೀಚಿನ ಎಚ್. ನರಸಿಂಹಯ್ಯ – ಚಂಪಾ – ಬರಗೂರು ವರದಿಗಳವರೆಗೆ ಎಲ್ಲ ಶೈಕ್ಷಣಿಕ ಆಯೋಗಗಳೂ ಮತ್ತು ೧೯೮೯ರ ರಾಜ್ಯ ಉಚ್ಚನ್ಯಾಯಾಲಯದ ತೀರ್ಪಿನಿಂದ ಹಿಡಿದು ೧೯೯೩ರ ಸರ್ವೋಚ್ಚ ನ್ಯಾಯಾಲಯದ ತೀರ್ಪಿನವರೆಗೆ, ಪ್ರಾಥಮಿಕ ಶಾಲಾ ಶಿಕ್ಷಣವಾದರೂ ಕನ್ನಡ/ಮಾತೃಭಾಷೆಯಲ್ಲೇ ಇರಬೇಕೆಂದು ಹೇಳಿದ್ದರೂ, ಈ ಶಕ್ತಿಗಳಿಗೆ ಇದು ಸಾಧ್ಯವಾಗಿರುವುದಾದರೂ ಹೇಗೆ ಎಂದು ಯೋಚಿಸಬೇಕಾಗುತ್ತದೆ. ಅಷ್ಟೇ ಅಲ್ಲ, ೧೯೯೪ರ ರಾಜ್ಯ ಸರ್ಕಾರದ ಆಜ್ಞೆಯನ್ನು ಉಲ್ಲಂಘಿಸಿ ಇಂಗ್ಲಿಷ್ ಮಾಧ್ಯಮದಲ್ಲೇ ಶಿಕ್ಷಣ ನೀಡುತ್ತಿದ್ದ ಸಾವಿರಾರು ಶಾಲೆಗಳ ಅಧಿಪತಿಗಳು, ಇದರ ವಿರುದ್ಧ ಸರ್ಕಾರ ಕೈಗೊಂಡ ಕಾನೂನು ಕ್ರಮವನ್ನು ನ್ಯಾಯಲಯದಲ್ಲಿ ಪಶ್ನಿಸುವ ಮತ್ತು ಈ ಸಂಬಂಧ ನ್ಯಾಯಾಲಯದಲ್ಲಿ ಸೋತ ನಂತರವೂ ತಮ್ಮ ಅಕ್ರಮ ಶಾಲೆಗಳನ್ನು ಸಕ್ರಮಗೊಳಿಸುವುದು ಸಾರ್ವಜನಿಕ ಹಿತದೃಷ್ಟಿಯಿಂದ ಸರ್ಕಾರದ ಕರ್ತವ್ಯವೆಂದು ವಾದಿಸುತ್ತ, ಪದೇ ಪದೇ ಒಂದಲ್ಲ ಒಂದು ನೆಪದಲ್ಲಿ ನ್ಯಾಯಾಲಯದ ಮೆಟ್ಟಿಲೇರುವ ಅನೈತಿಕ ಧೈರ್ಯವನ್ನು ಪ್ರದರ್ಶಿಸುತ್ತಿವೆ. ಇಂತಹ ಪರಿಸ್ಥಿತಿಯಲ್ಲೂ ಕನ್ನಡ ಮಾಧ್ಯಮ ಶಾಲೆಗಳ ಉಳಿವಿಗೆಂದೇ ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಕೆ ಅಗತ್ಯವೆಂದು ವಾದಿಸುತ್ತಾ ಪ್ರಚಂಡ ಪ್ರಚಾರಾಂದೋಲನ ಆರಂಭಿಸಿದ ಈ ಶಕ್ತಿಗಳು ತುಟಿಕ್ ಪಿಟಿಕ್ ಎನ್ನದೆ ಇರುವುದರ ಮರ್ಮವಾದರೂ ಏನು?

ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಕೆಗಾಗಿ ಒತ್ತಯಿಸಿ ಪ್ರಚಾರಾಂದೋಲನ ಆರಂಭಿಸಿದವರು ತಮ್ಮನ್ನು ಸಮರ್ಥಿಸಿಕೊಳ್ಳಲು ನೀಡಿದ ಮುಖ್ಯ ಕಾರಣವೆಂದರೆ, ಇಂದು ಇಂಗ್ಲಿಷ್ ಸಾರ್ವಜನಿಕ ಜೀವನದ ಅವಿಭಾಜ್ಯ ಅಂಗವಾಗಿದ್ದು ಕನ್ನಡ ಮಾಧ್ಯಮ ಶಾಲೆಗಳಲ್ಲೇ ಓದುವ – ವಿಶೇಷವಾಗಿ ಹಿಂದುಳಿದ ವರ್ಗಗಳ– ಮಕ್ಕಳು ಉದ್ಯೋಗ

ಸ್ಪರ್ಧೆಯಲ್ಲಿ ಹಿಂದುಳಿಯುತ್ತಾರೆ ಎಂಬುದು. ಆದರೆ ಇಂಗ್ಲಿಷ್ ಕೂಡಾ ನಮ್ಮ ಶಿಕ್ಷಣಕ್ರಮದ ಅವಿಭಾಜ್ಯ ಅಂಗವಾಗಿ ಹೋಗಿ ಬಹಳ ವರ್ಷಗಳೇ ಆಗಿವೆ ಎಂಬ ಸಂಗತಿಯನ್ನು ಯಾಮಾರಿಸಿಯೇ ವಾದ ಮಾಡುತ್ತಿದ್ದಾರೆ. ಆದರೆ ಇಂದು ಪರಿಸ್ಥಿತಿ ಇವರು ಹೇಳುವಷ್ಟು ಬಿಗಡಾಯಿಸಿದ್ದರೆ ಇಂತಹ ಪರಿಸ್ಥಿತಿ ಏಕುಂಟಾಯಿತು, ಅದಕ್ಕೇನು ಕಾರಣ ಎಂಬ ಪ್ರಶ್ನೆಯನ್ನು ಎದುರಿಸುವ ಸಾಮರ್ಥ್ಯವನ್ನೇ ಇವರು ಕಳೆದುಕೊಂಡಿದ್ದಾರೆ ಎಂದು ಹೇಳಬೇಕಾಗುತ್ತದೆ. ಏಕೆಂದರೆ, ಈ ಪ್ರಶ್ನೆ ಒಂದು ದೊಡ್ಡ ಹಾಗೂ ಸಂಕೀರ್ಣ ರಾಜಕೀಯ ಪ್ರಶ್ನೆಯಾಗಿದೆ ಎಂಬ ಪರಿವೆಯೇ ಇವರಿಗೆ ಇದ್ದಂತಿಲ್ಲ. ಕನ್ನಡ ಚಳವಳಿ ತನ್ನೆಲ್ಲ ಆಯಾಮಗಳಲ್ಲಿ ಕ್ರಿಯಾಶೀಲವಾಗದೆ, ಕೇವಲ ಭಾವಾವೇಶದ ಚಳುವಳಿಯಾಗಿ ಅವನತಿಗೊಂಡಿದ್ದರ ಹಿಂದಿನ, ತೇಜಸ್ವಿ ಎತ್ತಿದ್ದ ಚಳವಳಿಯ ಸಾಮಾಜಿಕ–ರಾಜಕೀಯ ಸ್ವರೂಪದ ಪ್ರಶ್ನೆಯಿದು.

ಕುವೆಂಪು 'ಕನ್ನಡವೇ ಸತ್ಯ; ಕನ್ನಡವೇ ನಿತ್ಯ; ಅನ್ಯವೆನಲದೆ ಮಿಥ್ಯಾ' ಎಂಬ ಸೊಲ್ಲಿನ ಮೂಲಕ ವೈಯಕ್ತಿಕ ಜೀವನದಲ್ಲಿ ಕನ್ನಡಕ್ಕೊಂದು ಆಧ್ಯಾತ್ಮಿಕ ಶಕ್ತಿ ಪ್ರದಾನ ಮಾಡಿದರು. ಜೊತೆಗೆ ಸಾರ್ವಜನಿಕ ಜೀವನದಲ್ಲೂ ಕನ್ನಡವನ್ನು ಎಲ್ಲ ನೆಲೆಗಳಲ್ಲಿ ಜೀವಂತಗೊಳಿಸಬೇಕಾದ ಸಹಜ ಅಗತ್ಯವನ್ನು ಮನಗಾಣಿಸುವ ರೀತಿಯಲ್ಲಿ, ಈ ಸಂಬಂಧ ತಮ್ಮ ಕನಸಿನ 'ಮಾನಸ ಗಂಗೋತ್ರಿ'ಯ ಉದ್ಘಾಟನೆಯನ್ನು, 'ಕ್ಷಯಿಸೆ ಶಿವೇತರ ಕೃತಿ ಕೃತಿಯಲ್ಲಿ, ಮೂಡಲಿ ಮಂಗಳ ಮತಿಮತಿಯಲ್ಲಿ; ಕವಿಋಷಿ ಸಂತರ ಆದರ್ಶದಲಿ, ಸರ್ವೋದಯವಾಗಲಿ ಸರ್ವರಲಿ!' ಎಂಬ ಆಶಯದ 'ಕನ್ನಡ ಡಿಂಡಿಮ'ದೊಂದಿಗೇ ನೆರವೇರಿಸಿದರು. ಅಲ್ಲದೆ, ರಾಜ್ಯದ ಇನ್ನೊಂದು ವಿಶ್ವವಿದ್ಯಾಲಯವಾಗಿದ್ದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಕನ್ನಡ ಮಾಧ್ಯಮದ ತರಗತಿಗಳು ಆರಂಭವಾಗದ ಹೊರತು ಅಲ್ಲಿಗೆ ಕಾಲಿಡಲಾರೆ ಎಂಬ ದಿಟ್ಟ ಹಾಗೂ ನಿರ್ದಾಕ್ಷಿಣ್ಯ ನಿರ್ಧಾರ ಕೈಗೊಳ್ಳುವಷ್ಟು ಅವರ ಕನ್ನಡ **ನಿಷ್ಠೆಯಲ್ಲಿ ವೈಯುಕ್ತಿಕ ಹಾಗೂ ಸಾರ್ವಜನಿಕ ಮತ್ತು ಬದ್ಧತೆಯಿತ್ತು**. ಹಾಗೆ ನೋಡಿದರೆ, ಅವರ ಇಡೀ ಸಾಹಿತ್ಯವೇ ಒಂದು ಹೊಸ ಸಾಮಾಜಿಕ ಜಾಗೃತಿಯನ್ನು ಪ್ರಚೋದಿಸುವ ಆಂದೋಲನದ ರೂಪದಲ್ಲಿತ್ತು. ಆದರೆ ಇದು ಒಂದು ರಾಜಕೀಯ ಶಕ್ತಿಯ ರೂಪದಲ್ಲಿ ಹೊರಹೊಮ್ಮಲಾಗದಷ್ಟು ನಿರ್ಬಂಧಗಳನ್ನು ಕುವೆಂಪು – ಬಹುಶಃ ತಮ್ಮ ಸಾಹಿತ್ಯ ವ್ಯಕ್ತಿತ್ವದ 'ಘನತೆ'ಯನ್ನು ಕಾಪಾಡಿಕೊಳ್ಳಲು – ವಿಧಿಸಿಕೊಂಡಿದ್ದರು. ತೇಜಸ್ವಿ ಇದನ್ನು ತಮ್ಮ 'ಕರ್ನಾಟಕ ಸಂಸ್ಕೃತಿ ವಿಶ್ಲೇಷಣೆ'ಯ ಮೂಲಕ ಭೇದಿಸಲೆತ್ನಿಸಿದರು. ಆದರೆ, ಇದು 'ವ್ಯವಸ್ಥೆ'ಯನ್ನೇ ಬುಡಮೇಲುಗೊಳಿಸುವ ಅಪಾಯವಿದ್ದುದರಿಂದ ಪ್ರಭುತ್ವದ ಆಮಿಷ–ಆಕರ್ಷಣೆ – ಒತ್ತಡಗಳೆದುರು ಅನೇಕರಿಗೆ ದುಸ್ಸಾಹಸದಂತೆ ಕಂಡು, ತನ್ನ ಆವೇಗವನ್ನು ಕಳೆದುಕೊಂಡಿತು. ಇಲ್ಲಿ ಪ್ರಭುತ್ವವೆಂದರೆ ಸರ್ಕಾರ ಮಾತ್ರ ಆಗಿರದೆ, ಅದನ್ನು ನಿಯಂತ್ರಿಸುವ ಸಮಾಜದಲ್ಲಿನ ಪಟ್ಟಭದ್ರ–ಸಾಮಾಜಿಕ ಹಾಗೂ ಆರ್ಥಿಕ ಶಕ್ತಿಗಳೂ ಸೇರಿರುತ್ತವೆ ಎಂಬುದನ್ನು ನಾವು ಮರೆಯಬಾರದು.

ಇವೆರಡರ ಕೂಟಶಕ್ತಿಯಿಂದಾಗಿ ಕನ್ನಡ ಮಾಧ್ಯಮ ತನ್ನ ವಿಶ್ವಾಸಾರ್ಹತೆಯನ್ನು

ಸಾಧಿಸಿಕೊಳ್ಳಲಾರದೆ; ಇಂದು ಕನ್ನಡವೆಂಬುದು ಪರಂಪರೆಯೊಂದರ ಅವಶೇಷದಂತೆ ಹೆಮ್ಮೆಯ ಪ್ರದರ್ಶನದ ವಸ್ತುವಾಗಿ, ಸಂರಕ್ಷಿಸಿಡಬೇಕಾದ ಕನ್ನಡಿಗನ ಕರ್ತವ್ಯಭಾಗವಾಗಿ ಮಾತ್ರ ಉಳಿದುಕೊಳ್ಳುವ ಸ್ಥಿತಿ ತಲುಪಿದೆ. ಭೂಮಿಗೆ ಭಾರವಾಗಿರುವ ಕನ್ನಡವೆಂಬ ಈ 'ವಸ್ತು'ವನ್ನು ಹುಗುರಗೊಳಿಸಿ ಉಳಿಸಲು, ಅದರ ಸಂವಹನಕ್ಕಾಗಿ ಇಂಗ್ಲಿಷ್ ಲಿಪಿಯನ್ನು ಬಳಸಲು ತೊಡಗಬೇಕೆನ್ನುವಂತಹ ಸಲಹೆ ನೀಡುವ ಸ್ಥಿತಿ ಇಂದಿನ ಕನ್ನಡ ಭಾಷಾಶಾಸ್ತ್ರಜ್ಞರು ಮತ್ತು ಅವರ ಚೇಲಾಗಳಿಗೆ ಬಂದಿದೆ!

ಈ ಸ್ಥಿತಿಯನ್ನು ನಾವು 'ಜಾಗತೀಕರಣ'ವೆಂದು ಕರೆದುಕೊಂಡು, ಅದಕ್ಕೆ ನಮ್ಮ ಮಕ್ಕಳನ್ನು ಸಿದ್ಧಮಾಡಲು ಸರ್ಕಾರಿ ಮತ್ತು ಕನ್ನಡ ಮಾಧ್ಯಮ ಶಾಲೆಗಳಲ್ಲಿ ಒಂದನೇ ತರಗತಿಯಿಂದಲೇ ಇಂಗ್ಲಿಷ್ ಕಲಿಸುವ ಸಾರ್ವಜನಿಕ ಜವಾಬ್ದಾರಿಯನ್ನು ನಿರ್ವಹಿಸಿದ್ದೇವೆ. ಈಗ ಈ ಮಕ್ಕಳು ಹೀಗೆ ಇಂಗ್ಲಿಷ್ ಕಲಿತು ಐದನೇ ತರಗತಿಗೆ ಬರುವ ಹೊತ್ತಿಗೆ ಕನ್ನಡ ಮಾಧ್ಯಮ ಶಾಲೆಗಳನ್ನು ಬಿಟ್ಟುಬಿಡುವಂತಾಗುವಷ್ಟು 'ಸಾಮಾಜಿಕ ವಿಮೋಚನೆ' ಸಾಧಿಸುವ ಎಲ್ಲ ಸಾಧ್ಯತೆಗಳೂ ಕಂಡುಬರುತ್ತಿವೆ. ಆದುದರಿಂದ, ಹಿಂದುಳಿದ ವರ್ಗಗಳ ಹಾಗೂ ಬಡಮಕ್ಕಳ ಶಾಲೆಗಳಾಗಿರುವ ಸರ್ಕಾರಿ ಹಾಗೂ ಕನ್ನಡ ಮಾಧ್ಯಮ ಶಾಲೆಗಳನ್ನು ಉಳಿಸುವ ಏಕೈಕ ಮಾರ್ಗವೆಂದರೆ ಅವನ್ನು ಐದನೇ ತರಗತಿಯಿಂದ ಸಂಪೂರ್ಣ ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನಾಗಿ ಪರಿವರ್ತಿಸುವುದೇ ಆಗಿದೆ ಎಂಬ ಗುಸುಗುಸವನ್ನು ಆರಂಭಿಸಿದ್ದೇವೆ.... (ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸುವ ಪ್ರಚಾರಾಂದೋಲನಕ್ಕೆ 'ಅಧಿಕೃತ ಮುಖವಾಣಿ'ಯಂತೆ ಕೆಲಸ ಮಾಡಿದ ಕನ್ನಡದ ಹೆಮ್ಮೆಯ ಪತ್ರಿಕೆ 'ಪ್ರಜಾವಾಣಿ'ಯಲ್ಲಿ ಇತ್ತೀಚೆಗೆ ಪ್ರಕಟವಾದ ಮಂಗಳೂರಿನ ಶುಭಶ್ರೀ ಎಂಬ ಉಪಾಧ್ಯಾಯಿನಿ ಬರೆದಿರುವ ದೀರ್ಘಪತ್ರವನ್ನು ಗಮನಿಸಿ.) ಈ ಮಧ್ಯೆ ಇಂಗ್ಲಿಷನ್ನು ಅಂಬೇಡ್ಕರರು ಶೂದ್ರ ಮತ್ತು ದಲಿತರ ಭಾಗ್ಯದೇವತೆ, ಸಿಂಹಿಣಿಯ ಹಾಲು ಎಂದು ವರ್ಣಿಸಿದ್ದಾರೆಂಬ ಹೊಸ ಸಂಶೋಧನೆಗಳೂ ಪ್ರಚಾರಕ್ಕೆ ಬರುತ್ತಿವೆ!

ಈ ಎಲ್ಲ ಬೆಳವಣಿಗೆಗಳೂ ಸಹಜವಾಗಿ ಆಗುತ್ತವೆ ಎಂದು ನಂಬಿದವರಿಗೆ; 'ಜಾಗತೀಕರಣ'ವೆಂಬುದು ಒಂದು ಸಹಜ ಆರ್ಥಿಕ ವಿದ್ಯಮಾನವಾಗಿರದೆ, ಅದರ ಹಿಂದೆ ಒಂದು ಅಂತಾರಾಷ್ಟ್ರೀಯ ರಾಜಕೀಯ ಷಡ್ಯಂತ್ರವೂ ಕೆಲಸ ಮಾಡುತ್ತಿದೆ – ಅದಕ್ಕಾಗಿ ಕೋಟ್ಯಂತರ ರೂಪಾಯಿಗಳ ಹಣ, ವಿವಿಧ ರೂಪದ 'ಸೇವಾ ಸಂಸ್ಥೆ'ಗಳ ಮೂಲಕ ವಿನಿಯೋಗವಾಗುತ್ತಿದೆ ಎಂಬ ತಿಳುವಳಿಕೆ ಇರಲಾರದು. ಹೀಗೆ ಜಾಗತೀಕರಣವೆಂಬುದು ವಿವಿಧ ಆಮಿಷ–ಆಕರ್ಷಣೆಗಳ ಮಾರುಕಟ್ಟೆ ರೂಪದಲ್ಲಿ ಆಗಮಿಸುತ್ತಿರುವ ಭವಿಷ್ಯದ ಸಾಮ್ರಾಜ್ಯಶಾಹಿಯೇ ಆಗಿದೆ ಎಂಬ ಮುನ್ನೋಟವೂ ಇವರಿಗೆ ಸಾಧ್ಯವಾಗಲಾರದು. ಇಂತಹ ತಿಳುವಳಿಕೆಯಾಗಲೀ, ಮುನ್ನೋಟವಾಗಲಿ ಸಾಧ್ಯವಾಗದಂತಹ ಮಾನಸಿಕತೆ ಸೃಷ್ಟಿಸುವುದೇ ಇಂಗ್ಲಿಷ್ ಕಲಿಕೆಯ ಇತ್ತೀಚಿನ ವಿಶೇಷ ಕಾರ್ಯಾಚರಣೆಯ ಗುರಿಯಾಗಿದೆ. ಈ ಕಾರ್ಯಾಚರಣೆಯನ್ನು ಯೋಜಿಸಿರುವವರಿಗೆ ನಮ್ಮ ಹಿಂದಿನ ತಲೆಮಾರಿನ 'ಇಂಗ್ಲಿಷ್ ಪ್ರೇಮಾಂಧತೆ' ಸಾಲದೆನ್ನಿಸಿ, ಈ 'ಆಪರೇಷನ್

ಇಂಗ್ಲಿಷ್ ಕಾಮಾಂಧತೆ'ಯನ್ನು ಆರಂಭಿಸಿದೆ!

ಹೀಗಾಗಿಯೇ ರೈಲ್ವೇ ಟಿಕೆಟ್‌ನಲ್ಲಿದ್ದ ಕನ್ನಡ ಉಳಿಸಲು, ನಮ್ಮ ರಾಜ್ಯದ ರಾಜ್ಯಪಾಲರ ಕಚೇರಿಯಲ್ಲಿನ ಕನ್ನಡ ಉಳಿಸಲು, ನಮ್ಮದೇ ಸಾರಿಗೆ ಸಂಸ್ಥೆಯ ಬಸ್ ಟಿಕೆಟ್‌ನಲ್ಲಿ ಕನ್ನಡ ತರಲು ಮತ್ತು ಕಾವೇರಿ ನ್ಯಾಯಾಧೀಕರಣದ ತೀರ್ಪಿನ ವಿರುದ್ಧ ಚಿತ್ರ-ವಿಚಿತ್ರ ಖಯಾಲಿಗಳೊಂದಿಗೆ ಹೋರಾಡುವ ಕನ್ನಡ ಚಳವಳಿಯ ನಾಯಕರ್ಯಾರೂ ಕನ್ನಡ ಮಾಧ್ಯಮದ ಪರವಾಗಿ, ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸುವುದರ ವಿರುದ್ಧವಾಗಿ ಸೊಲ್ಲೆತ್ತುವ ತಿಳಿವಳಿಕೆಯನ್ನಾಗಲೀ, ವಿವೇಕವನ್ನಾಗಲೀ ಪ್ರದರ್ಶಿಸಲಾಗಿಲ್ಲ. ಹೀಗೆ ಕನ್ನಡ ಚಳವಳಿಯೇ ಮೂಲತಃ ಕನ್ನಡ ವಿರೋಧಿಯಾಗುತ್ತಿರುವ ದುರಂತವನ್ನೆದುರಿಸುತ್ತಿದೆ. ಅದುದರಿಂದಲೇ ಅದಕ್ಕೆ ರೈಲ್ವೇ ಟಿಕೆಟ್‌ನಲ್ಲಾಗಲೀ, ರಾಜ್ಯಪಾಲರ ಕಚೇರಿಯಲ್ಲಾಗಲಿ ಕನ್ನಡವನ್ನು ಉಳಿಸಿಕೊಳ್ಳಲಾಗಲಿ, ರಾಜ್ಯ ಬಸ್ ಟಿಕೆಟ್ ಮೇಲೆ ಕನ್ನಡವನ್ನು ತರಲಾಗಲಿ ಸಾಧ್ಯವಾಗಿಲ್ಲ. ಆ ಗುರಿಗಳೆಡೆಗೆ ತನ್ನನ್ನು ಒಯ್ಯುವಷ್ಟು ತೀವ್ರತೆಯನ್ನಾಗಲಿ, ತ್ರಾಣವನ್ನಾಗಲಿ, ಬದ್ಧತೆಯನ್ನಾಗಲಿ ಸಂಘಟಿಸಿಕೊಳ್ಳಲು ಅನುವು ಮಾಡಿಕೊಡುವ ತಾತ್ತ್ವಿಕ ಮುನ್ನೋಟವೇ ಇರದೆ, ಪ್ರದರ್ಶಕ ಬಲದ ರೋಚಕತೆಯನ್ನಷ್ಟೇ ಅದು ಅವಲಂಬಿಸಿರುವುದು ಇದಕ್ಕೆ ಕಾರಣವಾಗಿದೆ.

ಇನ್ನು ಕಾವೇರಿ ಜಲ ಪ್ರಕರಣದಲ್ಲಿ ರಾಜ್ಯ ತನ್ನ ನ್ಯಾಯೋಚಿತ ಪಾಲನ್ನು ದೊರಕಿಸಿಕೊಳ್ಳುವಂತಾಗಲು ಮೊದಲು ರಾಜ್ಯ, ಭಾರತದ ಒಕ್ಕೂಟದಲ್ಲಿ ತನ್ನ ರಾಜಕೀಯ ಅಸ್ಮಿತೆಯನ್ನು ದೃಢವಾಗಿ ಸ್ಥಾಪಿಸಿಕೊಳ್ಳುವಂತಾಗಬೇಕು ಹಾಗೂ ಅದು ಸಾಧ್ಯವಾಗುವುದು ತಾನೊಂದು ಭಾಷಾಕುಲವೆಂಬ ಆತ್ಮಪ್ರಜ್ಞೆಯ ಪುನರುಜ್ಜೀವನದ ಮೂಲಕ ಮಾತ್ರ ಎಂಬ ಅರಿವು ಜಾಗೃತವಾಗಬೇಕು. ಇದಕ್ಕಾಗಿ ಕನ್ನಡ ಚಳವಳಿ, ಕನ್ನಡವನ್ನು ಶಿಕ್ಷಣಕ್ರಮದ ಕೇಂದ್ರಕ್ಕೆ ಮರಳಿ ತಂದು, ಸಾರ್ವಜನಿಕ ಜೀವನದಲ್ಲಿ ಕನ್ನಡದ ಪ್ರಸ್ತುತತೆ ಹಾಗೂ ಗೌರವವನ್ನು ಪುನಃಸ್ಥಾಪಿಸುವ ದಿಕ್ಕಿನಲ್ಲಿ ಸಕ್ರಿಯವಾಗಬೇಕಿದೆ. ಬೀದಿ ಹೋರಾಟ ಅದೆಷ್ಟೇ ವೀರಾವೇಶವನ್ನು ಪ್ರದರ್ಶಿಸಿ ರೋಚಕತೆಯನ್ನು ಪಡೆದುಕೊಂಡರೂ, ಅಖಿಲ ಭಾರತ ಮಟ್ಟದ ಯಾವುದೇ ವೇದಿಕೆಯಲ್ಲಿ ಅದು ಯಾವುದೇ ಪರಿಣಾಮ ಬೀರದು ಎಂಬ ಅರಿವು ಮೂಡಬೇಕಿದೆ. ಎಷ್ಟಾದರೂ ಕನ್ನಡ-ಕರ್ನಾಟಕ ಬೆಳೆಯಬೇಕಾಗಿರುವುದು, ಸದ್ಯಕ್ಕಂತೂ ಭಾರತವೆಂಬ ಒಕ್ಕೂಟದಲ್ಲೇ ಎಂಬುದು ಕಟು ವಾಸ್ತವವೇ ಹೌದು.

ಆದರೆ ಕನ್ನಡಿಗನ ಅಂತರಂಗದಿಂದ ಹೊರದೂಡಲ್ಪಟ್ಟಿರುವ ಕನ್ನಡ, ಈ ಬೀದಿ ಹೋರಾಟದ ರೂಪದ ಚಳವಳಿಯಿಂದಲೇ ಬಹಿರಂಗದಲ್ಲಾದರೂ ಇನ್ನೂ ಉಳಿದಿದೆ ಎಂಬ ವಾಸ್ತವ ಸಂಗತಿಯನ್ನು ನಾವು ಒಪ್ಪಿಕೊಳ್ಳಬೇಕಿದೆ. ಈ ದೃಷ್ಟಿಯಿಂದ, ವಾಟಾಳ್ ನಾಗರಾಜ್‌ರಂತಹ ಹೋರಾಟಗಾರರ ಕೊಡುಗೆಯನ್ನು ಅವರ ಅನೇಕ ದೌರ್ಬಲ್ಯಗಳ ನಡುವೆಯೂ ನಾವು ಮಾನ್ಯ ಮಾಡಬೇಕಾಗಿದೆ.

(ಆಗಸ್ಟ್, ೨೦೦೭)

■

ಭಾಷಾಭಿಮಾನ, ರಾಷ್ಟ್ರೀಯತೆ, ಸಾಮಾಜಿಕ ಬದ್ಧತೆ ಇತ್ಯಾದಿ...

ಭಾರತ ಒಂದು ರಾಷ್ಟ್ರವಾಗಿ, ಭಾರತೀಯರೆನ್ನಿಸಿಕೊಂಡವರು ಯಾವುದೇ ಪ್ರದೇಶದಲ್ಲಿ ಉದ್ಯೋಗ ಮಾಡುವ, ನೆಲಸುವ ಹಕ್ಕನ್ನು ಪಡೆದಿದ್ದಾರೆ ಎಂಬುದೂ ನಿಜ. ಆದರೆ ಈ ಹಕ್ಕು ಸ್ವಾತಂತ್ರ್ಯೋತ್ತರ ಭಾರತದಲ್ಲಿ ಎಷ್ಟು ದುರುಪಯೋಗವಾಗಿದೆ ಎಂದರೆ, ನಮ್ಮ ರಾಷ್ಟ್ರ ನಿರ್ಮಾಪಕರು ಭಾಷಾ ರಾಷ್ಟ್ರೀಯತೆಗಳ ವಾಸ್ತವವನ್ನು ಮನಗಂಡು ರಚಿಸಿದ ಭಾಷಾಧಾರಿತ ರಾಜ್ಯಗಳ ಒಕ್ಕೂಟದ ಪರಿಕಲ್ಪನೆಯೇ ಇದರಿಂದ ಘಾಸಿಗೊಳ್ಳಲಾರಂಭಿಸಿದೆ. ಇದು ಸಮುದಾಯ ವಿಶಿಷ್ಟತೆಯನ್ನು ನಾಶ ಮಾಡುತ್ತಾ, ಭಾರತವೆಂಬುದನ್ನು ರಾಜಕೀಯ ಬಲ ಸಂಘಟಿಸಿಕೊಳ್ಳಬಲ್ಲ ಸಮುದಾಯಗಳ 'ಸಾಮ್ರಾಜ್ಯಶಾಹಿ' ಪ್ರವೃತ್ತಿಗಳ ಆಡೊಂಬಲವನ್ನಾಗಿ ಪರಿವರ್ತಿಸುತ್ತಿದೆ. ಭಾರತ ಒಂದು ರಾಷ್ಟ್ರವಾಗಿ ಉಳಿಯುವುದು ಮತ್ತು ಉಳಿಯಬೇಕಾದದ್ದು, ತನ್ನ ವೈವಿಧ್ಯತೆ ಬಲಗೊಳ್ಳುವ ಏಕತೆಯಲ್ಲಿ;ಏಕತೆಯ ಒತ್ತಡದಲ್ಲಿ ನಲುಗುವ ವೈವಿಧ್ಯತೆಯಲ್ಲಲ್ಲ.

ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಪ್ರಕಟವಾಗುತ್ತಿದ್ದಂತೆ ಕನ್ನಡ ರಾಜ್ಯೋತ್ಸವದ ಸಂಭ್ರಮ ರಾಜ್ಯಾದ್ಯಂತ ಮುಗಿಲು ಮುಟ್ಟಿದೆಯೆಂದು ಕನ್ನಡ ಟಿ.ವಿ. ವಾಹಿನಿಗಳು ವರದಿ ಮಾಡಿವೆ. ಈ ಕನ್ನಡ ಟಿ.ವಿ. ವಾಹಿನಿಗಳು ಭಾಷೆಯನ್ನು ಕಳೆದುಕೊಂಡು ಬಹಳ ದಿನಗಳೇ ಆಗಿರುವುದರಿಂದ, ಅವು ಮುಗಿಲು ಮುಟ್ಟಿದೆ ಎಂದರೂ ಒಂದೇ, ನೆಲ ಕಚ್ಚಿದೆ ಎಂದರೂ ಒಂದೇ ಅರ್ಥ ಎಂಬಂತಾಗಿದೆ! ಇದು, ಕನ್ನಡಿಗರು ಕನ್ನಡದ ಬಗ್ಗೆ ಬೆಳೆಸಿಕೊಂಡು ಬಂದಿರುವ ಹುಸಿ ಅಭಿಮಾನದ ಸಂಕೇತವೂ ಆಗಿದೆ ಎಂದರೆ ತಪ್ಪಾಗಲಾರದು. ಕನ್ನಡ ಸೇನಾನಿಗಳು ಪಟಾಕಿ ಹಚ್ಚಿ ಅದರ ಸುತ್ತಾ ಕನ್ನಡ ಬಾವುಟವಾಡಿಸುತ್ತಾ ಕುಣಿದಿದ್ದೇನು, ನಮ್ಮ ಮುಖ್ಯಮಂತ್ರಿಗಳು ಟಿ.ವಿ.. ಕ್ಯಾಮರಾಗಳ ಮುಂದೆಯೇ ಬಾಯಿ ಇಷ್ಟಗಲ ಮಾಡಿಕೊಂಡು ಈ ಬಾರಿ ರಾಜ್ಯೋತ್ಸವ ಸಂಭ್ರಮವನ್ನು ರಾಜ್ಯಾದ್ಯಂತ ವಿಶೇಷವಾಗಿ (ಶಾಸ್ತ್ರೀಯ ಸ್ಥಾನಮಾನಕ್ಕೆ ತಕ್ಕಂತೆ?) ಆಚರಿಸುವಂತೆ ಜಿಲ್ಲಾಧಿಕಾರಿಗಳಿಗೆ ದೂರವಾಣಿ ಮೂಲಕ ಸೂಚಿಸಿದ್ದೇನು! ಆಹಾ, ಇದೇ ಅಲ್ಲವೇ ಕನ್ನಡಾಭಿಮಾನವೆಂದರೆ? ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರಕುವಂತೆ ಮಾಡಲು

ಹೋರಾಡಿದವರಿಗೆ ಸನ್ಮಾನ ಮಾಡುವುದಾಗಿಯೂ ಯಡಿಯೂರಪ್ಪನವರು ಈ ಸಂದರ್ಭದಲ್ಲಿ ಪ್ರಕಟಿಸಿದ್ದಾರೆ.

ಆದರೆ ಯಾವ ಹೋರಾಟ? ಹಲವು ಬಾರಿ ಒಂದು ದಿನದ ಅಮರಣಾಂತ ಉಪವಾಸ ಗೈದಿದ್ದೆ? ಹಣೆ ತುಂಬ ತಿಲಕ ಹಚ್ಚಿಕೊಂಡು ಊರೂರುಗಳಲ್ಲಿ ಬೀದಿ ತುಂಬಾ ಕೂಗುತ್ತಾ ಮೆರವಣಿಗೆ ತೆಗೆದದ್ದೆ? ಇವುಗಳಿಂದ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಸಿಕ್ಕಿದೆಯೆಂದು ಇವರು ನಂಬಿದ್ದರೆ ಅದಕ್ಕಿಂತ ದೊಡ್ಡ ಭ್ರಮೆ ಇನ್ನೊಂದಿರಲಾರದು! ಏಕೆಂದರೆ ತೆಲುಗಿನವರು ಯಾವ ಉಪವಾಸವನ್ನೂ ಮಾಡದೆ, ಯಾವ ಬೀದಿ ಮೆರವಣಿಗೆಯನ್ನೂ ತೆಗೆಯದೆ ತಮ್ಮ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ಗಿಟ್ಟಿಸಿಕೊಂಡಿದ್ದಾರೆ! ಇದು ಹೇಗೆ ಸಾಧ್ಯವಾಯಿತು? ತೆಲುಗಿನವರು ಸ್ವಾಭಿಮಾನಿಗಳಂತೆ ವರ್ತಿಸಿ ಮಾಡಬೇಕಾದ ರೀತಿಯಲ್ಲಿ ಭಾಷಾ ರಾಜಕಾರಣ ಮಾಡಿ ತಮಗೆ ಬೇಕಾದುದನ್ನು ಘನತೆಯಿಂದ ಪಡೆದಿದ್ದಾರೆ. ಆದರೆ ಕನ್ನಡಿಗರು? ಕೂಗಾಡಿ, ಬೈದು, ರಚ್ಚೆ ಮಾಡಿ, ಬೆದರಿಕೆ ಹಾಕಿ, ಅವುಗಳಿಂದಲೇ ಪಡೆಯಬೇಕಾದುದನ್ನೆಲ್ಲ ಪಡೆದುಕೊಂಡಂತೆ, ಈಗ ಸನ್ಮಾನಕ್ಕೆ ಬೇರೆ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ! ಇನ್ನು ಯಾರಾರನ್ನೆಲ್ಲ ಸನ್ಮಾನಿಸಬಹುದೆಂದು ನಮ್ಮ ರಾಷ್ಟ್ರಕವಿಗಳು ಪರೋಕ್ಷವಾಗಿ ಸೂಚಿಸಿಯೂ ಬಿಟ್ಟಿದ್ದಾರೆ. ಇವರು ಶಿಫಾರ್ಸು ಮಾಡಿರುವ ಹೋರಾಟಗಾರರನ್ನೊಮ್ಮೆ ನೋಡಿದರೆ, ಕನ್ನಡದ ಭವಿಷ್ಯ ನಿಜವಾಗಿಯೂ ಆತಂಕದಲ್ಲಿದೆ ಎಂದೇ ಹೇಳಬೇಕು!

ಈ ಮುಗಿಲು ಮುಟ್ಟಿದ ಸಂಭ್ರಮದ ರಾಜ್ಯೋತ್ಸವದ ಎರಡು ದಿನಗಳ ಹಿಂದಷ್ಟೆ ನಮ್ಮ ಉಚ್ಚ ನ್ಯಾಯಾಲಯದ ನ್ಯಾಯಾಧೀಶರೊಬ್ಬರು ಕರ್ನಾಟಕದಲ್ಲಿ ಇಂಗ್ಲಿಷ್ ಮಾಧ್ಯಮ ಶಾಲೆಗಳಿಗೆ ಅನುಮತಿ ನೀಡುವಂತೆ ಆದೇಶಿಸುತ್ತಾ, ಈ ಆದೇಶದೊಂದಿಗೆ ಮಕ್ಕಳಿಗೆ ಇಂಗ್ಲಿಷ್ ಕಲಿಸುವುದು ತಂದೆ ತಾಯಿಗಳ ಹಕ್ಕಷ್ಟೇ ಅಲ್ಲ, ಕರ್ತವ್ಯವೂ ಎಂಬಂತೆ ಪ್ರವಚನ ನೀಡಿದ್ದಾರೆ ಎಂಬುದನ್ನೂ ನಾವು ಗಮನಿಸಬೇಕು. ನಮ್ಮ ನ್ಯಾಯಾಧೀಶರುಗಳು ನ್ಯಾಯ ನೀಡುವ ಅಧಿಕಾರವನ್ನಷ್ಟೇ ಅಲ್ಲ, ಹೊಸ ಕಾಲದ ಪ್ರವಾದಿತ್ವವನ್ನೂ ತಮ್ಮ ಮೇಲೆ ಆರೋಪಿಸಿಕೊಂಡಂತಿದೆ! ಆದರೆ ಅವರು ಸಂವಿಧಾನವನ್ನು ಸೂಕ್ತವಾಗಿ ಅರ್ಥೈಸುವುದರ ಹೊರತಾಗಿ ಮತ್ತಾವ ಕೆಲಸಕ್ಕೂ ಅಧಿಕಾರಸ್ಥರೂ ಅಲ್ಲ, ಅರ್ಹರೂ ಅಲ್ಲ ಎಂಬುದು ಅನೇಕ ವೇಳೆ ಅನೇಕರಿಂದ ವಿಷದೀಕರಿಸಲ್ಪಟ್ಟಿದೆ. ಆದರೂ, ಅವರು ಇತ್ತೀಚಿನ ದಿನಗಳಲ್ಲಿ ತಮ್ಮ ಈ ಅಧಿಕಾರ-ಅರ್ಹತೆಗಳನ್ನೂ ಮೀರಿ ತಮ್ಮ ತೀರ್ಪಿನ ಜೊತೆಯಲ್ಲಿ ಸಾರ್ವಜನಿಕ ಮಹತ್ವದ ವಿಷಯಗಳ ಬಗ್ಗೆ ನಿರ್ಣಯಾತ್ಮಕ ರೂಪದ ಹೇಳಿಕೆಗಳನ್ನು ನೀಡುವುದು, ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದು ಸಾಮಾನ್ಯವಾಗಿ ಹೋಗಿರುವುದನ್ನು ನಮ್ಮ ಅನೇಕ ಕಾನೂನು ಪಂಡಿತರು ವಿಷಾದದಿಂದ ಗಮನಿಸಿದ್ದಾರೆ. ಅದಕ್ಕೆ ಕಾರಣ, ಹೊಸ ಆರ್ಥಿಕತೆಯ ಗಾಳಿಗೆ ಅವರೂ ತಮ್ಮ ಮೈಮನಗಳನ್ನು ತೆರೆದುಕೊಂಡಿರುವುದೇ ಆಗಿದೆ. ಅದರ ದುಷ್ಪರಿಣಾಮಗಳನ್ನು ನಾವು ನ್ಯಾಯಾಂಗದ ಇತ್ತೀಚಿನ ಹಲವಾರು ಭ್ರಷ್ಟಾಚಾರದ ಪ್ರಕರಣಗಳ ವರದಿಗಳಲ್ಲಿ

ನೋಡಬಹುದಾಗಿದೆ. ಸದರಿ ನ್ಯಾಯಾಧೀಶರ ತೀರ್ಪನ್ನು ಕುರಿತ ಪತ್ರಿಕಾ ವರದಿಗಳನ್ನೇ ಆಧರಿಸಿ ಹೇಳುವುದಾದರೆ, ಈ ನ್ಯಾಯಾಧೀಶರಿಗೆ ಶಿಕ್ಷಣದ ಮಾಧ್ಯಮದ ಪ್ರಶ್ನೆಯೇ ಬೇರೆ, ಇಂಗ್ಲಿಷ್ ಕಲಿಕೆಯ ಅಗತ್ಯದ ಪ್ರಶ್ನೆಯೇ ಬೇರೆ ಎಂಬುದು ಅರ್ಥವಾದಂತಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ.

ಆದರೆ ಇದಕ್ಕಿಂತ ಹೆಚ್ಚಿನ ವಿಷಾದದ ಸಂಗತಿಯೆಂದರೆ, ಶಾಸ್ತ್ರೀಯ ಭಾಷಾ ಸ್ಥಾನಮಾನದ ಬಗ್ಗೆ ಸಂಭ್ರಮ ಪಡುತ್ತಿರುವ ವೀರ ಕನ್ನಡಿಗರಾರೂ ಸಾರ್ವಜನಿಕವಾಗಿ ಕನ್ನಡ ಎದುರಿಸುತ್ತಿರುವ ಈ ಮುಜುಗರದ ಬಗ್ಗೆ ತಲೆ ಕೆಡಿಸಿಕೊಳ್ಳದೇ ಇರುವುದು. ಕನ್ನಡದ ತಂದೆ ತಾಯಿಗಳೇ ತಮ್ಮ ಮಕ್ಕಳಿಗೆ ಕನ್ನಡದಲ್ಲಿ ಶಾಲಾ ಶಿಕ್ಷಣವೂ ಬೇಡವೆಂದು ಘಂಟಾಘೋಷವಾಗಿ ಹೇಳಿಕೊಂಡು, ಅದಕ್ಕೆ ನಮ್ಮ ನ್ಯಾಯಾಲಯಗಳ ಮನ್ನಣೆಯನ್ನೂ ಪಡೆದುಕೊಳ್ಳುತ್ತಿರುವ ಈ ಸಂದರ್ಭದಲ್ಲಿ, ಕನ್ನಡ ರಾಜ್ಯೋತ್ಸವ ಮುಗಿಲು ಮುಟ್ಟಿದೆ ಎಂದರೆ, ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಸಿಕ್ಕಿದೆಯೆಂದು ಕನ್ನಡಿಗರು ಬೀದಿ ಬೀದಿಗಳಲ್ಲಿ ಹುಚ್ಚೆದ್ದು ಕುಣಿಯಲಾರಂಭಿಸಿದ್ದಾರೆ ಎಂದರೆ; ಕನ್ನಡಾಭಿಮಾನವೆಂಬುದು ಈಗ ಎಷ್ಟು ವಿಕ್ಷಿಪ್ತವಾಗಿ ಹೋಗಿರಬೇಕು ಎಂದು ಯೋಚಿಸಿ! ಒಂದು ಭಾಷೆ ಉಳಿಯುವುದು, ಬೆಳೆಯುವುದು ಅದರ ಸಾರ್ವಜನಿಕ ಬಳಕೆದಾರಿಕೆಯ ವೈವಿಧ್ಯದಲ್ಲಿ. ಹಾಗಾಗಿ, ಕನ್ನಡದ ಮಕ್ಕಳು ಪ್ರಾಥಮಿಕ ಶಿಕ್ಷಣವನ್ನೂ ಕನ್ನಡದ ಮೂಲಕ ಕಲಿಯುವುದು ಅವರ ಭವಿಷ್ಯದ ದೃಷ್ಟಿಯಿಂದ ಆತಂಕಕಾರಿ ಎಂಬ ಸಾಮಾಜಿಕ ಸಂದರ್ಭವನ್ನುಂಟುಮಾಡಿರುವ ನಮ್ಮ ಸಾಮಾಜಿಕ ನಾಯಕರಿಗೆ ಮತ್ತು ಸರ್ಕಾರಕ್ಕೆ ರಾಜ್ಯೋತ್ಸವ ಆಚರಿಸುವ ಯಾವ ನೈತಿಕ ಹಕ್ಕೂ ಇಲ್ಲ ಎಂದು ಹೇಳಬೇಕಾಗಿದೆ. ಕನ್ನಡದ ಮಕ್ಕಳು ಕನ್ನಡದಲ್ಲಿ ಶಿಕ್ಷಣ ಪಡೆಯುವುದು ಅವರ ಧರ್ಮ ಮತ್ತು ಹಾಗಾಗಿ ಅವರ ಹಕ್ಕು. ಇದಕ್ಕಾಗಿ ಪ್ರಜಾಸತ್ತಾತ್ಮಕ ಸಾರ್ವಜನಿಕ ಸಮ್ಮತಿಯನ್ನು ಸಂಘಟಿಸಲಾಗದ ಯಾವುದೇ ಸರ್ಕಾರ, ಕನ್ನಡಕ್ಕೆ ತನ್ನ ಬದ್ಧತೆಯನ್ನು ಮತ್ತು ಕನ್ನಡ ಭಾಷಾಭಿವೃದ್ಧಿಗಾಗಿ ಕೋಟ್ಯಾಂತರ ರೂಪಾಯಿಗಳ ಅನುದಾನ ಘೋಷಿಸಿವುದು ದೊಡ್ಡ ಆತ್ಮವಂಚನೆಯಲ್ಲದೆ ಮತ್ತೇನಲ್ಲ. ಹಾಗೇ ಅಂತಹ ಸರ್ಕಾರದಿಂದ ಸನ್ಮಾನಕ್ಕೆ ಸಿದ್ಧರಾಗುತ್ತಿರುವವರ ಕೃತಾರ್ಥತೆ ಕೂಡಾ ಇದಕ್ಕೆ ಹೊರತಲ್ಲ.

ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರಕಿದ್ದರಿಂದಾಗಿ ಕೋಟ್ಯಾಂತರ ರೂಪಾಯಿ ಮೌಲ್ಯದ ಸಂಶೋಧನಾ ಯೋಜನೆಗಳು ಮಂಜೂರಾಗುವುವಂತೆ. ತಮಿಳು ಶಾಸ್ತ್ರೀಯ ಭಾಷಾ ಯೋಜನೆಗಳಲ್ಲಿ ಕೆಲಸ ಮಾಡುತ್ತಿರುವ ಅನುಭವಿಗಳೊಬ್ಬರ ಮಾತನ್ನೇ ನಂಬುವುದಾದರೆ, ಅವರಿಗೆ ಈ ಯೋಜನೆಗಳನ್ನು ನಿರ್ವಹಿಸಬಲ್ಲ ವಿದ್ವಾಂಸರೇ ಸಿಗುತ್ತಿಲ್ಲವಂತೆ. ಇನ್ನು ಇವೊತ್ತು ಕನ್ನಡದಲ್ಲಿ ನಡೆಯುತ್ತಿರುವ ಸಂಶೋಧನೆಗಳ ಗುಣಮಟ್ಟವನ್ನು ನೋಡಿದರೆ, ಈ ಹೊಸ ಯೋಜನೆಗಳಿಂದ ಈ ಮಟ್ಟ ಇನ್ನಷ್ಟು ಕುಸಿದು, ಕನ್ನಡ ಪಾಂಡಿತ್ಯ ಕ್ಷೇತ್ರವೆಂಬುದು ಸಂಶೋಧನೆಯ ಹೆಸರಿನಲ್ಲಿ ಹಣ ಲಪಾಟಯಿಸುವ ದುಷ್ಟರ ಮತ್ತು ಭ್ರಷ್ಟರ ದೊಡ್ಡ ಜಾಲವಾಗಿ ಪರಿವರ್ತಿತವಾದರೆ ಆಶ್ಚರ್ಯವಿಲ್ಲ. ಕನ್ನಡವನ್ನು ಬಳಸುವ ಮತ್ತು ಬೆಳಸುವ ಕೆಲಸಗಳ ಬಗ್ಗೆ ತಲೆ

ಕೆಡಿಸಿಕೊಳ್ಳದೆ, ಅದರ ಕಲ್ಪಿತ ಪ್ರಾಚೀನ ವೈಭವವನ್ನಷ್ಟೇ ಆಚ್ಚರಿಸಲೆಣಿಸುವವರ ಈ ಪ್ರಯತ್ನ ಆತ್ಮಘಾತುಕವೇ ಆಗಿದೆ ಎಂದರೆ ತಪ್ಪಾಗಲಾರದು.

ಒಂದು ಕಡೆ ಈ ವಿಪರ್ಯಾಸವಿದ್ದರೆ, ಇನ್ನೊಂದು ಕಡೆ ಒಂದು ಭಾಷೆ ಮತ್ತು ಆ ಭಾಷೆಯನ್ನಾಡುವ ಜನರ ಹಿತದ ಬಗ್ಗೆ ಮಾತನಾಡುವುದೇ ಸಂಕುಚಿತತೆ ಎನ್ನಿಸಿಕೊಳ್ಳಲಾರಂಭಿಸಿರುವುದು ಇನ್ನೊಂದು ವಿಪರ್ಯಾಸ. ಮಹಾರಾಷ್ಟ್ರ ನವನಿರ್ಮಾಣ ಸೇನೆಯ ರಾಜ್ ಠಾಕ್ರೆಯ ಭಾಷಾಭಿಮಾನ ಪ್ರಕಟಣೆಯ ಮಾರ್ಗಗಳು ಯಾರೂ ಒಪ್ಪಲಾಗದಂತಹವು, ನಿಜ. ಹಾಗಾಗಿಯೇ ಈ ಹಿಂಸಾ ಮಾರ್ಗಗಳಿಗೆ ಬಲಿಯಾದ ಭಾಷಾ ರಾಜ್ಯಗಳ ಜನರೂ ಪ್ರತಿಹಿಂಸೆಗೆ ಇಳಿದಿದ್ದಾರೆ. ಭಾರತ ಒಂದು ರಾಷ್ಟ್ರವಾಗಿ ಭಾರತೀಯರೆನ್ನಿಸಿಕೊಂಡವರು ಯಾವುದೇ ಪ್ರದೇಶದಲ್ಲಿ ಉದ್ಯೋಗ ಮಾಡುವ, ನೆಲಸುವ ಹಕ್ಕನ್ನು ಪಡೆದಿದ್ದಾರೆ ಎಂಬುದೂ ನಿಜ. ಆದರೆ ಈ ಹಕ್ಕು ಸ್ವಾತಂತ್ರ್ಯೋತ್ತರ ಭಾರತದಲ್ಲಿ ಎಷ್ಟು ದುರುಪಯೋಗವಾಗಿದೆ ಎಂದರೆ, ನಮ್ಮ ರಾಷ್ಟ್ರ ನಿರ್ಮಾಪಕರು ಭಾಷಾ ರಾಷ್ಟ್ರೀಯತೆಗಳ ವಾಸ್ತವವನ್ನು ಮನಗಂಡು ರಚಿಸಿದ ಭಾಷಾಧಾರಿತ ರಾಜ್ಯಗಳ ಒಕ್ಕೂಟದ ಪರಿಕಲ್ಪನೆಯೇ ಇದರಿಂದ ಘಾಸಿಗೊಳ್ಳಲಾರಂಭಿಸಿದೆ. ಇದು ಸಮುದಾಯ ವಿಶಿಷ್ಟತೆಯನ್ನು ನಾಶ ಮಾಡುತ್ತಾ, ಭಾರತವೆಂಬುದನ್ನು ರಾಜಕೀಯ ಬಲ ಸಂಘಟಿಸಿಕೊಳ್ಳಬಲ್ಲ ಸಮುದಾಯಗಳ 'ಸಾಮ್ರಾಜ್ಯಶಾಹಿ' ಪ್ರವೃತ್ತಿಗಳ ಆಡೊಂಬಲವನ್ನಾಗಿ ಪರಿವರ್ತಿಸುತ್ತಿದೆ. ಭಾರತ ಒಂದು ರಾಷ್ಟ್ರವಾಗಿ ಉಳಿಯುವುದು ಮತ್ತು ಉಳಿಯಬೇಕಾದದ್ದು, ತನ್ನ ವೈವಿಧ್ಯತೆ ಬಲಗೊಳ್ಳುವ ಏಕತೆಯಲ್ಲಿ; ಏಕತೆಯ ಒತ್ತಡದಲ್ಲಿ ನಲುಗುವ ವೈವಿಧ್ಯತೆಯಲ್ಲಲ್ಲ. ಭಾರತದ ಒಕ್ಕೂಟವನ್ನು ಬಲಪಡಿಸುವುದೆಂದರೆ, ಆ ಒಕ್ಕೂಟ ಯಾವುದರಿಂದ ನಿರ್ಮಿತವಾಗಿದೆಯೋ ಆ ರಾಜ್ಯಗಳ ಆಧಾರಗಳನ್ನು ಬಲಪಡಿಸುವುದು. ಅಂದರೆ ಆಯಾ ಭಾಷಾ ಸಮುದಾಯಗಳ ಸಾಮಾಜಿಕ–ಸಾಂಸ್ಕೃತಿಕ–ರಾಜಕೀಯ ಅಸ್ತಿವಾರಗಳನ್ನು ಬಲಗೊಳಿಸುವುದು. ಆದರೆ ಈಗ ಆಗುತ್ತಿರುವುದಾದರೂ ಏನು?

ಉದಾಹರಣೆಗೆ, ಈ ಮೊದಲು ಕರ್ನಾಟಕದಲ್ಲಿ ಮತ್ತು ಈಗ ಮಹಾರಾಷ್ಟ್ರದಲ್ಲಿ ಗಲಾಟೆಗೆ ಕಾರಣವಾಗಿರುವ ರೈಲ್ವೇ ನೇಮಕಾತಿಗಳ ವಿಷಯವನ್ನೇ ತೆಗೆದುಕೊಳ್ಳಿ. ಈ ನೇಮಕಾತಿಯ ಪ್ರಕ್ರಿಯೆಯನ್ನು ರಾಷ್ಟ್ರದ ವಿವಿಧ ಪ್ರದೇಶಗಳಲ್ಲಿ, ಕೇಂದ್ರಗಳಲ್ಲಿ ನಡೆಸುವ ಉದ್ದೇಶವಾದರೂ ಏನು? ಎಲ್ಲ ಪ್ರದೇಶಗಳ ಜನ ರೈಲ್ವೇ ಎಂಬ ರಾಷ್ಟ್ರೀಯ ವ್ಯವಸ್ಥೆಯ ನೇಮಕಾತಿ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವಂತಾಗಬೇಕೆಂದು ತಾನೆ? ಆದರೆ ಬೆಂಗಳೂರಿನಲ್ಲಿಯೋ, ಮುಂಬೈನಲ್ಲಿಯೋ ನಡೆಯುವ ನೇಮಕಾತಿ ಪ್ರಕ್ರಿಯೆಯಲ್ಲಿ ದೂರದ ಉತ್ತರ ಪ್ರದೇಶ, ಬಿಹಾರ, ಬಂಗಾಳ, ಅಸ್ಸಾಂಗಳ ಜನರೂ ಪಾಲ್ಗೊಳ್ಳಬಹುದೆಂದರೆ, ಇಂತಹ ನೇಮಕಾತಿ ಪ್ರಕ್ರಿಯೆಯ ಹಿಂದಿನ ಈ ರಾಷ್ಟ್ರೀಯ ಉದ್ದೇಶವೇ ವಿಫಲವಾದಂತಲ್ಲವೆ? ಕಳೆದೆರಡು ದಶಕಗಳಿಂದ ರೈಲ್ವೇ ಮಂತ್ರಿಗಳಾಗಿರುವವರ ರಾಜ್ಯವಾದ ಬಿಹಾರದಿಂದಲೇ ಅಭ್ಯರ್ಥಿಗಳು ಪ್ರವಾಹದೋಪಾದಿಯಲ್ಲಿ ರಾಷ್ಟ್ರದ ಬೇರೆ ಬೇರೆ

ಕೇಂದ್ರಗಳಲ್ಲಿ ನಡೆಯುವ ನೇಮಕಾತಿಗಳಿಗೆ ಬರಲಾರಂಭಿಸಿದ್ದಾರೆ ಎಂದರೆ, ಇವರಲ್ಲಿ ಅ-ರಾಷ್ಟ್ರೀಯವಾದದ್ದೇನೋ ನಡೆಯುತ್ತಿದೆ ಎಂದೇ ಅಲ್ಲವೆ? ಒಂದು ಕೇಂದ್ರದಲ್ಲಿ ನೇಮಕಾತಿ ಎಂದರೆ, ಆ ಕೇಂದ್ರದ ನೆರೆಹೊರೆಯ ಜನ-ಅವರು ಯಾವುದೇ ಭಾಷೆಯ ಸಮುದಾಯದವರಾಗಿರಲಿ-ಅದರಲ್ಲಿ ಭಾಗವಹಿಸಿ ಉದ್ಯೋಗ ಪಡೆಯುವ ಅವಕಾಶ ಹೊಂದಿರಬೇಕು ಎಂಬುದು ಅದರ ಆಶಯವಾಗಿರುತ್ತದೆ. ಆದರೆ ಇಂದು ಈ ಆಶಯವನ್ನು ರಾಷ್ಟ್ರೀಯತೆಯ ಹೆಸರಿನಲ್ಲಿ ಭಂಗಗೊಳಿಸಲಾಗುತ್ತಿದೆ. ಇದು ತಲೆಕೆಳಗಾದ ರಾಷ್ಟ್ರೀಯತೆಯಲ್ಲದೆ ಮತ್ತೇನಲ್ಲ.

ಇದನ್ನು ಸಹಜವಾಗಿಯೇ ಇಂದು ಹಲವು ಕಡೆ ಪ್ರಶ್ನಿಸಲಾಗುತ್ತಿದೆ. ಆದರೆ ಇದನ್ನು ಒರಟೊರಟಾಗಿ ಮಾಡುತ್ತಿರುವ ರಾಜ್ ಠಾಕ್ರೆಯನ್ನು ರಾಷ್ಟ್ರ ವಿರೋಧಿ ಎಂದು ಕರೆಯಲಾಗುತ್ತಿದೆ. ಅಷ್ಟೇ ಅಲ್ಲ, ಆತನ ಪ್ರತಿಭಟನೆಯನ್ನು 'ಗೂಂಡಾರಾಜ್' ಎಂದೂ ಇಂಗ್ಲಿಷ್ ಟಿ.ವಿ. ವಾಹಿನಿಗಳು ಕರೆಯುತ್ತಿವೆ. ಆದರೆ ಆಳವಾಗಿ ನೋಡಿದಾಗ, ಈ ಗೂಂಡಾರಾಜ್‌ನ ಮೂಲಕರ್ತೃ ಆತನಲ್ಲ. ಬದಲಿಗೆ, ಭಾರತದ ಭಾಷಾ ಸಮುದಾಯಗಳ ಸಾಂಸ್ಕೃತಿಕ ಅಸ್ಮಿತೆಯನ್ನಷ್ಟೇ ಅಲ್ಲ, ಅವುಗಳ ಸಾಮಾಜಿಕ ಭದ್ರತೆಯನ್ನೂ; ತಮ್ಮ ತಲೆಕೆಳಗಾದ ರಾಷ್ಟ್ರೀಯತೆಯನ್ನು ಅವುಗಳ ಮೇಲೆ ಹೇರಲಾರಂಭಿಸಿ ಆತಂಕಕ್ಕೀಡು ಮಾಡತೊಡಗಿರುವವರೇ ಆಗಿದ್ದಾರೆ ಎಂಬುದು ಗೊತ್ತಾಗುತ್ತದೆ. ಯಾವುದೇ ತೆರನ ಸ್ಥಳೀಯತೆಯ ಅಡೆತಡೆಯಿಲ್ಲದೆ ರಾಷ್ಟ್ರದುದ್ದಗಲಕ್ಕೂ ತಮ್ಮ ವ್ಯಾಪಾರೋದ್ಯಮಗಳ ಜಾಲ ವಿಸ್ತರಿಸಿಕೊಳ್ಳಬಯಸುವ ಎಲ್ಲ ಆಸೆಬುರುಕ ವಣಿಜರೂ, ಅವರ ಗುಲಾಮರಾಗಿರುವ ನಮ್ಮ ರಾಜಕಾರಣಿಗಳೂ ಕಟ್ಟತೊಡಗಿರುವ ಹೊಸ ರೀತಿಯ-ತಲೆಕೆಳಗಾದ-ರಾಷ್ಟ್ರೀಯತೆ ಇದು.

ಈ ಪ್ರವೃತ್ತಿಯ ವಿರುದ್ಧ ಪ್ರತಿಭಟಿಸುವುದೇ ಇಂದು ನಿಜವಾದ ರಾಷ್ಟ್ರೀಯತೆ ಎನ್ನಿಸಿಕೊಳ್ಳಬೇಕು. ಆದರೆ ಇಂತಹ ಪ್ರತಿಭಟನೆಯನ್ನು ನಮ್ಮ ಕರ್ನಾಟಕ ರಕ್ಷಣಾ ವೇದಿಕೆ ಮತ್ತು ಮಹಾರಾಷ್ಟ್ರ ನವನಿರ್ಮಾಣ ಸೇನೆಗಳಂತಹ ಪ್ರಾದೇಶಿಕ ಸಂಘಟನೆಗಳು ಗಲಭೆ ಮತ್ತು ಹಿಂಸೆಯ ಮೂಲಕ ಕೈಗೊಂಡು ಅದರ ವಿಶ್ವಾಸಾರ್ಹತೆಯನ್ನೇ ಹಾಳುಗೆಡಹಿವೆ. ಅವು ಸಾಮೂಹಿಕ ಸತ್ಯಾಗ್ರಹ ಮಾರ್ಗವನ್ನು ತಮ್ಮ ಪ್ರತಿಭಟನೆಯ ಮಾರ್ಗವಾಗಿ ಆಯ್ದುಕೊಳ್ಳುವುದಾದರೆ, ಅವಕ್ಕೆ ಇಡೀ ರಾಜ್ಯದ-ಅವರು ಯಾವುದೇ ಭಾಷೆ ಮಾತನಾಡುವವರಾಗಿರಲಿ-ಜನತೆಯ ಸಹಾನುಭೂತಿ, ಬೆಂಬಲ ದೊರಕುತ್ತದೆ ಮತ್ತು ದೀರ್ಘಕಾಲಿಕ ರಾಜಕೀಯ ಪರಿಣಾಮಗಳಿಗೆ ಕಾರಣವಾಗುತ್ತದೆ. ಆದರೆ ಇದು ಸಾಧ್ಯವಾಗುವುದು ಅಲ್ಪಕಾಲಿಕ ರಾಜಕೀಯ ಲಾಭವನ್ನು ಮೀರಿದ ಉದ್ದೇಶಗಳಿಂದ ಈ ಚಳುವಳಿಗಳ ನಾಯಕತ್ವ ರೂಪುಗೊಂಡಾಗ ಮಾತ್ರ. ಕರವೇ ಮತ್ತು ಮನಸೇಗಳಿಗೆ ಈ ದೀರ್ಘಕಾಲಿಕ ಮತ್ತು ಘನ ಉದ್ದೇಶಗಳಿದ್ದಂತಿಲ್ಲ ಎಂಬುದೇ ಅವುಗಳ ದೊಡ್ಡ ಮತ್ತು ಮುಖ್ಯ ಕೊರತೆಯಾಗಿದೆ.

ಅದೇನೇ ಇರಲಿ, ದಿನೇ ದಿನೇ ಹೆಚ್ಚುತ್ತಿರುವ ಇಂತಹ ಸಾಮಾಜಿಕ ಗಲಭೆ-

ಗೊಂದಲಗಳಿಂದಾಗಿ ನಮ್ಮ ಸೂಕ್ಷ್ಮ ಮನಸ್ಸಿನ ಬುದ್ಧಿಜೀವಿಗಳ ಖಿನ್ನತೆ ಹೆಚ್ಚುತ್ತಾ ಹೋಗುತ್ತದೆಂದು ಕಾಣುತ್ತದೆ. ಈ ಖಿನ್ನತೆಯ ಪರಿಣಾಮವೆಂದರೆ, ನಮ್ಮ ದೃಷ್ಟಿದೂರ ಸಂಕುಚಿತವಾಗುತ್ತಾ ಹೋಗುವುದು! ವಿಕ್ರಾಂತ ಕರ್ನಾಟಕದ ಅಕ್ಟೋಬರ್ ೧೭ರ ಸಂಚಿಕೆಯ 'ಹನಿ ಕಷಾಯ' ಪುಟದಲ್ಲಿ ನಮ್ಮ ಕ್ರಾಂತಿಕಾರಿ ಉಪ ಸಂಪಾದಕರಾದ ಮಲ್ಲನಗೌಡರು ಆಯ್ದು ಪ್ರಕಟಿಸಿರುವ ಜಿ.ರಾಜಶೇಖರರ ಮಾತುಗಳು ಇದಕ್ಕೊಂದು ಉದಾಹರಣೆಯಂತಿದೆ. ಜಿ.ವಿ.ಆನಂದಮೂರ್ತಿಯವರ ಕವನ ಸಂಕಲನವೊಂದಕ್ಕೆ ಅವರು ಬರೆದಿರುವ ಮುನ್ನುಡಿಯಿಂದ ಆಯ್ದ ಈ ಮಾತುಗಳನ್ನು ಮಲ್ಲನಗೌಡರು ಸದ್ಯದ ಕನ್ನಡ ಸಾಹಿತಿಗಳ, ನಿರ್ದಿಷ್ಟವಾಗಿ ಕವಿಗಳ ಸಾಮಾಜಿಕ ಬದ್ಧತೆಯ ದಿವಾಳಿತನವನ್ನು ಎತ್ತಿ ತೋರಿಸಿ ತಮ್ಮ ಸಂತೋಷವನ್ನೋ, ದುಃಖವನ್ನೋ ಪ್ರದರ್ಶಿಸಲು ಪ್ರಕಟಿಸಿದಂತಿದೆ! ನಮ್ಮ ಮಲ್ಲನಗೌಡರಿಗೇನೋ ಸಾಹಿತ್ಯ-ಗೀಹಿತ್ಯವೆಲ್ಲ ಕ್ರಾಂತಿಗೆ ಬೇಕಾದ ಬಂದೂಕು-ಮದ್ದು ಗುಂಡುಗಳೆಂಬ ಕಲ್ಪನೆ ಇರಬಹುದು. ಆದರೆ ನಮ್ಮ ನಡುವಿನ ಬಹುಸೂಕ್ಷ್ಮ ಚಿಂತಕರೆನಿಸಿದ ರಾಜಶೇಖರರಿಗೆ?

ಕನ್ನಡದ ಇಂದಿನ ಬಹಳಷ್ಟು ಕವಿಗಳು ಮರುಕಕ್ಕೆ ಮಾತ್ರ ಅರ್ಹರಿರಬಹುದು. ಅದರೆ ಅದಕ್ಕೆ ಬೆಂಬಲವಾಗಿ ಅವರನ್ನು ಕುರಿತು ರಾಜಶೇಖರರು ಆಡಿರುವ ಮಾತುಗಳೂ ಅಷ್ಟೇ ಮರುಕಕ್ಕೆ ಅರ್ಹವಾಗಿವೆ. ಏಕೆಂದರೆ, ಸಾಹಿತ್ಯ ಯಾರದೇ ನಿರೀಕ್ಷೆಗಳಿಗೆ, ಆದೇಶಗಳಿಗೆ, ನಿರ್ದೇಶನಗಳಿಗೆ ತಕ್ಕಂತೆ ನಿರ್ಮಾಣವಾಗಲಾರದು. ಅದು ಅದರ ತತ್ಕಾಲೀನ ಸಾಮಾಜಿಕ ಸಂದರ್ಭವನ್ನು ಮೀರಿದ ಶಕ್ತಿಗಳಿಂದ ನಿರ್ಮಾಣವಾಗುವ ಸಮಷ್ಟಿಯ ನೆಲೆಯಲ್ಲಿ ಉಕ್ಕುವಂತಹುದು. ಇವೊತ್ತಿನ ಕಾವ್ಯದಲ್ಲಿ ಸಮಕಾಲೀನ ಸಂದರ್ಭದ ಒತ್ತಡಗಳು ಪ್ರತಿಬಿಂಬಿತವಾಗಿಲ್ಲವೆಂದರೆ, ಆ ಒತ್ತಡಗಳು ಕಾವ್ಯಾಭಿವ್ಯಕ್ತಿಗೆ ಸೂಕ್ತವಾದ ಸಮಷ್ಟಿಯನ್ನು ಇನ್ನೂ ನಿರ್ಮಾಣ ಮಾಡಿಲ್ಲವೆಂದೇ ಅರ್ಥ. ಹೀಗೆ ಸಮಷ್ಟಿ ನಿರ್ಮಾಣದ ಭಾಗವಾಗಿ ವ್ಯಕ್ತವಾಗದ ಅದೆಷ್ಟೋ ಕಾವ್ಯಾಭಿವ್ಯಕ್ತಿಯನ್ನು ಕನ್ನಡ ಕಂಡಿದೆ, ನಿಜ. ಆದರೆ ಅದೆಂದೂ ಊರ್ಜಿತವಾಗದ ಕೆಟ್ಟ ಕಾವ್ಯ ಮಾತ್ರವಾಗಿದೆ. ಹಾಗೇ, ಈ ಹಿಂದೆ ಸಂದರ್ಭೋಚಿತವಾಗಿ ಊರ್ಜಿತವಾದಂತೆ ತೋರಿದ ಕಾವ್ಯವೂ ಬದಲಾದ ಇಂದಿನ ಸಾಮಾಜಿಕ ಸಂದರ್ಭದಲ್ಲಿ ಸಂಶಯಾಸ್ಪದವಾಗಿ ತೋರತೊಡಗಿರುವುದನ್ನೂ ರಾಜಶೇಖರರು ಗಮನಿಸಬೇಕು. ಇಂತಹ ಪ್ರವೃತ್ತಿಗಳಿಂದ ಕನ್ನಡ ಕಾವ್ಯ ಪರಂಪರೆಗೆ ಆಗುವ ಆಘಾತ ಕಡಿಮೆ ಪ್ರಮಾಣದ್ದಲ್ಲ. (ಕರಾವಳಿಯ)ಕೋಮು ಹಿಂಸಾಚಾರಗಳಿಂದ ತಲ್ಲಣಗೊಂಡ ಕಾವ್ಯವೇಕೆ ಇಂದು ಬರುತ್ತಿಲ್ಲ ಎಂದು ವ್ಯಗ್ರರಾಗಿ ಕೇಳುತ್ತಿರುವಂತೆ ತೋರುವ ಜಿ.ರಾಜಶೇಖರರ ಮಾತುಗಳಲ್ಲಿ ನನಗೆ ಇಂತಹ ಆಘಾತವನ್ನು ಆಹ್ವಾನಿಸುತ್ತಿರುವ ಸೂಚನೆ ಕಾಣುತ್ತದೆ.

ಇನ್ನು ಪ್ರಕೃತಿಯೊಳಗಿನ ವಿಸ್ಮಯವನ್ನು ಅಭಿವ್ಯಕ್ತಿಸುವ ಕವಿಗಳ ಮೇಲೆ ರಾಜಶೇಖರರು ಹರಿಹಾಯ್ದಿರುವ ರೀತಿಯಂತೂ ಅತ್ಯಂತ ಅಸಾಹಿತ್ಯಕವೂ, ಅಸಾಮಾಜಿಕವೂ ಆಗಿದೆ. ಏಕೆಂದರೆ, ಪ್ರಕೃತಿಯನ್ನು ಕುರಿತ ಮನುಷ್ಯನ ವಿಸ್ಮಯಕ್ಕೆ ಒಂದು ಕೊನೆಯಿದೆ, ಕೊನೆಯಿರಬೇಕು ಎಂದು ಇವರು ಭಾವಿಸಿದಂತಿದೆ. ಅನಂತದ ಭಾವನೆಯ

ಭಾಗವಾಗಿಯೇ ಸದ್ಯದ ಭಾವನೆಯ ತೀವ್ರತೆಯೂ ಸೃಷ್ಟಿಯಾಗುವುದು ಎಂಬುದನ್ನು ಅವರು ಮರೆತಂತಿದೆ. ಈ ಸಂಬಂಧವಾಗಿ, ಈ ಹಿಂದೆ ತುರ್ತು ಪರಿಸ್ಥಿತಿಯ ರಾಜಕೀಯ ನೆಲೆಗಳಿಗೆ ಬಂಧಿತರಾಗಿ ಡಿ.ಆರ್. ನಾಗರಾಜ್ ಚಂಪಾ ಅವರ ಕವನ ಸಂಕಲನವೊಂದಕ್ಕೆ ಬರೆದ ಬೆನ್ನುಡಿಯ ಕೆಲವು ಮಾತುಗಳಿಗೆ ಯಶವಂತ ಚಿತ್ತಾಲರು ಬರೆದ ಪ್ರತಿಕ್ರಿಯೆ ನೆನಪಾಗುತ್ತಿದೆ. ನೆರೂಡಾನಿಂದ ಮೇಲ್ಮೈಯಲ್ಲಿ ಸ್ಫೂರ್ತಿಗೊಂಡಂತೆ ಡಿ.ಆರ್., ಬೀದಿಯಲ್ಲಿ ರಕ್ತ ಚೆಲ್ಲುತ್ತಿರುವಾಗ ಗುಲಾಬಿಯ ಸೌಂದರ್ಯದಲ್ಲಿ ಮಗ್ನರಾಗಿದ್ದಾರೆ ಎಂದು ಕೆಲವು ಕವಿಗಳನ್ನು ಟೀಕಿಸಿದ್ದರು. ಅದಕ್ಕೆ ಚಿತ್ತಾಲರ ಪ್ರತಿಕ್ರಿಯೆ: ಗುಲಾಬಿಯ ಸೌಂದರ್ಯದಲ್ಲಿ ಮಗ್ನವಾಗಬಲ್ಲ ಮನಸ್ಸು ಮಾತ್ರ ಬೀದಿಯಲ್ಲಿ ರಕ್ತ ಕಂಡು ತಲ್ಲಣಿಸಬಲ್ಲುದು. ಕಾವ್ಯದ ಮನಸ್ಸು ಅಖಂಡವಾದದ್ದು. ಜಿ.ರಾಜಶೇಖರ್ ತಮ್ಮದೇ ಆದ ಸಾಮಾಜಿಕ ಅವಸರದಲ್ಲಿ ಅದನ್ನು ಒಡೆಯ ಹೊರಟಂತಿದೆ.

(೫ ಡಿಸೆಂಬರ್, ೨೦೦೮)

■

ರಾಷ್ಟ್ರೀಯ ಒಕ್ಕೂಟ ತತ್ವ v/s ಭೋಳೆ ಭಾರತೀಯತೆ

ಭಾರತ ಎಂಬ ಈ ಒಕ್ಕೂಟ ರಾಷ್ಟ್ರವನ್ನು ಇತ್ತೀಚಿನ ವರ್ಷಗಳಲ್ಲಿ ರಾಜಕೀಯ ಮುತ್ಸದ್ದಿಗಳಿಗಿಂತ ದೊಡ್ಡ ದೊಡ್ಡ ವಾಣಿಜ್ಯ ಹಿತಾಸಕ್ತಿಗಳ ದಲ್ಲಾಳಿಗಳು ಆಳತೊಡಗಿದ ಸಂದರ್ಭ ಉಂಟಾದ ಮೇಲೆ, ಅವರು ತಮ್ಮ ಆಳ್ವಿಕೆಯನ್ನು ಬಲಪಡಿಸಿಕೊಳ್ಳಲು, ಅದಕ್ಕೆ ಅಡ್ಡಿಯಾಗ ತೊಡಗಿದ್ದ ನೆಲಮೂಲ ಸಂಸ್ಕೃತಿಯನ್ನು ಆಧರಿಸಿದ ಒಕ್ಕೂಟ ತತ್ವವನ್ನು ನಿಧಾನವಾಗಿ ನಾಶ ಮಾಡತೊಡಗಿದರು. ಆ ಮೂಲಕ ವಿವಿಧ ರಾಜ್ಯಗಳ ಭಾಷೆ–ಸಂಸ್ಕೃತಿಗಳನ್ನು ಹಿನ್ನೆಲೆಗೆ ಸರಿಸುತ್ತಾ, ಜಾಗತಿಕ ಭವ್ಯ ಭಾರತದ ಕನಸನ್ನು ಬಿತ್ತಿ ಸ್ಥಳೀಯ ಬೇರುಗಳೇ ಇಲ್ಲದ ಭೋಳೆ ಭೋಳೆಯಾದ ಹುಸಿ ಎಂದೂ ಎನ್ನಬಹುದಾದ– ಭಾರತೀಯತೆಯ ಕಲ್ಪನೆಯನ್ನು ಪೋಷಿಸತೊಡಗಿದರು. ಇವರಿಗೆ ಬೆಂಬಲವಾಗಿ ನಿಂತದ್ದು, ಧರ್ಮದ ಹೆಸರಿನಲ್ಲಿ ಏಕರೂಪಿಯಾದ ಅಖಿಲ ಭಾರತ ಸಂಸ್ಕೃತಿಯೊಂದನ್ನು ಆವಿಷ್ಕರಿಸಿಕೊಂಡು ಭಾರತವನ್ನು ಬೌದ್ಧಿಕವಾಗಿ ಆಳುತ್ತಿದ್ದ; ಆದರೆ, ಸ್ವಾತಂತ್ರ್ಯ ಹೋರಾಟ ರೂಪಿಸಿಕೊಟ್ಟ ಹೊಸ ಸಾಮಾಜಿಕ ದರ್ಶನದಿಂದಾಗಿ ಆ ಸವಲತ್ತನ್ನು ಕಳೆದುಕೊಂಡಿದ್ದ ಪುರೋಹಿತಶಾಹಿ.

ಕರ್ನಾಟಕ ವಿಧಾನ ಸಭೆಯಿಂದ ಬಿಜೆಪಿಯು ರಾಜ್ಯಸಭೆಗೆ ಹೇಮಮಾಲಿನಿಯವರನ್ನು ತನ್ನ ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡಿರುವುದನ್ನು ಆಕ್ಷೇಪಿಸಿರುವವರನ್ನು ಆ ಪಕ್ಷದ ರಾಜ್ಯಾಧ್ಯಕ್ಷ ಕೆ.ಎಸ್.ಈಶ್ವರಪ್ಪನವರು 'ಅವರೇನು ಭಾರತೀಯರಲ್ಲವೇ?' ಎಂದು ಪ್ರಶ್ನಿಸಿದ್ದಾರೆ. ಈ ಪ್ರಶ್ನೆ ಅವರ ಪಕ್ಷ ನಂಬಿರುವ ರಾಷ್ಟ್ರೀಯತೆ ಅಥವಾ ಭಾರತೀಯತೆಯ ಹುಸಿತನಕ್ಕೆ ತಕ್ಕುನಾಗಿಯೇ ಇದೆ. ಏಕೆಂದರೆ, ಯಾರೇ ಒಬ್ಬ ಅಥವಾ ಒಬ್ಬಳು ಭಾರತೀಯ ಎನ್ನಿಸಿಕೊಳ್ಳುವುದು, ಆತ ಅಥವಾ ಆಕೆ ಯಾವುದೇ ಒಂದು ರಾಜ್ಯದ ನಿಜವಾದ ನಿವಾಸಿಯಾಗಿ, ಆ ರಾಜ್ಯದ ಭಾಷೆ–ಸಂಸ್ಕೃತಿಗಳ ಅವಿಭಾಜ್ಯ ಅಂಗವಾಗಿರುವ ಮೂಲಕ. ಹೀಗಿರುವಾಗ ಯಾರಾದರೂ ಇನ್ನೊಂದು ರಾಜ್ಯದ ಪ್ರತಿನಿಧಿಯಾಗಲು ತನ್ನ ರಾಜ್ಯದಲ್ಲಿ ಮೈಗೂಡಿಸಿಕೊಂಡ ಭಾರತೀಯತೆಯನ್ನು 'ಬಳಸಿ'ಕೊಳ್ಳುವುದು ಭಾರತೀಯತೆಯ ಕಲ್ಪನೆಗೇ ಮಾಡುವ ಅನ್ಯಾಯ ಮತ್ತು

ಅಪಚಾರವೆನ್ನಿಸಿಕೊಳ್ಳುತ್ತದೆ. ಅಷ್ಟೇ ಅಲ್ಲ, ಭಾರತೀಯತೆ ಎನ್ನುವುದು ಇಂತಹ ಸಂದರ್ಭಗಳಲ್ಲಿ ಭಾಷೆ-ಸಂಸ್ಕೃತಿಗಳ ಆಧಾರ ಕಳಚಿಕೊಂಡು ರಾಜಕೀಯ ಸಮಯಸಾಧಕತನದ ಸಾಧನ ಮಾತ್ರವಾಗುತ್ತದೆ. ಹಾಗೆಂದೇ, ಮಾಸ್ತಿ, ಕುವೆಂಪು ರಂತಹವರು, ನಿಜವಾದ ಕನ್ನಡಿಗನಾಗುವ ಮೂಲಕವೇ ನಿಜವಾದ ಭಾರತೀಯನೂ ಆಗಲು ಸಾಧ್ಯ ಎಂದು ಹೇಳುತ್ತಿದ್ದುದು. ಅಂದರೆ ಕರ್ನಾಟಕದಲ್ಲಿ ಭಾರತೀಯತೆ ಎಂದರೆ ಕನ್ನಡತನವೇ-ಅಥವಾ ಕರ್ನಾಟಕತ್ವವೇ-ಆಗಿದೆ. ಇಲ್ಲಿ ಕನ್ನಡತನವಿಲ್ಲದೆ ಭಾರತೀಯತೆ ಎಂಬುದು ದೊಡ್ಡ ಮೋಸ ಮಾತ್ರ.

ಭಾರತವೆಂಬುದು ಒಂದು ರಾಷ್ಟ್ರವಾಗಿರುವುದು ಹಲವು ಭಾಷೆ-ಸಂಸ್ಕೃತಿಗಳನ್ನು ಪ್ರತಿನಿಧಿಸುವ ರಾಜ್ಯಗಳ ಒಕ್ಕೂಟವಾಗಿ. ಈ ಪ್ರತಿ ರಾಜ್ಯವೂ ಸ್ವಾತಂತ್ರ್ಯಕ್ಕೆ ಮುನ್ನ ಸಾವಿರಾರು ವರ್ಷಗಳಿಂದ ತಮ್ಮದೇ ಭಾಷೆ-ಸಂಸ್ಕೃತಿಗಳೊಂದಿಗೆ ಸ್ವತಂತ್ರ ರಾಷ್ಟ್ರಗಳಂತೆಯೇ ಇದ್ದವುಗಳು. ಇವನ್ನೆಲ್ಲ ಸ್ವಾತಂತ್ರ್ಯ ಹೋರಾಟದಲ್ಲಿ ಮೂಡಿದ ಹೊಸ ರಾಜಕೀಯ ದರ್ಶನದ ಹಿನ್ನೆಲೆಯಲ್ಲಿ ಒಂದು ಸಾಮಾನ್ಯ ಸಂವಿಧಾನದ ಮೂಲಕ ಒಗ್ಗೂಡಿಸುವಾಗ ನಮ್ಮ ಸಂವಿಧಾನ ನಿರ್ಮಾತೃಗಳು ಹೊಸ ರಾಷ್ಟ್ರದ ರಾಜಕೀಯ ಸ್ಥಿರತೆಯನ್ನು ಗಮನದಲ್ಲಿಟ್ಟುಕೊಂಡು ಕೇಂದ್ರ ಸಂಸತ್ತಿನಲ್ಲಿ ಎರಡು ಸದನಗಳು ಇರುವಂತೆ ನೋಡಿಕೊಂಡರು. ಒಂದು ಜನತೆ ನೇರವಾಗಿ ಆಯ್ಕೆ ಮಾಡುವ ಸದಸ್ಯರಿಂದ ರಚಿತವಾದ ಲೋಕಸಭೆ. ಇನ್ನೊಂದು ರಾಜ್ಯಗಳ ವಿಶಿಷ್ಟ ಹಿತಗಳನ್ನು ಕಾಪಾಡಲು, ಆಯಾ ರಾಜ್ಯಗಳ ಶಾಸಕರು ಆಯ್ಕೆ ಮಾಡುವ ಸದಸ್ಯರಿಂದ ರಚಿತವಾಗುವ ರಾಜ್ಯಗಳ ಸಭೆ- ರಾಜ್ಯಸಭೆ. ಹಾಗಾಗಿಯೇ ಸಂವಿಧಾನ ಕರ್ತೃಗಳು, ರಾಜ್ಯಸಭೆಗೆ ಆಯ್ಕೆಯಾಗುವವರು, ಅವರು ಯಾವ ರಾಜ್ಯದಿಂದ ಆಯ್ಕೆಯಾಗುವರೋ ಆ ರಾಜ್ಯದ ನಿವಾಸಿಗಳೇ ಆಗಿರಬೇಕೆಂದು ಕಾನೂನು ಮಾಡಿದ್ದರು. ಈ ಅರ್ಥದಲ್ಲಿ ನಮ್ಮದು ಮೂಲತಃ ಒಕ್ಕೂಟ ರಾಷ್ಟ್ರ.

ಆದರೆ ಭಾರತ ಎಂಬ ಈ ಒಕ್ಕೂಟ ರಾಷ್ಟ್ರವನ್ನು ಇತ್ತೀಚಿನ ವರ್ಷಗಳಲ್ಲಿ ರಾಜಕೀಯ ಮುತ್ಸದ್ದಿಗಳಿಗಿಂತ ದೊಡ್ಡ ದೊಡ್ಡ ವಾಣಿಜ್ಯ ಹಿತಾಸಕ್ತಿಗಳ ದಲ್ಲಾಳಿಗಳು ಆಳತೊಡಗಿದ ಸಂದರ್ಭ ಉಂಟಾದ ಮೇಲೆ, ಅವರು ತಮ್ಮ ಆಳ್ವಿಕೆಯನ್ನು ಬಲಪಡಿಸಿಕೊಳ್ಳಲು, ಅದಕ್ಕೆ ಅಡ್ಡಿಯಾಗತೊಡಗಿದ್ದ ನೆಲಮೂಲ ಸಂಸ್ಕೃತಿಯನ್ನು ಆಧರಿಸಿದ ಒಕ್ಕೂಟ ತತ್ವವನ್ನು ನಿಧಾನವಾಗಿ ನಾಶ ಮಾಡತೊಡಗಿದರು. ಆ ಮೂಲಕ ವಿವಿಧ ರಾಜ್ಯಗಳ ಭಾಷೆ-ಸಂಸ್ಕೃತಿಗಳನ್ನು ಹಿನ್ನೆಲೆಗೆ ಸರಿಸುತ್ತಾ, ಜಾಗತಿಕ ಭವ್ಯ ಭಾರತದ ಕನಸನ್ನು ಬಿತ್ತಿ ಸ್ಥಳೀಯ ಬೇರುಗಳೇ ಇಲ್ಲದ ಭೋಳೆ ಭೋಳೆಯಾದ ಹುಸಿ ಎಂದೂ ಎನ್ನಬಹುದಾದ-ಭಾರತೀಯತೆಯ ಕಲ್ಪನೆಯನ್ನು ಪೋಷಿಸತೊಡಗಿದರು. ಇವರಿಗೆ ಬೆಂಬಲವಾಗಿ ನಿಂತದ್ದು, ಧರ್ಮದ ಹೆಸರಿನಲ್ಲಿ ಏಕರೂಪಿಯಾದ ಅಖಿಲ ಭಾರತ ಸಂಸ್ಕೃತಿಯೊಂದನ್ನು ಆವಿಷ್ಕರಿಸಿಕೊಂಡು ಭಾರತವನ್ನು ಬೌದ್ಧಿಕವಾಗಿ ಆಳುತ್ತಿದ್ದ; ಆದರೆ, ಸ್ವಾತಂತ್ರ್ಯ ಹೋರಾಟ ರೂಪಿಸಿಕೊಟ್ಟ ಹೊಸ ಸಾಮಾಜಿಕ ದರ್ಶನದಿಂದಾಗಿ ಆ ಸವಲತ್ತನ್ನು ಕಳೆದುಕೊಂಡಿದ್ದ ಪುರೋಹಿತಶಾಹಿ. ಈ ಇಡೀ ಪ್ರಕ್ರಿಯೆಗೆ ಮೊದಲಿಂದ

ಕೊನೆಯವರೆಗೆ ಒಂದು ರಾಜಕೀಯ ಸೈದ್ಧಾಂತಿಕ ಸ್ವರೂಪ ನೀಡಿ, ತನ್ನ ಅದ್ಭುತ ಸಂಘಟನಾ ಸಾಮರ್ಥ್ಯದ ಮೂಲಕ ಜನರ ಮಧ್ಯೆ ಅಧಿಕೃತ ಮಾನ್ಯತೆಯನ್ನೂ ಒದಗಿಸಿಕೊಟ್ಟ ಪಕ್ಷವೆಂದರೆ ಭಾರತೀಯ ಜನತಾ ಪಕ್ಷ. ಹಾಗಾಗಿಯೇ ಈ ಪಕ್ಷದ ನೇತೃತ್ವದ ಎನ್.ಡಿ.ಎ. ಸರ್ಕಾರದ ಅವಧಿಯಲ್ಲಿಯೇ, ಒಂದು ರಾಜ್ಯದಿಂದ ರಾಜ್ಯಸಭೆಗೆ ಆಯ್ಕೆಯಾಗಲು ಅಭ್ಯರ್ಥಿ ಆ ರಾಜ್ಯದ ನಿವಾಸಿಯಾಗಿರಬೇಕು ಎಂಬ ಕಾನೂನನ್ನೇ ಸಂವಿಧಾನ ತಿದ್ದುಪಡಿಯೊಂದರ ಮೂಲಕ ರದ್ದು ಮಾಡಲಾಗಿದ್ದು. ಆ ಮೂಲಕ ರಾಜ್ಯಸಭೆಯ ಮೂಲ ಉದ್ದೇಶವನ್ನೇ ಭಂಗಗೊಳಿಸಿದ್ದು.

ಇದಕ್ಕಾಗಿ ಬಿಜೆಪಿಯೊಂದನ್ನೇ ದೂಷಿಸಿ ಫಲವಿಲ್ಲ. ಅದು ಸೈದ್ಧಾಂತಿಕವಾಗಿ ಈ ಭಂಗವನ್ನು ಎತ್ತಿ ಹಿಡಿದು ತನ್ನ ರಾಜಕೀಯ ಉದ್ದೇಶವನ್ನು ಈಡೇರಿಸಿಕೊಂಡಿದೆ ಅಷ್ಟೇ. ಮೊದಲೇ ಹೇಳಿದ ಹಾಗೆ, ರಾಜಕಾರಣವೆಂಬುದನ್ನು ಅಧಿಕಾರ ಮತ್ತು ಹಣದ ಜೂಜಿನ ಕಣವನ್ನಾಗಿ ಪರಿವರ್ತಿಸುವಲ್ಲಿ ಭಾಗಿಯಾಗಿದ್ದ ಎಲ್ಲ ಪಕ್ಷಗಳೂ ಈ ಪ್ರಕ್ರಿಯೆಗೆ ತಂತಮ್ಮ ಕೊಡುಗೆ ಸಲ್ಲಿಸಿವೆ. ನಮ್ಮ ರಾಮಕೃಷ್ಣ ಹೆಗ್ಗಡೆ, ಬೊಮ್ಮಾಯಿ, ದೇವೇಗೌಡ ಎಲ್ಲರೂ ಇದರಲ್ಲಿ ಪಾಲುದಾರರು. ರಾಮಕೃಷ್ಣ ಹೆಗ್ಗಡೆ ಮುಖ್ಯಮಂತ್ರಿಯಾಗಿ ತಮ್ಮ ಗೆಣೆಕಾರ ರಾಂಜೇಠ್ಮಲಾನಿ ಅವರನ್ನು ಮತ್ತು ದೇವೇಗೌಡರು ತಮಿಳ್ನಾಡಿನ ರೇಸ್ ಕುದುರೆಯ ಮಾಲೀಕ ಎಂ.ಎ.ಎಂ. ರಾಮಸ್ವಾಮಯನ್ನು ಕರ್ನಾಟಕದಿಂದ ರಾಜ್ಯಸಭೆಗೆ ಕಳಿಸಿದರೆ, ಎಸ್.ಆರ್. ಬೊಮ್ಮಾಯಿವರು ಬಜುಪಟ್ನಾಯರ್‌ರ ಕೃಪಾ ಕಟಾಕ್ಷದಿಂದಾಗಿ ಒರಿಸ್ಸದಿಂದ ರಾಜ್ಯಸಭೆ ಪ್ರವೇಶಿಸಿದರು. ಇದೆಲ್ಲದಕ್ಕೆ ಕಿರೀಟವಿಟ್ಟಂತಹ ಸಂಗತಿ ಎಂದರೆ, ಪಂಜಾಬಿನ ನಿವಾಸಿಯಾದ ಮನಮೋಹನ ಸಿಂಗರು ಎರಡು ಬಾರಿ ಈ ರಾಷ್ಟ್ರದ ಪ್ರಧಾನ ಮಂತ್ರಿಯಾಗಿರುವುದೂ ಜನರಿಂದ ನೇರ ಆಯ್ಕೆಯ ಮೂಲಕ ಅಲ್ಲ; ತಾವು ಗೌಹಾತಿ ನಗರದ ನಿವಾಸಿಯೆಂದು (ಅಲ್ಲೊಂದು ಮನೆ ಪಡೆದು, ಅದರ ವಿಳಾಸದೊಂದಿಗೆ) ಅಫಿಡವಿಟ್ ಸಲ್ಲಿಸಿ ಅಸ್ಸಾಂ ರಾಜ್ಯದಿಂದ ರಾಜ್ಯಸಭೆಗೆ ಆಯ್ಕೆಯಾಗುವ ಮೂಲಕ!

ದುಃಖದ ಸಂಗತಿಯೆಂದರೆ, ಇದನ್ನು ಪ್ರಶ್ನಿಸಿದ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯ ಮನಮೋಹನ ಸಿಂಗ್ ಗೌಹಾತಿಯ ನಿವಾಸಿಯಲ್ಲ ಎಂದು ಸಾಬೀತು ಮಾಡುವಲ್ಲಿ ಅರ್ಜಿದಾರರು ವಿಫಲರಾಗಿದ್ದಾರೆಂದು ಘೋಷಿಸಿ, ಮನಮೋಹನ ಸಿಂಗರ ಆಯ್ಕೆಯನ್ನು ಎತ್ತಿ ಹಿಡಿಯಿತು! ಅಷ್ಟೇ ಅಲ್ಲ, ಅದು ಈ ತಕರಾರೇ ಬೇಡವೆಂದು ಮುಂದೆ ಎನ್.ಡಿ.ಎ. ಸರ್ಕಾರ ಈ ಸಂಬಂಧ ತಂದ ಸಂವಿಧಾನ ತಿದ್ದುಪಡಿಯನ್ನು ಹಿರಿಯ ಪತ್ರಕರ್ತ ಕುಲದೀಪ್ ನಯ್ಯಾರ್ ಪ್ರಶ್ನಿಸಿದಾಗ, ಅವರ ಅರ್ಜಿಯನ್ನು 'ಅಪ್ರಸ್ತುತ' ಎಂದು ತಳ್ಳಿ ಹಾಕಿತು! ಇದನ್ನು ಪೂರ್ಣ ಪೀಠದ ಮುಂದೆ ಪ್ರಶ್ನಿಸುವ ಅವಕಾಶವಿದೆಯಾದರೂ, ಸದ್ಯಕ್ಕೆ ಅದು ಯಾರಿಗೂ ಬೇಡದ ವಿಷಯವಾಗಿದೆ. ಏಕೆಂದರೆ, ನಮ್ಮ ಸಂವಿಧಾನ ನಿರ್ಮಾತೃಗಳಿಗೆ ಬಹು ಮುಖ್ಯವೆನಿಸಿದ್ದ ಒಕ್ಕೂಟ ತತ್ವವು ಇಂದಿನ ಜಾಗತೀಕರಣ ಸೃಷ್ಟಿಸಿರುವ ವಿಕ್ಷಿಪ್ತ ರಾಜಕೀಯ ಪರಿಪ್ರೇಕ್ಷದಲ್ಲಿ, ನ್ಯಾಯಾಂಗವೂ

ಸೇರಿದಂತೆ ಯಾರಿಗೂ ಮುಖ್ಯವೆನಿಸದ ಸಂಗತಿಯಾಗಿದೆ. ಹಾಗೆ ನೋಡಿದರೆ, ಭಾರತ ಸಂವಿಧಾನಾತ್ಮಕವಾಗಿ ಏಕಾತ್ಮಕ ರಾಷ್ಟ್ರವೇ ಹೊರತು, ಒಕ್ಕೂಟ ರಾಷ್ಟ್ರವಲ್ಲ ಎಂದು ಸರ್ವೋಚ್ಚ ನ್ಯಾಯಾಲಯದಲ್ಲಿ ಬಹು ತಾಂತ್ರಿಕ ಪರಿಣಿತಿಯೊಂದಿಗೆ ವಾದಿಸಿ ಗೆಲ್ಲಬಲ್ಲ ಸಂವಿಧಾನ ಪಂಡಿತರ ದಂಡೇ ನಮ್ಮ ನಡುವೆ ಇದೆ. ಅವರಿಗೆ ಬಹು ದೊಡ್ಡ ಮೊತ್ತದ ಶುಲ್ಕ ನೀಡಬೇಕು ಅಷ್ಟೆ! ಅಂತಹ ಶುಲ್ಕ ನೀಡಬಲ್ಲವರೇ ಇಂದು ಎಲ್ಲೆಲ್ಲೂ ಆಳುತ್ತಿರುವವರೂ ಆಗಿರುವುದರಿಂದ, ಅವರ ಲಾಭಕ್ಕಾಗಿ ರಾಷ್ಟ್ರ ದಿನೇ ದಿನೇ ಹೆಚ್ಚೆಚ್ಚು ಏಕಾತ್ಮಕ ಸ್ವರೂಪ ಪಡೆಯುತ್ತಾ, ಬರೀ ಭೋಳೆಯಾದ ಭಾರತೀಯತೆ ಎಲ್ಲಡೆ ಚಾಲ್ತಿಗೆ ಬರುತ್ತಿದೆ.

ಆದುದರಿಂದ ಹೇಮಮಾಲಿನಿಯವರನ್ನು ನಮ್ಮ ರಾಜ್ಯದಿಂದ ರಾಜ್ಯಸಭೆಯ ಅಭ್ಯರ್ಥಿಯಾಗಿ ಆಯ್ಕೆ ಮಾಡಿದುದಕ್ಕೆ ಬಿಜೆಪಿಯನ್ನು ಹಂಗಿಸಿ ಪ್ರಯೋಜನವಿಲ್ಲ. ಹಾಗೆ ಹಂಗಿಸಲೇ ಬೇಕಿದ್ದರೆ, ಈ ಬಣ್ಣದ ಬೊಂಬೆಯನ್ನು ರಾಜ್ಯಸಭೆಗೆ ಕಳಿಸಿ ಏನು ಮತ್ತು ಎಷ್ಟು ಗಳಿಸಬೇಕೆಂದಿದ್ದೀರಿ ಎಂದು ಅದರ ಶಾಸಕರನ್ನು ಕೇಳಬಹುದಷ್ಟೆ!

(ಏಪ್ರಿಲ್, ೨೦೧೧)

■

ನನ್ನ ಆ 'ಸ್ಕೂಲ್ ಮಾಸ್ಟರ್'!

ಎಲ್ಲಿಂದ ಎಲ್ಲಿಗೆ ನಾವು ಬಂದಿದ್ದೇವೆ, ಎಷ್ಟು ಬದಲಾಗಿದ್ದೇವೆ! ಆ ಚಿತ್ರದ ಸ್ಕೂಲ್ ಮಾಸ್ಟರ್ ರಂಗಣ್ಣ ನಮ್ಮ ತಂದೆಯೇ ಅಲ್ಲವೆ? ಹೊರ ರೂಪದಲ್ಲೂ–ಅದೇ ಪೇಟ, ಕೋಟು, ಕಚ್ಚೆ ಪಂಚೆ–ಮತ್ತು ಒಳರೂಪದಲ್ಲೂ–ಕೆಲಸದಲ್ಲಿನ ಅದೇ ಶ್ರದ್ಧೆ, ಕಟ್ಟುನಿಟ್ಟು ಮತ್ತು ಕುಟುಂಬದ ಬಗ್ಗೆ ಬದ್ಧತೆ–ಆ ಸಿನಿಮಾದ ರಂಗಣ್ಣನೇ ಆಗಿದ್ದ ಅವರ ಸರಳ ಅಚ್ಚುಕಟ್ಟು ಮತ್ತು ನಿಷ್ಠುರ ಆದರ್ಶಗಳ ಮೇಲೇ ನಮ್ಮ ಬದುಕನ್ನು ಕಟ್ಟಿಕೊಂಡಿದ್ದು ಅಲ್ಲವೆ? ಇದು ನಮ್ಮದೇ–ನಮ್ಮಂತಹ ಬಹು ಜನರ–ಹಾಡು ಪಾಡಿನ ಕಥೆಯೇ ಅಲ್ಲವೆ? ೧೯೫೮ರಲ್ಲಿ ನನ್ನಣ್ಣನನ್ನು ಬೆಂಗಳೂರಿನ ಕಾಲೇಜೊಂದರಲ್ಲಿ ಪಿಯುಸಿಗೆ ಸೇರಿಸಿ ಈ ಚಿತ್ರವನ್ನು ನೋಡಿ ಬಂದಿದ್ದ ನಮ್ಮ ತಂದೆಯ ಆ ಉತ್ಸಾಹ ನನಗಿನ್ನೂ ಕಣ್ಣಿಗೆ ಕಟ್ಟಿದಂತಿವೆ. ಅವರು ಅಡಿಗೆ ಮನೆಯಲ್ಲಿ ಕೂತು ಚಿತ್ರದ ಕಥೆಯನ್ನು ನಮ್ಮ ತಾಯಿಗೆ ಬಹು ಉಮೇದಿನಿಂದ ಹೇಳುತ್ತಿದ್ದರು. ಜೊತೆಗೆ ಎರಡು ಎಚ್ಚರಿಕೆಗಳನ್ನೂ ಹೇಳಿದ್ದು ನೆನಪಿದೆ. ಒಂದು: ಪಟ್ಟಣಕ್ಕೆ ಓದಲು ಹೋದ ಮಕ್ಕಳ ಬಗ್ಗೆ ಸದಾ ಜಾಗೃತರಾಗಿರಬೇಕು. ಎರಡು: ಹೆಂಗಸರೂ ಅಕ್ಷರ ಕಲಿಯಬೇಕು.

ಗೆಳೆಯ ಕೆ.ಪುಟ್ಟಸ್ವಾಮಿಯವರು 'ಕನ್ನಡ ಚಿತ್ರರಂಗ–೭೫' ಮಾಲಿಕೆಯಲ್ಲಿ ಬರೆಯುತ್ತಿರುವ ಲೇಖನಗಳನ್ನು ಓದುತ್ತಿದ್ದಂತೆ, ನನ್ನ ಬಾಲ್ಯದ ದಟ್ಟ ನೆನಪುಗಳು ನಿಧಾನವಾಗಿ ಬಿಚ್ಚಿಕೊಳ್ಳುತ್ತಿವೆ.

ನನ್ನ ಬಾಲ್ಯದ ಎರಡು ವಿಶೇಷ ಆಕರ್ಷಣೆಗಳೆಂದರೆ ಶಾಲಾ ಪರೀಕ್ಷೆಗಳು ಮತ್ತು ಕನ್ನಡ ಚಲನ ಚಿತ್ರಗಳು! ಏಕೋ ಏನೋ, ಪರೀಕ್ಷೆಗಳು ಎಂದರೆ ನನ್ನೆಲ್ಲ ಸ್ನೇಹಿತರು ಹೆದರಿದಂತೆ ತೋರುತ್ತಿದ್ದರೆ, ನಾನು ಅವುಗಳನ್ನು–ಆಗ ವರ್ಷಕ್ಕೆರಡೇ ಪರೀಕ್ಷೆಗಳು: ಮಧ್ಯವಾರ್ಷಿಕ ಚಿಕ್ಕ ಪರೀಕ್ಷೆ ಮತ್ತು ವರ್ಷಾಂತ್ಯದ ದೊಡ್ಡ ಪರೀಕ್ಷೆ–ಆಕರ್ಷಕ ಸವಾಲುಗಳಂತೆ ಎದುರು ನೋಡುತ್ತಿದ್ದೆ! ಸಂಕ್ರಾಂತಿ ಹಬ್ಬಕ್ಕೆ ರೈತರು ತಮ್ಮ ದನಕರುಗಳನ್ನು ಸಿಂಗರಿಸುವಂತೆ, ನಾನು ವಾರದ ಮೊದಲೇ ನನ್ನ ಪರೀಕ್ಷೆ ರಟ್ಟನ್ನು ಬಣ್ಣದ ಕಾಗದದ

ಚೂರುಗಳಿಂದ ಮತ್ತು ನನ್ನದೇ ಕೈಯ್ಯಿನ ಚಿತ್ತಾರಗಳಿಂದ ಸಿಂಗರಿಸುತ್ತಿದ್ದೆ. ನನ್ನ ತಂದೆ ಆಗ ನಮಗೆ ಹಾಗೂ ಮನೆಗೆ ಬರುತ್ತಿದ್ದ ನೆಂಟರಿಷ್ಟರ ಮತ್ತು ಸಹೋದ್ಯೋಗಿಗಳ ಮಕ್ಕಳಿಗೆ ವಿದ್ಯೆಯೊಂದೇ ಬಡತನಕ್ಕೆ ಉತ್ತರ ಎಂದು ಪದೇ ಪದೇ ಹೇಳುತ್ತಿದ್ದುದು, ನಾನು ವಿದ್ಯೆಯನ್ನು–ಪರೀಕ್ಷೆಗಳ ರೂಪದಲ್ಲಿಯೇ ಆದರೂ–ಸವಾಲಾಗಿ ಸ್ವೀಕರಿಸಲು ಪ್ರಚೋದಿಸಿತ್ತೆಂದು ಕಾಣುತ್ತದೆ. ಅವರನ್ನು ವಿದ್ಯೆಯೆಡೆಗೆ ಪ್ರಚೋದಿಸಿದ್ದುದು, ತಮ್ಮ ತಾರುಣ್ಯದಲ್ಲಿ ಕೇಳಿದ್ದ ಗಾಂಧಿ ಭಾಷಣವಂತೆ–ವಿಶೇಷವಾಗಿ ಹೆಣ್ಣುಮಕ್ಕಳ ವಿದ್ಯಾಭ್ಯಾಸದ ಮಹತ್ವದ ಬಗ್ಗೆ. ಅದನ್ನವರು ತಮಗೂ ಅನ್ವಯಿಸಿಕೊಂಡು ತಮ್ಮ ತಂದೆಯ ವಿರುದ್ಧ ಬಂಡೆದ್ದು, ಕುಲ ಕಸಬು ಬಿಟ್ಟು ಕೂಲಿ ನಾಲಿಯ ಮೂಲಕ ನಾಲ್ಕಕ್ಷರ ಕಲಿಯುವ ಸಾಹಸ ಮಾಡಿ, ಪ್ರಾಥಮಿಕ ಶಾಲಾ ಮಾಸ್ತರಾಗಿದ್ದರು.

ಅದಂತಿರಲಿ, ನನ್ನ ಶಾಲಾ ವಿದ್ಯಾಭ್ಯಾಸದುದ್ದಕ್ಕೂ ಎಲ್ಲ ಪರೀಕ್ಷೆಗಳಲ್ಲಿ ತರಗತಿಗೆ ಮೊದಲಿಗನಾಗಿ ತೇರ್ಗಡೆ ಹೊಂದುತ್ತಿದ್ದುದು, ನಾನು ಈ ಸವಾಲನ್ನು ಯಶಸ್ವಿಯಾಗಿ ಎದುರಿಸುತ್ತಿದ್ದೆ ಎಂಬುದನ್ನು ಸೂಚಿಸುವಂತಿತ್ತು. ಇದು ನಮ್ಮ ತಂದೆಗೆ ಅಪಾರ ತೃಪ್ತಿಯನ್ನು ತರುತ್ತಿತ್ತಲ್ಲದೆ, ನನ್ನ ಇನ್ನೊಂದು ಆಕರ್ಷಣೆಯಾಗಿದ್ದ ಸಿನಿಮಾ ವ್ಯಾಮೋಹದ ಬಗೆಗೆ ಅವರು ಮೃದುವಾಗಿರಲೂ ಕಾರಣವಾಗಿತ್ತು. ನಾಟಕದ ಮಾಸ್ತರೂ ಆಗಿದ್ದ ನಮ್ಮ ತಂದೆ ಸ್ವತಃ ಸಿನಿಮಾ ಪ್ರಿಯರೇ ಆಗಿದ್ದರೂ, ಹಣಕಾಸಿನ ಮುಗ್ಗಟ್ಟಿನ ಕಾರಣ ಅವರು ಎಲ್ಲ ಸಿನಿಮಾಗಳನ್ನೇನೂ ನೋಡುತ್ತಿರಲಿಲ್ಲ. ಏಕೆಂದರೆ ಅವರು ಹೊರಟರೆ, ಮನೆಯವರೆಲ್ಲರೂ ಹೊರಡುತ್ತಿದ್ದರಲ್ಲ! ನನಗಾದರೋ ಬಂದ ಎಲ್ಲ ಕನ್ನಡ ಸಿನೆಮಾಗಳನ್ನು ನೋಡುವ ಆಸೆ, ಆತುರ. ಬೆಂಗಳೂರಿನಲ್ಲಿ ಓದುತ್ತಿದ್ದ ನಮ್ಮಣ್ಣ ಊರಿಗೆ ಬಂದಾಗಲೆಲ್ಲ ಶಿಫಾರ್ಸು ಮಾಡುತ್ತಿದ್ದ ಸಿನೆಮಾಗಳು ಬಂದರಂತೂ ನನಗೆ ಮೊದಲ ದಿನವೇ ನೋಡುವ ಕಾತುರ. ನಮ್ಮ ತಂದೆ ಆದಷ್ಟೂ ನನ್ನ ಆಸೆ–ಆತುರ–ಕಾತುರಗಳನ್ನು ಈಡೇರಿಸುತ್ತಿದ್ದರು.

ಅತ್ತ ಹಳ್ಳಿಯೂ ಅಲ್ಲದ. ಇತ್ತ ಪಟ್ಟಣವೂ ಅಲ್ಲದ ತ್ಯಾಮಗೊಂಡ್ಲು ಎಂಬ ಊರಿನ ಸಂತೆಮಾಳದ ಪಕ್ಕದ ಬಯಲಿನಲ್ಲಿ ವರ್ಷದ ಆರು ತಿಂಗಳು ಅಥವಾ ಅದಕ್ಕೂ ಹೆಚ್ಚು ಕಾಲ ಬೀಡು ಬಿಟ್ಟಿರುತ್ತಿದ್ದ 'ಮಾರುತಿ ಟೂರಿಂಗ್ ಟಾಕೀಸ್'ನಲ್ಲಿ ನಾನು ಅದೆಷ್ಟು ಚಿತ್ರಗಳನ್ನು ನೋಡಿ ಸಂತೋಷ–ಸಂಭ್ರಮ ಪಟ್ಟಿದ್ದೇನೋ! ಈ ವಾರ ಯಾವ ಸಿನೆಮಾ ಎಂದು ತಿಳಿಯುವ ಕುತೂಹಲದಿಂದ ಹೊಸ ಸಿನಿಮಾ ಡಬ್ಬ ಬರುವ ನಮ್ಮೂರಿನ ಕೊನೆಯ ಷಟಲ್ ಬಸ್ಸನ್ನು ಕಾಯುತ್ತಾ, ಮನೆಗೆ ಮಲಗಲು ತಡವಾಗಿ ಬಂದು ನಮ್ಮ ತಂದೆಯಿಂದ ಅದೆಷ್ಟು ಬಾರಿ ಎಷ್ಟು ಏಟು ತಿಂದಿದ್ದೇನೋ ಲೆಕ್ಕವೇ ಇಲ್ಲ! ಆದರೆ ಅದನ್ನು ಆಗಲೇ ಮರೆತು, ಮತ್ತೆ ಮಾರನೆಯ ಬೆಳ್ಳಂ–ಬೆಳಿಗ್ಗೆ ಹೊಸ ಸಿನೆಮಾದ ಪೋಸ್ಟರ್ ನೋಡಲು ಊರಿನ ಸರ್ಕಲ್ ಬಳಿ ಓಡುತ್ತಿದ್ದೆ. ಅಲ್ಲಿ ಟಾಕೀಸ್ ಕೆಲಸಕ್ಕೆ ಸಹಾಯಕರಾಗಿ ಸೇರಿರುತ್ತಿದ್ದ ಹೊಲೇರ ವೆಂಕಟ ಮತ್ತು ಮಾದಿಗರ ಅಂಜನಿ ಎಂಬ ನನ್ನ ಗೆಳೆಯರು ದೊಡ್ಡ ಪೋಸ್ಟರಿನ ನಾಲ್ಕು ಭಾಗಗಳನ್ನು, ಈಗಲೂ ತನ್ನ ಒಗರು ವಾಸನೆಯ ನೆನಪಿನೊಂದಿಗೆ ನನ್ನ ಮೂಗರಳಿಸುವ ಬಿಸಿ ಬಿಸಿ ಪೇಸ್ಟ್‌ನೊಂದಿಗೆ

ಬಿದಿರಿನ ತಡಿಕೆಯಿಂದ ಮಾಡಿದ ವಿಶಾಲ ಬೋರ್ಡಿನ ಮೇಲೆ ತಮ್ಮ ಕೌಶಲ್ಯವನ್ನೆಲ್ಲ ಪ್ರದರ್ಶಿಸುತ್ತಾ ಜೋಡಿಸುತ್ತಿರುತ್ತಿದ್ದರು. ಅವರ ಆ ಕರಾಮತ್ತಿನಲ್ಲಿ ಮೂಡುವ ನನ್ನ ನೆಚ್ಚಿನ ನಟ ನಟಿಯರ ಭಾವಪೂರ್ಣ ಚಿತ್ರಗಳನ್ನೂ, ವಿಚಿತ್ರ ವಿನ್ಯಾಸಗಳಲ್ಲಿರುತ್ತಿದ್ದ ಚಿತ್ರದ ಶೀರ್ಷಿಕೆಗಳನ್ನೂ ನೋಡಿ ಸಂತೋಷಪಟ್ಟು ನಮ್ಮ ತಂದೆಯವರಿಂದ ಇನ್ನೊಂದು ಸುತ್ತಿನ ಹೊಡೆತಗಳಿಗೆ ತಯಾರಾಗಿಯೇ ನಾನು ಮನೆಗೆ ಬರುತ್ತಿದ್ದೆ. ಈ ಹೊಡೆತಗಳೆಂದೂ ನನ್ನನ್ನು ಆಗ ಸಿನೆಮಾ ವ್ಯಾಮೋಹದಿಂದ ದೂರ ಸರಿಯುವಂತೆ ಮಾಡಲಿಲ್ಲ. ಹಾಗೇ ನನ್ನ ಆ ಹವ್ಯಾಸವೂ ನಮ್ಮ ತಂದೆಯವರನ್ನು, ನನ್ನನ್ನು ಸಿನೆಮಾಗಳಿಂದ ದೂರ ಇಡುವಂತೆ ಪ್ರೇರೇಪಿಸಲಿಲ್ಲ. ಇದೆಲ್ಲವೂ ದಿನನಿತ್ಯದ ಮಾಮೂಲಿನಂತೆ ನಡೆದುಹೋಗುತ್ತಿತ್ತಷ್ಟೆ!

ಈ ವ್ಯಾಮೋಹದ ಆ ದಿನಗಳಲ್ಲಿ ನಾನು ಅನಿವಾರ್ಯ ಕಾರಣಗಳಿಂದ–ಮನೆಗೆ ನೆಂಟರು ಬಂದಿದ್ದರಿಂದಲೋ, ನಮ್ಮ ತಂದೆ ಊರಿನಲ್ಲಿರಲಿಲ್ಲದಿದ್ದರಿಂದಲೋ, ತೀರಾ ಹಣಕಾಸಿನ ಮುಗ್ಗಟ್ಟಿನಿಂದಾಗಿಯೊ–ನಾನು ಕೆಲವು ಚಿತ್ರಗಳನ್ನು ನೋಡಲಾಗದಿದ್ದ ಬೇಸರ ನನ್ನ ಬಾಲ್ಯದುದ್ದಕ್ಕೂ ನನ್ನನ್ನು ಕಾಡಿಸಿ, ಅವುಗಳ ಹೆಸರುಗಳು ಈಗಲೂ ನನ್ನ ಸ್ಮೃತಿಯಲ್ಲಿ ಉಳಿಯುವಂತೆ ಮಾಡಿವೆ! ಅವೆಂದರೆ, 'ಜಾತಕಫಲ', 'ಮೊದಲ ತೇದಿ', 'ಶಿವಶರಣೆ ನಂಬಿಯಕ್ಕ', 'ಬೆಟ್ಟದ ಕಳ್ಳ', 'ವೀರಕೇಸರಿ' ಇತ್ಯಾದಿ. ಇವುಗಳಲ್ಲಿ ಕೆಲವನ್ನಾದರೂ, ಈಚೆಗೆ ಟಿವಿಯಲ್ಲಿ ನೋಡಿದೆನಾದರೂ, ಆ ಮಾರುತಿ ಟೂರಿಂಗ್ ಟಾಕೀಸಿನ ತಂಬೂನೊಳಗೆ ಕೂತು ನೋಡುತ್ತಿದ್ದ 'ರುಚಿ' ಸಿಕ್ಕದೆ ನಿರಾಶನಾಗಿದ್ದೇನೆ! ಆಗ ಆ 'ರುಚಿ'ಯಲ್ಲೇ ಸಿನೆಮಾ ನೋಡಿದರೂ, ಸಿನೆಮಾ ಚೆನ್ನಾಗಿತ್ತೋ ಇಲ್ಲವೋ ಎಂಬುದನ್ನು ಮಾತ್ರ ನಮ್ಮ ತಂದೆಯವರನ್ನು ಕೇಳಿ ಖಚಿತಪಡಿಸಿಕೊಂಡಾದ ಮೇಲಷ್ಟೇ ನಾನು ನನ್ನ ಸ್ನೇಹಿತರೊಂದಿಗೆ ಅದರ ಬಗ್ಗೆ ಚರ್ಚೆ ಅಥವಾ ವಾದ ಮಾಡುತ್ತಿದ್ದುದು! ಇದನ್ನು ನೆನೆಸಿಕೊಂಡರೆ, ಸಿನೆಮಾ ಕಡೆ ಆಗ ನನ್ನನ್ನು ಅಥವಾ ನನ್ನಂತಹ ಇತರರನ್ನು ಸೆಳೆಯುತ್ತಿದ್ದ ಅಂಶಗಳು ಯಾವುವು ಎಂಬ ಬಗ್ಗೆ ನನ್ನಲ್ಲಿ ಇನ್ನೂ ಕುತೂಹಲ ಉಳಿದೇ ಇದೆ!

ತಂಬೂ ಅಥವಾ ಟೆಂಟ್ ಎಂಬ ಆ ಹಲವಾರು ಕಂಭಗಳು ಮತ್ತು ಹಗ್ಗಗಳ ಸಮತೋಲನದಲ್ಲಿ ಹರಡಿ ನಿಂತಿರುತ್ತಿದ್ದ ಆ ವಿಶಾಲ ಗುಡಾರದ ಕೆಳಗೆ ಆ ಕತ್ತಲೆಯಲ್ಲಿ ಗೋಣಿ ಚೀಲ ಹಾಸಿ, ಕಡಲೆಕಾಯಿ ಮೆಲ್ಲುತ್ತಾ; ವಿಭಿನ್ನ ಚಹರೆಯ, ನಡಾವಳಿಗಳ ನೂರಾರು ಜನರೊಂದಿಗೆ ಸಮನಾಗಿ ಕೂತು (ನಮ್ಮೂರಿನ ಸಾಹುಕಾರ ಶೆಟ್ಟರ ಕುಟುಂಬದವರು ನೆಲದ ಟಿಕೆಟ್ ಪಡೆದು, ಅಲ್ಲಿ ಮನೆಯಿಂದ ತಂದ ಕುರ್ಚಿಗಳನ್ನು ಹಾಕಿಸಿಕೊಂಡು ಕೂರುತ್ತಿದ್ದರು!) ಎದುರಿನ ಎರಡು ಆಯಾಮಗಳ ತೆರೆಯ ಮೇಲೆ ಮೂರು ಆಯಾಮಗಳಲ್ಲಿರುವಂತೆ ಮೂಡುತ್ತಿದ್ದ ಚಿತ್ರಗಳು ಮನ ಮುಟ್ಟುವ ಸಾಹಿತ್ಯ ಮತ್ತು ಮುದ ಕೊಡುವ ಸಂಗೀತಗಳೊಂದಿಗೆ ಕಟ್ಟುತ್ತಿದ್ದ ಒಂದು ನಾಟಕೀಯ ಪ್ರತಿ–ಪ್ರಪಂಚದಲ್ಲಿ ಮುಳುಗಿ ಹೋಗುವ ರೋಮಾಂಚನವೆ ಅದು? ಈಗಲೂ ನನಗೆ ಆ ಹಳೆಯ–ಕಪ್ಪು ಬಿಳುಪು–ಕನ್ನಡ ಚಿತ್ರಗಳನ್ನು ನೋಡುತ್ತಿರುವಾಗ ಆ ಹಳೆಯ ರೋಮಾಂಚನ ಮರುಕಳಿಸುತ್ತದೆ! ನನಗೆ ಗೊತ್ತಿಲ್ಲದೆಯೇ, ಭಾವಾವೇಶಕ್ಕೆ ಸಿಕ್ಕಿ ಕಣ್ಣು

ಮಂಜಾಗುತ್ತವೆ. ಕಷ್ಟದ ಆ ದಿನಗಳಲ್ಲಿ ತಮ್ಮ ಮೌಲ್ಯಾದರ್ಶಗಳ ಸಂದೇಶಗಳೊಂದಿಗೆ ನಮ್ಮಲ್ಲಿ ಆಸೆ–ಭರವಸೆಗಳನ್ನು ತುಂಬಿ, ನಮ್ಮನ್ನು ಸಾಂತ್ವನಗೊಳಿಸುತ್ತಿದ್ದ ಆ ಕನಸಿನ ಚೂರುಗಳನ್ನು ಮರೆಯುವುದಾದರೂ ಹೇಗೆ?

ಹಾಗೆ ನನ್ನ ಪಾಲಿಗೆ ಮರೆಯಲಾಗದ ಕೆಲವು ಕನಸಿನ ಚೂರುಗಳೆಂದರೆ, 'ಸ್ಕೂಲ್ ಮಾಸ್ಟರ್', 'ಅಣ್ಣ ತಂಗಿ', 'ರಣಧೀರ ಕಂಠೀರವ' ಮತ್ತು 'ಭಕ್ತ ಕನಕದಾಸ'. ಇವು ನನ್ನ ವ್ಯಕ್ತಿತ್ವಕ್ಕೆ ಅಡಿಪಾಯ ಹಾಕಿದ ಚಿತ್ರಗಳೆಂದರೂ ನಡೆಯುತ್ತದೆ. ನಾನು ಈ ಐವತ್ತು ವರ್ಷಗಳಲ್ಲಿ ವಿವಿಧ ಭಾಷೆಗಳ ಜಗತ್ತಿನ ಅತ್ಯುತ್ತಮ ಚಿತ್ರಗಳನ್ನು ನೋಡಿ ಸಂತೋಷಪಟ್ಟು, ಬಹಳಷ್ಟನ್ನು ಮರೆತಿದ್ದೇನೆ. ಆದರೆ ಈ ನಾಲ್ಕು ಚಿತ್ರಗಳು ಮೂಡಿಸಿದ ಪರಿಣಾಮ ನನ್ನ ಮನಸ್ಸಿನ ಮೇಲೆ ಈಗಲೂ ಅಚ್ಚೊತ್ತಿದಂತಿದೆ–ಒಂದೊಂದೂ, ಒಂದೊಂದು ಕಾರಣಕ್ಕೆ. ಆದರೆ ನನ್ನ ಪಾಲಿಗೆ ಇವೆಲ್ಲವುಗಳ ಸಾಮಾನ್ಯ ಆಕರ್ಷಣೆ ಎಂದರೆ, ಸ್ವಾತಂತ್ರ್ಯೋತ್ತರ ಭಾರತದ ಸ್ಫೂರ್ತಿ ಕೇಂದ್ರಗಳನ್ನು ಇವು ಬಹು ಪರಿಣಾಮಕಾರಿಯಾಗಿ ಗುರುತಿಸಿದ್ದುದು. ನನ್ನ ಬಾಳನ್ನು ಕಟ್ಟಿಕೊಳ್ಳಲು ನನ್ನ ಬಾಲ್ಯದಲ್ಲೇ ಕೆಲವು ಘನ ಮೌಲ್ಯಗಳನ್ನೂ, ಪರಿಣಾಮಕಾರಿ ಸೂಚನೆಗಳನ್ನೂ ನೀಡಿದ್ದುದು.

ಸದ್ಯಕ್ಕೆ ನಾನು 'ಸ್ಕೂಲ್ ಮಾಸ್ಟರ್' ಚಿತ್ರದ ಬಗ್ಗೆಯಷ್ಟೇ ಬರೆಯುವೆ. ಏಕೆಂದರೆ, ಇದು ನನ್ನನ್ನು ರೂಪಿಸಿದ ನನ್ನ ತಂದೆಯನ್ನು, ಅವರ ಸಂದರ್ಭವನ್ನು ಮತ್ತು ಆ ಸಂದರ್ಭವನ್ನು ಸೃಷ್ಟಿಸಿದ ರಾಷ್ಟ್ರೀಯ ಪರಿಸ್ಥಿತಿಯನ್ನೂ ಅರ್ಥ ಮಾಡಿಕೊಳ್ಳಲು ನನಗೆ ಈಗಲೂ ನೆರವಾಗುತ್ತಿರುವ ಸಿನಿಮಾ. ಈ ಚಿತ್ರವನ್ನು ಪ್ರಥಮ ಬಾರಿಗೆ ನೋಡಿ ಈಗಾಗಲೇ ೪೮ ವರ್ಷಗಳಾಗಿವೆ. (ಈಗ–೨೦೧೬ರಲ್ಲಿ–೫೬ ವರ್ಷ!) ಆಗ ನೋಡಿದಾಗ ಈ ಚಿತ್ರ ಯಾವ ಪ್ರಭಾವವನ್ನು ಬೀರಿತ್ತೋ ಅದೇ–ಅಥವಾ ಅದಕ್ಕಿಂತ ಹೆಚ್ಚು–ಪ್ರಭಾವವನ್ನು ಈಗ ಮತ್ತೆ ಮತ್ತೆ ನೋಡಿದಾಗಲೂ ನನ್ನ ಮೇಲೆ ಬೀರುತ್ತಲೇ ಇದೆ. ಕಾರಣ: ಸ್ವಾತಂತ್ರ್ಯ ಸಾಧನೆಯ ಹುರುಪು ದೇಶಾದ್ಯಂತ ಹರಡಿದ್ದ ಹೊಸ ಭರವಸೆಯ, ಹೊಸ ಬದ್ಧತೆಯ ಗಾಳಿ ಈ ಚಿತ್ರದುದ್ದಕ್ಕೂ ಬೀಸುತ್ತಾ, ಇಂದೂ–ಇಂದಿನ ಜಾಗತೀಕರಣದ ದಿನಗಳಲ್ಲಿ–ನಮ್ಮನ್ನು ಕೆಣಕುವಂತಿದೆ. ಮುಖ್ಯವೆಂದರೆ ಈ ಹೊಸ ಭರವಸೆ, ಬದ್ಧತೆಗಳು ವ್ಯಕ್ತವಾಗುವುದು ಈ ರಾಷ್ಟ್ರದ ಸಾಮಾನ್ಯ ಪ್ರಜೆಯೆನಿಸಿದ ಒಬ್ಬ ಪ್ರಾಥಮಿಕ ಶಾಲಾ ಮಾಸ್ತರನ ಮೂಲಕ. ಈತ ತನ್ನ ಹಳ್ಳಿಯನ್ನು, ಆ ಹಳ್ಳಿಯ ಶಾಲೆಯನ್ನು ಕಟ್ಟುವುದರೊಂದಿಗೇ ತನ್ನ ಕುಟುಂಬವನ್ನೂ ಕಟ್ಟುವ ರೀತಿ ಮತ್ತು ಆ ಹಾದಿಯಲ್ಲಿ ಎದುರಾಗುವ ಬಿಕ್ಕಟ್ಟುಗಳನ್ನು ಎದುರಿಸುವಲ್ಲಿ ತೋರುವ ಛಲ, ವಿವೇಕ ಹಾಗೂ ಸಂಯಮಗಳ ಪ್ರತಿ ವಿವರಗಳಲ್ಲೂ, ಈ ಚಿತ್ರ ನವಭಾರತದ ಬೀಜಾಂಕುರದ ಸಂಭ್ರಮ ಮತ್ತು ಹೆರಿಗೆಯ ಸಂಕಟಗಳೆರಡನ್ನೂ ಸರಳ ಲಯದಲ್ಲಿ ಕಟ್ಟಿಕೊಡುತ್ತದೆ. ನಮ್ಮ ಈ ೬೦ ವರ್ಷಗಳ 'ಪ್ರಗತಿ'ಯ ಬಗ್ಗೆ ಒಂದು ಹಿನ್ನೋಟ ಬೀರಲು ಈ ಚಿತ್ರ ಒಂದು ಆಕರ ಬಿಂದುವನಂತಿದೆ ಎಂದರೆ ತಪ್ಪಾಗಲಾರದು.

ಈ ಚಿತ್ರವನ್ನು ಹಾಗೆ ಆಕರ ಬಿಂದುವಿನಂತೆ ನೋಡಿದಾಗಲೇ ನನ್ನ ಕಣ್ಣುಗಳು

ಮಂಜಾಗುವುದು: ಎಲ್ಲಿಂದ ಎಲ್ಲಿಗೆ ನಾವು ಬಂದಿದ್ದೇವೆ, ಎಷ್ಟು ಬದಲಾಗಿದ್ದೇವೆ! ಆ ಚಿತ್ರದ ಸ್ಕೂಲ್ ಮಾಸ್ಟರ್ ರಂಗಣ್ಣ ನಮ್ಮ ತಂದೆಯೇ ಅಲ್ಲವೆ? ಹೊರ ರೂಪದಲ್ಲೂ–ಅದೇ ಪೇಟ, ಕೋಟು, ಕಚ್ಚೆ ಪಂಚೆ–ಮತ್ತು ಒಳರೂಪದಲ್ಲೂ–ಕೆಲಸದಲ್ಲಿನ ಅದೇ ಶ್ರದ್ಧೆ, ಕಟ್ಟುನಿಟ್ಟು ಮತ್ತು ಕುಟುಂಬದ ಬಗ್ಗೆ ಬದ್ಧತೆ–ಆ ಸಿನಿಮಾದ ರಂಗಣ್ಣನೇ ಆಗಿದ್ದ ಅವರ ಸರಳ ಅಚ್ಚುಕಟ್ಟು ಮತ್ತು ನಿಷ್ಠುರ ಆದರ್ಶಗಳ ಮೇಲೇ ನಮ್ಮ ಬದುಕನ್ನು ಕಟ್ಟಿಕೊಂಡಿದ್ದು ಅಲ್ಲವೆ? ಇದು ನಮ್ಮದೇ–ನಮ್ಮಂತಹ ಬಹು ಜನರ–ಹಾಡು ಪಾಡಿನ ಕಥೆಯೇ ಅಲ್ಲವೆ? ೧೯೫೮ರಲ್ಲಿ ನನ್ನಣ್ಣನನ್ನು ಬೆಂಗಳೂರಿನ ಕಾಲೇಜೊಂದರಲ್ಲಿ ಪಿಯುಸಿಗೆ ಸೇರಿಸಿ ಈ ಚಿತ್ರವನ್ನು ನೋಡಿ ಬಂದಿದ್ದ ನಮ್ಮ ತಂದೆಯ ಆ ಉತ್ಸಾಹ ನನಗಿನ್ನೂ ಕಣ್ಣಿಗೆ ಕಟ್ಟಿದಂತಿವೆ. ಅವರು ಅಡಿಗೆ ಮನೆಯಲ್ಲಿ ಕೂತು ಚಿತ್ರದ ಕಥೆಯನ್ನು ನಮ್ಮ ತಾಯಿಗೆ ಬಹು ಉಮೇದಿನಿಂದ ಹೇಳುತ್ತಿದ್ದರು. ಜೊತೆಗೆ ಎರಡು ಎಚ್ಚರಿಕೆಗಳನ್ನೂ ಹೇಳಿದ್ದು ನೆನಪಿದೆ. ಒಂದು: ಪಟ್ಟಣಕ್ಕೆ ಓದಲು ಹೋದ ಮಕ್ಕಳ ಬಗ್ಗೆ ಸದಾ ಜಾಗೃತರಾಗಿರಬೇಕು. ಎರಡು: ಹೆಂಗಸರೂ ಅಕ್ಷರ ಕಲಿಯಬೇಕು. ಇವು ನನಗೆ ಇಂದು ಹೊಸದಾಗಿ ಆಧುನಿಕತೆಗೆ ಕಾಲಿಡುತ್ತಿರುವ ಸಮಾಜವೊಂದು ಅಂದು ವಹಿಸಬೇಕಾಗಿದ್ದ ಎರಡು ಪ್ರಾಥಮಿಕ ಎಚ್ಚರಗಳಾಗಿ ಕಾಣುತ್ತಿವೆ. ನಮ್ಮ ತಂದೆ ಆ ಸಿನಿಮಾವನ್ನು ಎಷ್ಟು ಎಚ್ಚರಿಕೆಯಿಂದ ಗಮನಿಸಿದ್ದರು ಎಂದು ಈಗ ನನಗೆ ಆಶ್ಚರ್ಯವಾಗುತ್ತದೆ! ಅವರು ತಮ್ಮ ಬದುಕಿನಲ್ಲಿ ಈ ಎರಡು ಎಚ್ಚರಗಳನ್ನೂ ಪಾಲಿಸಿದರು. ನನ್ನಣ್ಣನನ್ನು ತಮ್ಮೆಲ್ಲ ಎಚ್ಚರದೊಂದಿಗೆ ಬೆಳೆಸಿದರು ಮತ್ತು ನನ್ನ ತಾಯಿಗೆ ಅಕ್ಷರಗಳನ್ನೂ ಕಲಿಸಿದರು. ಹಾಗಾಗಿ ರಂಗಣ್ಣನ ಕುಟುಂಬದಂತೆ ನಮ್ಮ ಕುಟುಂಬ ದುರಂತವನ್ನು ಎದುರಿಸಲಿಲ್ಲ.

ಆದರೆ ಈ ಚಿತ್ರದ ನಿರ್ದೇಶಕ ಮತ್ತು ನಾಯಕ ನಟ ಬಿ.ಆರ್. ಪಂತಲು ತಮ್ಮ ನೆಚ್ಚಿನ ಶಿಷ್ಯ ಶಿವಾಜಿ ಗಣೇಶನ್‌ರ ವಿಶೇಷ ಪಾತ್ರದ ಮೂಲಕ ಈ ಚಿತ್ರದಲ್ಲಿನ ದುರಂತವನ್ನು ಸುಖಾಂತ್ಯ ಮಾಡಿರುವ ರೀತಿ ಒಂದು ವಿಶಿಷ್ಟ melancholyಯನ್ನು ಸೃಷ್ಟಿಸುತ್ತದೆ. ಆ ಮೂಲಕ ನವಭಾರತದ ಯಶಸ್ಸಿನ ಗುಟ್ಟು, ಸಣ್ಣ ಕ್ಷಮೆಗಳಲ್ಲಿದೆ ಎಂಬ ದೊಡ್ಡ ಸತ್ಯವವನ್ನೂ ಹೇಳುತ್ತದೆನಿಸುತ್ತದೆ. ಈ ದೃಷ್ಟಿಯಿಂದಲೂ ಈ ಚಿತ್ರ ಇಂದು ಗಮನಾರ್ಹವೆನಿಸುತ್ತದೆ. ಹಾಗೆ ನೋಡಿದರೆ, ಕನ್ನಡ ಸಿನಿಮಾ ಇರುವವರೆಗೂ ಈ 'ಸ್ಕೂಲ್ ಮಾಸ್ಟರ್'; ಆ ಪಂತಲು, ಆ ರಾಜಮ್ಮ, ಆ ಬಾಲಕೃಷ್ಣ, ಆ ನರಸಿಂಹರಾಜು, ಆ ಧಿಕ್ಕಿ ಮಾಧವರಾವ್, ಆ ಶಿವಾಜಿ ಗಣೇಶನ್ ಮತ್ತು ಆ ಬಿ.ಸರೋಜಾದೇವಿ, ಸಾಹುಕಾರ್ ಜಾನಕಿ, ಅದರೊಂದಿಗೆ ಇದ್ದೇ ಇರುತ್ತಾರೆ. ಹಾಗೇ ಕನ್ನಡದ ಜನ 'ಭಾಮೆಯ ನೋಡಲು ತಾ ಬಂದ', 'ಸೊಂಪಾದ ಸಂಜೆ ವೇಳೆ', 'ಅತಿ ಮಧುರ ಅನುರಾಗ', 'ನಾನೂ ನೀನೂ ಜೋಡಿ ಈ ಜೀವನ ಎತ್ತಿನ ಗಾಡಿ' ಮುಂತಾದ ಸರಳ ಸುಮಧುರ ಗೀತೆಗಳನ್ನು ಗುನುಗುತ್ತಲೇ ಇರುತ್ತಾರೆ!

(೧೫ ಆಗಸ್ಟ್, ೨೦೦೮)

■

ರಾಜ್‌ಕುಮಾರ್: ನಮ್ಮ ಕಣ್ಣ ಮುಂದಿನ ಪವಾಡ

ಅವರಂತೆ ಕನ್ನಡಕ್ಕೆ ಅರ್ಪಿಸಿಕೊಂಡ ನಟರು ಕಡಿಮೆ. ಕನ್ನಡಕ್ಕೆ ಅರ್ಪಿಸಿಕೊಂಡದ್ದು ಎಂದರೆ ಭಾಷಾನಿಷ್ಠೆ ಮಾತ್ರವಲ್ಲ. ಅವರು ಕನ್ನಡ ಸಿನಿಮಾ ಭಾಷೆ ಮೂಲಕ ಕನ್ನಡ ಜನತೆಗೆ ಒಂದು ವಿಶಿಷ್ಟ ಅಭಿರುಚಿ ಹಾಗೂ ಮೌಲ್ಯ ಪ್ರಪಂಚವನ್ನು ಕಟ್ಟಿಕೊಟ್ಟರು. ಅವರ ಬಾಯಲ್ಲಿ ಕನ್ನಡ ಭಾಷೆ ಒಂದು ಹೊಸ ಶಕ್ತಿ ಹಾಗೂ ಶೋಭೆಯನ್ನು ಪಡೆದುಕೊಂಡಿತು. ಅರವತ್ತು-ಎಪ್ಪತ್ತರ ದಶಕದ ತಲೆಮಾರಿನ ಸಾಮಾನ್ಯ ಕನ್ನಡ ಜನತೆಗೆ ರಾಜ್‌ಕುಮಾರ್, ಕನ್ನಡ ಬದುಕಿನ ಅತ್ಯುತ್ತಮ ಮೌಲ್ಯಗಳ ಪ್ರತೀಕವಾಗಿದ್ದರು. ವಿಮರ್ಶೆಯಲ್ಲಿ ಅವುಗಳ ಮಿತಿ ಏನೇ ಇರಲಿ, ತಂದೆ-ಮಗ, ಗಂಡ-ಹೆಂಡತಿ, ಅಣ್ಣ-ತಮ್ಮ, ಅಣ್ಣ-ತಂಗಿ ಮುಂತಾದ ಕೌಟುಂಬಿಕ ಸಂಬಂಧಗಳಿಗೆ ಮತ್ತು ಸ್ನೇಹ, ದುಡಿಮೆ, ಕೊಟ್ಟ ಮಾತು ಮುಂತಾದ ಸಾಮಾಜಿಕ ಮೌಲ್ಯಗಳಿಗೆ ತಮ್ಮ ಚಿತ್ರಗಳ ಮೂಲಕ ಒಂದು ಘನತೆ ತಂದುಕೊಟ್ಟರು. ರಾಜ್‌ಕುಮಾರ್ ಚಿತ್ರಗಳ ಮೌಲ್ಯಗಳೊಂದಿಗೆ, ಆದರ್ಶಗಳೊಂದಿಗೆ ಎರಡು-ಮೂರು ಕನ್ನಡದ ತಲೆಮಾರುಗಳು ಬೆಳೆದವು.

ಐವತ್ತು ವರ್ಷಗಳ ಹಿಂದೆ ಕನ್ನಡ ರಾಜ್ಯೋದಯವಾದಾಗ ಕನ್ನಡಿಗರು ಕಂಡ ಕನಸುಗಳು ಹಲವಾರು. ಹರಿದು ಹಂಚಿಹೋಗಿದ್ದ ಕನ್ನಡದ ಜನ ನೂರಾರು ವರ್ಷಗಳ ನಂತರ ಮತ್ತೆ ಒಂದಾದ ಸಂದರ್ಭದಲ್ಲಿ ಕನ್ನಡದ ಹೆಸರಿನಲ್ಲಿ ಹೊಸ ಉತ್ಸಾಹ ತಾಳಿದರು. ಏಕೆಂದರೆ, ಕನ್ನಡವೆಂಬುದು ಆಗ ಕೇವಲ ಒಂದು ಭಾಷೆಯ ಹೆಸರು ಮಾತ್ರವಾಗಿರಲಿಲ್ಲ ಅದು, ಸಾವಿರಾರು ವರ್ಷಗಳ ಒಂದು ಸಾಮಾನ್ಯ ಸಂಸ್ಕೃತಿಯ ಸ್ಮೃತಿಕೋಶದ ಹಕ್ಕುದಾರಿಕೆಯುಳ್ಳ ಒಂದು ಭಾಷಾ ಸಮುದಾಯ ಮತ್ತೆ ಹೊಸ ಉತ್ಸಾಹದೊಡನೆ ಒಟ್ಟಾಗಿ, ಕನ್ನಡ ಬದುಕೆಂಬುದನ್ನು ಕಟ್ಟಿಕೊಳ್ಳುವ ಛಲದ ಪ್ರತೀಕವೂ ಆಗಿತ್ತು. ಈ ಉತ್ಸಾಹ, ಛಲಗಳಿಗೆ ಸಾಹಿತ್ಯ, ಸಂಸ್ಕೃತಿ, ರಾಜಕಾರಣ ಮುಂತಾದ ಕ್ಷೇತ್ರಗಳಿಂದ ಒತ್ತಾಸೆಯಾಗಿ ಬಂದವರು ಹಲವು ಮಹನೀಯರು. ಈ ಮಹನೀಯರ ಸಾಲಿನಲ್ಲಿ ವಿಶಿಷ್ಟವಾಗಿ ನಿಲ್ಲುವ ಒಂದು ಮಹಾನ್ ವ್ಯಕ್ತಿತ್ವ ರಾಜ್‌ಕುಮಾರ್.

ವಿಶಿಷ್ಟ ಏಕೆಂದರೆ, ರಾಜ್‌ಕುಮಾರ್ ಬೇರೆ ಮಹನೀಯರಂತೆ ಒಂದು ಸಾಂಸ್ಕೃತಿಕ

ಮಹತ್ವಾಕಾಂಕ್ಷೆಯಿಂದೇನೂ ಕನ್ನಡ ಜನಮನವನ್ನು ಪ್ರವೇಶಿಸಲಿಲ್ಲ. ಒಂದು ಸಾಮಾನ್ಯ ಸಾಮಾಜಿಕ, ಕೌಟುಂಬಿಕ ಹಿನ್ನೆಲೆಯಿಂದ ಬಂದ ಮೂರನೆಯ ತರಗತಿಯವರೆಗೆ ಮಾತ್ರ ಓದಿದ ಈ ಮುತ್ತುರಾಜ್, ಕರ್ನಾಟಕ ರಾಜ್ಯೋದಯ ಸಂದರ್ಭದ ಒಬ್ಬ ಸಾಮಾನ್ಯ ಕನ್ನಡಿಗನ ಪ್ರತೀಕ ಮಾತ್ರವಾಗಿದ್ದರು. ಆದರೆ ಮುಂದಿನ ಐವತ್ತು ವರ್ಷಗಳಲ್ಲಿ ಅವರು ಮುಟ್ಟಿದ ಎತ್ತರ, ಅವರನ್ನು ಕರ್ನಾಟಕವನ್ನು ಒಂದು ದೊಡ್ಡ ಸಾಂಸ್ಕೃತಿಕ ಶಕ್ತಿಯನ್ನಾಗಿ ಮಾರ್ಪಡಿಸಿತ್ತು. ಆಧುನಿಕ ಕರ್ನಾಟಕದ ಕಟ್ಟಿದವು ಮೂರು ಶಕ್ತಿಗಳು: ಕುವೆಂಪು–ಶಿವರಾಮಕಾರಂತ–ರಾಜ್‌ಕುಮಾರ್. ಇವರಲ್ಲಿ ಒಬ್ಬೊಬ್ಬರೂ ಕನ್ನಡದ ಮನಸ್ಸಿಗೆ ಹೊಸ ಉದ್ದ–ಅಗಲ–ಎತ್ತರಗಳನ್ನು ಒದಗಿಸಿದರು.

ರಾಜ್‌ಕುಮಾರ್ ಒಬ್ಬ ಅಸಾಮಾನ್ಯ ಕಲಾವಿದ. ಆದರೆ ಈ ರೀತಿ ಅಸಾಮಾನ್ಯ ಕಲಾವಿದರೆಲ್ಲರೂ ರಾಜ್‌ಕುಮಾರ್‌ರಂತೆ ಒಂದು ಭಾಷಾ ಸಮುದಾಯದ ಅಸ್ಮಿತೆಯ ಸಂಕೇತವಾದದ್ದು ಕಡಿಮೆ. ಇದಕ್ಕೆ ಕಾರಣ, ರಾಜ್‌ಕುಮಾರ್ ಕೇವಲ ಅಸಾಮಾನ್ಯ ಕಲಾವಿದನಾಗಿ ಮಾತ್ರವಲ್ಲ, ಅಸಾಮಾನ್ಯ ಮನುಷ್ಯನಾಗಿ ಕೂಡಾ ಜನತೆಯ ಮನದಲ್ಲಿ ಬೆಳೆದದ್ದು. ನಿಜ, ಇದಕ್ಕೆ ಅವರು ಆರಿಸಿಕೊಂಡ ಚಲನಚಿತ್ರ ಮಾಧ್ಯಮದ ಜನಪ್ರಿಯತೆಯೂ ಕಾರಣವಾಯಿತು. ಆದರೆ ಅವರಂತೆ ಕನ್ನಡಕ್ಕೆ ಅರ್ಪಿಸಿಕೊಂಡ ನಟರು ಕಡಿಮೆ. ಕನ್ನಡಕ್ಕೆ ಅರ್ಪಿಸಿಕೊಂಡದ್ದು ಎಂದರೆ ಮತ್ತೆ ಭಾಷಾನಿಷ್ಠೆ ಮಾತ್ರವಲ್ಲ. ಅವರು ಕನ್ನಡ ಸಿನಿಮಾ ಭಾಷೆ ಮೂಲಕ ಕನ್ನಡ ಜನತೆಗೆ ಒಂದು ವಿಶಿಷ್ಟ ಅಭಿರುಚಿ ಹಾಗೂ ಮೌಲ್ಯ ಪ್ರಪಂಚವನ್ನು ಕಟ್ಟಿಕೊಟ್ಟರು. ಅವರ ಬಾಯಲ್ಲಿ ಕನ್ನಡ ಭಾಷೆ ಒಂದು ಹೊಸ ಶಕ್ತಿ ಹಾಗೂ ಶೋಭೆಯನ್ನು ಪಡೆದುಕೊಂಡಿತು. ಅರವತ್ತು–ಎಪ್ಪತ್ತರ ದಶಕದ ತಲೆಮಾರಿನ ಸಾಮಾನ್ಯ ಕನ್ನಡ ಜನತೆಗೆ ರಾಜ್‌ಕುಮಾರ್, ಕನ್ನಡ ಬದುಕಿನ ಅತ್ಯುತ್ತಮ ಮೌಲ್ಯಗಳ ಪ್ರತೀಕವಾಗಿದ್ದರು. ವಿಮರ್ಶೆಯಲ್ಲಿ ಅವುಗಳ ಮಿತಿ ಏನೇ ಇರಲಿ, ತಂದೆ–ಮಗ, ಗಂಡ–ಹೆಂಡತಿ, ಅಣ್ಣ–ತಮ್ಮ, ಅಣ್ಣ–ತಂಗಿ ಮುಂತಾದ ಕೌಟುಂಬಿಕ ಸಂಬಂಧಗಳಿಗೆ ಮತ್ತು ಸ್ನೇಹ, ದುಡಿಮೆ, ಕೊಟ್ಟ ಮಾತು ಮುಂತಾದ ಸಾಮಾಜಿಕ ಮೌಲ್ಯಗಳಿಗೆ ತಮ್ಮ ಚಿತ್ರಗಳ ಮೂಲಕ ಒಂದು ಘನತೆ ತಂದುಕೊಟ್ಟರು. ರಾಜ್‌ಕುಮಾರ್ ಚಿತ್ರಗಳ ಮೌಲ್ಯಗಳೊಂದಿಗೆ, ಆದರ್ಶಗಳೊಂದಿಗೆ ಎರಡು–ಮೂರು ಕನ್ನಡದ ತಲೆಮಾರುಗಳು ಬೆಳೆದವು. ಹಾಗೇ ರಾಜ್‌ಕುಮಾರ್ ಕೂಡಾ ಕನ್ನಡದ ವಿವೇಕ, ವಿನಯ, ಪ್ರತಿಭೆ ಹಾಗೂ ಸ್ವಾಭಿಮಾನದ ಸಂಕೇತವಾಗಿ ಬೆಳೆದರು.

ಭಕ್ತಿ ಪ್ರಧಾನವಾದ *ಬೇಡರ ಕಣ್ಣಪ್ಪ, ಭಕ್ತ ಕನಕದಾಸ, ಸಂತ ತುಕಾರಾಂ* ಅಥವಾ *ಮಂತ್ರಾಲಯ ಮಹಾತ್ಮೆ* ಇರಲಿ, ಪುರಾಣ, ಇತಿಹಾಸ ಪ್ರಧಾನವಾದ *ರಣಧೀರ ಕಂಠೀರವ, ಸತ್ಯಹರಿಶ್ಚಂದ್ರ, ಕಿತ್ತೂರು ಚೆನ್ನಮ್ಮ* ಅಥವಾ *ಶ್ರೀ ಕೃಷ್ಣದೇವರಾಯ* ಇರಲಿ; ಸಾಮಾಜಿಕವಾದ *ಅಣ್ಣ–ತಂಗಿ, ಕರುಣೆಯೇ ಕುಟುಂಬದ ಕಣ್ಣು, ಕಣ್ತೆರೆದು ನೋಡು, ನಾಂದಿ, ಮಣ್ಣಿನ ಮಗ, ಕಸ್ತೂರಿ ನಿವಾಸ, ಸಾಕ್ಷಾತ್ಕಾರ,* ಅಥವಾ *ಭಾಗ್ಯವಂತರು* ದಂತಹ ಚಿತ್ರಗಳಿರಲಿ; ಮನರಂಜನಾ ಪ್ರಧಾನವಾದ *ಜೇಡರ ಬಲೆ, ಶಂಕರ್ ಗುರು,*

ಭಾಗ್ಯದ ಲಕ್ಷ್ಮಿ ಬಾರಮ್ಮದಂತಹ ಚಿತ್ರಗಳಿರಲಿ, ಅವರು ತಮ್ಮ ಕಲಾ ಪ್ರೌಢಿಮೆಯ ಜೊತೆಗೆ ಸಾಂಸ್ಕೃತಿಕ ಎಚ್ಚರವನ್ನು ಮೆರೆದರು. ಕುವೆಂಪು–ಕಾರಂತರಿಲ್ಲದೆ ಕನ್ನಡ–ಕನ್ನಡ ಜನತೆ ಹೇಗೆ ಹೀಗಿರಲಾಗುತ್ತಿರಲಿಲ್ಲವೋ ಹಾಗೆ, ರಾಜ್‌ಕುಮಾರ್ ಇಲ್ಲದೆಯೇ ಕನ್ನಡ–ಕನ್ನಡ ಜನತೆ ಹೀಗಿದ್ದಂತೆ ಇರುತ್ತಿರಲಿಲ್ಲ. ಹಾಗಾಗಿ ರಾಜ್‌ಕುಮಾರ್ ಕರ್ನಾಟಕದ ಮಟ್ಟಿಗೆ ಇಪ್ಪತ್ತನೇ ಶತಮಾನದ ಉತ್ತರಾರ್ಧದ ಇತಿಹಾಸದ ಉಜ್ವಲ ತಾರೆಗಳಲ್ಲೊಬ್ಬರು.

ಆಧುನಿಕ ಕರ್ನಾಟಕದ ಇತಿಹಾಸದಲ್ಲಿ ಪವಾಡವೇನಾದರೂ ಸಂಭವಿಸಿದ್ದರೆ, ಆ ಪವಾಡ ರಾಜಕುಮಾರರೇ. ಏಕೆಂದರೆ ಅವರು ಬಂದ ಸಾಮಾಜಿಕ ಹಿನ್ನೆಲೆ ಹಾಗೂ ಪ್ರತಿಭೆ ಮತ್ತು ಜನಮನ್ನಣೆ– ಈ ಎರಡೂ ವಿಷಯಗಳಲ್ಲಿ ಅವರು ಮುಟ್ಟಿದ ಎತ್ತರ, ಯಾರನ್ನಾದರೂ ಬೆಕ್ಕಸ ಬೆರಗಾಗಿಸುವಂತದು. ಹಾಗೆ ನೋಡಿದರೆ ಇದು ಪ್ರಜಾಪ್ರಭುತ್ವದ ವಿಜಯ; ಕನ್ನಡ ರಾಜ್ಯೋದಯದ ಯಶಸ್ಸಿನ ಸಂಕೇತವೂ ಹೌದು. ಇಂತಹ ರಾಜ್‌ಕುಮಾರ್ ಇನ್ನಿಲ್ಲ ಎಂದರೆ ನಂಬುವುದು ಕಷ್ಟ. ಅವರು ಕನ್ನಡದ ಸ್ಮೃತಿಕೋಶದ ಅವಿಭಾಜ್ಯ ಅಂಗ. ಹಾಗಾಗಿ ಅವರಿಗೆ ಸಾವಿಲ್ಲ.

(ಏಪ್ರಿಲ್ ೨೦, ೨೦೦೬)

■

ಟೆಲಿವಿಷನ್ ಎಂಬ ಜಾಗತಿಕ ರಾಜಕೀಯ ಸಾಧನ

ಈಗ ಒಮ್ಮೆಗೇ ತೆರೆಯ ಮೇಲೆ ಮುಖ್ಯ ಚಿತ್ರ, ಅದಕ್ಕೆ ಸಂಬಂಧಪಟ್ಟ ಧ್ವನಿ, ಪರಿಣಾಮ ಸಂಗೀತ, ಎರಡೂ-ಒಮ್ಮೊಮ್ಮೆ ಮೂರೂ-ಕೆಳ ಮೂಲೆಗಳಲ್ಲಿ(ನಾಲ್ಕನೆಯದರಲ್ಲಿ ವಾಹಿನಿಯ ಲಾಂಛನವಿರುತ್ತದಲ್ಲ!) ಸಣ್ಣ ಚಿತ್ರ ಸಹಿತ ಜಾಹೀರಾತು(ಅದೂ ಚಲನೆಯಲಿದ್ದು ಕಣ್ಣನ್ನೂ, ಮನಸ್ಸನ್ನೂ ಕುಕ್ಕುತ್ತಿರುತ್ತದೆ!) ಮತ್ತು/ಅಥವಾ ದೈನಿಕ ಮಾಹಿತಿ, ಕೆಳಗೆ ಅಕ್ಷರ ರೂಪದ ಜಾಹೀರಾತುಗಳು, ಅದರ ಕೆಳಗೆ ದಿನದ ಇತರ ವಾರ್ತೆಯ ಮುಖ್ಯಾಂಶಗಳು- ಇಷ್ಟನ್ನೂ ಕೊಡುವ ವಾಹಿನಿಗಳು ನೋಡುಗನನ್ನು ಏನೆಂದು ಭಾವಿಸಿವೆ, ಅವನಿಂದ ಎಂತಹ ಪ್ರತಿಸ್ಪಂದನವನ್ನು ನಿರೀಕ್ಷಿಸುತ್ತವೆ ಮತ್ತು ಅವು ತಮ್ಮ ಮಾಧ್ಯಮ ಉದ್ದೇಶಗಳ ಬಗ್ಗೆ ಎಷ್ಟು ಪ್ರಾಮಾಣಿಕವಾಗಿವೆ ಅಥವಾ ಗಂಭೀರವಾಗಿವೆ ಎಂಬುದನ್ನೂ ನಾವು ಯೋಚಿಸಬೇಕು. ಯಾವುದೂ ಒಂದೇ ವೀಕ್ಷಣೆಗೆ ನಮಗೆ ಅರ್ಥವಾಗದೆ ಅದನ್ನು ಅರ್ಥ ಮಾಡಿಕೊಳ್ಳಲು ನೋಡಿದ್ದನ್ನೇ ಮತ್ತೆ ಮತ್ತೆ ನೋಡುವಂತೆ ಒತ್ತಾಯಿಸುವುದೇ ಇದರ ಉದ್ದೇಶವೇ?

ದೂರದರ್ಶನ ಭಾರತಕ್ಕೆ ಬಂದು ಅರ್ಧ ಶತಮಾನವಾಗುತ್ತಲಿದ್ದರೂ, ಅದೊಂದು ಜನಪ್ರಿಯ ಮಾಧ್ಯಮವಾಗಿ ಬೆಳೆಯತೊಡಗಿದ್ದು ಹದಿನೈದು ವರ್ಷಗಳಿಂದೀಚೆಗಷ್ಟೇ. ಜಗತ್ತು ಇದ್ದಕ್ಕಿದ್ದಂತೆ ಎಲ್ಲ ಗಡಿ ರೇಖೆಗಳನ್ನೂ ಧಿಕ್ಕರಿಸಲು ನಿರ್ಧರಿಸಿದಂತೆ ತೋರುತ್ತಿರುವ ಪ್ರಸ್ತುತ ಜಾಗತೀಕರಣ ಘಟ್ಟದ ಅಂತಾರಾಷ್ಟ್ರೀಯ ಒಪ್ಪಂದಗಳು ಜಾರಿಯಾಗ ತೊಡಗಿದ ನಂತರ. ರಾಷ್ಟ್ರೀಯ ಟಿ.ವಿ. ಎನಿಸಿರುವ ದೂರದರ್ಶನ ನಿಧಾನವಾಗಿ ಬಣ್ಣಕ್ಕೆ ತಿರುಗಿ, ೧೯೮೫ರಿಂದ ೧೯೯೫ರವರೆಗೆ ಒಂದು ದಶಕದ ಕಾಲ ತನ್ನ ಸೋಪ್ ಅಪೇರಾಗಳು ಮತ್ತು ರಾಮಾಯಣ-ಮಹಾ ಭಾರತ-ಚಾಣಕ್ಯ ಇತ್ಯಾದಿ ಮಹಾ ಧಾರಾವಾಹಿಗಳ ಮೂಲಕ ಸರಿ ಸುಮಾರು ಎಲ್ಲ ಮಧ್ಯಮ ವರ್ಗಗಳ ಮನೆಗೆ ಒಂದು ಸಾಂಸ್ಕೃತಿಕ ಸಾಧನವೆಂಬಂತೆ ಟಿ.ವಿ. ಸೆಟ್ಟುಗಳಿಗೆ ಪ್ರವೇಶ ದೊರಕಿಸಿಕೊಟ್ಟಿತು. ತದನಂತರ ಬಂದ ಉಪಗ್ರಹ ಟಿ.ವಿ., ಕಳೆದ ಹತ್ತು ವರ್ಷಗಳಲ್ಲಿ ಭಾರತೀಯ ಬದುಕಿನ ಲಂಗರುಗಳನ್ನೇ

ಬದಲಿಸಬಲ್ಲಷ್ಟು ಪ್ರಭಾವಶಾಲಿಯಾಗಿ ಬೆಳೆದಿದೆ. ಹಿಂದೊಮ್ಮೆ ತಿರುಗಿ ನೋಡಿದಾಗ ಈ ಎಲ್ಲ ಬೆಳವಣಿಗೆಗಳು ವ್ಯವಸ್ಥಿತ ಯೋಜನೆಯೊಂದರ ಪ್ರಕಾರವೇ ನಡೆದುವೇನೋ ಎಂದು ಆಶ್ಚರ್ಯಪಡುವಷ್ಟು ಅನುಕ್ರಮಣಿಕೆಯಲ್ಲಿವೆ!

ಟಿ.ವಿ. ಭಾರತಕ್ಕೆ ಬಂದದ್ದು ಮೂಲತಃ ಒಂದು ಶೈಕ್ಷಣಿಕ ಸಾಧನವಾಗಿ. ನಿರ್ದಿಷ್ಟವಾಗಿ ಗ್ರಾಮಾಂತರ ಅಭಿವೃದ್ಧಿಯ ಸಾಧನವಾಗಿ. ದೂರದರ್ಶನಕ್ಕೆ ಇತ್ತೀಚಿನವರೆಗೆ–ಅದು ವಾಣಿಜ್ಯೀಕರಣಕ್ಕೆ ಒಳಗಾಗುವವರೆಗೆ–ಹಣ (ಬಜೆಟ್) ಒದಗಿಸುತ್ತಿದ್ದುದು ಗ್ರಾಮಾಂತರ ಅಭಿವೃದ್ಧಿ ಖಾತೆಯೇ ಎಂದು ಕೇಳಿದ್ದೇನೆ. ಭಾರತದ ನವೋದಯ ಸಂದರ್ಭದ ಬಹು ದೊಡ್ಡ ಸಮೂಹ ಸಾಧನವಾಗಿ ಬೆಳೆದ ರೇಡಿಯೋದ ತಮ್ಮನಂತೆ ಹುಟ್ಟಿದ ದೂರದರ್ಶನ, ದೇಶ ಕಟ್ಟುವ ಉಮೇದಿನಲ್ಲಿದ್ದ ಸ್ವಾತಂತ್ರ್ಯೋತ್ತರ ಭಾರತದ ಎಲ್ಲ ಸಮೂಹ ಸಾಧನಗಳಂತೆ(ಖಾಸಗಿ ಸ್ವಾಮ್ಯದ ಪತ್ರಿಕೆಗಳೂ ಸೇರಿದಂತೆ) ಮಾಹಿತಿ, ಮನರಂಜನೆ ಹಾಗೂ ಶಿಕ್ಷಣಗಳನ್ನು ತನ್ನ ಗುರಿಗಳೆಂದು ಘೋಷಿಸಿಕೊಂಡು ತನ್ನ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳುತ್ತಿತ್ತು. ಆದರೆ, ೧೯೭೭ರಲ್ಲಿ ನಡೆದ ಜಯಪ್ರಕಾಶ್ ನಾರಾಯಣರ ನೇತೃತ್ವದ ಸ್ವಾತಂತ್ರ್ಯೋತ್ತರ ಭಾರತದ ಮೊದಲ ಪೂರ್ಣ ಪ್ರಮಾಣದ ರಾಜಕೀಯ ಸ್ಥಿತ್ಯಂತರ, ಅನೇಕ ಏಳು ಬೀಳುಗಳು ಹಾಗೂ ರೂಪಾಂತರಗಳ ನಂತರ ರಾಷ್ಟ್ರದ ಚಿನ್ನದ ಕಾಪು ದಾಸ್ತಾನನ್ನೆಲ್ಲ ವಿಶ್ವಬ್ಯಾಂಕಿನಲ್ಲಿ ಅಡ ಇಡಬೇಕಾದ ಪರಿಸ್ಥಿತಿ ಉಂಟಾದ ಚಂದ್ರಶೇಖರ್ ಪ್ರಧಾನ ಮಂತ್ರಿತ್ವದ ಪ್ರಯೋಗದೊಂದಿಗೆ ಅಂತಿಮವಾಗಿ ಅವಸಾನಗೊಂಡಿತಲ್ಲ, ಆಗ ಭಾರತದ ನವೋದಯದ ಆದರ್ಶಗಳನ್ನು ಕುರಿತ ಅಪನಂಬಿಕೆ ಆರಂಭವಾಯಿತು. ಪರ್ಯಾಯ ಆದರ್ಶ–ನಂಬಿಕೆಗಳ ಹುಡುಕಾಟದಲ್ಲಿ ತೊಡಗಿದ ಆ ಸಂದಿಗ್ಧ ಕಾಲದಲ್ಲಿ, ರಾಷ್ಟ್ರ ತನ್ನ ರಾಜಕೀಯ ಒತ್ತಡಗಳಿಂದ ಹೊರ ದಾರಿ ಕಂಡುಕೊಂಡದ್ದು, ದೂರದರ್ಶನದ 'ಪೌರಾಣಿಕ' ಧಾರಾವಾಹಿಗಳ ಮೂಲಕ!

ಅರ್ಥಾತ್, ಸ್ವತಂತ್ರ ಭಾರತದ 'ಸೆಕ್ಯುಲರ್' ರಾಜಕಾರಣ ಉಂಟು ಮಾಡಿದ ಒತ್ತಡಗಳು ಆ ಹೊತ್ತಿಗೆ ಎಷ್ಟು ಸಂಕೀರ್ಣ ಹಾಗೂ ಶಕ್ತಿಯುತವಾಗಿದ್ದುವೆಂದರೆ, ಅದು ಪೋಷಿಸಿ ಬೆಳೆಸಿದ್ದ ರೇಡಿಯೋದಂತಹ ಸರಳ ಮಾಧ್ಯಮದ ಮೂಲಕ ಅವು ವ್ಯಕ್ತವಾಗಲಾರದೇ ಹೋದವು. ಹಾಗಾಗಿ, ಇನ್ನೂ ಹೊಸ ಮಾಧ್ಯಮವಾಗಿ ರಾಷ್ಟ್ರಕ್ಕೆ ಅಷ್ಟು ಪರಿಚಯವಾಗದಿದ್ದ ದೂರದರ್ಶನದ ಗುರಿ ಮತ್ತು ಮಾರ್ಗಗಳನ್ನೇ ಅವು ಬದಲಿಸಿಬೇಕಾಯಿತು! ಇಷ್ಟು ವರ್ಷ ಸೆಕ್ಯುಲರ್ ರಾಜಕಾರಣದ ನೇತೃತ್ವ ವಹಿಸಿದ್ದ ಕಾಂಗ್ರೆಸ್ ಪಕ್ಷದ ನರಸಿಂಹ ರಾಯರ ಪ್ರಧಾನ ಮಂತ್ರಿತ್ವದ ಕಾಲದಲ್ಲೇ ಈ ದೂರದರ್ಶನ ತನ್ನ ಭೌತಿಕ ವ್ಯಾಪ್ತಿಯನ್ನು ಅಪಾರವಾಗಿ ಬೆಳೆಸಿಕೊಂಡಿತಲ್ಲದೆ, ಸೆಕ್ಯುಲರ್ ರಾಜಕಾರಣದ ಅಸ್ತಿವಾರಗಳೇ ಅಲ್ಲಾಡಿಹೋಗುವಂತಹ ರಾಜಕೀಯ ವಾತಾವರಣವನ್ನು ಸೃಷ್ಟಿಸುವಂತಹ ಆಧುನಿಕ ರಾಜಕೀಯ ಸಾಧನವಾಗಿಯೂ ಪರಿವರ್ತಿತವಾಯಿತು. ಈ ಬೆಳವಣಿಗೆಯನ್ನು, ಸ್ಥೂಲವಾಗಿ ನೋಡಿದಾಗ ರಾಷ್ಟ್ರದ ಅವೈದಿಕ ರಾಜಕಾರಣದ ಹವ್ಯಾಸಿ ಪ್ರಯೋಗದಂತೆ ತೋರುತ್ತಿದ್ದ ಕಾಂಗ್ರೆಸ್, ತನ್ನ ರಾಜಕೀಯ ತಾರ್ಕಿಕ ಅಂತ್ಯವನ್ನು

ಕಂಡುಕೊಂಡ ಕಥೆಯನ್ನಾಗಿಯೂ ಗ್ರಹಿಸಬಹುದಾಗಿದೆ. ಅದೇನೇ ಇರಲಿ, ದೂರದರ್ಶನ ಭಾರತದ ರಾಷ್ಟ್ರೀಯ ರಾಜಕಾರಣದ ಒಂದು ಪ್ರಬಲ ಅಂಗವಾಗಿ ಬೆಳೆಯಲಾರಂಭಿಸಿದ ಹೊತ್ತಿನಲ್ಲೇ, ಕಾಕತಾಳೀಯವೆಂಬಂತೆ ಉಪಗ್ರಹ ಟಿ.ವಿ., ಶೀತಲ ಸಮರೋತ್ತರ (ಸೋವಿಯತ್ ಒಕ್ಕೂಟದ ಪತನಾನಂತರದ) ಏಕ ಧೃವ ಜಗತ್ತಿನ (ಅಂತಾರಾಷ್ಟ್ರೀಯ) ರಾಜಕಾರಣದ ಒಂದು ಪ್ರಬಲ ಅಂಗವಾಗಿ ಭಾರತದಲ್ಲಿ ಅವತರಿಸಿತು.

ಇದರಿಂದಾಗಿ ಸರಳವಾಗಿ ಓದುತ್ತ, ಕೇಳುತ್ತ ವಿಕಾಸಗೊಳುತ್ತಿದ್ದ ಸಮಾಜ, ಇದ್ದಕ್ಕಿದ್ದಂತೆ ಎಲ್ಲವನ್ನು 'ಬಣ್ಣ'ದಲ್ಲಿ ನೋಡುತ್ತ ಬೆಳೆಯುವ ಸಮಾಜವಾಗಿ ಪರಿವರ್ತಿತವಾಯಿತು. ಇದರಿಂದಾಗಿ ವೈಯುಕ್ತಿಕ ಹಾಗೂ ಸಾಮಾಜಿಕ ವಿಕಾಸದ ಕೆಲವು ಆಂತರಿಕ ನೆಲೆಗಳೇ–ಕಲ್ಪನೆ, ಪ್ರಶ್ನೆ, ಧ್ಯಾನಶೀಲತೆ, ಪರ್ಯಾಯ ದೃಷ್ಟಿ–ಕಾಣೆಯಾದವು. ಪತ್ರಿಕೆ ಮತ್ತು ರೇಡಿಯೋ, ಪಶ್ಚಿಮದ ಸಂದರ್ಭದಲ್ಲಿ ಪುನರುಜ್ಜೀವನ ಯುಗದ ಮತ್ತು ನಮ್ಮ ಸಂದರ್ಭದಲ್ಲಿ ನವೋದಯ ಯುಗದ ಮಾಧ್ಯಮ ಪ್ರತೀಕಗಳಾಗಿ, ಆ ಯುಗಗಳ ಆಶಯಗಳಿಗನುಗುಣವಾಗಿ ರೂಪುಗೊಂಡಿದ್ದವು. ಭಾರತದಲ್ಲಿ ಪತ್ರಿಕೆಗಳು ಮತ್ತು ರೇಡಿಯೋ ಸಮಾನತೆ, ಸಾಮೂಹಿಕತೆ ಹಾಗೂ ಸರಳತೆಗಳ ನೆಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದವು. ಅಂದರೆ, ಜನಸಾಮಾನ್ಯರೂ ಯಾವುದೇ ಜಾತಿ–ವರ್ಗಗಳ ಭೇದವಿಲ್ಲದೆ ಸಮಾನವಾಗಿ ತಮ್ಮ ಪ್ರತಿಬಿಂಬಗಳನ್ನು ಇವುಗಳಲ್ಲಿ ಕಂಡುಕೊಳ್ಳುವ ಸಾಧ್ಯತೆಗಳು ತೆರೆದಿದ್ದವು. ಆದರೆ ಹೊಸಯುಗದ ಟಿ.ವಿ., ತನ್ನ ಹುಟ್ಟಿನಲ್ಲೇ ಮತ್ತು ತನ್ನ ಸ್ವರೂಪದಲ್ಲೇ ಇವೆಲ್ಲವುಗಳನ್ನು ಧಿಕ್ಕರಿಸುತ್ತಲೇ–ಆ ಹೊತ್ತಿಗೆ ಇದಕ್ಕೆ ಪೂರಕವಾದ ರಾಜಕೀಯ ವಾತಾವರಣವೂ ಸೃಷ್ಟಿಯಾಗಿತ್ತು–ಬೆಳೆಯಿತು. ಇದರಿಂದಾಗಿ ಇಂದು ಅದೊಂದು ಏಕಪಕ್ಷೀಯವಾದ, ಖಾಸಗಿ ಹಿತಾಸಕ್ತಿಗಳ, ಅದನ್ನು ನಡೆಸುವವರ ಮತ್ತು ನೋಡುವವರ ಮಧ್ಯೆ ಅಂತರ್‌ಪ್ರಕ್ರಿಯೆ ಸಾಧ್ಯವೇ ಇಲ್ಲದಂತಹ ಮಾಧ್ಯಮವಾಗಿ ಬೆಳೆದು ನಿಂತಿದೆ. ಅದು ಸರ್ಕಾರದ ಪರೋಕ್ಷ ಅಧೀನದಲ್ಲಿದೆ ಎಂಬ ಕಾರಣಕ್ಕಾಗಿ ಜನತೆಯ ಭಾಗವಹಿಸುವಿಕೆಯ ಸಾಧ್ಯತೆಯಾದರೂ ಇರುವ ದೂರದರ್ಶನ, ಇಂದು ಜಾಗತಿಕ ಟಿ.ವಿ. ಸಾಮ್ರಾಜ್ಯದಲ್ಲಿ ಹೆಚ್ಚೂ ಕಡಿಮೆ ಕಳೆದೇ ಹೋಗಿರುವುದು; ಸ್ವತಃ ಈ ಮಾಧ್ಯಮವೇ ಆಂತರಿಕವಾಗಿ ಯಾವುದೇ ಮಟ್ಟದ ಹಾಗೂ ತೆರನ ಸ್ಥಳೀಯತೆಯ ಮೇಲೆ ಉಳಿಯಲಾಗದ ಮಾಧ್ಯಮವೆಂಬುದನ್ನು ಸಾಬೀತು ಪಡಿಸಿದೆ. ಎಷ್ಟಾದರೂ ಇದು ಜಾಗತಿಕ ಉಪಗ್ರಹ ಸಂಪರ್ಕ ಬೇಡುವ ಮಾಧ್ಯಮವಲ್ಲವೇ?

ಹೀಗೆ ಟಿ.ವಿ. ಇಂದು ಜಾಗತಿಕ ರಾಜಕಾರಣ ಮತ್ತು ಜಾಗತಿಕ ತಂತ್ರಜ್ಞಾನ ಜೋಡಿಯ ಶಿಶುವಾಗಿ, ಜಾಗತಿಕ ಮಾದರಿ ಹಾಗೂ ರೂಪಕಗಳನ್ನು ಸೃಷ್ಟಿಸಿಕೊಂಡಷ್ಟೇ ಬದುಕಬಲ್ಲ ಮಾಧ್ಯಮವಾಗಿದೆ. ಇಂದಿನ ಏಕ ಧೃವ ಜಗತ್ತಿನ ಈ ಮಾದರಿ, ರೂಪಕಗಳಾದರೂ ಹೇಗಿದ್ದಾವು? ಅವು ಎಂತಹ ಘನ ತಾಂತ್ರಿಕತೆ ಅಥವಾ ಕಲಾ ಕೌಶಲ್ಯಗಳನ್ನು ಮೆರೆದರೂ, ಅಂತತಃ ಜಾಗತೀಕರಣದ ಜಾಹೀರಾತುಗಳು ಮಾತ್ರ ಆಗಿರಬಲ್ಲವು. ಹಾಗಾಗಿಯೇ ಇಂದು ಟಿ.ವಿ.ಗಳಲ್ಲಿ ಕಾರ್ಯಕ್ರಮ ಹಾಗೂ ಜಾಹೀರಾತುಗಳು

ಅಭಿನ್ನವೆಂಬಂತೆ, ಔಚಿತ್ಯ ಪ್ರಜ್ಞೆಯೆಂಬುದೇ ಇಲ್ಲದಂತೆ ಮಿಶ್ರಗೊಳ್ಳುತ್ತ, ಒಂದು ಮಾಧ್ಯಮ ಮಾಯಾ–ಪ್ರತಿ–ಪ್ರಪಂಚವೇ ಸೃಷ್ಟಿಯಾಗಿದೆ. ಈ ಪ್ರತಿ ಪ್ರಪಂಚವೇ ಮೂಲ ಪ್ರಪಂಚದ ತರ್ಕವನ್ನು ನಿರ್ಧರಿಸುವಷ್ಟರ ಮಟ್ಟಿಗೆ! ಇಷ್ಟು ಹೇಳಿದ ಮೇಲೆ ಟಿ.ವಿ.ಯಿಂದ ಸಮಾಜಕ್ಕಾಗುತ್ತಿರುವ ನಷ್ಟಗಳನ್ನು ಪ್ರತ್ಯೇಕವಾಗಿ ದೃಷ್ಟಾಂತ ಅಥವಾ ವಿವರಗಳ ಮೂಲಕ ಹೇಳುವ ಅಗತ್ಯವಿದೆಯೇ? ಆದರೂ, ಪ್ರಪಂಚದೊಳಗಿದ್ದ ಮನೆಯೊಳಕ್ಕೆ – ಭಾರತದ ಮಟ್ಟಿಗೆ ದಿಢೀರನೆ–ಪ್ರಪಂಚವನ್ನೇ ತಂದಿಡುವ ಮೂಲಕ ಟಿ.ವಿ. ಸೃಷ್ಟಿಸಿರುವ ತಾಂತ್ರಿಕ ಬೆರಗಿಗೆ ಮರುಳಾಗಿ ನಾವು ಅದರ ಲಾಭಗಳು ಆತ್ಯಂತಿಕವಾಗಿ ನಷ್ಟಗಳೂ ಆಗುತ್ತಿರುವ ವಿಪರ್ಯಾಸವನ್ನು ಗುರುತಿಸದೇ ಹೋಗುವ ಸಾಧ್ಯತೆ ಇರುವುದರಿಂದ, ಕೆಲವಾದರೂ 'ವಾಸ್ತವಿಕ' ವಿವರಗಳನ್ನು ಇಲ್ಲಿ ನೀಡುವುದು ಉಚಿತವೆನ್ನಿಸುತ್ತದೆ.

ಹಾಗೆ ನೋಡಿದರೆ, ಲಾಭಗಳು ಅನೇಕವಿರುವುದರಿಂದಲೇ ಟಿ.ವಿ. ಕೈಗಾರಿಕೆ ಇಂದು ಸಮೃದ್ಧವಾಗಿ ಬೆಳೆಯುತ್ತಿರುವುದು. ಕನ್ನಡಕ್ಕೇ ಮೂರು ಸುದ್ದಿ ವಾಹಿನಿಗಳೂ ಸೇರಿದಂತೆ, ಹತ್ತು ಟಿ.ವಿ. ವಾಹಿನಿಗಳಿವೆ.(ಇವೀಗ–೨೦೧೬ರ ಹೊತ್ತಿಗೆ– ದುಪ್ಪಟಾಗಿವೆ) ಒಟ್ಟಾರೆ ಇಂದು ಭಾರತದ ಒಂದು ಸಾಮಾನ್ಯ ಪಟ್ಟಣದಲ್ಲಿಯೂ ಸುಮಾರು ನೂರು ವಾಹಿನಿಗಳು ೨೪ ತಾಸುಗಳೂ ಲಭ್ಯವಿವೆ ಎಂದರೆ, ಲಾಭಗಳು ನೋಡುವವರಿಗಷ್ಟೇ ಅಲ್ಲದೆ, ಅವನ್ನು ನಡೆಸುತ್ತಿರುವವರಿಗೂ ಇದೆ ಎಂದೇ ಅರ್ಥ. ಆದರೆ ಈ ಲಾಭಗಳು ಸೃಷ್ಟಿಸುತ್ತಿರುವ ಮನೆ ಮತ್ತು ಸಮಾಜ ಎಂತಹವು ಎಂಬುದರ ಆಧಾರದ ಮೇಲೇ ಈ ಲಾಭಗಳ ಮೌಲ್ಯೀಕರಣವನ್ನು ಮಾಡಬೇಕಾಗುತ್ತದೆ. ಅಂದರೆ, ೨೪ ತಾಸುಗಳ ಮನರಂಜನೆ ಅಥವಾ ಮಾಹಿತಿಯನ್ನು ಪಡೆಯುವ ಅಗತ್ಯ ಹಾಗೂ ತಡೆದುಕೊಳ್ಳುವ ಶಕ್ತಿ(ಅಥವಾ ಅರ್ಹತೆ?) ನಮ್ಮ ಮನೆಗಳು ಹಾಗೂ ಸಮಾಜಕ್ಕಿದೆಯೇ ಎಂಬುದು ಇಲ್ಲಿ ಬಹು ಮುಖ್ಯ ಪ್ರಶ್ನೆಯಾಗುತ್ತದೆ. ಇದನ್ನು ಒಂದು ಸಣ್ಣ ಉದಾಹರಣೆಯ ಮೂಲಕವೇ ವಿವರಿಸುವುದಾದರೆ, ಸಣ್ಣ ಮಕ್ಕಳಿಗೆ ತುಂಡು ಬಟ್ಟೆ ಉಡಿಸಿ ವಕ್ರವಾಗಿ ಕುಣಿಸಿ ಅಥವಾ ಅವರ ಬಾಯಲ್ಲಿ ಉತ್ಕಟ ಪ್ರಣಯ ಗೀತೆಗಳನ್ನು ಹಾಡಿಸಿ; ಪ್ರತಿಭಾ ಸ್ಪರ್ಧೆ, ಪ್ರೋತ್ಸಾಹಗಳ ಹೆಸರಲ್ಲಿ ಒಂಚೂರೂ ಎಗ್ಗಿಲ್ಲದೆ, ಸಹಜವಾಗಿ ಆನಂದಿಸುವ ಮಾನಸಿಕತೆಯನ್ನು ನಮ್ಮ ತಂದೆ ತಾಯಂದಿರಲ್ಲಿ ಈ ವಾಹಿನಿಗಳು ಉಂಟು ಮಾಡಿವೆ. ಈ ಸಂಗತಿಯ ಹಿಂದಿನ ಸೂಕ್ಷ್ಮ ನೈತಿಕ ಪ್ರಶ್ನೆಯು ಇವುಗಳ ಲಾಭದ ಇನ್ನೊಂದು ಮುಖವನ್ನೂ ಸೂಚಿಸುತ್ತಿದೆ ಎಂಬುದನ್ನೂ ಗಮನಿಸಿಯೇ, ನಾವು ಇಂದಿನ ಈ ಮಾಧ್ಯಮದ ಒಟ್ಟಾರೆ ಮೌಲ್ಯೀಕರಣವನ್ನು ಮಾಡಬೇಕಾಗುತ್ತದೆ.

ಮೊದಲು, ವಾಹಿನಿಗಳ ಈ ತೆರೆನ ಸಮೃದ್ಧಿ, ಅವು ಹುಟ್ಟಿಸಿರುವ ಸ್ಪರ್ಧಾತ್ಮಕತೆ ಯಿಂದಾಗಿಯೇ ಅವುಗಳ ಮಾಧ್ಯಮ ಗುಣಮಟ್ಟವನ್ನು ಹೇಗೆ ಸರಾಸರಿಗೊಳಿಸಿದೆ ಹಾಗೂ ಅವುಗಳ ವೃತ್ತಿಪರತೆ ಮತ್ತು ದೃಷ್ಟಿ ಕೇಂದ್ರಗಳನ್ನು ಎಷ್ಟರ ಮಟ್ಟಿಗೆ ವಿಚಲಿತಗೊಳಿಸಿದೆ ಎಂಬುದನ್ನೂ ನಾವು ಗಮನಿಸಬೇಕು. ಈಗ ಒಮ್ಮೆಗೇ ತೆರೆಯ ಮೇಲೆ ಮುಖ್ಯ ಚಿತ್ರ, ಅದಕ್ಕೆ ಸಂಬಂಧಪಟ್ಟ ಧ್ವನಿ, ಪರಿಣಾಮ ಸಂಗೀತ, ಎರಡೂ–ಒಮ್ಮೊಮ್ಮೆ ಮೂರೂ–

ಕೆಳ ಮೂಲೆಗಳಲ್ಲಿ(ನಾಲ್ಕನೆಯದರಲ್ಲಿ ವಾಹಿನಿಯ ಲಾಂಛನವಿರುತ್ತದಲ್ಲ!) ಸಣ್ಣ ಚಿತ್ರ ಸಹಿತ ಜಾಹೀರಾತು(ಅದೂ ಚಲನೆಯಲಿದ್ದು ಕಣ್ಣನ್ನೂ, ಮನಸ್ಸನ್ನೂ ಕುಕ್ಕುತ್ತಿರುತ್ತದೆ!) ಮತ್ತು/ಅಥವಾ ದೈನಿಕ ಮಾಹಿತಿ, ಕೆಳಗೆ ಅಕ್ಷರ ರೂಪದ ಜಾಹೀರಾತುಗಳು, ಅದರ ಕೆಳಗೆ ದಿನದ ಇತರ ವಾರ್ತೆಯ ಮುಖ್ಯಾಂಶಗಳು–ಇಷ್ಟನ್ನೂ ಕೊಡುವ ವಾಹಿನಿಗಳು ನೋಡುಗನನ್ನು ಏನೆಂದು ಭಾವಿಸಿವೆ, ಅವನಿಂದ ಎಂತಹ ಪ್ರತಿಸ್ಪಂದನವನ್ನು ನಿರೀಕ್ಷಿಸುತ್ತವೆ ಮತ್ತು ಅವು ತಮ್ಮ ಮಾಧ್ಯಮ ಉದ್ದೇಶಗಳ ಬಗ್ಗೆ ಎಷ್ಟು ಪ್ರಾಮಾಣಿಕವಾಗಿವೆ ಅಥವಾ ಗಂಭೀರವಾಗಿವೆ ಎಂಬುದನ್ನೂ ನಾವು ಯೋಚಿಸಬೇಕು. ಯಾವುದೂ ಒಂದೇ ವೀಕ್ಷಣೆಗೆ ನಮ್ಮ ಗ್ರಹಿಕೆಗೆ ಪೂರ್ಣ ಸಿಗದೆ ಅದರ ಪೂರ್ಣ ಗ್ರಹಿಕೆಗಾಗಿ ನೋಡಿದ್ದನ್ನೇ ಮತ್ತೆ ಮತ್ತೆ ನೋಡುವಂತೆ ಒತ್ತಾಯಿಸುವುದೇ ಇದರ ಉದ್ದೇಶವೇ? ನಮ್ಮ ಸುದ್ದಿ ವಾಹಿನಿಗಳಲ್ಲಿ 'ಚುಂಚನ ಕಟ್ಟೆಯಲ್ಲಿ ರಥೋತ್ಸವ ಆರಂಭವಾಗಿದೆ' ಎಂಬುದೂ 'ಸುದ್ದಿ ಸ್ಫೋಟ'ವಾಗುವುದೆಂದರೆ, ಅವು ಸುದ್ದಿಯನ್ನು ಯಾವ ಮಟ್ಟಕ್ಕೆ ಇಳಿಸಿರಬೇಕು, ಯೋಚಿಸಿ! ಮಾಹಿತಿ ನೀಡಬೇಕಾದ ಸುದ್ದಿ, ಜನಪ್ರಿಯತೆಯ ವಾಣಿಜ್ಯಕ್ಕೆ ಸಿಕ್ಕಿ, ಮನರಂಜನೆಯ 'ಸ್ಟೋರಿ'ಯಾಗಿರುವುದರ ದುರಂತವಿದು. ಹಾಗಾಗಿಯೇ ಮೊನ್ನೆ ಕನ್ನಡದ ವಾಹಿನಿಯೊಂದು, ಸುದ್ದಿಗೆ ಹೊಸ ರೂಪ ಕೊಡಬಲ್ಲ ಹಾಗೂ ಅದನ್ನು 'ವಾಹ್' ಎನ್ನುವ ರೀತಿಯಲ್ಲಿ ಪ್ರಸ್ತುತ ಪಡಿಸಬಲ್ಲ ಸುದ್ದಿಗಾರರ ತಲಾಷ್‌ನಲ್ಲಿರುವುದಾಗಿ ಜಾಹೀರಾತು ನೀಡುತ್ತಾ, ತನ್ನ ವೃತ್ತಿಪರತೆಯನ್ನು ಪುನರ್‌ನಿರೂಪಿಸಿಕೊಳ್ಳುತ್ತಿದ್ದುದು ಕುತೂಹಲ ಹುಟ್ಟಿಸುವಂತಿತ್ತು!

ಇನ್ನು, ವಿಜ್ಞಾನ ಮತ್ತು ಕ್ರೀಡಾ ವಾಹಿನಿಗಳು ಉಪಯುಕ್ತವಾಗಿ ಕಾಣುತ್ತಿದ್ದರೂ, ಅವುಗಳ ಹಣಕಾಸು ಮತು ಅವುಗಳ ಕಾರ್ಯಕ್ರಮ ಪ್ರಸ್ತುತೀಕರಣದ ವ್ಯಾಕರಣ ಹಾಗೂ ವಾಕ್ಯರಚನೆಗಳು, ಸುದ್ದಿ ಮತ್ತು ಮನರಂಜನೆಯ(ಇವು ಇಂದು ಬೇರೆ ಬೇರೆಯೇ?) ಜಾಗತಿಕ ಟ.ವಿ. ಸಾಮ್ರಾಜ್ಯ ರೂಢಿಸಿ ಕೊಟ್ಟಿರುವ ವ್ಯಾಕರಣ ಹಾಗೂ ವಾಕ್ಯರಚನೆಗಳನ್ನೇ ಅವಲಂಬಿಸಿ, ಅನುಸರಿಸುತ್ತಿವೆ. ಆದುದರಿಂದ, ಈ ಉಪಯುಕ್ತತೆಯೂ ದೀರ್ಘಕಾಲಿಕ ದೃಷ್ಟಿಯಿಂದ–ಆಧುನಿಕ ನಾಗರೀಕತೆ ತನ್ನ ಅಂತಿಮ ಗುರಿ ಎಂದು ಹೇಳಿಕೊಂಡ ವ್ಯಕ್ತಿ ಸ್ವಾಯತ್ತತೆಯ ದೃಷ್ಟಿಯಿಂದ–ಅನುಮಾನಾಸ್ಪದವೇ.

ಇಂತಹ ಸಂದಿಗ್ಧ ಪರಿಸ್ಥಿಯಲ್ಲಿ, ಟಿ.ವಿ.ಯನ್ನು, ಅಂತರ್ಜಾಲ(ಇಂಟರ್‌ನೆಟ್)ದ ವಿಸ್ತರಣೆಯ ಮೂಲಕ ಪ್ರಜಾಸತ್ತಾತ್ಮಕವಾಗಿ ಪಳಗಿಸಲು ಸಾಧ್ಯ ಎಂದು ಪಾಶ್ಚಾತ್ಯ ಸಮೂಹ ಮಾಧ್ಯಮ ತಜ್ಞರು ಇತ್ತೀಚೆಗೆ ಹೇಳತೊಡಗಿದ್ದಾರೆ. ಅವರ ಪ್ರಕಾರ ಅಂತರ್ಜಾಲಕ್ಕೆ ವೈಯುಕ್ತಿಕ ಹಾಗೂ ಸಾಮೂಹಿಕ ಪ್ರಯತ್ನಗಳೆರಡರ ನೆಲೆಯಲ್ಲೂ ಸುಲಭ ಪ್ರವೇಶ ಸಾಧ್ಯವಿದೆ. ಹಾಗಾಗಿ, ಇಂತಹ ಪ್ರವೇಶಗಳ ಮೂಲಕ ಸಾಮಾನ್ಯ ಜನತೆ ಕೂಡಾ ಭಾಗವಹಿಸಬಲ್ಲ ವೆಬ್‌ಸೈಟ್‌ಗಳು ಸ್ಥಾಪನೆಯಾಗಿ, ಟಿ.ವಿ.ಯ ಕಾರ್ಪೊರೇಟ್‌ಶಾಹಿ ರಾಜಕಾರಣ ದುರ್ಬಲಗೊಳ್ಳುತ್ತದೆ ಎಂಬುದು ಇವರ ನಿರೀಕ್ಷೆ. ಆದರೆ ಭಾರತದಂತಹ ಅಭಿವೃದ್ಧಿಶೀಲ ಹಾಗೂ ಕಂಪ್ಯೂಟರ್ ಅನಕ್ಷರಸ್ಥ ದೇಶದಲ್ಲಿ

ಅಂತರ್ಜಾಲದ ವ್ಯಾಪ್ತಿ ಹಾಗೂ ಬಳಕೆ ನಿಕಟ ಭವಿಷ್ಯದಲ್ಲಂತೂ ಟಿ.ವಿ.ಜಾಲದ ಎದುರು ನಗಣ್ಯವಾಗಿಯೇ ಉಳಿಯಲಿದೆ. ಮುಂದಿನ ದಿನಗಳಲ್ಲಿ ಅಂತರ್ಜಾಲದ ವ್ಯಾಪ್ತಿ ಮತ್ತು ಬಳಕೆ ಗಣನೀಯವಾಗಿ ಹೆಚ್ಚುವುದೆಂದು ಭಾವಿಸೋಣ. ಆದರೂ, ಭಾರತೀಯ ಭಾಷೆಗಳಲ್ಲಿ ಅಭಿವ್ಯಕ್ತಿ ಸುಲಭ ಸಾಧ್ಯವಿರುವ ಸಾಫ್ಟ್‌ವೇರ್ ಆವಿಷ್ಕಾರವಾಗಿ ಜನಪ್ರಿಯವಾಗುವವರೆಗೂ (ಇದಾಗದಂತೆ ತಡೆದಿರುವುದೇ ಟಿ.ವಿ.ಸಾಮ್ರಾಜ್ಯಶಾಹಿಯ ಹಿಂದಿರುವ ಹಿತಾಸಕ್ತಿಯೇ ಆಗಿರುವಾಗ, ಇದು ಸಾಧ್ಯವೇ ಎಂಬ ಪ್ರಶ್ನೆಯೂ ಇದೆ), ಅಂತರ್ಜಾಲ ಕೂಡಾ ಭಾರತದ ಮಟ್ಟಿಗೆ ಪ್ರಜಾಸತ್ತಾತ್ಮಕ ಅಂತರ್‌ಪ್ರಕ್ರಿಯೆ ಸಾಧ್ಯವಾಗುವಂತಹ ಸಮೂಹ ಮಾಧ್ಯಮವೆನಿಸಿಕೊಳ್ಳಲಾರದು.

ಹಾಗಾದರೆ, ಟಿ.ವಿ. ಸಾಮ್ರಾಜ್ಯಶಾಹಿಯಿಂದ ನಮಗೆ ಬಿಡುಗಡೆಯೇ ಇಲ್ಲವೆ? ಜಾಗತಿಕ ರಾಜಕಾರಣದೊಂದಿಗೆ ನಾವು ಜೋಡಿಸಿಕೊಂಡಿರುವ ರೀತಿ ನೀತಿಗಳನ್ನು ಬದಲಿಸಿಕೊಂಡರೆ ಮಾತ್ರ ಟ.ವಿ., ವಿಕೇಂದ್ರೀಕೃತ ರಾಜಕಾರಣದ ಭಾಗವಾಗಿ ಪ್ರಜಾಸತ್ತಾತ್ಮಕ ಸಮೂಹ ಮಾಧ್ಯಮವಾಗಿ ರೂಪುಗೊಳ್ಳುವ ಸಾಧ್ಯತೆ ಇದೆ. ಇಂತಹ ವಿಕೇಂದ್ರೀಕತ ರಾಜಕಾರಣ ಮಾತ್ರ ಟಿ.ವಿ.ಯ ಸದ್ಯದ ಜಾಗತಿಕ ಮಾದರಿಗಳನ್ನು ವಿಸರ್ಜಿಸಿ, ಅದು ಪ್ರಾದೇಶಿಕ ಮಾದರಿಗಳನ್ನು ಆವಿಷ್ಕರಿಸಿಕೊಳ್ಳುವಂತೆ ಒತ್ತಾಯಿಸಬಲ್ಲುದು. ಆಗ ಮಾತ್ರ ಸಾಮುದಾಯಿಕ ಬಳಕೆಯ ತಂತ್ರಜ್ಞಾನ ಹಾಗೂ ಬಂಡವಾಳ ಸಾಧ್ಯತೆಯುಳ್ಳ ಟಿ.ವಿ.ಯ ಕಾರ್ಯ ಮಾದರಿಗಳು ಗೋಚರವಾಗಬಲ್ಲವೇನೋ! ಹಾಗಾಗಿ ನಾವು ಮುಂದಿನ ದಿನಗಳಲ್ಲಿ ಎಂತಹ ರಾಜಕಾರಣವನ್ನು ಮಾಡಲು ಮುಂದಾಗುತ್ತೇವೆ ಎಂಬುದರ ಮೇಲೆ ನಮ್ಮ ಮತ್ತು ಟಿ.ವಿ. ನಡುವಣ ಸಂಬಂಧ ನಿರ್ಧರಿತವಾಗುತ್ತದೆ ಎಂದು ಸದ್ಯಕ್ಕೆ ಹೇಳಬಹುದಾಗಿದೆ.

(೨೦೦೮)

■

ಅನುಬಂಧಗಳು

ಅನುಬಂಧ–೧

ನಾನೊಂದು ಕಣ್ಣಿನ ಚಿಕಿತ್ಸೆ ಮಾಡಿಸಿಕೊಂಡೆ...
(ನನ್ನ ಕಣ್ಣಿನ ಶಸ್ತ್ರ ಚಿಕಿತ್ಸಕರಿಗೊಂದು ಪತ್ರ)

ಇಷ್ಟು ಅತ್ಯಾಧುನಿಕ ಸಾಧನ– ಸಲಕರಣೆ ಹಾಗೂ ತಂತ್ರ–ಕೌಶಲ್ಯಗಳನ್ನು ಸಾಧಿಸಿಕೊಂಡಿರುವ ಈ ಕ್ಷೇತ್ರ ತಾನು ಸಂದೇಹಕ್ಕೆಡೆಯಿಲ್ಲದಂತೆ ಕಾರ್ಯ ನಿರ್ವಹಿಸಲು ಬೇಕಾದ ಜ್ಞಾನ–ತಂತ್ರಜ್ಞಾನವನ್ನೇಕೆ ಪಡೆಯದಾಗಿದೆ? ಉದಾಹರಣೆಗೆ, ನನಗೆ ಮಾಡಿದ ಶಸ್ತ್ರಚಿಕಿತ್ಸೆಯನ್ನು ಮಾಡುವ ಮುನ್ನವೇ, ನನ್ನ ಅಕ್ಷಿಪಟಲಕ್ಕೆ ಅಗತ್ಯ ರಕ್ತ ಪೂರೈಕೆ ಆಗುತ್ತಿದೆ ಎಂದು ಖಚಿತಪಡಿಸಿಕೊಳ್ಳುವ ಜ್ಞಾನ– ತಂತ್ರಜ್ಞಾನವನ್ನೇಕೆ ಪಡೆದಿಲ್ಲ? ಹಾಗೆ ಪಡೆಯದೆ, ಸಾಮಾನ್ಯ ಪ್ರಜೆಯೊಬ್ಬನನ್ನು ಅವನ ಅಸಹಾಯಕ ಸ್ಥಿತಿಯಲ್ಲಿ, ತುಂಬಾ ದೊಡ್ಡ ಪ್ರಮಾಣದಲ್ಲಿ (ಕ್ಷಮಿಸಿ, ನಿಮಗೆ ದೊಡ್ಡ ಪ್ರಮಾಣ ಅನ್ನಿಸದಿರಬಹುದು) ಹಣ ಖರ್ಚು ಮಾಡಲು ಪ್ರೇರೇಪಿಸುವುದು ವೃತ್ತಿ ಸಂಹಿತೆಯ ದೃಷ್ಟಿಯಿಂದಲಾದರೂ ಸರಿ ಎನ್ನಿಸುವುದೇ? ಹೀಗೆ, ಆಧುನಿಕ ವೈದ್ಯಕೀಯ ಕ್ಷೇತ್ರವು, ಶೇ. ೮೦ರ ಯಶಸ್ಸಿನ ಹೆಸರಿನಲ್ಲಿ ನಡೆಸಿರುವುದು ಒಂದರ್ಥದಲ್ಲಿ ಜೂಜಾಟವೇ ಆಗಿದೆಯಲ್ಲವೇ?

ಪ್ರಿಯ ಡಾ॥ ______ ಅವರಲ್ಲಿ,

ವಂದನೆಗಳು. ನನ್ನ ನೆನಪಿದೆ ಎಂದು ಭಾವಿಸುತ್ತೇನೆ. ನೀವು ೨.೩.೨೦೧೧ರಂದು ತಮ್ಮ '– ಕಣ್ಣಿನ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ'ದಲ್ಲಿ ನನ್ನ ಬಲಗಣ್ಣಿನ ಶಸ್ತ್ರ ಚಿಕಿತ್ಸೆ ಮಾಡಿದಿರಿ. ಬಹು ಕಾಲದ ಸಕ್ಕರೆ ಕಾಯಿಲೆಯಿಂದ ಉಂಟಾದ ರೆಟಿನೋಪತಿ ಮತ್ತು ಅದಕ್ಕಾಗಿ ಶಿವಮೊಗ್ಗದ ಪ್ರಸಿದ್ಧ ನೇತ್ರ ತಜ್ಞರೊಬ್ಬರು ಎರಡು ಬಾರಿ ಮಾಡಿದ ಲೇಸರ್ ಚಿಕಿತ್ಸೆಯ ನಂತರ ಕಂಡುಬಂದಿದ್ದ ತೀವ್ರ ದೃಷ್ಟಿದೋಷಕ್ಕಾಗಿ ನೀವು ಈ ವಿಶೇಷ ಶಸ್ತ್ರಚಿಕಿತ್ಸೆ ಮಾಡಿದಿರಿ. ಆದರೆ ಅದು ೮.೪.೨೦೧೧ರಂದು ನಡೆಸಿದ ಪರೀಕ್ಷೆಯ ನಂತರ ನೀವೇ ಹೇಳಿದಂತೆ ಫಲ ನೀಡಿಲ್ಲ. ಅಂದರೆ, ಶಿವಮೊಗ್ಗದ ನೇತ್ರ ತಜ್ಞರು

ಲೇಸರ್ ಚಿಕಿತ್ಸೆ ನಡೆಸುವ ಮುನ್ನ ಸಾಕಷ್ಟು ಪ್ರಮಾಣದಲ್ಲಿಯೇ ಇದ್ದ ದೃಷ್ಟಿ ಸ್ಪಷ್ಟತೆಯೂ ಈಗ ನನಗೆ ಮರಳಿ ಬಂದಿಲ್ಲ. ಇದಕ್ಕೆ, ನನ್ನ ಅಕ್ಷಿಪಟಲಕ್ಕೆ ಅಗತ್ಯ ರಕ್ತ ಪೂರೈಕೆ ಆಗುತ್ತಿಲ್ಲದಿರುವುದೇ ಕಾರಣ ಎಂದು ನೀವು ಸ್ಪಷ್ಟನೆ ನೀಡಿರುವಿರಿ.

ನೀವು ನಮ್ಮ ನಡುವಿನ ಕೆಲವೇ ಅತ್ಯುತ್ತಮ ಹಾಗೂ ವಿಶೇಷ ತಾಂತ್ರಿಕ ಪರಿಣತಿಯುಳ್ಳ ನೇತ್ರ ತಜ್ಞರೆಂದು ಹೇಳಿದ ನನ್ನ ಹತ್ತಿರದ ಬಂಧು ಡಾ॥ ಸಿ.ಆರ್. ಚಂದ್ರಶೇಖರ್ ಅವರ ಸಲಹೆಯ ಮೇರೆಗೆ, ಅವರೊಂದಿಗೇ ನಿಮ್ಮ ಬಳಿ ಬಂದೆವು. ನೀವೂ ತಮ್ಮ ಹವಾ ನಿಯಂತ್ರಿತ ಪರೀಕ್ಷಾ ಕೊಠಡಿಯಲ್ಲಿ (ನಂತರದ ಪರೀಕ್ಷೆಗಳಿಗೆ ಬಂದಾಗ ಏಕೋ ಈ ಹವಾ ನಿಯಂತ್ರಣ ವ್ಯವಸ್ಥೆ ಕೆಲಸ ಮಾಡುತ್ತಿರಲಿಲ್ಲ!) ಸಾಕಷ್ಟು ಆಸ್ಥೆಯಿಂದ ನನ್ನ ಕಣ್ಣುಗಳನ್ನು ಹಲವು ರೀತಿಯ ಪರೀಕ್ಷೆಗಳಿಗೆ ಒಳಪಡಿಸಿ, ಈ ವಿಶೇಷ ಶಸ್ತ್ರ ಚಿಕಿತ್ಸೆಯ ಅಗತ್ಯ ಹೇಳಿದಿರಿ. ಹಾಗೇ ಶೇ.೮೫ರಷ್ಟು ಪ್ರಕರಣಗಳಲ್ಲಿ ಇದು ಯಶಸ್ವಿಯಾಗಿರುವುದಾಗಿಯೂ ತಿಳಿಸಿದಿರಿ. ನೀವು ಮಾರನೇ ದಿನವೇ ಶಸ್ತ್ರಚಿಕಿತ್ಸೆ ಮಾಡುವುದಾಗಿ ಹೇಳಿದರೂ, ನಾನು ಅದಕ್ಕೆ ಸಿದ್ಧನಾಗಿ ಬಂದಿರಲಿಲ್ಲವಾದ್ದರಿಂದ ಶಸ್ತ್ರಚಿಕಿತ್ಸೆಯನ್ನು ಒಂದು ವಾರ ಮುಂದೂಡಲು ಕೋರಿದೆ.

ನಿಮ್ಮನ್ನು ಭೇಟಿ ಮಾಡಿದ ನಂತರ ನನ್ನನ್ನು ಕರೆದೊಯ್ದ ನಿಮ್ಮ ಆಸ್ಪತ್ರೆಯ 'ಸಲಹಾ' ವಿಭಾಗದವರು 'ಎಲ್ಲ' ಲೆಕ್ಕ ಹಾಕಿ ಈ ಶಸ್ತ್ರಚಿಕಿತ್ಸೆಯ ಒಟ್ಟು ಖರ್ಚು ಅರವತ್ತು ಸಾವಿರ ರೂಪಾಯಿಗಳೆಂದು ಹೇಳಿದಾಗ ನಾನು ಗಾಬರಿಗೊಂಡೆ. ಶೇ. ೧೫ರ ವೈಫಲ್ಯದ ಸಾಧ್ಯತೆಯೂ ಇರುವ ಈ ಶಸ್ತ್ರಚಿಕಿತ್ಸೆಯ ಮೇಲೆ ನಿವೃತ್ತ ಸರ್ಕಾರಿ ನೌಕರನಾದ ನಾನು ಅಷ್ಟೊಂದು ದೊಡ್ಡ ಮೊತ್ತದ ಹಣವನ್ನು ಖರ್ಚು ಮಾಡುವುದು ಸಾಧುವೇ ಎಂಬ ಬಗ್ಗೆ ನಿಮ್ಮೊಂದಿಗೆ ಮಾತಾಡಿ ಇನ್ನಷ್ಟು ವಿವರ ಪಡೆಯಲು ಕೂಡಲೇ ಯತ್ನಿಸಿದೆ. ಆದರೆ ನೀವು 'ಬ್ಯುಸಿ'ಯಾಗಿರುವುದರಿಂದ ಮಾತಾಡಲು ಸದ್ಯಕ್ಕೆ ಸಾಧ್ಯವಿಲ್ಲವೆಂದು ನಿಮ್ಮ 'ಸಲಹಾ' ವಿಭಾಗದ ಸಹಾಯಕರು ತಿಳಿಸಿದರು! ನಂತರ ಡಾ॥ ಸಿ.ಆರ್. ಚಂದ್ರಶೇಖರ್, ನಿಮ್ಮ ಶಸ್ತ್ರಚಿಕಿತ್ಸಾ ಪರಿಣತಿಯ ಬಗ್ಗೆ ಒಳ್ಳೆಯ ಮಾತುಗಳನ್ನಾಡಿ ಅಳುಕುವ ಅಗತ್ಯವಿಲ್ಲ ಎಂದು ಹೇಳಿದಾಗ, ಓದು– ಬರಹಗಳನ್ನೇ ಬದುಕಿನ ಮುಖ್ಯ ಚಟುವಟಿಕೆಗಳನ್ನಾಗಿ ಹೊಂದಿರುವ ನಾನು ಆದದ್ದು ಆಗಲಿ ಎಂದು ಶಸ್ತ್ರಚಿಕಿತ್ಸೆಗೆ ನಿರ್ಧರಿಸಿದೆ.

ಶಸ್ತ್ರ ಚಿಕಿತ್ಸೆ ೨ರಂದು 'ಯಶಸ್ವಿ'ಯಾಗಿ ನಡೆದು, ಒಂದರೆಡು ದಿನಗಳ ನಿಮ್ಮ ಸಿಬ್ಬಂದಿಯ ಚಿಕಿತ್ಸೋತ್ತರ ಉಪಚಾರಗಳ ನಂತರ ನಿಮ್ಮ ಗೈರು ಹಾಜರಿಯಲ್ಲಿ ಆಸ್ಪತ್ರೆಯ ಇತರ ವೈದ್ಯರು ನನ್ನನ್ನು ಪರೀಕ್ಷಿಸಿ ನನಗೆ ಕಪ್ಪು ಕನ್ನಡಕ ಹಾಕಿ ಊರಿಗೆ ಕಳಿಸಿ ಮತ್ತೆ ನಿಗದಿತ ದಿನಾಂಕದಂದು ಬರಲು ತಿಳಿಸಿದರು. ಅದರಂತೆ ೮.೪.೨೦೧೧ರಂದು ಬಂದಾಗ ನೀವು ಪರೀಕ್ಷೆ ಮಾಡಿ ಖಚಿತಪಡಿಸಿದಂತೆ ನಮ್ಮ ಮತ್ತು ನಿಮ್ಮ ನಿರೀಕ್ಷೆಗೆ ವಿರುದ್ಧವಾಗಿ ಶಸ್ತ್ರಚಿಕಿತ್ಸೆ ತನ್ನ ಪರಿಣಾಮವನ್ನು ತೋರುವಲ್ಲಿ ವಿಫಲವಾಗಿತ್ತು. ಅಂದು ನೀವು ಅದನ್ನು ಹೇಳಿದಾಗ ನನಗೆ ಮತ್ತು ನನ್ನ ಪತ್ನಿಗೆ ಆದ ಆಘಾತ, ನಿರಾಸೆ ಮತ್ತು

ಬೇಸರವನ್ನು ನಾವು ತೋರ್ಪಡಿಸದಿದ್ದಲ್ಲಿ, ಅದಕ್ಕೆ ಕಾರಣ; ನಿಮ್ಮ ಬಗ್ಗೆ ನಾವು ಬೆಳೆಸಿಕೊಂಡಿದ್ದ ವಿಶ್ವಾಸ ಮತ್ತು ಗೌರವ ಮಾತ್ರ. ನೀವು ಅಂದು ನಮಗಾದ ಈ ಆಘಾತ, ನಿರಾಸೆ ಮತ್ತು ಬೇಸರಗಳನ್ನು ಅರ್ಥ ಮಾಡಿಕೊಂಡವರಂತೆ, ನನ್ನ ಎಡಗಣ್ಣಿನ ದೃಷ್ಟಿ ರಕ್ಷಣೆಯ ಬಗ್ಗೆ ಕಾಳಜಿ ತೋರಿದಿರಿ, ಒಳ್ಳೆಯ ಕನ್ನಡಕ ನೀಡುವ ಮಾತಾಡಿದಿರಿ. ನನ್ನ ಪತ್ನಿಯ ಆತಂಕ, ಅಸಮಧಾನಗಳ ನಡುವೆಯೂ ನೀವು ಲೇಸರ್ ಚಿಕಿತ್ಸೆಯ ಸಲಹೆ ನೀಡಿದಿರಿ. ನಾನು ಒಪ್ಪಿದ ನಂತರ ಎಡಗಣ್ಣಿಗೆ ನೀವೇ ಲೇಸರ್ ಮಾಡಿದಿರಿ. ಸಂತೋಷ. ಅದಕ್ಕಾಗಿ ನಾವು ನಿಮಗೆ ಕೃತಜ್ಞರು.

ಆದರೆ, ಈ ಎಲ್ಲ ಅನುಭವದ ನಂತರ ಸಮಾಜದ ಓರ್ವ ಹಿರಿಯ ಮತ್ತು ಪ್ರಜ್ಞಾವಂತ ಪ್ರಜೆಯಾಗಿ ನನ್ನಲ್ಲಿ ಕೆಲವು ಪ್ರಶ್ನೆಗಳು, ಸಂದೇಹಗಳು ಹಾಗೇ ಉಳಿದು ಹೋಗಿವೆ. ಈ ಪ್ರಶ್ನೆ- ಸಂದೇಹಗಳು ಸಮಂಜಸವೆಂದು ಕಂಡರೆ ವೈದ್ಯಕೀಯ ವೃತ್ತಿಯ ಮೂಲಕ ಪರೋಕ್ಷವಾಗಿಯಾದರೂ ಸಮಾಜ ಸೇವೆಯಲ್ಲಿ ತೊಡಗಿರುವ ನೀವೂ ಈ ಬಗ್ಗೆ ಅಗತ್ಯ ವಿಚಾರ ಮಾಡಬೇಕೆಂಬುದು ನನ್ನ ಕೋರಿಕೆ:

೧. ಶೇ.೮೦- ೮೫ರಷ್ಟು ಮಾತ್ರ (ನಿಜವಾಗಿ ಅದೆಷ್ಟು ಎಂಬುದು ನಮಗೆ ತಿಳಿಯದಾದರೂ!) ಸಫಲತೆಯ ಸಾಧ್ಯತೆಯಿರುವ ಚಿಕಿತ್ಸೆಯನ್ನು (ವೈದ್ಯ)ವಿಜ್ಞಾನದ ಹೆಸರಲ್ಲಿ ಸಾರ್ವತ್ರಿಕವಾಗಿ ಶಿಫಾರ್ಸು ಮಾಡುವುದು ಎಷ್ಟು ಸಾಧು?

೨. ಭಾರತದಂತಹ ಸಾಮಾನ್ಯ ಆರ್ಥಿಕತೆಯ ದೇಶದಲ್ಲಿ ಒಬ್ಬ ರೋಗಿಯಿಂದ ಅರವತ್ತು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿಸಲು ಮುಂದಾಗುವ ವೈದ್ಯಕೀಯ ವಿಜ್ಞಾನ, ತಾನು ಆವಿಷ್ಕರಿಸಿರುವ ತಂತ್ರಜ್ಞಾನ ಪೂರ್ಣ ವಿಶ್ವಾಸಾರ್ಹ ಎಂಬುದನ್ನು ಮೊದಲು ಖಚಿತಗೊಳಿಸಿಕೊಳ್ಳಬೇಕಲ್ಲವೇ?

೩. ಇಷ್ಟು ಅತ್ಯಾಧುನಿಕ ಸಾಧನ-ಸಲಕರಣೆ ಹಾಗೂ ತಂತ್ರ-ಕೌಶಲ್ಯಗಳನ್ನು ಸಾಧಿಸಿಕೊಂಡಿರುವ ಈ ಕ್ಷೇತ್ರ ತಾನು ಸಂದೇಹಕ್ಕೆಡೆಯಿಲ್ಲದಂತೆ ಕಾರ್ಯ ನಿರ್ವಹಿಸಲು ಬೇಕಾದ ಜ್ಞಾನ-ತಂತ್ರಜ್ಞಾನವನ್ನೇಕೆ ಪಡೆಯದಾಗಿದೆ? ಉದಾಹರಣೆಗೆ, ನನಗೆ ಮಾಡಿದ ಶಸ್ತ್ರಚಿಕಿತ್ಸೆಯನ್ನು ಮಾಡುವ ಮುನ್ನವೇ, ನನ್ನ ಅಕ್ಷಿಪಟಲಕ್ಕೆ ಅಗತ್ಯ ರಕ್ತ ಪೂರೈಕೆ ಆಗುತ್ತಿದೆ ಎಂದು ಖಚಿತಪಡಿಸಿಕೊಳ್ಳುವ ಜ್ಞಾನ-ತಂತ್ರಜ್ಞಾನವನ್ನೇಕೆ ಪಡೆದಿಲ್ಲ? ಹಾಗೆ ಪಡೆಯದೆ, ಸಾಮಾನ್ಯ ಪ್ರಜೆಯೊಬ್ಬನನ್ನು ಅವನ ಅಸಹಾಯಕ ಸ್ಥಿತಿಯಲ್ಲಿ, ತುಂಬಾ ದೊಡ್ಡ ಪ್ರಮಾಣದಲ್ಲಿ (ಕ್ಷಮಿಸಿ, ನಿಮಗೆ ದೊಡ್ಡ ಪ್ರಮಾಣ ಅನ್ನಿಸದಿರಬಹುದು) ಹಣ ಖರ್ಚು ಮಾಡಲು ಪ್ರೇರೇಪಿಸುವುದು ವೃತ್ತಿ ಸಂಹಿತೆಯ ದೃಷ್ಟಿಯಿಂದಲಾದರೂ ಸರಿ ಎನ್ನಿಸುವುದೇ? ಹೀಗೆ, ಆಧುನಿಕ ವೈದ್ಯಕೀಯ ಕ್ಷೇತ್ರವು, ಶೇ. ೮೦ರ ಯಶಸ್ಸಿನ ಹೆಸರಿನಲ್ಲಿ ನಡೆಸಿರುವುದು ಒಂದರ್ಥದಲ್ಲಿ ಜೂಜಾಟವೇ ಆಗಿದೆಯಲ್ಲವೇ?

೪. ಸ್ವಲ್ಪ ದುಬಾರಿಯೆನ್ನಿಸುವ ಮತ್ತು ಖಚಿತ ಯಶಸ್ಸಿನ ಸಾಧ್ಯತೆ ಇರದ ಚಿಕಿತ್ಸೆಯನ್ನು

ಸಲಹೆ ಮಾಡುವ ಸಂದರ್ಭಗಳಲ್ಲಾದರೂ, ರೋಗಿಯ ಎಲ್ಲ ಸಾಧ್ಯ ಪ್ರಶ್ನೆಗಳಿಗೆ ಉತ್ತರ ಕೊಡುವ ವ್ಯವಧಾನ ವೈದ್ಯರಿಗಿರುವಂತಹ ವ್ಯವಸ್ಥೆ ಆಸ್ಪತ್ರೆಗಳಲ್ಲಿರಬೇಕಲ್ಲವೇ? ಸದಾ 'ಬ್ಯುಸಿ'ಯಾಗಿರುವ ವೈದ್ಯರು ಮತ್ತು ಕಟ್ಟುನಿಟ್ಟಾಗಿ ವಿವಿಧ 'ವಿಭಾಗ'ಗಳಲ್ಲಿ ಒಡೆದುಹೋಗಿರುವ ಸೇವಾ ವ್ಯವಸ್ಥೆ, ರೋಗಿಗೆ ಕಿರಿಕಿರಿಯೆನ್ನಿಸುವ ವಾತಾವರಣವನ್ನು ನಿರ್ಮಿಸುವುದಿಲ್ಲವೇ? ಇಂದು ವೈದ್ಯಕೀಯ ಕ್ಷೇತ್ರ ವಿಫುಲವಾಗಿ ಮತ್ತು ಸ್ಪರ್ಧಾತ್ಮಕವಾಗಿ ಬೆಳೆದು ಅದರ ನಿರ್ವಹಣೆಗೆ ಸಾಕಷ್ಟು ಹಣ ಬೇಕಾಗಿದೆ, ನಿಜ. ಆದರೆ ತನ್ನನ್ನು 'ಸೇವೆ'ಯೆಂದೂ ಕರೆದುಕೊಳ್ಳುವ ಅದು, ಲಾಭವೊಂದನ್ನೇ ಉದ್ದೇಶವಾಗುಳ್ಳ ಕಾರ್ಪೋರೇಟ್ ಸಂಸ್ಥೆಗಳ ಆಡಳಿತ ಶೈಲಿಯನ್ನು ಅನುಕರಿಸಬಾರದಲ್ಲವೇ?

೫. ಶಸ್ತ್ರಚಿಕಿತ್ಸೆಯಿಂದ ಪ್ರಯೋಜನವಾಗದ, ದೃಷ್ಟಿಯೇ ಮಂಕಾಗಿರುವ ನನ್ನ ಕಣ್ಣಿಗೆ ಹದಿನೆಂಟು ಸಾವಿರ ರೂಪಾಯಿಗಳ ಬೆಲೆಯ 'ಮಸೂರ'ವನ್ನು ಅಳವಾಡಿಸಲಾಗಿದೆಯಲ್ಲ, ಇದು ಹಾಸ್ಯಾಸ್ಪದವೆನ್ನಿಸುವುದಿಲ್ಲವೇ? ಇದು ಇಂದಿನ ವೈದ್ಯಕೀಯ ಚಿಕಿತ್ಸಾ ಪದ್ಧತಿಯ ಅಸಂಬದ್ಧತೆಯನ್ನು ತೋರಿಸುವುದಲ್ಲವೇ? ೮.೪.೨೦೧೧ರಂದು ನೀವು ನನ್ನ ಕಣ್ಣನ್ನು ಪರೀಕ್ಷಿಸಿ. 'Operation is perfect. But vision will not improve.' ಎಂದಾಗ ನನಗೆ ಅಳುವುದೋ ನಗುವುದೋ ಗೊತ್ತಾಗದೆ ಸುಮ್ಮನೆ ವಿಷಣ್ಣನಾಗಿ ಕೂತುಬಿಟ್ಟೆ. 'Operation success; but patient dead' ಎಂಬುದು ಬರೀ ಜನಪ್ರಿಯ ನಗೆಹನಿ ಎಂದು ಭಾವಿಸಿದ್ದ ನನಗೆ, ಅದು ನನ್ನ ಪಾಲಿಗೇ ವಾಸ್ತವ ನಿಜವೂ ಆಗಬಹುದು, ಅದೂ ಅಂತಾರಾಷ್ಟ್ರೀಯ ಪದವಿಗಳ ಸರಮಾಲೆಯನ್ನೇ ಹೊದಿರುವ ಪರಿಣತ ವೈದ್ಯರ ಮೂಲಕ ಎಂಬುದು ನಿಧಾನವಾಗಿ ಅರಿವಾಗತೊಡಗಿದಾಗ ದಿಗ್ಮೂಢನಾಗಿ ಕೂರುವುದರ ಹೊರತಾಗಿ, ನಾನು ಇನ್ನೇನು ಮಾಡಬಲ್ಲೆನಾಗಿದ್ದೆನು?

ನಾನು ಈ ಪ್ರಶ್ನೆಗಳನ್ನು ಖಂಡಿತ ನಿಮ್ಮ ವೈದ್ಯಕೀಯ ಪರಿಣಿತಿ, ಪ್ರಾಮಾಣಿಕತೆ ಮತ್ತು ಸದುದ್ದೇಶಗಳನ್ನು ಸಂದೇಹಿಸಿ ನಿಮ್ಮ ಮುಂದೆ ಇಡುತ್ತಿಲ್ಲ ಎಂಬುದನ್ನು ನೀವು ಅರ್ಥ ಮಾಡಿಕೊಂಡಿರುವಿರಿ ಎಂದು ಭಾವಿಸುವೆ. ಇಂದಿನ ವೈದ್ಯಕೀಯ ಕ್ಷೇತ್ರದ, ಉದ್ಯಮದ ಒಬ್ಬ ಗಣ್ಯ ವ್ಯಕ್ತಿಯಾಗಿ ನೀವು ಈ ಬಗ್ಗೆಯೆಲ್ಲಾ ಆಲೋಚಿಸವುದು ಅಗತ್ಯವೆಂಬ ಕಳಕಳಿಯಿಂದ ಮಾತ್ರ ಸಾಮಾನ್ಯ ಆರ್ಥಿಕ ಹಿನ್ನೆಲೆಯ ರೋಗಿಗಳ ಪರವಾಗಿ ಈ ದೀರ್ಘ ಪತ್ರ ಬರೆದಿರುವೆ. ಇದೆಲ್ಲ ಅನಗತ್ಯ ಎನ್ನಿಸಿದರೆ ಈ ಪತ್ರವನ್ನು ನಿರ್ಲಕ್ಷಿಸಲು ನೀವು ಹೇಗೂ ಸ್ವತಂತ್ರರು.

ವಂದನೆಗಳೊಂದಿಗೆ,

ವಿಶ್ವಾಸದ

(ಡಿ.ಎಸ್. ನಾಗಭೂಷಣ)

ನಂತರ ಬರೆದದ್ದು : ಈ ಮೇಲಿನ ಪತ್ರ ಬರೆದ ನಂತರ ವೈದ್ಯರನ್ನು ಅವರೇ ಆರಂಭಿಸಿದ್ದ ಇನ್ನೊಂದು ಕಣ್ಣಿನ ಲೇಸರ್ ಚಿಕಿತ್ಸೆಗಾಗಿ ಮೊದಲೇ ಅನುಮತಿ ಪಡೆದಿದ್ದ ಸಮಯಕ್ಕ ಭೇಟಿ ಮಾಡಲು ಯತ್ನಿಸಿದಾಗ, ಅವರು ಶಿವಮೊಗ್ಗದಿಂದ ಹೋಗಿದ್ದ ನನ್ನನ್ನು ನಾನು ಪದೇ ಪದೇ ಕೇಳಿಕೊಂಡರೂ ಚಿಕಿತ್ಸೆಯ ನಂತರ ನಾನು ವಾಪಸ್ ಹೋಗಲು ಟಿಕೆಟ್ ತೆಗೆಸಿದ್ದ ರೈಲು ಬೆಂಗಳೂರು ಬಿಟ್ಟು ಹೊರಡುವ ಸಮಯದವರೆಗೂ (ಅವರ ಎಲ್ಲ 'ಗಿರಾಕಿ'ಗಳೂ ಹೋಗುವವರೆಗೆ!) ಕಾಯಿಸಿ, ಸವಿ ಮಾತಾಡಿ; ಮತ್ತೆ ನಿಗದಿತ ಶುಲ್ಕ ಪಡೆದು ಲೇಸರ್ ಮಾಡಿ ಕಳಿಸಿದರು! ನನ್ನ ಪತ್ರ ಅವರನ್ನು ಒಂಚೂರೂ ಪುನರಾಲೋಚನೆಗೆ ಹಚ್ಚಿದಂತೆ ಕಾಣಲಿಲ್ಲ. ಹಾಗೇ ನನ್ನ ಕಣ್ಣಿನ ದೃಷ್ಟಿ ಸುಧಾರಿಸಲೂ ಇಲ್ಲ.

ಈ ಅತ್ಯಾಧುನಿಕ ಆಸ್ಪತ್ರೆ ನಾನು ನೀಡಿದ ೬೦ ಸಾವಿರ ರೂಪಾಯಿಗಳಿಗೆ ನೀಡಿದ್ದು ಒಂದು ತೆಳು ಮಸಕು ಹಳದಿ ಕಾಗದದಲ್ಲಿನ ಬಿಲ್. ಶಸ್ತ್ರ ಚಿಕಿತ್ಸೆಯ ವರದಿ ಮೂರು ಸಾಲುಗಳೂ ಇಲ್ಲ! ಇದೆಲ್ಲ ಯಾವುದಕ್ಕಾಗಿ ಮುನ್ನೆಚ್ಚರಿಕೆ ಎಂದು ಹೇಳಬೇಕಿಲ್ಲ. ಅಷ್ಟೇ ಅಲ್ಲ, ಈ ಆಸ್ಪತ್ರೆಯಲ್ಲಿ ನಿಗದಿತ ಶುಲ್ಕ ನೀಡಿ ಮಾಡಿಸಿಕೊಂಡ ಚಿಕಿತ್ಸಾಪೂರ್ವ ಪರೀಕ್ಷೆಗಳ ವರದಿಗಳನ್ನು ನೀವು ಅಲ್ಲಿಯೇ ಚಿಕಿತ್ಸೆ ಮಾಡಿಸಿಕೊಳ್ಳದಿದ್ದರೆ ನಿಮಗೆ ನೀಡುವುದಿಲ್ಲ!

ಇದೆಲ್ಲ ಆದ ನಂತರ ನಾಟಿ ಔಷಧಿ ತಜ್ಞರೊಬ್ಬರಿಂದ ಕೇವಲ ನೂರು ರೂಪಾಯಿಗಳ ಲೆಕ್ಕದಲ್ಲಿ ಪಡೆದ ಚಿಕಿತ್ಸೆಯಿಂದಾಗಿ ನನ್ನ ದೃಷ್ಟಿ ದೈನಂದಿನ ವ್ಯವಹಾರ ಸುಗಮವಾಗಿ ನಡೆಯುವಷ್ಟು ಸುಧಾರಿಸಿದೆ! ಆದರೆ ನನ್ನ ಪತ್ರಕ್ಕೆ ಉತ್ತರ ಕೊಡುವುದಾಗಿ ಹೇಳಿದ್ದ ಪರಿಣತ ವೈದ್ಯರು ಒಂದು ಸಾಲನ್ನೂ ಈವರೆಗೆ ಬರೆದಿಲ್ಲ. ಅವರಿಗೆ ತಮ್ಮ ವಿದ್ಯೆ ಬಗ್ಗೆ ಅಷ್ಟು ಅಚಲ ನಂಬಿಕೆ!

(ಮಾರ್ಚ್, ೨೦೧೨)

■

ಅನುಬಂಧ-೨

ಜೀವ ಕಾಯುವುದೇತಕೆ?

ಜಗತ್ತೆಲ್ಲವೂ ಒಂದು ಪರಿಪೂರ್ಣ ಯೋಜನೆಯಂತೆ ನಡೆಯುತ್ತಿದೆಯಂತೆ! ಹಾಗಾದರೆ ಯಾವ ಯೋಜನೆಯ ಯಾವ ಮಹಾನ್ ಉದ್ದೇಶಕ್ಕಾಗಿ ನಮ್ಮ ಪುಟಾಣಿಯ ಈ ಅನ್ಯಾಯದ ಸಾವು ಸಂಭವಿಸಿತು? ಈ ಜಗತ್ತಿಗೆ ದಾತರೆಂಬುವರು ಯಾರಾದರೂ ಇದ್ದಾರೆಯೇ? ಅಥವಾ ಇದೊಂದು ಅಸಂಗತ ನಾಟಕ ರಂಗವೇ? ಈ ಸಂಬಂಧಗಳ ಜಾಲವಾದರೂ ಏಕೆ ನಿರ್ಮಾಣಗೊಂಡು, ಇದ್ದಕ್ಕಿದ್ದಂತೆ ಛಿದ್ರವಾಗುತ್ತಾ ಹೋಗುತ್ತದೆ? ಸಂಬಂಧವೆಂಬುದಾದರೂ ಏನು? ಆತ್ಮಗಳಿಗೆ ತಾಕುವಂತಹ ಪರಸ್ಪರ ಪ್ರೀತಿಯನ್ನಾಧರಿಸಿದ ಪರಸ್ಪರ ಅವಲಂಬನೆಯ ಜೀವ ಭಾವವೇ ಅಲ್ಲವೇ? ಲೋಕದಲ್ಲಿ ಇಂತಹ ಸಂಬಂಧಗಳು ಸ್ಥಾಪಿತವಾಗುವುದು ಆಕಸ್ಮಿಕವಾಗಿಯೋ ಅಥವಾ ಇದೆಲ್ಲ ಪೂರ್ವನಿಯೋಜಿತವೋ? ಈ ಪುಟಾಣಿ ಎಲ್ಲಿಂದಲೋ ನಮ್ಮ ಬಳಿಗೇ ಬಂದು ಏಕೆ ಹೀಗೆ ಸಾಯಬೇಕಿತ್ತು? ನಮಗೂ ಇದಕ್ಕೂ ಏತರ ಸಂಬಂಧ?

ಅದು ೧೯೯೫ರ ಫೆಬ್ರುವರಿ. ಬಿಜಾಪುರದ ನವರಸಪುರ ಉತ್ಸವದ ಕವಿಗೋಷ್ಠಿಯಲ್ಲಿ ಭಾಗವಹಿಸಲು ಆಹ್ವಾನಿತಳಾಗಿದ್ದ ನನ್ನ ಹೆಂಡತಿ ಜೊತೆ ನಾನೂ ಹೋಗಿದ್ದೆ. ಕವಿಗೋಷ್ಠಿಯ ನಂತರ ಸ್ನೇಹಿತರೊಂದಿಗೆ ಬಿಜಾಪುರ ನೋಡಿ, ಮಾರನೆಯ ದಿನ ಐಹೊಳೆ-ಪಟ್ಟದಕಲ್ಲು-ಕೂಡಲ ಸಂಗಮ-ಬಾದಾಮಿಗೆ ಹೋದೆವು. ಅಲ್ಲಿ ನೋಡಿದ್ದೆಲ್ಲ ಆದ ಮೇಲೆ ಬಾದಾಮಿಯಿಂದ ಹುಬ್ಬಳ್ಳಿಗೆ ಬಂದು, ಅಲ್ಲಿಂದ ಆಗ ನಾವಿದ್ದ ಮಡಿಕೇರಿಗೆ ಹೋಗುವ ಯೋಚನೆ ನಮ್ಮದಾಗಿತ್ತು. ಆದರೆ ಬಾದಾಮಿಯಿಂದ ನಾರಾಯಣಪುರ ಅಣೆಕಟ್ಟೆ ನೋಡಲು ಹೋದ ನನಗೆ, ಏಕೋ ಏನೋ ಬಾದಾಮಿಗೆ ಹಿಂದಿರುಗಲು ಮನಸ್ಸಾಗದೆ, ನಾರಾಯಣಪುರದ ಬಳಿ ಬಂದ ಬೆಂಗಳೂರು ಬಸ್ ಹತ್ತಲು ನಿರ್ಧರಿಸಿದೆ. ನನ್ನ ಆಶ್ಚರ್ಯಕ್ಕೆ ನನ್ನ ಹೆಂಡತಿಯೂ 'ಹೂಂ' ಎಂದಳು.

ಅದೃಷ್ಟವಶಾತ್ ನಮ್ಮಿಬ್ಬರಿಗೂ ಸೀಟ್ ಸಿಕ್ಕಿ, ಮಾರನೆಯ ಬೆಳಿಗ್ಗೆ ಬೆಂಗಳೂರು ತಲುಪಿದೆವು.

ಆಗ ನಮ್ಮ ತಂದೆಗೆ ೮೫ ವರ್ಷ ವಯಸ್ಸು. ಬಹಳ ವರ್ಷಗಳ ಕಾಲ ರಕ್ತದೊತ್ತಡಕ್ಕೆ ಸಿಕ್ಕಿದ ಕಾರಣದಿಂದಾಗಿ ಕಣ್ಣಿಗೆ ಮಂಜು ಮುಸುಕಿ ಹಣ್ಣಾಗಿದ್ದರು. ಒಂದೆರಡು ವರ್ಷಗಳಿಂದ ನಾನು ಭೇಟಿಯಾದಾಗಲೆಲ್ಲ, 'ಇನ್ನೇನು ಎಲ್ಲ ಮುಗಿಯುತ್ತಾ ಬಂತು!' ಎನ್ನುತ್ತಿದ್ದರು. ಆಗ ನನ್ನ ಕಣ್ಣಲ್ಲಿ ನೀರಾಡತೊಡಗಿ, ಹಾಗೆ ಮತಾಡಬಾರದು ಎಂದು ಅವರನ್ನು ಕೇಳಿಕೊಳ್ಳುತ್ತಿದ್ದೆ. ಆದರೆ ಅವರು ನನ್ನ ಮಾತನ್ನು ಕಿವಿಗೆ ಹಾಕಿಕೊಳ್ಳದಂತೆ ಯಾವುದಕ್ಕೋ ಸಿದ್ಧವಾಗುತ್ತಿದ್ದವರಂತೆ ಮೌನವಾಗಿಬಿಡುತ್ತಿದ್ದರು. ಅಂದು ಇದ್ದಕ್ಕಿದ್ದಂತೆ ಬೆಂಗಳೂರಿಗೆ ಬಂದು, ನನ್ನಣ್ಣನ ಮನೆಯಲ್ಲಿದ್ದ ಅವರನ್ನು ಬೆಳ್ಳಂಬೆಳಿಗ್ಗೆ 'ಏನಣ್ಣಾ ಚೆನ್ನಾಗಿದ್ದೀರಾ?' ಎಂದು ಔಪಚಾರಿಕವಾಗಿ ಮಾತನಾಡಿಸಿದಾಗ, ಎಂದಿನಂತೆ ಧ್ವನಿಯ ಮೇಲೆ ಗುರುತಿಸುತ್ತಾ, 'ಏನು ನಾಗಭೂಷಣನಾ?' ಎಂದು ಮಲಗಿದ್ದವರು ಎದ್ದು ಕೂತರು. ನಾನು ಅವರ ಬಳಿ ಹೋಗಿ ಅವರ ಹಾಸಿಗೆಯ ಮೇಲೆ ಕೂತೆ. ಅವರು ನನ್ನನ್ನು ಹೊಸದಾಗಿ ಮುಟ್ಟುವಂತೆ ಮುಟ್ಟಿದರು. 'ಏನು ಇದ್ದಕ್ಕಿದ್ದಂತೆ ಬಂದೆ?' ಎಂದರು. ನಾನು, 'ಯಾಕೋ ಬರಬೇಕಿನಿಸಿತು, ಬಂದೆ' ಎಂದು ನನ್ನ ಪ್ರಯಾಣದ ವಿವರ ತಿಳಿಸಿದೆ. 'ಒಳ್ಳೆದಪ್ಪಾ, ನಿನಗೂ ನಿನ್ನ ಹೆಂಡತಿಗೂ ಒಳ್ಳೇದಾಗಲಿ' ಎಂದು ಆಶೀರ್ವದಿಸಿದರು. ನಂತರ ನಾನು ನನ್ನ ತಾಯಿಯನ್ನು ಮಾತನಾಡಿಸಲು ಹೋದೆ. ಅವರು ನನ್ನ ಹೆಂಡತಿಯೊಂದಿಗೆ ಮಾತಿಗೆ ತೊಡಗಿದರು.

ಅಂದು ಇಡೀ ದಿನ ಅವರ ಜೊತೆಗಿದ್ದು, ಅವರ ಆಶೀರ್ವಾದ ಪಡೆದು ರಾತ್ರಿ ಮಡಿಕೇರಿಗೆ ಹೊರಟೆ. ಮಾರನೆಯ ಬೆಳಿಗ್ಗೆ ಮಡಿಕೇರಿ ತಲುಪುವ ಹೊತ್ತಿಗೆ ಸುದ್ದಿ ಬಂತು... ನನ್ನ ತಂದೆ ಇನ್ನಿಲ್ಲವೆಂದು...

ನಾರಾಯಣಪುರದಿಂದ ಇದ್ದಕ್ಕಿದ್ದಂತೆ ನಮ್ಮನ್ನು ಬೆಂಗಳೂರಿಗೆ ಎಳೆ ತಂದ ಶಕ್ತಿ ಯಾವುದು?

****

೧೯೯೯ರ ಜೂನ್. ಆಗ ಚಿತ್ರದುರ್ಗದಲ್ಲಿದ್ದೆವು. ಒಂದು ಬೆಳಿಗ್ಗೆ ನನ್ನಣ್ಣನಿಂದ ಫೋನ್ ಬಂತು. ನಿಮ್ಮ ತಾಯಿ ನಿನ್ನನ್ನು ತುರ್ತಾಗಿ ನೋಡಬೇಕಂತೆ ಎಂದು. ಅಷ್ಟೇನೂ ಅನಾರೋಗ್ಯದಲ್ಲಿಲ್ಲದ ನಮ್ಮ ತಾಯಿಗೆ ಇದ್ದಕ್ಕಿದ್ದಂತೆ ಏನಾಯಿತೆಂದು, ನಾನು ನನ್ನ ಹೆಂಡತಿ ಗಾಬರಿಯಿಂದ ತಕ್ಷಣ ಬೆಂಗಳೂರಿಗೆ ಹೊರಟೆವು. ಅಂದು ಸಂಜೆಯೇ ನನ್ನ ತಂಗಿಯ ಮನೆಯಲ್ಲಿ ಅವಳ ಗಂಡ ಡಾ॥ ಸಿ.ಆರ್.ಚಂದ್ರಶೇಖರ್ ಮತ್ತು ಅವರ ತಾಯಿಯ ಆರೈಕೆಯಲ್ಲಿದ್ದ ನಮ್ಮ ತಾಯಿಯನ್ನು ಕಂಡೆವು. ಅವರು ನಮ್ಮನ್ನು ನೋಡಿ ಸಂತೋಷಪಟ್ಟರಲ್ಲದೆ, ಎಂದಿನಂತೆ ನನ್ನ ಹೆಂಡತಿಯನ್ನು 'ಈ ತುಂಟ ನನ್ಮಗನನ್ನು ಕಟ್ಟಿಕೊಂಡು ಹೆಂಗೆ ಏಗ್ತೀದ್ದೀಯಮ್ಮಾ!'ಎಂದು ಛೇಡಿಸಿದರು! ಅವರು ಡಿಮೆನ್ಷಿಯಾಕ್ಕೆ ಒಳಗಾಗಿದ್ದು, ಸ್ವಲ್ಪ ಮಾತು ಮರೆತವರಂತೆ ಮಾತಾಡುತ್ತಿದ್ದರು. ಅದು ಸ್ವಲ್ಪ ನಮಗೆ ತಮಾಷೆಯಾಗಿಯೂ ಕಾಣುತ್ತಿತ್ತು. ನಾನು ಹೋದಾಗಲೆಲ್ಲ

ಕೊಡುವ ಹಣ ಸಾಲದೆಂದು ಅವರು ತಕರಾರು ಮಾಡುವುದು ಒಂದು ರೂಢಿಯೇ ಆಗಿಹೋಗಿತ್ತು. ಆ ಹಣ ಅವರ ಖರ್ಚಿಗಾಗಿ ಅಲ್ಲ. ನಮ್ಮಣ್ಣ ಅವರನ್ನು ಏನೂ ಕೊರತೆ ಇರದಂತೆ ಚೆನ್ನಾಗಿಯೇ ನೋಡಿಕೊಳ್ಳುತ್ತಿದ್ದ. ಆದರೆ, ಅಜ್ಜಿಯಾಗಿ ತನ್ನ ಮೊಮ್ಮಕ್ಕಳಿಗೆ ಏನಾದರೂ ಕೊಡಿಸಿ ಸಂತೋಷಪಡುವ ಆಸೆ ಅವರಿಗೆ. ಜೀವನಪೂರ್ತಿ ಬಡ ಸ್ಕೂಲ್‌ಮಾಸ್ಟರ್ ಹೆಂಡತಿಯಾಗಿ, ಕೈಯಲ್ಲಿ ಮೂರು ಕಾಸೂ ಇಲ್ಲದೆ ಬದುಕಿದ ಹೆಂಗಸದು. ಈಗ ಇಬ್ಬರು ಗಂಡು ಮಕ್ಕಳಿಂದಲೂ ಒಂದಿಷ್ಟು ಹಣ ಪಡೆದು ಮೊಮ್ಮಕ್ಕಳಿಗೆ ಸಣ್ಣ ಪುಟ್ಟ ಚಿನ್ನ, ಬಟ್ಟೆಬರೆ ಎಂದು ಖರ್ಚು ಮಾಡಿ ಸಂತೋಷ ಪಡುತ್ತಿದ್ದರು. ಹಾಗಾಗಿ ಅಂದು ನಾನು ಕೊಟ್ಟ ಹಣವನ್ನು ಕೈಯಲ್ಲೇ ಇರಿಸಿಕೊಂಡು, 'ನನ್ನ ಚಿಕ್ಕಮಗ ನನಗೆ ಇವತ್ತು ಒಂದು ಸಾವಿರ ರೂಪಾಯಿ ಕೊಟ್ಟವನಮ್ಮಾ!' ಎಂದು ನನ್ನ ತಂಗಿಗೆ ಪದೇ ಪದೇ ಹೇಳುತ್ತಾ (ವಾಸ್ತವಾಗಿ ನಾನು ಅಷ್ಟು ಹಣ ಕೊಟ್ಟಿರಲಿಲ್ಲ) ನಿಧಾನವಾಗಿ ಹಾಗೇ ಮಲಗಿದರು. ನಿದ್ದೆ ಮಾಡಲಿ ಎಂದು, ನಾವು ನಾಳೆ ಬರುವುದಾಗಿ ನನ್ನ ತಂಗಿಗೆ ಹೇಳಿ ನಮ್ಮಣ್ಣನ ಮನೆಗೆ ಆ ರಾತ್ರಿಯೇ ವಾಪಸ್ ಬಂದೆವು.

ಬೆಳಿಗ್ಗೆ ಏಳುವ ಮುನ್ನವೇ ನಮ್ಮ ತಾಯಿ ಇನ್ನಿಲ್ಲ ಎಂಬ ಸುದ್ದಿ ಬಂತು... ನಮ್ಮ ತಾಯಿ ನಮ್ಮನ್ನು ನೋಡಲೆಂದೇ ಅಂದು ಸಂಜೆಯವರೆಗೆ ತಮ್ಮ ಪ್ರಾಣವನ್ನು ಹಿಡಿದಿಟ್ಟುಕೊಂಡಿದ್ದರಾ? ಅದನ್ನು ಅವರಿಗೆ ಸಾಧ್ಯ ಮಾಡಿದ ಶಕ್ತಿ ಯಾವುದು?

* * *

ಇದೆಲ್ಲ ಬಹಳ ದಿನಗಳ ನಂತರ ಹೀಗೆ ನೆನಪಾಗುತ್ತಿರುವುದಕ್ಕೆ ಕಾರಣ, ಮೊನ್ನೆ ನಮ್ಮ ಮನೆಯಲ್ಲಿ ಒಂದು ತಿಂಗಳಷ್ಟೇ ಇದ್ದು, ತನ್ನ ತುಂಟ ಮತ್ತು ತುಂಬು ಜೀವನೋತ್ಸಾಹದ 'ಆಟಪಾಟ'ಗಳ ಮೂಲಕ ನಮ್ಮನ್ನೆಲ್ಲ ಹಗಲೂ(-ರಾತ್ರಿ) ಆನಂದೋತ್ಸಾಹದಲ್ಲಿ ಮುಳುಗಿಸಿದ್ದ 'ಪುಟಾಣಿ' ಎಂಬ ಪುಟ್ಟ ಬೆಕ್ಕಿನ ಮರಿ ಸಾವಿಗೀಡಾದ ಪ್ರಕರಣ. ಆ ಕಥೆಯನ್ನು ನಿಮಗೆ ವಿವರವಾಗಿ ಹೇಳದೆ ಆ ಪುಟ್ಟ ಬೆಕ್ಕಿನ ನೆನಪು ನನ್ನನ್ನು ಕಾಡುವುದನ್ನು ನಿಲ್ಲಿಸದೇನೋ...

ಈ ಪುಟ್ಟ ಮರಿ ಒಂದು ತಿಂಗಳ ಹಿಂದೆ ಇದ್ದಕ್ಕಿದ್ದಂತೆ ಒಂದು ಬೆಳಿಗ್ಗೆ ನಮ್ಮ ಕಾರ್ ಗ್ಯಾರೇಜಿನಲ್ಲಿ 'ಮ್ಯೀಂ.. ಮ್ಯೀಂ..' ಎಂದು ಕೂಗುತ್ತಾ ಕಾಣಿಸಿಕೊಂಡಿತ್ತು. ಅದು ಇಲ್ಲಿಗೆ ಹೇಗೆ ಬಂದಿತೋ ಅಥವಾ ಯಾರಾದರೂ ತಮ್ಮ ಮನೆಯಲ್ಲಿ ಮರಿಗಳು ಜಾಸ್ತಿಯೆನಿಸಿ ಇಲ್ಲಿ ತಂದುಬಿಟ್ಟರೋ ತಿಳಿಯದು! ಶಿವಮೊಗ್ಗದಲ್ಲಿ ವೀರಶೈವರ ಬೆಕ್ಕಿನ ಕಲ್ಮಠವೆಂಬುದೊಂದಿದೆ. ಆದರೆ ನಿಜವಾದ ಬೆಕ್ಕಿನ ಕಲ್ಮಠ ನಮ್ಮ ಮನೆಯೆಂದು ಯಾವಾಗಲೂ ನಾನು ನನ್ನ ಹೆಂಡತಿಗೆ ಹೇಳುತ್ತಿರುತ್ತೇನೆ. ಏಕೆಂದರೆ, ದಿನದ ಯಾವ ಸಮಯದಲ್ಲಾದರೂ ನಮ್ಮ ಮನೆಯಲ್ಲಿ ಒಂದೆರಡು ಬೆಕ್ಕುಗಳಾದರೂ ಅಲ್ಲಿಂದಿಲ್ಲಿಗೆ ಠಳಾಯಿಸುತ್ತಿರುತ್ತವೆ. ಒಮ್ಮೊಮ್ಮೆ ಐದಾರು ದೊಡ್ಡ ಬೆಕ್ಕುಗಳು ಮತ್ತು ಅವುಗಳ ಪರಿವಾರವೂ ಕಾಣಿಸಿಕೊಳ್ಳುವುದುಂಟು! ನನ್ನ ಹೆಂಡತಿ ಪ್ರಕಾರ, ಪ್ರತಿ ಪ್ರಾಣಿಗೂ ಊರಿನಲ್ಲಿ ಸಂಚಾರ ಮಾರ್ಗವೆಂಬುದೊಂದಿರುತ್ತದಂತೆ– ಕೋತಿಗಳಿಗೆ, ಹಾವುಗಳಿಗೆ, ಬೆಕ್ಕುಗಳಿಗೆ

ಇತ್ಯಾದಿಯಾಗಿ. ಹಾಗೆ ನಮ್ಮ ಮನೆ ಬೆಕ್ಕಿನ ಸಂಚಾರ ಮಾರ್ಗದಲ್ಲಿರುವುದರಿಂದ ನಮ್ಮ ಮನೆಗೆ ಬೆಕ್ಕುಗಳು ಬರುವುದು ಹೆಚ್ಚೆಂದು ನೆಪ ಹೂಡಿ, ಬರುವ ಬೆಕ್ಕುಗಳಿಗೆಲ್ಲ ಅವಳು ಹಾಲು ಸರಬರಾಜು ಮಾಡುತ್ತಾಳೆ. ಅಷ್ಟೇ ಅಲ್ಲ, ನಂದಿನಿ ಹಾಲಿಗೆ ವಾಸನೆ ಇರುವುದಿಲ್ಲವಾದ್ದರಿಂದ, ಕೆಲವು ಬೆಕ್ಕುಗಳು ಹಾಲು ಕುಡಿಯದೇ ಹೋಗುತ್ತವೆ ಎಂಬ ದುಃಖ ಬೇರೆ ಅವಳಿಗೆ! ಆದರೆ ವಾಸ್ತವ ಸಂಗತಿ ಎಂದರೆ, ನಾವು ವಾಸಿಸುವ ವಿನೋಬ ನಗರ ಬೆಕ್ಕುಗಳ ನಗರವೇ ಆಗಿದ್ದು, ಅವುಗಳ ಕಾಟ ತಡೆಯಲಾರದೆ ಎಲ್ಲ ಮನೆಯವರೂ ಯಾವಾಗಲೂ ಕಿಟಕಿ ಬಾಗಿಲುಗಳನ್ನು ಹಾಕಿಕೊಂಡಿರುತ್ತಾರೆ. ಆದರೆ ಗಾಳಿ ಬೆಳಕು ಬರಲೆಂದು ನಾವು ತೆರೆದಿಟ್ಟಿರುತ್ತೇವಾದ್ದರಿಂದ, ಇದನ್ನು ದುರುಪಯೋಗಪಡಿಸಿಕೊಂಡು ಈ ಹಾಳು ಬೆಕ್ಕುಗಳು ಬಂದು ನಮ್ಮ ಮನೆಯಲ್ಲಿ ಬಿಡಾರ ಹೂಡುತ್ತವೆ.

ಅದೇನೇ ಇರಲಿ, ಇತ್ತೀಚೆಗೆ ನಮ್ಮ ಮನೆಯಲ್ಲಿಯೇ ಹುಟ್ಟಿ ಬೆಳೆದು ವಾಸ ಮಾಡುತ್ತಿದ್ದ ಮೂರು ಬೆಕ್ಕುಗಳಲ್ಲಿ ಒಂದು ನಾಯಿ ಪಾಲಾಗಿ, ಇನ್ನೆರಡು ನಾವು ಪ್ರವಾಸ ಹೋಗಿದ್ದಾಗ ಕಾಣೆಯಾಗಿದ್ದರಿಂದಾಗಿ; ಮನೆಯಲ್ಲಿ ಬೆಕ್ಕೊಂದಿರಲಿ–ಹಾವು ಹುಳ ಸುಳಿಯುವುದಿಲ್ಲ (ಹಾಗೆ ನೋಡಿದರೆ ನಮ್ಮ ಮನೆ ಹಾವುಗಳ ಸಂಚಾರ ಮಾರ್ಗದಲ್ಲಿಯೂ ಇದ್ದು–ಅವು ಏಕೋ ನಮಗೆ ದರ್ಶನ ನೀಡದೆ, ನಮ್ಮ ಅಕ್ಕಪಕ್ಕದ ಮನೆಯವರಿಗೆ ದರ್ಶನ ನೀಡಿವೆ!) ಎಂದು ನನ್ನ ಹೆಂಡತಿ ಆ ಪುಟ್ಟ ಮರಿಗೆ ಒಂದು ಪುಟ್ಟ ಬಟ್ಟಲು ಹಾಲು ಇಡಲಾರಂಭಿಸಿದಳು. ಅದು ಹಾಲು ಕುಡಿದು ಒಂದು ವಾರ ಭಯದಿಂದ ನಮ್ಮಿಂದ ತಪ್ಪಿಸಿಕೊಂಡೇ ಓಡಾಡುತ್ತಿತ್ತಾದರೂ, ಒಂದು ಮಧ್ಯಾಹ್ನ ಇದ್ದಕ್ಕಿದ್ದಂತೆ ಊಟದ ಮನೆಯಲ್ಲಿ ನಾನೇನೋ ಬರೆಯುತ್ತಾ ಕೂತಿದ್ದಾಗ, ಗ್ಯಾರೇಜ್ ಕಿಟಕಿಯಿಂದ ಊಟದ ಮನೆಗೆ ಮೂತಿ ತೂರಿಸುತ್ತಾ 'ಮ್ಯಿಂ..' ಎಂದಿತು. ನನಗೆ ಅದರ ಧ್ವನಿಯಿಂದಲೇ ಇದ್ದಕ್ಕಿದ್ದಂತೆ ಮುದ್ದು ಬಂದಂತಾಗಿ ಸುಮ್ಮನೆ, 'ಓ! ಬಾರೋ ಮಟಾಣಿ' ಎಂದೆ. ಅದು ಅದರ ಜನ್ಮಜನ್ಮಾಂತರಗಳ ಹೆಸರೋ ಎಂಬಂತೆ ನನ್ನ ಕರೆಗೆ ಓಗೊಟ್ಟು, ಮೆಲ್ಲಗೆ ಒಳಕ್ಕೆ ಒಂದು ಹೆಜ್ಜೆ ಇಟ್ಟಿತು. ನಂತರ ನನ್ನ ಮೌನವನ್ನು ಸಮ್ಮತಿಯೆಂದೇ ಬಗೆದು, ಊಟದ ಮೇಜಿನ ಮೇಲೆ ಪುಟಕ್ಕನೆ ಹಾರಿ ಕೂತು ನನ್ನನ್ನೇ ನೋಡತೊಡಗಿತು. 'ಎಲಾ ಇದರ!' ಎಂದು ನಾನೂ ಅದನ್ನು ದಿಟ್ಟಿಸಿ ನೋಡತೊಡಗಿದೆ. ಅಷ್ಟು ಹತ್ತಿರದಿಂದ ನಾನು ಈವರೆಗೆ ಅದನ್ನು ನೋಡಿರಲಿಲ್ಲ. ಅದರ ಪುಟ್ಟ ಗಾತ್ರ ಮುದ್ದಾಗಿತ್ತಾದರೂ, ಅದರ ಚಿರತೆಯಂತಹ ಕ್ರೂರ ಮುಖ, ಕಂದು ಹಳದಿ ಕಣ್ಣುಗಳು, 'ಮ್ಯಿಂ..' ಎಂದಾಗ ತೋಳದಂತೆ ತೆರೆದುಕೊಳ್ಳುವ ಪುಟ್ಟ ಬಾಯಿ ನನ್ನಲ್ಲಿ ಜಿಗುಪ್ಸೆಯನ್ನೇ ಹುಟ್ಟಿಸಿತು. ಕಾಣೆಯಾದ ನಮ್ಮ ಒಂದು ಬೆಕ್ಕಿನ ಅಪೂರ್ವ ಸೌಂದರ್ಯದ ಮುಂದೆ (ಅದು ಗಂಡು ಬೆಕ್ಕಾಗಿದ್ದರೂ ನಾವು ಅದಕ್ಕೆ ಐಶ್ವರ್ಯ ರೈ ಎಂದು ಹೆಸರಿಟ್ಟಿದ್ದೆವು!) ಇದು ಒಳ್ಳೆ ದೃಷ್ಟಿ ಬೊಟ್ಟಿನಂತಿತ್ತು!

ಹಾಗೆಂದು ನಾನು ಯೋಚಿಸುತ್ತಿರುವಾಗಲೇ, ಅದು ಚಂಗನೆ ಹಾರಿ ನನ್ನ ತೊಡೆಯ

ಮೇಲೆ ಬಂದು ಕೂತಿತು. ನಾನು 'ಅಯ್ಯೋ' ಎಂದು ನೋವಿನಿಂದ ಕಿರುಚಿದ್ದನ್ನು ಕೇಳಿ, ನನ್ನ ಹೆಂಡತಿ ಗಾಬರಿಯಿಂದ ಓಡಿ ಬಂದಳು. ಪುಟಾಣಿ ನನ್ನ ತೊಡೆಗಳ ಮೇಲೆ ನಿಯಂತ್ರಣ ಸಾಧಿಸಲು ತನ್ನ ಉಗುರುಗಳನ್ನು ಊರಿತ್ತು! ನಾನು ತೊಟ್ಟಿದ್ದ ದಪ್ಪ ಪ್ಯಾಂಟ್ ನನ್ನನ್ನು ಅಂದು ಚೂಪಾದ ಗಾಯಗಳಿಂದ ರಕ್ಷಿಸಿತ್ತು. ಹಾಲು ನೀಡುವಾಗ ಒಂದೆರಡು ಬಾರಿ ಅದರ ತಲೆ ಸವರಿ ಪರಿಚಯ ಮಾಡಿಕೊಂಡಿದ್ದ ನನ್ನ ಹೆಂಡತಿ, ನಾನು ಬೆಕ್ಕಿಗೆ ಹೆದರುವವನು ಎಂಬಂತೆ ನನ್ನನ್ನು ಛೇಡಿಸುತ್ತಾ ಅದನ್ನು ಎತ್ತಿಕೊಳ್ಳಲು ಹೋದರೆ, ಅದು ಬಿಡುತ್ತಲೇ ಇಲ್ಲ! ತನ್ನ ಉಗುರುಗಳಿಂದ ನನ್ನ ಪ್ಯಾಂಟನ್ನು ಹಿಡಿದುಬಿಟ್ಟಿದೆ.... ಆ ಕ್ಷಣದಲ್ಲೇ-ಆ ಬಂಧನದಲ್ಲೇ-ನಮ್ಮಿಬ್ಬರ ನಡುವೆ ಒಂದು ವಿಶಿಷ್ಟ ಸಂಬಂಧ ಸ್ಥಾಪಿತವಾಯಿತೆಂದು ಕಾಣುತ್ತದೆ.

ಅಂದು ಹಾಗೆ ನನ್ನನ್ನು ಹಚ್ಚಿಕೊಂಡ ಬೆಕ್ಕು, ನನ್ನನ್ನು ಬಿಡಲೇ ಇಲ್ಲ. ನಾನು ಮನೆಯಲ್ಲಿ ಓದಲು, ಬರೆಯಲು, ಟಿವಿ ನೋಡಲು, ಉಣ್ಣಲು ಕೂರುವುದೇ ಕಷ್ಟವಾಯಿತು. ಕೂತೊಡನೆ, ಎಲ್ಲಿರುತ್ತಿತ್ತೋ, ಚಂಗನೆ ಹಾರಿ ನನ್ನ ಮಡಿಲಲ್ಲಿ ಆಸೀನವಾಗಿಬಿಡುತ್ತಿತ್ತು. ಆದರೆ ಕ್ರಮೇಣ ತನ್ನ ಉಗುರುಗಳನ್ನು ಊರುವುದನ್ನು ಕಡಿಮೆ ಮಾಡುತ್ತಾ ಹೋಯಿತು. ನಾನು ಅದರಿಂದ ತಪ್ಪಿಸಿಕೊಳ್ಳಲು ನನ್ನ ಕೂರುವ ಭಂಗಿಯನ್ನು ಬದಲಾಯಿಸುತ್ತಾ ಹೋದಂತೆ, ಅದು ನನ್ನ ಸುತ್ತಾ ಸ್ಥಳ ಪರೀಕ್ಷೆ ಮಾಡುತ್ತಾ ನನ್ನ ಮಡಿಲು ಸೇರಲು, ಹಾರುವ ಹೊಸ ಹೊಸ ಆಕಾಶ ಮಾರ್ಗಗಳನ್ನು ಹುಡುಕುತ್ತಿತ್ತು. ನಾನು ಆ ಕಡೆ ಈ ಕಡೆ ಮಿಸುಕಿದಾಗ ಅರೆ ಕ್ಷಣದಲ್ಲಿ ನನ್ನ ತೊಡೆ ಏರಿ ಕೂರುತ್ತಿತ್ತು! ಕೆಲಸಗಳ ಒತ್ತಡದಲ್ಲಿ, ಇದೊಳ್ಳೆ ಶನಿಯ ಕಾಟವಾಯ್ತಲ್ಲಾ ಎಂದು ನಾನು 'ಛೀ.. ಇಳಿ..ಇಳಿ..' ಎಂದು ಎಷ್ಟೇ ಹೆದರಿಸಿದರೂ, ಅದು ಮತ್ತಷ್ಟು ಪಟ್ಟಾಗಿ ಕೂರುತ್ತಿತ್ತೇ ಹೊರತು, ಇಳಿಯುವ ಮನಸ್ಸೇ ಮಾಡುತ್ತಿರಲಿಲ್ಲ! ನನ್ನ ಹೆಂಡತಿ ಅಥವಾ ನಮ್ಮ ಮನೆಯ ಹುಡುಗಿಯರಾದ ಲಕ್ಷ್ಮಿ ಅಥವಾ ಮಂಜುಳಾ ಅದನ್ನು ಬಲವಂತವಾಗಿ ಎತ್ತಿಕೊಂಡು ಹೋಗಬೇಕಾಗುತ್ತಿತ್ತು.

ಆದರೆ ಒಂದೆರಡು ದಿನಗಳಲ್ಲಿ ಅದಕ್ಕೆ ಮನೆಯೆಲ್ಲ ಪರಿಚಯವಾದಂತಾಗಿ; ಮನೆಯಲ್ಲಿದ್ದುದನ್ನೆಲ್ಲ ಮೂಸಿ ಮೂಸಿ, ಇನ್ನು ಇದು ತನ್ನದೇ ಮನೆಯಂತೆ ಕೋಣೆಗಳಲ್ಲೆಲ್ಲಾ ಓಡಾಡತೊಡಗಿತು. ಸಿಕ್ಕಿ ಸಿಕ್ಕಿದ್ದನ್ನೆಲ್ಲ ಕಚ್ಚಿ ಎಳೆದಾಡತೊಡಗಿತು. ಇಳಿ ಬಿದ್ದಿದ್ದ ಬಾಗಿಲ ತೆರೆ, ಕಿಟಕಿ ತೆರೆ, ಕಪ್ಪೆ ಚಿಪ್ಪಿನ ತೂಗುಗಳನ್ನೆಲ್ಲ ಹಿಡಿದು ಉಯ್ಯಾಲೆಯಾಡತೊಡಗಿತು. ಮನೆಗೆ ಬರುವ ಹಿರಿಯ ಬೆಕ್ಕುಗಳ ಬಾಲಗಳನ್ನೆಳೆದು ಅವುಗಳಿಂದ ಸಣ್ಣಪುಟ್ಟ ದಾಳಿಗಳನ್ನೂ ಧೈರ್ಯದಿಂದ ಎದುರಿಸಿತು! ಅಷ್ಟೇ ಅಲ್ಲ, ಅವುಗಳೊಂದಿಗೆ ಯಾವ ಭಯವೂ ಇಲ್ಲದೆ ಸಮಾನವಾಗಿ ವರ್ತಿಸುತ್ತಾ, ಅವುಗಳ ಜೊತೆಯಲ್ಲೇ ಹಾಲು ಕುಡಿಯುವ ಮತ್ತು ಮಲಗಲು ಜಾಗ ಮಾಡಿಕೊಳ್ಳುವ ದಿಟ್ಟತನ ತೋರಿಸಿತು. ಒಂದು ಪುಟ್ಟ ಚೆಂಡನ್ನು ತಂದುಕೊಟ್ಟೆವು. ಸುಸ್ತಾಗುವವರೆಗೆ ಅದರೊಡನೆ ಆಡಿತು. ಕೆಲವೇ ದಿನಗಳಲ್ಲಿ ಒಂದು ಇಲಿಯನ್ನು ಹಿಡಿದು ತಂದು ಆಟವಾಡಿಸುತ್ತಲೇ

ತಿಂದು ಮುಗಿಸಿತು. ಮನೆಯೊಳಗೆ ಒಂದು ಹುಳು ಹುಪ್ಪಟೆ ಇಲ್ಲದಂತೆ ಭಕ್ಷಿಸಿ, ನಾವು ಇಡುತ್ತಿದ್ದ ಹಾಲನ್ನು ಸುಮ್ಮನೆ ಒಮ್ಮೆ ನೆಕ್ಕಿ ನಿರ್ಲಕ್ಷದಿಂದ ನೋಡತೊಡಗಿತು!

ನಾವು ಎಷ್ಟೋ ಬೆಕ್ಕು ಸಾಕಿದ್ದೆವು. ಆದರೆ ಈ ವಯಸ್ಸಿನ ಈ ರೀತಿಯ ಪ್ರಳಯಾಂತಕ ಬೆಕ್ಕನ್ನು ನಾವು ನೋಡಿರಲಿಲ್ಲ. ನನ್ನ ಹೆಂಡತಿ, 'ಇದಾವುದೋ ದರಿದ್ರ ಕಾಡು ಬೆಕ್ಕು ಕಣ್ರೀ' ಎನ್ನುತ್ತಲೇ ಅದನ್ನು ಮುದ್ದಿಸುತ್ತಿದ್ದಳು. ಅದರ civil mannersಗಳನ್ನು ನೋಡಿಯೇ ಸಂತೋಷ ಪಡಬೇಕು. ನಿಸರ್ಗ ಕರೆಗಳಿಗೆಲ್ಲ ಅದು ಮನೆಯ ಹೊರಗೇ ಹೋಗುತ್ತಿತ್ತಾದರೂ, ಮನೆಯ ಬಾಗಿಲು ಕಿಟಿಕಿಗಳನ್ನು ಮುಚ್ಚಿರುವ ಸಮಯದಲ್ಲಿ ಬಚ್ಚಲು ಮನೆಯ ಜಾಲರಿಯಲ್ಲಿ ಕೂತು ಕೆಲಸ ಮುಗಿಸಿ ಬರುತ್ತಿತ್ತು! ಇದನ್ನೆಲ್ಲ ಯಾರು ಹೇಳಿಕೊಟ್ಟರು ಇದಕ್ಕೆ? Dogs are humble and begging whereas cats are stylish and selfish ಎಂಬೊಂದು ಮಾತಿದೆ. ಅದರೆ ನಮ್ಮ ಪುಟಾಣಿ ಮಾತ್ರ ಈ ಮಾತಿಗೆ ಅಪವಾದವೆಂಬಂತೆ ಹೊರನೋಟಕ್ಕೆ ಒಡ್ಡ; ಆದರೆ ಅಷ್ಟೇ ಪ್ರೀತಿಪಾತ್ರ. ನಾನು ರಾತ್ರಿ ಎಲ್ಲ ಮಲಗಿದ ಮೇಲೆ ಏನಾದರೂ ಓದುತ್ತಾ ಅಥವಾ ಬರೆಯುತ್ತಾ ಕೂತರೆ, ಅದು ಹಾರಿ ನನ್ನ ತೊಡೆಯ ಮೇಲೆ ಕೂತು ನಿದ್ರಿಸುತ್ತಿತ್ತು. ನನಗೆ ತೊಂದರೆ ಎನಿಸಿ ಬಲವಂತವಾಗಿ ಇಳಿಸಿದರೆ, ನನ್ನ ಕುರ್ಚಿಯ ಸುತ್ತಲೇ ತನ್ನ ಪುಟ್ಟ ಕಾಲುಗಳಲ್ಲಿ ಪುಟಪುಟನೆ ಓಡಾಡುತ್ತಾ, ಗೋಡೆಯ ಮೇಲೆ ಕಾಣುವ ಕ್ರಿಮಿ ಕೀಟಗಳನ್ನು ಹಿಡಿಯಲು ಹಾರುವ ಹರಸಾಹಸ ಮಾಡುತ್ತಾ, ಆಗದಿದ್ದಾಗ ನನ್ನ ಕಾಲ ಬಳಿ ಬಂದು ಸಹಾಯಕ್ಕಾಗಿ 'ಮ್ಮೀಂ.. ಮ್ಮೀಂ..' ಎಂದು ಕೂಗುತ್ತಾ, ನಾನು ನಿದ್ರಿಸಲು ಹೋಗುವವರೆಗೂ ನನ್ನ ಬಳಿಯೇ ಸುಳಿದಾಡುತ್ತಿರುತ್ತಿತ್ತು. ನಾನು ನಮ್ಮ ಕೋಣೆಯ ಬಾಗಿಲು ಮುಚ್ಚುತ್ತಿದ್ದಂತೆ ತನ್ನ ಸ್ವಸ್ಥಾನಕ್ಕೆ ಹೋಗಿ ಮಲಗುತ್ತಿತ್ತು. ಪ್ರತಿದಿನ ನಾನು ಎದ್ದ ಕೂಡಲೇ ಕೇಳುತ್ತಿದ್ದ ಮೊದಲ ಪ್ರಶ್ನೆ: 'ಪುಟಾಣಿ ಎಲ್ಲಿ?'. ಅದು ಎಲ್ಲಿಂದಲೋ ತಕ್ಷಣ ಪ್ರತ್ಯಕ್ಷವಾಗಿ 'ಮ್ಮೀಂ..'ಎಂದು ತನ್ನ ರಣಕಹಳೆ ಮೊಳಗಿಸಿ, ನನ್ನ ಹಾಸಿಗೆಯ ಮೇಲಕ್ಕೆ ಚಂಗನೆ ಹಾರಿ ಬರುತ್ತಿತ್ತು. ಇದನ್ನು ಒಂದೆರಡು ತಿಂಗಳ ಮರಿ ಎಂದು ಹೇಗೆ ಹೇಳುವುದು? ಅದಕ್ಕೆ 'ಪ್ರಚಂಡ ಪುಟಾಣಿ' ಎಂದು ಬಿರುದು ನೀಡಿದೆವು!

ಕೆಲವೇ ದಿನಗಳಲ್ಲಿ ಈ ಪ್ರಚಂಡ ಪುಟಾಣಿಯ ಕಾಲುಗಳು ಗಟ್ಟಿಯಾಗಿ, ಅದಕ್ಕೆ ಲೋಕಸಂಚಾರದ ಆಸೆ ಹುಟ್ಟಿತು. ನಮ್ಮ ಮನೆಯ ಸಸ್ಯಾಹಾರ ಬೇಸರ ಬಂದು, ಅಕ್ಕಪಕ್ಕದ ಮನೆಗಳಲ್ಲಿ ಮೀನು ಹುರಿಯುವ ವಾಸನೆಗೆ ಬಲಿ ಬಿದ್ದಿತು. ಇದರಿಂದಾಗಿ ದಿನದ ಒಂದೆರಡು ಗಂಟೆಗಳ ಕಾಲ ಮನೆಯಿಂದ ಕಾಣೆಯಾಗತೊಡಗಿತು. ನಾವು ಕೂಡಾ ಅದು ತನಗೆ ಪ್ರಿಯವಾದ ಆಹಾರವನ್ನು ತಿನ್ನುವ ಹಕ್ಕನ್ನು ಚಲಾಯಿಸಿಕೊಳ್ಳಲಿ ಮತ್ತು ಇದು ನಾವು ನಮ್ಮ ಕೆಲಸಗಳನ್ನು ಸ್ವಲ್ಪ ನಿರಾಳವಾಗಿ ಮಾಡಿಕೊಳ್ಳಲು ಅದು ನಮಗೆ ದಯಪಾಲಿಸಿರುವ 'ವಿಶ್ರಾಂತಿ'ಯ ಕಾಲವೆಂದು ಪರಿಗಣಿಸಿ, ಸುಮ್ಮನಾದೆವು. ಹೀಗಿದ್ದ ಒಂದು ರಾತ್ರಿ, ಮನೆಯ ಹೊರಗಿಂದ ಬೆಕ್ಕಿನ ಚೀತ್ಕಾರ ಕೇಳಿದಂತಾಗಿ ಮನೆಯವರೆಲ್ಲ ಹೊರಗೆ ಧಾವಿಸಿ ನೋಡಿದರೆ, ನಮ್ಮ ಪುಟಾಣಿಯನ್ನು ಪಕ್ಕದ

ಮನೆಯ ನಾಯಿ ಜಿಮ್ಮಿ ಹಿಡಿದೆಸಿದಿತ್ತು. ಆ ರಭಸಕ್ಕೆ ಅದು ಮನೆ ಮುಂದಿನ ಮುಚ್ಚಿದ ಚರಂಡಿಯೊಳಗೆ ಹೋಗಿ ಬಿದ್ದಿತ್ತು. ಬ್ಯಾಟರಿ ಹಾಕಿ ಎಷ್ಟು ಕರೆದರೂ ಬರದೆ, ಬಹಳ ಹೊತ್ತು ಅಲ್ಲೇ ನಡುಗುತ್ತಾ ಕೂತಿತ್ತು. ಕರೆದು ಕರೆದು ಬೇಸರವಾಗಿ ನಾವು ಮನೆಯಲ್ಲಿ ಅದಕ್ಕಾಗಿ ಕಾಯುತ್ತಾ ಕೂತೆವು. ಸ್ವಲ್ಪ ಸಮಯದಲ್ಲಿ ಅದು ಬಂದೇ ಬಂತು, ಆದರೆ ರಕ್ತಸಿಕ್ತವಾಗಿ.... ನನಗೆ ಮೈ ಜುಮ್ಮೆಂದಿತು... ಗಾಬರಿಯಾದ ನನ್ನ ಹೆಂಡತಿ ಮತ್ತು ಲಕ್ಷ್ಮಿ ಹಾಗೂ ಮಂಜುಳಾ ಕೂಡಲೇ ಅದರ ಬಾಲ, ಕಾಲು, ಹೊಟ್ಟೆಗಳ ಮೇಲಿದ್ದ ರಕ್ತ ಒರೆಸಿ, ಗಾಯಗಳಾಗಿದ್ದ ಕಡೆ ಅರಶಿನ ಹಚ್ಚಿದರು. ಅದು ಎಲ್ಲ ಉಪಚಾರವನ್ನು ಸದ್ದಿಲ್ಲದೆ ಮಾಡಿಸಿಕೊಂಡಿತು. ಪಶುವೈದ್ಯರೊಬ್ಬರ ಸಲಹೆಯಂತೆ ಹಾಲಿಗೆ ಮನೆಯಲ್ಲಿದ್ದ ನೋವು ನಿವಾರಕ ಮಾತ್ರೆಯೊಂದನ್ನು ಬೆರೆಸಿ ಕುಡಿಸಿದೆವು. ಅದು ಕುಡಿದು ನಿದ್ದೆಗೆ ಸಂದಿತು.

ಮಾರನೆಯ ದಿನ ನೋಡಿದರೆ, ನಮ್ಮ ಪುಟಾಣಿ ಏನೂ ಆಗದಂತೆ ಬಾತುಕೊಂಡ ಹೊಟ್ಟೆ ಮತ್ತು ಕುಂಟು ಕಾಲುಗಳಲ್ಲೇ ಮನೆ ತುಂಬಾ ಓಡಾಡಲಾರಂಭಿಸಿತ್ತು! ಒಂದೆರಡು ಬಾರಿ ಮನೆಯ ಬಾಗಿಲ ಬಳಿ ಹೋಗಿ ಸಮೀಕ್ಷೆಯನ್ನೂ ಮಾಡಿಕೊಂಡು ಬಂತು. ನಂತರ ಹಿತ್ತಲ ಕಡೆ ಓಡಿ ಅಲ್ಲಿ ಬಹಳ ದಿನಗಳಿಂದ ಓಡಾಡಿಕೊಂಡಿದ್ದ ಒಂದೆರಡು ಕಪ್ಪೆ ಮರಿಗಳನ್ನು ಒಂದೇ ಸಮನೆ ಹುಡುಕಿ ತಿಂದಿತು. ನಮಗೆ ಗಾಬರಿಯಾಗಿ, ಅದನ್ನು ಹಿಡಿದು ಸುಮ್ಮನೇ ಕೂರಿಸುವುದೇ ಕಷ್ಟವಾಗತೊಡಗಿತು. ನಾವೆಲ್ಲರೂ ಅದನ್ನು ಸರತಿ ಮೇಲೆ ಒಂದೊಂದಷ್ಟು ಸಮಯ ಎತ್ತಿಕೊಂಡು ಸುಧಾರಿಸಿದೆವು. ಆ ಸಮಯದಲ್ಲಿ ಅದು ಪ್ರದರ್ಶಿಸಿದ ಶಾಂತಿ ಮತ್ತು ಮೌನಗಳನ್ನು ನೋಡಿ ನನಗೆ ಒಳಗೇ ಹೆದರಿಕೆ ಶುರುವಾಯಿತು.

ಅಂದು ಸಂಜೆ ಅದನ್ನು ಮಲಗಿಸಿ ಉಪಚರಿಸುತ್ತಿದ್ದ ನನ್ನ ಹೆಂಡತಿ ಒಮ್ಮೆಗೇ ಅಳಲಾರಂಭಿಸಿದಾಗ, ನನಗೆ ಎದೆಯೇ ಒಡೆದು ಹೋದಂತಾಯಿತು. ಹೋಗಿ ನೋಡಿದರೆ, ಪುಟಾಣಿಯ ಹೊಟ್ಟೆಯ ಗಾಯ ಬಿರಿದು ರಕ್ತ ಸುರಿಯಲಾರಂಭಿಸಿತ್ತು. ಜೊತೆಯಲ್ಲೇ ಮಲಮೂತ್ರಗಳು ಮಿಶ್ರವಾಗಿ ಬರಲಾರಂಭಿಸಿತ್ತು. ಪುಟಾಣಿ ಮಾತ್ರ ಸದ್ದಿಲ್ಲದೆ ಮಲಗಿ, ಎಲ್ಲವನ್ನೂ ಬೆರಗುಗಣ್ಣುಗಳಿಂದ ನೋಡುತ್ತಿತ್ತು. ಒತ್ತಿ ಬರುತ್ತಿದ್ದ ದುಃಖವನ್ನು ತಡೆದುಕೊಂಡು ನನ್ನ ಹೆಂಡತಿ ಮತ್ತು ಹುಡುಗಿಯರು ಎಲ್ಲವನ್ನು ಸ್ವಚ್ಛಗೊಳಿಸಿ ಮುಂದೇನು, ಎಂಬಂತೆ ನನ್ನತ್ತ ನೋಡತೊಡಗಿದರು. ಸ್ವಲ್ಪ ದೂರದಲ್ಲಿದ್ದ ನಾಯಿ-ಬೆಕ್ಕುಗಳ ವೈದ್ಯರ ಹತ್ತಿರ ಹೋಗುವುದೇ ನಮಗೀಗ ಉಳಿದಿದ್ದ ದಾರಿ. ಪುಟಾಣಿಯನ್ನು ಬಟ್ಟೆಯಲ್ಲಿ ಸುತ್ತಿಟ್ಟುಕೊಂಡು ತಕ್ಷಣ ವೈದ್ಯರ ಹತ್ತಿರ ಒಯ್ಯಲಾಯಿತು. ವೈದ್ಯರು ಈ ಕಾಡು ಬೆಕ್ಕನ್ನು ಇವರೇಕೆ ಇಷ್ಟೊಂದು ಹಚ್ಚಿಕೊಂಡಿದ್ದಾರೆ ಎಂದು ಆಶ್ಚರ್ಯಪಡುತ್ತಲೇ ಪರೀಕ್ಷಿಸಿ, ನಮ್ಮ ಪುಟಾಣಿಯ ಧೈರ್ಯ ಸಾಹಸಗಳನ್ನು ಮೆಚ್ಚಿದರು. ನಾಯಿ ಬಾಯಿಗೆ ಸಿಕ್ಕ ಬೆಕ್ಕು ಉಳಿಯುವುದೇ ಕಷ್ಟವಾಗಿರುವಾಗ ಈ ಮರಿಬೆಕ್ಕಿನದು ಗಟ್ಟಿ ಜೀವವೆಂದೇ ಹೊಗಳಿ, ನಾಳೆ ಬೆಳಿಗ್ಗೆ ಶಸ್ತ್ರಚಿಕಿತ್ಸೆ ಮಾಡುವುದಾಗಿ ಹೇಳಿ ಅದರ ಹೊಟ್ಟೆಗೆ

ಬ್ಯಾಂಡೇಜೊಂದನ್ನು ಕಟ್ಟಿ ಮನೆಗೆ ಕಳಿಸಿದರು.

ಆದರೆ ಬೆಳಿಗ್ಗೆಯವರೆಗೆ? ಅದೋ ಬ್ಯಾಂಡೇಜನ್ನೂ ಲೆಕ್ಕಿಸದೆ ಮಲಗಿಸಿದ್ದ ಹಾಸಿನಿಂದ ನೆಗೆ ನೆಗೆದು ಮನೆ ತುಂಬಾ ಓಡಾಡಲು ಹವಣಿಸುತ್ತಿತ್ತು. ಹಾಗೆ ಮಾಡುವಾಗ ಸಮತೋಲ ತಪ್ಪಿ, ವಾಲುತ್ತಲೋ, ಮುಗ್ಗರಿಸಿಯೋ ಬೀಳುತ್ತಿತ್ತು. ನನಗೆ ಏನೂ ತೋಚದೆ ನಾನು ನಂಬಿರುವ ಗುರು ರಮಣರನ್ನು ಅದನ್ನು ಉಳಿಸಿಕೊಡುವಂತೆ ಆರ್ದ್ರನಾಗಿ ಬೇಡಿಕೊಂಡೆ. ಅಷ್ಟರಲ್ಲಿ ಅದು ತನ್ನ ಚಲನವಲನಗಳನ್ನು ಇದ್ದಕ್ಕಿದ್ದಂತೆ ನಿಲ್ಲಿಸಿ, ನಮ್ಮ ಸುಪರ್ದಿಗೆ ಬಂತು. ನನ್ನ ಹೆಂಡತಿ ಅದನ್ನು ಮತ್ತೆ ಹಾಸಿನ ಮೇಲೆ ಮಲಗಿಸಿ ನೀರಿನಲ್ಲಿ ಜೇನು ಬೆರೆಸಿ ಕುಡಿಸಲಾರಂಭಿಸಿದಳು. ನಾನು 'ಪುಟಾಣೀ, ನಾಳೆ ನಿನಗೆ ಆಪರೇಷನ್ ಮರಿ! Best of luck!!' ಎಂದೆ. ಎನ್ನುವಷ್ಟರಲ್ಲಿ ಉಸಿರುಕಟ್ಟಿ ಬಂದಂತಾಗಿ, ನನ್ನನ್ನು ನಾನೇ ಸುಧಾರಿಸಿಕೊಳ್ಳಲು ಸುಮ್ಮನೆ ಹೋಗಿ ಹಾಸಿಗೆಯ ಮೇಲೆ ಬಿದ್ದುಕೊಂಡೆ. ನನಗೆ ನಿಜವಾಗಿಯೂ ಜೀವನ ಒಂದು dead endಗೆ ಬಂದಂತೆನಿಸಿತ್ತು... ನಾನು ಓದಿಕೊಂಡ ಎಲ್ಲ ತತ್ವಜ್ಞಾನವೂ ಬರಡೆನಿಸತೊಡಗಿ, ಅನೇಕ ಹೊಸ ಪ್ರಶ್ನೆಗಳು ಏಳಲಾರಂಭಿಸಿದ್ದವು. ನನ್ನ ಹೆಂಡತಿ, ಲಕ್ಷ್ಮಿ-ಮಂಜುಳಾರೊಂದಿಗೆ ಪುಟಾಣಿಯನ್ನು ಮೌನವಾಗಿ ಉಪಚರಿಸುತ್ತಲೇ ಇದ್ದಳು, ನನ್ನನ್ನು ನಿದ್ರೆಯ ಜೋಂಪು ಆವರಿಸುವವರೆಗೆ....

ಬೆಳಿಗ್ಗೆ ನನ್ನ ಹೆಂಡತಿ, 'ಏಳಿ, ಪುಟಾಣಿ ಸತ್ತುಹೋಗಿದೆ' ಎಂದು ಎಬ್ಬಿಸಿದಾಗ, ನಾನು ಬೆಚ್ಚಿ ಬಿದ್ದು ಎದ್ದು ಕೂತೆ. ಆ ಬೆಚ್ಚಿನಲ್ಲಿಯೇ ನನ್ನನ್ನು ನಾನೇ ಒಂದುಗೂಡಿಸಿಕೊಳ್ಳುತ್ತಾ, 'ಹೇಗೆ, ಯಾವಾಗ ಸತ್ತಿತು?' ಎಂದು ಕೇಳಿದೆ. ಎಂದಿನಂತೆ ಬೆಳಿಗ್ಗೆ ಆರು ಗಂಟೆಗೆ ಎದ್ದ ನನ್ನ ಹೆಂಡತಿ, ರಾತ್ರಿ ಬಹು ಹೊತ್ತಿನವರೆಗೆ ಅದನ್ನು ಉಪಚರಿಸಿ ಮಹಡಿಯಲ್ಲಿ ಮಲಗುವ ಲಕ್ಷ್ಮಿ-ಮಂಜುಳಾರ ಬಳಿ ಬಿಟ್ಟು ಬಂದಿದ್ದ ಅದನ್ನು ನೋಡಲು ಹೋದಾಗ, ಅದು ಇವಳಿಗಾಗಿಯೇ ಕಾಯುತ್ತಿದ್ದಂತೆ ಮೆಲ್ಲಗೆ ಕಣ್ಣು ಬಿಟ್ಟಿತಂತೆ. ಇವಳು ತಾನು ತೆಗೆದುಕೊಂಡು ಹೋಗಿದ್ದ ಜೇನಿನ ನೀರನ್ನು ಎರಡು ಗುಟುಕು ಕುಡಿಯಿತಂತೆ. ಹಾಗೇ ಮೈಯೆಲ್ಲ ಒಮ್ಮೆ ನಡುಗಿ ಇವಳನ್ನೇ ಒಮ್ಮೆ ದಿಟ್ಟಿಸಿ ನೋಡುತ್ತಾ ಕಣ್ಮುಚ್ಚಿತಂತೆ. ಅದೇ ಅದರ ಕೊನೆ. ನನಗೆ ಉಸಿರು ಕಟ್ಟಿದಂತಾಗಿ, 'ನನ್ನನ್ನೇಕೆ ಕರೆಯಲಿಲ್ಲ?' ಎಂದು ಕೂಗಿದೆ. ನನ್ನ ಹೆಂಡತಿ ಅಷ್ಟೇ ತಣ್ಣಗೆ, 'ನೀವು ಬಂದಿದ್ದರೆ, ನಿಮಗೆ ತಡೆಯಲಾಗುತ್ತಿರಲಿಲ್ಲ' ಎಂದಳು. ಅವಳ ಗಂಟಲೂ ಕಟ್ಟತೊಡಗಿತ್ತು. ನನ್ನ ಕಣ್ಣೀರ ಕಟ್ಟೆ ಒಡೆಯಿತು. 'ಅಯ್ಯೋ ರಮಣರಿಗೆ ಕೂಡಾ ನಮ್ಮ ಪುಟಾಣಿಯನ್ನು ಒಂದು ದಿನದ ಮಟ್ಟಿಗೆ ಉಳಿಸಲಾಗಲಿಲ್ಲವೇ!' ಎಂದು ರೋಧಿಸತೊಡಗಿದೆ. ನನ್ನ ಹೆಂಡತಿ ತನ್ನ ದುಃಖವನ್ನೆಲ್ಲ ತಡೆದುಕೊಳ್ಳುತ್ತಾ, 'ಹಾಗೆನ್ನಬೇಡಿ. ಅದನ್ನು ಆದಷ್ಟು ಬೇಗ ಕರೆದುಕೊಳ್ಳುವಂತೆ ನಾನು ರಮಣರನ್ನು ಬೇಡಿದ್ದೆ' ಎಂದು ನನ್ನನ್ನು ದಂಗು ಬಡಿಸಿದಳು. ನಂತರ ನನ್ನನ್ನು ಸಮಾಧಾನಪಡಿಸುತ್ತಾ ಮುಂದುವರೆಸಿದಳು: 'ಬದುಕಿದ್ದರೆ ಅದು ನೋವು ತಿನ್ನುತ್ತಲೇ, ಮುಂದೂ ಕಷ್ಟದಲ್ಲೇ ದಿನ ದೂಕಬೇಕಿತ್ತು. ಹೋಗಿದ್ದು

ಒಳ್ಳೆಯದಾಯಿತು ಬಿಡಿ. ರಮಣರ ಆಶೀರ್ವಾದದಿಂದ ಅದಕ್ಕೆ ಒಳ್ಳೆಯ ಜನ್ಮ ಸಿಗುತ್ತದೆ'. ಇವಳ ತತ್ವಜ್ಞಾನದ ಮಾತುಗಳು ನನ್ನನ್ನು ರೇಗಿಸತೊಡಗಿದ್ದವು.

ನನಗೆ ರಮಣರೂ ಬೇಕಿರಲಿಲ್ಲ. ಅವರ ಹುಟ್ಟು ಸಾವುಗಳ ತತ್ವಜ್ಞಾನವೂ ಬೇಕಿರಲಿಲ್ಲ. ಹುಟ್ಟು ಸಾವುಗಳೇ ಇಲ್ಲವಂತೆ! ಅವೆಲ್ಲ ಆತ್ಮ ಸಾಮ್ರಾಜ್ಯದಲ್ಲಿನ ದೇಹ ಭಾವಗಳ ಉದಯಾಸ್ತಮಾನಗಳಷ್ಟೇ ಅಂತೆ!! ಈ ಅಂತೆ ಕಂತೆಗಳ ಬೊಂತೆ ಯಾಕೆ ಬೇಕು, ಕಣ್ಣೆದುರಿನ ಈ ದಾರುಣ ವಾಸ್ತವ ನನ್ನನ್ನು ಜೀವಸಹಿತ ಅಲ್ಲಾಡಿಸುತ್ತಿರುವಾಗ? ನನ್ನ ತಂದೆ ತಾಯಿ ಸತ್ತಾಗ ನನ್ನಲ್ಲಿ ಈ ಪ್ರಶ್ನೆಗಳು ಎದ್ದಿರಲಿಲ್ಲ. ಅವರು ಸಹಜ ಸಾವನ್ನಪ್ಪಿದ್ದರು. ಅವರು ತಮ್ಮ ಪಾಲಿನ ಆಟ ಮುಗಿಸಿ ಹೋಗಿದ್ದರು. ಆದರೆ ಯಾವ ತಪ್ಪು ಮಾಡಿತ್ತು ನಮ್ಮ ಪುಟಾಣಿ, ಇದ್ದಕ್ಕಿದ್ದಂತೆ ಹೀಗೆ ಸಾವಿನ ಪಾಲಾಗಲು? ಈ ಪುಟ್ಟ ಜೀವ ಅದೆಷ್ಟು ಜೀವನೋತ್ಸಾಹ ಪ್ರಕಟಿಸಿತ್ತು ಮತ್ತು ತನ್ನ ಈ ಬಾಲ ಸಹಜ ಆಟ ವಿನೋದಗಳ ಮೂಲಕ ಅದೆಷ್ಟು ಜನರಲ್ಲಿ ಅಂತಹುದೇ ಜೀವನೋತ್ಸಾಹವನ್ನು ಪುಟಿದೆಬ್ಬಿಸಿತ್ತು! ಅದಕ್ಕೇಕೆ ಈ ನೋವು ತುಂಬಿದ ದಾರುಣ ಅಂತ್ಯ?

ಜಗತ್ತೆಲ್ಲವೂ ಒಂದು ಪರಿಪೂರ್ಣ ಯೋಜನೆಯಂತೆ ನಡೆಯುತ್ತಿದೆಯಂತೆ! ಹಾಗಾದರೆ ಯಾವ ಯೋಜನೆಯ ಯಾವ ಮಹಾನ್ ಉದ್ದೇಶಕ್ಕಾಗಿ ನಮ್ಮ ಪುಟಾಣಿಯ ಈ ಅನ್ಯಾಯದ ಸಾವು ಸಂಭವಿಸಿತು? ಈ ಜಗತ್ತಿಗೆ ದಾತರೆಂಬುವರು ಯಾರಾದರೂ ಇದ್ದಾರೆಯೇ? ಅಥವಾ ಇದೊಂದು ಅಸಂಗತ ನಾಟಕ ರಂಗವೇ? ಈ ಸಂಬಂಧಗಳ ಜಾಲವಾದರೂ ಏಕೆ ನಿರ್ಮಾಣಗೊಂಡು, ಇದ್ದಕ್ಕಿದ್ದಂತೆ ಛಿದ್ರವಾಗುತ್ತಾ ಹೋಗುತ್ತದೆ? ಸಂಬಂಧವೆಂಬುದಾದರೂ ಏನು? ಆತ್ಮಗಳಿಗೆ ತಾಕುವಂತಹ ಪರಸ್ಪರ ಪ್ರೀತಿಯನ್ನಾಧರಿಸಿದ ಪರಸ್ಪರ ಅವಲಂಬನೆಯ ಜೀವ ಭಾವವೇ ಅಲ್ಲವೇ? ಲೋಕದಲ್ಲಿ ಇಂತಹ ಸಂಬಂಧಗಳು ಸ್ಥಾಪಿತವಾಗುವುದು ಆಕಸ್ಮಿಕವಾಗಿಯೋ ಅಥವಾ ಇದೆಲ್ಲ ಪೂರ್ವನಿಯೋಜಿತವೋ? ಈ ಪುಟಾಣಿ ಎಲ್ಲಿಂದಲೋ ನಮ್ಮ ಬಳಿಗೇ ಬಂದು ಏಕೆ ಹೀಗೆ ಸಾಯಬೇಕಿತ್ತು? ನಮಗೂ ಇದಕ್ಕೂ ಏತರ ಸಂಬಂಧ? ಸಾವನ್ನು, ಮೊದಲು ತನ್ನ ನಿಲ್ಲದ ಚಟುವಟಿಕೆಗಳಿಂದಲೇ, ನಂತರ ಮೌನವಾಗಿ ಘನತೆಯಿಂದ ಎದುರಿಸಿದ ನಮ್ಮ ಪುಟಾಣಿ ನನ್ನ ಹೆಂಡತಿಯ ಆಗಮನಕ್ಕಾಗಿ ಬೆಳಗಿನವರೆಗೂ ಏಕೆ ಜೀವ ಹಿಡಿದಿಟ್ಟುಕೊಂಡು ಕಾದು ಕೂತಿತ್ತು? ಸಂಬಂಧಗಳಿಗಾಗಿ ಕೃತಜ್ಞತೆ ಸಲ್ಲಿಸಲೆಂದೆ? ಚಿತ್ರದುರ್ಗದಲ್ಲಿ ನಾವು ಸಾಕಿದ್ದ ನಾಯಿ ಮರಿಯೊಂದು ಹೀಗೇ ಸಾಯುವ ಮುನ್ನ ಅಂತಿಮ ದರ್ಶನ ನೀಡಿ ಹೋಗಿತ್ತಲ್ಲವೆ? ಯಾವುದೋ ದಾರುಣ ಕಾಯಿಲೆಗೆ ಒಳಗಾಗಿ ಬಹು ದಿನಗಳಿಂದ ಕಾಣೆಯಾಗಿದ್ದ ಅದು, ಒಂದು ರಾತ್ರಿ ಕಷ್ಟದಿಂದ ನಾವಿದ್ದ ಮಹಡಿ ಹತ್ತಿ ಬಾಗಿಲ ಬಳಿ ಬಂದು, ಆಶ್ಚರ್ಯ ಮತ್ತು ಸಂತೋಷಗಳಿಂದ ನಾವಿಟ್ಟ ಹಾಲು ನೆಕ್ಕಿ, ಕೆಳಗಿಳಿದು ಹೋಗಿ ಕೊನೆಯುಸಿರು ಎಳೆದಿತ್ತಲ್ಲ?

ಮಹಾ ತತ್ವಜ್ಞಾನಿ ಎಂದುಕೊಂಡಿದ್ದ ನಾನು ಹೀಗೆ ಉತ್ತರ ಕಾಣದ ಪ್ರಶ್ನೆಗಳ ಸುಳಿಗೆ ಸಿಕ್ಕಿ ದಿಕ್ಕೆಟ್ಟು ಕಣ್ಣೀರಿಡುತ್ತಿದ್ದಂತೆ, ನನ್ನ ಹೆಂಡತಿ ಮತ್ತು ಮಂಜುಳಾ ನಿರ್ಭಾವರಾಗಿ

ನಮ್ಮ ಮನೆಯ ಮುಂದಿನ ಪುಟ್ಟ ಹೂವಿನ ತೋಟದಲ್ಲಿ ಒಂದು ಪುಟ್ಟ ಹಳ್ಳ ತೋಡಿ ಚಿರನಿದ್ದೆಗೆ ಸಂದಿದ್ದ ನಮ್ಮ ಪುಟಾಣಿಯನ್ನು ಅದರಲ್ಲಿರಿಸಿ, ಮಣ್ಣು ಮುಚ್ಚಿದರು. ನನ್ನ ಹೆಂಡತಿ ಪಕ್ಕದ ದಾಸವಾಳದ ಗಿಡದಿಂದ ಕೊಂಬೆಯೊಂದನ್ನು ಮುರಿದು ಅದರ ಮೇಲೆ ನೆಟ್ಟಳು.

ಅದರಲ್ಲೊಂದು ಹೂ ಬಿಡುವ ದಿನಕ್ಕಾಗಿ ನಾನು ಕಾಯುತ್ತಿದ್ದೇನೆ.

****

ಆದರೆ, ಈ ಸಾಲುಗಳನ್ನು ಬರೆಯುತ್ತಿರುವ ಹೊತ್ತಿನಲ್ಲೇ ಹೊಟ್ಟೆಯಲ್ಲಿ ಒಂದು ಹಿಂಡು ಮರಿಗಳನ್ನು ತುಂಬಿಕೊಂಡಂತೆ ತೋರುವ ತಾಯಿ ಬೆಕ್ಕೊಂದು, ಒಂದೇ ಸಮನೆ ನನ್ನ ಕಾಲುಗಳನ್ನು ನೇವರಿಸುತ್ತಾ, ಮರಿ ಹಾಕಲು ನನ್ನ ಮನೆಯಲ್ಲಿ ಜಾಗ ಬೇಡುತ್ತಿದೆ. ಹೇಳಿ, ನಾನು ಏನು ಮಾಡಲಿ?

(೧೨ ಸೆಪ್ಟಂಬರ್ ೨೦೦೮)

■

ಇದೇ ಲೇಖಕರ ಇತರ ಕೃತಿಗಳು:

ಗಮನ (ಸಾಹಿತ್ಯ ವಿಮರ್ಶೆ–ವಿಚಾರ)
ಅನೇಕ (ಸಾಹಿತ್ಯ ವಿಮರ್ಶೆ–ವಿಚಾರ)
ಕುವೆಂಪು ಸಾಹಿತ್ಯ ದರ್ಶನ (ಕುವೆಂಪು ಸಾಹಿತ್ಯಾವಲೋಕನ)
ಈ ಭೂಮಿಯಿಂದ ಆ ಆಕಾಶದವರೆಗೆ (ಸಾಹಿತ್ಯ ವಿಮರ್ಶೆ–ವಿಚಾರ)
ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ (ವ್ಯಕ್ತಿ ಹಾಗೂ ಸಾಹಿತ್ಯ ಪರಿಚಯ)
ರೂಪರೂಪಗಳನು ದಾಟಿ (ಈವರೆಗಿನ ಸಾಹಿತ್ಯ ವಿಮರ್ಶೆಗಳ ಸಂಗ್ರಹ)
ಲೋಹಿಯಾ ಸಮಾಜವಾದ ದರ್ಶನ (ಸಮಾಜವಾದ ಪರಿಚಯ, ವಿಶ್ಲೇಷಣೆ)
ಮರಳಿ ಬರಲಿದೆ ಸಮಾಜವಾದ! (ಸಮಾಜವಾದಿ ವಿಚಾರ ವೈವಿಧ್ಯ)
ಬೇರು ಬಿಳಲು (ಸಮಾಜವಾದಿ ಸಂಕಥನಗಳು–೧)
ಇದು ಭಾರತ! ಇದು ಭಾರತ!! (ಸಮಾಜವಾದಿ ಸಂಕಥನಗಳು–೨)
ವಸಿಷ್ಠರು ಮತ್ತು ವಾಲ್ಮೀಕಿಯರು (ಸಮಾಜವಾದಿ ಸಂಕಥನಗಳು–೩)
ಇಲ್ಲಿ ಯಾವುದೂ ಅಮುಖ್ಯವಲ್ಲ (ಸಮಾಜವಾದಿ ಸಂಕಥನಗಳು–೪)
ಕಂಡದ್ದು ಕಾಡಿದ್ದು (ಸಮಾಜವಾದಿ ಸಂಕಥನಗಳು–೫)
ಲೋಹಿಯಾ ಜೊತೆಯಲ್ಲಿ (ಲೋಹಿಯಾ–ಗಾಂಧಿ–ಅಂಬೇಡ್ಕರ್–ಮಾರ್ಕ್ಸ್ ಚಿಂತನೆಗಳು)
ಕನ್ನಡ–ಕರ್ನಾಟಕ: ಸಂಕಥನಗಳು (ಕನ್ನಡ ನಾಡು ನುಡಿ ಚಿಂತನೆಗಳು)
ರೈತ ಭಾರತ: ಅವಸಾನದ ಅಂಚಿನಲ್ಲಿ (ರೈತರ ಆತ್ಮಹತ್ಯೆ ವಿಶ್ಲೇಷಣೆ)
ಒಂದನೇ ತರಗತಿಯಿಂದ ಇಂಗ್ಲಿಷ್ ಏಕೆ ಬೇಡ? (ಭಾಷಾ ನೀತಿ ಜಿಜ್ಞಾಸೆ)
ಲೋಹಿಯಾ ಕೈಪಿಡಿ
ಲೋಹಿಯಾ ವಾಣಿ
ಜೆಪಿ ಕೈಪಿಡಿ

ಸಂಪಾದನೆ : *ಲೋಹಿಯಾ: ವ್ಯಕ್ತಿ–ವಿಚಾರ–ವಿಮರ್ಶೆ* (ಲೋಹಿಯಾ ಕುರಿತ ಅಧ್ಯಯನ)
ಕುವೆಂಪು: ಒಂದು ಪುನರನ್ವೇಷಣೆ (ಶತಮಾನೋತ್ಸವ ಸಂಪುಟ)
ಆ ಗಣರಾಜ್ಯ ಈ ಕರ್ನಾಟಕ (ಸುವರ್ಣ ಕರ್ನಾಟಕ ಸಂಪುಟ)
ಒಲವು (ಅಂತರ್ಜಾತಿ ವಿವಾಹಿತರ ಮೊದಲ ಸಮಾವೇಶದ ಸ್ಮರಣ ಸಂಪುಟ)
'ಹೊಸ ಮನುಷ್ಯ' ಮಾಸಿಕ (ಸಮಾಜವಾದಿ ಚಿಂತನೆಯ ನಿಯತಕಾಲಿಕ)

ಸಹ ಸಂಪಾದನೆ : *ಕಾಡಿನ ಹುಡುಗ ಕೃಷ್ಣ* (ಶ್ರೀಕೃಷ್ಣ ಆಲನಹಳ್ಳಿ ನೆನಪಿನ ಸಂಪುಟ)
ಮಾಸ್ತಿ ಸಾಹಿತ್ಯ: ಸಮಗ್ರ ದರ್ಶನ (ಶತಮಾನೋತ್ಸವ ಸಂಪುಟ)
ಹಣತೆ (ಡಾ. ಜಿ. ಎಸ್ ಶಿವರುದ್ರಪ್ಪ ಅಭಿನಂದನ ಗ್ರಂಥ)
ಉರಿದ ಪಂಜು (ಕೆ. ರಾಮದಾಸ್ ಸ್ಮರಣ ಸಂಪುಟ)
ನಮ್ಮ ಶಾಮಣ್ಣ (ಕಡಿದಾಳು ಶಾಮಣ್ಣ ಗೌರವ ಗ್ರಂಥ)
ಸಾಹಿತ್ಯ ಸಂವಾದ (ಸಾಹಿತ್ಯ ದ್ವೈಮಾಸಿಕ)

ಅನುವಾದ : *ಜೆಪಿ ಸೆರೆಮನೆ ದಿನಚರಿ*



ಇಲ್ಲಿನ ಬರಹಗಳ ವಿಷಯ ವ್ಯಾಪ್ತಿ ಮೂರನೆಯ ವಿಶ್ವದ ಅತ್ಯುತ್ತಮ ಸಾರ್ವಜನಿಕ ಬುದ್ಧಿಜೀವಿಗಳ ಶಕ್ತಿಯನ್ನು ಪ್ರತಿಫಲಿಸುವಂತಹುದು. ನಾಗಭೂಷಣರ ವಿಶ್ಲೇಷಣೆಯಲ್ಲಿ ನಮ್ಮ ನಡುವೆ ಸ್ಥಳೀಯವಾಗಿ ನಡೆಯುತ್ತಿರುವ ಬೆಳವಣಿಗೆಗಳನ್ನು ಜಾಗತಿಕ ಬೆಳವಣಿಗೆಗಳೊಡನೆ ಸಮರ್ಥವಾಗಿ ಜೋಡಿಸುವ ಮತ್ತು ಎರಡಕ್ಕೂ ಸೈದ್ಧಾಂತಿಕ ಚರ್ಚೆಯ ಚೌಕಟ್ಟನ್ನು ಒದಗಿಸುವ ಅಪರೂಪದ ಶಕ್ತಿಯಿದೆ. ಇದು ಇಂದು ಕನ್ನಡ ಪ್ರಗತಿಪರ ಪ್ರಪಂಚದಲ್ಲಿ ವಿರಳವಾಗಿ ಕಾಣಸಿಗುವ ಗುಣ ಎಂದು ಇಲ್ಲಿನ ಕೆಲವು ಪ್ರಬಂಧಗಳನ್ನು ಅವುಗಳು ಏಳೆಂಟು ವರ್ಷಗಳ ಹಿಂದೆ ಮೊದಲು ಪ್ರಕಟವಾದಾಗ ಓದಿದಾಗಲೇ ನನಗೆ ಅನ್ನಿಸಿದ್ದ ವಿಚಾರ.

ಕೆಲವೊಮ್ಮೆ ಕಂಬಾರ ಅಥವಾ ದೇವನೂರರಂತಹವರು ಪ್ರತಿಮೆಗಳ ಮೂಲಕ ಒಳನೋಟವೊಂದನ್ನು ಕೊಡುವಲ್ಲಿ ಯಶಸ್ವಿಯಾಗಬಹುದು. ಆದರೆ ವಾಸ್ತವದ ವಿವರಗಳನ್ನು ವಸ್ತುನಿಷ್ಠವಾಗಿ ಜೋಡಿಸಿ, ವಿಶ್ಲೇಷಣೆಯನ್ನು ಕಟ್ಟಿಕೊಡಬಲ್ಲ ಶಕ್ತಿ ಇಂದು ಅಪರೂಪವಾಗುತ್ತಿದೆ. ಇಲ್ಲಿ ಸಂಕಲಿತವಾಗಿರುವ ನಾಗಭೂಷಣ ಅವರ ಬರಹಗಳು ಆ ಗುಣವನ್ನು ಹೊಂದಿವೆ. ಆ ಕಾರಣದಿಂದಲೆ ವೈರುಧ್ಯಗಳಿಂದ ಕೂಡಿರುವ ಸಮಕಾಲೀನ ಸಂಕೀರ್ಣ ವಾಸ್ತವ ಇಲ್ಲಿ ನಮಗೆ ಗೋಚರವಾಗುತ್ತದೆ.

– ಪೃಥ್ವಿ ಚಂದ್ರ ದತ್ತ ಶೋಭಿ

ಸಂವಹನ
ಪ್ರಕಾಶನ
ಮೈಸೂರು